ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಮಹಾಂತೇಶ ದುರಗಣ್ಣವರ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ೫೮೩ ೨೭೬

೨೦೨೦

ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಮಹಾಂತೇಶ ದುರಗಣ್ಣವರ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩೨೭೬
೨೦೨೦

ಮಾರ್ಗದರ್ಶಕರ ದೃಢೀಕರಣ ಪ್ರಮಾಣಪತ್ರ

"ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಮಹಾಂತೇಶ ದುರಗಣ್ಣವರ** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ, ಯಾವುದೇ ವಿಶ್ವವಿದ್ಯಾಲಯಕ್ಕೆ ಆಗಲಿ, ಸಂಘ-ಸಂಸ್ಥೆಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ. ಇದು ಇವರ ಸ್ವತಂತ್ರ ಸಂಶೋಧನಾ ಅಧ್ಯಯನವಾಗಿದೆ. ಇದನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 24-09-2020
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮಹತ್ವ ವಿಧಾನ ಮತ್ತು ಸ್ವರೂಪ

(The Scope of The Study is The Singnificance Methodology and Format)

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ಮಹತ್ವ

೧.೫. ಸಂಶೋಧನಾ ವಿಧಾನ

೧.೬. ಅಧ್ಯಯದ ಸ್ವರೂಪ

೧.೭. ಇದುವರೆಗೆ ನಡೆದ ಅಧ್ಯಯನಗಳು

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ವಿಧಾನ ಮತ್ತು ಸ್ವರೂಪ

(The Scope of The Study is The Singnificance Methodology and Format)

ಪ್ರವೇಶ : (Introduction)

ಜನಪದ ಆಚರಣೆಗಳು ಆರಂಭ ಕಾಲದಿಂದಲೂ ಹಿಡಿದು ಅರ್ವಾಚೀನ ಬದುಕಿನೆಡೆಗೆ ಸಾಗಿಬಂದ ಹತ್ತು ಹಲವು ಪರಿಕರಗಳಲ್ಲಿ ಬಹುಮುಖ್ಯವಾದವು. ಧಾರ್ಮಿಕ ಆಚರಣೆಯ ನೀತಿ-ನಿಯಮಗಳು ದೇಶದಿಂದ ದೇಶಕ್ಕೆ, ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಧರ್ಮದಿಂದ ಧರ್ಮಕ್ಕೆ ವಿಭಿನ್ನ ರೀತಿಯ ದೈವೀಕತೆಯ ಸಂಚಯನ ಮೂಡಿಸಿದವು. ಇಂದು ವ್ಯವಸ್ಥಿತವಾದ ಸಾಂಪ್ರದಾಯಿಕ ಸನ್ನಿವೇಶಗಳಿಂದ ಹೇರಿರುವ ರೀತಿ ರಿವಾಜುಗಳಿಗೆ ಒಪ್ಪಿತವಾಗಿಯೇ ಇಂದು ಮನುಷ್ಯನನ್ನು ನಿರ್ಲಿಪ್ತಗೊಳಿಸಿ ಬಂಧಿಸಿಬಿಟ್ಟಿವೆ. "ಏನಾದರೂ ಮಾಡು ಎಂತಾದರೂ ಮಾಡು ಮೊದಲು ದೈವಕ್ಕೆ ತಲೆಬಾಗು" ಎನ್ನುವಂತಹ ಪ್ರಸಿದ್ಧ ಸಂದೇಶಗಳು ಪ್ರತ್ಯಕ್ಷವಾಗಿ ಮತ್ತು ಮಾಧ್ಯಮಗಳ ಮೂಲಕ ಗಟ್ಟಿಗೊಳಿಸುತ್ತಿರುವುದನ್ನು ಬೇರೆ ಹೇಳಬೇಕಾಗಿಲ್ಲ. ಪ್ರಸ್ತುತ ದಿನಮಾನದಲ್ಲಿ ಮನುಷ್ಯ ಪ್ರತಿಯೊಂದು ವಸ್ತು ವಿಷಯವನ್ನು ಸಂದೇಹಪಡುವ ಮತ್ತು ವಿಮರ್ಶೆಗೊಡ್ಡುವ ಹಾಗೂ ಅದರ ದಬ್ಬಾಳಿಕೆಯನ್ನು ನೇರವಾಗಿ ತನ್ನ ಹೆಗಲ ಮೇಲೆ ಹಾಕಿಕೊಳ್ಳುತ್ತ ಬಂದಿದ್ದಾನೆ. ಹಾಗೆಂದ ಮಾತ್ರಕ್ಕೆ ಎಲ್ಲವನ್ನೂ ಸ್ವೀಕರಿಸಿದ ಎನ್ನುವ ಅಭಿಪ್ರಾಯವಲ್ಲ. ಹಲವಾರು ಸಂಪ್ರದಾಯಗಳನ್ನು ಎದುರಿಸಲು ನಿಂತಿರುವುದುಂಟು. ಹಾಗಾಗಿ ಮಾನವನ ಜನನದಿಂದ ಮರಣದವರೆಗೂ, ದಿನಂಪ್ರತಿ ದೈವೀಕರಣದ ಪ್ರಜ್ಞೆಯೊಂದಿಗೆ ಪ್ರತಿನಿತ್ಯ ನಿಕಟ ಸಂಬಂಧ ಹೊಂದಿರುವುದು ಸುಳ್ಳಲ್ಲ. ಪ್ರತಿಯೊಬ್ಬ ಮನುಷ್ಯನು ನಾನು ನಾಸ್ತಿಕನು ಯಾವುದರ ಮೇಲೆ ನಂಬಿಕೆ ಹಾಗೂ ಭರವಸೆ ಇಡುವುದಿಲ್ಲವೆಂದು ತನ್ನನ್ನು ತಾನು ಒಣ ಹೆಮ್ಮೆಯಿಂದ ಸಮರ್ಥಿಸಿಕೊಳ್ಳುತ್ತಾನೆಯೇ ಹೊರತು, ಆತನ ಅಂತರಂಗದ ತುಮುಲ ಯಾವಾಗಲು ಹಲವು ಧಾರ್ಮಿಕ ನಂಬಿಕೆಯ ಕಡೆಗೆ ವಾಲಿರುವುದಂತೂ ಸತ್ಯ ಅದಿಲ್ಲದಿದ್ದರೆ ತನ್ನ ಬದುಕಿನ ಜೀವನದ ಕಡೆ ಅಷ್ಟೊಂದು ಕಾಳಜಿ ಮಾಡುವ ಗೋಜಿನಿಂದ ದೂರ ಉಳಿಯುತ್ತಿದ್ದ. ಅರಿವಿದ್ದೋ ಅರಿವಿಲ್ಲದೆಯೋ ಪ್ರಕೃತಿಯನ್ನೆಲ್ಲಾ ಆಗಾಧ ಶಕ್ತಿಯ

ದೈವಿಯನ್ನುವಂತೆ ಮುನ್ನೋಟ ಮನಗೊಂಡು ಆದಿಕಾಲದಿಂದಲೂ ಪೂಜೆಗೈಯುತ್ತಾ ಹಂತ ಹಂತಗಳಲ್ಲಿ ಅದರ ರಹಸ್ಯ ಹಾಗೂ ಸತ್ಯಾನ್ವೇಷಣೆಯಡೆಗೆ ತನ್ನ ಮನಸ್ಸನ್ನು ಕೇಂದ್ರೀಕರಿಸಲು ಪ್ರಯತ್ನಿಸಿದ.

"ಭಯದಿಂದಲೇ ಭಕ್ತಿ" ಎನ್ನುವ ಉಲ್ಲೇಖದಂತೆ ಆದೀಮ ಮಾನವನು ಪ್ರಕೃತಿಯೊಂದಿಗೆ ಸಂಘರ್ಷಕ್ಕೆ ಬಿದ್ದಾಗ ಮಾಂತ್ರಿಕ ಆಚರಣೆಗಳಿಗೆ ಇಳಿದಾಗ ತಾನು ಜಯಿಸಲೇ ಬೇಕಾಗಿದೆ, ಎಂದುಕೊಂಡು ನಿಸರ್ಗ ಶಕ್ತಿಯನ್ನು ಮಣಿಸಲು ಹಾಗೂ ಒಲಿಸಿಕೊಳ್ಳಲು ಪ್ರಯತ್ನಿಸಿದ. ಮಾನವನ ಆರಂಭಿಕ ತರ್ಕ ಏನೇನೋ ಹಾದಿಯನ್ನು ಸೂಚಿಸಿತು ಅವೆಲ್ಲವೂ ಆಚರಣೆಗಳಾಗಿ ರೂಪಗೊಂಡವು. ಇಂತಹ ಆಚರಣೆ ಮತ್ತು ನಂಬಿಕೆಗಳ ಮೂಲಕವೇ ದೈವದ ಬಗೆಗಿನ ಪರಿಕಲ್ಪನೆ ಬೆಳೆದು ಬಂತು. ದೈವಗಳ ಬಗೆಗಿನ ಪರಿಕಲ್ಪನೆ ಮನುಷ್ಯನ ಮನಸ್ಸಿನಲ್ಲಿ ಯಾವಾಗ ಪ್ರಾರಂಭವಾಯಿತು ಎಂಬುದು ಮುಖ್ಯವಾದ ಸಂಗತಿ. ಈ ದೈವದ ಹುಟ್ಟಿಗೆ ಮನುಷ್ಯನಲ್ಲಿ ಇದ್ದ ಭಯವೇ ಮೂಲಕಾರಣವಾಗಿದೆ. ಈ ಎಲ್ಲಾ ಸೃಷ್ಟಿಯ ಹಿಂದಿನ ನಿಗೂಢತೆ ಕಣ್ಣಿಗೆ ತೋಚದೆ ಯಾವುದೋ ಶಕ್ತಿಯಾಗಿದೆ. ಇದರಿಂದ ಮಾನವ ಆಶ್ಚರ್ಯ ಚಕಿತನಾಗಿ ಚಿಂತಿಸತೊಡಗಿದ. ಕೆಲವು ಸಂದರ್ಭಗಳಲ್ಲಿ ತಾಯಿಯಂತೆ ಸಂರಕ್ಷಿಸಿದರೆ, ಇನ್ನೂ ಕೆಲವು ಸಲ ಮಾರಿಯಂತೆ ಆಕ್ರೋಶಗೊಂಡು ಈ ಧರೆಯಲ್ಲಿ ನರ ಮನುಷ್ಯನನ್ನು ಭಯಭೀತಿಗೊಳಿಸಿದೆ. ಗುಡುಗು, ಸಿಡಿಲು, ಕಾಡ್ಗಿಚ್ಚು, ಭೂಕಂಪ, ಸುನಾಮಿಯಂತೆ ಆರ್ಭಟಿಸಿ ಬಲಿತೆಗೆದುಕೊಳ್ಳುವ ಅದಮ್ಯ ಚೈತನ್ಯವೆಂಬ ಪ್ರಜ್ಞೆ ಅವರಲ್ಲಿ ಹೆಚ್ಚಿಸುತ್ತದೆ. ಅಂತಹ ಶಕ್ತಿಯ ಬಗ್ಗೆ ಅವ್ಯಕ್ತ ಭಯ, ಭೀತಿ ಮತ್ತು ಅದನ್ನು ಶಾಂತಿ ಮಾಡುವ ಅಕಾಂಕ್ಷೆ ಮನುಷ್ಯನನ್ನು ದೈವತ್ವದ ಕಡೆಗೆ ವಾಲಿಸುತ್ತದೆ. ದೈವದ ಪರಿಕಲ್ಪನೆ ಅನೇಕ ವರ್ಗಗಳು ಉರುಳಿದರೂ ಇನ್ನು ಗ್ರಾಮೀಣ ಪ್ರದೇಶದಲ್ಲಿ ದೈವಗಳ ಉಪಾಸನೆಯು ಜೀವಂತವಾಗಿ ಉಳಿದಿದೆ.

ಬದಲಾವಣೆಯ ನಾಗಾಲೋಟದಲ್ಲಿ ನಗರೀಕರಣ, ಸಂಪಾದೀಕರಣ, ಸ್ವಾರ್ಥೀಕರಣಗಳಲ್ಲಿ ಛಿದ್ರಗೊಂಡ ಮನಸ್ಸನ್ನು ಮನಸ್ಸಾಂತರದೊಳಗೆ ಪ್ರತ್ಯಕ್ಷವಲ್ಲದಿದ್ದರೂ ಪರೋಕ್ಷವಾಗಿ ಅದನ್ನು ಕಟ್ಟಿಸಿ ಆ ಮೂಲಕ ಒಗ್ಗೂಡಿಸುವ ಚಿಂತನಾಕ್ರಮವನ್ನು ಅನುಸರಿಸುವುದು ಕಂಡುಬರುತ್ತದೆ. ಕಠಿಣವಾದ ವೇದ ಆಗಮಗಳ ಕಡೆ ವಾಲುವ ಮನಸ್ಥಿತಿಯಿಂದ ದೂರವಿದ್ದು ಬದುಕಿನ ಮನಸ್ಸಿಗೆ ಹತ್ತಿರವಾಗುವ ಮಾರ್ಗವನ್ನು ಸರಳವಾದ ಅಲೌಕಿಕತೆಯಡೆಗೆ ನಡೆದುದ್ದರ ಪರಿಣಾಮವಾಗಿ ನಾವಿಂದು ಧಾರ್ಮಿಕತೆಯ ಸಡಿಲತೆಯನ್ನು ಕಾಣಬಹುದು. ಅದಿಲ್ಲದಿದ್ದರೆ ಕಬ್ಬಿಣದ ಕಡಲೆಯಂತಹ ಆಚಾರ-ವಿಚಾರಗಳು ತಲೆನೋವಾಗಿ ಪರಿಗಣಿಸುತ್ತಿದ್ದವು. ಅಂತಹ ಸಂದಿಗ್ಧ ಮತ್ತು ಕಠಿಣ ಸಂದರ್ಭದಲ್ಲಿ ಕರ್ನಾಟಕದ ದೃಷ್ಟಿಯಲ್ಲಿ ಹನ್ನೆರಡನೇ ಶತಮಾನವು ಒಂದು ಅದ್ವಿತೀಯ ಹಾಗೂ ಅನನ್ಯವಾದ ಕಾಲಘಟ್ಟವದು. ಜನಸಾಮಾನ್ಯರ ಬದುಕಿಗೆ ವಚನಕಾರರ ಲೋಕದೃಷ್ಟಿ ಒಂದು ಬಹುದೊಡ್ಡ ಆಸರೆಯನ್ನು ಒದಗಿಸಿ ಕೊಡುವುದರ ಸಲುವಾಗಿಯೇ ಅನುಕೂಲಕರವಾದ ಭಕ್ತಿಯ ಗಾಳಿ ನಾಡಿನಲ್ಲೆಲ್ಲ ಪಸರಿಸುವಂತೆ ಮಾಡಿತ್ತು.

ಮೇಲ್ವರ್ಗದವರ ಮೇಲ್ಪಂಕ್ತಿಯ ವಾದಗಳಿಂದ ಬೇಸತ್ತ ಸಮೂಹವೊಂದು ನಿಧಾನಗತಿಯಲ್ಲಿ ಬಂಡೆದ್ದು ಆಚರಣೆ ಹಾಗೂ ಸಂಪ್ರದಾಯಗಳನ್ನು ಅವರ ಕಪಿಮುಷ್ಟಿಯಿಂದ ಬೇರ್ಪಡಿಸಿ, ತಳಸಮುದಾಯ ಹಾಗೂ ತಳ ದೈವಗಳೆಂದು ಕರೆಯಲ್ಪಡುವವರ ಪಾಲಾದವು. ಅಂದರೆ ಸಂಪೂರ್ಣವಾಗಿ ಪಂಡಿತ ವರ್ಗದಿಂದ ತೆಗೆಯಲ್ಪಟ್ಟವು ಎಂಬುವುದು ಪ್ರಸ್ತುತ ಅಧ್ಯಯನದ ವಾದವಲ್ಲದಿದ್ದರೂ ಅದರ ಒತ್ತಡವಂತೂ ಕಡಿಮೆಯಾಗಿದೆ ಎನ್ನುವುದರಲ್ಲಿ ಹುರುಳಿಲ್ಲ. ಇವತ್ತಿನ ಸ್ಥಿತಿಗತಿಯನ್ನು ನೋಡಿದರೆ ಬದುಕು ಮನುಷ್ಯನನ್ನೇ ಬಹುದೂರ ನಡೆಸಿಕೊಂಡು ಹೋದುದರ ಪರಿಣಾಮವೋ, ಆತನ ಬೌದ್ಧಿಕತೆ ತಾರ್ಕಿಕತೆಯ ಫಲವೋ ಇಂದು ಇದ್ದುದೆಲ್ಲವನ್ನು ಬಿಟ್ಟು ಇಲ್ಲದುದರ ಕಡೆಗೆ ಪಯಣಿಸಿದ. ಅನೇಕ ಯೌಗಿಕ ಪಾರಮಾರ್ಥಿಕರ ಬದುಕು ಹಸನಾಗಿ ಇರುವುದು ಕಂಡುಬರುತ್ತದೆ. ಸಂಸಾರದ ಹಂದರದೊಳಗೆ ಇದ್ದು ಯಾವುದೋ ಒಂದು ಅಗೋಚರ ಪ್ರಭಾವಕ್ಕೆ ಒಳಗಾಗಿ ಎಲ್ಲವನ್ನು ಬಿಟ್ಟು ಮನಬಂದ ಕಡೆಗೆ ನಿಶ್ಚಿತ ಗುರಿ ಇಲ್ಲದೆ, ಸಿದ್ಧಾಂತ ತತ್ವಗಳಿಲ್ಲದೆ, ಅಲೌಕಿಕತೆಯ ಪರಾಕಷ್ಠೆಯನ್ನು ಮೌನವಾಗಿಯೇ ಸಾರಿದ ಮಹಾತ್ಮರ ಬದುಕಿನ ನಿಲುವುಗಳು ಆದರ್ಶವಾಗಿವೆ.

ಸಾಧುಸಂತರು, ನಾಥರು, ಸಿದ್ಧರು, ಆರೂಢರು, ಸೂಫಿಗಳು, ಮುಂತಾದ ಅನುಭಾವಿಗಳು ಕೇವಲ ಕರ್ನಾಟಕದ ನೆಲದಲ್ಲಿ ಜನಿಸಿದವರಾಗಿದ್ದರೂ, ಅವರ ವಿಚಾರ ಚಿಂತನೆಗಳು ಪ್ರಾದೇಶಿಕ ಮೇರೆಯನ್ನು ಮೀರಿ ವಿಶ್ವದೆಲ್ಲೆಡೆ ಮಾನವತೆಯ ಮೌಲ್ಯಗಳಾಗಿ ಹರಡಿದವು. ಎಲ್ಲಾ ಪಂಥಗಳಲ್ಲಿರುವ ಸಾಮಾಜಿಕ ಸಮಾನತೆಯ ಆಶಯಗಳನ್ನು ವೈದಿಕಶಾಹಿಯ ಪ್ರಚೋದನೆಗಳಿಗೆ ಪ್ರತಿರೋಧವನ್ನು ಒಡ್ಡುವುದು ಮತ್ತು ಜನಪರ ನಿಲುವುಗಳಿಗೆ ಹೆಚ್ಚಿನ ಆದ್ಯತೆಯನ್ನು ಒದಗಿಸುವುದು ಅನುಭಾವಿಗಳ ಮುಖ್ಯ ಗುರಿಯಾಗಿತ್ತು. ಕೆಲವರು ಮಾತಿನ ಮೂಲಕ ಸಮಾಜವನ್ನು ಎಚ್ಚರಿಸಿದರೆ, ಇನ್ನೂ ಕೆಲವರು ಮೌನದಲ್ಲಿಯೇ ಮಹತ್ತನ್ನು ಮಾಡಿದರು. ಅಂತಹವರ ಆಚಾರ-ವಿಚಾರಗಳು, ಪುಣ್ಯಕ್ಷೇತ್ರಗಳ ಸ್ಮರಣೆಗಳು, ಭಕ್ತಜನರ ಹೊರೆಯನ್ನು ಸಂಪೂರ್ಣವಾಗಿ ಇಳಿಸುವುದರ ಬದಲು ಹಗುರವಾಗಿ ಹೆಗಲ ಮೇಲೆ ಹೊತ್ತುಕೊಂಡು ಸಾಗಲು ಸಹಕಾರಿಯಾಗುತ್ತವೆ.

ಜನಪದ ಮೂಲ ಅಂಶಗಳ ಮೂಲಕ ಸಾಂಪ್ರದಾಯಿಕವಾಗಿ ಸಂಶೋಧನೆ ಮಾಡುವ ಅವಶ್ಯಕತೆ ಇದೆ. ಅಲ್ಲಿಯ ಪರಿಸರದೊಂದಿಗೆ ಗ್ರಾಮದೇವತೆಗೆ ಮತ್ತು ಮನುಷ್ಯರಿಗೆ ಇರುವ ಸಂಬಂಧ ಹಾಗೂ ಸಾಂಸ್ಕೃತಿಕವಾಗಿ ಬದಲಾಗುತ್ತಿರುವ ಅಂಶಗಳನ್ನು ಈ ಅಧ್ಯಯನದ ಮೂಲಕ ಬಳಕೆಗೆ ತರುವುದು ಇಂದು ಅನಿವಾರ್ಯವಾಗಿದೆ. ಇಲ್ಲಿಯವರೆಗೂ ಗ್ರಾಮೀಣ ದೈವಗಳ ಜೊತೆಗೆ ಹಾಡು, ಐತಿಹ್ಯ, ಜನಪದ ಕಥೆ, ಆಚರಣೆ, ನಂಬಿಕೆಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನಮಾಡುವ ವಿಷಯದ ಬಗ್ಗೆ ಕ್ರೋಢೀಕರಿಸಲು ಪ್ರಯತ್ನಿಸಿದೆ. ಹೀಗೆ ಅಧ್ಯಯನ ಮಾಡುವುದರ ಮೂಲಕ ಒಂದು ನಾಡಿನ ಸಾಂಸ್ಕೃತಿಕ ಆಚರಣೆ, ಸಂಪ್ರದಾಯ, ಅಲ್ಲಿಯ ಜನಜೀವನ, ಬದುಕಿನ ವ್ಯವಸ್ಥೆಯನ್ನು ತೆರೆದು ತೋರಿಸಬೇಕಾಗಿದೆ. ಸಂಶೋಧನೆ ಕೈಗೊಳ್ಳಬೇಕಾದರೆ

ಜನಪದ ಅಧ್ಯಯನಗಳಂತೂ ಪೂರ್ತಿಯಾಗಿ ಕ್ಷೇತ್ರಕಾರ್ಯವನ್ನು ಅವಲಂಬಿಸಬೇಕಾಗುತ್ತವೆ. ನಾನು ನನ್ನ ಅಧ್ಯಯನದ ಮೂಲ ವಿಷಯವಾಗಿ 'ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಈ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಛಾಯಾಚಿತ್ರ ತೆಗೆಯುವುದು, ಸಂಶೋಧನೆಗೆ ಪೂರಕವಾದ ಮೌಖಿಕ ಸಾಹಿತ್ಯವನ್ನು ಕ್ರೋಢೀಕರಿಸುವುದು, ಗ್ರಾಮದೇವತೆಗಳ ಮತ್ತು ಪೂಜಾ ವಿಧಿ–ವಿಧಾನಗಳು, ನಂಬಿಕೆ–ನಿಷೇಧಗಳು, ವಾರ್ಷಿಕಾವರ್ತನದ ಆಚರಣೆಗಳು, ದೈವದ ಮೂಲ, ಕ್ಷೇತ್ರದ ಪರಿಚಯ, ಭಕ್ತಿ ಪರಂಪರೆ ನೋಡುವುದು ಮುಖ್ಯವಾಗಿದೆ. ಇದಕ್ಕೆ ಸಂಶೋಧನಾ ಮಹಾಪ್ರಬಂಧಗಳು. ಜನಪದಸಾಹಿತ್ಯದ ಶಬ್ದಕೋಶ, ಪತ್ರಿಕೆಗಳು, ಸಂಪಾದಕ ಪುಸ್ತಕಗಳು, ಇಂತಹ ಹಲವು ಆಕರಗಳನ್ನು ಈ ಸಂಶೋಧನೆಗೆ ಆಕರಗಳನ್ನಾಗಿ ಬಳಸಿಕೊಂಡಿದ್ದೇನೆ. ಅಲ್ಲದೆ ಅನ್ಯ ಪಂಥ, ಭಂಡಾರಗಳ ಮೂಲಕ, ಸ್ಥಳ ಪುರಾಣಗಳ ಮೂಲಕ, ಜನಸಾಮಾನ್ಯರು ಹೇಳುವ ಪುರಾಣಗಳು, ಕಟ್ಟುಕಥೆಗಳು ಇಂಥವುಗಳ ಮೇಲೆ ವಿಷಯ ಹೆಣೆಯುವುದು ಮುಖ್ಯವಾಗಿದೆ.

ದೇಶಾದ್ಯಂತ ಇಂದು ಜನಪದ ಅಧ್ಯಯನಗಳ ಕುರಿತು ಮಹತ್ತರವಾದ ವಿವಾದಗಳು ಜರುಗುತ್ತಿವೆ. ಜನಪದ ಶಾಬ್ದಿಕ ಮತ್ತು ಅಶಾಬ್ದಿಕ ಸ್ವರೂಪಗಳನ್ನು ಕಳೆದ ನೂರೈವತ್ತು ವರ್ಗಗಳಲ್ಲಿ ಕ್ರೋಢೀಕರಿಸಿ ವಿಭಾಗಿಸಿ ವಿಶ್ಲೇಷಿಸುವ ಕ್ರಿಯೆ ಬಹಳ ವ್ಯಾಪಕವಾಗಿ ನಡೆಯುತ್ತಿದೆ. ಸಮುದಾಯ, ಸಾಂಸ್ಕೃತಿಕ ಸಂಶೋಧನೆಗೆ ಜಾನಪದ ಮೂಲ ಮತ್ತು ಪ್ರಬಲ ಆಕರಗಳು ಇದಕ್ಕೆ ಮೂಲ ತಳಪಾಯವಾಗಿವೆ. ಒಂದು ಕಡೆ ಕ್ರೋಢೀಕರಣವಾದರೆ ಅದರ ಇನ್ನೊಂದು ಕಡೆ ಅವುಗಳ ಕ್ಷೇತ್ರಕಾರ್ಯ ನಡೆಯಬೇಕಾಗಿದೆ. ಒಂದು ಮಗ್ಗುಲಲ್ಲಿ ವಿಶ್ಲೇಷಣೆ ನಡೆದರೆ ಇನ್ನೊಂದು ಮಗ್ಗುಲಲ್ಲಿ ಆಯಾ ಶಾಬ್ದಿಕ, ಅಶಾಬ್ದಿಕ, ಸಾಹಿತ್ಯ, ಆಚರಣೆಗಳು, ಜನಪದ ಜೀವನ ಹೇಗೆ ರೂಪಗೊಂಡಿದೆ, ಹೇಗೆ ನಮ್ಮ ಜನಪದರ ಸಾಂಸ್ಕೃತಿಕ ಜೀವನದಿಂದ ಮೊದಲುಗೊಂಡು ಆ ವರ್ಗದ ಬದುಕಿನಲ್ಲಿ ನೆಲೆಗೊಂಡು ಅವು ದೈನಂದಿನ ಬದುಕಿನಲ್ಲಿ ಬೆರೆತು ಹೋಗಿವೆ ಎಂಬುದನ್ನು ನೋಡಬಹುದಾಗಿದೆ.

ಈ ಅಧ್ಯಯನ ಒಂದು ಪ್ರಾದೇಶಿಕ ನಾಡಿಗೆ (ಮೂಲ ಚಂದ್ರಗಿರಿ ಚಂದಾಲಿಂಗೇಶ್ವರ) ಸೀಮಿತವಾಗಿ ವಿಷಯ ಚಿಂತನೆಯನ್ನು ಮಾಡಲಾಗಿದೆ. ನನ್ನ ಕ್ಷೇತ್ರಕಾರ್ಯದಲ್ಲಿ ಸಿಕ್ಕ ವಿಷಯಗಳ ಆಧಾರದ ಮೇಲೆ ಪರಿಷ್ಕರಿಸಲಾಗಿದೆ. ನನ್ನ ಸಂಶೋಧನೆಯ ಆಕರಗಳಲ್ಲಿ ಆಯಾ ಪ್ರದೇಶದ ಪ್ರಾದೇಶಿಕತೆಗೆ ಅನುಗುಣವಾಗಿ ಸಂಸ್ಕೃತಿಯ ಆಚಾರ–ವಿಚಾರಗಳ ಪರಿಣಾಮವಾಗಿ ಸದರಿ ಮಹಾಪ್ರಬಂಧದಲ್ಲಿ ಕೆಲವು ಭಿನ್ನ ಅಂಶಗಳನ್ನೊಳಗೊಂಡಿದೆ. ಸಂಶೋಧನೆ ನೂತನ ಕ್ಷೇತ್ರಕಾರ್ಯಕ್ಕೆ ಆಹ್ವಾನಿಸುತ್ತದೆ. ಪ್ರಮುಖವಾಗಿ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯವನ್ನು ವಿವೇಚಿಸಲು ಮಹತ್ವಪೂರ್ಣ ಕೃತಿಗಳು ನನಗೆ ಕೈಪಿಡಿಯಂತೆ ಸಹಕಾರಿಯಾಗಿವೆ. ಉದಾ: ಮೈಲಾರಲಿಂಗ–ಖಂಡೋಬಾ, ನೆತ್ತಿಬುತ್ತಿ, ಹುಲ್ಲೇಶ್ವರ ಚರಿತೆ ಮೈಲಾರಲಿಂಗ ಕಾವ್ಯ, ಮೈಲಾರ. ಹೀಗೆ ಹತ್ತು ಹಲವು ಗ್ರಂಥಗಳು ನನ್ನ ಸಂಶೋಧನಾ ಅಧ್ಯಯನಕ್ಕೆ ಮಹತ್ವದ ವಿವೇಚನೆಯನ್ನು ಮಾಡಲು ಅನುವುಮಾಡಿಕೊಡುತ್ತವೆ.

ಗ್ರಾಮದೇವತೆಗಳ ಪಾತ್ರ ಒಂದು ಸಮುದಾಯ ಮತ್ತು ಸಂಸ್ಕೃತಿಯಲ್ಲಿ ಸಂಕುಚಿತ ವ್ಯಾಪಕ ಅರ್ಥದಲ್ಲಿ ಮಹತ್ವಪೂರ್ಣವಾಗಿದೆ. ಸಾಮಾನ್ಯ ಮನುಷ್ಯನಿಗಲ್ಲದೆ ಶಕ್ತಿ ಪ್ರತಿಷ್ಠೆ ಜನಸಾಮಾನ್ಯರ ಗುಂಪಿನಿಂದ ರೂಪುಗೊಂಡ ದೈವವು ಯಾವಾಗಬೇಕಾದರೂ ತಕ್ಷಣ ಪ್ರತ್ಯಕ್ಷವಾಗುತ್ತದೆ. ಎಂತಹ ವ್ಯಕ್ತಿ ಜೊತೆಗಿದ್ದರೂ ದೇವರು ಅಥವಾ ದೈವತ್ವ ಎನ್ನುವ ಪರಿಕಲ್ಪನೆಗೆ ಮನುಷ್ಯನು ತಲೆಬಾಗುತ್ತಾನೆ. ದೈವತ್ವ ಎಂದರೆ ಎಂತಹ ಬಲಿಷ್ಠ ಶಕ್ತಿಯ ವಿರುದ್ಧ ಜಯಶಾಲಿಯಾಗುವ ಶಕ್ತಿಯಾಗಿರುತ್ತದೆ. ಜನಪದರ ವಿವಿಧ ವರ್ಗಗಳ ಸಮುದಾಯ ಸಮೂಹಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಮಾನವನು ಬೆಳೆದ ಮೇಲೆ ಎಷ್ಟು ವೈಜ್ಞಾನಿಕ ಜ್ಞಾನ ಪಡೆದರೂ ತಾನು ಸೃಷ್ಟಿಸಿದ ದೇವರಿಂದ ದೂರ ಸರಿಯತೊಡಗಿದ್ದರೂ ಮತ್ತೊಂದು ಕಡೆ ಪೂಜಿಸುತ್ತಾನೆ. ಜನಪದರ ವಿಶಾಲವಾದ ಬದುಕಿನಲ್ಲಿ ಎಲ್ಲಾ ಕೆಲಸಗಳಿಗೆ ಚಾಲನೆ ನೀಡಿ ಮತ್ತು ನಿಯಂತ್ರಿಸುವ ಶಕ್ತಿ ರೂಪುಗೊಳ್ಳುತ್ತದೆ. ಈ ಗ್ರಾಮೀಣ ದೇವತೆಯ ಬಗ್ಗೆ ಸಂಶೋಧನಾ ಅಧ್ಯಯನ ವ್ಯಾಪ್ತಿಯಲ್ಲಿ ಅಧ್ಯಯನ ಮಾಡುತ್ತೇನೆ. ಆದರೆ ನನ್ನದೇ ಕೊನೆಯ ತೀರ್ಮಾನವಲ್ಲ.

ಈ ದೈವಗಳ ಸಂಶೋಧನಾ ಅಧ್ಯಯನವು ಬಹಳ ಅದ್ಭುತವೂ, ಅಷ್ಟೇ ಕಷ್ಟಕರವೂ ಹೌದು. ಏಕೆಂದರೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿ ಸಂಗ್ರಹ ಮಾಡುವಾಗ ಅನುಭವಿಸಿದ ಅನುಭವಗಳೇ ಇದಕ್ಕೆ ಜೀವಂತ ಉದಾಹರಣೆ. ದೇವರುಗಳ ಸುತ್ತ ಇರುವ ಕಥೆ, ಪುರಾಣ, ಒಗಟು, ಇನ್ನೂ ಹಲವು ಕಾರಣಗಳು ಪ್ರಭಾವಬೀರುತ್ತವೆ. ಗ್ರಾಮೀಣ ದೈವಗಳನ್ನು ನಂಬುವವರಿಗೆ ಇವುಗಳ ಆಳವಾದ ಶೋಧನೆ ಮತ್ತು ಸವಿಸ್ತಾರದ ಬಗ್ಗೆ ತಿಳಿದುಕೊಳ್ಳುವ ಗೊಡವೆಗೆ ಹೋಗುವುದಿಲ್ಲ. ಏಕೆಂದರೆ ದೈವದ ಬಗ್ಗೆ ಬಲವಾದ ನಂಬಿಕೆ ಹೊಂದಿರುವವರು "ಬದುಕಿನ ದೋಣಿ ಸಾಗುತ್ತದೆ" ಎಂಬುದು ಅವರ ನಂಬಿಕೆ.

"ಜನಪದ ದೈವಗಳನ್ನು ಮೊದಲಿಗೆ ಮಾಹಿತಿಯ ರೂಪದಲ್ಲಿ ತಿಳಿಸಿಕೊಟ್ಟವರು ಮಾನವಶಾಸ್ತ್ರಜ್ಞರಲ್ಲಿ ಬ್ರಾಸೆಲ್ ಮೆಕಲ್‌ನ್ಯಾಸ್ ಪ್ರೇಜ್ ಮತ್ತು ಟೈಲರ್‌ಮಾರೆಟ್ ಮುಂತಾದವರು. ೧೯೨೧ರಲ್ಲಿ ಹೆನ್ರಿ ವೈಟ್ ಹೆಕರವರ ``The village of south India" ಕೃತಿಯಲ್ಲಿ ಗ್ರಾಮದೇವತೆ ಸಂವಾದಿಯಾಗಿ "village Godde" ಎಂಬ ಪದವನ್ನು ಬಳಸಿದರು. ಈ ಕೃತಿಯನ್ನು ಮುಖ್ಯವಾಗಿಟ್ಟುಕೊಂಡು ನಮ್ಮ ಅನೇಕ ವಿದ್ವಾಂಸರು ಗ್ರಾಮದಲ್ಲಿ ಗ್ರಾಮದೇವತೆಯ ಆಚರಣೆಗಳು ಹೆಚ್ಚಾಗಿ ಇರುವುದರಿಂದಲೇ ಏನೋ ಆ ದೈವವನ್ನು ಗ್ರಾಮದೈವವೆಂದು ಕರೆದರು. ಕನ್ನಡದಲ್ಲಿ ಗ್ರಾಮದೇವತೆಯನ್ನು ಕುರಿತು ಅಧ್ಯಯನ ನಡೆಸಿದವರಲ್ಲಿ ಪ್ರಮುಖವಾಗಿ ಡಾ. ಚೆನ್ನಣ್ಣ ವಾಲೀಕಾರ್ ಮತ್ತು ಡಾ. ಸಿದ್ದಲಿಂಗಯ್ಯನವರ ಹೆಸರುಗಳನ್ನು ಹೆಸರಿಸಬಹುದು. ಡಾ. ಚೆನ್ನಣ್ಣ ವಾಲಿಕಾರ್ "ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳು" ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿದರೆ ಡಾ.ಸಿದ್ದಲಿಂಗಯ್ಯ ತಮ್ಮ ಕೃತಿಗೆ "ಗ್ರಾಮದೇವತೆ" ಎಂಬ ಪದವನ್ನು ಬಳಸಿದ್ದಾರೆ. ಆದರೆ ಡಾ.ಡಿ.ಬಿ. ನಾಯಕ್ ಹಾಗೂ ಇತರ ವಿದ್ವಾಂಸರು "ಶಕ್ತಿದೇವತೆ" ಎಂಬ

ಅರ್ಥ ಸೂಚಿಸುವ ಪದ ಪ್ರಯೋಗದಿಂದ ಅಧ್ಯಯನ ಮಾಡಿದ್ದಾರೆ. ಒಂದು ಮನೆಯಲ್ಲಿರುವ ದೈವವನ್ನು ಮನೆದೈವವೆಂದು ಕರೆದರೆ ಆ ಗ್ರಾಮದ ಅಧಿದೈವವಾಗಿ ಪೂಜಿಸಲ್ಪಡುವ ದೈವವು ಗ್ರಾಮ ದೈವವೆಂದು ಕರೆಯುವರು.

ಪ್ರಸ್ತುತ ನನ್ನ ಅಧ್ಯಯನದಲ್ಲಿ ಚಂದ್ರಗಿರಿಯ ಚಂದಾಲಿಂಗೇಶ್ವರನ ಸಾಂಸ್ಕೃತಿಕ ಮಹತ್ವ, ಆಚರಣೆ ಸಂಪ್ರದಾಯಗಳು, ನಂಬಿಕೆ, ಜನಪದರ ದೃಷ್ಟಿಯಲ್ಲಿ ಈತನ ಬಗ್ಗೆ ಇರುವ ನಂಬಿಕೆ, ವಿಧಿ-ನಿಷೇಧಗಳು, ಜಾತ್ರೆ ಎಂಬ ಇತ್ಯಾದಿ ಅಂಶಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಗ್ರಾಮೀಣ ಪ್ರದೇಶಗಳಿಂದ ಕೂಡಿದ ನಮ್ಮ ಇಂಡಿಯಾ ಧಾರ್ಮಿಕ ನಂಬಿಕೆಯುಳ್ಳ ಪ್ರದೇಶವೆಂದು ಹೇಳಬಹುದು. ಜನಪದರ ಬದುಕಿನಲ್ಲಿ ಪರಿಕಲ್ಪನೆಯು ಅಗೋಚರವಾದ ಶಕ್ತಿ, ಅದ್ಭುತ ಸೃಷ್ಟಿ ಎನ್ನುವ ಅಂಶವನ್ನು ಅರಿತುಕೊಳ್ಳಬೇಕಾದರೆ, ಕಾಲದಲ್ಲಿ ಗರ್ಭೀಕರಿಸಿಕೊಂಡಿರುವ ದಿನಮಾನವು ನಮಗೆ ಗೋಚರವಾಗುತ್ತದೆ. ಜನಪದರ ದೃಷ್ಟಿಯಲ್ಲಿ ದೈವತ್ವ ಎನ್ನುವುದು "ಸಾಗರದಲ್ಲಿ ಸಾಗುವ ದೋಣಿಗೆ ಹರಿಗೋಲು ಷ್ಟು ಮುಖ್ಯವೋ ಅಷ್ಟೇ ಮುಖ್ಯ. ಪ್ರಾಚೀನಕಾಲದಿಂದಲೂ ಜನಪದರ ಬದುಕಿನಲ್ಲಿ ದೈವತ್ವದ ಪಾತ್ರ ಮಹತ್ವ ಪಡೆದುಕೊಂಡಿದೆ".

ಆಧುನಿಕ ನಾಗರಿಕತೆಯ ತರ್ಕ ಒಂದು ಏಕರೂಪಿ ಜೀವನಕ್ರಮವನ್ನು ಮೂಡಿಸುವುದಾಗಿದೆ. ಜ್ಞಾನ ವ್ಯವಸ್ಥೆಗಳ ಭಾವನಾಲಯಗಳ ತೀವ್ರ ರೀತಿಯ ಹಿಂಸೆಯನ್ನು ಅನುಭವಿಸಿ ಕಣ್ಮರೆಯಾಗುತ್ತಿವೆ. ಗ್ರಾಮ ದೇವತೆಗಳು ಶೀಘ್ರವಾಗಿ ಕಣ್ಮರೆಯಾಗುತ್ತಿರುವುದನ್ನು ಕೂಡ ಈ ನಾಗರಿಕತೆಯ ತರ್ಕದಲ್ಲಿಯೇ ನೋಡಲಾಗಿದೆ. ಆಧುನಿಕ ಬಂಡವಾಳಶಾಹಿ ನಾಗರಿಕತೆಯು ಆತನಿಗಿಂತ ಭಿನ್ನವಾದ ಲೋಕಗ್ರಹಿಕೆ, ನಂಬಿಕೆ, ಆಚರಣೆ ಕ್ರಮಗಳನ್ನು ನಿರ್ದಯವಾಗಿ ಹೊಸಕಿ ಹಾಕುತ್ತವೆ. ಆಧುನಿಕರಣ ಸಂದರ್ಭದಲ್ಲಿ ಗ್ರಾಮದೇವತಾ ವ್ಯವಸ್ಥೆ ಸೂಚಿಸುತ್ತಿರುವ ಮೌಲ್ಯಗಳ ಹಾಗೂ ಎದುರಿಸುತ್ತಿರುವ ಸಮಸ್ಯೆಗಳು ಈ ಕೆಳಗಿನಂತಿವೆ.

ಗ್ರಾಮದೇವತೆಗಳು ಸ್ತ್ರೀ ಚೈತನ್ಯ, ಶಕ್ತಿಯ ಆರಾಧನೆ ಎಂದರೆ ತಪ್ಪಾಗಲಾರದು. ಕೆಳವರ್ಗದ ಲೋಕವನ್ನು ನೋಡುವ ಕ್ರಮವನ್ನು ಸೂಚಿಸುತ್ತವೆ. ಸ್ಥಳೀಯ ಮೂಲದಿಂದ ಬಂದ ಗ್ರಾಮದೇವತೆಗಳ ಅರ್ಚಕರು ಸಾಮಾನ್ಯವಾಗಿ ಕೆಳಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಆದ್ದರಿಂದ ಗ್ರಾಮದೇವತೆಗಳು ಇಷ್ಟಪಡುವ ಆಹಾರವು ಕೆಳವರ್ಗದ ಪದ್ಧತಿಗೆ ಸಂಬಂಧಿಸಿದ್ದಾಗಿರುತ್ತದೆ. ಆಯಾ ಸಮುದಾಯದ ಭಾಷೆ, ಉಪಭಾಷೆಗಳು ಬಳಕೆಯಾಗುವುದನ್ನು ಕಾಣಬಹುದಾಗಿದೆ. ಗ್ರಾಮದೇವತೆಗಳು ತಮ್ಮ ಸಮಾಜದ ವೈದಿಕೇತರ ಜನವರ್ಗದ ಸಂಸ್ಕೃತಿಯನ್ನು ಬಿಂಬಿಸುತ್ತವೆ.

'ಮನು ಸ್ಮೃತಿಯಂತಹ' ಗ್ರಂಥದಲ್ಲಿ ಪರಿಶಿಷ್ಟ ವರ್ಗದ ಮುಗ್ಧ ಜನರನ್ನು ನಿಕೃಷ್ಟವಾಗಿ ಬಳಕೆ ಮಾಡಿಕೊಂಡಿರುವುದನ್ನು ನೋಡಿದರೆ, ಪುರೋಹಿತಶಾಹಿ ವರ್ಗದವರು ತಮ್ಮ ಅನುಕೂಲಕ್ಕೆ ತಕ್ಕಂತೆ ನಿಯಮಗಳನ್ನು ರೂಪಿಸಿಕೊಂಡ ತಂತ್ರ ತಿಳಿದುಬರುತ್ತದೆ. ಈ ತಂತ್ರ ಬಲೆಯನ್ನು ಬೀಸುವಲ್ಲಿ ಶ್ರೇಯಸ್ಸನ್ನು ತಮ್ಮದಾಗಿಸಿಕೊಂಡಿದ್ದಾರೆ. ಇಂದು ದೇವತೆಯನ್ನು ಸಂಕೇತವಾಗಿ

ಇಟ್ಟುಕೊಂಡು ಗ್ರಾಮೀಣ ಪ್ರದೇಶದಲ್ಲಿ ಮುಖಂಡರು, ಪಕ್ಷದ ಪ್ರತಿನಿಧಿಗಳು, ವಿವಿಧ ರಾಜಕೀಯ ನಾಯಕರು, ಅಧಿಕಾರ ಚಲಾಯಿಸುತ್ತಾರೆ. ಗ್ರಾಮೀಣ ಜನತೆಯಲ್ಲಿ ಅನೇಕ ರೀತಿಯ ಸಮಸ್ಯೆಗಳು, ಜಗಳ, ಸಂಕಟ ಇತ್ಯಾದಿಗಳಿಗೆ ಇದು ಪಾರಂಪರಿಕವಾಗಿ ತಂತ್ರಜ್ಞಾನದ ಅವಿಭಾಜ್ಯ ಅಂಗವಾಗಿ ಗ್ರಾಮ ದೇವತೆಯು ಕಾಣುತ್ತಿತ್ತು. ಜನಪದರು ಹಿಂದಿನ ದಿನಗಳಲ್ಲಿ ರೋಗಕ್ಕೆ ತುತ್ತಾದರೆ ಮದ್ದು ಕೊಡಿಸುವುದು ಎಷ್ಟು ಅವಶ್ಯಕವಾಗಿತ್ತೋ, ಅಷ್ಟೇ ಅನಿವಾರ್ಯ ಗ್ರಾಮ ದೇವತೆಗಳ ಹರಕೆ ಹೊರುವುದು ಮುಖ್ಯವಾಗಿತ್ತು. ಆದರೆ ಇಂದಿನ ನಾಗರಿಕತೆಯ ಪ್ರಭಾವದಿಂದ ಪಾತ್ರ ಗೌಣವಾಗಿದೆ. ಶಿಷ್ಟ ಮೌಲ್ಯಗಳ ಪ್ರಭಾವದಿಂದ ಜನಪದರ ಮೌಲ್ಯಗಳು ಅಸ್ತಿತ್ವವನ್ನು ಕಳೆದುಕೊಳ್ಳುವುದರ ಜೊತೆಗೆ ದೈವಗಳ ಸಂಬಂಧ ಕಡಿಮೆಯಾಗುತ್ತದೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಜನಪದ ಆಚರಣೆಗಳು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿವೆ.

೧..೨. ಅಧ್ಯಯನದ ಉದ್ದೇಶ : (Purpose of Study)

ಸಮಯದ ಅಭಾವವನ್ನು ಅನುಭವಿಸುತ್ತಿರುವ ಮತ್ತು ಬದಲಾಗುತ್ತಿರುವ ಮನುಷ್ಯನ ಜೀವನ ಶೈಲಿಗೆ ಅನುಗುಣವಾಗಿ ಇಂದು ಮಾನವನು ಹಬ್ಬ ಹರಿದಿನ, ಜಾತ್ರೆ ಉತ್ಸವಗಳಂತಹ ಕಾರ್ಯದಲ್ಲಿ ಪಾಲ್ಗೊಂಡು ಅಲ್ಲಿನ ಆನಂದವನ್ನು ಅನುಭವಿಸಲು ಸಾಧ್ಯವಾಗದ ಸ್ಥಿತಿಗೆ ತಲುಪಿದ್ದಾನೆ. ಇಂತಹ ಮಾನವನ ಪೀಳಿಗೆಗೆ ಗ್ರಾಮಾಧ್ಯಯನದಂತಹ ಅಥವಾ ಗ್ರಾಮದ ದೈವಗಳ ಜಾತ್ರೆಗಳ ಅಧ್ಯಯನದಿಂದ ಆ ಗ್ರಾಮಗಳ ದೈವಗಳ ಮತ್ತು ಜಾತ್ರೆ ಉತ್ಸವಗಳ ಬಗ್ಗೆ ತಿಳಿಯುವಂತೆ ಮಾಡುವ ಹಾಗೆಯೇ ಗತಕಾಲದ ನಮ್ಮ ಸಂಸ್ಕೃತಿಯ ಕುರುಹನ್ನು, ಸಂಪ್ರದಾಯವನ್ನು, ನಂಬಿಕೆಯನ್ನು, ಅರಿಯುವಂತೆ ಮಾಡುವುದು ಅಧ್ಯಯನದ ಉದ್ದೇಶವಾಗಿದೆ.

ದೈವಕ್ಕೆ ಸಂಬಂಧಿಸಿದಂತೆ ಆಚರಣೆಗಳು ಆಯಾ ದೈವದ ಸಮುದಾಯದ ಹಿನ್ನೆಲೆಯಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿವೆ. ಹೀಗೆ ಪರಂಪರಾನುಗತವಾಗಿ ನಡೆದುಕೊಂಡು ಬಂದಂತಹ ಆಚರಣೆಗಳು, ಹಬ್ಬ, ಜಾತ್ರೆಗಳು, ಗ್ರಾಮೀಣ ದೈವ ಮುಂತಾದವುಗಳ ಅಧ್ಯಯನ ಇಂದು ಅನಿವಾರ್ಯ ಮತ್ತು ಅವಶ್ಯಕವಾಗಿದೆ.

ಗ್ರಾಮೀಣ ಪ್ರದೇಶದ ಪರಿಸರದಲ್ಲಿ ಕಂಡುಬರುವ ಆಕರಗಳಾದ ಜಾತ್ರೆ, ಸಮುದಾಯ, ಗ್ರಾಮ, ಹಬ್ಬ, ಬುಡಕಟ್ಟು, ಸಂಪ್ರದಾಯ ಹಾಗೂ ದೈವ ಇವುಗಳನ್ನು ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಲ್ಲಿ ಪುನಃ ರಚಿಸುವುದು ಅನಿವಾರ್ಯವಾಗಿದೆ. ಈ ಮೇಲಿನ ಜನಪದ ಅಂಶಗಳ ಮೂಲಕ ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವ ವಿಧಾನವು ಮುಂದುವರೆದು ಈ ನಿಟ್ಟಿನಲ್ಲಿ ಗ್ರಾಮಗಳ ಪರಿಚಯ, ಗ್ರಾಮದ ದೇವತೆಗಳ ಪರಿಚಯ, ಮನುಷ್ಯನೊಂದಿಗೆ ಆಯಾ ಗ್ರಾಮದೇವತೆಗಳ ಸಂಬಂಧ, ಅಲ್ಲಿನ ದೈವಗಳ ಕುರಿತು ಆಚರಣೆಗಳು, ನಂಬಿಕೆ, ಕಥೆ, ಗಾದೆ, ಹರಕೆ ಹೀಗೆ ಎಲ್ಲಾ ಅಂಶಗಳನ್ನು ತಿಳಿಯಪಡಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಚಂದ್ರಗಿರಿಯು ಚಂದಾಲಿಂಗೇಶ್ವರನು ಸಾಂಸ್ಕೃತಿಕ ನಾಯಕನಾಗಿ ಈ ಭಾಗದ ಜನರಲ್ಲಿ ಆರಾಧ್ಯದೈವವಾಗಿ ಆರಾಧಿಸಲ್ಪಡುತ್ತಾನೆ. ಚಂದಾಲಿಂಗೇಶ್ವರನನ್ನು ನಮ್ಮ ಜನಪದರು ತಮ್ಮ ನಂಬಿಕೆ, ಆಚರಣೆ, ಸಂಪ್ರದಾಯದ ನೆಲೆಯಲ್ಲಿ ಜಾತ್ರೆಯನ್ನು ಆಚರಿಸುತ್ತಾರೆ. ಹೀಗೆ ಆಚರಿಸುವುದರ ಮೂಲಕ ಸಂಪ್ರದಾಯಗಳನ್ನು ಜಾತ್ರೆಯ ನೆಪದಲ್ಲಿ ಮುಂದಿನ ತಲೆಮಾರಿಗೆ ವರ್ಗಾಯಿಸುವ ಅನಿವಾರ್ಯತೆಯು ಜನಪದರಲ್ಲಿದೆ. ಚಂದಾಲಿಂಗೇಶ್ವರನು ಜನರ ಒಳಿತಿಗಾಗಿ ಜನರಲ್ಲಿರುವ ಅಜ್ಞಾನ, ಅಂಧಕಾರ ನಿವಾರಿಸುವ ಸಲುವಾಗಿ ಮತ್ತು ಶೈವ ಧರ್ಮವನ್ನು ಸಾರಿದ ಮಹಾಮಹಿಮ ಪುರುಷನಾಗಿ ಮಾಡಿದ್ದರಿಂದ ಊರಿನ ಹಿತದೃಷ್ಟಿಯಿಂದ ಸಾಂಸ್ಕೃತಿಕ ನಾಯಕನಾಗಿ ಚಂದಾಲಿಂಗೇಶ್ವರ ನೆಲೆಯೂರಿದ್ದಾನೆ.

ಪ್ರಸ್ತುತ ಅಧ್ಯಯನದ ಕೇಂದ್ರವಾಗಿರುವ ಚಂದಾಲಿಂಗೇಶ್ವರನ ಸಾಂಸ್ಕೃತಿಕ ಪರಂಪರೆಯು ಮತ್ತು ಈ ಭಾಗದಲ್ಲಿ ಅಗಣಿತ ಭಕ್ತರ ಗಮನವನ್ನು ತನ್ನ ಕ್ಷೇತ್ರದ ಕಡೆಗೆ ಆಕರ್ಷಿಸಿಕೊಂಡಿದ್ದಾನೆ. ಜನರ ಬದುಕಿನ ಹಲವು ಸಮಸ್ಯೆಗಳಿಗೆ ಅವರ ಪವಾಡಸಾದೃಶ್ಯಗಳು ಸಾಕ್ಷಿಯಂತಿದ್ದವು. ಅಂತಹ ಬಡ ಜನರ ಭಾವನೆಗಳಿಗೆ ಬಹು ಪಯೋಗದ ನಿಲುವನ್ನು ತಳೆದ ಚಂದಾಲಿಂಗೇಶ್ವರನ ಕುರಿತು ಸಮಗ್ರವಾಗಿ ಅಲ್ಲದಿದ್ದರೂ ಸೂಕ್ಷ್ಮವಾಗಿ ಕೆಲವು ಪುಸ್ತಕಗಳು, ಸಣ್ಣಪುಟ್ಟ ಲೇಖನಗಳು ಪ್ರಕಟವಾಗಿದ್ದರೂ ಸಹ ಅವು ಅಪರಿಪೂರ್ಣವಾಗಿವೆ. ಮತ್ತು ಅವು ಸುಮಾರು ದಶಕಗಳ ಹಿಂದೆಯೇ ರಚನೆಗೊಂಡಂತವುಗಳು ಆಗಿದ್ದು ಅಂದಿನ ಕಾಲಘಟ್ಟದ ಹಲವು ಮಾಹಿತಿಗಳನ್ನು ಊಹಾಪೋಹಗಳಂತೆ ತಿಳಿಸುತ್ತವೆ. ಅಂತಹ ಹತ್ತಾರು ಸಮಸ್ಯೆಗಳಿಗೆ, ಊಹೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿರುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಈಗಾಗಲೇ ಹಲವಾರು ಲಕ್ಷಿತ ಪರಂಪರೆಯ ಧಾರ್ಮಿಕ ಧಾರೆಗಳ ಸಾಂಸ್ಕೃತಿಕ ಅಧ್ಯಯನ ನಡೆದಿರುವುದು ಸಾಮಾನ್ಯವಾಗಿದೆ. ಅಲಕ್ಷಿತ ಧಾರ್ಮಿಕ ಸಾಂಸ್ಕೃತಿಕ ಪಂಥಗಳ ಅಧ್ಯಯನ ನಡೆದಿರುವುದು ತುಂಬಾ ವಿರಳ. ಅದರಲ್ಲೂ ಆರ್ಥಿಕವಾಗಿ, ಸಾಮಾಜಿಕವಾಗಿ, ಕಡೆಗಣಿಸಲ್ಪಟ್ಟ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಗಳ ಕಡೆಗೆ ತಿರುಗಿ ನೋಡದಂತ ಕ್ಷೇತ್ರಗಳಲ್ಲಿ ಚಂದಾಲಿಂಗೇಶ್ವರನ ಕ್ಷೇತ್ರವು ಒಂದಾಗಿದೆ. ಇದುವರೆಗೆ ಈ ಕ್ಷೇತ್ರದ ಕುರಿತು ಯಾವುದೇ ಅಧ್ಯಯನಗಳು ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಯದೆ ಇರುವುದು ಸೋಜಿಗದ ಸಂಗತಿ. ಈಗ ಆ ನಿಟ್ಟಿನಲ್ಲಿ ಕೇವಲ ಇದ್ದ ಮಾಹಿತಿ ಅಷ್ಟೇ ಅಲ್ಲದೆ, ಕ್ಷೇತ್ರಕಾರ್ಯದ ಮೂಲಕ ಹಲವು ಸತ್ಯ ಘಟನೆಗಳನ್ನು ತಾರ್ಕಿಕ ನೆಲೆಗಟ್ಟಿನಲ್ಲಿ ನಿಂತು ಚರ್ಚಿಸುವುದು, ಆ ಮೂಲಕ ಅಲಕ್ಷಿತ ಧಾರ್ಮಿಕ ಕಾರ್ಯಗಳನ್ನು ಗಟ್ಟಿಗೊಳಿಸುವ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ.

ಆಚರಣೆಗಳು ಜನಪದರ ಬದುಕಿನ ಭಾಗವಾಗಿ ಅದೇ ರೀತಿ ಇಲ್ಲಿ ನಡೆಯುವ ಧಾರ್ಮಿಕ ವಿಧಿ-ವಿಧಾನಗಳು, ಸಂಪ್ರದಾಯಗಳು, ಹರಕೆಗಳು, ಹಾಗೂ ಜನಪದ ಕಲೆಗಳು, ಎಷ್ಟರಮಟ್ಟಿಗೆ ಜನಪದರಲ್ಲಿ ಪ್ರಭಾವ ಬೀರಿವೆ? ಇಂತಹ ನಂಬಿಕೆ, ಆಚರಣೆಗಳು, ದೈವತ್ವದ ಮೇಲಿನ ಭಕ್ತಿಗಾಗಿ,

ಸಾಂಸ್ಕೃತಿಕ ವೀರನ ಪೂಜ್ಯನೀಯ ಭಾವನೆಗಾಗಿಯೋ? ಸಮಾಜದ ನಿಲುವಿಗಾಗಿಯೋ? ಎಂಬಂತಹ ವಿವೇಚನಗಳ ಜೊತೆ ಜೊತೆಗೆ ಧಾರ್ಮಿಕ, ರಾಜಕೀಯ, ಸಾಮಾಜಿಕ, ಹಾಗೂ ಸಾಂಸ್ಕೃತಿಕ, ಸಮಷ್ಠಿಗಳನ್ನು ಏಕೀಕರಿಸುವಲ್ಲಿ ಅವುಗಳು ಸಹಕಾರಿಯಾಗುತ್ತವೆಯೋ? ಆಚರಣೆಗಳನ್ನು ಕೆಲವೊಮ್ಮೆ ಒತ್ತಾಯ ಪೂರ್ವಕವಾಗಿ ಹೇರಲಾಗಿದೆ. ಅಥವಾ ಒತ್ತಾಸೆಯ ಭ್ರಮೆಯೊಳಗೆ ಅನುಸರಿಸಲಾಗುತ್ತದೆಯೋ? ಎಂಬಂತ ನಂಬಿಕೆಗಳ ಪರಿಕಲ್ಪನೆಯನ್ನು ಇತ್ತೀಚಿನ ಬೆಳವಣಿಗೆಗಳ ವಿವಿಧ ಆಯಾಮಗಳಿಗೆ ಮುಖವೊಡ್ಡಿ ನಿಲ್ಲುವುದನ್ನು ಸೈಧ್ಯಾಂತಿಕ ಚರ್ಚೆಗೆ ಇಂಬುಕೊಡುವಂತೆ ಪ್ರಸ್ತಾಪಿಸುವುದು ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

ಕ್ಷೇತ್ರಕಾರ್ಯದ ಮೂಲಕ ಸಂಗ್ರಹವಾಗಿರುವ ಮತ್ತು ಲಿಖಿತ ರೂಪದಲ್ಲಿರುವ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಈ ದೈವದ ಆಚರಣೆಗಳ ಹಿಂದಿರುವ ತಾತ್ವಿಕತೆಯನ್ನು ಹಾಗೂ ಲಿಖಿತ ಮೌಖಿಕ ಸಾಹಿತ್ಯ ಪ್ರಕಾರಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಒಟ್ಟಾರೆ ದುಡಿಯುವ ವರ್ಗಗಳಿಂದಲೇ ಹೆಚ್ಚಾಗಿ ಆರಾಧನೆಗೊಳ್ಳುವ ಚಂದಾಲಿಂಗೇಶ್ವರನ ಕುರಿತು ಸಾಂಸ್ಕೃತಿಕ ಅಧ್ಯಯನವನ್ನು ಪ್ರಬಂಧದಲ್ಲಿ ಕೈಗೊಳ್ಳಲಾಗಿದೆ. ಚಂದಾಲಿಂಗೇಶ್ವರನ ಆಚರಣೆ, ನಂಬಿಕೆ, ಸಂಪ್ರದಾಯಗಳು, ವಿಧಿ–ನಿಷೇಧ, ಹರಕೆ, ಸಾಹಿತ್ಯ, ಕಥೆ, ಕಾವ್ಯಗಳನ್ನು ಕುರಿತು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ಕೈಗೊಂಡಲ್ಲಿ ಇನ್ನೂ ಹೆಚ್ಚಿನ ಮಾಹಿತಿಗಳು ಶಾಸನಗಳು ದೊರಕುವ ಸಾಧ್ಯತೆಗಳಿವೆ. ಜಿಲ್ಲೆಯ ಅತ್ಯಂತ ಪ್ರಮುಖವಾದ ಧಾರ್ಮಿಕ ತಾಣಗಳಲ್ಲಿ ಚಂದ್ರಗಿರಿಯ ಚಂದಾಲಿಂಗೇಶ್ವರ ಕ್ಷೇತ್ರ ಒಂದಾಗಿದೆ. ಅಲ್ಲಿಯ ಪರಿಸರವನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಅಲ್ಲಿನ ಜನಪದ ಸಂಸ್ಕೃತಿಯನ್ನು ಕಟ್ಟಿಕೊಡುವ ಹಿನ್ನೆಲೆಯಲ್ಲಿ ಮತ್ತು ಧಾರ್ಮಿಕವಾಗಿ ಸಹ ಇಲ್ಲಿಯ ಸಂಸ್ಕೃತಿಯನ್ನು ಕೋಮುಸೌಹಾರ್ದಯುತ ನೆಲೆಯಲ್ಲಿ ಅಧ್ಯಯನ ಮಾಡುವ ಮುಖ್ಯ ಉದ್ದೇಶವನ್ನಿಟ್ಟುಕೊಂಡು ಪ್ರಸ್ತುತ ಕಾರ್ಯವನ್ನು ಕೈಗೊಳ್ಳಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ : (Scope of Study)

ಒಂದು ನಿರ್ದಿಷ್ಟ ಉದ್ದೇಶ ಪೂರಿತ ಸಂಶೋಧನೆ ಯಶಸ್ವಿಯಾಗಲು ವ್ಯಾಪ್ತಿ ತುಂಬಾ ಸಹಕಾರಿಯಾಗಿದೆ. ಅಧ್ಯಯನ ಕೈಗೊಂಡಾಗ ಅದರ ವಿಸ್ತೃತ ರೂಪ ಪಡೆದು ನಿರ್ದಿಷ್ಟವಾದ ಫಲಿತಗಳನ್ನು ಕಂಡುಕೊಳ್ಳಲು ಒಂದು ಚೌಕಟ್ಟು ಬಹಳ ಮುಖ್ಯ. ಅದನ್ನು ಅಧ್ಯಯನದ ಮಿತಿ, ವ್ಯಾಪ್ತಿಯ ಎಲ್ಲೆ ಎನ್ನುವ ವಿವಿಧ ಪರಿಭಾಷೆಗಳಿಂದ ಗುರುತಿಸುತ್ತೇವೆ. ಪ್ರಸ್ತುತ ಅಧ್ಯಯನದಲ್ಲಿ ತನ್ನದೇ ಆದ ಒಂದು ಪರಿಧಿಯೊಳಗೆ ಚರ್ಚಿಸುತ್ತಾ ತಾತ್ವಿಕ ನೆಲೆಗಟ್ಟನ್ನು ಗಟ್ಟಿಗೊಳಿಸುವ ಪ್ರಯತ್ನ ಮಾಡಲಾಗಿದೆ. ಉಪೇಕ್ಷೆಗೆ ಒಳಗಾಗಿದ್ದ ಧಾರ್ಮಿಕ ಧಾರೆಗಳಲ್ಲಿ ಒಂದಾದ ವಸ್ತು ವಿಷಯವನ್ನು 'ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ' ಎಂಬ ಸಂಶೋಧನಾ ಶೀರ್ಷಿಕೆಯನ್ನು ಇಟ್ಟುಕೊಂಡು ನನ್ನ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕೊಪ್ಪಳ ಜಿಲ್ಲೆಯ ಚಂದಾಲಿಂಗನ ಪರಿಚಯಾತ್ಮಕ ಸಾಹಿತ್ಯಗಳನ್ನು ಸಾಂಸ್ಕೃತಿಕ ವಿಧಿವಿಧಾನಗಳಿಗೆ ಅನ್ವಯಿಸಿ ಕ್ಷೇತ್ರಕಾರ್ಯ ವಿಧಾನದ ಮೂಲಕ

ಒಂದು ಸೈದ್ಧಾಂತಿಕ ನಿಲುವಿನೊಳಗೆ ವಿಷಯವನ್ನು ಪರಿಗ್ರಹಿಸಲಾಗಿದೆ. ಶಿಷ್ಟ ಪರಿಶಿಷ್ಟ ನೆಲೆಯ ವಿಭಿನ್ನ ದೃಷ್ಟಿಕೋನದಿಂದ ನನ್ನ ಅಧ್ಯಯನದ ವ್ಯಾಪ್ತಿಯೊಳಗೆ ಮಹಾಪ್ರಬಂಧವನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ನನ್ನ ಮಹಾಪ್ರಬಂಧದ ವ್ಯಾಪ್ತಿಯನ್ನು ಭೌಗೋಳಿಕ ಮತ್ತು ಕಾಲಾವಧಿಯ ದೃಷ್ಟಿಯಿಂದ ನಿರ್ಧಿಷ್ಟ ಪಡಿಸಲಾಗಿದೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಕೆಲವು ಪ್ರದೇಶಗಳಾದ ಚಂದ್ರಗಿರಿ, ಹನುಮಸಾಗರ, ಬೀಳಗಿ, ಮನ್ನೇರಾಳ, ಗುಡೂರು ಇವುಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅಲ್ಲಿನ ಸಾಂಸ್ಕೃತಿಕ ಸಂಬಂಧಗಳ ಮಹತ್ವ ಮತ್ತು ಅಲ್ಲಿನ ದೈವವನ್ನು ಕುರಿತು ಪರಿಚಯ ಗುಡಿಗಳು ಪವಾಡಗಳು, ಆಚರಣೆಗಳು, ವಾರ್ಷಿಕ ಆಚರಣೆಗಳು, ಜೀವನಾವರ್ತನದ ಆಚರಣೆಗಳು, ನಾಮಕರಣ, ಸಾವು, ಚಂದಾಲಿಂಗೇಶ್ವರನ ಬಗೆಗಿನ ನಂಬಿಕೆ, ನಿಷೇಧ, ಹರಕೆಗಳು, ಚಂದಾಲಿಂಗ ಹಾಗೂ ಇತರ ದೈವಗಳ ಸಂಬಂಧ, ಚಂದಾಲಿಂಗೇಶ್ವರ ಕುರಿತು ಸಾಹಿತ್ಯ, ಕಥೆ, ದೈವ ಪ್ರಸರಣ, ಹಾಗೂ ಭಕ್ತಿ ಪರಂಪರೆ, ಇವುಗಳು ಅಧ್ಯಯನ ವ್ಯಾಪ್ತಿಯಲ್ಲಿ ಬರುತ್ತವೆ.

ಪ್ರಸ್ತುತ ನನ್ನ ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ ಮಹಾಪ್ರಬಂಧದ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯನ್ನು ಸಂಪೂರ್ಣ ಕ್ಷೇತ್ರಕಾರ್ಯದ ಮುಖಾಂತರ ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಿದ್ದು ಕ್ಷೇತ್ರಕಾರ್ಯ ವಿಧಾನವನ್ನು ಪ್ರಶ್ನಾವಳಿ, ವೀಕ್ಷಣೆ, ಮತ್ತು ಸಂದರ್ಶನದ ಮುಖಾಂತರ ಕೈಗೊಳ್ಳಲಾಗಿದೆ. ಅಲ್ಲಲ್ಲಿ ಅಧ್ಯಯನಕ್ಕೆ ಪೂರಕವಾಗಿ ಕೆಲವು ಗ್ರಂಥಗಳ ಬಳಕೆ ಮಾಡಿಕೊಂಡು ಮಹಾಪ್ರಬಂಧ ಸಿದ್ಧಪಡಿಸಲಾಗಿದೆ.

೧.೪. ಅಧ್ಯಯನದ ಮಹತ್ವ : (The Significance of The Study)

ಗ್ರಾಮಗಳಲ್ಲಿರುವ ದೇವರಿಗೆ ಸಂಬಂಧಿಸಿದ ಹಾಗೂ ಅಲ್ಲಿನ ಜನಪದರಲ್ಲಿ ಬಹಳ ಹಿಂದಿನಿಂದ ಬಂದ ಆಚರಣೆಗಳು ತುಂಬಾ ಮಹತ್ವ ಪಡೆದುಕೊಂಡಿವೆ. ಈ ನನ್ನ ಮಹಾಪ್ರಬಂಧವು ಚಂದಾಲಿಂಗೇಶ್ವರ ಸುಕ್ಷೇತ್ರದಲ್ಲಿ ಪ್ರಾಚೀನ ಗುಡಿಗಳ ಭೌತಿಕ ರಚನಾ ಕ್ರಮಗಳನ್ನು ತಿಳಿಸುತ್ತದೆ. ಆ ವ್ಯಾಪ್ತಿ ಪ್ರದೇಶದಲ್ಲಿರುವ ಗುಡಿ ಗುಂಡಾರಗಳು, ಹೊಂಡ, ಬಾವಿ, ವಿಶೇಷ ಮರಗಳು, ಮಂಟಪಗಳು, ಶಿಬಾರಗಳು ಇವುಗಳನ್ನು ಜನಪದರು ತಮ್ಮ ಸಾಂಸ್ಕೃತಿಕ ಆಚರಣೆಗಳಲ್ಲಿ ಹೇಗೆ ತೊಡಗಿಸಿಕೊಳ್ಳುವರು ಎಂಬುದನ್ನು ಅರಿಯಲಾಗಿದೆ. ಚಂದಾಲಿಂಗೇಶ್ವರನ ಕ್ಷೇತ್ರವು ನೂರೊಂದು ದೈವಗಳ ಸಮ್ಮಿಲನವಾಗಿರುವುದರಿಂದ ಚಂದಾಲಿಂಗೇಶ್ವರ ನೊಂದಿಗೆ ಇರುವ ಸಹ ಸಂಬಂಧವನ್ನು ಅಧ್ಯಯನ ಮಾಡಲಾಗಿದೆ.

ಈ ಮಹಾಪ್ರಬಂಧದ ಸಾಂಸ್ಕೃತಿಕ ವೀರ ಚಂದಾಲಿಂಗೇಶ್ವರನ ಮೂಲದ ಬಗ್ಗೆ ತಿಳಿಯಲಾಗಿದೆ. ಆತನ ಪೂರ್ವಜರ ಹಿನ್ನೆಲೆಯನ್ನು ವೈವಾಹಿಕ ಜೀವನದ ಘಟನಾವಳಿಗಳನ್ನು ಅಧ್ಯಯನ ಮಾಡಲಾಗಿದೆ. ಚಂದಾಲಿಂಗೇಶ್ವರನು ಪವಾಡ ಪುರುಷನಾಗಿ ದೈತ್ಯರೊಂದಿಗೆ ಹೋರಾಡಿದ ಚಿತ್ರಣವನ್ನು ವಿವರಿಸುತ್ತದೆ.

ಚಂದಾಲಿಂಗೇಶ್ವರನು ದೈವೀ ಪುರುಷನಾಗಿರುವುದರಿಂದ ಜನಪದರು ಆತನಿಗೆ ಸಂಬಂಧಿಸಿದಂತೆ ಜೀವನಾವರ್ತನ ಮತ್ತು ವಾರ್ಷಿಕಾವರ್ತನದ ಆಚರಣೆಗಳು ಹಾಗೂ ನಂಬಿಕೆ ಮತ್ತು ವಿಧಿ-ನಿಷೇಧಗಳನ್ನು ಅನುಸರಿಸುವುದು ತಿಳಿಯುತ್ತದೆ. ವರ್ಷದಲ್ಲಿ ನಡೆಯುವ ಎರಡೂ ಜಾತ್ರೆಗಳ ವಿಶೇಷವಾದ ಆಚರಣೆ ಸಂಪ್ರದಾಯಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಜಾತ್ರೆಯ ಪೂರ್ವ ಹಾಗೂ ಪ್ರಸ್ತುತ ದಿನಗಳಲ್ಲಿ ಸಿದ್ಧತೆ ಹಾಗೂ ವ್ಯಾಪಾರ ವಹಿವಾಟು ನಡೆಯುವ ಪ್ರಕ್ರಿಯೆಯನ್ನು ಕಟ್ಟಿಕೊಡಲಾಗಿದೆ. ಇಷ್ಟೇ ಅಲ್ಲದೆ ಚಂದಾಲಿಂಗೇಶ್ವರನ ಕುರಿತ ಜನಪದ ಸಾಹಿತ್ಯದಲ್ಲಿ ಹಾಡುಗಳು, ಐತಿಹ್ಯಗಳು, ಹಾಗೂ ಶಿಷ್ಟ ಸಾಹಿತ್ಯದಲ್ಲಿ ಹಾಡುಗಳು, ಕಥೆಗಳು, ಇರುವುದನ್ನು ತಿಳಿಯಲಾಗಿದೆ. ಪ್ರಸ್ತುತ ದಿನಗಳಲ್ಲಿ ಆ ಸುಕ್ಷೇತ್ರವು ಆಧುನೀಕರಣಗೊಂಡಿರುವುದರ ಬಗ್ಗೆ ಅಧ್ಯಯನ ಮಾಡಲಾಗಿದೆ.

೧.೫. ಸಂಶೋಧನಾ ವಿಧಾನ : (Research Methodology)

ಪ್ರಸ್ತುತ ಮಹಾಪ್ರಬಂಧವು 'ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ' ಎಂಬ ಶೀರ್ಷಿಕೆ ಅಡಿಯಲ್ಲಿ ಜಾನಪದದ ಸಂಶೋಧನೆಯ ಭಾಗವಾಗಿದೆ. ಬಹುತೇಕ ಎಲ್ಲ ಜಾನಪದ ತಜ್ಞರೂ ಒಪ್ಪಿರುವ Folklore research is not a digital; its on experimental and endless, ಎಂಬ ಅಭಿಪ್ರಾಯದಂತೆ ಅಧ್ಯಯನಕ್ಕಾಗಿ ಪ್ರಾಯೋಗಿಕ ಜಾನಪದೀಯ ಅಂಶಗಳನ್ನು ಅಳವಡಿಸಿಕೊಂಡಿದೆ. ಈ ಅಧ್ಯಯನದಲ್ಲಿ ಚಂದಾಲಿಂಗೇಶ್ವರನ ಮೂಲ ಕ್ಷೇತ್ರ ಪರಿಚಯ, ಭಕ್ತಿ ಪರಂಪರೆ, ಆಚರಣೆಗಳು, ನಂಬಿಕೆ, ಮತ್ತು ವಿಧಿ-ನಿಷೇಧಗಳು, ಚಂದಾಲಿಂಗೇಶ್ವರನ ಕುರಿತು ಸಾಹಿತ್ಯ, ಮುಂತಾದ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಲು ಕೆಲವು ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಭೌಗೋಳಿಕ ಸಿದ್ಧಾಂತದ ಅಡಿಯಲ್ಲಿ ಬಹುಶಿಸ್ತೀಯ ಅಧ್ಯಯನದ ಮೂಲಕ ಈ ಸಂಶೋಧನೆಯನ್ನು ಕೈಗೊಂಡಿದ್ದೇನೆ.

೧.೫.೧. ಮಾಹಿತಿ ಸಂಗ್ರಹ ವಿಧಾನಗಳು ಮತ್ತು ಬಳಸಿದ ಸಲಕರಣೆಗಳು : (Data collection Methods and Equipment used)

'ಮಾಹಿತಿ ಸಂಗ್ರಹ ಮೊದಲ ಮೆಟ್ಟಿಲು. ವಿಶ್ಲೇಷಣೆ ಕೊನೆಯ ಮೆಟ್ಟಿಲು' ಎಂಬುದಕ್ಕೆ ಇಂಬು ನೀಡಿ ಮಾಹಿತಿಗಳ ಸಂಗ್ರಹಕ್ಕಾಗಿ ಕ್ಷೇತ್ರಕಾರ್ಯದಲ್ಲಿ ಇರುವ ಬದ್ಧ ಪದ್ಧತಿ ಹಾಗೂ ಮುಕ್ತ ಪದ್ಧತಿಗಳನ್ನು ಬಳಸುವ ಮೂಲಕ ಅಧ್ಯಯನ ಮಾಡಲಾಗಿದೆ. ಬದ್ಧ ಪದ್ಧತಿಯಲ್ಲಿ ಕ್ಷೇತ್ರ ಕಾರ್ಯ ಕೈಗೊಂಡು ಹಲವು ವಿಧಾನಗಳನ್ನು ಅನುಸರಿಸಿ, ಸಂಶೋಧನೆಗೆ ಒಳಪಡಿಸುವ ಸಂಗತಿ, ವ್ಯಕ್ತಿ, ಕುಟುಂಬ, ಹಾಗೂ ಸಮುದಾಯವನ್ನು ನೇರವಾಗಿ ಭೇಟಿಯಾಗಿ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಯಿತು.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಡೆದುಕೊಂಡ ಮಾಹಿತಿಯು ಮಹಾಪ್ರಬಂಧವನ್ನು ರಚಿಸುವಾಗ ಕೊರತೆಯೆನಿಸಿದಾಗ ಮೊಬೈಲ್ ಮೂಲಕ ವಕ್ತೃಗಳನ್ನು ಸಂಪರ್ಕಿಸಿ ಸಂದರ್ಶಿಸುವ ಮೂಲಕ ಇನ್ನಷ್ಟು ಮಾಹಿತಿಯನ್ನು ಪಡೆದಿದ್ದೇನೆ. ನಾನು ಅನೇಕ ಸಲ ಕ್ಷೇತ್ರಕಾರ್ಯ ಕೈಗೊಂಡಾಗ ಇರುತ್ತೇವೆಂದು ಸಮಯ ಕೊಟ್ಟ ವಕ್ತೃಗಳು ಸಿಗದಿದ್ದಾಗ ಅನಿವಾರ್ಯವಾಗಿ ದೂರವಾಣಿಯ ಮೂಲಕ ಸಂದರ್ಶನ ಮಾಡಬೇಕಾಯಿತು. ಇನ್ನೂ ಕೆಲವು ಭಾವಚಿತ್ರಗಳನ್ನು ಇ-ಅಂಚೆ, (ಇ-mail) ಮೂಲಕ ತರಿಸಿಕೊಳ್ಳಬೇಕಾಯಿತು. ಈ ಹಿನ್ನೆಲೆಯಲ್ಲಿ ಮುಕ್ತ ಪದ್ಧತಿಯನ್ನು ಅನುಸರಿಸಿ ಮಾಹಿತಿ ಸಂಗ್ರಹಿಸಿದ್ದನ್ನು ಉಲ್ಲೇಖಿಸಲಾಗಿದೆ.

೧.೫.೨. ಪ್ರಾಥಮಿಕ ಮಾಹಿತಿ ಸಂಗ್ರಹ ವಿಧಾನಗಳು : (Primary data collection Methods)

ಇದರಲ್ಲಿ ಮುಖ್ಯವಾಗಿ ಸಂದರ್ಶನ ವಿಧಾನ, ಅವಲೋಕನ ವಿಧಾನ, ಹಾಗೂ ಪ್ರಶ್ನಾವಳಿ ಎಂಬ ಮೂರು ವಿಧಾನಗಳಿವೆ.

೧.೫.೩. ಸಂದರ್ಶನ ವಿಧಾನ : (Interview Method)

ಚಂದಾಲಿಂಗೇಶ್ವರನನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವಾಗ ಅಲ್ಲಿನ ಕ್ಷೇತ್ರ ಪರಿಚಯ ಹಾಗೂ ಭಕ್ತ ಪರಂಪರೆ, ಆಚರಣೆಗಳು, ನಂಬಿಕೆ, ವಿಧಿ-ನಿಷೇಧಗಳು, ಆತನ ಕುರಿತು ಸಾಹಿತ್ಯ, ಮಾಹಿತಿಯನ್ನು ಸಂಗ್ರಹ ಮಾಡಲು ನೇರವಾಗಿ ವಕ್ತೃಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸುವ ಬದ್ಧ ಪದ್ಧತಿಯನ್ನು ಅನುಸರಿಸಿದ್ದೇನೆ.

ಚಂದಾಲಿಂಗೇಶ್ವರನ ಕ್ಷೇತ್ರ ಪರಿಚಯದ ಬಗ್ಗೆ ಅಧ್ಯಯನ ಮಾಡಲು ದೇವಸ್ಥಾನದಲ್ಲಿರುವ ಐದು ಜನ ಅರ್ಚಕರನ್ನು ಸಂದರ್ಶಿಸಲಾಯಿತು. ಸ್ಥಾನಿಕರ ಬಗ್ಗೆ ಅಧ್ಯಯನ ಮಾಡಲು ಒಬ್ಬರು ಮಳ್ಳಯ್ಯ, ಇಬ್ಬರು ವಗ್ಗಪ್ಪರನ್ನು, ಐದು ಜನ ಕಂಚಾವೀರರನ್ನು, ಹನ್ನೆರಡು ಜನ ಕುದುರೆಕಾರರನ್ನು, ಇಬ್ಬರು ಪಂಜು ಹಿಡಿಯುವವರನ್ನು, ಐದು ಜನ ಜೀರರನ್ನು, ಐದು ಜನ ಭಂಡಾರಗೊರವರನ್ನು, ಮೂರು ಜನ ಚೌರಿ ಗೊರವಯರನ್ನು, ಹತ್ತು ಜನ ಡೊಳ್ಳಿನವರನ್ನು ಸಂದರ್ಶಿಸಲಾಯಿತು. ಆಚರಣೆಗಳ ಕುರಿತು ಬೀಳಗಿಯ ಹತ್ತು ವಕ್ತೃಗಳನ್ನು, ಚಂದ್ರಗಿರಿಯ ಹದಿನೈದು, ಹನುಮಸಾಗರದ ಹತ್ತು, ಮನ್ನೇರಾಳದ ಎಂಟು ವಕ್ತೃಗಳನ್ನು ಸಂದರ್ಶಿಸಲಾಯಿತು. ನಂಬಿಕೆ ಮತ್ತು ವಿಧಿ-ನಿಷೇಧ ಅಧ್ಯಯನಕ್ಕಾಗಿ ಚಂದ್ರಗಿರಿಯ ಇಪ್ಪತ್ತು ವಕ್ತೃಗಳು, ಮಾನವಿ ಇಟಗಿಯ ಹತ್ತು, ಗಂಗಾವತಿಯ ಎಂಟು, ಬೀಳಗಿಯ ಹನ್ನೊಂದು ಹಾಗೂ ಮನ್ನೇರಾಳದ ಒಂಬತ್ತು ವಕ್ತೃಗಳನ್ನು ಸಂದರ್ಶಿಸಲಾಯಿತು. ಸಾಹಿತ್ಯದ ಅಧ್ಯಯನಕ್ಕಾಗಿ ಮನ್ನೇರಾಳ ಐದು, ಬೀಳಗಿಯ ಎಂಟು ವಕ್ತೃ ಹನುಮಸಾಗರದ ಹತ್ತು ವಕ್ತೃಗಳನ್ನು ಸಂದರ್ಶಿಸಲಾಯಿತು.

ಒಟ್ಟಿನಲ್ಲಿ ಒಂದು ನೂರ ನಾಲ್ವತ್ತೈದು (೧೪೫) ವಕ್ತೃಗಳನ್ನು ಸಂದರ್ಶಿಸುವ ಮೂಲಕ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲಾಯಿತು. ವಕ್ತೃಗಳು ನಾನು ನಿರೀಕ್ಷಿಸಿದ್ದಕ್ಕಿಂತ ಭಿನ್ನವಾಗಿ ತಮ್ಮ ಅನುಭವಗಳನ್ನು ತೆರೆದಿಟ್ಟರಷ್ಟೇ ಅಲ್ಲ, ತಮ್ಮ ಧ್ವನಿಯನ್ನು ವಿಶಾಲ ಜಗತ್ತಿಗೆ ಕೇಳಿಸುವಂತೆ ಮಾಡಿದರು. ಹೀಗಾಗಿ ಅವರ ಬಗ್ಗೆ ಇರುವಂತಹ ಧಾರ್ಮಿಕ ನಂಬಿಕೆ, ಆಚರಣೆ, ಸಂಪ್ರದಾಯಗಳು, ಮೌಖಿಕ ಸಾಹಿತ್ಯ ಅವರಿಗೆ ಇರುವಂತ ಕ್ಷೇತ್ರದ ಪಾರಂಪರಿಕ ನಂಬಿಕೆಗಳು, ದೈವಗಳ ಸಂಬಂಧ, ಹಾಗೂ ಜನಪದಕ್ಕೆ ಸಂಬಂಧಿಸಿದ ಸಹಾನುಭೂತಿಯ ಜೊತೆಗೆ ಆಂತರಿಕ ದೃಷ್ಟಿಕೋನವನ್ನು ಸೂಕ್ಷ್ಮವಾಗಿ ಗುರುತಿಸಿದೆನು. ನನಗೆ ಈ ಮೊದಲೇ ತಿಳಿದಿರುವ ಮಾಹಿತಿಯನ್ನು ಅವರೊಂದಿಗೆ ವಿಶ್ಲೇಷಿಸಿದೆ. ಕೆಲವೊಮ್ಮೆ ವೈಯಕ್ತಿಕವಾಗಿಯೂ ಇನ್ನೂ ಕೆಲವೊಮ್ಮೆ ಸಾಮಾಜಿಕವಾಗಿ ಸಂದರ್ಶಿಸಲಾಯಿತು.

೧.೫.೪. ಅವಲೋಕನ ವಿಧಾನ : (Method of observation)

ಚಂದಾಲಿಂಗೇಶ್ವರನ ಸಾಂಸ್ಕೃತಿಕ ಸಂಕಥನದಲ್ಲಿ ಬರುವಂತಹ ಆಚರಣೆಗಳು, ಸಂಪ್ರದಾಯಗಳು, ಜಾತ್ರೆಯ ನಂಬಿಕೆ, ವಿಧಿ–ನಿಷೇಧ, ಸಾಹಿತ್ಯ, ಸ್ಥಾನಿಕರ ಸೇವೆ, ಬೌದ್ಧಿಕ ಮತ್ತು ಭೌತಿಕ ಜಗತ್ತಿನ ಜಾನಪದವಾಗಿರುವುದರಿಂದ ಇವುಗಳನ್ನು ಅಧ್ಯಯನ ಮಾಡಲು ಮಾಹಿತಿ ಸಂಗ್ರಹಣೆಗಾಗಿ ಅವಲೋಕನ ವಿಧಾನಕ್ಕೂ ಮೊರೆ ಹೋಗಬೇಕಾಯಿತು. ಸಂದರ್ಶಿಸಿದಾಗ ಕುಟುಂಬಗಳ ಸಾಮಾಜಿಕ ಜೀವನದ ಸ್ಥಿತಿಯನ್ನು ಅವಲೋಕಿಸಿದಾಗ ಅವರವರ ಧಾರ್ಮಿಕ ನಂಬಿಕೆ, ಆಚಾರ–ವಿಚಾರ, ದೈವಗಳ ಆರಾಧನೆ, ಸಂಪ್ರದಾಯಗಳನ್ನು, ನೋಡಿದಾಗ ಸಾಮಾಜಿಕ ಸ್ತರದಲ್ಲಿ ಶ್ರೀಮಂತರು, ಬಡವರು, ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ಪೂಜಾ ಪುನಸ್ಕಾರ ಮಾಡುವುದನ್ನು ಅವಲೋಕಿಸಲಾಯಿತು ಕೆಳಸ್ತರದಲ್ಲಿರುವವರು ರೋಗ–ರುಜಿನಗಳಿಂದ ನರಳುತ್ತಿದ್ದರೂ, ದೊಡ್ಡ ಆಸ್ಪತ್ರೆಗೆ ಹೋಗದೆ, ದೇವರ ಮೇಲೆ ಭಾರ ಹಾಕಿ ಭಕ್ತಿಯಿಂದ ಆರಾಧಿಸುತ್ತಾರೆ. ಆದರೆ ಶ್ರೀಮಂತರು ಕಾಯಿಲೆಗಳಿಂದ ನರಳುತ್ತಿದ್ದರೆ ದೇವರಿಗೆ ಮೊರೆ ಹೋಗುವುದಿಲ್ಲ. ಸುಸಜ್ಜಿತವಾದ ಆಸ್ಪತ್ರೆಗಳಿಗೆ ಹೋಗಿ ಕಾಯಿಲೆ ವಾಸಿಪಡಿಸಿಕೊಳ್ಳುವುದನ್ನು ತಿಳಿದುಕೊಳ್ಳಲಾಯಿತು. ಹೀಗೆ ಕೆಲವೊಂದು ಕುಟುಂಬಗಳಲ್ಲಿ ಆರಾಧನೆಯ ಭಕ್ತಿ ಪಾರಂಪರಿಕವಾಗಿ ಬಂದಿರುವಂತೆ ಕಂಡರೆ, ಇನ್ನು ಕೆಲವು ಕುಟುಂಬಗಳಲ್ಲಿ ಆಧುನಿಕತೆಗೆ ತಕ್ಕಂತೆ ಆಚರಣೆಗಳು, ಸಂಪ್ರದಾಯಗಳು ಮರೆಯಾಗುವಂತ ಸ್ಥಿತಿಯನ್ನು ಅವಲೋಕನೆ ಮಾಡಲಾಯಿತು. ಇಂತಹ ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನು ಅವಲೋಕಿಸಿ ಅವುಗಳನ್ನು ಆಯಾ ಅಧ್ಯಾಯದಲ್ಲಿ ವಿವರಿಸಲಾಗಿದೆ.

೧.೫.೫. ಪ್ರಶ್ನಾವಳಿ ವಿಧಾನ (Questionnaire Method)

ಪ್ರಶ್ನಾವಳಿಗಳು ಸಂಶೋಧನಾ ಲೋಕಕ್ಕೆ ಕೀಲಿಕೈ ಇದ್ದಂತೆ ಎಂಬುವುದರ ಮಹತ್ವವನ್ನು ತಿಳಿಯಲು ರುಡ್‌ಯಾರ್ಡ್‌ಕ್ಲಿಪ್ಲಿಂಗ್ ಈ ರೀತಿ ಹೇಳಿದ್ದಾರೆ, "ನಾನು ಅತಿ ನಮ್ರವಾಗಿ ಕಾರ್ಯಮಾಡುವ ಆರು ಜನ ಸೇವಕರನ್ನು ಹೊಂದಿದ್ದೇನೆ. ಅವರು ನನಗೆ ಎಲ್ಲವನ್ನೂ

ಕಲಿಸುವರು ಅವರ ಹೆಸರುಗಳು ಇಂತಿವೆ: ಏನು ಮತ್ತು ಏಕೆ, ಯಾವಾಗ ಮತ್ತು ಹೇಗೆ, ಎಲ್ಲಿ ಮತ್ತು ಯಾರು?" ಇಂತಹ ಪ್ರಶ್ನೆಗಳನ್ನು ಕೇಳುವುದರಿಂದ ಮಾಹಿತಿದಾರನಿಂದ ತುರ್ತಾಗಿ ಮಾಹಿತಿಯನ್ನು ಒದಗಿಸಿಕೊಳ್ಳಲು ಪ್ರಶ್ನಾವಳಿಯನ್ನು ಬಳಸಲಾಯಿತು. ಅದೇ ದೇವರನ್ನು ನಿಮ್ಮ ಮನೆದೇವರನ್ನಾಗಿ ಆಯ್ಕೆ ಮಾಡಿಕೊಳ್ಳಲು ಕಾರಣವೇನು? ದೇವರಿಗೆ ಬೇಡಿಕೊಳ್ಳುವ ಹರಕೆಗಳು ಯಾವುವು? ಆ ದೇವರ ಬಗ್ಗೆ ನಿಮ್ಮ ನಂಬಿಕೆ ಏನು? ಸರಪಳಿ ಪವಾಡ ಏಕೆ ಮಾಡುತ್ತಾರೆ? ಅದರ ಬಗ್ಗೆ ಇರುವ ನಂಬಿಕೆ ಏನು? ವಿಧಿ–ನಿಷೇಧಗಳು ಏಕೆ? ಚಂದಾಲಿಂಗನ ಜಾತ್ರೆ ಯಾವಾಗ ಮತ್ತು ಹೇಗೆ ಆಚರಿಸುತ್ತೀರಿ? ನುಡಿ ಹೇಳುವವರು ಯಾರು ಮತ್ತು ಎಲ್ಲಿ? ಗೊರವಪ್ಪನ ಕಾರ್ಯಗಳು ಏನು? ಅರ್ಚಕರ ಪೂಜಾ ವಿಧಾನ ಹೇಗೆ? ಗುಡೂರು ಹುಲ್ಲಪ್ಪನಿಗೂ ಚಂದಾಲಿಂಗಪ್ಪನ ಆರಾಧನೆಗೂ ವ್ಯತ್ಯಾಸ ಇದೆಯೇ? ಪಾರಂಪರಿಕವಾಗಿ ಬಂದಿರುವ ಆಚರಣೆ ಸಂಪ್ರದಾಯಗಳು ರೂಪಾಂತರ ಹೊಂದಿವೆಯಾ? ಪಾರಂಪರಿಕವಾಗಿ ಬಂದಿರುವ ನಂಬಿಕೆ, ವಿಧಿ–ನಿಷೇಧಗಳು ಹಾಗೂ ಆಚರಣೆಗಳು ಸಂಪ್ರದಾಯಗಳು, ಬೇಕೋ ಬೇಡವೋ? ಹಾಗಾದರೆ ಏಕೆ? ಪಾರಂಪರಿಕವಾದ ಆಚರಣೆ ಸಂಪ್ರದಾಯಗಳು ನಂಬಿಕೆಗಳನ್ನು ಬಿಡುವುದಕ್ಕೆ ಸಮಸ್ಯೆಗಳೇನು? ಎನ್ನುವಂತಹ ಪ್ರಶ್ನೆಗಳಿಗೆ ಉತ್ತರ ಪಡೆದಿದ್ದಲ್ಲದೇ, ಒಟ್ಟಾರೆ ವಕ್ತೃ ಅಭಿಪ್ರಾಯಗಳನ್ನು ಪಡೆಯಲಾಯಿತು. ಹೀಗೆ ಹದಿನೈದು ಅಂಶಗಳಿರುವ ಪ್ರಶ್ನಾವಳಿ ವಿಧಾನವನ್ನು ಅನುಸರಿಸಿದ್ದೇನೆ. ಇದರಿಂದ ಆಚರಣೆ, ಸಂಪ್ರದಾಯ, ಸಾಹಿತ್ಯ, ಭಕ್ತ ಪರಂಪರೆ, ವಿವಿಧ ಹಂತದಲ್ಲಿ ತೊಡಗಿರುವ ಎಲ್ಲರ, ಎಲ್ಲಾ ವಯೋಮಾನದವರ, ಸ್ತ್ರೀ–ಪುರುಷ ಸಂಪ್ರದಾಯವಾದಿಗಳ ಅಂತರಂಗವನ್ನೇ ಪ್ರವೇಶಿಸುವ ಮೂಲಕ ಅವರ ಮನಸ್ಸಿನಲ್ಲಿರುವ ಚಂದಾಲಿಂಗನ ಬಗ್ಗೆ ಭಕ್ತಿ ಭಾವನೆಯ ವೈಯಕ್ತಿಕ ಅಭಿಪ್ರಾಯಗಳನ್ನು ಪಡೆಯಲಾಯಿತು. ಅವಶ್ಯಕತೆ ಎನಿಸಿದಾಗ ಪ್ರಶ್ನಾವಳಿಯಲ್ಲಿ ಇರುವ ಅಂಶಗಳಿಗಿಂತಲೂ ಹೆಚ್ಚಿನ ಪ್ರಶ್ನೆಗಳನ್ನು ಕೇಳಲಾಯಿತು.

೧.೫.೬. ಆನುಷಂಗಿಕ ಮಾಹಿತಿ ಸಂಗ್ರಹ ವಿಧಾನಗಳು : (Accessory data collection Methods)

ಆನುಷಂಗಿಕ ಮಾಹಿತಿ ಸಂಗ್ರಹ ಸಾಂಸ್ಕೃತಿಕ ಸಂಶೋಧನೆಯಲ್ಲಿ ತುಂಬಾ ಮಹತ್ವದ ಹಂತವಾಗಿದೆ. ಸಂಶೋಧನೆಯ ಸಮಸ್ಯೆಯನ್ನು ಸಮಸ್ಯೀಕರಿಸುವ ಹಂತದಿಂದ ಹಿಡಿದು, ಮಹಾಪ್ರಬಂಧದಲ್ಲಿ ಸಮಾರೋಪದವರೆಗಿನ ಎಲ್ಲಾ ಹಂತಗಳಲ್ಲಿಯೂ ಸಂಶೋಧನೆಗೆ ಒಳಪಡುವ ಸಂಗತಿಗಳಿಗೆ ಸಂಬಂಧಿಸಿದ ಆನುಷಂಗಿಕ ಮಾಹಿತಿಯ ಪಾತ್ರವೂ ಮುಖ್ಯವಾಗಿದೆ. ಆನ್ಸುಂಗಿಕ ದಾಖಲೆಗಳ ಪಟ್ಟಿಯಲ್ಲಿ ಬರುವ ಮುಖ್ಯ ದಾಖಲೆಗಳು ಇಂತಿವೆ. ವಿಚಾರಸಂಕಿರಣದಲ್ಲಿ ಮಂಡಿತವಾದ ಸಂಶೋಧನ ಲೇಖನಗಳು, ಈಗಾಗಲೇ ಮಂಡಿತವಾದ ಸಂಶೋಧನಾ ಪ್ರಬಂಧಗಳು, ಅಚ್ಚಾದ ಸಂಶೋಧನಾ ಪ್ರಬಂಧಗಳು ಹಾಗೂ ಯಾವುದೋ ರೂಪದಲ್ಲಿ ದಾಖಲಾಗಿರುವ ಮೌಖಿಕ ಆಕರಗಳು ಇತ್ಯಾದಿಗಳನ್ನು ಪ್ರಮುಖ ಆನುಷಂಗಿಕ ಮಾಹಿತಿಗಳೆಂದು ಗುರುತಿಸಲಾಗಿದೆ.

ಈ ನಿಟ್ಟಿನಲ್ಲಿ ಸಂಪಾದಿತ ಕೃತಿಗಳನ್ನು, ನಿಘಂಟುಗಳನ್ನು ನಿಯತಕಾಲಿಕೆಗಳಲ್ಲಿ (ಪತ್ರಿಕೆ) ಪ್ರಕಟಿತ ಲೇಖನಗಳು, ಪುಸ್ತಕಗಳನ್ನು, ಹಾಗೂ ಅಂತರ್ಜಾಲದ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ.

* **ಬಳಸಿದ ಸಲಕರಣೆಗಳು : (Equipment used)**

ಸಲಕರಣೆಗಳು ನನ್ನ ಸಂಶೋಧನೆಯ ಕ್ಷೇತ್ರಕಾರ್ಯದಲ್ಲಿ ತೀರಾ ಅಗತ್ಯವೆನಿಸುತ್ತವೆ. ಅದರಲ್ಲೂ ಭೌತಿಕ ಜಗತ್ತಿನ ಜಾನಪದ ಅಧ್ಯಯನಕ್ಕೆ ಹಲವಾರು ಸಲಕರಣೆಗಳು ಬೇಕಾಗುತ್ತವೆ.

* **ಧ್ವನಿಮುದ್ರಿಕೆ : (Sound track)**

ಇದು ಸಂಶೋಧಕನಿಗೆ ಕಾರ್ಯಭಾರವನ್ನು ಕಡಿಮೆಗೊಳಿಸುತ್ತದೆ. ಅದರಲ್ಲಿ ವಕ್ತೃಗಳ ವಿವರಣೆ, ಅಭಿಪ್ರಾಯ, ಹಾಗೂ ಅನಿಸಿಕೆಗಳನ್ನು ಧ್ವನಿಮುದ್ರಿಸಿ ಕೊಂಡರೆ ಅಧ್ಯಯನಕ್ಕೆ ಸುಲಭವಾಗುತ್ತದೆ. ಅಲ್ಲದೇ ವಕ್ತೃಗಳ ಹೇಳಿಕೆಯನ್ನು ಅವರದೇ ಆಡುಮಾತಿನಲ್ಲಿ ದಾಖಲಿಸಲು ತುಂಬಾ ಸಹಕಾರಿ.

* **ವಿಡಿಯೋ ಕ್ಯಾಮೆರಾ : (Video Camera)**

ಇದರ ಸಹಾಯದಿಂದ ಮಳ್ಳಯ್ಯನು ನುಡಿ ಹೇಳುವುದನ್ನು, ವಗ್ಗಪ್ಪ ಸರಪಳಿ ಪವಾಡ ಮಾಡುವುದನ್ನು, ಕೊಂತ ಮಿಂಚುವುದನ್ನು, ಗಂಗಿಮಾಳಮ್ಮ ಮತ್ತು ಚಂದಾಲಿಂಗಪ್ಪನ ಮದುವೆ ಕಾರ್ಯಕ್ರಮವನ್ನು, ಹಾಗೂ ಜಾತ್ರೆಗೆ ಬಂದ ಭಕ್ತರು ದೋಣಿ ತುಂಬಿಸುವುದು, ತದನಂತರ ಗೊರವರ ಕುಣಿತ, ವೈಯಕ್ತಿಕ ಮಾಹಿತಿಯನ್ನು, ಹೇಳಿಕೆಯನ್ನು, ಚಿತ್ರೀಕರಿಸಲು ವಿಡಿಯೋ ಕ್ಯಾಮೆರಾ ಉಪಯೋಗಿಸಲಾಯಿತು. ಇದು ಆ ಸಂದರ್ಭವನ್ನು ಪುನಃ ನಮ್ಮ ಮುಂದೆ ತರುವುದರ ಜೊತೆಗೆ ಇನ್ನಷ್ಟು ನಿಖರತೆ ಹಾಗೂ ವಿಶ್ವಾಸವನ್ನು ಹುಟ್ಟಿಸಿತು. ಮಹಾಪ್ರಬಂಧವನ್ನು ರಚಿಸುವಾಗ ನಮ್ಮ ವಿಚಾರ ಲಹರಿಯನ್ನು ಬೇರೆ ದೃಷ್ಟಿಕೋನದಿಂದ ನೋಡುವ ಹಾಗೆ ಮಾಡಬಲ್ಲ ಇತ್ತೀಚಿನ ಬಹು ಬಳಕೆಯ ಸಲಕರಣೆಯಾಗಿದೆ.

* **ಮೊಬೈಲ್ ಫೋನ್ : (Mobile Phone)**

ನನ್ನ ಸಂಶೋಧನೆಗೆ ಪೂರಕ ಮಾಹಿತಿಯನ್ನು ಸುಲಭವಾಗಿ ಒದಗಿಸಿದೆ. ಅದು, All in one ಸಲಕರಣೆಯಾಗಿ ಬಳಕೆಯಾಯಿತು. ಫೋಟೋ, ಕ್ಯಾಮೆರಾ ಆಗಿಯೂ, ದೃಶ್ಯವನ್ನು ಚಿತ್ರೀಕರಿಸಲು ವಿಡಿಯೋ ಕ್ಯಾಮೆರಾ ಆಗಿಯೂ, ಧ್ವನಿ ಮುದ್ರಿಕೆಯಾಗಿಯೂ ಬಳಸಲ್ಪಟ್ಟಿತು. ಇವಿಷ್ಟೇ ಅಲ್ಲದೇ ವಕ್ತೃಗಳನ್ನು ಸಂಪರ್ಕಿಸಲು ಹಾಗೂ ಕೆಲವೊಮ್ಮೆ ಅಂತರ್ಜಾಲದ ಮೂಲಕ ಹೆಚ್ಚಿನ ಮಾಹಿತಿಯನ್ನು ಒದಗಿಸುವ ಅತ್ಯುತ್ತಮ ಸಲಕರಣೆಯಾಗಿ ಬಳಸಿಕೊಂಡಿದ್ದೇನೆ.

* **ಫೋಟೋ ಕ್ಯಾಮರಾ : (Photo Camer)**

ಸಂಶೋಧನಾ ಮಹಾಪ್ರಬಂಧವು ಪೂರ್ಣಗೊಳ್ಳಲು ಛಾಯಾಚಿತ್ರಗಳು ಅತ್ಯಾವಶ್ಯಕವಾಗಿವೆ. ವಿಷಯಕ್ಕೆ ಪೂರಕವಾಗಿ ಛಾಯಾಚಿತ್ರಗಳು ಬೇಕೆಬೇಕು ಎನ್ನುವಷ್ಟು ಪ್ರಮುಖ ಸ್ಥಾನವನ್ನು ಗಿಟ್ಟಿಸಿವೆ. ಅದು "A picture wroth thousand word" ಎಂಬ ಮಾತು ಇಲ್ಲಿ ಅಕ್ಷರಶಹ

ನಿಜವಾಗಿದೆ. ಕ್ಷೇತ್ರಕಾರ್ಯದ ಜೀವಂತಿಕೆಯನ್ನು ಹಿಡಿದಿಡುವಲ್ಲಿ ಫೋಟೋ ಕ್ಯಾಮೆರಾ ಆಪ್ತ ಸಹಾಯಕನಂತೆ ಪಾತ್ರವಹಿಸಿತು.

*** ಕಂಪ್ಯೂಟರ್/ಅಂತರ್ಜಾಲ/ಮುದ್ರಣ ಯಂತ್ರ : (Computer/Internet/Printing Machine)**

ಸಂಶೋಧನಾ ವಿಷಯಕ್ಕೆ ಪೂರಕವಾದ ಮಾಹಿತಿಯನ್ನು ಹುಡುಕಲು ಜ್ಞಾನದ ಆಗರ ಅಂತರ್ಜಾಲ ತುಂಬಾ ಅದ್ಭುತವಾಗಿದೆ. ಸಾರಲೇಖ, ವರದಿ, ಹಾಗೂ ಮಹಾಪ್ರಬಂಧವನ್ನು ರಚಿಸಲು, ಬೆರಳಚ್ಚು ಮಾಡಿ ಮುದ್ರಿಸಲು, ಕಂಪ್ಯೂಟರ್ ಹಾಗೂ ಮುದ್ರಣ ಯಂತ್ರವು ಸಹಕಾರಿಯಾಗಿದೆ. ಇತ್ತೀಚಿನ ಸಂಶೋಧನೆಯು ಕಂಪ್ಯೂಟರ್ ಅಂತರ್ಜಾಲಗಳ ನೆರವಿಲ್ಲದೆ ಮುಕ್ತಾಯವೇ ಆಗಲಾರದು ಎಂದರೂ ತಪ್ಪಾಗಲಾರದು.

೧.೬. ಅಧ್ಯಯನದ ಸ್ವರೂಪ : (The Nature of The Study)

'ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ' ಎಂಬ ಶೀರ್ಷಿಕೆಯಡಿ ರಚನೆಗೊಂಡಿರುವ ಈ ಮಹಾಪ್ರಬಂಧ ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಒಂದನೆಯ ಅಧ್ಯಾಯ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಮತ್ತು ಸ್ವರೂಪ ಪ್ರಸ್ತಾವನೆ ಅಧ್ಯಯನದ ಉದ್ದೇಶ ವ್ಯಾಪ್ತಿ ಹಾಗೂ ಸಂಶೋಧನಾ ವಿಧಾನ ಈ ವಿಧಾನದಲ್ಲಿ ಬಳಕೆ ಮಾಡಿಕೊಂಡಿರುವಂತ ಮಾಹಿತಿ ಸಂಗ್ರಹ ವಿಧಾನಗಳು, ಮತ್ತು ಬಳಸಿದ ಸಲಕರಣೆಗಳು, ಅಧ್ಯಯನದ ಸ್ವರೂಪ ಹಾಗೂ ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ತಿಳಿಸಲಾಗಿದೆ.

ಎರಡನೆಯ ಅಧ್ಯಾಯ ಚಂದಾಲಿಂಗೇಶ್ವರ ಕ್ಷೇತ್ರಪರಿಚಯ ಮುಖ್ಯ ಗುಡಿ, ನಂದಿಮಂಟಪ, ಗಂಗಿಮಾಳಮ್ಮನ ಗುಡಿ, ವಿರೂಪಾಕ್ಷೇಶ್ವರ ಗುಡಿ, ಬಿಸಿಲು ಬೀಳದ ಬಾವಿ, ಹೆಸರಿಲ್ಲದ ಮರ, ಮಾದರ ಚಂದಪ್ಪನ ಗುಡಿ, ಸುಖದಕಟ್ಟೆ ಬರದ ಕಟ್ಟೆಗಳು, ಚಂದಾಲಿಂಗಪ್ಪನ ಹೊಂಡ, ತುಗ್ಗಲಿ ಮರ, ನುಡಿ ಮಂಟಪ ಕೆಸರಿಲ್ಲದ ಕೋಟೆ, ಶಂಕರಲಿಂಗನ ಗುಡಿ, ವೀರಭದ್ರ ದೇವರ ಗುಡಿ, ಹೆಗ್ಗಡೆ ಪ್ರಧಾನಿ ಗುಡಿ, ಹುಲ್ಲೇಶ್ವರ ಗುಡಿ, ಪಂಚಪೀಠಗಳು, ಮುದ್ದಮ್ಮ ತಾಯಿಯ ಗುಡಿ, ಶ್ರೀ ದುರ್ಗಾದೇವಿ ಗುಡಿ, ಸಂಗಮೇಶ್ವರ ಗುಡಿ, ಭರಮದೇವರ ಗುಡಿ, ತುಪ್ಪದ ಮಾಳಮ್ಮನ ಗುಡಿ, ಶಿಬಾರಗಳು, ಸಮಗಾರ ಚಂದಪ್ಪನ ಗುಡಿ ಇವುಗಳನ್ನೆಲ್ಲ ಅಧ್ಯಯನಕ್ಕೊಳಪಡಿಸಲಾಗಿದೆ.

ಮೂರನೆಯ ಅಧ್ಯಾಯ ಚಂದಾಲಿಂಗೇಶ್ವರನ ಮೂಲ ಪೂರ್ವಜರ ಹಿನ್ನಲೆ, ಪೂರ್ವಜರ ಎರಡನೇ ತಲೆಮಾರು, ಮೂರನೇ ತಲೆಮಾರು, ಲಿಂಗಯ್ಯ ಚಂದಾಲಿಂಗನಾಗಿ ಪರಿವರ್ತನೆಯಾಗಿದ್ದು, ಚಂದಾಲಿಂಗನ ವೈವಾಹಿಕ ಜೀವನ, ಚಂದಾಲಿಂಗಪ್ಪ ಹುಲ್ಲಪ್ಪನನ್ನು ಸಾಕು ಪುತ್ರನನ್ನಾಗಿ ಪಡೆದುಕೊಂಡಿದ್ದು, ಹುಲ್ಲಪ್ಪನ ಬಾಲ್ಯದಿನಗಳು, ಹುಲ್ಲಪ್ಪ ಕಾಮಧೇನುವಿನ ಶಿರಚ್ಛೇದ ಮಾಡಿದ್ದು, ಚಂದಾಲಿಂಗಪ್ಪನು ಮೈಲಾರಕ್ಕೆ ಹೋಗಿದ್ದು, ಮೈಲಾರದ ಆಗಿನ ಭೌಗೋಳಿಕ ಸ್ವರೂಪ,

ಹುಲ್ಲಪ್ಪನಿಗೆ ಮಣಿಕಾಸುರ ಮಲ್ಲಾಸುರರಿಂದ ಆಶ್ರಯ, ಗಂಗೆ ಮಾಳವ್ವನ ತಪಸ್ಸು, ಅವತಾರದ ಪುರುಷನಾಗಿ ಚಂದಾಲಿಂಗೇಶ್ವರ, ಚಂದಾಲಿಂಗೇಶ್ವರ ಯುದ್ಧಕ್ಕೆ ಹೊರಟ ಸಂದರ್ಭ, ಚಂದಾಲಿಂಗ ಹಾಗೂ ಮಲ್ಲಾಸುರರ ಯುದ್ಧ, ಚಂದಾಲಿಂಗ ಹಾಗೂ ಮಣಿಕಾಸುರರ ಯುದ್ಧ, ಚಂದಾಲಿಂಗನಿಂದ ಮಣಿಕಾಸುರನಿಗೆ ಪ್ರದಾನ, ಮಲ್ಲಾಸುರನಿಗೆ ಶ್ರೀಹರಿಯಿಂದ ಹಿತೋಪದೇಶ, ಘೃತಮಾರಿ ಹಾಗೂ ಮಲ್ಲಾಸುರನ ಯುದ್ಧ, ಚಂದಾಲಿಂಗ ಹಾಗೂ ಮಲ್ಲಸುರರ ಪುನರ್‌ಯುದ್ಧ, ಚಂದಾಲಿಂಗನಿಂದ ಮಲ್ಲಸುರನಿಗೆ ವರ ಪ್ರದಾನ, ಚಂದಾಲಿಂಗನಿಂದ ಮಲ್ಲಾಸುರನ ಮಕ್ಕಳಿಗೆ ಶಾಪ, ಚಂದಾಲಿಂಗನು ಶಿವನ ಸ್ವರೂಪಿಯಾಗಿ ಮೈಲಾರದಲ್ಲಿ ನೆಲೆಸಿರುವುದು, ಚಂದಾಲಿಂಗನು ಶಿವನ ಸ್ವರೂಪಿಯಾಗಿ ಪ್ರತ್ಯಕ್ಷ, ಹುಲ್ಲಪ್ಪನು ಪ್ರಾಣರಕ್ಷಣೆಗೆ ಗುಡೂರಿಗೆ ಬಂದಿದ್ದು ಎಂಬ ಅಂಶಗಳನ್ನು ಇಟ್ಟುಕೊಂಡು ಸಂಶೋಧನೆ ಕೈಗೊಂಡಿದೆ.

ನಾಲ್ಕನೆಯ ಅಧ್ಯಾಯ ಆಚರಣೆಗಳು ಮತ್ತು ವಿಧಿ–ನಿಷೇಧಗಳು ಜೀವನಾವರ್ತನ ಆಚರಣೆಗಳಲ್ಲಿ ಹುಟ್ಟು, ನಾಮಕರಣ, ಮರಣ ವಾರ್ಷಿಕಾವರ್ತನ ಆಚರಣೆಗಳಲ್ಲಿ ದಿನಂಪ್ರತಿ, ವಾರದ ದಿನಗಳು, ಅಮಾವಾಸ್ಯೆ ಹುಣ್ಣಿಮೆ ದಿವಸ, ಹಬ್ಬ–ಹರಿದಿನಗಳು, ಜಾತ್ರೆ ಹಾಗೂ ಜಾತ್ರಾ ಆಚರಣೆಗಳಲ್ಲಿ ನಡೆಯುವಂತ ಕಳಸಾರೋಹಣ ಕಡಗದ ಆಗಮನ, ಖಂಡೇ ದೇವರ ಪೂಜೆ ಹಾಗೂ ಕ್ಷೇತ್ರಕ್ಕೆ ಆಗಮನ, ಕೊಂತ ದೇವರ ಆಗಮನ, ಕೊಂತ ದೇವರ ಗಂಗೆ ಗಂಗಾಸ್ನಾನ, ದೋಣಿ ತುಂಬುವುದು, ಚಂದಾಲಿಂಗ ಮತ್ತು ಗಂಗೆ ಮಾಳಮ್ಮನವರ ಮದುವೆ ಕಾರ್ಯಕ್ರಮ, ಲೆಕ್ಕಿ ಬರ್ಲಿನ ಸೇವೆ, ಭಂಡಾರದ ಪವಾಡ, ನುಡಿಹೇಳುವುದು, ಕೊಂತಮಿಂಚುವುದು, ಸರಪಳಿ ಪವಾಡ ಬನ್ನಿ ಮುಡಿಯುವುದು, ಹಾಗೂ ನಂಬಿಕೆ ಮತ್ತು ವಿಧಿ–ನಿಷೇಧಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯ ಚಂದಾಲಿಂಗೇಶ್ವರನ ಜಾತ್ರೆಯ ಸಿದ್ಧತೆ ಹಾಗೂ ವ್ಯಾಪಾರ–ವಹಿವಾಟು: ಪೂರ್ವ ಹಾಗೂ ಪ್ರಸ್ತುತ ದಿನಗಳಲ್ಲಿ ಜಾತ್ರೆಗೆ ಭಕ್ತರ ಸಿದ್ಧತೆ, ವೇಷಭೂಷಣಗಳು, ಜಾತ್ರೆಯಲ್ಲಿ ವರ್ತಕರಾದ ಸ್ಟೇಷನರಿ ಅಂಗಡಿಗಳು, ವಿಭೂತಿ–ಕುಂಕುಮ ಅಂಗಡಿಗಳು, ದಿನಸಿ ಅಂಗಡಿಗಳು, ಪಳಾರದ ಅಂಗಡಿಗಳು, ಫಲಪುಷ್ಪದ ಅಂಗಡಿಗಳು, ತೆಂಗಿನಕಾಯಿ ವರ್ತಕರು, ತಂಪುಪಾನೀಯ ವರ್ತಕರು, ಪಾನ್–ಬೀಡಾ ಪ್ರವರ್ತಕರು ಇವುಗಳೆಲ್ಲವನ್ನು ಸಂಶೋಧನೆಗೆ ಒಳಪಡಿಸಲಾಗಿದೆ.

ಆರನೆಯ ಅಧ್ಯಾಯ ಚಂದಾಲಿಂಗೇಶ್ವರ ಕುರಿತು ಸಾಹಿತ್ಯ ಜನಪದ ಸಾಹಿತ್ಯ, ಚಂದಾಲಿಂಗೇಶ್ವರನ ಹಾಡುಗಳು, ಐತಿಹ್ಯಗಳು, ಚಂದಾಲಿಂಗೇಶ್ವರನ ಶಿಷ್ಟಸಾಹಿತ್ಯ, ಕಥೆಗಳು, ಹಾಡುಗಳು, ಕ್ರೋಢೀಕರಿಸಿ ವಿಶ್ಲೇಷಣೆ ಮಾಡಲಾಗಿದೆ.

ಏಳನೆಯ ಅಧ್ಯಾಯ ಚಂದಾಲಿಂಗೇಶ್ವರ ಹಾಗೂ ಆಧುನಿಕ ಪರಿವರ್ತನೆ ಕ್ಷೇತ್ರದಲ್ಲಿ ಭೌತಿಕ ಬದಲಾವಣೆ, ಪ್ರಸಾದ ವ್ಯವಸ್ಥೆ, ಗುಡಿಯ ಕೆಲಸ ಕಾರ್ಯಗಳಲ್ಲಿ ಪರಿವರ್ತನೆಗಳು, ವಾದ್ಯಮೇಳ,

ಜಾತ್ರೆಯ ದಿನದ ಗುಡಿ ಅಲಂಕಾರ, ಭಕ್ತರ ಹರಕೆ ಬೇಡಿಕೆಗಳಲ್ಲಿ ಪರಿವರ್ತನೆ ಸಂಗೀತ ಚಿತ್ತರಿಸುವ ಪರಿಕರಗಳು, ವೇಷಭೂಷಣಗಳು, ಅಂಗಡಿಗಳು, ಲಾಟರಿ ಮತ್ತು ರಸಮಂಜರಿ ಕ್ರೀಡೆಗಳು, ಭಕ್ತರ ಪೂಜಾ ವಿಧಿ ವಿಧಾನಗಳಲ್ಲಿ ಪರಿವರ್ತನೆ ವಿಧಿ-ನಿಷೇಧಗಳಲ್ಲಿ ಪರಿವರ್ತನೆ, ಕ್ಷೇತ್ರದಲ್ಲಿ ನಡೆಯುವ ಜನಪದರ ಕಾರ್ಯಗಳು, ಪೂಜಾರಿಗಳಲ್ಲಿ ಬದಲಾವಣೆ, ಚಂದಾಲಿಂಗೇಶ್ವರನ ಸ್ಥಾನಿಕರಲ್ಲಿ ಪರಿವರ್ತನೆ, ಎಂಬ ಅಂಶಗಳನ್ನು ಸಂಶೋಧನೆಗೆ ಒಳಪಡಿಸಲಾಗಿದೆ.

ಎಂಟನೆಯ ಅಧ್ಯಾಯ ಉಪಸಂಹಾರ: ಉಪಸಂಹಾರ, ಅಧ್ಯಯನದ ಫಲಿತಗಳು, ಸಲಹೆಗಳು, ಅನುಬಂಧಗಳಲ್ಲಿ ವಕ್ತೃಗಳ ವಿವರ ಸಾಂಸ್ಕೃತಿಕ ಪದಕೋಶ ಛಾಯಾಚಿತ್ರಗಳು ಆಧಾರ ಗ್ರಂಥಗಳನ್ನು ಒಳಗೊಂಡಿದೆ.

೧.೭. ಇದುವರೆಗೆ ನಡೆದ ಅಧ್ಯಯನಗಳು : (Studies That Have Been Done so for)

ಇದುವರೆಗೆ ಚಂದಾಲಿಂಗೇಶ್ವರನ ಸಂಸ್ಕೃತಿಯ ಬಗ್ಗೆ ಅಧ್ಯಯನಗಳು ನಡೆದುದರ ಬಗ್ಗೆ ಗಮನಿಸಿದರೆ ಅದು ಒಂದು ರೀತಿಯ 'ಗುಡ್ಡವನ್ನು ಬಗೆದು ಇಲಿ ಹಿಡಿದಂತಾಗುತ್ತದೆ'. ಅಂದರೆ ತುಂಬಾ ವಿರಳವಾದಂತಹ ಮಾಹಿತಿಗಳು ಸಿಗುತ್ತವೆ. ಲಭ್ಯವಾಗಿರುವಂತ ಕೆಲವು ನನ್ನ ಸಂಶೋಧನೆಗೆ ಪೂರಕ ಮಾಹಿತಿಯನ್ನು ಒದಗಿಸಿದರೆ ಇನ್ನೂ ಕೆಲವು ಕೃತಿಗಳು ನೇರವಾಗಿ ಚಂದಾಲಿಂಗೇಶ್ವರನಿಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಿವೆ. ಅವುಗಳು ನೀಡುವ ಸಾರಾಂಶವನ್ನು ಇಲ್ಲಿ ಹಂಚಿಕೊಳ್ಳಲಾಗಿದೆ.

* **ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ :**

ಪ್ರೊಫೆಸರ್ ಮಂಜುನಾಥ ಬೇವಿನಕಟ್ಟಿ, ೨೦೦೯, ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಈ ಪದಕೋಶದಲ್ಲಿ ವಿಶಿಷ್ಟವಾಗಿರುವ ಹಾಗೂ ಬಹಳಷ್ಟು ಪರಿಸರದಲ್ಲಿ ಹರಡಿರುವ ದೈವಗಳನ್ನು, ಕೆಲವು ಆಚರಣೆ, ಪದ್ಧತಿ ಪದಗಳ ಅರ್ಥವನ್ನು ತಿಳಿಸಿದ್ದಾರೆ. ಅಂತಹುಗಳಾದ ಊರಾಡುವುದು, ಎಲಿ ಚಟ್ಟದ ಹರಕೆ, ಒಡವೆಗಳು, ಒಕ್ಕಲು, ಕಕ್ಕಡ ಸೇವೆ, ಅಥವಾ ಕಕ್ಕಡದಾರುತಿ, ಕೊಡಹೊರುವುದು, ಗೌರಮ್ಮನನ್ನು ಕರೆತರುವುದು, ಚವರಿ ಹೀಗೆ ಹಲವಾರು ಸಾಂಸ್ಕೃತಿಕ ಪದಗಳ ಅರ್ಥ ವಿವರಣೆ ನೀಡಿದ್ದಾರೆ. ಇದರಲ್ಲಿ ನನ್ನ ಸಂಶೋಧನ ವಿಷಯಕ್ಕೆ ಪೂರಕವಾದ ಸಾಂಸ್ಕೃತಿಕ ಪದಗಳನ್ನು ಬಳಸಿಕೊಳ್ಳಲಾಗಿದೆ.

* **ಮೈಲಾರಲಿಂಗ-ಖಂಡೋಬಾ :**

ನೇಗಿನಹಾಳ ಎಂ.ಬಿ. ೧೯೯೨, 'ಮೈಲಾರಲಿಂಗ ಖಂಡೋಬಾ', ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಈ ಕೃತಿಯಲ್ಲಿ ಗಂಗೆಮಾಳಮ್ಮನ ದೇವಾಲಯ, ಸಿಂಹಾಸನ, ಕಂಚಾವೀರರಸ್ಥಾನ, ತುಪ್ಪದ ಮಾಳಮ್ಮನ ಮೂರ್ತಿ, ಹೆಗ್ಗಪ್ಪನ ಗುಡಿ, ಶಿಬಾರ, ಗಂಗೆಮಾಳಮ್ಮನ ವಿಗ್ರಹ, ಗುಡೂರ ಹುಲ್ಲಪ್ಪನಿಗೆ ಸಂಬಂಧಿಸಿದಂತೆ, ಮುಖ್ಯ ಗುಡಿ, ಜಾತ್ರೆ, ಹಬ್ಬಗಳು, ಜೆಜೂರಿ-ಖಂಡೋಬನಿಗೆ ಸಂಬಂಧಿಸಿದಂತೆ ದ್ವಾರಮಂಟಪಗಳು, ಉತ್ಸವ, ಆಚರಣೆಗಳು, ಖಂಡೇಪೂಜೆ, ಗೊರವರ-ಗೊರವಿಯರು, ಕಾರಣಿಕದಗೊರವಪ್ಪ, ಬಂಢಾರಭಕ್ಸೆ, ಸರಪಳಿ, ಮುಳ್ಳಾವಿಗೆ, ನೈವೇದ್ಯ, ದೋಣಿ-ತುಂಬುವುದು, ಹೆಗ್ಗಪ್ಪನನ್ನು ಕಳಿಸುವುದು, ಕಂಕಣ ಬಿಚ್ಚುವುದು, ಗಂಗಿ ಮಾಳಮ್ಮನ ಲಗ್ನ, ಮೂರ್ತಿಗಳು, ತ್ರಿಶೂಲ, ಡಮರು, ದೋಣಿ, ಮತ್ತು ಇತರ ಪಾತ್ರೆಗಳು, ಚಾಂಗಬಲೊ, ಇವುಗಳ ಎಲ್ಲ ಮಾಹಿತಿ ಕೊಟ್ಟಿರುವುದನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಲಾಗಿದೆ.

* **ಹೈದರಾಬಾದ ಕರ್ನಾಟಕದ ಜಾತ್ರೆಗಳ ಒಂದು ಸಾಂಸ್ಕೃತಿಕ ಅಧ್ಯಯನ :**

ಜಗನ್ನಾಥ್ ಹೆಬ್ಬಾಳೆ, ೨೦೦೮, 'ಹೈದರಾಬಾದ್ ಕರ್ನಾಟಕದ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜಾತ್ರೆಗಳ ಉಗಮ-ವಿಕಾಸ, ಜಾತ್ರೆಗಳ ವರ್ಗೀಕರಣ, ಹೈದರಾಬಾದ್ ಕರ್ನಾಟಕದ ಜಾತ್ರೆಗಳು, ಲಕ್ಷಣಗಳು, ಪ್ರಮುಖ್ಯತೆ, ಪ್ರಯೋಜನೆ, ಐತಿಹಾಸಿಕ ಜಾತ್ರೆಗಳು, ಪೌರಾಣಿಕ ಜಾತ್ರೆಗಳು, ಕನ್ನಡ ಸಾಹಿತ್ಯ ಜಾತ್ರೆ, ಹೈದರಾಬಾದ್ ಕರ್ನಾಟಕದ ಪ್ರದರ್ಶನ ಕಲೆ, ಜಾತ್ರೆಗಳು ನನ್ನ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾಗಿವೆ.

* **ಸಾಂಸ್ಕೃತಿಕ ಸಂಕಥನ :**

ವೀರೇಶ್ ಬಡಿಗೇರ್, ೨೦೦೯, ಸಾಂಸ್ಕೃತಿಕ ಸಂಕಥನ, ಮಯ ಪ್ರಕಾಶನ, ಕಮಲಾಪುರ.

ಕರ್ನಾಟಕ ಸಂಸ್ಕೃತಿಯೊಳಗೆ ಮೈಲಾರಲಿಂಗ ಪರಂಪರೆಯ ಅನನ್ಯತೆ ಮತ್ತು ಅನುಸಂಧಾನದ ನೆಲೆಗಳು, ಸಾಹಿತ್ಯದಲ್ಲಿ ಮೈಲಾರ, ಬಬಲಾದಿ ಮತ್ತು ಸಿದ್ಧಾಟಗಿ ಸಂಸ್ಕೃತಿ, ಜಾತ್ರೆ ಮತ್ತು ಜೀವನ ಪರಂಪರೆ, ಜನಪದ ವೈದ್ಯ ಮತ್ತು ನಂಬಿಕೆ, ದೇವರಿಗೆ ಹರಕೆ ತಪ್ಪಿದ ಕಾರಣ, ದೈತ್ಯ ಪ್ರವೃತ್ತಿಯ ಅತಿಮಾನುಷ ಶಕ್ತಿಗಳ ಉಪಟಳ, ಮಾಟ-ಮಂತ್ರ ಜನಪದ ವೈದ್ಯ ಪ್ರಾಚೀನತೆ ಪ್ರಾಣಿಮೂಲ, ಸಸ್ಯಮೂಲ, ಮನುಷ್ಯ ಮೂಲ, ನಂಬಿಕೆ ಮೂಲ, ಪರಂಪರೆ ವೈದ್ಯ, ಅಥವಾ ಪ್ರಸಿದ್ಧಿ ವೈದ್ಯನ ಮನೋವೈದ್ಯ, ಉತ್ತರ ಕರ್ನಾಟಕದ ಜನಪದ ಗೀತೆ, ಸಂಪ್ರದಾಯಗಳು, ಚೌಡಿಕೆ ಸಂಪ್ರದಾಯ, ಡೊಳ್ಳಿನ ಸಂಪ್ರದಾಯ, ಭಜನೆ ಸಂಪ್ರದಾಯ, ಮೈಲಾರಲಿಂಗನ ಸಂಪ್ರದಾಯ, ಕರಪಾಲದ ಸಂಪ್ರದಾಯ, ಜನಪದ ಕಥೆ ಸಂಕಥನ, ಜನಪದ ಕಥೆಗಳ ತಾತ್ವಿಕತೆ, ಜನಪದ ಸಂಗ್ರಹಗಳು, ಜನಪದ ದೈವಗಳಿಗೆ ಸಂಬಂಧಿಸಿದ ದೈನಂದಿನ ಮತ್ತು ಕಾಲಾನುಸಾರಿ ಆರಾಧನೆ, ಬುಡಕಟ್ಟು, ಹಾಗೂ ಇತರೆ ಸಮಾಜಗಳಲ್ಲಿ ದೈನಂದಿನ ಆರಾಧನೆಗಳು, ಕಾಲಬದ್ಧ ಆಚರಣೆಗಳು, ಸುಗ್ಗಿಯ ದೇವತೆಗಳು, ಸಾಂಸ್ಕೃತಿಕವಾಗಿ ಸಮಗ್ರವಾದ ವಿವರಣೆ ಕೊಟ್ಟಿದ್ದಾರೆ.

* **ಜಾನಪದ ಲೋಕ :**

ಚನ್ನಣ್ಣ ವಾಲೀಕರ, ೧೯೯೩, 'ಜಾನಪದ ಲೋಕ' ದಲಿತಬಂಡಾಯ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ.

ಜನಪದ ಸಾಹಿತ್ಯ-ಶಿಷ್ಟ ಸಾಹಿತ್ಯ ಕೊಳು ಕೊಡುಗೆಗಳ ಅಧ್ಯಯನ, ಜನಪದದಿಂದ ಶಿಷ್ಟಕ್ಕೆ ಕಲೆ-ಕಾವ್ಯಗಳು, ಜಾತ್ರೆಗಳ ಪೌರಾಣಿಕ ಹಿನ್ನೆಲೆ, ಜಾತ್ರೆಗಳು ಪುರಾಣಗಳಿಗಿರುವ ಸಂಬಂಧ, ಜಾತ್ರೆಗಳ ಹುಟ್ಟಿಗೆ ಇರುವ ಪೌರಾಣಿಕ ಸಂಗತಿಗಳು, ಜಾತ್ರೆಗಳ ಧಾರ್ಮಿಕ ಸ್ವರೂಪ, ಜಾತ್ರೆಗಳಿಂದ ಪುರಾಣಗಳಿಗೊದಗುವ ಹೊಸ ಆಯಾಮ, ಜಾತ್ರೆಗಳಿಂದ ಜನರ ದೈವಭಕ್ತಿಯ ಮೇಲೆ ಬೀರುವ ಪರಿಣಾಮ, ಜನಪದವೃತ್ತಿಗಾಯಕರು, ಜನಪದ ಕಲೆಗಳ ಪ್ರಸ್ತುತತೆ, ಜನಾಂಗೀಯ ಅಧ್ಯಯನ, ಪ್ರಕೃತಿ ರಹಸ್ಯ ಅರಿಯದಕ್ಕೆ ಜನಪದರ ಅಮಾನವೀಯ ಪದ್ಧತಿಗಳನ್ನು ವಿಶ್ಲೇಷಣೆ ಮಾಡಿದ್ದಾರೆ.

ಅಧ್ಯಾಯ : ೨

ಚಂದಾಲಿಂಗೇಶ್ವರ ಕ್ಷೇತ್ರ ಪರಿಚಯ

(Introduction, to Chandalingeshwara field)

೨.೧. ಮುಖ್ಯ ಗುಡಿ

೨.೨. ನಂದಿಮಂಟಪ

೨.೩. ಗಂಗಿಮಾಳಮ್ಮನ ಗುಡಿ

೨.೪. ಹಂಪಿ ವಿರೂಪಾಕ್ಷೇಶ್ವರ ಗುಡಿ

೨.೫. ಬಿಸಿಲು ಬೀಳದ ಬಾವಿ

೨.೬. ಹೆಸರಿಲ್ಲದ ಮರ

೨.೭. ಮಾದರ ಚಂದಪ್ಪನ ಗುಡಿ

೨.೮. ಕೊಂತಗಳ ಕಟ್ಟೆ

೨.೯. ಚಂದಾಲಿಂಗಪ್ಪನ ಹೊಂಡ

೨.೧೦. ತುಗ್ಗಲಿ ಮರ

೨.೧೧. ನುಡಿ ಮಂಟಪ

೨.೧೨. ಕೆಸರಿಲ್ಲದ ಕೋಟೆ

೨.೧೩. ಶಂಕರಲಿಂಗನ ಗುಡಿ

೨.೧೪. ವೀರಭದ್ರದೇವರ ಗುಡಿ

೨.೧೫. ಹೆಗ್ಗಡೆ ಪ್ರಧಾನಿ ಗುಡಿ

೨.೧೬. ಹುಲ್ಲೇಶ್ವರ ಗುಡಿ

೨.೧೭. ಪಂಚ ಪೀಠಗಳು

೨.೧೭.೧. ಕಾಶಿವಿಶ್ವನಾಥ

೨.೧೭.೨. ಶ್ರೀಶೈಲ ಮಲ್ಲಿಕಾರ್ಜುನ

೨.೧೭.೩. ಶ್ರೀ ಉಜ್ಜೈಯಿನಿಲಿಂಗ

ಅಧ್ಯಾಯ : ಎರಡು

ಚಂದಾಲಿಂಗೇಶ್ವರ ಕ್ಷೇತ್ರ ಪರಿಚಯ

(Introduction, to Chandalingeshwara field)

ಪ್ರಸ್ತಾವನೆ : (Introduction)

ಕ್ಷೇತ್ರದಲ್ಲಿ ಯಾವ ಯಾವ ಸ್ಥಳದಲ್ಲಿ ಪ್ರಮುಖವಾದ ಗುಡಿಗಳು, ಶಾಸನಗಳು, ಐತಿಹ್ಯಗಳು, ಅವಶೇಷಗಳು, ಹಾಗೂ ನೆಲಮೂಲ, ಜಲಮೂಲ, ಸಸ್ಯಮೂಲಗಳಿಗೆ ಸಂಬಂಧಿಸಿದ ವಿಶೇಷತೆಯನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಭಕ್ತ ಜನರಿಂದ ಪಡೆದ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಲಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿದ್ದ ವಾಸ್ತು ಶಿಲ್ಪಕಲೆಯ ಚಿತ್ರಣವನ್ನು ತಿಳಿಯಬಹುದು. ಹನ್ನೆರಡನೆ ಶತಮಾನದಲ್ಲಿ ಧಾರ್ಮಿಕ ಆಚರಣೆಯ ಪ್ರಕ್ರಿಯೆಯಲ್ಲಿ ಗುಡಿ ಗುಂಡಾರದ ವ್ಯವಸ್ಥೆಯನ್ನು ಹೇಗೆ ರಚಿಸಿಕೊಂಡಿದ್ದರು ಎಂಬುದನ್ನು ಈ ಅಧ್ಯಯನದಲ್ಲಿ ನಿರೂಪಿಸಲಾಗಿದೆ. ಈ ಪೂರ್ವದ ಕಾಲದಲ್ಲಿ ಧಾರ್ಮಿಕ ಆಚರಣೆಗಾಗಿ ಅವರು ಬಳಸಿಕೊಂಡಿರುವ ಆಕರಗಳಾಗಿ, ಬಿಸಿಲು ಬೀಳದ ಬಾವಿ, ಶಿಬಾರಗಳು, ತುಗ್ಗಲಿಮರ, ನಂದಿಮಂಟಪ, ಸುಖದಕಟ್ಟೆ-ಬರದಕಟ್ಟೆಗಳು, ಹೆಸರಿಲ್ಲದ ಮರ, ನುಡಿಮಂಟಪ, ಕೆಸರಿಲ್ಲದಕೋಟೆ ಎಂಬವುಗಳನ್ನು ಅವರು ಹೇಗೆ ಆಚರಣೆಯಲ್ಲಿ ಬಳಸಿಕೊಳ್ಳುತ್ತಿದ್ದರು ಎಂಬುದನ್ನು ಸಂಶೋಧನಾತ್ಮಕವಾಗಿ ನೋಡಲಾಗಿದೆ. ಈ ಕಾಲಾವಧಿಯಲ್ಲಿ ಜನಪದರು ದೇವತೆಗಳಿಗೆ ಯಾವ ರೀತಿಯ ಸ್ಥಾನವನ್ನು ಕಲ್ಪಿಸಿದ್ದರು ಎಂಬುದನ್ನು ಅಲ್ಲಿರುವ ಗುಡಿಗಳ ನೋಟದಿಂದ ತಿಳಿಯಬಹುದು. ಈ ಕ್ಷೇತ್ರದಲ್ಲಿರುವ ದೇವರುಗಳಿಗೆ ಮತ್ತು ಚಂದಾಲಿಂಗೇಶ್ವರನಿಗೆ ಸಹಸಂಬಂಧವಾಗಿರುವ ಗಂಗಿಮಾಳಮ್ಮ, ಹೆಗ್ಗಡೆಪ್ರಧಾನಿ, ಹುಲ್ಲಪ್ಪ, ವೀರಭದ್ರದೇವರು, ಮುದ್ದಮ್ಮತಾಯಿ, ತುಪ್ಪದಮಾಳಮ್ಮ, ಕಾಲಕಾಲೇಶ್ವರ ಇವರೆಲ್ಲರಿಗೂ ಚಂದಾಲಿಂಗೇಶ್ವರನು ಹೊಂದಿರುವ ಸಹಸಂಬಂಧವನ್ನು ವಿಶ್ಲೇಷಣಾತ್ಮಕವಾಗಿ ತಿಳಿಯಪಡಿಸಲಾಗಿದೆ.

ಈ ಕ್ಷೇತ್ರದಲ್ಲಿ ಸಣ್ಣಮಟ್ಟ ಗುಡಿಗಳ ಸಂಖ್ಯೆ ಹೆಚ್ಚಾಗಿ ಕಂಡುಬರುವುದರಿಂದ ಅವುಗಳ ವಾಸ್ತು ಶಿಲ್ಪ ಕಲೆಯ ಶೈಲಿ ಹಾಗೂ ಅವುಗಳು ಬಹಳ ದಿನಗಳವರೆಗೆ ಬಾಳಿಕೆಗೆ ಬರಲು ಅವರು ಬಳಸಿರುವ ತಂತ್ರಗಾರಿಕೆಯನ್ನು ತಿಳಿಯಬಹುದು. ಪ್ರತಿಯೊಂದು ಗುಡಿಗಳಿಗೆ ಬಳಸಿಕೊಂಡ

ಶಿಲೆಗಳ ಪ್ರಕಾರಗಳು ಅವುಗಳ ರಚನಾಕ್ರಮ, ಇಲ್ಲಿ ಇರುವಂತ ಕಟ್ಟಡಗಳನ್ನು ಯಾವ ಯಾವ ಕೆಲಸಕ್ಕೆ ಬಳಸುತ್ತಿದ್ದಾರೆ ಎಂಬುದನ್ನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿಯಲಾಗಿದೆ. ಕೆಸರಿಲ್ಲದ ಕೋಟೆಯ ರಚನೆಯ ವಿಶೇಷತೆಯನ್ನು, ಬಿಸಿಲು ಬೀಳದ ಬಾವಿಯ ನೀರಿನ ಗುಣಧರ್ಮ, ಪಂಚಪೀಠಗಳ ರಚನಾಕ್ರಮ ಹಾಗೂ ವಿಗ್ರಹಗಳ ಪ್ರತಿಷ್ಠಾಪನೆಯ ಉದ್ದೇಶಗಳನ್ನು ತಿಳಿಯಲಾಗಿದೆ. ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಕಂಡುಬರುವ ಚಂದಾಲಿಂಗೇಶ್ವರನ ಹೊಂಡ, ಸುಖದಕಟ್ಟೆ ಹಾಗೂ ಬರದಕಟ್ಟೆ, ಹುಲ್ಲೇಶ್ವರನ ಗುಡಿ, ನುಡಿಮಂಟಪ, ಹೆಸರಿಲ್ಲದ ಮರ, ಹೆಗ್ಗಡೆ ಪ್ರಧಾನಿ, ಮುದ್ದಮ್ಮತಾಯಿ ಇವುಗಳಿಗೆ ಇರುವ ಪೂರ್ವಕಥಾಧಾರಿತ ವಿಷಯವನ್ನು ಕ್ರೋಢೀಕರಿಸಿ ವಿಶ್ಲೇಷಣೆ ಮಾಡಿದೆ. ಒಟ್ಟಾರೆ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಂದಾಲಿಂಗೇಶ್ವರನಿಗೆ ಪೂರಕವಾದಂತ ಆಕರಗಳನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೨.೧ ಮುಖ್ಯ ಗುಡಿ : (The main Cabian)

ಚಂದಾಲಿಂಗೇಶ್ವರ ಗುಡಿಯು ದಕ್ಷಿಣಕ್ಕೆ ಅಭಿಮುಖವಾಗಿ ವಿಶಾಲವಾದ ಪ್ರಾಂಗಣ ಗೋಡೆಯನ್ನು ಹೊಂದಿದೆ. ಈ ಗುಡಿಯು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದ್ದು, ಇದು ಗರ್ಭಗೃಹ, ಅಂತರಾಳ, ಸಭಾ ಮಂಟಪ, ಮುಖ ಮಂಟಪ ಮತ್ತು ನಂದಿಮಂಟಪಗಳನ್ನು ಒಳಗೊಂಡಿದೆ. "ಗರ್ಭಗೃಹ ಪ್ರವೇಶ ದ್ವಾರದಲ್ಲಿ ಶಿವಲಿಂಗ, ಭುವನೇಶ್ವರಿಯಲ್ಲಿ ಪದ್ಮ ಇದೆ. ಅಂತರಾಳಕ್ಕೆ ಸಾದಾ ಕೆತ್ತನೆಯ ಪ್ರವೇಶ ದ್ವಾರ, ಎರಡು ಬದಿಗೆ ಜಾಲಾಂಧ್ರಗಳು, ಒಳಗೆ ಚೌಕಾಕಾರದ ನಾಲ್ಕು ಕಂಬಗಳು, ಸಮತಟ್ಟಾದ ಮೇಲ್ಛಾವಣಿಗಳಿವೆ."[೧] ಒಂಬತ್ತು ಅಂಕಣಗಳನ್ನು ಒಳಗೊಂಡ ಈ ಸಭಾ ಮಂಟಪದ ಪ್ರವೇಶ ದ್ವಾರದ ಲಲಾಟ ಬಿಂಬದಲ್ಲಿ ಗಣೇಶ, ಎರಡೂ ಬದಿಗೆ ಶೈವ ದ್ವಾರಪಾಲಕರು, ಒಳಗೆ ಚೌಕ ವೃತ್ತಾಕಾರದ ಘಂಟಾ ಫಲಕ ಮತ್ತು ಬೋದಿಗೆಗಳನ್ನೊಳಗೊಂಡ ಹನ್ನೆರಡು ಕಂಬಗಳಿವೆ.

ಮುಖಮಂಟಪದಲ್ಲಿ ಇತ್ತೀಚಿಗೆ ಸೇರ್ಪಡೆಗೊಂಡಿರುವ ಈ ಗುಡಿಯ ಮೂರು ಅಂಕಣಗಳಿವೆ. ಇದರಲ್ಲಿ ವಿಜಯನಗರ ಮಾದರಿಯ ಎರಡು ಮೂಲೆ ಕಂಬಗಳಿವೆ. ನಾಲ್ಕು ಅರ್ಧ ಕಂಬಗಳು ಹಾಗೂ ಮಧ್ಯದಲ್ಲಿ ಎರಡು ಕಂಬಗಳಿವೆ. ಸಭಾ ಮಂಟಪದ ಮಳಿಗೆಯ ಸುತ್ತಲೂ ಮುಂಚಾಚಿದ ಚಜ್ಜಾ, ಕೈಪಿಡಿ ಗೋಡೆಯಿದ್ದು ಇದರಲ್ಲಿ ಗಾರೆ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ಮೂರು ತಲೆಗಳಿಂದ ಕೂಡಿದ ಸ್ತೂಪ ಮತ್ತು ಕಳಸದ ಭಾಗಗಳನ್ನೊಳಗೊಂಡ ದ್ರಾವಿಡ ಮಾದರಿಯ ಶಿಖರ(ಗೋಪುರ) ಇದೆ. ಇದರ ನಾಲ್ಕೂ ಮೂಲೆಗೂ ಸಿಂಹದ ಗಾರೆ ಶಿಲ್ಪಗಳಿವೆ. ಮೂಲತಃ ಈ ದೇಗುಲ ಕಟ್ಟಡಕ್ಕೆ ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲನ್ನು ಬಳಸಿದ್ದು ನಂತರ ಕಣಶಿಲೆಯಿಂದ ಜೀರ್ಣೋದ್ಧಾರಗೊಳಿಸಲಾಗಿದೆ. ಇತ್ತೀಚಿಗೆ ಆಧುನೀಕರಣಗೊಂಡಂತೆ ದೇವಾಲಯದ ಒಳಗೋಡೆಗಳಿಗೆ ವಿವಿಧ ರೀತಿಯ ಬಣ್ಣಗಳನ್ನು ಬಳಿಯಲಾಗಿದೆ. ಹಾಗೂ ದೇವಾಲಯದ ಅಂತರಾಳದ ಮತ್ತು ಮುಂದಿನ ತಳಕ್ಕೆ ನುಣುಪಾದ ಕಲ್ಲು (ಟೈಲ್ಸ್‌ಕಲ್ಲು) ಬಳಸಲಾಗಿದೆ.

೨..೨. ನಂದಿ ಮಂಟಪ : (The Nandi Mantapa)

ಮುಖ್ಯದೇವಾಲಯದ ಮುಂಭಾಗದಲ್ಲಿ ಒಂಬತ್ತು ಅಂಕಣಗಳಿಂದ ಕೂಡಿದ ತೆರದ ನಂದಿ ಮಂಟಪವಿದೆ. ಇದರಲ್ಲಿ ಕಪ್ಪು ಶಿಲೆಯ ಮೂರು ಅಡಿ ಎತ್ತರದ ನಂದಿ ವಿಗ್ರಹವಿದೆ. ಕಲ್ಯಾಣ ಚಾಲುಕ್ಯರ ಮಾದರಿಯ ಹನ್ನೆರಡು ಕಂಬಗಳು ಹಾಗೂ ನಾಲ್ಕು ಅರ್ಧಕಂಬಗಳಿವೆ. ವಾಸ್ತವಿಕವಾಗಿ ಈ ಮಂಟಪದ ಬಲಭಾಗದ ಸ್ಥಳಕ್ಕೆ ಕಬ್ಬಿಣದ ಕಟಾಂಜನಿಯನ್ನು ಅಳವಡಿಸಿದ್ದಾರೆ. ಎಡ ಭಾಗಕ್ಕೆ ಹೊಂದಿಕೊಂಡಂತೆ ಪ್ರಸಾದ ನಿಲಯವನ್ನು ನಿರ್ಮಿಸಿದ್ದಾರೆ. ಈ ಮಂಟಪದ ಒಳಾಂಗಣದ ಎಡಭಾಗದಲ್ಲಿ ಭಕ್ತರು ಕುಳಿತುಕೊಳ್ಳುವುದಕ್ಕೆ ಹಾಗೂ ವಿಶ್ರಾಂತಿ ಪಡೆಯುವುದಕ್ಕೆ ಅನುಕೂಲಕರವಾದಂತ ಕಟ್ಟೆಯನ್ನು ನಿರ್ಮಿಸಲಾಗಿದೆ. ಇದರ ಒಳಪ್ರದೇಶಕ್ಕೆ ಗಾಳಿ, ಬೆಳಕು ಬರಲು ಮಂಟಪದ ಹಿಂದೆ ಹಾಗೂ ಮುಂದೆ ಒಂದೊಂದರಂತೆ ಜಾಲಾಂದ್ರಗಳನ್ನು ಬಿಡಲಾಗಿದೆ. ಈ ಮಂಟಪದ ಬಲಭಾಗದಲ್ಲಿ ಅಳವಡಿಸಿದ ಕಬ್ಬಿಣದ ಕಟಾಂಜನಿಗೆ ತಮ್ಮ ಹರಕೆ ಬೇಡಿಕೊಂಡ ಭಕ್ತರು ತೆಂಗಿನಕಾಯಿಯನ್ನು ವಸ್ತ್ರದಲ್ಲಿ ಹಾಕಿ ಕಟ್ಟಿರುವುದು ರಾಶಿರಾಶಿಯಾಗಿ ಗೋಚರಿಸುತ್ತವೆ. ಇತ್ತೀಚಿಗೆ ಹರಕೆ ಬೇಡಿಕೊಂಡ ಭಕ್ತರು ತಮಗೆ ಒಳ್ಳೆಯದಾಗಿರುವುದರಿಂದ ಈ ಮಂಟಪದ ಒಳಾಂಗಣದ ತಳಕ್ಕೆ ನುಣುಪಾದ (ಟೈಲ್ಸ್) ಕಲ್ಲುಗಳನ್ನು ಹೊದಿಸಿಕೊಟ್ಟಿದ್ದಾರೆ. ಆಧುನಿಕರ ಪ್ರಕ್ರಿಯೆಗೆ ಹೊಂದಿಕೊಂಡಂತೆ ಮಂಟಪದ ಒಳ ಆವರಣಕ್ಕೆ ಮತ್ತು ಕಂಬಗಳಿಗೆ ವಿವಿದ ರೀತಿಯ ಬಣ್ಣಗಳನ್ನು ಬಳಿದಿದ್ದು, ಇದರ ಹೊರಮೈಗೆ ಸುಣ್ಣವನ್ನು ಬಳಿದಿದ್ದಾರೆ. ಹಾಗೂ ಈ ಮುಖ್ಯ ಗುಡಿಗೆ ಇರುವಂತ ದ್ವಾರ ಮಂಟಪವು ಕಮಾನಿನಾಕೃತಿಯಲ್ಲಿದ್ದು, ಮೇಲ್ಭಾಗದಲ್ಲಿ ಮಕರ ತೋರಣ, ಮಧ್ಯದಲ್ಲಿ ವಿಜಯನಗರ ಮಾದರಿಯ ನಾಲ್ಕು ಕಂಬಗಳು ಇವೆ. ಪ್ರಕಾರದೊಳಗೆ ಶಿವಲಿಂಗ, ಗಣೇಶ, ನಾಗರಕಲ್ಲು, ವೀರಗಲ್ಲು. ಸಪ್ತಮಾತೃಕೆ ಮತ್ತು ಶಾಸನ ಶಿಲ್ಪಗಳಿವೆ.

೨.೩. ಗಂಗಿ ಮಾಳಮ್ಮ ಗುಡಿ : (Gangi Malamma Cabian)

ಚಂದಾಲಿಂಗೇಶ್ವರ ದೇವಾಲಯದ ವಿಶಾಲ ಪ್ರಾಂಗಣದ ಒಳಗಿನ ಚಿಕ್ಕ ಪುಟ್ಟ ಸ್ಮಾರಕಗಳಲ್ಲಿ ಗಂಗಿ ಮಾಳಮ್ಮ ಗುಡಿಯೂ ಒಂದು. ಇದನ್ನು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಿಸಲಾಗಿದ್ದು, ಇದು ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದ ದೇಗುಲವಿದು. ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ಕಪ್ಪು ಶಿಲೆಯ ಗಂಗಿಮಾಳಮ್ಮನ ಶಿಲ್ಪವಿದೆ. ಇದರ ಹಿಂಬದಿ ಗೋಡೆಗೆ ಎರಡು ಮೂಲೆಗಂಬಗಳು ಪ್ರವೇಶದ್ವಾರದ ಎರಡೂ ಬದಿಯ ಪಟ್ಟಿಕೆಯಲ್ಲಿ ಕುಂಭಗಳು. ಇವುಗಳ ಮೇಲೆ ಸ್ತಂಭ ಶಾಖಾಗಳಿವೆ. "ಲಲಾಟಬಿಂಬದಲ್ಲಿ ಕುಂಬವಿದೆ. ಅಂತರಾಳದ ಪ್ರವೇಶ ದ್ವಾರದ ಲಲಾಟಬಿಂಬದಲ್ಲಿ ಗಣೇಶನ ಉಬ್ಬು ಗೆತ್ತನೆ ಚಿತ್ರ ಇದೆ. ಸಭಾಮಂಟಪ ಭಗ್ನಗೊಂಡಿದ್ದು ಗರ್ಭಗೃಹದ ಮೇಲೆ ಮೂರು ತಲೆಗಳಿಂದ ಕೂಡಿದ ದ್ರಾವಿಡ ಮಾದರಿಯ ಇಟ್ಟಿಗಿಯ ಶಿಖರವಿದೆ."[೩] ಈ ಗುಡಿಗೆ ಅರ್ಚಕರುಗಳಾಗಿ ಭಕ್ತರು ವಹಿಸಿಕೊಳ್ಳುತ್ತಾರೆ. ಕಾರಣ ಭಕ್ತರಿಗೆ ಜೀವನದಲ್ಲಿ ಏನಾದರೂ ತೊಂದರೆಗಳು ಎದುರಾದಾಗ, ಬಂದು ಈ

ಸೇವೆಯನ್ನು ನಿರ್ವಹಿಸುತ್ತಾರೆ. ಯಾವುದೇ ಭಕ್ತರು ಇಲ್ಲದೇ ಇದ್ದಂತಹ ಸಂದರ್ಭದಲ್ಲಿ ಚಂದಾಲಿಂಗೇಶ್ವರನ ದೇವರ ಅರ್ಚಕರೇ ಆರಾಧಿಸುತ್ತಾರೆ.

೨.೪. ಹಂಪಿ ವಿರುಪಾಕ್ಷೇಶ್ವರ ಗುಡಿ : (Hampi Virupaksheshwar Cabian)

ಚಂದಾಲಿಂಗೇಶ್ವರ ಗುಡಿಯ ಬಲಬದಿಗೆ ಗರ್ಭಗೃಹಕ್ಕೆ ಅಂಟಿಕೊಂಡಿರುವಂತೆ ಹಾಗೂ ಪೂರ್ವಾಭಿಮುಖವಾಗಿದೆ. ಈ ಗುಡಿಯು ಕಲ್ಯಾಣ ಚಾಲುಕ್ಯ ಶೈಲಿಯನ್ನು ಹೊಂದಿದೆ. ಇದು ಗರ್ಭಗೃಹ ಅಂತರಾಳ, ತೆರೆದ ಸಭಾಮಂಟಪದ ಭಾಗಗಳನ್ನು ಹೊಂದಿದೆ. "ಗರ್ಭಗೃಹದ ಮಧ್ಯದಲ್ಲಿ ಶಿವಲಿಂಗ ಸ್ತಂಭ ಶಾಖೆಗಳಿಂದ ಕೂಡಿದ ಪ್ರವೇಶದ್ವಾರ, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ, ಇದರ ಮೇಲ್ಭಾಗದಲ್ಲಿ ಶಿಖರ ಪಟ್ಟಿಕೆ ಸರಳವಾದ ಮೇಲ್ಛಾವಣಿಯ ಭುವನೇಶ್ವರಿಯಲ್ಲಿ ಪದ್ಮ ಇದ್ದು, ತೆರೆದ ಅಂತರಾಳದ ಪ್ರದೇಶದಲ್ಲಿ ಎರಡೂ ಬದಿಗೆ ಅರ್ಧಕಂಭಗಳಿವೆ. ಇದರ ಸಭಾಮಂಟಪವು ಒಂಬತ್ತು ಅಂಕಣಗಳಿಂದ ಕೂಡಿದ ಈ ಮಂಟಪದ, ಮಧ್ಯ ಅಂಕಣದಲ್ಲಿ ಪದ್ಮ ಇದೆ."[೨] ಕೆಳಗೆ ಚೌಕಾಕಾರ, ಮಧ್ಯೆ ಎಂಟು-ಹದಿನಾರು-ಎಂಟು ಮುಖಗಳ ಪಟ್ಟಿಕೆಗಳು, ಮೇಲೆ ಫಲಕ ಬೋದಿಗೆಗಳನ್ನು ಹೊಂದಿರುವ, ಹದಿನಾರು ಕಂಬಗಳ ಸಭಾಮಂಟಪದಲ್ಲಿ ನಂದಿ ಇದೆ. ಇದರ ಸುತ್ತಲೂ ರಕ್ಷಾಕವಚವಿದ್ದು ಇದರಲ್ಲಿ ಮಹಿಷಾಸುರ ಮರ್ಧಿನಿ ಮತ್ತು ಸಪ್ತ ಮಾತೃಕಾ ಶಿಲ್ಪಗಳಿವೆ. ಸ್ತೂಪ, ಕಳಸಗಳನ್ನೊಳಗೊಂಡ ದ್ವಿತಲ ವಿಮಾನ ಮಾದರಿಯ ದ್ರಾವಿಡ ಶೈಲಿಯ ಶಿಖರವು ಗರ್ಭಗೃಹದ ಮೇಲಿದೆ.

ವಾಸ್ತವ ಸ್ಥಿತಿಯಲ್ಲಿ ಈ ಗುಡಿಯನ್ನು ನೋಡಿದಾಗ, ಗುಡಿಯ ಮುಂಭಾಗದ ಕೆಲ ಭಾಗಗಳು ನೆಲಕಚ್ಚಿವೆ. ಈ ಗುಡಿಯ ವರಾಂಡವು ಮಳೆಯ ನೀರಿನಿಂದ ಮಣ್ಣು ಕೊಚ್ಚಿಕೊಂಡು ಬಂದು ಮುಚ್ಚಿದೆ. ಮೂಲ ರೂಪದಲ್ಲಿದ್ದಂತ ಗುಡಿಯ ಕೆಲವು ಭಾಗಗಳು ಬಿದ್ದಿರುವುದರಿಂದ ಮೊದಲಿನ ಸ್ವರೂಪವನ್ನು ಕಳೆದುಕೊಂಡಿದೆ. ಇವತ್ತು ಪ್ರವಾಸಿಗರು ಈ ಗುಡಿಯನ್ನು ನೋಡಿದರೆ ಹಿಂದೆ ಇದೇ ರೂಪದಲ್ಲಿ ಇತ್ತು ಎನ್ನುವಂತೆ ಬಾಸವಾಗುತ್ತದೆ. ತನ್ನದೇ ಆದಂತಹ ಆಕಾರ ಸ್ವರೂಪವನ್ನು ಪಡೆದುಕೊಂಡಿದೆ. ಈ ಗುಡಿಯ ಕಟ್ಟಡದಿಂದ ಬಿದ್ದಂತಹ ಕಲ್ಲುಗಳ ಗಾತ್ರ ದೊಡ್ಡದಾಗಿರುವುದರಿಂದ, ದೇವಾಲಯಕ್ಕೆ ಬಂದು ಹೋಗುವಂತಹ ಜನರು ಅವುಗಳನ್ನು ಒಂದು ಬದಿಗೆ ಸರಿಸಿರುವುದರಿಂದ, ಅವು ಹಾಗೆ ಉಳಿದಿವೆ. ಹೀಗೆ ಕಾಲ ಕಳೆದಂತೆಲ್ಲಾ ಅವು ಪ್ರವಾಸಿಗರಿಂದ ಹಾಗೂ ಭಕ್ತರಿಂದ ತಮ್ಮದೇ ಆದ ಸ್ವರೂಪ ಪಡೆದಿವೆ.

ಈ ಗುಡಿಗೆ ಇವತ್ತಿಗೂ ಯಾವುದೇ ಜೀರ್ಣೋದ್ಧಾರದ ಕಾರ್ಯ ಕೈಗೊಂಡಿಲ್ಲ. ಇದು ಚಂದಾಲಿಂಗನ ಮುಖ್ಯ ಗುಡಿಯ ವರಾಂಡಣದಲ್ಲಿರುವುದರಿಂದ ಪ್ರತಿವರ್ಷ ನಡೆಯುವ ಎರಡೂ ಜಾತ್ರೆಗೆ ಸುಣ್ಣಬಣ್ಣವನ್ನು ಮಾತ್ರ ಬಳಿಯುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಜಾತ್ರೆಗೆ ಬಂದ ಯಾತ್ರಿಕರಿಗೆ ತಂಗುವ ತಾಣವಾಗಿ ಪರಿಣಮಿಸುತ್ತದೆ. ಜಾತ್ರೆಗೆ ಬಂದಿರುವ ಭಕ್ತಾದಿಗಳು ಎರಡು-ಮೂರು ದಿನಗಳವರೆಗೆ ಇಲ್ಲಿಯೇ ವಾಸವಾಗಿದ್ದು, ತಮ್ಮ ಗಂಟು ಮೂಟೆಗಳನ್ನು ಇಡಲು

ಇದನ್ನೇ ಆಶ್ರಯಿಸುತ್ತಾರೆ. ಈ ಗುಡಿಗೆ ಅಂಟಿಕೊಂಡಂತೆ ಒಂದು ವಿಶಾಲವಾದ ಹುಣಸೆ ಮರ ಬೆಳೆದಿದೆ. ಈ ಮರದ ನೆರಳು ಈ ಗುಡಿಯ ಅಕ್ಕಪಕ್ಕ ಬೀಳುವುದರಿಂದ ಬಂದಂತ ಭಕ್ತಾದಿಗಳಿಗೆ ಆಶ್ರಯ ತಾಣವಾಗಿದೆ. ಈ ಗುಡಿಗೆ ಮೊದಲು ಪ್ರವೇಶಿಸಲು ವರಾಂಡಣದ ದ್ವಾರವು ದಕ್ಷಿಣಕ್ಕೆ ಮಾರ್ಗವಾಗಿದೆ. ಈ ಗರ್ಭ ಗುಡಿಯ ಮುಖ್ಯ ದ್ವಾರ ಪೂರ್ವಕ್ಕೆ ಅಭಿಮುಖವಾಗಿದೆ. ಈ ವರಾಂಡದಲ್ಲಿರುವ ಎಲ್ಲಾ ದೇವರುಗಳೊಂದಿಗೆ ಈ ದೇವರಿಗೂ ಪ್ರತಿ ದಿನ ಅರ್ಚನೆ ಮಾಡಲಾಗುತ್ತದೆ.

೨.೫. ಬಿಸಿಲು ಬೀಳದ ಬಾವಿ : (Well-drilled Well)

ಈ ಬಾವಿಗೆ ಗಡಿಗೆ ಬಾವಿ, ಹಾಲುಬಾವಿ, ಬಿಸಿಲು ಬೀಳದ ಬಾವಿ ಎಂದೆಲ್ಲಾ ಭಕ್ತರು ಕರೆಯುತ್ತಾರೆ. ಇದು ಚಂದಾಲಿಂಗೇಶ್ವರ ಗುಡಿಯ ಬಲಭಾಗದಲ್ಲಿದೆ. ಈ ಬಾವಿಯ ವಿಶೇಷತೆಯೆಂದರೆ ಗುಡೂರಿನ ಹುಲ್ಲಪ್ಪನ ಗುಡ್ಡದ ಮೇಲಿರುವ ಚಿಕ್ಕದಾದ ಹೊಂಡ ಅಥವಾ ಗುಂಡಿಯಂತಿರುವ ಈ ಬಾವಿಯಲ್ಲಿ ಒಂದು ಲಿಂಬೆಹಣ್ಣಿಗೆ ಸೂಜಿಯನ್ನು ಚುಚ್ಚಿ ಬಿಟ್ಟರೆ, ಅದು ಈ ಬಿಸಿಲು ಬೀಳದ ಬಾವಿಗೆ ಬಂದು ತೇಲುತ್ತದೆ ಎಂದು, ನೋಡಿದ ಭಕ್ತರು ಹೇಳಿಕೆ ನೀಡುತ್ತಾರೆ. ಎಂಥ ಬರಗಾಲದ ಪರಿಸ್ಥಿತಿ ಬಂದಾಗಲೂ ಈ ಬಾವಿ ಬತ್ತಿರುವುದು ಕಂಡುಬಂದಿರುವುದಿಲ್ಲ, ಎಂದು ಚಂದಾಲಿಂಗನ ಗುಡಿಯ ಪೂಜಾರಿಗಳು ಹೇಳಿಕೆ ನೀಡುತ್ತಾರೆ. ಇದರಲ್ಲಿರುವಂತಹ ನೀರು ಔಷಧಿ ಗುಣವನ್ನು ಹೊಂದಿರುತ್ತದೆ ಎಂದೂ ಸಹ ಹೇಳುತ್ತಾರೆ. ಜಾತ್ರೆಗೆ ಬಂದಿರುವಂತಹ ಭಕ್ತರು ಈ ನೀರನ್ನು ಪವಿತ್ರವಾದ ತೀರ್ಥವೆಂದು ಭಾವಿಸಿ ಸ್ವೀಕರಿಸುತ್ತಾರೆ. ಈ ಬಾವಿಯ ನೀರಿನ ಬಗ್ಗೆ ಜನರಲ್ಲಿ ಹಲವಾರು ನಂಬಿಕೆಗಳಿವೆ. ಕೃಷಿಕರು ತಮ್ಮ ಹೊಲದಲ್ಲಿ ಬೆಳೆಗಳಿಗೆ ಯಾವುದಾದರೂ ಖಾಯಿಲೆ ಬಂದರೆ, ಈ ಬಾವಿಯ ನೀರನ್ನು ತೆಗೆದುಕೊಂಡು ಹೋಗಿ ಚಂದಾಲಿಂಗೇಶ್ವರನ ಹೆಸರು ಹೇಳಿ ಹೊಲದ ತುಂಬಾ ಸಿಂಪಡಿಸುತ್ತಾರೆ. ಇದರಿಂದ ಬೆಳೆಗಳಿಗೆ ಬಂದಿರುವ ಕ್ರಿಮಿಕೀಟಗಳು, ಖಾಯಿಲೆಗಳು ವಾಸಿಯಾಗುತ್ತವೆ ಎಂಬ ನಂಬಿಕೆಯಿದೆ. ಬೆಳೆಗಳು ಚೆನ್ನಾಗಿ ಬರುತ್ತವೆ ಎಂಬ ಭಾವನೆಯೂ ಇದೆ. ಈ ಬಾವಿಯ ನೀರಿನ ಗುಣಧರ್ಮದ ಬಗ್ಗೆ ಜಾತ್ರೆಗೆ ಬಂದ ಭಕ್ತರಿಗೆ ಕೇಳಿದಾಗ ಅವರು ಹೀಗೆ ಹೇಳುತ್ತಾರೆ, 'ಬಾವಿಯ ನೀರು ಸುಖಕ್ಕೂ ಐತರಿ, ಒಳ್ಳೆಯದಕ್ಕೂ ಐತರಿ; ಇದು ನಮ್ಗೆ ತೀರ್ಥ ನೀರು ಅಂದ್ರೂನೂ ಅದ್ಕಾ; ಆದಾರದ ನೀರು ಅಂದ್ರೂನು ಅದ್ಕಾ. ಇದನ್ನ ನಾವು ಬಾಟ್ಲಿಗೆ ತುಂಬಿಕೊಂಡು ಮನೆಗೆ ಹೋಗಿ ಮನೆ ತುಂಬಾ ಚಿಮಿಸ್ತೀವಿ, ಜಗಲಿ ಮ್ಯಾಗ ಇಡ್ತೀವಿ, ಏನಿದ್ರೂ ಪರಿಹಾರ ಮಾಡ್ವನು ಅವನಾ'... ಎಂದುಹೇಳಿ ಕೆಲವು ದಿನಗಳ ಹಿಂದೆ ಒಂದು ಘಟನೆ ನಡೆದಿರುವುದರ ಕುರಿತು ನೀರಿನ ಮಹಿಮೆ ಬಗ್ಗೆ ಹೀಗೆ ಹೇಳುತ್ತಾರೆ. 'ಹರಿಜನ ಮಂದಿಯ ಗ್ವಾರಪ್ಪಗ ಆರಾಮು ಇರಲಿಲ್ಲರಿ. ಅವಂಗ ಜನ್ರೆಲ್ಲಾ ಈಗ ಸಾಯಿತಾನೋ; ಆಗ ಸಾಯಿತಾನೋ ಅಂತಿದ್ರುರಿ; ಅವಾಗ ಕಬ್ಬರಿಗಿ ವಗ್ಗಯ್ಯನವರು: ಏ ಹುಚ್ಚುಗುಳಾ! ಅಂವಾ ಇನ್ನೂ ಅಜ್ಜನ ಜಾತ್ರೆ ಮಾಡತ್ತಾನ; ಅಲ್ಲಿ ಅಜ್ಜನ ಬಾವಿಯಾನ ನೀರು, ಹಣ್ಣು ತಗೊಂಡು ಹೋಗಿ ಪೂಜೆಮಾಡಿ ಆ ಹಣ್ಣು, ತೀರ್ಥನ್ನ ಶರಬತ್ತಿನ ತರ

ಮಾಡಿ ಕುಡ್ಸರಿ; ಒಂದು ತಾಸ್ನಾಗ ಎದ್ದು ನಿಂದ್ರತಾನ; ಎದ್ದು ನಿಂತು ಊಟ ಮಾಡತಾನ, ಅಂತಹೇಳಿ, ಮುಂದುವರೆದು, ಈ ಮದ್ದನ (ಔಷಧಿ) ಡಾಕ್ಟರೆ ಆಶ್ಚರ್ಯಪಡುತ್ತಾರೆ ಹೇಳಿದ್ರೆ, ಈಗ ಆರಾಮಾಗ್ಯನರಿ' ಅಂತ ಬಹಳ ದಿನಗಳಿಂದ ಚಂದಾಲಿಂಗನ ಭಕ್ತನಾದ ಕುದುರೆಕಾರನಾದ, ನರಗುಂದದ ನಿಂಗಪ್ಪನು ಹೇಳಿದ.

ಈ ಬಾವಿಯ ನೀರಿನ ನೇಮ ನಿತ್ಯದ ಬಗ್ಗೆ ಕೇಳಿದಾಗ ಭಕ್ತರು ಹೇಳುವಂತೆ, ಇದುವರೆಗೂ ಯಾರೂ ತಮ್ಮ ಕಾಲಿನ ತುದಿಬೆರಳನ್ನು ಸಹ ನೀರಿಗೆ ತಾಕಿಸಿರುವುದಿಲ್ಲ. ಇಷ್ಟೇ ಅಲ್ಲದೆ ಬಾವಿಯಲ್ಲೇ ಯಾರೂ ಬೊಗಸೆ ಮಾಡಿ ನೀರು ಕುಡಿದಿರುವುದಿಲ್ಲ ಅಂತ ಹೇಳುತ್ತಾರೆ. ಆಕಸ್ಮಾತ್ ಯಾರಾದ್ರೂ ಗೊತ್ತಿಲ್ಲದೆ ನೀರಿಗೆ ಕಾಲನ್ನು ತಾಕಿಸಿದ್ರೆ, ಅಥವಾ ಬೊಗಸೆಯಿಂದ ನೀರನ್ನು ಅಲ್ಲೇ ಕುಡಿದ್ರೆ, ಏನಾಗುತ್ತದೆ ಎಂದು ಪ್ರಶ್ನಿಸಿದರೆ ಅವರು ಈ ರೀತಿ ಹೇಳುತ್ತಾರೆ, 'ಯಾರಾರೋ ಇರ್ಲಿ; ಅವ್ರು ಬಾಯಿ (ಬಾವಿ) ಒಳ್ಗ ಇಳಿದ್ರೆ, ನೀರ್ಗೆ ಕಾಲು ಬಡಿಸ್ಬಾರ್ದು, ಇಲ್ಲೇ ಕುಡಿಬಾರ್ದು ಅಂತ ಭಯ ಹುಟ್ಟುತೈತಿ; ಅವ್ರನ್ನ ಅಜ್ಜ ಹಿಂದ್ಕಸರ್ಸಿ ಬಿಡ್ತಾನ; ಅವ್ರ ಮನಸ್ಸಿಗೆ ಅಲ್ಲಿ ನೀರು ಕುಡಿಲ್ದಾರ್ದ್ಹಾಂಗ ಮಾಡ್ಬಿತ್ತಾನರೀ; ಇಲ್ಲಾಂದ್ರ... ಇಷ್ಟೊತ್ತಿಗೆ ಯಾರು ಹೊಕ್ಕಿದ್ರೋ ಯಾರು ಜಳಕ ಮಾಡುತ್ತಿದ್ರೋ, ಯಾರು ಮುಖ ತೊಳ್ಕೋಂತಿದ್ರೋ ಏನೋ' ಅಂತ ಹೇಳುತ್ತಾರೆ.

ಚಂದಾಲಿಂಗಪ್ಪನಿಗೆ ದಿನದ ಮೂರು ಹೊತ್ತಿನ ಪೂಜೆಯನ್ನು ಇದೇ ಬಾವಿಯ ನೀರನ್ನು ತೆಗೆದುಕೊಂಡು ಪೂಜಾರಿಗಳು ಪೂಜಿಸುತ್ತಾರೆ. ಮನುಷ್ಯರಿಗೆ ಆರೋಗ್ಯ ತಪ್ಪಿದಾಗ ಅಜ್ಜನನ್ನು ನೆನಸಿ ಒಂದು ಗ್ಲಾಸು ಈ ಬಾವಿಯ ನೀರನ್ನು ಕುಡಿದರೆ ವಾಸಿಯಾಗುತ್ತದೆ ಎಂಬ ನಂಬಿಕೆಯಿದೆ. ಲಿಂಬಿಯ ಹಣ್ಣು, ಆಧಾರದ ನೀರನ್ನು ಸೇರಿಸಿ ಕುಡಿದರೆ ಹೊಟ್ಟೆಯಲ್ಲಿರುವ ಹರಳುಗಳೂ ಕೂಡ ಕರಗುತ್ತವೆ ಎಂಬ ನಂಬಿಕೆಯಿದೆ. ಈ ಜಾತ್ರೆಗೆ ಬಂದ ಹೆಬ್ಬಾಳದ ಭಕ್ತ ಮಲ್ಲಪ್ಪನಿಗೆ ಈ ಬಾವಿ ನೀರಿನ ನಂಬಿಕೆಯ ಬಗ್ಗೆ ಕೇಳಿದಾಗ ಆತನು ಹೀಗೆ ಹೇಳಿದ 'ನಮ್ಮ ದೊಡ್ಡವ್ವಗೆ ಎಂಟು ಲಕ್ಷ ಕೊಟ್ಟು ಹೊಟ್ಟಿ ಆಪರೇಷನ್ ಮಾಡಿಸಿಕೊಂಡು ಬಂದ್ರೂ ಹೊಟ್ಟೆನ ಹಳ್ಳು ಹೋಗಿರಲಿಲ್ಲರೀ ಮತ್ತೊಳ್ಳಿ ಖಾಯಿಲೆ ಬಂದಿತ್ತು. ಆದ್ರೆ ಈ ಅಜ್ಜಗ ಬೇಡಿಕೊಂಡ್ವಿರಿ... ಬಾವಿ ನೀರನ್ನು ಕುಡಿಸಿದ್ದರಿಂದ ಹೊಳ್ಳಿ ಖಾಯಿಲೆ ಬಂದಿಲ್ರಿ' ಎಂದು ತನ್ನ ನಂಬಿಕೆಯನ್ನು ವ್ಯಕ್ತಪಡಿಸಿದರು.

ರೈತರಾದಂತವರು ಬೆಳಗ್ಗೆ ಸ್ನಾನವನ್ನು ಮಾಡಿಕೊಂಡು ಮಡಿ ಮೈಲಿಗೆಯಿಂದ ಬಂದು ಅಜ್ಜಗ ಪೂಜೆ ಮಾಡಿಸಿ ಬಾವಿಯ ನೀರನ್ನು ತೆಗೆದುಕೊಂಡು ಹೋಗಿ ತಮ್ಮ ತೆರೆದ ಬಾವಿಗಳಲ್ಲಿ ಹಾಗೂ ಕೊಳವೆ ಬಾವಿಗಳಲ್ಲಿ ಹಾಕುತ್ತಾರೆ. ಇದರಿಂದ ಅವೆರಡು ಮೂಲಗಳಲ್ಲಿ ನೀರು ಹೆಚ್ಚಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಕೃಷಿಕರು ತಮ್ಮ ಹೊಲಗದ್ದೆಗಳಿಗೆ ಯಾರಾದರೂ ಮಾಟ ಮಂತ್ರ ಮಾಡಿಸಿದ್ದರೆ, ಈ ಬಾವಿಯ ನೀರನ್ನು ತೆಗೆದುಕೊಂಡು ಹೋಗಿ ತಮ್ಮ ಹೊಲದ ನಾಲ್ಕೂ ಮೂಲೆಗಳಲ್ಲಿ ಸಿಂಪಡಿಸುತ್ತಾರೆ. ಇದರಿಂದ ಮಾಟ-ಮಂತ್ರದ ಶಕ ದೂರವಾಗುತ್ತದೆ ಎಂದು ಹೇಳುತ್ತಾರೆ. ಕುಷ್ಠ ರೋಗ ಬಂದಿರುವಂತಹ ವ್ಯಕ್ತಿಗಳಿಗೆ ಈ ಬಾವಿಯ ನೀರನು,

ಸ್ನಾನ ಮಾಡುವ ನೀರಿನಲ್ಲಿ ಬೆರೆಸಿ, ಸ್ನಾನ ಮಾಡಿಸಿದರೆ ಆ ಖಾಯಿಲೆ ವಾಸಿಯಾಗುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ಈ ಬಿಸಿಲು ಬೀಳದ ಬಾವಿಯ ನೀರು ಔಷದಿ ಗುಣವಾಗಿ ಪರಿಣಮಿಸಿದೆ. ದನಕರುಗಳಿಗೆ 'ಕುಂದು' ಎಂಬ ಖಾಯಿಲೆ ಬಂದಿದ್ದರೆ ಅಜ್ಜನ ಗುಡಿಗೆ ಬಂದು ಈ ಬಾವಿಯಲ್ಲಿನ ನೀರು ತೆಗೆದುಕೊಂಡು ಪೂಜಾರಿಗಳಿಂದ ಪೂಜಿಸಿಕೊಂಡು ತದನಂತರ ಅವುಗಳನ್ನು ಮನೆಗೆ ತೆಗೆದುಕೊಂಡು ಹೋಗಿ; ದನಕರುಗಳ ಬಾಯಿಯಲ್ಲಿ ಹಾಕಿ ಅವುಗಳ ಮೇಲೆ ಸಿಂಪಡಿಸುತ್ತಿದ್ದರು. ಇದರಿಂದ ಬಂದಿರುವಂತಹ ಖಾಯಿಲೆ ವಾಸಿಯಾಗುತ್ತದೆ ಎಂದು ಭಕ್ತರು ಹೇಳುತ್ತಾರೆ. ಈ ಬಾವಿಯ ಇನ್ನೊಂದು ವಿಶೇಷತೆಯೆಂದರೆ, ಈ ಬಾವಿಯಲ್ಲಿ ಯಂತ್ರ ಬರೆಯುವ ತಗಡಿನಲ್ಲಿ ಏನಾದರೂ ಒಂದು ಸಂಕೇತವನ್ನು ಬರೆದು ಇದರಲ್ಲಿ ಹಿಂದೆ ಬಿಡಲಾಗಿತ್ತಂತೆ, ಅದು ಘಟಪ್ರಭ ನದಿಯಲ್ಲಿ ತೇಲಿತ್ತಂತೆ, ಎಂದು ಕಳಕಪ್ಪ ಅರಮನೆಯವರು ತಿಳಿಸುತ್ತಾರೆ. ಈ ಬಾವಿ ನೋಡುವುದಕ್ಕೆ ಆಯತಾಕಾರ ಹೊಂದಿದ್ದು, ಬಾವಿಯನ್ನು ಸಂಪೂರ್ಣವಾಗಿ ಬಂಡೆಗಲ್ಲುಗಳಿಂದ ಮೇಲುಹೊದಿಕೆ ಮಾಡಿದ್ದಾರೆ. ಇದರ ಮೇಲೆ ಮುದ್ದಮ್ಮನ ಗುಡಿಯು ಪ್ರತಿಷ್ಠಾಪನೆಯಾಗಿದೆ.

೨.೬. ಹೆಸರಿಲ್ಲದ ಮರ : (Nameless Tree)

ವಾಸ್ತವ ಸ್ಥಿತಿಯಲ್ಲಿ ನೋಡಿದಾಗ ಈ ಮರ ಮಾಯವಾಗಿ ಆದೇ ಸ್ಥಳದಲ್ಲಿ ಬಸರಿಮರ ತಲೆತ್ತಿ ನಿಂತಿರುವುದು ಗೋಚರಿಸುತ್ತದೆ. ಮೂಲದಲ್ಲಿ ಇದ್ದಂತಹ ಮರ ಸಿಡಿಲು ಬಡಿದು ನಾಶವಾಗಿದೆ. ಇದೆ ಸ್ಥಳಕ್ಕೆ ಬಸರಿಮರ ಬೆಳೆದು ನಿಂತಿದೆ. ಇದು ಚಂದಾಲಿಂಗನ ದೇವಾಲಯಕ್ಕೆ ಹೋಗುವ ಮಾರ್ಗದ ಎಡಭಾಗದಲ್ಲಿ ಸ್ವಲ್ಪ ದೂರದಲ್ಲಿದೆ. ಈ ಬಸರಿಮರದ ಪಕ್ಕಕ್ಕೆ ಅರಣ್ಯ ಇಲಾಖೆಯವರು 'ಶ್ರೀ ಚಂದಾಲಿಂಗೇಶ್ವರ ಸಸ್ಯೋದ್ಯಾನವನ್ನು ಸ್ಥಾಪಿಸಿದ್ದಾರೆ. ಜಾತ್ರೆಯ ಸಂದರ್ಭದಲ್ಲಿ ಯಾತ್ರಿಕರು ಎರಡು-ಮೂರು ದಿನಗಳವರೆಗೂ ಈ ಮರದ ಕೆಳಗೆ ಆಶ್ರಯವನ್ನು ಪಡೆದಿರುತ್ತಾರೆ. ಇವತ್ತು ಈ ಮರವನ್ನು ದೇವರ ಪ್ರತೀಕವಾಗಿ ಪೂಜಿಸುತ್ತಾರೆ. ದೇವರುಗಳಿಗೆ ಹಾಗೂ ಹೊಂಡಗಳಿಗೂ, ಶಿಬಾರಗಳಿಗೂ, ತ್ರಿಶೂಲಗಳಿಗೂ ಈ ಮರಕ್ಕೂ ಪೂಜ್ಯನೀಯವಾದ ಸಂಬಂಧ ಹೊಂದಿರುವುದು ಆಚರಣೆಯಿಂದ ತಿಳಿದು ಬರುತ್ತದೆ.

ಮೂಲದಲ್ಲಿದ್ದಂತ ಈ 'ಹೆಸರು ಇಲ್ಲದ ಮರ' ಎಂದು ಕರೆಯಲು ಅದಕ್ಕೆ ಹಲವಾರು ಕಾರಣಗಳಿವೆ ಎಂದು ಸ್ಥಳೀಯ ಭಕ್ತರು ತಿಳಿಸುತ್ತಾರೆ. ಅಂತಹದರಲ್ಲಿ ಒಂದು ತಿಳಿಯುವುದಾದರೆ ಅದು ಆ ಮರವನ್ನು ಒಂದು ಕಡೆಯ ಭಾಗದಿಂದ ವೀಕ್ಷಿಸಿದರೆ ಅದು ಬೇವಿನ ಮರದ ಎಲೆಗಳಂತೆ ಕಾಣಿಸುತ್ತದೆ. ಅದರಂತೆ ಇನ್ನೊಂದು ಭಾಗದಿಂದ ನೋಡಿದರೆ, ಬಸರಿ ಗಿಡದ ಎಲೆಯಂತೆ ತೋರುತ್ತಿತು. ಹೀಗೆ ವಿವಿಧ ಭಾಗಗಳಿಂದ ನೋಡಿದಾಗ ತರತರಹದ ಮರಗಳ ಎಲೆಯಂತೆ ತೋರುತ್ತಿರುವುದರಿಂದ ಯಾರಿಗೂ ಅಷ್ಟು ಸುಲಭವಾಗಿ ಹೆಸರಿಸುವುದಕ್ಕೆ ಸಾಧ್ಯವಾಗಿಲ್ಲವಂತೆ.

ಈ ಹೆಸರಿಲ್ಲದ ಮರ ಪೂರ್ವದಲ್ಲಿ ಮಹಾನ್ ಮಹಾನ್ ತಪಸ್ವಿಗಳಿಗೆ ಆಶ್ರಯವಾಗಿತ್ತು ಎಂದು ಜನಪದರು ತಿಳಿಸುತ್ತಾರೆ. ಹಾಗೂ ಎಲೆಗಳು, ತೊಗಟೆ, ಚೆಕ್ಕೆ, ಬೇರು ಔಷಧೀಯ ಗುಣ ಹೊಂದಿದ್ದವು ಎಂದು ಸ್ಥಳೀಯರು ತಿಳಿಸುತ್ತಾರೆ. 'ಈ ಮರದ ಬಗ್ಗೆ ಚಂದಾಲಿಂಗೇಶ್ವರನ ಭಕ್ತನನ್ನು ಕೇಳಿದಾಗ ಆತನು ಹೀಗೆ ಹೇಳಿದನು, 'ಎಪ್ಪಾ ಮುಂಚಾಕ ಈ ಹೆಸರಿಲ್ಲದ ಗಿಡ ಇತ್ತು; ಆದ್ರ ಇವತ್ತು ಇಲ್ಯಪ್ಪ ಯವಾಕೆ ಹೆಣ್ಣುಮಗಳು ತಲೆಗೆ ನೀರು ಹಾಕೊಳ್ದೆ ಗಿಡ ಮುಟ್ಟಿದ್ದರಿಂದ ಗಿಡ ಒಣಗಿ ಹೋಗ್ಯಾತಪ್ಪೋ; ನಾವು ಈ ಗಿಡದ ತಪ್ಲನ್ನು ತಗೊಂಡು ದನಗಳಿಗೆ ಜಡ್ಡು ಆದ್ರೆ, ಹುಡುಗ್ರಗೆ ನೆದ್ರು ಆದ್ರೆ ಬರುತ್ತಿತ್ತು. ನಾನು ಒಯ್ದಿನಿ ಈ ಎಲ್ಲಾ ಕೆಲ್ಸ ಮಾಡಿನಿ ಆದ್ರ ಅದು ಈಗ ಇಲ್ಲ' ಎನ್ನುತ್ತಾರೆ.

೧೯೮೫-೮೬ರ ಸುಮಾರಿನಲ್ಲಿ ಈ ಹೆಸರಿಲ್ಲದ ಮರ ಇತ್ತು ಎಂದು ದ್ಯಾಂಪುರದ ಭಕ್ತ ಕುದುರೆಕಾರನಾದ ಚಂದಾಲಿಂಗಪ್ಪ ಹೇಳುತ್ತಾರೆ. ಅವರೇ ಮುಂದುವರೆದು 'ಆ ಗಿಡ ಮೂರು ಟೊಂಗೆಗಳಿಂದ ಕೂಡಿತ್ತು ಉತ್ತರಕ್ಕೊಂದು, ದಕ್ಷಿಣಕ್ಕೊಂದು, ಪೂರ್ವಕ್ಕೊಂದು, ಮೂರು ಭಾಗವಿತ್ತು. ಅದರ ಎಲೆ 'ಎಷ್ಟಗಲಾ ಅಂದ್ರೆ ಆರು ಇಂಚು ಅಗಲ ಇದ್ದವ್ರರಿ' ಅಂತ ಹೇಳುತ್ತಾರೆ. ಆ ಮರದ ತಪ್ಪಲನ್ನು ಚೇಳು ಕಚ್ಚಿದರೆ, ಹಾವು ಕಚ್ಚಿದರೆ, ಬಳಸಲಾಗುತ್ತಿತ್ತು. ಚಿಕ್ಕಮಕ್ಕಳಿಗೆ ಫಿಟ್ಸ್‌ನಂತಹ ಖಾಯಿಲೆಗಳಿಗೆ ಈ ಮರದ ತಪ್ಲನ್ನು ಅರೆದು ರಸವನ್ನು ಕುಡಿಸಿದರೆ ಖಾಯಿಲೆ ವಾಸಿಯಾಗುತ್ತಿತ್ತು ಎಂದು ಸ್ಥಳೀಯರು ಹೇಳುತ್ತಾರೆ. ಇಷ್ಟೇ ಅಲ್ಲ ಆ ಮರದ ಚೆಕ್ಕೆಯನ್ನು ಒಣಗಿಸಿ ಮನೆಯಲ್ಲಿ ಲೋಬಾನದಲ್ಲಿ ಬೆರಸಿ ಬೆಂಕಿಯಲ್ಲಿ ಹಾಕಿದರೆ, ಯಾವುದಾದರೂ ಕಾಟಾಚಾರಗಳು, ದಾರಿದ್ರ್ಯ, ಪೀಡೆಯಕಾಟ ಇದ್ದರೆ ತೊಲಗಿಸುತ್ತದೆ ಎಂಬ ನಂಬಿಕೆಯಿದೆ. ತದನಂತರ ಮನುಷ್ಯನಿಗೆ ಯಾವುದಾದರೂ ದೊಡ್ಡ ಖಾಯಿಲೆ, ಗಡ್ಡೆ ಗಾಯಗಳಾಗಿದ್ದರೆ. ಈ ಮರದ ತಪ್ಪಲು ಹಾಗೂ ಬಿಸಿಲು ಬೀಳದ ಬಾವಿಯ ನೀರನ್ನು ಸೇರಿಸಿ ತೇಯಿದು ಹಚ್ಚಿದರೆ ಎಲ್ಲಾ ವಾಸಿಯಾಗುತ್ತದೆ ಎಂಬುದು ಸ್ಥಳೀಯರು ಕಂಡುಕೊಂಡ ಸತ್ಯವಾಗಿದೆ.

ಈ ಮರದ ಕುರಿತ ಚಿಕ್ಕ ಚಿಕ್ಕ ಕಥೆಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಅಂತಹದರಲ್ಲಿ ಅದೊಂದು ಹೀಗಿದೆ, 'ಚಂದ್ರಗಿರಿ ಪಟ್ಟಣಕ್ಕೆ ಬಂದ ಕುದುರೆ ಸವಾರದಾರನು ಈ ಮರದ ಕೆಳಗೆ ವಿಶ್ರಾಂತಿಗೆ ಬಂದನು. ಆಗ ಅಲ್ಲೇ ಇಲ್ಲೇ ಇರತಕ್ಕಂತಹ ಜನರು ಇವನಿಗೆ ಇದು ಯಾವ ಮರ ಎಂದು ಕೇಳಿದಾಗ, ಅದಕ್ಕೆ ಯಾವುದೋ ಒಂದು ಮರ ಎಂದು ಹೆಸರಿಸಿದನಂತೆ. ಇದರಿಂದ ದೇವರು ಕುಪಿತನಾಗಿದ್ದರಿಂದ ಆತನ ಕುದುರೆಯನ್ನು ಹಾಗೂ ಆತನನ್ನು ಕಲ್ಲು ಶಿಲೆಯಾಗುವಂತೆ ಶಾಪಗೈದನಂತೆ. ಅದರಂತೆ ಇವತ್ತಿಗೂ ಅದೇ ಸ್ಥಳದಲ್ಲಿ ವಿರೂಪಗೊಂಡ ಕುದುರೆಯ ಶಿಲೆಯನ್ನು ಕಾಣಬಹುದು. ಆ ವ್ಯಕ್ತಿಯ ಶಿಲೆ ಅಲ್ಲಿ ಕಾಣಬರುವುದಿಲ್ಲ.

೨.೭ ಮಾದಾರ ಚಂದಪ್ಪನ ಗುಡಿ : (Madara Chandappa's Cabian)

ಇದು ಚಂದಾಲಿಂಗೇಶ್ವರ ಕ್ಷೇತ್ರದಲ್ಲಿ ಕಂಡುಬರುವ ಗುಡಿಯಾಗಿದೆ. ಈ ಗುಡಿಯ ಮುಖ್ಯ ದೇವಾಲಯಕ್ಕೆ ಹೋಗಲು ಪ್ರಮುಖ ದ್ವಾರದ ಎಡಭಾಗದ ಸ್ವಲ್ಪ ಹಿಂದಕ್ಕೆ ಕಂಡು ಬರುತ್ತದೆ. ಅದುವೆ ಮಾದರ ಚಂದಾಲಿಂಗಪ್ಪನ ಗುಡಿ. ಚಿಕ್ಕದಾದ ಮುಖ್ಯ ದ್ವಾರವನ್ನು ಹೊಂದಿದೆ. ಈ ಗುಡಿಯು ವಿಶಾಲವಾದ ಮೊಗಸಾಲೆಯನ್ನು ಹೊಂದಿದೆ. ಈ ಮೊಗಸಾಲೆಯಲ್ಲಿ ನಾಲ್ಕು ಬಲಿಷ್ಠವಾದ ಕಂಬಗಳ ಮೇಲೆ ಮೇಲ್ಚಾವಣಿ ನಿರ್ಮಿಸಲಾಗಿದೆ. ಗರ್ಭಗುಡಿಯನ್ನು ಹೊಂದಿದೆ. ಆರಾಧನೆಗೊಳ್ಳುವಂತಹ ದೇವರ ಮೂರ್ತಿಗಳು ಈ ಗರ್ಭಗುಡಿಯಲ್ಲಿ ಕಂಡುಬರುತ್ತವೆ. ಗರ್ಭಗುಡಿಯು ಮೂರು ಸುತ್ತಿನ ಶಿಖರವನ್ನು ಹೊಂದಿದೆ. ಕಟ್ಟಡದ ಗೋಡೆಗಳು ಕಚ್ಚಾಸ್ಥಿತಿಯಲ್ಲಿ ರಚನೆಗೊಂಡಿವೆ. ಗುಡಿಯ ಮುಂಭಾಗದಲ್ಲಿ ಎಡ ಮತ್ತು ಬಲಕ್ಕೆ ಒಂದರಂತೆ ಚಿಕ್ಕದಾಗಿರುವ ಕಟ್ಟೆಗಳನ್ನು ಹೊಂದಿದೆ.

ಗುಡಿಯ ಮುಂಭಾಗದಲ್ಲಿ ಶಿಬಾರವಿದ್ದು, ಅದರ ಕೆಳಗೆ ಮಾದಾರ ಚಂದಪ್ಪನ ಪಾದರಕ್ಷೆಗಳು ಕಂಡುಬರುತ್ತವೆ. ಈ ಗುಡಿಯ ಬಲಭಾಗಕ್ಕೆ ಗದ್ದುಗೆಯ ಮೇಲೆ ಬಸವಣ್ಣ ಇದ್ದಿರುವುದನ್ನು ನಿಧಿಗಳ್ಳರು ಕಿತ್ತೊಗೆದು ನಿಧಿ ಶೋಧನೆ ಮಾಡಿದ್ದಾರೆ. ಈ ಸ್ಥಳದಲ್ಲಿರುವಂತ ಹಲವಾರು ಮೂರ್ತಿಗಳು ಒಡೆದು ಛಿದ್ರ ಛಿದ್ರವಾಗಿವೆ. ಹಾಗೂ ಗುಡಿಯ ಎಡಭಾಗಕ್ಕೆ ಸುಮಾರು ಹತ್ತು ಹದಿನೈದು ವರ್ಷಗಳ ಹಿಂದಿನ ಹುಣಸೇಮರ ಕಂಡುಬರುತ್ತದೆ. ಗೋಡೆಯ ಕಟ್ಟಡದ ಭಾಗಗಳನ್ನು ಚಿಕ್ಕ ಚಿಕ್ಕ ಕಲ್ಲುಗಳಿಂದ ನಿರ್ಮಿಸಲಾಗಿದೆ. ಈ ಗುಡಿಯ ವಾಸ್ತವ ಸ್ಥಿತಿ ನೋಡಿದಾಗ, ಅದು ವಿನಾಶ ಹೊಂದುವ ಸ್ಥಿತಿಯಲ್ಲಿದ್ದು, ಗುಡಿಯ ಸಂಪೂರ್ಣ ಭಾಗ ಶಿಥಿಲಾವಸ್ತೆಯಲ್ಲಿದೆ. ಈ ಸ್ಥಳಗಳು ಅಕ್ರಮ ಚಟುವಟಿಕೆಯ ತಾಣಗಳಾಗಿ ಪರಿಣಮಿಸಿವೆ. ಗಿಡಗಂಟೆಗಳು ಬೆಳೆದು ಗುಡಿಯು ಗುರುತು ಸಿಗದ ಸ್ಥಿತಿಯಲ್ಲಿದೆ. ಯಾವುದೇ ಸುಣ್ಣ ಬಣ್ಣದ ಅಲಂಕಾರವನ್ನು ಕಾಣದೆ ಭೂತ ನಿವಾಸದ ಸ್ಥಳವೆಂಬಂತೆ ಗೋಚರವಾಗುತ್ತದೆ. ಭಕ್ತರು ಈ ಗುಡಿಗೆ ಬರಬೇಕಾದರೆ ದಾರಿಕಾಣದಂತಾಗಿದೆ. ಗುಡಿಯಲ್ಲಿರುವಂತ ದೇವರುಗಳು ಮಾತ್ರ ವಿಭೂತಿ, ಕುಂಕುಮ, ಎಣ್ಣೆ ಬತ್ತಿಯನ್ನು ಕಂಡಿರುವಂತೆ ತೋರುತ್ತದೆ. ಆದರೆ ಗುಡಿಗಳು ಮಾತ್ರ ಯಾವುದೇ ಜೀರ್ಣೋದ್ಧಾರಗೊಂಡಂತೆ ಕಂಡುಬರುತ್ತಿಲ್ಲ.

ಮುಂದಿನ ದಿನಗಳಲ್ಲಿ ಇದೇ ಸ್ಥಿತಿ ಮುಂದುವರೆದರೆ ಇವತ್ತು ಇದ್ದಂತಹ ಗುಡಿಗಳು ನಾಳೆ ನಮ್ಮ ಕಣ್ಮುಂದೆ ಇಲ್ಲದಂತಾಗುತ್ತವೆ. ಇದಲ್ಲದೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅಕ್ರಮ ಚಟುವಟಿಕೆಯ ತಾಣವಾಗಿ ಪರಿಣಮಿಸುತ್ತವೆ. ಆದ್ದರಿಂದ ಸರಕಾರದ ಪ್ರಾಚ್ಯ ಸಂರಕ್ಷಣಾ ಇಲಾಖೆ ಗಮನ ಹರಿಸಿದರೆ ಸುರಕ್ಷಿತವಾಗುತ್ತವೆ.

೨.೮. : ಕೊಂತಗಳ ಕಟ್ಟೆ : (A Bundle of bridge)

ಹೆಸರೇ ಸೂಚಿಸುವಂತೆ ಕೊಂತಗಳ ಸ್ಪರ್ಧೆ ಸೂಚಿಸುವಂತ ಕಟ್ಟೆಗಳಾಗಿವೆ. ಈ ಕಟ್ಟೆಗಳು ಚಂದಾಲಿಂಗನ ಗುಡಿಯ ಕೋಟೆಯ ಆವರಣದ ಬಲಭಾಗದಲ್ಲಿ ಕಂಡುಬರುತ್ತವೆ. ಈ ಕಟ್ಟೆಗಳು ಚಂದಾಲಿಂಗೇಶ್ವರನ ಹೊಂಡವನ್ನು ಮಧ್ಯ ಮಾಡಿ ನಿರ್ಮಿಸಲಾಗಿದೆ. ಹೊಂಡಕ್ಕೆ ಅಂಟಿಕೊಂಡಂತೆ ಒಂದು ಕಟ್ಟೆ, ಕೋಟೆ ಗೋಡೆಯ ಆವರಣದ ಗೋಡೆ ಪಕ್ಕದಲ್ಲಿ ನಿರ್ಮಿಸಿರುವುದು ಇನ್ನೊಂದು ಕಟ್ಟೆ, ಈ ಕಟ್ಟಡಗಳ ಗಾತ್ರ ಸುಮಾರು ಮೂರು ಅಡಿ ಎತ್ತರ, ಚೌಕಾಕಾರದ ಕಟ್ಟೆಗಳಾಗಿವೆ. ಈ ಕಟ್ಟಡಗಳಿಗೆ ಮಧ್ಯಮ ಗಾತ್ರದ ಕಲ್ಲುಗಳನ್ನು ಬಳಕೆ ಮಾಡಿ ಕಟ್ಟೆಯ ಮೇಲ್ಭಾಗದ ತಳಭಾಗಕ್ಕೆ ಉದ್ದವಾದ ಬಂಡೆಗಲ್ಲುಗಳನ್ನು ಎಳೆದಿದ್ದಾರೆ. ಜಾತ್ರೆಯ ದಿನದಂದು ಸುಣ್ಣ, ಬಣ್ಣ, ಬಳಿಯಲಾಗಿದ್ದು, ತಳಿರು ತೋರಣಗಳಿಂದ ಅಲಂಕೃತಗೊಂಡಿರುತ್ತವೆ.

ಈ ಕಟ್ಟೆಗಳ ಪ್ರಮುಖವಾದ ಉದ್ದೇಶ, ನಾಡಿನ ರೈತರಿಗೆ ತಮ್ಮ ಕೃಷಿಯಲ್ಲಿ ಆಗುವಂತ ಭವಿಷ್ಯದ ಸಂಕೇತವನ್ನು ಸೂಚಿಸುತ್ತವೆ. ಅಂದರೆ ವರ್ಷದಲ್ಲಿ ಬರ ಹಾಗೂ ಸುಖದ ಸಂದೇಶವನ್ನು ಸಾರುತ್ತವೆ. ಇಲ್ಲಿ ನಡೆಯುವಂತಹ ಕಾರ್ಯಕ್ರಮಕ್ಕೆ "ಕೊಂತ ಮಿಂಚುವುದು" ಎಂದು ಕರೆಯುವುದು ಜನರ ವಾಡಿಕೆಯಾಗಿದೆ.

೨.೯. ಚಂದಾಲಿಂಗಪ್ಪನ ಹೊಂಡ : (Chandalingappa's Pit)

ಈ ಕ್ಷೇತ್ರದ ವಾಸ್ತು ಶಿಲ್ಪಗಳ ಶೈಲಿಯನ್ನು ಗಮನಿಸಿದರೆ ಇದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿರುತ್ತದೆ. ಮುಖ್ಯ ಗುಡಿಯ ಕೋಟೆಗೋಡೆಯ ಆವರಣದ ಹೊರಭಾಗದ ಬಲಭಾಗದಲ್ಲಿದೆ. ಅಂದರೆ ಸುಮಾರು ಒಂದುನೂರು ಮೀಟರ್ ಅಂತರದಲ್ಲಿದೆ. ಪೂರ್ವದಲ್ಲಿ ಈ ಹೊಂಡ ಸುಸಜ್ಜಿತವಾದ ವ್ಯವಸ್ಥೆಯಲ್ಲಿ ಇತ್ತು ಎಂದು ತಿಳಿಯಬಹುದು. ಇಂದು ಇದರ ಸ್ಥಿತಿ ಬದಲಾವಣೆಯತ್ತ ಸಾಗಿದೆ. ಅದು ಹೇಗೆಂದರೆ ಹೊಂಡದ ಮೂರು ಭಾಗದ ದಡದಲ್ಲಿ ಕಲ್ಲುಗಳಿಂದ ಕಟ್ಟಿದ ಹಂಚೆಗಳು ಶಿಥಿಲಗೊಂಡಿವೆ. ಅಂತರಾಳವು ಮಣ್ಣಿನಿಂದ ಹೂತು ಹೋಗುವಂತ ಸ್ಥಿತಿ ಬಂದಿರುತ್ತದೆ. ಪ್ರತಿ ಜಾತ್ರೆಯ ಸಂದರ್ಭದಲ್ಲಿ ಹೂಳೆತ್ತುವ ಕೆಲಸವನ್ನು ದೇವಾಲಯದ ಕಮಿಟಿಯವರು ಮಾಡುತ್ತಾರೆ. ಸಾಂಸ್ಕೃತಿಕ ಆಚರಣೆಯ ದೃಷ್ಟಿಯಿಂದ ಪಾವಿತ್ರತೆಯ ಸ್ಥಾನವನ್ನು ಪಡೆದಿದೆ. ಪೂರ್ವದಲ್ಲಿ ಚಂದ್ರಗಿರಿಯ ವಾಸಿಗಳು ಈ ಹೊಂಡದ ನೀರನ್ನು ತಮ್ಮ ದಿನನಿತ್ಯದ ಕೆಲಸ ಕಾರ್ಯಗಳಿಗೆ ಬಳಕೆ ಮಾಡುತ್ತಿದ್ದರು ಎಂದು ಇಲ್ಲಿಯ ಜನರು ಮೌಖಿಕವಾಗಿ ತಿಳಿಸುತ್ತಾರೆ. ಕೊಂತದ ಎರಡೂ ಕಟ್ಟೆಗಳ ಮಧ್ಯೆ ಹೊಂಡ ರಚನೆಗೊಂಡಿದೆ. ಇದು ಚೌಕಾಕಾರದಲ್ಲಿ ರಚನೆಗೊಂಡಿದೆ. ದಕ್ಷಿಣ ಕಡೆಯಿರುವ ಹೊಂಡದ ಗೋಡೆಭಾಗವನ್ನು ಸಂಪೂರ್ಣವಾಗಿ ಮೆಟ್ಟಿಲುಗಳಾಗಿ ಮಾರ್ಪಡಿಸಿದ್ದಾರೆ. ಈ ಮೆಟ್ಟಿಲುಗಳು ಈ ಭಾಗದ ಎರಡೂ ದಡದ ಭಾಗಗಳಿಗೆ ಹೊಂದಿಕೊಂಡಿರುವ ವಿಶಾಲವಾಗಿ ಹಾಗೂ ಹಂತ ಹಂತವಾದ ರೀತಿಯಲ್ಲಿ ನಿರ್ಮಾಣ ಮಾಡಿರುತ್ತಾರೆ. ಮೆಟ್ಟಿಲು ಹೊಂದಿರುವ ಗೋಡೆಯ ತಳಭಾಗದಲ್ಲಿ ನಾಲ್ಕು ದೊಡ್ಡ ದೊಡ್ಡ ಬಂಡೆಗಲ್ಲುಗಳು ಕೂಡಿಕೊಂಡಿವೆ.

ಇದರ ಸುತ್ತಲೂ ಇರುವ ಗೋಡೆಯನ್ನು ಮಸಗಲ್ಲು (ಹಿಟ್ಟಗಲ್ಲು) ನಿಂದ ನಿರ್ಮಾಣ ಮಾಡಿದ್ದಾರೆ. ವಾಸ್ತವ ಸ್ಥಿತಿಯಲ್ಲಿ ಹೊಂಡವನ್ನು ಜನಪದರು ಬಳಸಿಕೊಳ್ಳುವುದನ್ನು ನೋಡಿದರೆ, ದೈವ ಭಾವನೆಯಿಂದ ಇದನ್ನು ಕಾಣುತ್ತಾರೆ. ಅದು ಹೇಗೆಂದರೆ, ಜಾತ್ರೆಯ ಸಂದರ್ಭದಲ್ಲಿ ಕೊಂತದೇವರು ಮೆರವಣಿಗೆಯಲ್ಲಿ ಇಲ್ಲಿಗೆ ಬರುತ್ತದೆ. ಅದರ ಸ್ನಾನ ಇದೇ ಹೊಂಡದಲ್ಲಿ ನೆರವೇರುತ್ತದೆ.

ಈ ಹೊಂಡದ ನೀರು ಪವಿತ್ರವಾದದ್ದು ಎಂದು ಭಕ್ತರು ಇದರಲ್ಲಿ ಮಿಂದೇಳುತ್ತಾರೆ. ಇದರಲ್ಲಿ ಮಿಂದೇಳುವುದರಿಂದ ಪಾಪ ಪರಿಹಾರವಾಗುತ್ತದೆ, ಮತ್ತು ಯಾವುದೇ ಚರ್ಮ ರೋಗಗಳು ಬರುವುದಿಲ್ಲ ಎಂದು ಭಕ್ತರು ಹೇಳುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಬಂದಿರುವಂತಹ ಭಕ್ತರು ಸ್ನಾನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಾರೆ. ಹೊಸದಾಗಿ ಮದುವೆಯಾದಂತವರು ತಮ್ಮ ಬಾಸಿಂಗವನ್ನು ಈ ಹೊಂಡದಲ್ಲಿ ಬಿಟ್ಟು ಹೋಗುತ್ತಾರೆ. ಜವಳ, ಮುಂಜಿ, ಅಭಿಷೇಕ, ದೀಡ್‌ನಮಸ್ಕಾರದ ಸಂದರ್ಭದಲ್ಲಿ ಇದರ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ.

ಭವಿಷ್ಯತ್ತಿನ ಅವಧಿಯಲ್ಲಿ ಈ ಹೊಂಡದ ಸ್ಥಿತಿ ವಿನಾಶದತ್ತ ಸಾಗುತ್ತದೆ ಎಂದರೆ ತಪ್ಪಾಗಲಾರದು. ಏಕೆಂದರೆ ಕಾಲಕಾಲಕ್ಕೆ ಇದನ್ನು ಹೂಳೆತ್ತುವ ಕೆಲಸ ನಡೆಯುತ್ತಿಲ್ಲ. ಹೊಂಡದ ದಡದ ನಾಲ್ಕೂ ಭಾಗಗಳು ಶಿಥಿಲಗೊಂಡಿವೆ. ಈ ಗೋಡೆ ಕಟ್ಟಡದ ಕಲ್ಲುಗಳು ಆಕಾರ ತಪ್ಪಿಬಿದ್ದಿವೆ. ಪೂಜಾ ಪುನಸ್ಕರಾದಿ ವಸ್ತುಗಳು, ಬಾಸಿಂಗ, ಹೂವಿನಮಾಲೆ, ಚಿಕ್ಕ ಚಿಕ್ಕ ಬಟ್ಟೆಗಳು ಇದರಲ್ಲಿ ಬಿದ್ದು ತ್ಯಾಜ್ಯ ವಸ್ತುಗಳಾಗಿ ಪರಿವರ್ತಿತವಾಗುತ್ತಲಿವೆ. ಹೊಂಡದ ಅಕ್ಕ ಪಕ್ಕ ಅಕ್ರಮ ಚಟುವಟಿಕೆಯ ವಸ್ತುಗಳು ಬೀಳುವುದರಿಂದ ಸಂರಕ್ಷಣೆಯಿಲ್ಲ. ಇಲ್ಲಿ ಯಾವುದೇ ರೀತಿ ಜೀರ್ಣೋದ್ಧಾರ ಕೆಲಸ ನಡೆದಿರುವುದಿಲ್ಲ. ಇದು ತಳಮಟ್ಟದಲ್ಲಿ ಇರುವುದರಿಂದ ಮಳೆಗಾಲದಲ್ಲಿ ಗುಡ್ಡದಿಂದ ಹರಿದು ಬರುವಂತ ಮಣ್ಣು, ಕಲ್ಲು, ನೀರಿನಿಂದ ಹೊಂಡ ತುಂಬಿ ಅವನತಿಯತ್ತ ಸಾಗುತ್ತದೆ. ಇದನ್ನು ಉಳಿಸಿಕೊಳ್ಳಲು ಸರ್ಕಾರದ ಪ್ರಾಚ್ಯ ಸಂರಕ್ಷಣಾ ಇಲಾಖೆ ಅಥವಾ ದೇವಸ್ಥಾನದ ಕಮಿಟಿಯವರು ಸಂರಕ್ಷಣಾ ಕ್ರಮ ಕೈಗೊಂಡರೆ ಉಳಿಸಿಕೊಳ್ಳಬಹುದು.

೨.೧೦ ತುಗ್ಗಲಿ ಮರ : (Tugli Tree)

ತುಗ್ಗುಲಿ ಮರ ಹಾಗೂ ನುಡಿಗಳ ಮಂಟಪ ಇವೆರಡೂ ಚಂದಾಲಿಂಗೇಶ್ವರನ ಬೇಸಿಗೆ ಜಾತ್ರೆಗೆ ಹಾಗೂ ಸುಗ್ಗಿ ಜಾತ್ರೆಗೆ ಪ್ರಮುಖ ಕೇಂದ್ರಬಿಂದುವಾಗಿವೆ. ತುಗ್ಗಲಿ ಮರ ಭಕ್ತಾದಿಗಳ ದೃಷ್ಟಿಯಲ್ಲಿ ದೈವೀ ಸ್ವರೂಪಿಯ ಗೌರವ ಪಡೆದಿದೆ. ಯಾಕೆಂದರೆ ತಲೆ-ತಲಾಂತರದಿಂದ ಚಂದಾಲಿಂಗೇಶ್ವರನ ಬೇಸಿಗೆ ಜಾತ್ರೆಯ ನುಡಿ ಈ ಮರದಲ್ಲಿ ನಡೆಯುತ್ತದೆ. ಪ್ರತಿವರ್ಷ ಅಗಿ ಹುಣ್ಣಿಮೆಯಾದ ಮೂರುದಿನಕ್ಕೆ ಈ ಕಾರ್ಯಕ್ರಮ ಜರುಗುತ್ತದೆ. ಇದು ಮುಖ್ಯ ಗುಡಿಯಿಂದ ಸುಮಾರು ಒಂದು ಕೀಲೋಮೀಟರ್ ದೂರದಲ್ಲಿದೆ. ಅಂದರೆ ಹನುಮಸಾಗರದಿಂದ ಈ ಕ್ಷೇತ್ರಕ್ಕೆ ಬರುವ ಮಾರ್ಗದ ಬಲಬಾಗದಲ್ಲಿದೆ. ಮುಖ್ಯ ಗುಡಿಯಿಂದ ಹೋಗುವಾಗ ಮಾರ್ಗದ

ಎಡಭಾಗದಲ್ಲಿದೆ. ಈ ಜಾತ್ರೆ ಪ್ರಾರಂಭವಾಗುವುದಕ್ಕೆ ಎರಡು ದಿನಗಳ ಮುಂಚಿತವಾಗಿ ಈ ಮರದ ಕೆಳಗೆ ಬೆಳೆದಿರುವಂತಹ ಸಣ್ಣ ಪುಟ್ಟ ಕಸ, ಸಸ್ಯಗಳನ್ನು, ಇತರ ಅನಾವಶ್ಯಕ ವಸ್ತುಗಳನ್ನು ತೆರವುಗೊಳಿಸಲಾಗುತ್ತದೆ. ಮರದ ಸುತ್ತಲೂ ಐವತ್ತು ಅಡಿ ಅಗಲ ಸ್ವಚ್ಛಗೊಳಿಸುವರು. ಕಾರಣ ನುಡಿ ನಡೆಯುವ ದಿನ ನುಡಿ ಆಲಿಸಲು ಬಂದಂತ ಭಕ್ತರಿಗೆ ನಿಂತುಕೊಳ್ಳುವುದಕ್ಕೆ ಅನುಕೂಲಕರವಾಗಲೆಂದು ಈ ವ್ಯವಸ್ಥೆಯನ್ನು ಮಾಡುವರು. ಈ ಮರದ ಕಾಂಡದ (ಬಡ್ಡಿ) ಸುತ್ತ ಸುಣ್ಣವನ್ನು ಬಳಿಯುತ್ತಾರೆ. ಮರದ ಕಾಂಡದ ಬುಡದ ಸುತ್ತಲೂ ವೃತ್ತಾಕಾರವಾಗಿ ಮಧ್ಯಮ ಗಾತ್ರದ ಕಲ್ಲುಗಳನ್ನು ತಂದು ಅವುಗಳಿಗೆ ಸುಣ್ಣವನ್ನು ಬಳಿಯಲಾಗುತ್ತದೆ.

ಜಾತ್ರೆಯ ದಿನ ಹೆಚ್ಚಿನ ಪ್ರಮಾಣದಲ್ಲಿ ಸೇವೆ ಮಾಡುವರೆಂದರೆ ಭಕ್ತರೇ ಆಗಿರುತ್ತಾರೆ. ಏಕೆಂದರೆ ಭಕ್ತರು ತಮ್ಮ ಜೀವನದಲ್ಲಿ ಹಲವಾರು ಸಂಕಷ್ಟಗಳಿಗೆ ಈಡಾಗಿರುತ್ತಾರೆ. ಅವುಗಳಿಂದ ಹೊರಬರಲು ಚಂದಾಲಿಂಗೇಶ್ವರನಿಗೆ ಈ ರೀತಿ ಹಲವಾರು ಸೇವೆ ಮಾಡುವುದರಿಂದ ತಮ್ಮ ಸಮಸ್ಯೆಗಳಿಗೆ ಪರಿಹಾರ ಲಭಿಸುತ್ತದೆ ಎಂದು ಹೇಳುತ್ತಾ ಸಂತೋಷಪಡುತ್ತಾರೆ. ನಾನು ಈ ಕ್ಷೇತ್ರಕಾರ್ಯಕ್ಕೆ ಹೋದಂತ ಸಂದರ್ಭದಲ್ಲಿ ಇಬ್ಬರು ಭಕ್ತರು ಈ ರೀತಿ ಕೆಲಸದಲ್ಲಿ ತೊಡಗಿದ್ದರು. ಅವರಲ್ಲಿ ನವಲಗುಂದದ ಶರಣಪ್ಪ ಎಂಬುವವರನ್ನು ನಾನು ಈ ರೀತಿ ಕೇಳಿದೆ 'ಏನಪ್ಪ ...ಇದ್ನ ಸ್ವಚ್ಛಮಾಡ್ತಿರಲ್ಲ ಕೂಲಿ ಬಂದಿರೇನು ಅಂದೆ. ಅದಕ್ಕೆ ಶರಣಪ್ಪ ಹೀಗೆ ಹೇಳಿದ, 'ಇಲ್ಲರಿ ಸರ್ ನಾವು ದೇವ್ರ ಭಕ್ತರು ಮತ್ತೆ, ಇದು ನಮ್ಮನೆ ದೇವ್ರ ಐತಿರಿ; ಎಷ್ಟೋ ದಿನ ನಮ್ಗೆ ಗೊತ್ತಿರಲಿಲ್ಲರಿ; ನಮ್ಮ ಅವ್ವಗ ಆರಾಮ ಇರಲಿಲ್ಲರಿ; ಎಷ್ಟೋ ದವಾಖಾನೆಗೆ ತೋರಿಸಿದ್ರು ಹುಸ್ಯಾರಾಗಲಿಲ್ಲರಿ, ಮತ್ತೆ ಅವ್ರ ಇವ್ರ ಹತ್ರ ಕೇಳಿಸಿದವರಿ ಅವ್ರು ನಿಮ್ಗ ನಿಮ್ಮನೆ ದೇವ್ರ ಕಾಡಾಟ ಐತಿ ಅನ್ಸುತ್ತೆ ನೀವೋಗಿ ಒಂದಿಷ್ಟು ದಿನ ದೇವ್ರ ಸೇವಾ ಮಾಡ್ರಿ ಆರಾಮಾಕ್ಕಿರಿ ಅಂದ್ರು ಅದಕ ಬಂದಿನಿರಿ.. ನಾ ಬಂದು ತಿಂಗಳಾಯಿತ್ರಿ, ನಾನ್ ಹ್ಯಾಂಗೆಂಗ್ ಸೇವಾ ಮಾಡ್ತ ಬಂದಿನ್ರಿ ಹಂಗಾಂಗ್ ನಮ್ಮವ್ವ ಆರಾಮಾಗಕತ್ಯಾಳ್ಳರ್ರಿ' ಎಂದು ಹೇಳಿ ಮತ್ತೆ ಸೇವೆಯಲ್ಲಿ ತೊಡಗಿದ. ನಾನು ಎರಡನೇ ವ್ಯಕ್ತಿಯನ್ನು ಕೇಳಿದಾಗ 'ಸರ್ ನಾನು ಬಾಗಲ ಕೋಟೆಯ ಈರಪ್ಪ, ನಾನೂ ದೇವ್ರ ಸೇವಾ ಮಾಡಾಕ ಬಂದಿನ್ರಿ, ಯಾಕಂದ್ರ ನನ್ನ ಲಗ್ನಾಗಿ ಹದಿನೈದು ವರ್ಷ ಆಗ್ಯಾತ್ರಿ ನನ್ಗ ಮಕ್ಕಳಾಗವಲ್ರಿ ಅಲ್ಲಿ ಇಲ್ಲಿ ಕೇಳಿದ್ರಿ ಈ ಅಜ್ಜನ ಹೆಸ್ರು ಹೇಳಿದ್ರು ಮತ್ತೆ ಆತನ ಸೇವಾ ಮಾಡಬೇಕು ಅಂದ್ರು ಅದಕ ಬಂದಿನ್ರಿ' ಅಂತ ಹೇಳಿದ. ಇದರಿಂದ ಈ ಜಾತ್ರೆಯಲ್ಲಿ ಸೇವಾ ಮಾಡುವಂತವರು ಬಹುಪಾಲು ಜನರು ಬೇಡಿಕೆ ಇಟ್ಟುಕೊಂಡು ಬಂದ ಭಕ್ತರೆ ಹೆಚ್ಚಾಗಿದ್ದು ತಿಳಿದು ಬರುತ್ತದೆ.

೨.೧೧. ನುಡಿ ಮಂಟಪ : (Nudie Pavilion)

ಚಂದಾಲಿಂಗೇಶ್ವರನ ಸುಗ್ಗಿ ಜಾತ್ರೆಯು ದಸರಾ ಹಬ್ಬದ ಮೂರನೇ ದಿನಕ್ಕೆ ಪ್ರಾರಂಭವಾಗುತ್ತದೆ. ಈ ಜಾತ್ರೆಯ ಅವಧಿಯಲ್ಲಿಯೂ ನುಡಿಹೇಳುವ ಕಾರ್ಯಕ್ರಮ ಜರುಗುತ್ತದೆ. ಅದು ಈ ಮಂಟಪದಲ್ಲಿ ನಡೆಯುತ್ತದೆ. ಆದ್ದರಿಂದ ಇದಕ್ಕೆ ನುಡಿ ಮಂಟಪ ಎಂದು ಕರೆಯುವುದು

ಜೀರ್ಣೋದ್ಧಾರಗೊಂಡಿದೆ. ಈ ಮಂಟಪ ಮುಖ್ಯ ಗುಡಿಯಿಂದ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿದೆ. ಈ ಗುಡಿಯಿಂದ ಉತ್ತರ ದಿಕ್ಕಿಗೆ ಅಂದರೆ ಜೀಳಿಗಿ ಗ್ರಾಮಕ್ಕೆ ಹೋಗಲು ಇರುವಂತಹ ಕಾಲುದಾರಿಯನ್ನು ಹಿಡಿದುಕೊಂಡು ಹೋದರೆ ಈ ಮಂಟಪ ಗೋಚರವಾಗುತ್ತದೆ. ಇದೇ ಮಂಟಪದಲ್ಲಿ ಕಾರಣಿಕ ನುಡಿಯುವ ಪ್ರಕ್ರಿಯೆ ಜರುಗುತ್ತದೆ. ಈ ಮಂಟಪ ಚಿಕ್ಕದಾದ ಬಯಲು ಮಂಟಪವಾಗಿರುತ್ತದೆ. ಈ ಮಂಟಪದ ಕಟ್ಟೆ ಹತ್ತು ಅಡಿ ಉದ್ದ ಹತ್ತು ಅಡಿ ಅಗಲವಿದ್ದು ಈ ಕಟ್ಟೆಯ ಮೇಲೆ ಮಂಟಪ ನಿರ್ಮಿಸಲಾಗಿದೆ. ನಾಲ್ಕು ಕಂಬಗಳಿಂದ ಕೂಡಿದ್ದು, ಇದರ ಮೇಲ್ಛಾವಣೆಯು ಶಿಖರದಾಕಾರದಲ್ಲಿದೆ. ಮಂಟಪದ ಮಧ್ಯ ಸುಮಾರು ಮೂರು ಅಡಿಯ ಎತ್ತರದ ಬಸವಣ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಮೂರ್ತಿ ನಿರ್ಜನವಾದ ಬಯಲು ಪ್ರದೇಶದಲ್ಲಿ ಇರುವುದರಿಂದ ಭಕ್ತರು ಇದಕ್ಕೆ ಬಯಲು ಬಸವಣ್ಣನ ಮಂಟಪ, ಎಂದು ಕರೆಯುವುದು ವಾಡಿಕೆಯಿದೆ.

ಪೂರ್ವದಲ್ಲಿ ನಿರ್ಮಿಸಿದ ಮಂಟಪ ಹಾಗೂ ಬಸವಣ್ಣನ ವಿಗ್ರಹಗಳು ಭಗ್ನಗೊಂಡಿವೆ. ಅದನ್ನು ತೆರವುಗೊಳಿಸಿ ದೇವಸ್ಥಾನದ ಕಮಿಟಿಯವರು ನವೀನ ಮಂಟಪವನ್ನು ಹಾಗೂ ಬಸವಣ್ಣನ ವಿಗ್ರಹವನ್ನು ಪೂರ್ವದಲ್ಲಿದ್ದಂತಹ ಶೈಲಿಯಲ್ಲೇ ನಿರ್ಮಿಸಿದ್ದಾರೆ. ಪೂರ್ವದಲ್ಲಿದ್ದ ಮಂಟಪ ಹಾಗೂ ಬಸವಣ್ಣನ ಕೆತ್ತನೆಗೆ ಬಳಸಿದ ಮಸಗಲ್ಲ (ಇಟ್ಟಿಗೆಗಲ್ಲ)ನ್ನೇ ಆಧುನಿಕವಾಗಿ ಬಳಸಿಕೊಂಡು ಮಂಟಪ ಹಾಗೂ ಬಸವಣ್ಣನ ವಿಗ್ರಹ ಪ್ರತಿಷ್ಠಾಪಿಸಿದ್ದಾರೆ. ಇವತ್ತು ಕೂಡ ಈ ಭಾಗಕ್ಕೆ ಬಂದು ವೀಕ್ಷಣೆ ಮಾಡಿದರೆ ಪೂರ್ವದಲ್ಲಿ ಇದ್ದಂತಹ ಬಸವಣ್ಣನ ವಿಗ್ರಹ ಹಾಗೂ ಮಂಟಪದ ಭಗ್ನಗೊಂಡ ಅವಶೇಷಗಳು ಕಾಣುತ್ತವೆ. ಇದೇ ಮಂಟಪದ ಮುಂಭಾಗದಲ್ಲಿ ಚಂದಾಲಿಂಗೇಶ್ವರನ ಚರಿತ್ರೆಯಲ್ಲಿ ವಿಶೇಷವಾಗಿ ಐತಿಹ್ಯವಾಗಿ ಉಳಿದಿರುವ ಚಂದಾಲಿಂಗಪ್ಪನ ಸಾಕುಮಗನಾದ ಹುಲ್ಲೇಶ್ವರನ ಪಾದಗಳಿವೆ. ನಾನು ಕ್ಷೇತ್ರಕಾರ್ಯಕ್ಕೆ ಹೋದಂತಹ ಸಮಯದಲ್ಲಿ ಭಕ್ತ ಜನರು ಈ ಪಾದಗಳ ಪರಿಚಯವನ್ನು ತಿಳಿಸಿದರು. ಭಕ್ತ ಜನರು ಹೇಳುವಂತೆ 'ಇಲ್ಲಿ ಅದಾವಲ್ರಿ ಪಾದಗಳು ಹುಲ್ಲಪ್ಪನವ್ರರಿ, ಹುಲ್ಲಪ್ಪ ಆಕಳನ ಪಾಲುಹಾಕಿದ್ರಿಂದ, ಅವರಪ್ಪ ಬಡಿಯಾಕಂತ ಬೆನ್ನತ್ತಿ ಬಂದಾಗ, ಹುಲ್ಲಪ್ಪನು ಓಡಿಹೋಗುವಾಗ ಆತ್ನ ಕಾಲಿಗೆ ಕಾರಿಮುಳ್ಳು ನೆಟ್ಟಂತ್ರಿ ಆಗ ಆತನ ಕಾಲಾಗ ರಗುತ ದಳದಳಾಂತ ಬಂತಂತರಿ, ಈಗಲೂ ಈ ಪಾದಗಳ ಮ್ಯಾಲೆ ನೀರು ಹಾಕಿದ್ರ ರಗುತ ಹರದಂಗ ಹರಿತೈತಿ' ಎಂದು ತಿಳಿಸಿದರು. ಜಾತ್ರೆಯ ಸಮಯದಲ್ಲಿ ಈ ಮಂಟಪದ ಸಂಪೂರ್ಣ ಭಾಗಕ್ಕೆ ಸುಣ್ಣವನ್ನು ಬಳಿದಿರುತ್ತಾರೆ. ಹಾಸು ಬಂಡೆಗಲ್ಲಿನ ಮೇಲೆ ನಿರ್ಮಿಸಿರುವುದು ಕಂಡುಬರುತ್ತದೆ. ಇದರ ಎಡಭಾಗದಲ್ಲಿ ಪೂರ್ವದಲ್ಲಿ ರಚನೆಯಾಗಿದ್ದ ಮಂಟಪವು ಇವತ್ತು ಪಾಳುಬಿದ್ದಿರುವ ಸ್ಥಿತಿಯಲ್ಲಿದೆ. ಈ ಮೊದಲಿನ ಮಂಟಪದ ಅವಶೇಷಗಳು ಚೆಲ್ಲಾಪಿಲ್ಲಿಯಾಗಿ ಚದುರಿಬಿದ್ದಿವೆ. ಆದರೆ ಮೂಲದ ಬಸವಣ್ಣನ ಮೂರ್ತಿ ಮಾತ್ರ ಅದೇ ಸ್ಥಾನದಲ್ಲಿದೆ. ಆದರೆ ಯಾವುದೇ ಆರಾಧನೆಗಳು ಆಗುತ್ತಿಲ್ಲ. ಇದರ ಕೆಲವು ಭಾಗಗಳು ವಿರೂಪಗೊಂಡಿರುವುದರಿಂದ

ಆರಾಧನೆಗೆ ಅರ್ಹವಾಗಿರುವುದಿಲ್ಲ. ಆಧುನಿಕವಾಗಿ ನಿರ್ಮಾಣವಾಗಿರುವ ಮಂಟಪದ ಕಟ್ಟೆಯ ಬಲಭಾಗದಲ್ಲಿ ಮತ್ತೊಂದು ಬಸವನಿರುವುದು ಕಂಡುಬರುತ್ತದೆ. ಇದೂ ಕೂಡ ಪೂಜೆಗೆ ಅನರ್ಹವಾಗಿದೆ. ಕಾರಣ ಇದನ್ನು ಆಧುನಿಕವಾಗಿ ಮಂಟಪವನ್ನು ಕಟ್ಟುವ ಸಮಯದಲ್ಲಿ ಇದೇ ಬಸವಣ್ಣನನ್ನು ಈ ಮಂಟಪದಲ್ಲಿ ಪ್ರತಿಷ್ಠಾಪಿಸಲು ತೀರ್ಮಾನಿಸಲಾಗಿತ್ತು. ಆದರೆ ದುರಾದೃಷ್ಟವಶಾತ್ ಗದ್ದುಗೆ ಆಸನ ಮಾಡುವ ಸಂದರ್ಭದಲ್ಲಿ ಕೊಂಚ ವಕ್ರ ಆಸನವಾಗಿ ಕಾಣುತ್ತಲಿತ್ತು. ಹಾಗೂ ಕೆತ್ತನೆಯು ದೋಷಪೂರಿತವಾಗಿತ್ತಂತೆ. ಆದ್ದರಿಂದ ಇದನ್ನು ಈ ಮಂಟಪದಲ್ಲಿ ಪ್ರತಿಷ್ಠಾಪಿಸದೇ ಮತ್ತೊಂದು ಬಸವಣ್ಣನ ಆಕೃತಿಯನ್ನು ಕೆತ್ತಿಸಿ ಕೂಲಂಕುಷವಾಗಿ ನೋಡಿ ಸ್ಥಾಪಿಸಲು ಯೋಗ್ಯವೆಂದು ತಿಳಿದ ಮೇಲೆ ಮಂಟಪದಲ್ಲಿ ಪ್ರತಿಷ್ಠಾಪಿಸಿದರು. ಆದರೆ ಈಗಾಗಲೆ ತಂದಿರುವ ಬಸವಣ್ಣನನ್ನು ಮಂಟಪದ ಹೊರ ಬಲಭಾಗದ ಕಟ್ಟೆಯಲ್ಲಿ ಇಡಲಾಯಿತು ಎಂದು ದೇವಸ್ಥಾನದ ಹಿರಿಯ ಭಕ್ತರು ತಿಳಿಸಿದರು.

ಚಂದಾಲಿಂಗೇಶ್ವರನ ವ್ಯಾಪ್ತಿ ಪ್ರದೇಶದಲ್ಲಿ ಮಂಟಪಗಳು ಸುಮಾರು ಐವತ್ತು ಕಂಡುಬರುತ್ತವೆ ಎಂದು ಹಿರಿಯ ಭಕ್ತರಾದ ಮನ್ನೆರಾಳದ ಚಂದನಗೌಡ ಶೆಬ್ಬಿಯವರು ತಿಳಿಸುತ್ತಾರೆ. ಸ್ವತಃ ನಾನೇ ಕ್ಷೇತ್ರಕಾರ್ಯಕ್ಕೆ ಹೋದಂತಹ ಸಂದರ್ಭದಲ್ಲಿ ಕುರಿಗಾಹಿಗಳು ಹಾಗೂ ದನಗಾಹಿಗಳು ಭೇಟಿಯಾದರು. ಅವರು ಈ ಮಂಟಪಗಳಿಗೆ ಚಕ್ರ ಮಂಟಪ ಎಂಬುದಾಗಿ ಕರೆಯುತ್ತಾರೆ ಎಂದು ತಿಳಿಸಿದರು. ಈ ವ್ಯಾಪ್ತಿ ಪ್ರದೇಶದಲ್ಲಿ ಕಂಡುಬರುವ ಈ ಚಕ್ರಮಂಟಪಗಳಲ್ಲಿ ಒಂದೊಂದು ಚಿಕ್ಕದಾದ ಬಸವಣ್ಣನ ವಿಗ್ರಹ ಹಾಗೂ ಒಂದೊಂದು ಈಶ್ವರಲಿಂಗಗಳು ಕಂಡುಬರುತ್ತವೆ. ಇವತ್ತು ಈ ಚಕ್ರ ಮಂಟಪಗಳು ಹೆಚ್ಚಿನ ಪ್ರಮಾಣದಲ್ಲಿ ಅವಸಾನದ ಅಂಚಿನತ್ತ ಸಾಗುತ್ತಿವೆ. ಮುಖ್ಯ ಗುಡಿಯ ಅಕ್ಕ-ಪಕ್ಕ ಸಮೀಪದಲ್ಲಿರುವಂತಹ ಕೆಲವೊಂದು ಮಂಟಪಗಳು ಅದರಲ್ಲೂ ಆಚರಣೆಗೆ ಅವಶ್ಯಕವೆನ್ನುವಂತ ಮಂಟಪಗಳು ಸುಧಾರಣೆಯ ಸ್ಥಿತಿಯಲ್ಲಿವೆ. ಇನ್ನೂ ಕೆಲವು ಗುಡಿಯಿಂದ ದೂರವಿರುವುದರಿಂದ ಭಕ್ತರ ಹಾಗೂ ಆಡಳಿತ ಕಮಿಟಿಯವರ ನಿರ್ಲಕ್ಷ್ಯದಿಂದ ಶಿಥಿಲಾವಸ್ಥೆಯಲ್ಲಿವೆ.

ಮಂಟಪಗಳು ನೋಡುವುದಕ್ಕೆ ಚಿಕ್ಕದಾಗಿ ವೃತ್ತಾಕಾರವಾಗಿ ಚಕ್ರದಂತೆ ಕಾಣುವುದರಿಂದ ಭಕ್ತರು ಇವುಗಳಿಗೆ ಚಕ್ರಮಂಟಪ ಎಂದು ಕರೆದಿರಬಹುದೆಂದು ಊಹಿಸಬಹುದು. ಪ್ರತಿಯೊಂದು ಚಕ್ರಮಂಟಪವನ್ನು ನೋಡಿದಾಗ ಪೂರ್ವದಲ್ಲಿ ಇವುಗಳಿಗೆ ಆರಾಧನೆಯ ಆಧ್ಯಸ್ಥಾನವಿತ್ತೆಂದು ಹೇಳಬಹುದು. ಇವತ್ತಿನ ದಿನದಲ್ಲಿ ಮಂಟಪಗಳ ಬಗ್ಗೆ ಸರಿಯಾದ ಜ್ಞಾನ, ಅರಿವು ಇಲ್ಲದೇ ಇರುವುದರಿಂದ ನಶಿಸುವ ಹಂತಕ್ಕೆ ಬಂದಿವೆ ಎಂದರೆ ತಪ್ಪಾಗಲಾರದು.

೨.೧೨. ಕೆಸರಿಲ್ಲದ ಕೋಟೆ : (Muddyless Fort)

"ಕೋಟೆ ಎಂದರೆ ಆವರಣವುಳ್ಳ ಪ್ರದೇಶ ಎಂದರ್ಥ. ಕೋಟೆ ಅಥವಾ ರಕ್ಷಾವರಣ. ಇದನ್ನು ಸಂಸ್ಕೃತದಲ್ಲಿ ದುರ್ಗ ಎಂದು ಕರೆಯಲಾಗಿದೆ. ಕೋಟೆಗಳಲ್ಲಿ ಜಲದುರ್ಗ, ವನದುರ್ಗ, ಗಿರಿದುರ್ಗ, ಸ್ಥಲದುರ್ಗ," ಎಂಬ ಇತ್ಯಾದಿ ಕೋಟೆಗಳಿವೆ. ಇಂತಹ ಕೋಟೆಗಳಲ್ಲಿ ಚಂದ್ರಗಿರಿಯು

ಗಿರಿದುರ್ಗ ಹಾಗೂ ಸ್ಥಲದುರ್ಗ ಕೋಟೆಯನ್ನು ಹೊಂದಿರುತ್ತದೆ. ಈ ಕೋಟೆ ವಿಶೇಷತೆಯಿಂದ ಕೂಡಿದೆ. ಅದೇನೆಂದರೆ ಕೆಸರಿಲ್ಲದ ಕೋಟೆಗೋಡೆಗಳು ನಿರ್ಮಾಣವಾಗಿವೆ. ಮುಖ್ಯ ಗುಡಿಯ ಆವರಣವನ್ನೊಳಗೊಂಡಂತೆ ಸ್ಥಲದುರ್ಗದ ರೀತಿಯಲ್ಲಿ ರಚನೆಯಾಗಿದೆ. ಈ ಮುಖ್ಯ ಗುಡಿಯ ಮುಖ್ಯ ದೇವಾಲಯದ ಕೋಟೆಗೋಡೆಯು ಸುಮಾರು ಐವತ್ತರಿಂದ ಅರವತ್ತು ಮೀಟರ್ ಅಗಲವನ್ನು ಹೊಂದಿದೆ. ಈ ಕೋಟೆಗೋಡೆಯು ಸುಮಾರು ನೂರೈವತ್ತು ಮೀಟರ್ ಉದ್ದ ಹಾಗೂ ಐವತ್ತರಿಂದ ಅರವತ್ತು ಮೀಟರ್ ಅಗಲವನ್ನು ಹೊಂದಿದೆ. ಈ ಕೋಟೆಗೋಡೆಯನ್ನು ಇಪ್ಪತ್ತು ಅಡಿ ಎತ್ತರವಾಗಿ ನಿರ್ಮಿಸಲಾಗಿದೆ. ಇದಕ್ಕೆ ಬಳಸಿರುವ ಕಲ್ಲುಗಳೆಂದರೆ ದೊಡ್ಡ ದೊಡ್ಡ ಗಾತ್ರದ ಕಂದು ಬಣ್ಣದ ಮಸಗಲ್ಲು(ಇಟ್ಟುಗಲ್ಲು)ಗಳಾಗಿವೆ. ನಾಲ್ಕೂ ಭಾಗಗಳು ಚೌಕಾಕಾರದ ಹಾಗೂ ಆಯತಾಕಾರದ ಕಲ್ಲುಗಳನ್ನು ಬಳಸಲಾಗಿದೆ. ಈ ಕೋಟೆಯ ನಿರ್ಮಾಣಕ್ಕೆ ಯಾವುದೇ ಸಿಮೆಂಟ್, ಗಚ್ಚು, ಮಣ್ಣನ್ನು, ಬಳಸದೇ ನಿರ್ಮಾಣ ಮಾಡಿರುವುದು ವಿಶೇಷವಾಗಿದೆ. ಮುಖ್ಯ ಗುಡಿಯ ಕೋಟೆಯ ಮುಂಭಾಗದ ಬಲಭಾಗದಲ್ಲಿ ಆಳವಾದ ತಗ್ಗು ಪ್ರದೇಶವನ್ನು ಹೊಂದಿದೆ.

ಗುಡಿಯ ಎಡಭಾಗದ ಕೋಟೆಗೋಡೆಯ ಒಳಭಾಗದಲ್ಲಿ, ವಿಶಾಲವಾದ ಮೆಟ್ಟಿಲುಗಳಿವೆ. ಇವು ಹೊಂಡಕ್ಕೆ ಹತ್ತುವುದಕ್ಕೆ ಇಳಿಯುವುದಕ್ಕೆ ಇರುವಂತೆ ರಚಿಸಿರುವಂತೆ ಈ ಗೋಡೆಗೆ ಅದೇ ರೀತಿ ಸಂಪೂರ್ಣವಾಗಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಕೋಟೆಗೋಡೆಗಳ ನಿರ್ಮಾಣದ ಹಂತವು ಬುಡದಲ್ಲಿ ನಾಲ್ಕು ಅಡಿ ಅಗಲವಾಗಿ ನಿರ್ಮಾಣ ಮಾಡುತ್ತಾ, ಮೇಲೆ ಬಂದಂತೆ ಅಂತರವನ್ನು ಕಡಿಮೆಗೊಳಿಸುತ್ತಾ ಬಂದಿದ್ದಾರೆ. ಕೋಟೆಯ ತಳಗೋಡೆಗೆ ಹೆಚ್ಚಿನ ಪ್ರಮಾಣದಲ್ಲಿ ಆಯತಾಕಾರ ಹೊಂದಿರುವ ಕಂಬಗಳ ರೀತಿಯಲ್ಲಿರುವ ಕಲ್ಲುಗಳನ್ನು ಅಳವಡಿಸಿದ್ದಾರೆ. ಕೊನೆಗೆ ಮುಕ್ತಾಯದ ಹಂತಕ್ಕೆ ಬಂದಾಗ ಉದ್ದವಾದ ಬಂಡೆಗಲ್ಲುಗಳನ್ನು ಎಳೆದು ಆ ಬಂಡೆಗಲ್ಲುಗಳ ಮೇಲೆ ದೊಡ್ಡ ಗಾತ್ರದ ಚೌಕಾಕಾರದ ಕಲ್ಲುಗಳನ್ನು ಅಳವಡಿಸಿ ಅದರ ಮೇಲೆ ಅರ್ಧಚಂದ್ರಾಕೃತಿಯಂತಿರುವ ಚಿತ್ರದ ಕಲ್ಲನ್ನು ಕೆತ್ತಿ ನಿಲ್ಲಿಸಿದ್ದಾರೆ. ಈ ಅರ್ಧ ಚಂದ್ರಾಕೃತಿಯಲ್ಲಿರುವ ಚಿತ್ರದಕಲ್ಲನ್ನು ಒಂದೇ ಕಲ್ಲಿನಲ್ಲಿ ಕೆತ್ತಿಸಿ ನಿಲ್ಲಿಸಿದ್ದಾರೆ. ಇಂತಹ ಅರ್ಧಚಂದ್ರಾಕೃತಿಯ ಕಲ್ಲುಗಳನ್ನು ಕೋಟೆಯ ಗೋಡೆಯ ಸುತ್ತಲೂ ಸಂಪೂರ್ಣವಾಗಿ ಅಳವಡಿಸಲಾಗಿದೆ.

ಕೋಟೆಯು ಎರಡುಭಾಗದಿಂದ ಕೂಡಿರುತ್ತದೆ. ಒಂದು ಭಾಗ ಮುಖ್ಯ ಗುಡಿಯನ್ನು ಒಳಗೊಂಡಿದೆ. ಇನ್ನೊಂದು ಭಾಗವು ಮುಖ್ಯ ಗುಡಿಯ ಹೊರ ಆವರಣವನ್ನೊಳಗೊಂಡಿದೆ. ಈ ಚಂದಾಲಿಂಗೇಶ್ವರ ಗುಡಿಯ ಸುತ್ತಲೂ ಆವರಿಸಿರುವ ಕೋಟೆಗೋಡೆಯು ಇಪ್ಪತ್ತು ಅಡಿ ಎತ್ತರದಲ್ಲಿ ನಿರ್ಮಿಸಲ್ಪಟ್ಟಿದೆ. ಈ ಕೋಟೆಗೋಡೆಯ ಕೊನೆಯ ಹಂತದ ಮೇಲ್ಭಾಗದಲ್ಲಿರುವ ಅರ್ಧಚಂದ್ರಾಕೃತಿಯ ಅಲಂಕಾರಿಕ ಕಲ್ಲಿನವರೆಗೂ ಯಾವುದೇ ಸಿಮೆಂಟು, ಮಣ್ಣನ್ನು, ಬಳಸದೇ ಆಯತಾಕಾರದ ಚೌಕಾಕಾರದ ಕಲ್ಲುಗಳನ್ನು ಬಳಸಿ ನಿರ್ಮಿಸಿದ್ದಾರೆ. ಆದರೆ ಈ ಗೋಡೆಯ ಮೇಲ್ಭಾಗದ ಕೊನೆಯ ಹಂತದಲ್ಲಿ ಅಳವಡಿಸಿರುವ ಅರ್ಧಚಂದ್ರಾಕೃತಿಯ ಕಲ್ಲುಗಳನ್ನು, ಗಚ್ಚನ್ನು

ಒಳಕೆ ಮಾಡಿಕೊಂಡು ಕಟ್ಟಿರುತ್ತಾರೆ. ಈ ಕೋಟೆಗೋಡೆಯ ಒಳ ಆವರಣದಲ್ಲಿ ಸಾಲು ಸಾಲಾಗಿ ಚಿಕ್ಕ ಚಿಕ್ಕ ದೇವರ ಕೋಣೆಗಳನ್ನು ನಿರ್ಮಿಸಲಾಗಿದೆ. ಪ್ರತಿಯೊಂದು ಕೋಣೆಯಲ್ಲೂ ಈಶ್ವರಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ಮುಖ್ಯ ಗುಡಿಯ ಕೋಟೆ ಆವರಣದೊಳಗೆ ಒಂದುನೂರಾ ಒಂದು ದೇವರುಗಳಿವೆಯೆಂದು ಪೂಜಾರಿಗಳು ತಿಳಿಸುತ್ತಾರೆ. ಪ್ರತೀ ವರ್ಷದ ಎರಡೂ ಜಾತ್ರೆಗಳಿಗೆ ಈ ಗುಡಿಯ ಕೋಟೆಯ ಒಳಗೋಡೆಗೆ ಸುಣ್ಣವನ್ನು ಬಳಿಯಲಾಗುತ್ತದೆ. ಗುಡಿಯು ಸುತ್ತುವರೆದ ಬೆಟ್ಟಗಳ ನಡುವೆ ತಗ್ಗು ಪ್ರದೇಶದಲ್ಲಿ ನಿರ್ಮಾಣವಾಗಿರುವುದರಿಂದ ಮಳೆಗಾಲದಲ್ಲಿ ಗುಡ್ಡದ ನೀರು ಹರಿದು ತಗ್ಗು ಪ್ರದೇಶಕ್ಕೆ ಬರುತ್ತದೆ. ಆದ್ದರಿಂದ ಈ ಗುಡಿಯ ರಕ್ಷಣೆಗಾಗಿಯೇ ಈ ಕೋಟೆಯನ್ನು ನಿರ್ಮಿಸಿದ್ದಾರೆ ಎಂದು ನಾವು ತಿಳಿಯಬಹುದು. ಈ ನೀರು ಕೋಟೆಗೋಡೆಯ ತಳಭಾಗದ ಮಧ್ಯದಲ್ಲಿ ಹರಿದು ಹೋಗುವಂತೆ ಇದನ್ನು ನಿರ್ಮಿಸಿದ್ದಾರೆ. ಈ ಗುಡಿಯ ಆವರಣದೊಳಗೆ ಬಿದ್ದಂತ ನೀರು ಹೊರಹೋಗಲು ಕೋಟೆಗೋಡೆಯ ಎಡಭಾಗದಲ್ಲಿ ಮಧ್ಯದ ಕೆಳಹಂತದಲ್ಲಿ ಮೂರು ಮಾರ್ಗಗಳನ್ನು ತೆರೆಯಲಾಗಿದೆ. ಈ ಮೂರು ಮಾರ್ಗಗಳನ್ನು ಒಂದರ ಪಕ್ಕದಲ್ಲೊಂದನ್ನು ನಿರ್ಮಿಸಲಾಗಿದೆ. ಇವುಗಳ ಗಾತ್ರ ನಾಲ್ಕು ಅಡಿ ಎತ್ತರ, ಮೂರು ಅಡಿ ಅಗಲ ಹೊಂದಿದೆ. ಕೋಟೆಯ ಹಿಂಭಾಗದ ಬಲಭಾಗದ ಮೂಲೆಯಲ್ಲಿ ಒಳಹೊರ ಹೋಗಲು ಬಾಗಿಲನ್ನು ತೆರೆಯಲಾಗಿದೆ. ಇದು ಕೋಟೆಯ ದ್ವಾರ ಬಾಗಿಲುಗಳಲ್ಲಿ ನಿರ್ಮಿಸಿರುವ ದಿಡ್ಡಿಬಾಗಿಲು ಮಾದರಿಯಲ್ಲಿದೆ. ಈ ಬಾಗಿಲಿನ ಅಳತೆ ಐದು ಅಡಿ ಎತ್ತರ, ಮೂರು ಅಡಿ ಅಗಲ ಹೊಂದಿದೆ. ಇದಕ್ಕೆ ಯಾವುದೇ ಕಟ್ಟೆಗೆಯನ್ನು ಬಳಸದೇ ಕಲ್ಲಿನ ಗೋಡೆಯಲ್ಲಿ ನಿರ್ಮಿಸಲಾಗಿದೆ. ಬಾಗಿಲು ಮುಚ್ಚುವುದಕ್ಕೆ ಕದವನ್ನು ಅಳವಡಿಸಿರುವಂತೆ ಗೋಚರಿಸುತ್ತಿಲ್ಲ, ಅಂತಹ ಗುರುತುಗಳೂ ಕೂಡ ಇಲ್ಲದಾಗಿದೆ.

ಮುಖ್ಯ ಗುಡಿಯ ಆವರಣದ ಬಲಭಾಗದ ಕೋಟೆಗೋಡೆಯ ಒಳಮೈಗೆ ಅಂಟಿಕೊಂಡಂತೆ ಸುಮಾರು ಇಪ್ಪತ್ನಾಲ್ಕು ಚಿಕ್ಕದಾದ ಗುಡಿಗಳಿವೆ. ಇವುಗಳಲ್ಲಿ ಆರು ಗುಡಿಗಳಲ್ಲಿ ವಿರೂಪಗೊಂಡ ಬಸವಣ್ಣನ ವಿಗ್ರಹಗಳಿವೆ. ಒಂದು ಗುಡಿಯಲ್ಲಿ ಹೆಗ್ಗಡೆ ಪ್ರಧಾನಿಯ ಮೂರ್ತಿ ಇದೆ. ಎಲ್ಲಾ ಗುಡಿಗಳಿಗಿಂತ ಇದು ಸ್ವಲ್ಪ ಬಿನ್ನತೆ ಹೊಂದಿದೆ. ಅದು ಹೇಗೆಂದರೆ ಇದರ ಮುಂಭಾಗದಲ್ಲಿ ಮಧ್ಯಮ ಗಾತ್ರದ ಮಂಟಪವನ್ನು ಹೊಂದಿದೆ. ಇಷ್ಟೇ ಅಲ್ಲದೆ ವಿಶೇಷತೆಯಿಂದ ಕೂಡಿರುತ್ತದೆ. ವರ್ಷದ ಎರಡೂ ಜಾತ್ರೆಗಳ ಸಂದರ್ಭದಲ್ಲಿ ಮಳ್ಳಯ್ಯಜ್ಜ ಹಾಗೂ ವಗ್ಗರಿಗೆ ತಂಗುವ ತಾಣವಾಗಿದೆ. ಇನ್ನುಳಿದ ಹದಿನೇಳು (೧೭) ಗುಡಿಗಳಲ್ಲಿ ವಿಭಿನ್ನ ರೀತಿಯ ಈಶ್ವರಲಿಂಗದ ವಿಗ್ರಹಗಳಿವೆ. ಈ ಕೋಟೆಯ ಹಿಂಭಾಗದ ಒಳಮೈ ಗೋಡೆಗೆ ಅಂಟಿಕೊಂಡಿರುವ ಕಾಲಕಾಲೇಶ್ವರ ದೇವಾಲಯ ಮತ್ತು ದೇವಸ್ಥಾನದ ಆಡಳಿತ ಕಛೇರಿ, ದಾಸ್ತಾನು ಕೊಠಡಿಗಳು, ಸಂಗಮೇಶ್ವರ ಗುಡಿ, ಜಾತ್ರೆಯ ಸಮಯದಲ್ಲಿ ಅಡಿಗೆ ತಯಾರಿಸುವ ಕೊಠಡಿಯನ್ನು ನಿರ್ಮಿಸಲಾಗಿದೆ. ಆದರೆ ಈ ದಾಸ್ತಾನು ಕೊಠಡಿ, ಆಡಳಿತ ಕಛೇರಿ ಕೊಠಡಿಗಳನ್ನು ಇತ್ತೀಚೆಗೆ ನಿರ್ಮಾಣ ಮಾಡಲಾಗಿದೆ.

ಕೋಟೆಯ ಎಡಭಾಗದ ಗೋಡೆಯ ಒಳಭಾಗಕ್ಕೆ ಅಂಟಿಕೊಂಡಂತಹ ದುರ್ಗಾದೇವಿಯ ಗುಡಿಯನ್ನು ನಿರ್ಮಿಸಿದ್ದಾರೆ. ಕೋಟೆಯ ಮುಂಭಾಗದ ಬಲಗಡೆಯ ಒಳಮೈಯಲ್ಲಿ ಸಂಪೂರ್ಣವಾಗಿ ಹಂತ ಹಂತವಾದ ಮೆಟ್ಟಿಲುಗಳನ್ನು ರಚಿಸಿದ್ದಾರೆ. ಒಟ್ಟಾರೆ ಈ ಕ್ಷೇತ್ರಕ್ಕೆ ಬಂದ ಭಕ್ತರು ಎಲ್ಲಾ ದೇವರುಗಳ ದರ್ಶನ ಪಡೆಯುವಂತಾಗಬೇಕೆಂದು ಈ ಮುಖ್ಯ ಗುಡಿಯ ಆವರಣದಲ್ಲಿ ಗುಡಿಗಳ ಸಂಕೀರ್ಣವನ್ನೇ ಸ್ಥಾಪಿಸಿದ್ದಾರೆ. ಅಂತಹ ದೇವರುಗಳಾದ ಮುಖ್ಯದೇವರುಗಳನ್ನು ಒಳಗೊಂಡಂತೆ, ಹುಲ್ಲೇಶ್ವರ, ಹೆಗ್ಗಡ ಪ್ರಧಾನಿ, ಬಸವೇಶ್ವರ ಮಂಟಪ, ಕಾಲಕಾಲೇಶ್ವರ, ಗಂಗಿಮಾಳಮ್ಮ, ಸಂಗಮೇಶ್ವರ, ದುರ್ಗಾದೇವಿ, ತುಪ್ಪದಮಾಳಮ್ಮ, ಪಂಚಪೀಠಾಧಿಪತಿಗಳಾದ ಕಾಶಿವಿಶ್ವನಾಥ, ಶ್ರೀಶೈಲಮಲ್ಲಿಕಾರ್ಜುನ, ಶ್ರೀಉಜ್ಜೈನಿಲಿಂಗ, ಶ್ರೀಕೇದಾರ ಸೋಮೇಶ್ವರ, ರಂಭಾಪುರ ವೀರ ಸೋಮೇಶ್ವರ, ಇವರಲ್ಲದೆ ಭರಮದೇವರಲಿಂಗ, ಹಂಪಿ ವಿರುಪಾಕ್ಷೇಶ್ವರ, ಮುದ್ದಮ್ಮತಾಯಿ, ಈ ಗುಡಿಗಳೆಲ್ಲ ಕೋಟೆಯ ಒಂದು ಭಾಗದಲ್ಲಿ ನೆಲೆಸಿವೆ.

ಕೋಟೆಯ ಇನ್ನೊಂದು ಭಾಗವನ್ನು ನೋಡಿದಾಗ, ಅಂದರೆ ಸಂಪೂರ್ಣವಾಗಿ ರಚಿತವಾಗಿರುವುದು ಒಂದೇ ಕೋಟೆ. ಆದರೆ ಮುಖ್ಯ ಗುಡಿಯ ಆವರಣಕ್ಕೆ ಒಂದು ಭಾಗದ ರೀತಿಯಲ್ಲಿ ಮಾಡಿಕೊಂಡಿದ್ದಾರೆ. ಅದು ಹೇಗೆಂದರೆ ಮುಖ್ಯ ಗುಡಿಯ ಆವರಣದ ಒಳಗಡೆ ಬರುವುದಕ್ಕೆ ದ್ವಾರಬಾಗಿಲನ್ನು ಮಾಡಲಾಗಿದೆ. ನೇರವಾಗಿ ನಿರ್ಮಾಣವಾಗಿರುವ ಈ ಆಯತಾಕಾರದ ಕೋಟೆಗೆ ಮಧ್ಯ ಎರಡು ಬದಿಗೆ ಕೋಟೆಗೋಡೆ ಕಟ್ಟಿಕೊಂಡು ಪ್ರವೇಶದ್ವಾರವನ್ನು ಮಾಡಿಕೊಂಡಿರುವುದರಿಂದ ಎರಡೂ ಭಾಗವಾಗಿ ಕಾಣುತ್ತದೆ. ಮುಖ್ಯ ಗುಡಿಯಿಂದ ಇಡಿ ಕೋಟೆಯ ಮುಖ್ಯದ್ವಾರಕ್ಕೆ ಸುಮಾರು ಒಂದು ನೂರು ಮೀಟರ್ ಅಂತರದ ಕೋಟೆಯಾಗಿದೆ. ಈ ಭಾಗವೇ ನಿಜವಾಗಿಯೂ ಕೆಸರಿಲ್ಲದ ಕೋಟೆಯೆಂದರೆ ಅರ್ಥಪೂರ್ಣವಾಗುತ್ತದೆ. ಈ ಎರಡನೆ ಭಾಗದ ಕೋಟೆಯಲ್ಲಿ ಎಲ್ಲಿಯೂ ಕೆಸರು, ಮಣ್ಣು, ಸಿಮೆಂಟ್, ಗಾರೆ ಮುಂತಾದ ಯಾವುದೇ ಬಿಗಿಹಿಡಿಯುವ ವಸ್ತುಗಳನ್ನು ಬಳಸಿಕೊಂಡು ಈ ಕೋಟೆಯನ್ನು ನಿರ್ಮಿಸಿಲ್ಲ, ಅದು ಇಲ್ಲಿ ವಿಶೇಷವಾಗಿದೆ. ಇದರ ಒಳ ಆವರಣದಲ್ಲಿ ಮುಖ್ಯ ದ್ವಾರದಿಂದ ಅನತಿ ದೂರದಲ್ಲಿ ಬಂದಾಗ ಮಾರ್ಗಮಧ್ಯದಲ್ಲಿ ಭೂಮಿಯಲ್ಲಿ ನಡುಹಾಕಿರುವ ಎರಡು ಕಲ್ಲುಗಳು ಗೋಚರಿಸುತ್ತವೆ. ಅವು ಸರಪಳಿ ಪವಾಡ ಮಾಡುವಂತಹ ಕಲ್ಲುಗಳಾಗಿವೆ. ಮುಖ್ಯ ದ್ವಾರದ ಬಲಭಾಗದ ಒಳಗಡೆ ಹುಣಸೇಮರ, ನಿಲಗಿರಿಮರಗಳು ಬೆಳದಿವೆ. ಕೋಟೆಯ ಬಲಭಾಗದ ಗೋಡೆಗೆ ಹೊಂದಿಕೊಂಡಂತೆ ಕುಡಿಯುವ ನೀರಿನ ಟ್ಯಾಂಕರ್‌ಗಳನ್ನು ಅಳವಡಿಸಲಾಗಿದೆ. ಇದೇ ಭಾಗದಲ್ಲಿ ಬೇವಿನ ಮರದ ಕೆಳಗೆ ಆಧುನಿಕವಾಗಿ ನಿರ್ಮಾಣವಾಗಿರುವ ಏಳುಹೆಡೆ ನಾಗಪ್ಪನ ಗುಡಿ ಇದೆ. ಈ ಗುಡಿಯನ್ನು ಜಾತ್ರೆಯ ಸಂದರ್ಭದಲ್ಲಿ ಯಾತ್ರಿಕರು ತಂಗುದಾಣವಾಗಿ ಬಳಸುವರು. ಈ ಗುಡಿಯನ್ನು ಆಧುನಿಕವಾಗಿ ನಿರ್ಮಿಸಿದ್ದರೂ ಕೂಡ ಸಂಪೂರ್ಣವಾಗಿ ಮಸಗಲ್ಲಿನಲ್ಲಿ ನಿರ್ಮಿಸಿದ್ದಾರೆ. ಹಾಗೆ ಮುಂದುವರೆದು ಇದೇ ಭಾಗದಲ್ಲಿ ಸರ್ಕಾರದಿಂದ ನಿರ್ಮಾಣಗೊಂಡ ಕಲ್ಯಾಣ ಮಂಟಪವಿದೆ.

ಕೋಟೆಯ ಭಾಗಕ್ಕೆ ಸಂಬಂಧಿಸಿದಂತೆ ಕೊನೆಯ ಕಟ್ಟಡವಾಗಿದೆ. ಇದರ ಮುಂಭಾಗದಲ್ಲಿರುವುದೇ ಮುಖ್ಯ ಗುಡಿಯ ಕೋಟೆಗೋಡೆ.

ಕೋಟೆಯ ಎಡಭಾಗದ ಗೋಡೆಯು ಭಾಗಶಃ ಪಾಳು ಬಿದ್ದಿದೆ. ಈ ಗೋಡೆಯೊಳಗೆ ಹೊಂದಿಕೊಂಡಿರುವಂತೆ ಶಂಕರಲಿಂಗ ಗುಡಿಯನ್ನು ನಿರ್ಮಿಸಿದ್ದಾರೆ. ಈ ಶಂಕರಲಿಂಗ ಗುಡಿಯನ್ನು ದಾಟಿ ಮುಂದೆ ಹೋದಂತೆ ಗೋಡೆ ಭಾಗಶಃ ಪಾಳು ಬಿದ್ದಿದೆ. ಮುಖ್ಯ ಗುಡಿಯ ಕೋಟೆಗೋಡೆಯವರೆಗೆ ಬಿದ್ದಿರುವುದು. ಇದೇ ಭಾಗದಲ್ಲಿ ಇತ್ತೀಚಿಗೆ ಗುಡಿಯ ಬಳಕೆಗೆ ಒಂದು ಕೊಠಡಿಯನ್ನು ನಿರ್ಮಿಸಿಕೊಂಡಿದ್ದಾರೆ. ಮುಖ್ಯದ್ವಾರದ ಎಡ-ಬಲ ಭಾಗದ ಗೋಡೆಗಳು ಒಳಮೈಯಲ್ಲಿ ನಾಶವಾಗುವಂತ ಸ್ಥಿತಿಯಲ್ಲಿವೆ. ಈ ಕೋಟೆಯ ಮುಖ್ಯ ದ್ವಾರಕ್ಕೆ ಅರವತ್ತು ಕಂಬದ ಅಗಸಿಬಾಗಿಲು ಅಥವಾ ಅರವಿನ ಮಂಟಪ ಎಂದು ಸ್ಥಳೀಯ ದೈವ ಭಕ್ತರು ತಿಳಿಯಪಡಿಸುತ್ತಾರೆ. ಒಟ್ಟಾರೆ ಈ ಕೋಟೆಯ ಎರಡನೆಯ ಭಾಗದ ಆವರಣದಲ್ಲಿ ಏಳು ಹೆಡೆ ನಾಗಪ್ಪನ ಗುಡಿ, ವೀರಭದ್ರ ದೇವರ ಗುಡಿ, ಶಂಕರಲಿಂಗ ಗುಡಿ ಕಂಡುಬರುತ್ತದೆ. ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಕೋಟೆಯ ಒಳ ಆವರಣ ನೋಡಿದಾಗ ಮುಖ್ಯದ್ವಾರ ಬಾಗಿಲಿಂದ ಒಳಗಡೆ ಪ್ರವೇಶಿಸಿ ಹೋಗುವಾಗ, ಮಾರ್ಗದ ಎಡ ಮತ್ತು ಬಲಭಾಗದಲ್ಲಿ ಬುನಾದಿಗಳ ಅವಶೇಷಗಳು ಗೋಚರಿಸುತ್ತವೆ. ಅವು ಯಾವ ರೀತಿಯಲ್ಲಿ ಗೋಚರಿಸುತ್ತವೆ ಎಂದರೆ, ಹಂಪೆಯ ವಿರುಪಾಕ್ಷೇಶ್ವರ ದೇವಾಲಯಕ್ಕೆ ಹೋಗುವ ಮಾರ್ಗದ ಎಡ ಮತ್ತು ಬಲಭಾಗದಲ್ಲಿ ಸಾಲುಮಂಟಪಗಳ ಅವಶೇಷಗಳು, ಕಾಣುವಂತೆ ಇವು ಕಾಣಿಸುತ್ತವೆ. ಹಂಪೆಯಲ್ಲಿ ಆ ಸಾಲು ಮಂಟಪಗಳ ಅವಶೇಷಗಳು, ಸ್ಪಷ್ಟವಾಗಿ ಕಾಣಿಸುತ್ತವೆ. ಆದರೆ ಇಲ್ಲಿ ಅಲ್ಪಸ್ವಲ್ಪ ಅವಶೇಷಗಳು. ಕೇವಲ ಬುನಾದಿಗಳು ಸಾಲು ಸಾಲಾಗಿ ಗೋಚರಿಸುತ್ತವೆ. ಆದರೆ ಇಲ್ಲಿ ಮಂಟಪದ ಮುಂಚಾಚಿತ ಕುಳಿತುಕೊಳ್ಳುವ ಕಟ್ಟೆಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಇನ್ನುಳಿದ ಭಾಗಗಳು ಮಣ್ಣಿನಲ್ಲಿ ಹೂತು ಹೋಗಿವೆ. ಇಂತಹ ಅವಶೇಷಗಳು ಮುಖ್ಯದ್ವಾರದ ಬಾಗಿಲಿಂದ ಮುಖ್ಯ ಗುಡಿಯ ಮಾರ್ಗದವರೆಗೆ ಎಡ ಮತ್ತು ಬಲಭಾಗದಲ್ಲಿ ಸಿಗುತ್ತವೆ. ಇವುಗಳನ್ನು ನೋಡಿದರೆ ಬಹುಶಃ ಮಾರ್ಗದ ಆಚೆ ಈಚೆ ಎದರುಬದುರಿರುವ ಸಾಲು ಮಂಟಪಗಳು ಎಂದು ಗುರುತಿಸಬಹುದು.

ಕೋಟೆಯ ಮುಖ್ಯದ್ವಾರದ ಬಾಗಿಲು ಪ್ರವೇಶಿಸಿದ ನಂತರ ಒಳ ಆವರಣದಲ್ಲಿ ಸ್ವಲ್ಪ ಹಾಗೆ ಮುಂದೆ ಹೋದರೆ ಮತ್ತೊಂದು ದ್ವಾರಬಾಗಿಲಿನ ರೂಪದ ಕಮಾನು ಇತ್ತಂತೆ. ಆದರೆ ಅದು ೧೯೯೧ರಲ್ಲಿ ಬಿದ್ದುಹೋಗಿದೆ. ಇವತ್ತು ಅದೇ ಸ್ಥಳದಲ್ಲಿ ಅದರ ಪ್ರತಿರೂಪದಂತೆ ಸಿಮೆಂಟು, ಇಟ್ಟಿಗೆಯಲ್ಲಿ ಅಂತಹ ಕಮಾನು ನಿರ್ಮಿಸಿದ್ದಾರೆ. ಈ ಕಮಾನಿನ ಮುಂದೆ ಮುಖ್ಯ ಗುಡಿಗೆ ಹೋಗುವ ಮಾರ್ಗದ ಆಚೆ ಈಚೆ ತೆಂಗಿನ ಕಾಯಿ ಮಾರುವವರು, ಕುಂಕುಮ, ವಿಭೂತಿಮಾರಾಟಗಾರರು, ತಾಮ್ರ, ಕಂಚು, ಹಿತ್ತಳೆಯಿಂದ ಮಾಡಿದ ವಿಗ್ರಹಗಳು ಮತ್ತು

ಉಂಗುರಗಳು, ಸ್ಟೇಷನರಿ ಅಂಗಡಿಗಳು ವಿವಿಧ ದಿನಿಸಿಗಳನ್ನು ಮಾರುವ ವ್ಯಾಪಾರಸ್ಥರು ಟಿಕಾಣಿ ಹೂಡಿರುತ್ತಾರೆ. ಈ ಬಯಲು ಆವರಣದಲ್ಲಿ ವಿಶೇಷ ಕಾರ್ಯಕ್ರಮಗಳು, ಮದುವೆ, ಮುಂಜಿಗಳು, ರಸಮಂಜರಿ ಕಾರ್ಯಕ್ರಮಗಳು ಜರುಗುತ್ತವೆ.

ವಾಸ್ತವವಾಗಿ ಈ ಕೋಟೆಯ ಸಂಪೂರ್ಣ ಭಾಗವನ್ನು ವೀಕ್ಷಣೆ ಮಾಡಿದಾಗ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಯಾವುದೇ ರೀತಿಯ ಸಂರಕ್ಷಣಾ ಕಾರ್ಯ ಮಾಡುತ್ತಿಲ್ಲವೆಂಬುದು ಎದ್ದು ಕಾಣುತ್ತದೆ. ಯಾಕೆಂದರೆ ಕೋಟೆಯ ಮುಂಭಾಗ, ಮಧ್ಯಭಾಗ ಭಾಗಶಃ ಪಾಳುಬಿದ್ದಿದೆ. ಇನ್ನೂ ಕೆಲಭಾಗ ಶಿಥಿಲಾವಸ್ಥೆಯಲ್ಲಿದೆ. ಸರಕಾರದ ಪ್ರಾಚ್ಯಶಾಸ್ತ್ರ ಮತ್ತು ಪುರಾತತ್ವ ಇಲಾಖೆಯು ಎಚ್ಚೆತ್ತುಕೊಂಡು ಸಂರಕ್ಷಣೆ ಮಾಡುವ ಕಾರ್ಯ ಕೈಗೊಳ್ಳಬೇಕು. ಈ ಕ್ಷೇತ್ರ ಸಾಂಸ್ಕೃತಿಕ ಆಚರಣೆಯ ಕೇಂದ್ರವಾಗಿರುವುದರಿಂದ ರಾಜ್ಯದ ವಿವಿಧ ಮೂಲೆಯಿಂದ ಕಲೆಗಾರರು, ಸಂಪ್ರದಾಯಸ್ಥರು, ಸಾಂಸ್ಕೃತಿಕ, ಆಚರಣೆಯ ಸಮುದಾಯಗಳು ಸಾವಿರ–ಸಾವಿರ ಸಂಖ್ಯೆಯಲ್ಲಿ ಕಂಡುಬರುವುದರಿಂದ ಇದೊಂದು ಪ್ರವಾಸಿ ತಾಣವಾಗಿ ಮಾರ್ಪಾಡಾಗಬಹುದು. ಇದು ಇನ್ನೂ ವಿಶೇಷತೆಯಿಂದ ಕೂಡಿದೆ ಎಂದು ಈ ಕ್ಷೇತ್ರದ ಪರಮ ಭಕ್ತನಾದ ನಿಡುಗುಂದಿಯ ಶ್ರೀಕಳಕಪ್ಪ ಅರಮನೆಯವರು ಈ ರೀತಿ ಹೇಳುತ್ತಾರೆ 'ಈ ಪ್ರದೇಶದಲ್ಲಿ ಇರುವ ಹೆಸರಿಲ್ಲದ ಮರ, ಕೆಸರಿಲ್ಲದ ಕೋಟೆ, ಬಿಸಿಲು ಬೀಳದ ಬಾವಿ' ಈ ಭೂಮಂಡಲದಲ್ಲಿ ಎಲ್ಲಿಯೂ ಇಲ್ಲ ಎಂದು ಅಭಿಮಾನದಿಂದ ಹೇಳಿಕೊಂಡಿದ್ದಾರೆ.

೨.೧೩. ಶಂಕರಲಿಂಗನ ಗುಡಿ : (Shankarlinga's Cabian)

ಈ ಶಂಕರಲಿಂಗ ಗುಡಿಯು ಕೋಟೆಯ ಮುಖ್ಯದ್ವಾರದ ಬಾಗಿಲು ಪ್ರವೇಶಿಸಿದಾಗ ವಿಶಾಲವಾದ ಆವರಣ ಪ್ರದೇಶದಲ್ಲಿದೆ ಎಂದು ಗೋಚರಿಸುತ್ತದೆ. ಅದು ದಕ್ಷಿಣಕ್ಕೆ ಅಭಿಮುಖವಾಗಿ ಈ ಕೋಟೆಯ ಎಡಬಾಗದ ಗೋಡೆಯಲ್ಲಿ ನಿರ್ಮಿಸಿದ್ದಾರೆ. ನೋಡುವುದಕ್ಕೆ ಕೇವಲ ಕೋಟೆ ಗೋಡೆಯಂತೆ ಕಂಡರೂ ಸಹ ಒಳಭಾಗದಲ್ಲಿ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ. ಈ ದೇವಾಲಯದ ಬಲಭಾಗದ ಕೋಟೆಗೋಡೆ ಪಾಳುಬಿದ್ದಿದೆ. ಆದರೆ ಈ ದೇವಾಲಯದ ಭಾಗ ಭಾಗಶಃ ಸುವ್ಯವಸ್ಥೆಯಿಂದ ಕೂಡಿದೆ. ಪ್ರವೇಶದ್ವಾರದ ಮೇಲ್ಭಾಗದಲ್ಲಿ ಕಟ್ಟಡದ ಮೇಲ್ಛಾವಣಿ ಸ್ವಲ್ಪ ಶಿಥಿಲಾವಸ್ಥೆಯಲ್ಲಿದ್ದುದನ್ನು ಬಿಟ್ಟರೆ ಇನ್ನುಳಿದ ಭಾಗ ಭಾಗಶಃ ವ್ಯವಸ್ಥಿತವಾಗಿದೆ. ಪ್ರವೇಶದ್ವಾರವು ನಾಲ್ಕು ಅಡಿ ಅಗಲ, ಐದು ಅಡಿ ಎತ್ತರವನ್ನು ಹೊಂದಿದೆ. ಈ ಪ್ರವೇಶದ್ವಾರದ ಬಾಗಿಲನ್ನು ಎರಡು ಬಲಿಷ್ಠವಾದ ಕಂಬಗಳಿಂದ ನಿರ್ಮಿಸಿದ್ದಾರೆ. ಈ ದ್ವಾರದ ಮೇಲ್ಭಾಗಕ್ಕೆ ಉದ್ದವಾದ ಬಂಡೆಗಲ್ಲನ್ನು ಎಳೆದಿದ್ದಾರೆ. ಈ ಪ್ರವೇಶ ದ್ವಾರದ ಪ್ರಾರಂಭದಲ್ಲಿ ಒಂದು ಇಡಿಯಾದ ಕಲ್ಲಿನಲ್ಲಿ ಶಂಕರಲಿಂಗನ ಪಾದಗಳನ್ನು ಕೆತ್ತಿ ಇಡಲಾಗಿದೆ. ಈ ದೇವಾಲಯವು ಒಟ್ಟು ನಾಲ್ಕೂ ಭಾಗಗಳಿಂದ ಕೂಡಿದೆ. ಇದರ ಹಿಂಭಾಗವು ಗರ್ಭಗುಡಿಯಾಕಾರ ಹೊಂದಿದೆ. ಇದರ ವಿಸ್ತಾರ ಹತ್ತು ಅಡಿ ಅಗಲ, ಹತ್ತು ಅಡಿ ಉದ್ದ ಹೊಂದಿದೆ. ಇದರ ನಾಲ್ಕೂ ಮೂಲೆಗಳಿಗೆ ನಾಲ್ಕೂ ಗೋಡೆಕಂಬಗಳನ್ನು ಅಳವಡಿಸಲಾಗಿದೆ. ಇದರ ಬೆನ್ನು ಗೋಡೆಯ ಒಳಮೈಗೆ ಒಂದು ಜಗುಲಿಯಾಕಾರದ ಚಿಕ್ಕದಾದ

ಕಟ್ಟೆಯನ್ನು ಕಟ್ಟಿದ್ದಾರೆ. ಇದರ ಮೇಲೆ ದಕ್ಷಿಣಾಭಿಮುಖವಾಗಿ ಶಂಕರಲಿಂಗನ ವಿಗ್ರಹವನ್ನು ಸ್ಥಾಪಿಸಲಾಗಿದೆ. ಈ ವಿಗ್ರಹದ ರಚನೆಯನ್ನು ಒಂದೇ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಮೂರ್ತಿಗೆ ಬಳಸಿದ ಕಲ್ಲು ಕಪ್ಪು ಬಳಪದ ಶಿಲೆಯಾಗಿದೆ. ವಿಗ್ರಹದ ಸ್ವರೂಪವು ಸುಮಾರು ಮೂರು ಅಡಿ ಎತ್ತರವಾಗಿದೆ. ಬಲಗೈಯಲ್ಲಿ ಖಡ್ಗಧಾರಿಯಾಗಿ ಉಗ್ರರೂಪ ಸ್ವರೂಪಿಯಾಗಿ, ಬಲಗಡೆಯ ಕಾಲನ್ನು ತನ್ನ ಒಳಭಾಗಕ್ಕೆ ಇಳಿಬಿಟ್ಟು, ಎಡಗಡೆಯ ಕಾಲನ್ನು ತನ್ನ ಒಳಭಾಗಕ್ಕೆ ಎಳೆದು ಮಡಚಿಕೊಂಡು ಗದ್ದುಗೆಯ ಮೇಲೆ ಆಸಿನನಾದಂತೆ ತೋರುತ್ತದೆ. ಆದರೆ ಈ ಸಂಪೂರ್ಣವಾದಂತಹ ವಿಗ್ರಹವನ್ನು ಜಿಡಿಭಾಗವಾಗಿ ಈಶ್ವರನ ಮೇಲೆ ಕುಳ್ಳಿರಿಸಲಾಗಿದೆ.

ಈ ಗರ್ಭಗುಡಿಯ ಬಾಗಿಲು ಮೂರು ಅಡಿ ಅಗಲ ನಾಲ್ಕು ಅಡಿ ಎತ್ತರವನ್ನು ಹೊಂದಿದೆ. ಈ ಬಾಗಿಲಿನ ಎರಡೂ ಭಾಗಗಳು ಎರಡೆರಡು ಶಿಲಾಪಟ್ಟಿಗಳಿಂದ ಕೂಡಿದೆ. ಈ ಗುಡಿ ಒಟ್ಟು ನಲವತ್ತು ಅಡಿ ಉದ್ದ, ಹತ್ತು ಅಡಿ ಅಗಲ ಹೊಂದಿದೆ. ಇದರ ಹತ್ತು ಹತ್ತು ಅಡಿಗಳ ಉದ್ದಕ್ಕೆ ಒಂದು ಭಾಗವಾಗಿ ನಿರ್ಮಿಸಿರುವುದು ಕಂಡುಬರುತ್ತದೆ. ಹತ್ತು ಹತ್ತು ಅಡಿಗೆ ಮೂರು ಮೊಗಸಾಲೆಯನ್ನು ಹೊಂದಿ, ಇನ್ನೂ ಹತ್ತು ಅಡಿಗೆ ಗರ್ಭಗುಡಿಯನ್ನು ಹೊಂದಿದೆ. ಒಂದೊಂದು ಮೊಗಸಾಲೆಗೆ ಒಂದು ಭಾಗದ ಗೋಡೆಗೆ ಎರೆಡೆರಡು ಕಂಬಗಳನ್ನು ಹೊಂದಿದೆ. ಜಾತ್ರೆಯ ಸಮಯದಲ್ಲಿ ಸಂಪೂರ್ಣವಾಗಿ ಗುಡಿಯ ಒಳಭಾಗಕ್ಕೆ ಸುಣ್ಣವನ್ನು ಬಳಿಯಲಾಗಿರುತ್ತದೆ. ಇದರ ನೆಲದ ಹಾಸುಗೆ ಮಣ್ಣಿನಿಂದ ಕೂಡಿರುತ್ತದೆ. ವಾಸ್ತವ ದೃಷ್ಟಿಯಿಂದ ನೋಡಿದಾಗ ಇದೂ ಕೂಡ ಅವಸಾನದ ಅಂಚಿನತ್ತ ಸಾಗುತ್ತಿದೆ. ಇದಕ್ಕೆ ಯಾವುದೇ ರೀತಿಯ ಸಂರಕ್ಷಣಾ ಕಾರ್ಯ ಕೈಗೊಂಡಿರುವುದು ಕಾಣಬರುತ್ತಿಲ್ಲ. ದುರಸ್ಥಿ ಕಾರ್ಯವಂತೂ ಇಲ್ಲವೇ ಇಲ್ಲ. ಇದೇ ಸ್ಥಿತಿ ಮುಂದುವರೆದರೆ, ಮುಂದೊಂದು ದಿನ ಈ ದೇವಾಲಯ ಗುರುತು ಸಿಗಲಾರದ ಸ್ಥಿತಿಯಲ್ಲಿ ಅವಶೇಷವಾಗಿ ಪರಿಣಮಿಸುತ್ತದೆ. ಆದ್ದರಿಂದ ಸರ್ಕಾರ ಹಾಗೂ ಇದಕ್ಕೆ ಸಂಬಧಪಟ್ಟ ಕಮಿಟಿಯವರು ಮುತುವರ್ಜಿವಹಿಸುವುದು ಸೂಕ್ತ.

೨.೧೪. ವೀರಭದ್ರ ದೇವರ ಗುಡಿ : (The Godes of Veerabhadra)

ಇದು ಮುಖ್ಯ ಗುಡಿಯ ಮುಂಭಾಗದ ಕೋಟೆಯ ಆವರಣದಲ್ಲಿ ಉತ್ತರಾಭಿಮುಖವಾಗಿ ಕಂಡುಬರುತ್ತದೆ. ಬಯಲಿಗೆ ಇದನ್ನು ನಿರ್ಮಿಸಿರುವುದು ಗೋಚರಿಸುತ್ತದೆ. ಇದನ್ನು ಕೋಟೆಯ ಮುಖ್ಯ ದ್ವಾರದಿಂದ ಮುಖ್ಯ ಗುಡಿಗೆ ಹೋಗುವ ಮಾರ್ಗದ ಎಡಭಾಗದಲ್ಲಿ ಸ್ಥಾಪಿಸಲಾಗಿದೆ. ಅಂದರೆ ಇತ್ತೀಚಿಗೆ ನವೀನವಾಗಿ ನಿರ್ಮಿಸಿರುವ ದ್ವಾರ ಕಮಾನಿನ ಎಡಭಾಗದಲ್ಲಿ ಕಂಡುಬರುವುದೇ ವೀರಭದ್ರ ದೇವರ ಗುಡಿ. ಇದೂ ಕೂಡ ಪೂರ್ವದಲ್ಲೇ ಸ್ಥಾಪಿಸಿರುವಂತಹ ಗುಡಿಯಾಗಿದೆ. ಇದು ಗಾತ್ರದಲ್ಲಿ ಹತ್ತು ಅಡಿ ಉದ್ದ, ಅಗಲ ಎತ್ತರವನ್ನು ಹೊಂದಿದೆ. ಪ್ರವೇಶ ದ್ವಾರವುಳ್ಳ ನಾಲ್ಕು ಅಡಿ ಎತ್ತರ, ಮೂರು ಅಡಿ ಅಗಲ ಇದರ ಮೇಲ್ಭಾಗ ಚೌಕಾಕಾರ ಹೊಂದಿದ್ದು ಆರು ಸುತ್ತಿನ ಶಿಖರ(ಗೋಪುರ)ವನ್ನು ನಿರ್ಮಿಸಲಾಗಿದೆ. ಈ ಗುಡಿಯ ಮುಂಭಾಗದಲ್ಲಿರುವ ಮೆಟ್ಟಿಲುಗಳು

ಮಳೆಯ ನೀರಿನಿಂದ ಕೊಚ್ಚಿ ಹೋಗಿವೆ. ವರ್ಷದ ಎರಡೂ ಜಾತ್ರೆಯ ಸಂದರ್ಭದಲ್ಲಿ ಈ ಗುಡಿಗೆ ಒಳ-ಹೊರಮೈಗೆ ಸಂಪೂರ್ಣವಾಗಿ ಸುಣ್ಣವನ್ನು ಬಳಿದಿರುತ್ತಾರೆ. ಗುಡಿಯ ಒಳಗಡೆ ಸುಮಾರು ಮೂರು ಅಡಿ ಎತ್ತರದ ವೀರಭದ್ರದೇವರ ವಿಗ್ರಹವಿರುವುದು. ಈ ವಿಗ್ರಹವನ್ನು ಒಂದೇ ಏಕಶಿಲೆಯಾಗಿ ಕಪ್ಪು ಬಳಪದ ಕಲ್ಲಿನಲ್ಲಿ ಕೆತ್ತಲಾಗಿದೆ. ವೀರಭದ್ರ ದೇವರು ಉಗ್ರಸ್ವರೂಪಿಯಾಗಿ ಖಡ್ಗಧಾರಿಯಾಗಿ ನಿಂತಿರುತ್ತಾನೆ. ಪ್ರತೀ ವಾರಕ್ಕೊಮ್ಮೆ ಇಲ್ಲಿಯ ಎಲ್ಲಾ ದೇವರುಗಳೊಂದಿಗೆ ಪೂಜೆಗೊಳ್ಳುತ್ತವೆ.

ಚಂದಾಲಿಂಗನ ಗುಡಿಯ ಕೋಟೆಯ ಆವರಣದಲ್ಲಿ ವೀರಭದ್ರ ದೇವರ ಗುಡಿ ಸ್ಥಾಪಿತವಾದ ಬಗ್ಗೆ ಭಕ್ತ ಪರಂಪರೆಯಲ್ಲಿ ಕೇಳಿದಾಗ ಅವರು ವೀರಭದ್ರನಿಗೂ ಹುಲ್ಲಪ್ಪನಿಗೂ, ಚಂದಾಲಿಂಗೇಶ್ವರನಿಗೂ ಸಂಬಂಧ ಕಲ್ಪಿಸುತ್ತಾರೆ. ಅದನ್ನು ಮೌಖಿಕವಾಗಿ ಕಥೆಯ ರೂಪದಲ್ಲಿ ಹಲವಾರು ರೀತಿಯಲ್ಲಿ ಹೇಳಿದರು.

೨.೧೪. ಹೆಗ್ಗಡೆ ಪ್ರಧಾನಿ ಗುಡಿ : (Heggade Pradhani Cabian)

ಈ ಹೆಗ್ಗಡೆ ಪ್ರಧಾನಿ ಗುಡಿಯು ಮುಖ್ಯ ಗುಡಿಯ ಕೋಟೆಯ ಬಲಗೋಡೆಯ ಒಳಭಾಗದಲ್ಲಿದೆ. ಇದು ಮಂಟಪ ಬಸವಣ್ಣನ ಬೆನ್ನಿಗೆ ಮುಖವಾಗಿ ಚಂದಾಲಿಂಗೇಶ್ವರ ಗುಡಿಗೆ ಅಭಿಮುಖವಾಗಿ ನಿರ್ಮಾಣವಾಗಿದೆ. ಅಂದರೆ ಉತ್ತರ ದಿಕ್ಕಿಗೆ ಅಭಿಮುಖವಾಗಿ ನಿರ್ಮಾಣವಾಗಿದೆ. ಕೋಟೆಗೋಡೆಯಲ್ಲಿರುವ ದೇವರುಗಳಿಗಿಂತ ಸ್ವಲ್ಪ ವಿಶೇಷವಾಗಿದೆ. ಇಲ್ಲಿ ಆಚರಣೆಯ ಪ್ರಕ್ರಿಯೆಗಳು ನಡೆಯುತ್ತವೆ. ಅದಲ್ಲದೆ ಗುಡಿ ನಿರ್ಮಾಣದಲ್ಲಿ ಈ ಭಾಗಕ್ಕೆ ಹೊಂದಿಕೊಂಡಿರುವ ಗುಡಿಗಿಂತ ಬಿನ್ನವಾಗಿದೆ. ಏಕೆಂದರೆ ಈ ಕೋಟೆಗೋಡೆಗೆ ಹೊಂದಿಕೊಂಡಿರುವ ಗುಡಿಗಳು ಒಂದೇ ಆಕಾರದಲ್ಲಿವೆ. ಆದರೆ ಇದು ವಿಶೇಷವಾಗಿ ಮುಂಭಾಗದಲ್ಲಿ ಚೌಕಾಕಾರದ ಕಟ್ಟೆಯ ಮೇಲೆ ಚಿಕ್ಕದಾದ ಮಂಟಪವನ್ನು ಹೊಂದಿದೆ. ಗುಡಿಯ ಒಳಭಾಗದಲ್ಲಿ ಮೂರು ಅಡಿ ಎತ್ತರದ ಹೆಗ್ಗಡೆ ಪ್ರಧಾನಿ ನಿಂತಿರುವ ವಿಗ್ರಹವಿದೆ. ಇದು ಕಪ್ಪು ಬಳಪದ ಕಲ್ಲಿನಲ್ಲಿ ರಚನೆಗೊಂಡಿದೆ.

ಹೆಗ್ಗಡೆ ಪ್ರಧಾನಿ ಗುಡಿಯ ಮಂಟಪವು ನಾಲ್ಕೂ ಸ್ಥಂಭಗಳಿಂದ ಕೂಡಿ ಮೇಲ್ಭಾವಣಿ ಚೌಕಾಕಾರದಿಂದ ಕೂಡಿದೆ. ಮೇಲೆ ನಾಲ್ಕೂ ಸುತ್ತಿನ ಗೋಪುರ ಹೊಂದಿದೆ. ಈ ಮಂಟಪದಲ್ಲೇ ಜಾತ್ರೆಯ ದಿನದಂದು ಬಂದಿರುವ ಮಳ್ಳಯ್ಯಜ್ಜ ಹಾಗೂ ವಗ್ಗಯ್ಯನವರ ವಾಸಸ್ಥಳವಾಗಿರುತ್ತದೆ. ವರ್ಷದ ಎರಡೂ ಜಾತ್ರೆಯಲ್ಲಿ ನಡೆಯುವ ಭಂಡಾರದ ಪವಾಡವೂ ಇದೇ ಮಂಟಪದಲ್ಲಿ ನೆರವೇರುತ್ತದೆ. ಭಕ್ತರು ತಾವು ಮಾಡಿಕೊಂಡು ಬಂದಂತಹ ಭಕ್ಷ್ಯ ಭೋಜನವನ್ನು ಈ ಹೆಗ್ಗಪ್ಪನ ಮಂಟಪದಲ್ಲಿರುವ ಮಳ್ಳಯ್ಯಜ್ಜ ಹಾಗೂ ವಗ್ಗಯ್ಯನವರಿಗೆ ತಂದು ಅರ್ಪಿಸಿ ಇವರಿಂದ ಪೂಜಿಸಿಕೊಂಡು ಹೋಗುವರು.

"ಹೆಗ್ಗಡೆ ಪ್ರಧಾನಿಯನ್ನು ಕನ್ನಡಿಗರು ಹೆಗ್ಗಪ್ಪ, ಹೆಗ್ಗಣ, ಹೆಗ್ಗಡೆ ಪ್ರಧಾನಿ, ಪರುದಾನಿ, ಇತ್ಯಾದಿಯಾಗಿ ಕರೆದರೆ, 'ಹೇಗಡಿ', 'ಹೇಗಡಿಪ್ರಧಾನ' ಎಂದು ಮಹಾರಾಷ್ಟ್ರದವರು ಕರೆಯುತ್ತಾರೆ. ಈ ದೇವತೆಯ ಅತ್ಯಂತ ಪ್ರಾಚೀನ ಮೂರ್ತಿ ಪ್ರೇಮಪುರ ಮೈಲಾರದಲ್ಲಿದೆ. ಬಲಬದಿಯಲ್ಲಿ ಈತನ ಪತ್ನಿಯ ಮೂರ್ತಿಯು ಇಲ್ಲಿನ ಶಿಲ್ಪದಲ್ಲಿ ಸಮಾವೇಶಗೊಳಿಸಲಾಗಿದೆ. ಅವಳು ಕೈಯಲ್ಲಿ ಕಿನ್ನರಿಯಂಥ ಒಂದು ವಾದ್ಯ ಹಿಡಿದು ನಿಂತಿದ್ದಾಳೆ. ಅವಳ ಎಡಬದಿಯಲ್ಲಿರುವ ಹೆಗ್ಗಡೆ ಚತುರ್ಭುಜನಾಗಿದ್ದು ಅವುಗಳಲ್ಲಿ ಕ್ರಮವಾಗಿ ಚಿನ್ಮುದ್ರೆಯಂತಹ ಮುದ್ರೆ, ಚಕ್ರ, ಶಂಖ ಮತ್ತು ಪಾನಬಟ್ಟಲುಗಳಿವೆ. ಪ್ರಸ್ತುತ ಮೂರ್ತಿ ಕಲ್ಯಾಣ ಚಾಲುಕ್ಯರ ಕಾಲದ್ದದೆಂಬುದು ನಿಸ್ಸಂಶಯ. ಹೆಗ್ಗಡೆ ಎಂದರೆ ತಿಮ್ಮಪ್ಪ ಅಥವಾ ವಿಷ್ಣು ಎಂಬ ಜನಪದ ನಂಬಿಕೆ ಅಷ್ಟು ಹಳೆಯದು ಎಂಬ ಸಂಗತಿ ಇದರಿಂದ ಸಾಬೀತಾಗುತ್ತದೆ."[೫] ಹೀಗೆ ಕರ್ನಾಟಕದಲ್ಲಿರುವ ಜೆಜೂರಿನಲ್ಲಿ, ಹಿರೇಮೈಲಾರದಲ್ಲಿ, ದೇವರ ಗುಡ್ಡದಲ್ಲಿ ಕಂಡುಬರುತ್ತದೆ. ಹಿರೇಮೈಲಾರದಲ್ಲಿ ಈ ಹೆಗ್ಗಪ್ಪನ ಮೂರ್ತಿಯು ಚತುರ್ಭುಜದಿಂದ ಕೂಡಿದೆ. ಈ ನಾಲ್ಕೂ ಕೈಗಳಲ್ಲಿ ಕ್ರಮವಾಗಿ ಲೇಖನಿ, ಕಮಲ, ಕುಮ್ಮಟ (ಗಾದೆ) ಪಾಶ ಮತ್ತು ಪುಸ್ತಕಗಳಿವೆ. ಅತ್ಯಂತ ಆಕರ್ಷಣೀಯವಾಗಿ ನಿಂತಿದ್ದಾನೆ. ಆದರೆ ಗುಡಿಯಲ್ಲಿ ಮಾತ್ರ ಆಸನಸ್ಥನಾಗಿದ್ದಾನೆ, ಕೈಯಲ್ಲಿ ಪಾಶ, (ಹಗ್ಗ–ಮಿಣಿ) ತ್ರಿಶೂಲ, ಡಮರು ಮತ್ತು ನೇಗಿಲು ಹಿಡಿದುಕೊಂಡಿದ್ದಾನೆಂದು ಡಾ. ಎಂ.ಬಿ. ನೇಗಿನಹಾಳರವರು ಗುರುತಿಸುತ್ತಾರೆ.

ಜೆಜೂರಿಯಲ್ಲಿ ಹೆಗ್ಗಪ್ಪನ ವಿಗ್ರಹವು ಅತಿ ಭಿನ್ನವಾಗಿ ತೋರುತ್ತದೆ. ಅದು ಹೇಗೆಂದರೆ ದ್ವಿಭುಜ ವುಳ್ಳದ್ದಾಗಿದೆ. ಬಲಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡು ಎಡಗೈಯಲ್ಲಿ ಬಟ್ಟಲವನ್ನು ಹಿಡಿದಿದ್ದಾನೆ. ತಲೆಗೆ ಮುಂಡಾಸುವನ್ನು ಧರಿಸಿ ಒಬ್ಬ ಸಾಧಾರಣ ರೈತನ ತರ ಅದರಲ್ಲೂ ಒಬ್ಬ ಕುರುಬ ವ್ಯಕ್ತಿಯಂತೆ ತೋರುತ್ತಾನೆ. ಇದೇ ತರವಾಗಿ ದೇವರ ಗುಡ್ಡದಲ್ಲಿ ವಿಶಿಷ್ಟ ಮಾದರಿಯಲ್ಲಿ ಕೂಡಿದೆ. ಅದು ಸಂಪೂರ್ಣ ಗಡ್ಡದಾರಿಯಾಗಿ ಪದ್ಮಾಸನದಲ್ಲಿ ಕುಳಿತುಕೊಂಡಿದ್ದಾನೆ. ತನ್ನ ಚತುರ್ಭುಜಗಳ ಕೈಯಲ್ಲಿ ಕ್ರಮವಾಗಿ ಲೇಖನಿ, ಸರ್ಪ, ಕೊಡಲಿ, ಮತ್ತು ಪುಸ್ತಕಗಳಿವೆ. ಒಟ್ಟಾರೆಯಾಗಿ ಈ ಮೂರ್ತಿಯನ್ನು ನೋಡಿದಾಗ ಧ್ಯಾನ ಮಗ್ನನಾಗಿ ಕುಳಿತಿರುವಂತೆ ಕಾಣುತ್ತದೆ.

ಮೇಲಿನ ಎಲ್ಲಾ ಮೂರ್ತಿಗಳ ಪರಿಶೀಲನೆಯಿಂದ "'ಹೆಗ್ಗಡೆ' ಎಂದರೆ ಮುಖ್ಯದೇವತೆ. ಲೆಕ್ಕ ಪತ್ರಗಳನ್ನು ನೋಡಿಕೊಳ್ಳುವ ಮಂತ್ರಿ ಎಂದು ಮತ್ತು ವಿಷ್ಣು ಎಂದು ಕಲ್ಪಿಸಿರುವುದು ಸ್ಪಷ್ಟವಾಗಿದೆ. ತನ್ನ ತಂಗಿ ಮಗಳನ್ನು ಮೈಲಾರಲಿಂಗಪ್ಪನಿಗೆ ಲಗ್ನಮಾಡಿಕೊಟ್ಟು, ಅವಳ ಬದಲು ತನಗೆ ಸಲ್ಲಬೇಕಾದ 'ತೆರವು' ವಸೂಲಿ ಮಾಡಲು ಬಂದ ತಿಮ್ಮನೆಂದೂ, ರಾಕ್ಷಸವಧೆಯ ಕಾಲದಲ್ಲಿ ಶಿವನ ದೌತ್ಯ(ದೂತನಕೆಲಸ) ವಹಿಸಿದ ವಿಷ್ಣು ಎಂದು ಜನಪದರು ನಂಬುತ್ತಾರೆ."[೬] ಇದರಂತೆ ಚಂದ್ರಗಿರಿಯ ಚಂದಾಲಿಂಗನ ಆವರಣದಲ್ಲಿ ಈ ಹೆಗ್ಗಪ್ಪನ ಗುಡಿಯು ಪ್ರತ್ಯೇಕ ಇರುವಂತೆಯೇ ಕರ್ನಾಟಕದ ಹಿರೇಮೈಲಾರ, ದೇವರಗುಡ್ಡ, ಜೆಜೂರಿಯಲ್ಲಿ ಪ್ರತ್ಯೇಕವಾದ ದೇವಾಲಯಗಳಿವೆ. ಹೆಗ್ಗಪ್ಪನ ಅತ್ಯಂತ ದೊಡ್ಡ ದೇವಾಲಯ ಹೊಂದಿದ ಸ್ಥಳ ಹಿರೇಮೈಲಾರವಾಗಿದೆ.

ಇಲ್ಲಿ ಗರ್ಭ, ಸುಕನಾಶಿ, ರಂಗಮಂಟಪ ಮತ್ತು ಹೊರ ಮಂಟಪಗಳನ್ನು ಹೊಂದಿರುತ್ತದೆ. ಇದಲ್ಲದೆ ಇದು ದ್ರಾವಿಡ ಶೈಲಿಯ ಶಿಖರವುಳ್ಳದ್ದಾಗಿದೆ.

ಡಾ.ಎಂ.ಬಿ. ನೇಗಿನಹಾಳರವರು ಹೇಳುವಂತೆ ಈ ಹೆಗ್ಗಪ್ಪನಿಗೆ ಸಮುದಾಯದಲ್ಲಿ ತೃತೀಯ ಸ್ಥಾನ ಲಭ್ಯವಾಗಿದೆ. ಭಕ್ತರು ತಾವು ಯಾತ್ರೆ ಕೈಗೊಂಡಾಗ ತಮ್ಮನ್ನು ರಕ್ಷಿಸುವವನು ಈತನೇ ಎಂದು ನಂಬಿದ್ದಾರೆ. ಆದ್ದರಿಂದ ಪ್ರತಿಯೊಬ್ಬ ಭಕ್ತರು ಯಾತ್ರೆಯನ್ನು ಮುಗಿಸಿಕೊಂಡು ತಮ್ಮೂರಿಗೆ ಹೋಗಿ ಹೆಗ್ಗಪ್ಪನ ಕಳಿಸುವುದೆಂದು ವಿಧಿ ನಿಯಮವನ್ನು ಆಚರಿಸುತ್ತಾರೆ. ಈ ವಿಧಿ ಮತ್ತು ಈತನ ದೇವಸ್ಥಾನದಿಂದ ಈತ ಕ್ಷೇತ್ರಪಾಲಕ ದೇವತೆ ಎಂಬುದು ಖಚಿತವಾಗಿದೆ. ಈ ಕ್ಷೇತ್ರದಲ್ಲಿ ನಾನು ಕ್ಷೇತ್ರಕಾರ್ಯ ಅಧ್ಯಯನಕ್ಕೆ ಹೋದಾಗ ದ್ಯಾಂಪುರದ ಚಂದಾಲಿಂಗಪ್ಪ ಎಂಬುವವರು ಕುದುರೆಕಾರನಾಗಿ ಈ ಚಂದಾಲಿಂಗೇಶ್ವರನ ಸೇವೆ ಮಾಡುವವರ ಪರಿಚಯವಾಯಿತು. ಇವರು ಹೇಳುವಂತೆ ಈ ಹೆಗ್ಗಡೆ ಪ್ರಧಾನಿ ಹುಲ್ಲೇಶ್ವರನ ಸೋದರಮಾವ ಎಂದು ವ್ಯಕ್ತಪಡಿಸುತ್ತಾರೆ.

೨.೧೬. ಹುಲ್ಲೇಶ್ವರ ಗುಡಿ : (Hulleshwara Cabian)

ಮುಖ್ಯ ಗುಡಿಯ ಆವರಣದಲ್ಲಿದೆ. ಉತ್ತರದಿಕ್ಕಿಗೆ ಅಭಿಮುಖವಾಗಿ ಸ್ಥಾಪಿಸಲಾಗಿದೆ. ಹುಲ್ಲೇಶ್ವರನ ಗುಡಿಯ ನಿರ್ಮಾಣವು ಇಪ್ಪತ್ತು ಅಡಿ ಉದ್ದ, ಹದಿನೈದು ಅಡಿ ಅಗಲದ ಕಟ್ಟೆಯ ಮೇಲೆ ಸ್ಥಾಪಿಸಲಾಗಿದೆ. ಈ ಗುಡಿಯ ವ್ಯಾಪ್ತಿಯು ಹತ್ತು ಅಡಿ ಉದ್ದ ಅಗಲ ಎತ್ತರವನ್ನು ಹೊಂದಿದೆ. ಚೌಕಾಕಾರದಲ್ಲಿ ಮೂರು ಸುತ್ತಿನಲ್ಲಿ ಗೋಪುರವನ್ನು ಹೊಂದಿದೆ. ಇದರ ಮುಖ್ಯ ದ್ವಾರವು ನಾಲ್ಕು ಅಡಿ ಎತ್ತರ, ಮೂರು ಅಡಿ ಅಗಲವಾದ ದ್ವಾರವನ್ನು ಹೊಂದಿದೆ. ಒಳಗಡೆ ಮೂರು ಅಡಿ ಎತ್ತರದ ಕಪ್ಪು ಬಳಪ ಕಲ್ಲಿನಲ್ಲಿ ಹುಲ್ಲೇಶ್ವರನ ಮೂರ್ತಿ ಇದೆ. ಚಂದಾಲಿಂಗೇಶ್ವರನಿಗೆ ನಡೆಯುವಂತೆ ಈತನಿಗೂ ದಿನ ನಿತ್ಯದ ಪೂಜೆ ನಡೆಯುತ್ತದೆ. ಈ ಆವರಣದಲ್ಲಿ ಮುಖ್ಯ ದೇವತೆಗಳಲ್ಲಿ ಇದೂ ಒಂದು. ಈ ದೇವರಿಗೂ ಜನರು ಹಲವಾರು ಹರಕೆಗಳನ್ನು ಹೊತ್ತುಕೊಳ್ಳುತ್ತಾರೆ. ತಮ್ಮ ತಮ್ಮ ಹರಕೆ ಬೇಡಿಕೆಗಳು ಈಡೇರಿದ ನಂತರ ಅವರು ಈ ದೇವಾಲಯಕ್ಕೆ ಸುಣ್ಣ ಬಣ್ಣ ಕೊಡಿಸುವ ಹೊಣೆಹೊತ್ತುಕೊಳ್ಳುತ್ತಾರೆ. ಇದಕ್ಕೆ ಸಾಕ್ಷಿಯಾಗಿ ಕಬ್ಬರಿಗೆಯ ಹಿರಿಯ ಭಕ್ತರೊಬ್ಬರು ತಮ್ಮ ಬೇಡಿಕೆ ಈಡೇರಿದ್ದರಿಂದ ಈ ಗುಡಿಗೆ ನಾಲ್ಕು ಸುತ್ತಿನ ಹಿತ್ತಾಳೆಯ ಕಳಸವನ್ನು ಹರಕೆಯಾಗಿ ತೀರಿಸಿದ್ದಾರೆ. ನಾನು ಇವರನ್ನು ಹರಕೆಯನ್ನು ಯಾವ ಕಾರಣಕ್ಕಾಗಿ ತೀರಿಸಿದಿರಿ ಅಜ್ಜ ಎಂದು ಕೇಳಿದರೆ, ಅದಕ್ಕೆ ಆ ಅಜ್ಜನು ಈ ರೀತಿಯಾಗಿ ಹೇಳುತ್ತಾನೆ, 'ನೋಡ್ರಿ ಸಾರ ಒಂದು ವರ್ಷದಿಂದ ನನ್ನ ಮಗನ್ಗೆ ಆರಾಮು ಇರಲಿಲ್ಲರಿ, ಈ ಅಜ್ಜಗ ಬೇಡಿಕೊಂಡಿದ್ವಿರಿ. ಈಗ ನನ್ಮಗ ಸ್ವಲ್ಪ ಆರಾಮು ಆಗ್ಯಾನ್ರಿ ಅದಕ್ಕ ಈ ಹರ್ಕಿನ ಈಗ ತೀರಿಸಿಬಿಡತ್ವಿರ್ರಿ, ಯಾಕಂದ್ರ ನಾವು ಏನ್ ಬೇಡಿಕೊಂತ್ವಿ ಅದೆಲ್ಲಾ ಆಗತೈತಿರ್ರಿ, ಇದಕ್ಕಾಗಿ ಇತ್ನ ಬಹಳ ನಂಬಿವ್ರಿ ಈತ ನಮ್ನ ಕೈಬಿಡುವುದಿಲ್ಲರ್ರಿ' ಎಂದು ಇವರು ತಮ್ಮ ಭಕ್ತಿಯ ಪರಿಯನ್ನು ತಿಳಿಸಿಕೊಟ್ಟರು.

೨.೧೭. ಪಂಚ ಪೀಠಗಳು : (The Panchapeetha's)

ಈ ಕ್ಷೇತ್ರದ ಸರ್ವೋನ್ನತ ಏಳಿಗೆಗಾಗಿ ಪೂರ್ವದಲ್ಲಿ ಪಂಚ ಪೀಠಗಳನ್ನು ಸ್ಥಾಪಿಸಿದ್ದು ಕಂಡುಬರುತ್ತದೆ. ಇಲ್ಲಿ ಬರುವಂತಹ ಭಕ್ತರಿಗೆ ಈ ಪಂಚಪೀಠಾಧಿಪತಿಗಳ ಆಶೀರ್ವಾದ ಲಭಿಸಲಿ ಎಂದು ಪ್ರತಿಷ್ಠಾಪಿಸಲಾಗಿದೆ. ಅಂತಹ ಪಂಚ ಪೀಠಗಳಾದ ಕಾಶಿ ವಿಶ್ವನಾಥ, ಶ್ರೀಶೈಲ ಮಲ್ಲಿಕಾರ್ಜುನ, ಶ್ರೀಉಜ್ಜೈನಿ ಲಿಂಗ, ಶ್ರೀಕೇದಾರ ಸೋಮೇಶ್ವರಲಿಂಗ ಹಾಗೂ ರಂಭಾಪುರಿ ವೀರ ಸೋಮೇಶ್ವರ. ಇವುಗಳಲ್ಲಿ ಕಾಶಿ ವಿಶ್ವನಾಥ, ಶ್ರೀಶೈಲ ಮಲ್ಲಿಕಾರ್ಜುನ, ಶ್ರೀಉಜ್ಜೈನಿಲಿಂಗ, ರಂಭಾಪುರಿ ವೀರಸೋಮೇಶ್ವರ ಈ ನಾಲ್ಕೂ ಪೀಠಗಳು ಅಕ್ಕಪಕ್ಕವಾಗಿ ಒಂದೇ ಸಾಲಿನಲ್ಲಿವೆ. ಉತ್ತರದಿಕ್ಕಿಗೆ ಅಭಿಮುಖವಾಗಿ ಬಸವೇಶ್ವರ ಮಂಟಪದ ಎಡಭಾಗಕ್ಕೆ, ಹಾಗೂ ಮುಖ್ಯ ಗುಡಿಯ ಮುಂಬಾಗದ ಬಲಭಾಗಕ್ಕೆ ಇವುಗಳನ್ನು ಪ್ರತಿಷ್ಠಾಪಿಸಿದ್ದಾರೆ. ಆದರೆ ಶ್ರೀಕೇದಾರ ಸೋಮೇಶ್ವರ ಪೀಠವನ್ನು ಪೂರ್ವಕ್ಕೆ ಅಭಿಮುಖವಾಗಿ ಈ ನಾಲ್ಕೂ ಪೀಠಗಳ ಅಭಿಮುಖದಲ್ಲಿ ಸ್ಥಾಪಿಸಿದ್ದಾರೆ. ಈ ಪಂಚ ಪೀಠಗಳ ರಚನೆಯ ವಿಶೇಷತೆ ಹಾಗೂ ಆರಾಧನೆ ಕುರಿತು ಒಂದೊಂದಾಗಿ ಈ ಕೆಳಗಿನಂತೆ ನೋಡಲಾಗಿದೆ.

೨.೧೭.೧. ಕಾಶಿವಿಶ್ವನಾಥ : (Kashiviswanatha)

ಮುಖ್ಯ ಗುಡಿಯ ಆವರಣದಲ್ಲಿ ಕಾಶಿವಿಶ್ವನಾಥನ ಪೀಠ ಉತ್ತರ ದಿಕ್ಕಿಗೆ ಅಭಿಮುಖವಾಗಿ ಸ್ಥಾಪಿಸಲಾಗಿದೆ. ಸುಮಾರು ಆರು ಅಡಿ ಉದ್ದಗಲ ಗಾತ್ರದಲ್ಲಿ ಪೀಠದ ತಳಭಾಗ ಹೊಂದಿದೆ. ಎತ್ತರ ಐದು ಅಡಿ ಹೊಂದಿದೆ. ಆದರೆ ಇದರ ಸಂಪೂರ್ಣ ಎತ್ತರವನ್ನು ಪರಿಗಣಿಸಿದಾಗ ತಳಭಾಗದಿಂದ ಶಿಖರ (ಗೋಪುರ) ದವರೆಗೆ ಹತ್ತು ಅಡಿಯಷ್ಟು ಎತ್ತರವಾಗಿದೆ. ಈ ಗುಡಿಯ ಮೇಲ್ಚಾವಣಿಯ ಮೇಲೆ ಐದು ಸುತ್ತಿನ ಎತ್ತರವಾದ ಗೋಪುರವಿದೆ. ಪೀಠವು ಸಮವಾಗಿ ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲನೇ ಮುಂಭಾಗ ಮೊಗಸಾಲೆ, ಎರಡನೇ ಹಿಂಭಾಗ ಗರ್ಭಗೃಹವನ್ನು ಹೊಂದಿದೆ. ಇದರ ಮುಖ್ಯ ದ್ವಾರವೂ ಚಾಲುಕ್ಯ ಮಾದರಿಯ ಸ್ಥಿತಿಯಲ್ಲಿದೆ. ಇದಲ್ಲದೆ ಇದೇ ಚಾಲುಕ್ಯ ಮಾದರಿಯ ಗೋಡೆ ಕಂಬಗಳನ್ನು ಕೂಡ ಹೊಂದಿದೆ. ಈ ಗುಡಿಗೆ ಸಂಪೂರ್ಣವಾಗಿ ಬಳಸಿದ ಕಂಬಗಳು ಆರು. ಗೋಪುರ ಕಚ್ಚಾ ಮಾದರಿಯಲ್ಲಿ ರಚನೆಗೊಂಡಿದೆ.

ಪ್ರತಿ ಜಾತ್ರಾ ಸಂದರ್ಭದಲ್ಲಿ ಈ ಗುಡಿಗೆ ಸಂಪೂರ್ಣವಾಗಿ ಸುಣ್ಣವನ್ನು ಬಳಿಯಲಾಗಿರುತ್ತದೆ. ಪ್ರತಿ ರವಿವಾರವೂ ಎಲ್ಲಾ ದೇವರುಗಳೊಂದಿಗೆ ಪೂಜಾರಿಗಳು ಈ ದೇವರನ್ನು ಪೂಜಿಸುತ್ತಾರೆ. ಗರ್ಭಗುಡಿಯ ಬಾಗಿಲು ಮೂರು ಅಡಿ ಎತ್ತರ, ಎರಡೂವರಿ ಅಡಿ ಅಗಲ, ಒಳಗಡೆ ಚಿಕ್ಕದಾದ ಜಗುಲಿಯ ಮೇಲೆ ಈಶ್ವರ ಲಿಂಗವನ್ನು ಸ್ಥಾಪಿಲಾಗಿದೆ. ಗರ್ಭಗುಡಿಯ ಬಾಗಿಲಿನ ತೋಳುಗಳು ಮೂರು ಪಟ್ಟಿಕೆಗಳನ್ನು ಹೊಂದಿರುವಂತೆ ಮೇಲ್ಭಾಗವನ್ನು ಎರಡು ಪಟ್ಟಿಕೆಗಳಿಂದ ನಿರ್ಮಿಸಿದ್ದಾರೆ. ಈ ಎಲ್ಲಾ ಪಟ್ಟಿಕೆಗಳಿಗೆ ಮಸಗಲ್ಲನ್ನು (ಇಟ್ಟಿಗಲ್ಲು) ಬಳಕೆ ಮಾಡಿದ್ದಾರೆ. ಈ ಪೀಠವನ್ನು

ಸಂಪೂರ್ಣವಾಗಿ ನೋಡಿದಾಗ ಯಾವುದೇ ಸೂಕ್ಷ್ಮವಾದ ಕಲೆಯನ್ನು ಬಿಡಿಸಿರುವುದು ಕಾಣ ಬರುವುದಿಲ್ಲ. ಕಾಶೀ ವಿಶ್ವನಾಥ ದೇವಾಲಯವು ವಾಸ್ತವಿಕ ಸ್ಥಿತಿಯಲ್ಲಿ ನೋಡಿದಾಗ ಮೊದಲಿನ ಸ್ಥಿತಿಯೇ ಕಂಡುಬರುವುದು. ಯಾವುದೇ ಜೀರ್ಣೋದ್ಧಾರ ಕಾರ್ಯವನ್ನು ಯಾರೂ ಕೈಗೊಂಡಿರುವುದಿಲ್ಲ. ಇದರ ಮೊಗಸಾಲೆಯನ್ನು ನೋಡಿದಾಗ ತಳಭಾಗವೂ ಮಣ್ಣಿನಿಂದ ಕೂಡಿದೆ. ಗರ್ಭಗುಡಿಯ ಆವರಣವು ಇದೇ ಸ್ಥಿತಿಯಲ್ಲಿದೆ. ಭಕ್ತರ ಸಂಖ್ಯೆಯು ಅಷ್ಟಕಷ್ಟೇ ಇದೆ. ಏಕೆಂದರೆ ಮುಖ್ಯದೇವರಾದ ಚಂದಾಲಿಂಗೇಶ್ವರನು ಇಲ್ಲಿ ಪ್ರಮುಖವಾದ್ದರಿಂದ ಆತನೇ ಆಧ್ಯ.

೨.೧೭.೨. ಶ್ರೀಶೈಲ ಮಲ್ಲಿಕಾರ್ಜುನ : (**Shreeshaila Mallikarjuna**)

ಇದು ಚಂದಾಲಿಂಗೇಶ್ವರ ಗುಡಿಯ ಮುಖ್ಯ ಆವರಣದಲ್ಲಿದೆ. ಅಂದರೆ ಈಗಾಗಲೇ ತಿಳಿದಿರುವ ಕಾಶಿವಿಶ್ವನಾಥ ಗುಡಿಯ ಎಡ ಭಾಗದಿಂದ ಹತ್ತು ಅಡಿಗಳ ಅಂತರದಲ್ಲಿ ನಿರ್ಮಾಣವಾಗಿದೆ. ಇದರ ಗಾತ್ರ ಐದು ಅಡಿ ಉದ್ದ ಅಗಲ ಹೊಂದಿದೆ. ಎತ್ತರ ಮೇಲ್ಛಾವಣಿವರೆಗೂ ಐದು ಅಡಿ. ಆದರೆ ತಳಭಾಗದಿಂದ ಶಿಖರ (ಗೋಪುರ)ದ ಕೊನೆಯವರೆಗೂ ಹತ್ತು ಅಡಿ ಎತ್ತರವನ್ನು ಹೊಂದಿದೆ. ಚಿಕ್ಕದಾದರೂ ಇದು ಒಂದೇ ಭಾಗದಿಂದ ಕೂಡಿದೆ. ಈ ಗುಡಿಯ ಮುಂಭಾಗಕ್ಕೆ ಮೊಗಸಾಲೆಯಿಲ್ಲ. ಇರುವ ಒಂದೇ ಭಾಗವೂ ಗರ್ಭಗುಡಿಯನ್ನು ಹೊಂದಿದೆ. ಇದರ ಪ್ರವೇಶ ದ್ವಾರವು ನಾಲ್ಕು ಅಡಿ ಎತ್ತರ ಹಾಗೂ ಮೂರು ಅಡಿ ಅಗಲವನ್ನು ಹೊಂದಿದೆ. ಗುಡಿಯ ಮೇಲ್ಛಾವಣಿಯ ಗೋಪುರವು ಕಾಶಿವಿಶ್ವನಾಥನ ಗೋಪುರಕ್ಕಿಂತ ಭಿನ್ನವಾಗಿದೆ. ಇದು ಐದು ಸುತ್ತಿನ ಶಿಖರ. ಮೇಲೊಂದು ಕಳಸ ಕೂಡಿಸಲು ಚೂಪಾದ ಆಕೃತಿ ಇದೆ. ಆದರೆ ಇಲ್ಲಿ ಎರಡನೇ ಹಂತದ ವೃತ್ತಾಕಾರವೂ ಸ್ವಲ್ಪ ಎತ್ತರವಾಗಿದೆ. ತದನಂತರದ ಹಂತವು ಚಿಕ್ಕದಾದ ಎತ್ತರಕ್ಕೆ ರಚನೆಯಾಗಿದೆ. ನೋಡುವುದಕ್ಕೆ ಶಿಖರದ ಕೆಲವು ಭಾಗವು ಭಗ್ನಗೊಂಡ ಸ್ಥಿತಿಯಲ್ಲಿರುವಂತೆ ಗೋಚರಿಸುತ್ತದೆ. ಇದರ ಬಾಗಿಲದ ಮೇಲ್ಭಾಗ ಮತ್ತು ಎಡ ಮತ್ತು ಬಲ ಪಟ್ಟಿಕೆಗಳು ನಾಲ್ಕು ಪಟ್ಟಿಕೆಗಳಿಂದ ಕೂಡಿವೆ. ಒಟ್ಟು ನಾಲ್ಕೂ ಗೋಡೆ ಕಂಬಗಳನ್ನು ಈ ಗುಡಿಗೆ ಅಳವಡಿಸಲಾಗಿದೆ. ಗರ್ಭಗುಡಿಯಲ್ಲಿ ಭಗ್ನಗೊಂಡ ಈಶ್ವರಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ಗುಡಿಯ ರಚನಾ ಶೈಲಿಯು ಚಾಲುಕ್ಯರ ವಾಸ್ತುಶಿಲ್ಪ ಶೈಲಿಯನ್ನು ಅಳವಡಿಸಿಕೊಂಡಿದೆ. ಜಾತ್ರೆಯ ಸಮಯದಲ್ಲಿ ಗುಡಿಗೆ ಸಂಪೂರ್ಣವಾಗಿ ಸುಣ್ಣವನ್ನು ಬಳಿಯಲಾಗಿರುತ್ತದೆ. ಪ್ರತಿ ರವಿವಾರಕ್ಕೊಮ್ಮೆ ಪೂಜಾರಿಗಳಿಂದ ಪೂಜಿಸಲ್ಪಡುತ್ತದೆ. ಇದರ ಗರ್ಭಗುಡಿಯ ತಳಭಾಗವೂ ನೆಲಹೊದಿಕೆಯಿಂದ ಕೂಡಿದೆ.

ಈ ಗುಡಿಯ ವಾಸ್ತವಿಕ ಸ್ಥಿತಿಯನ್ನು ನೋಡಿದಾಗ ಪೂರ್ವದಲ್ಲಿ ಯಾವ ಸ್ತಿತಿಯಲಿತ್ತೋ ಅದೇ ಸ್ಥಿತಿಯಲ್ಲಿದೆ ಎಂದು ತೋರುತ್ತದೆ. ಯಾವುದೇ ಜೀರ್ಣೋದ್ಧಾರ ಕಾರ್ಯ ಕೈಗೊಂಡಿರುವುದು ಕಂಡುಬರುತ್ತಿಲ್ಲ. ಏಕೆಂದರೆ ಮೇಲಿನ ಗೋಪುರದ ಸ್ಥಿತಿಯು ಮಧ್ಯಕಾಲಕ್ಕೆ ಕೊಂಚ ಭಾಗವು ಭಗ್ನಗೊಂಡ ಸ್ಥಿತಿಯಲ್ಲಿ ಗೋಚರವಾಗುತ್ತದೆ.

೨.೧೭.೩. ಶ್ರೀ ಉಜ್ಜೈನಿ ಲಿಂಗ : (Shree Ujjaini Linga)

ಶ್ರೀಉಜ್ಜೈನಿಲಿಂಗ ಚಂದಾಲಿಂಗೇಶ್ವರ ಗುಡಿಯ ಮುಖ್ಯ ಆವರಣದಲ್ಲಿದೆ. ಈ ಗುಡಿಯ ಎಡಭಾಗಕ್ಕೆ ರಂಭಾಪುರಿ ವೀರಸೋಮೇಶ್ವರ ಪೀಠ ಹಾಗೂ ಬಲಭಾಗಕ್ಕೆ ಕಾಶಿ ವಿಶ್ವನಾಥ, ಶ್ರೀಶೈಲ ಮಲ್ಲಿಕಾರ್ಜುನ ಪೀಠಗಳಿವೆ. ಶ್ರೀಶೈಲ ಮಲ್ಲಿಕಾರ್ಜುನ ಪೀಠದಿಂದ ಐದು ಅಡಿ ಅಂತರದಲ್ಲಿ ಈ ಪೀಠದ ಸ್ಥಾಪನೆಯಾಗಿದೆ. ಇದು ವಿಸ್ತೀರ್ಣದಲ್ಲಿ ಐದು ಅಡಿ ಉದ್ದ ಅಗಲ ತಳಭಾಗ ಹೊಂದಿದೆ. ಇದರ ತಳಭಾಗದಿಂದ ಮೇಲ್ಛಾವಣೆಯವರೆಗೂ ಐದು ಅಡಿ ಎತ್ತರದಲ್ಲಿದೆ. ಈ ಛಾವಣೆಯಿಂದ ಮೇಲ್ಗೋಪುರ ಐದು ಅಡಿ ಎತ್ತರ ಹೊಂದಿದೆ. ಅಂದರೆ ಒಟ್ಟಾರೆ ಈ ಗುಡಿಯ ತಳಭಾಗದಿಂದ ಶಿಖರದ ಕೊನೆಯವರೆಗೂ ಹತ್ತು ಅಡಿ ಎತ್ತರ ಹೊಂದಿದೆ. ಮೊದಲಿನ ಆ ಎರಡೂ ಪೀಠಗಳಿಗಿಂತ ಈ ಗುಡಿಯ ಶಿಖರವೂ ಸ್ವಲ್ಪ ಭಿನ್ನತೆ ಹೊಂದಿದೆ. ಶಿಖರದ ಮೊದಲನೇ ಸುತ್ತು ಸ್ವಲ್ಪ ಭಾಗ ಎತ್ತರವಾಗಿದೆ. ಇದರ ಮೇಲಿನ ಸುತ್ತು ಪಾತ್ರೆಯ ಹಂಚಿನಂತೆ ಮುಂಚಾಚಿದೆ. ಇದರ ಮೇಲೆ ಒಂದು ಚೌಕಾಕಾರದ ವೃತ್ತಾಕಾರವಾಗಿರುವಂತೆ ಇದಕ್ಕೆ ಅಂಟಿಕೊಂಡಂತೆಯೇ ಸ್ವಲ್ಪ ಗೋಲಾಕೃತಿಯ ಒಂದು ಗುಂಡು ಇದೆ. ನಂತರ ಅದಕ್ಕಿಂತ ಚಿಕ್ಕದಾದ ಗೋಲಾಕೃತಿ ಗುಂಡನ್ನು ಇಟ್ಟಂತೆ ಬಾಸವಾಗುವ ರೀತಿಯಲ್ಲಿ ಈ ಗೋಪುರವನ್ನು ನಿರ್ಮಿಸಿದ್ದಾರೆ. ಈ ಶಿಖರದ ಕೆಲವು ಭಾಗಗಳು ಭಗ್ನಗೊಂಡಿರುವಂತೆ ಕಂಡುಬರುತ್ತವೆ. ಇದು ಸಹ ಒಂದೇ ಭಾಗದಿಂದ ಕೂಡಿರುವುದು. ಇದರ ಒಂದು ಭಾಗವೇ ಗರ್ಭ ಗುಡಿಯಾಗಿದೆ. ಈ ಗರ್ಭ ಗುಡಿಯ ಅಂತರಾಳದಲ್ಲಿ ಒಂದು ಅಡಿ ಎತ್ತರದ ಜಗುಲಿಯ ಮೇಲೆ ಎರಡು ಅಡಿ ಎತ್ತರದ ಈಶ್ವರಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ಲಿಂಗದ ಯಾವುದೇ ಭಾಗವೂ ಭಗ್ನಗೊಂಡಿರುವುದಿಲ್ಲದಿರುವುದು ವಿಶೇಷವಾಗಿದೆ.

ಈ ಗುಡಿಯ ಮುಖ್ಯ ದ್ವಾರವೂ ಮೂರು ಅಡಿ ಎತ್ತರ ಎರಡು ಅಡಿ ಅಗಲ ಗಾತ್ರವನ್ನು ಹೊಂದಿದೆ. ಮುಖ್ಯ ದ್ವಾರದ ಮೇಲ್ಭಾಗವೂ ನಾಲ್ಕೂ ಪಟ್ಟಿಕೆಗಳಿಂದ ಕೂಡಿದೆ. ಇದರ ಬಾಗಿಲಿನ ಎಡ-ಬಲ ಭಾಗದ ತೊಳುಗಳಿಗೆ ನಾಲ್ಕು ನಾಲ್ಕು ಪಟ್ಟಿಕೆಗಳನ್ನು ಅಳವಡಿಸಿರುತ್ತಾರೆ. ಈ ಗುಡಿಗೆ ಒಟ್ಟು ನಾಲ್ಕು ಗೋಡೆಕಂಬಗಳ ಆಧಾರದ ಮೇಲೆ ನಿರ್ಮಾಣವಾಗಿದೆ. ಇದರ ತಳಭಾಗವು ಹಾಸುಗಲ್ಲುಗಳಿಂದ ಹೊದಿಸಲಾಗಿದೆ. ಈ ಕಟ್ಟಡದ ಶೈಲಿಯು ಚಾಲುಕ್ಯರ ಶೈಲಿಯನ್ನು ಹೊಂದಿದೆ.

ಈ ಗುಡಿಯನ್ನು ವಾಸ್ತವಿಕ ದೃಷ್ಟಿಯಿಂದ ನೋಡಿದಾಗ ಪ್ರತೀ ವರ್ಷ ನಡೆಯುವ ಎರಡೂ ಜಾತ್ರೆಗಳಿಗೆ ಸುಣ್ಣವನ್ನು ಬಳಿಯಲಾಗಿರುತ್ತದೆ. ಆಧುನಿಕತೆಯಿಂದ ಯಾವುದೇ ಸುಧಾರಣೆ ಕ್ರಮ ಕೈಗೊಂಡಿರುವುದಿಲ್ಲ. ಇದರ ಭಕ್ತ ಪರಂಪರೆಯು ವಿರಳವಾಗಿ ಕಾಣುತ್ತಿದೆ. ಕಾರಣ ಮುಖ್ಯ ದೇವರ ಆವರಣಯಲ್ಲಿರುವುದರಿಂದ ಚಂದಾಲಿಂಗೇಶ್ವರನೇ ಆಧ್ಯ. ಇದರಿಂದ ಭಕ್ತರ ಭಾವನೆಯಲ್ಲಿ ಎಲ್ಲಾ ಆತನೇ ಎನ್ನುವಂತ ಮನೋಭಾವನೆ ಬೆಳೆದಿದೆ. ಮುಂದಿನ ಕಾಲ ಘಟ್ಟದಲ್ಲಿ ಹೀಗಿರುವಂತ ಗುಡಿಯು ಭಗ್ನಗೊಂಡರೆ ಅಥವಾ ನಶಿಸಿಹೋದರೆ ಅದರ ವಾಸ್ತು ಶಿಲ್ಪದ ಶೈಲಿ, ಅದರ

ವಿಶೇಷತೆಯನ್ನು ಮುಂದಿನ ಪೀಳಿಗೆಗೆ ತಿಳಿಸುವ ನಿಟ್ಟಿನಲ್ಲಿ ಇದನ್ನೂ ಸಹ ಅಧ್ಯಯನಕ್ಕೆ ಒಳಪಡಿಸಿದೆ. ಇದರಿಂದ ಪ್ರವಾಸಿಗರಿಗೂ ಹಾಗೂ ಭಕ್ತಸಮೂಹಕ್ಕೂ ಈ ಸ್ಥಳದಲ್ಲಿಯೂ ಪಂಚಪೀಠಗಳು ಸ್ಥಾಪನೆಯಾಗಿವೆ ಎಂಬುದು ದಾರಿಯಾಗಿದೆ.

೨.೧೭.೪. ರಂಬಾಪುರಿ ವೀರ ಸೋಮೇಶ್ವರ : (Rambapuri Veer Shomeshwara)

ಚಂದಾಲಿಂಗೇಶ್ವರ ಗುಡಿಯ ಮುಖ್ಯ ಆವರಣದಲ್ಲಿರುವ ಪಂಚಪೀಠಗಳಲ್ಲಿ ಇದೂ ಒಂದು. ಇಲ್ಲಿ ಸ್ಥಾಪಿತವಾಗಿರುವ ಪೀಠಗಳಲ್ಲಿ ಅನುಕ್ರಮವಾಗಿ ಬರುವುದೇ ಈ ನಾಲ್ಕನೇ ಪೀಠ ರಂಬಾಪುರಿ ವೀರ ಸೋಮೇಶ್ವರ ಪೀಠ. ಈ ಮೊದಲಿನ ಮೂರು ಪೀಠಗಳ ಗುಡಿಗಿಂತ ಈ ಪೀಠದ ಗುಡಿಯು ಸ್ವಲ್ಪ ಭಿನ್ನತೆ ಹೊಂದಿದೆ. ಅದು ಹೇಗೆಂದರೆ ರಚನೆಯಲ್ಲಿ ಇದು ಎರಡು ಭಾಗಗಳನ್ನು ಹೊಂದಿದೆ. ಕಾಶೀ ವಿಶ್ವನಾಥ ಪೀಠದಂತೆ ಕಂಡರೂ, ಅದು ಭಿನ್ನ ಆ ಕಾಶೀವಿಶ್ವನಾಥ ಪೀಠದ ಗೋಪುರ ಆ ಗರ್ಭಗುಡಿಯ ಮುಂಭಾಗದ ದ್ವಾರದಲ್ಲಿ ಭಿನ್ನತೆಯಿದೆ. ಪ್ರಸ್ತುತ ಈ ಪೀಠದ ಮುಂಭಾಗದ ಮೊಗಸಾಲೆಗೆ ಬಾಗಿಲನ್ನು ಅಳವಡಿಸಿರುವುದಿಲ್ಲ. ಆದರೆ ಇದು ಬಯಲಾಗಿದೆ. ಕಾಶೀವಿಶ್ವನಾಥನ ಪೀಠದ ಮುಂಭಾಗದ ಮೊಗಸಾಲೆಗೆ ಬಾಗಿಲನ್ನು ಅಳವಡಿಸಿದೆ. ಇನ್ನುಳಿದ ಶ್ರೀಶೈಲ ಮಲ್ಲಕಾರ್ಜುನ, ಉಜ್ಜೈನಿ ಲಿಂಗಕ್ಕೆ ಒಂದೇ ಭಾಗದಿಂದ ಕೂಡಿದ ಗರ್ಭಗುಡಿ ಇದೆ. ಗೋಪುರದ ರಚನೆಯಲ್ಲಿ ಕಾಶೀವಿಶ್ವನಾಥನ ಗುಡಿಯ ಗೋಪುರದಂತೆ ಸ್ಪಷ್ಟವಾದ ರಚನೆ ಇಲ್ಲ.

ಈ ಗುಡಿಯ ರಚನೆಯು ಹತ್ತು ಅಡಿ ಉದ್ದ ಐದು ಅಡಿ ಅಗಲ ವಿಸ್ತೀರ್ಣ ಹೊಂದಿದೆ. ತಳಭಾಗದಿಂದ ಮೇಲ್ಚಾವಣಿಯವರೆಗೂ ಐದು ಅಡಿ ಎತ್ತರವಿದೆ. ಈ ಮೇಲ್ಚಾವಣಿಯ ಭಾಗಕ್ಕೆ ಬಂಡೆಗಲ್ಲುಗಳನ್ನು ಎಳೆಯಲಾಗಿದೆ. ಇದರ ಮೇಲೆ ಮೂರು ಸುತ್ತಿನ ಶಿಖರವನ್ನು ಹೊಂದಿದೆ. ಮೊದಲಿನ ಸುತ್ತು ಒಂದು ಅಡಿ ಎತ್ತರವಾಗಿದ್ದು ಇದರ ಮೇಲೆ ಸಾಮಾನ್ಯವಾದ ರೀತಿಯಲ್ಲಿ ಸುತ್ತುಹೊಂದಿದೆ. ಇದರ ಕೊನೆಗೆ ಗೋಲಾಕಾರದ ಗುಮ್ಮಟದ ಮೇಲೆ ಕಳಸವನ್ನು ಇರಿಸಲು ಚೂಪಾದ ಆಕೃತಿಯನ್ನು ಇಡಲಾಗಿದೆ. ಈ ಶಿಖರವೂ ಸೂಕ್ಷ್ಮ ಆಕೃತಿಯನ್ನು ಹೊಂದಿದ್ದು ಕಚ್ಚಾ ಮಾದರಿಯಲ್ಲಿದೆ. ಈ ಗರ್ಭಗುಡಿಯ ದ್ವಾರವು ಮೂರು ಅಡಿ ಎತ್ತರ, ಎರಡು ಅಡಿ ಅಗಲ ಹೊಂದಿದೆ. ದ್ವಾರದ ಮೇಲ್ಭಾಗವೂ ಮೂರುಪಟ್ಟಿಕೆಗಳಿಂದ ಕೂಡಿದೆ. ಬಾಗಿಲಿನ ಎಡ ಹಾಗೂ ಬಲ ತೋಳುಗಳು ಮೂರು ಮೂರು ಪಟ್ಟಿಕೆಗಳಿಂದ ನಿರ್ಮಾಣ ಮಾಡಲಾಗಿದೆ. ಇದರ ಪೂರ್ಣಸುತ್ತಿನ ಗೋಡೆಯ ಗಾತ್ರ ಒಂದು ಅಡಿ ದಪ್ಪವಾದ ಗಾತ್ರವನ್ನು ಹೊಂದಿದೆ. ಗರ್ಭಗುಡಿಯೊಳಗೆ ಈಶ್ವರಲಿಂಗವನ್ನು ನೆಲಮಟ್ಟದಲ್ಲಿಯೇ ಸ್ಥಾಪಿಸಲಾಗಿದೆ. ತಳಭಾಗವನ್ನು ಗಾರೆಯಿಂದ ಹೊದಿಸಲಾಗಿದೆ. ಪ್ರತೀ ವರ್ಷದ ಎರಡೂ ಜಾತ್ರೆಗಳಿಗೆ ಈ ದೇವಾಲಯಕ್ಕೆ ಸುಣ್ಣವನ್ನು ಬಳಿಯಲಾಗಿರುತ್ತದೆ. ವಾಸ್ತವಿಕವಾಗಿ ಈ ದೇವಾಲಯದ ಆರಾಧನೆಯನ್ನು ನೋಡಿದಾಗ ಬೆರಳೆಣಿಕೆಯಷ್ಟು ಭಕ್ತರು ಆರಾಧಿಸುತ್ತಾರೆ.

೨.೧೭.೫. ಕೇದಾರ ಸೋಮೇಶ್ವರ : (Kedhar Shomeshwara)

ಈ ದೇವಾಲಯವು ಚಂದಾಲಿಂಗೇಶ್ವರ ಗುಡಿಯ ಆವರಣದಲ್ಲಿ ಪೂರ್ವದಿಕ್ಕಿಗೆ ಅಭಿಮುಖವಾಗಿದೆ. ಈ ಮೇಲಿನ ಎಲ್ಲಾ ಪೀಠಗಳು ಒಂದೇ ಸಾಲಿನಲ್ಲಿ ಅನುಕ್ರಮವಾಗಿದ್ದರೆ ಇದು ಒಂದು ಮಾತ್ರ ಮುಂದಿನ ಭಾಗದಲ್ಲಿದೆ. ಈ ಪೀಠದ ಗೋಪುರವು ಭಗ್ನಗೊಂಡ ಅವಶೇಷದಂತೆ ಕಾಣುತ್ತದೆ. ಎಲ್ಲಾ ಪೀಠಗಳ ಗೋಪುರಗಳು ಇದ್ದಿದ್ದರಲ್ಲೇ ಸ್ವಲ್ಪ ಶಿಖರದ ಆಕೃತಿಯಂತೆ ಕಂಡರೆ, ಇದು ಮೊಂಡಾದ ಶಿಖರದಂತೆ ಗೋಚರಿಸುತ್ತಿದೆ. ಗೋಪುರದ ಎರಡೇ ಸುತ್ತುಗಳು ಮಾತ್ರ ಕಾಣಿಸುತ್ತವೆ. ಈ ಗೋಪುರದ ಮುಂಭಾಗದಲ್ಲಿ ಹಣೆ ಪಟ್ಟಿಯಂತೆ ಚೌಕಾಕಾರದ ಕಲ್ಲು ನಿಲ್ಲಿಸಿರುವುದು ವಿಶೇಷವಾಗಿದೆ.

ಈ ಕೇದಾರ ಪೀಠವು ಅಗಲ ಐದು ಅಡಿ, ಉದ್ದ ಹತ್ತು ಅಡಿ ವಿಸ್ತೀರ್ಣ ಹೊಂದಿದೆ. ಇದು ತಳಭಾಗದಿಂದ ಮೇಲ್ಛಾವಣಿವರೆಗೆ ಐದು ಅಡಿ ಎತ್ತರ, ಈ ಮೇಲ್ಛಾವಣಿಯಿಂದ ಗೋಪುರ ಐದು ಅಡಿ ಎತ್ತರ ಇತ್ತು ಎಂದು ನಂಬಬಹುದು. ಏಕೆಂದರೆ ಮೊದಲಿನ ಎಲ್ಲಾ ಪೀಠಗಳ ಗೋಪುರಗಳನ್ನು ನೋಡಿದಾಗ ಇದೂ ಸಹ ಅಷ್ಟೇ ಇತ್ತು ಎಂದು ಹೇಳಬಹುದು. ಇದೂ ಕೂಡ ವೃತ್ತಾಕಾರ, ಚೌಕಾಕಾರದಿಂದ ಕೂಡಿದ ಗೋಪುರವಾಗಿದೆ. ಈ ಪೀಠವು ಎರಡು ಭಾಗದಿಂದ ಕೂಡಿದ್ದು ಪೀಠದ ಮುಂಭಾಗದ ಒಂದು ಭಾಗದಲ್ಲಿ ಎರಡು ಅಡಿ ಎತ್ತರದ ಬಸವಣ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ಬಸವಣ್ಣನು ಪೀಠದ ಎರಡನೇ ಭಾಗದ ಗರ್ಭಗುಡಿಯಲ್ಲಿರುವ ಈಶ್ವರಲಿಂಗಕ್ಕೆ ಅಭಿಮುಖವಾಗಿರುತ್ತದೆ. ಪೀಠದ ಮೊದಲನೇ ಭಾಗದಲ್ಲಿ ತಳಭಾಗಕ್ಕೆ ಚಿಕ್ಕಚಿಕ್ಕದಾದ ಗುಂಡು ಗುಂಡಾದ ಶಿಲೆಗಳನ್ನು ಹೊದಿಸಲಾಗಿದೆ. ಆದರೆ ಇದು ಸುಸಜ್ಜಿತ ಸ್ಥಿತಿಯಲ್ಲಿ ಕಾಣುತ್ತಿಲ್ಲ. ಈ ಭಾಗದ ಗೋಡೆಗೆ ಬಳಸಿರುವ ಕಲ್ಲು ಚೌಕಾಕೃತಿಯ ದೊಡ್ಡ ಕಲ್ಲುಗಳಾಗಿವೆ. ಇದರ ಮೇಲ್ಛಾವಣಿಗೆ ಉದ್ದವಾದ ಮಸಗಲ್ಲು(ಇಟ್ಟಗಲ್ಲ)ನ್ನು ಎಳೆಯಲಾಗಿದೆ. ಈ ಮೊಗಸಾಲೆಯ ಭಾಗಕ್ಕೆ ಬಾಗಿಲನ್ನು ಅಳವಡಿಸದೇ ಹಾಗಿಯೇ ಬಿಡಲಾಗಿದೆ. ಆದರೆ ಗರ್ಭಗುಡಿಗೆ ಬಾಗಿಲನ್ನು ಅಳವಡಿಸಲಾಗಿದ್ದು ಮೂರು ಅಡಿ ಎತ್ತರ, ಎರಡು ಅಡಿ ಅಗಲ ಹೊಂದಿದೆ. ಈ ಬಾಗಿಲಿನ ಎಡ–ಬಲ ತೋಳುಗಳು ಮೂರು–ಮೂರು ಪಟ್ಟಿಕೆಗಳಿಂದ ಕೂಡಿವೆ. ಮೇಲ್ಭಾಗವೂ ಸಹ ಮೂರು ಪಟ್ಟಿಕೆಯಿಂದ ಕೂಡಿದೆ. ಗರ್ಭಗುಡಿಯ ಒಳಗೆ ಎರಡು ಅಡಿ ಎತ್ತರದ ಈಶ್ವರಲಿಂಗವನ್ನು ಜಗುಲಿಯ ಮೇಲೆ ಸ್ಥಾಪಿಸಲಾಗಿದೆ. ಈ ಗರ್ಭಗುಡಿಯ ತಳಭಾಗವು ಗಾರೆಯಿಂದ ಹೊದಿಸಲಾಗಿದೆ. ಗುಡಿಯಲ್ಲಿ ಒಟ್ಟು ನಾಲ್ಕು ಗೋಡೆ ಕಂಬಗಳನ್ನು ಅಳವಡಿಸಲಾಗಿದೆ. ವರ್ಷದ ಎರಡೂ ಜಾತ್ರೆಯ ಸಂದರ್ಭದಲ್ಲಿ ಪೀಠಕ್ಕೆ ಸಂಪೂರ್ಣವಾಗಿ ಸುಣ್ಣ ಬಣ್ಣವನ್ನು ಬಳಿಯಲಾಗಿರುತ್ತದೆ.

ಈ ಪೀಠವನ್ನು ವಾಸ್ತವಿಕ ಸ್ಥಿತಿಯಲ್ಲಿ ನೋಡಿದರೆ ಆಧುನಿಕವಾಗಿ ಯಾವುದೇ ಬದಲಾವಣೆಯ ಕಾರ್ಯ ಕೈಗೊಂಡಿರುವುದಿಲ್ಲ. ಪೀಠ ರಚನಾಸ್ಥಿತಿಯಲ್ಲಿ ನಿರ್ಮಾಣವಾದ ಗೋಪುರವು ಕಾಲ

ಕಳೆದಂತೆಲ್ಲಾ ನಶಿಸಿಹೋಗಿರುವುದು ಗೋಚರಿಸುತ್ತದೆ. ಆದರೆ ಇವತ್ತು ಪ್ರತೀ ಜಾತ್ರೆಗೆ ಸುಣ್ಣ ಬಳಿಯುವುದರಿಂದ ಅದು ಮೊದಲಿಗೆ ಹಾಗೇ ಇತ್ತೇನೋ ಎಂಬಂತೆ ಬಾಸವಾಗುತ್ತದೆ. ಈ ಮುಖ್ಯ ಗುಡಿಯು ಶೈವ ಪಂಥೀಯವಾದ್ದರಿಂದ ಈ ಪೀಠದಲ್ಲಿ ಬಸವಣ್ಣನ ಪೂಜೆಯು ಒಟ್ಟುಗೂಡಿ ನಡೆಯುತ್ತದೆ. ಈ ಕ್ಷೇತ್ರ ಪ್ರೇಕ್ಷಣೀಯ ಸ್ಥಳವೂ ಹೌದು, ಧಾರ್ಮಿಕ ಕ್ಷೇತ್ರವೂ ಹೌದು. ಆದ್ದರಿಂದ ಪ್ರವಾಸಿಗರು ಮತ್ತು ಭಕ್ತರು ಈ ಪೀಠದ ದರ್ಶನವನ್ನು ಪಡೆಯುತ್ತಾರೆ. ಪ್ರತೀ ರವಿವಾರದಂದು ಎಲ್ಲಾ ಪೀಠದೊಂದಿಗೆ ಈ ಪೀಠವೂ ಪೂಜೆಗೆ ಒಳಪಡುತ್ತದೆ..

ಒಟ್ಟಾರೆ ಈ ಐದೂ ಪೀಠಗಳು ಒಂದೇ ಸ್ಥಳದಲ್ಲಿ ಸ್ಥಾಪಿಸಿರುವ ಪ್ರಮುಖ ಉದ್ದೇಶವೇನೆಂದರೆ ಈ ಚಂದಾಲಿಂಗೇಶ್ವರ ಗುಡಿಗೆ ಬರುವಂತಹ ಭಕ್ತರಿಗೆ ಎಲ್ಲಾ ದೇವರುಗಳ ದರ್ಶನ ಒಂದೇ ಕಡೆಗೆ ದೊರೆಯಲಿ ಎಂದು ಸ್ಥಾಪಿಸಲಾಗಿದೆ. ಮೂಲ ಪಂಚ ಪೀಠಗಳಿಗೆ ಭಕ್ತರು ದರ್ಶನ ಮಾಡಬೇಕಾದರೆ ಸಮಯ ವ್ಯಯ, ಆರ್ಥಿಕ ವ್ಯಯ, ಪ್ರಯಾಣದ ಪ್ರಯಾಸವನ್ನು ಹೋಗಲಾಡಿಸಲು ಈ ಪೀಠಗಳ ಸ್ಥಾಪನೆಯ ಪ್ರಮುಖ ಉದ್ದೇಶ ಎಂದು ಹೇಳಬಹುದು. ಈ ಐದು ಪೀಠಗಳು ನಶಿಸದೇ ಹಾಗೆ ಮುಂದಿನ ಪೀಳಿಗೆಗೆ ದರ್ಶನಕ್ಕೆ ದಾರಿಯಾಗಲೆಂದು ಅವುಗಳ ಸಂರಕ್ಷಣೆ ಹಾಗೂ ಜೀರ್ಣೋದ್ಧಾರವೂ ಮುಖ್ಯವಾಗಿದೆ. ಪ್ರಾಚೀನ ಕಾಲದ ವಾಸ್ತು ಶಿಲ್ಪಕಲೆ ಹಾಗೂ ಆರಾಧನಾ ಪದ್ಧತಿ, ಧಾರ್ಮಿಕ ಆಚರಣೆಯ ಸಂಪ್ರದಾಯಗಳನ್ನು ಅರಿತುಕೊಳ್ಳುವುದು ಮುಖ್ಯವಾಗಿದೆ.

೨.೧೮. ಕಾಲಕಾಲೇಶ್ವರ ಗುಡಿ : (Kalakalaleshwar's Cabian)

ಇದು ಮುಖ್ಯ ಗುಡಿಯ ಕೋಟೆಗೋಡೆಗೆ ಅಂಟಿಕೊಂಡಿರುವಂತೆ ನಿರ್ಮಾಣವಾಗಿದೆ. ಕೋಟೆಗೋಡೆಯ ಹಿಂಭಾಗದ ಒಳಮೈ ಗೋಡೆಯಲ್ಲಿ ಬಲಭಾಗದಲ್ಲಿ ನಿರ್ಮಿಸಿದೆ. ಈ ಗುಡಿಯ ಬಲಭಾಗದಲ್ಲಿ ಕೋಟೆಯಿಂದ ಒಳ ಹೋಗಲು ಚಿಕ್ಕದಾದ ಬಾಗಿಲು ಇದೆ. ಎಡಭಾಗದಲ್ಲಿ ಗುಡಿಯ ಆಡಳಿತ ಕಛೇರಿ ಇದೆ. ಇದರ ಮೇಲ್ಛಾವಣೆಯು ಚೌಕಾಕಾರವಾಗಿದೆ. ಈ ಗುಡಿಯ ಗರ್ಭಗೃಹದ ಮುಂದಿನ ಭಾಗದಲ್ಲಿ ಐದು ಅಡಿ ಅಗಲ ಹತ್ತು ಅಡಿ ಉದ್ದ ಮೊಗಸಾಲೆಯಿದೆ. ಈ ಗರ್ಭಗೃಹದ ಬಾಗಿಲು ಕಲ್ಲಿನಲ್ಲೇ ಅಲಂಕೃತಗೊಂಡಿದೆ. ಈ ಬಾಗಿಲಿನ ಎಡ ಹಾಗೂ ಬಲಭಾಗಕ್ಕೆ ಸೂಕ್ಷ್ಮ ಕೆತ್ತನೆಯ ಕಂಬಗಳಿವೆ. ಬಾಗಿಲಿನ ತೋಳುಗಳು ಎರಡೆರಡು ಪಟ್ಟಿಕೆಗಳಿಂದ ಕೂಡಿವೆ. ಇದರ ಮೇಲ್ಭಾಗದಲ್ಲಿ ಹಣೆ ಪಟ್ಟಿಯ ರೂಪದಲ್ಲಿ ಆಯತಾಕಾರದ ಶಿಲೆಯನ್ನು ಅಳವಡಿಸಲಾಗಿದೆ. ಈ ಹಣೆಪಟ್ಟಿಯಂತೆ ಹೊಂದಿರುವ ಚೌಕಾಕಾರದ ಕಲ್ಲಿನ ಮೇಲೆ ಹಾಗೂ ಬಾಗಿಲಿನ ಆಚೆ ಈಚೆ ಇರುವ ಕಂಬಗಳಿಗೆ ಹೊಂದಿಕೊಂಡಂತೆ ಕಲ್ಲಿನಲ್ಲೇ ಬೋದಿಗೆಯನ್ನು ರಚಿಸಲಾಗಿದೆ. ಇದರ ಕಟ್ಟಡಕ್ಕೆ ಬಳಸಿದ ಕಲ್ಲುಗಳು ಆಯತಾಕಾರದ ಐದು ಅಡಿ, ನಾಲ್ಕು ಅಡಿ, ಮೂರು ಅಡಿ ಉದ್ದವಾದ ಕಲ್ಲುಗಳನ್ನು ಬಳಸಲಾಗಿದೆ. ಗರ್ಭಗೃಹವನ್ನು ಕೂಡ ಇಂತಹ ವಿಶಾಲವಾದ ಕಲ್ಲುಗಳನ್ನೇ ಬಳಸಿಕೊಂಡು ಒಳಕಟ್ಟಡಗಳನ್ನು ನಿರ್ಮಿಸಲಾಗಿದೆ. ಈ ಗರ್ಭಗೃಹದಲ್ಲಿರುವ ಈಶ್ವರಲಿಂಗವನ್ನು ಒಂದು ಅಡಿ ಎತ್ತರದ ಜಗುಲಿಯ ಮೇಲೆ ಸ್ಥಾಪಿಸಲಾಗಿದೆ. ವರ್ಷದ ಎರಡೂ

ಜಾತ್ರೆಗಳಲ್ಲಿ ಈ ಗುಡಿಗೆ ಸುಣ್ಣವನ್ನು ಬಳಿಯಲಾಗಿರುತ್ತದೆ. ಇಲ್ಲಿ ಪೂಜಿಸುವ ಎಲ್ಲಾ ದೇವರುಗಳೊಂದಿಗೂ ಪ್ರತೀ ರವಿವಾರಕ್ಕೊಮ್ಮೆ ಪೂಜಿಸಲ್ಪಡುತ್ತದೆ.

೨.೧೯. ಮುದ್ದಮ್ಮ ತಾಯಿ ಗುಡಿ : (Mother's Muddamma Cabian)

ಮುಖ್ಯ ಗುಡಿಯ ಆವರಣದ ಚಂದಾಲಿಂಗೇಶ್ವರನ ಗುಡಿಯ ಬಲಭಾಗದಲ್ಲಿದೆ. ಇದನ್ನು ಬಿಸಿಲು ಬೀಳದ ಬಾವಿಯ ಮೇಲೆ ದಕ್ಷಿಣಕ್ಕೆ ಅಭಿಮುಖವಾಗಿ ಸ್ಥಾಪಿಸಲಾಗಿದೆ. ಈ ಗುಡಿಯ ಗಾತ್ರ ಐದು ಅಡಿ ಅಗಲ ಉದ್ದ ಎತ್ತರ ಇದೆ. ಇದು ನೆಲದಿಂದ ಮೇಲ್ಛಾವಣಿವರೆಗೆ, ಮೂರು ಅಡಿ ಎತ್ತರ ಹೊಂದಿದೆ. ಇದರ ಮೇಲೆ ಶಿಖರವು ವೃತ್ತಾಕಾರವಾಗಿ ನಾಲ್ಕು ಸುತ್ತಿನಿಂದ ಕೂಡಿದ್ದು ಅದರ ಮೇಲೆ ಕಳಸವನ್ನು ಕೂಡಿಸಲು ಚೂಪಾದ ಆಕೃತಿಯನ್ನು ಬಿಡಲಾಗಿದೆ. ಈ ಗುಡಿಯ ದ್ವಾರವು ಮೂರು ಅಡಿ ಎತ್ತರವಿದೆ. ಇದರಲ್ಲಿ ಮುದ್ದಮ್ಮ ತಾಯಿ ವಿಗ್ರಹ ಇದ್ದು ಎರಡು ಅಡಿ ಎತ್ತರವಿದೆ. ಇದಕ್ಕೆ ಯಾವುದೇ ಸೂಕ್ಷ್ಮ ಕೆತ್ತನೆಯ ವಾಸ್ತು ಶಿಲ್ಪ ಕಲೆಯನ್ನು ಅಳವಡಿಸಿರುವುದಿಲ್ಲ. ವರ್ಷದ ಎರಡೂ ಜಾತ್ರೆಯ ಸಂದರ್ಭದಲ್ಲಿ ಸಂಪೂರ್ಣ ಗೋಡೆಗೆ ಕೆಂಪು ಬಣ್ಣವನ್ನು ಬಳಿಯಲಾಗುತ್ತದೆ. ಇಲ್ಲಿರುವ ಎಲ್ಲಾ ದೇವರುಗಳೊಂದಿಗೆ ಈ ತಾಯಿಯನ್ನೂ ಪ್ರತೀ ರವಿವಾರಕ್ಕೊಮ್ಮೆ ಪೂಜಿಸುತ್ತಾರೆ.

೨.೨೦. ಶ್ರೀ ದುರ್ಗಾದೇವಿ ಗುಡಿ : (Shree Durgadevi Cabian)

ಮುಖ್ಯ ಗುಡಿಯ ಕೋಟೆಗೋಡೆಯ ಎಡಭಾಗದ ಒಳಮೈಯಲ್ಲಿ ನಿರ್ಮಿಸಿದೆ. ಇದು ದಕ್ಷಿಣ ದಿಕ್ಕಿಗೆ ಅಭಿಮುಖವಾಗಿ ಚಂದಾಲಿಂಗನ ಗುಡಿಯ ಹಿಂಭಾಗದಲ್ಲಿ ಕಂಡುಬರುತ್ತದೆ. ಇದು ಕೋಟೆ ಗೋಡೆಯಲ್ಲಿಯೇ ನಿರ್ಮಾಣವಾಗಿದೆ. ಚೌಕಾಕಾರದ ಆಕೃತಿಯಲ್ಲಿದೆ. ಇದರ ಮೇಲ್ಛಾವಣಿ ಸಮತಟ್ಟಾಗಿದೆ. ಮುಖ್ಯ ದ್ವಾರವೂ ಮೂರು ಅಡಿ ಎತ್ತರ, ಎರಡು ಅಡಿ ಅಗಲವಾಗಿದೆ. ಗರ್ಭಗೃಹದಲ್ಲಿ ದುರ್ಗಾದೇವಿಯ ವಿಗ್ರಹವು ಒಂದು ಅಡಿ ಎತ್ತರದ ಜಗುಲಿಯ ಮೇಲೆ, ಒಂದುವರಿ ಅಡಿ ಎತ್ತರದ ವಿಗ್ರಹವನ್ನು ಸ್ಥಾಪಿಲಾಗಿದೆ. ಈ ಗುಡಿಯು ಒಂದೇ ಭಾಗದಿಂದ ಕೂಡಿದೆ, ಅದುವೇ ಗರ್ಭಗುಡಿಯಾಗಿದೆ. ಬಾಗಿಲದ ಮೇಲ್ಭಾಗವು ಎರಡು ಪಟ್ಟಿಕೆಯಿಂದ ಕೂಡಿದೆ. ಇದರ ಬಾಗಿಲಿನ ಎಡಬಲ ತೋಳುಗಳು ಎರಡೆರಡು ಪಟ್ಟಿಕೆಗಳಿಂದ ನಿರ್ಮಾಣವಾಗಿವೆ. ಈ ಗುಡಿಯು ಐದು ಅಡಿ ಎತ್ತರ ಅಗಲ ವಿಸ್ತೀರ್ಣ ಹೊಂದಿದೆ. ಗುಡಿಯ ಬಲಭಾಗದಲ್ಲಿಯೇ ಕೂಡಲ ಸಂಗಮೇಶ್ವರ ಗುಡಿಯನ್ನು ಸ್ಥಾಪಿಸಿದೆ. ಇದರ ಎದುರಿಗೆ ಹಂಪಿ ವಿರುಪಾಕ್ಷೇಶ್ವರ ಗುಡಿ ನಿರ್ಮಾಣಗೊಂಡಿದೆ. ಪ್ರತೀ ವರ್ಷ ನಡೆಯುವ ಎರಡೂ ಜಾತ್ರೆಗಳಲ್ಲಿ ಶೃಂಗಾರಗೊಳ್ಳುತ್ತದೆ. ಪ್ರತೀ ರವಿವಾರ ಎಲ್ಲಾ ದೇವರುಗಳೊಂದಿಗೆ ಈ ದೇವರ ಪೂಜೆಯು ನೆರವೇರುತ್ತದೆ. ಈ ಗರ್ಭಗುಡಿಯ ಒಳ ಆವರಣದ ತಳ ಭಾಗಕ್ಕೆ ಗಾರೆಯಿಂದ ಹೊದಿಸಲಾಗಿದೆ. ಇದರ ಕಟ್ಟಡಕ್ಕೆ ಬಳಸಿದ ಕಲ್ಲುಗಳು ಆಯತಾಕಾರದ ನಾಲ್ಕು ಅಡಿ ಮೂರು ಅಡಿ ಉದ್ದ, ಒಂದುವರೆ ಅಡಿ

ಅಗಲದ ಇರುವ ಕಲ್ಲುಗಳನ್ನು ಬಳಸಲಾಗಿದೆ. ಇದರ ಮೇಲ್ಛಾವಣಿಗೆ ಎರಡು ಅಡಿ ಅಗಲ, ಐದು ಅಡಿ ಉದ್ದವಿರುವ ಕಲ್ಲುಗಳನ್ನು ಹೊದಿಸಲಾಗಿದೆ. ಇದು ನಿರ್ಮಾಣವಾಗಿರುವುದು ಸಂಪೂರ್ಣವಾಗಿ ಮಸಗಲ್ಲಿನಲ್ಲಿ.

ವಾಸ್ತವಿಕ ದೃಷ್ಟಿಯಿಂದ ಈ ಗುಡಿಯನ್ನು ನೋಡಿದಾಗ ಮೊದಲಿನ ಸ್ಥಿತಿಯಲ್ಲಿಯೇ ಇರುವುದು ಭಕ್ತರ ಸಂಖ್ಯೆಯಲ್ಲಿ ಅಷ್ಟಕಷ್ಟೇ ಇದ್ದಿದ್ದು ತಿಳಿಯುತ್ತದೆ. ಕಾರಣ ಈ ಅವರಣದಲ್ಲಿ ಸಣ್ಣ ಪುಟ್ಟ ದೇವರುಗಳನ್ನು ಒಳಗೊಂಡಂತೆ ಸುಮಾರು ಒಂದುನೂರು ದೇವರುಗಳು ಇರುವುದರಿಂದ ಭಕ್ತರು ಎಲ್ಲಾ ದೈವಗಳಿಗೂ ಹರಿದು ಹಂಚಿಹೊಗುತ್ತಾರೆ. ಇದಲ್ಲದೆ ಯಾವ ಯಾವ ಭಾಗದಲ್ಲಿ ಯಾವ ದೇವರುಗಳು ಇವೆ ಎಂಬುದು ತಿಳಿಯುವುದಿಲ್ಲ ಎಂಬಂತೆ ಊಹಿಸಬಹುದು. ಆದ್ದರಿಂದ ಭಕ್ತ ಜನರಿಗೆ ಇದರ ಪರಿಚಯ ಮಾಡುವುದು ಸೂಕ್ತವಾಗಿದೆ.

೨.೨೧. ಕೂಡಲ ಸಂಗಮೇಶ್ವರ ಗುಡಿ : (Koodala Sangameshwara Cabian)

ಈ ಗುಡಿಯು ಮುಖ್ಯ ಗುಡಿಯ ಆವರಣದ ಒಳಗಡೆಯಿದೆ. ಕೋಟೆಗೋಡೆಯ ಹಿಂಭಾಗದ ಒಳ ಮೈಯಲ್ಲಿ ಈ ಗೋಡೆಗೆ ಅಂಟಿಕೊಂಡಂತೆಯೇ ನಿರ್ಮಾಣ ಮಾಡಿದೆ. ಪೂರ್ವ ದಿಕ್ಕಿಗೆ ಅಭಿಮುಖವಾಗಿ ಸ್ಥಾಪನೆಗೊಂಡಿದೆ. ಇದು ತಳಭಾಗದಲ್ಲಿ ಐದು ಅಡಿ ಉದ್ದಗಲ ವಿಸ್ತೀರ್ಣ ಹೊಂದಿದೆ. ಇದರ ಪೂರ್ಣ ಎತ್ತರ ಹತ್ತು ಅಡಿ ಇದ್ದು ಇದರ ಬುಡದಿಂದ ಮೇಲ್ಛಾವಣಿಯವರೆಗೆ ಐದು ಅಡಿ ಎತ್ತರ, ಈ ಮೇಲ್ಛಾವಣಿಯಿಂದ ಐದಡಿ ಎತ್ತರದಲ್ಲಿ ಶಿಖರಹೊಂದಿದೆ. ಈ ಶಿಖರವು ಐದು ಸುತ್ತಿನ ಚೌಕಾಕಾರವನ್ನು ಹೊಂದಿದ್ದು ಮೇಲೊಂದು ಗುಮ್ಮಟವಿದ್ದು ಇದರ ಮೇಲೆ ಕಳಸವನ್ನು ಕೂಡಿಸಲು ಚೂಪಾದ ಆಕೃತಿಯನ್ನು ಬಿಡಲಾಗಿದೆ. ಇದು ಎರಡು ಭಾಗದಿಂದ ಕೂಡಿದೆ. ಗರ್ಭಗುಡಿಯ ಮುಂಬಾಗವು ಮೊಗಸಾಲೆಯಿಂದ ಕೂಡಿದೆ. ಈ ಮೊಗಸಾಲೆಯ ಮಧ್ಯ ಭಾಗದಲ್ಲಿ ಎರಡು ಅಡಿ ಎತ್ತರದ ಬಸವಣ್ಣನ ವಿಗ್ರಹವನ್ನು ಮಲಗಿದ ಸ್ಥಿತಿಯಲ್ಲಿ ಗರ್ಭಗೃಹಕ್ಕೆ ಅಭಿಮುಖವಾಗಿ ಪ್ರತಿಷ್ಠಾಪಿಸಲಾಗಿದೆ. ಈ ಮೊಗಸಾಲೆಯ ತಳಭಾಗವು ಗಾರೆಯಿಂದ ಹೊದಿಸಲಾಗಿದೆ. ಇದರ ಮೇಲ್ಛಾವಣಿಯು ಐದು ಅಡಿ ಉದ್ದ ಮೂರು ಅಡಿ ಅಗಲವಿರುವ ಬಂಡೆಗಲ್ಲುಗಳಿಂದ ಹೊದಿಸಲಾಗಿದೆ. ಮೊಗಸಾಲೆಯ ಪ್ರವೇಶ ದ್ವಾರವೂ ನಾಲ್ಕು ಅಡಿ ಎತ್ತರ, ಮೂರು ಅಡಿ ಅಗಲವಾಗಿದ್ದು ನಾಲ್ಕು ಗೋಡೆ ಕಂಬಗಳನ್ನು ಆಶ್ರಯ ಪಡೆದಿದೆ. ಇದರ ಗರ್ಭಗೃಹದ್ವಾರವು ಮೂರು ಅಡಿ ಎತ್ತರ ಎರಡು ಅಡಿ ಅಗಲವಾಗಿದೆ. ಈ ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ ಈಶ್ವರಲಿಂಗವನ್ನು ಒಂದು ಅಡಿ ಎತ್ತರದ ಜಗುಲಿಯ ಮೇಲೆ ಸ್ಥಾಪಿಲಾಗಿದೆ. ಗರ್ಭಗುಡಿಯ ತಳಭಾಗವನ್ನು ಗಾರೆಯಿಂದ ಹೊದಿಸಲಾಗಿದೆ. ನಾಲ್ಕು ಗೋಡೆ ಕಂಬಗಳ ಆಧಾರದ ಮೇಲೆ ನಿರ್ಮಿತವಾಗಿದೆ.

೨.೨.೨. ಭರಮದೇವರ ಗುಡಿ : (The Hut of God is Bharama)

ಇದು ಮುಖ್ಯ ಗುಡಿಯ ಆವರಣದ ಮುಂಭಾಗದ ಎಡಭಾಗದ ಕೋಟೆ ಗೋಡೆಯ ಒಳಮೈಗೆ ಪಶ್ಚಿಮಾಭಿಮುಖವಾಗಿ ಸ್ಥಾಪನೆಗೊಂಡಿದೆ. ಇದು ಒಂದೇ ಭಾಗದಿಂದ ಕೂಡಿದ ಚಿಕ್ಕದಾದ ಗುಡಿಯಾಗಿದೆ. ಇದನ್ನು ಜಗುಲಿಯಾಕಾರದ ಕಟ್ಟೆಯ ಮೇಲೆ ಐದು ಅಡಿ ಉದ್ದಗಲ ವಿಸ್ತೀರ್ಣದಲ್ಲಿ ನಿರ್ಮಿಸಿದೆ. ತಳಭಾಗದಿಂದ ಮೇಲ್ಛಾವಣೆಯವರೆಗೆ ಐದು ಅಡಿ ಎತ್ತರ ಮೇಲ್ಛಾವಣೆಯಿಂದ ಗೋಪುರವು ಐದು ಅಡಿ ಎತ್ತರವಾಗಿದೆ. ಒಟ್ಟು ತಳಭಾಗದಿಂದ ಶಿಖರದ ತುದಿಯವರೆಗೂ ಹತ್ತು ಅಡಿ ಎತ್ತರವಾಗಿದೆ. ಈ ಗುಡಿಯ ಮುಖ್ಯ ದ್ವಾರವು ಮೂರು ಅಡಿ ಎತ್ತರ, ಎರಡು ಅಡಿ ಅಗಲವಾಗಿದೆ. ಈ ಗರ್ಭಗುಡಿಯ ಲಿಂಗವು ಒಂದಡಿ ಎತ್ತರದ ಜಗುಲಿಯ ಮೇಲೆ ಎರಡು ಅಡಿ ಎತ್ತರದ ಲಿಂಗವನ್ನು ಸ್ಥಾಪಿಸಲಾಗಿದೆ. ಈ ಗರ್ಭಗುಡಿಯ ತಳಭಾಗಕ್ಕೆ ಗಾರೆಯಿಂದ ಹೊದಿಸಲಾಗಿದೆ. ಇದರ ಮೇಲ್ಛಾವಣೆಯು ಚೌಕಾಕಾರವನ್ನು ಹೊಂದಿದ್ದು, ಅದರ ಮೇಲೆ ನಾಲ್ಕೂ ಸುತ್ತಿನ ಶಿಖರವನ್ನು ಹೊಂದಿದೆ. ಈ ಗುಡಿಯ ಯಾವ ಭಾಗವೂ ಭಗ್ನಗೊಳ್ಳದೆ ಪೂರ್ವದ ಸ್ಥಿತಿಯಲ್ಲಿದ್ದಂತೆ ಇದೆ. ಆದರೆ ಆಧುನಿಕವಾಗಿ ಪ್ರತೀ ವರ್ಷದ ಎರಡೂ ಜಾತ್ರೆಗಳಿಗೊಮ್ಮೆ ಸುಣ್ಣವನ್ನು ಬಳಿಯಲಾಗುತ್ತದೆ.

೨.೨.೩. ತುಪ್ಪದ ಮಾಳಮ್ಮನ ಗುಡಿ : (Tuppada Malamma's Cabian)

ಇದು ಮುಖ್ಯ ಗುಡಿಯ ಕೋಟೆಗೋಡೆಯ ಒಳ ಆವರಣದಲ್ಲಿ ಕಂಡುಬರುತ್ತದೆ. ಚಂದಾಲಿಂಗೇಶ್ವರನ ಗುಡಿಯ ಎಡಭಾಗದ ಕೋಟೆ ಗೋಡೆಯ ಪಕ್ಕದಲ್ಲಿರುವ ಚೌಕಾಕಾರದ ಕಟ್ಟೆಯ ಮೇಲೆ ಸ್ಥಾಪಿತವಾಗಿದೆ. ಮುಖ್ಯ ಗುಡಿಯ ಪ್ರವೇಶದ್ವಾರದ ಎಡಭಾಗದಲ್ಲಿದೆ. ಇದು ಹತ್ತು ಅಡಿ ಅಗಲ ಮತ್ತು ಉದ್ದ ಕಟ್ಟೆಯ ಮೇಲೆ ಎಂಟು ಅಡಿ ಅಗಲ ಉದ್ದ ವಿಸ್ತೀರ್ಣದಲ್ಲಿ ಇದರ ತಳಭಾಗ ಹೊಂದಿದೆ. ಇದರ ತಳಭಾಗದಿಂದ ಮೇಲ್ಛಾವಣೆಯವರಿಗೆ ಐದು ಅಡಿ ಎತ್ತರದವರಗೆ ಶಿಖರವನ್ನು ರಚಿಸಲಾಗಿದೆ. ಈ ಶಿಖರವು ವೃತ್ತಾಕಾರವಾಗಿ ಮೂರು ಸ್ಥಲದ ಹಂತದಲ್ಲಿ ನಿರ್ಮಾಣಗೊಂಡು ಮೇಲೊಂದು ಗೋಲಾಕಾರದ ಗುಮ್ಮಟವನ್ನು ರಚಿಸಿ ಅದರ ಮೇಲೆ ಕಳಸವನ್ನು ಕೂಡಿಸಲು ಚೂಪಾದ ಆಕೃತಿಯ ಸಲಾಕೆಯನ್ನು ಇದರಲ್ಲಿ ಸೇರ್ಪಡಿಸಲಾಗಿದೆ. ಜಾತ್ರೆಯ ದಿನಗಳಲ್ಲಿ ಈ ಗೋಪುರಕ್ಕೆ ಕಳಸವನ್ನು ಕೂಡಿಸಲಾಗುತ್ತದೆ. ಇದರ ಗರ್ಭಗೃಹದ ದ್ವಾರವು ದಕ್ಷಿಣಕ್ಕೆ ಅಭಿಮುಖವಾಗಿದೆ. ಇದು ಗರ್ಭಗುಡಿಯನ್ನು ಹೊಂದಿದೆ. ದ್ವಾರವು ಮೂರು ಅಡಿ ಎತ್ತರ ಎರಡು ಅಡಿ ಆಗಲವಾಗಿ ನಿರ್ಮಿಸಿದೆ.

ಈ ಗರ್ಭಗುಡಿಯೊಳಗೆ ತುಪ್ಪದ ಮಾಳಮ್ಮನ ವಿಗ್ರಹವನ್ನು ಒಂದು ಅಡಿ ಎತ್ತರದ ಜಗುಲಿಯ ಮೇಲೆ ಎರಡು ಅಡಿ ಎತ್ತರದ ವಿಗ್ರಹವನ್ನು ಸ್ಥಾಪಿಸಲಾಗಿದೆ. ಈ ವಿಗ್ರಹವನ್ನು ಕಪ್ಪು ಬಳಪದ ಕಲ್ಲಿನಲ್ಲಿ ಕೆತ್ತನೆ ಮಾಡಲಾಗಿದೆ. ಈ ಗುಡಿಯು ಪೂರ್ವದಲ್ಲಿ ಹೇಗೆ ರಚನೆಯಾಗಿತ್ತೋ ಅದೇ ಮಾದರಿಯಲ್ಲಿದೆ. ಇಂದಿಗೂ ಸಹ ಸುಸಜ್ಜಿತವಾದ ಸ್ಥಿತಿಯಲ್ಲಿದೆ.

ವರ್ಷದ ಎರಡೂ ಜಾತ್ರೆಗಳಲ್ಲಿ ಇದಕ್ಕೂ ಸಂಪೂರ್ಣವಾಗಿ ಸುಣ್ಣವನ್ನು ಬಳಿಯಲಾಗಿರುತ್ತದೆ. ಈ ತುಪ್ಪದ ಮಾಳಮ್ಮನನ್ನು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆರಾಧಿಸುತ್ತಾರೆ. ಈ ಗರ್ಭಗುಡಿಯ ತಳಭಾಗಕ್ಕೆ ಗಾರೆಯಿಂದ ಸಮತಟ್ಟಾದ ರೀತಿಯಲ್ಲಿ ನಿರ್ಮಿಸಲಾಗಿದೆ.

೨.೨೪. ಶಿಬಾರಗಳು : (Shibara's)

ಈ ಕ್ಷೇತ್ರದಲ್ಲಿ ಒಟ್ಟು ಹದಿನೈದು ಶಿಬಾರಗಳು ಗೋಚರಿಸುತ್ತವೆ. ಇವು ಮೂರು ದಿಕ್ಕಿನ ಭಾಗಗಳಿಗೆ ಇರುವುದು ವಿಶೇಷವಾಗಿದೆ. ಚಂದಾಲಿಂಗನಿಗೆ ಬರುವ ಮುಖ್ಯ ಮಾರ್ಗವಾದ ಹನುಮಸಾಗರದಿಂದ ಈ ಕ್ಷೇತ್ರಕ್ಕೆ ಬರುವಂತ ಮಾರ್ಗದ ಎಡ ಭಾಗದಲ್ಲಿ ಮೂರು ಶಿಬಾರಗಳು ಇವೆ. ಇದೇ ರೀತಿ ಬೀಳಿಗೆಗೆ ಹೋಗುವ ಕಚ್ಚಾಮಾರ್ಗದಲ್ಲಿ ಮೂರು ಶಿಬಾರಗಳಿವೆ. ಈತನ ಹೊಂಡಕ್ಕೆ ಹೋಗುವ ಮಾರ್ಗದಲ್ಲಿ ಮೂರು ಶಿಬಾರಗಳು ಹಾಗೂ ಮುಖ್ಯ ಪ್ರವೇಶದ್ವಾರದ ಮುಂಭಾಗದ ಆಂಜನೇಯಸ್ವಾಮಿ ಗುಡಿಯ ಎಡಭಾಗಕ್ಕೆ ಒಂದು, ಮುಖ್ಯ ಗುಡಿಯ ಒಳ ಆವರಣದಲ್ಲಿ ಹೆಗ್ಗಡೆಪ್ರಧಾನಿ ಗುಡಿಯ ಮುಂದೆ ಒಂದು ಶಿಬಾರ ಇರುವುದು. ಹೀಗೆ ಈ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ. ಈ ಪ್ರದೇಶದಲ್ಲಿ ಬರುವಂತ ಶಿಬಾರಗಳು ಗಾತ್ರದಲ್ಲಿ ಭಿನ್ನತೆ ಕಂಡುಬರುತ್ತವೆ. ಮುಖ್ಯ ಗುಡಿಯ ಆವರಣದೊಳಗೆ ಹೆಗ್ಗಪ್ಪನ ಗುಡಿಯ ಮುಂದೆ ಇರುವ ಶಿಬಾರವು ಹತ್ತು ಅಡಿ ಅಗಲ, ಹತ್ತು ಅಡಿ ಎತ್ತರವಾಗಿದೆ. ಈ ಶಿಬಾರದ ಎರಡು ಕಂಬಗಳು ಹತ್ತು ಅಡಿ ಎತ್ತರವಾಗಿದ್ದು ಇವುಗಳ ಸುತ್ತಳತೆ ಎರಡು ಅಡಿ ದಪ್ಪವಾಗಿದೆ.

ಈ ಶಿಬಾರದ ಕಂಬಗಳ ಮೇಲ್ಭಾಗ ಮತ್ತು ಕೆಳಭಾಗಗಳು ಚೌಕಾಕಾರವಾಗಿದ್ದು, ಮಧ್ಯಭಾಗವು ವೃತ್ತಾಕಾರವಾಗಿ, ನುಣುಪಾಗಿದ್ದು ಸೂಕ್ಷ್ಮ ಕೆತ್ತನೆಯನ್ನು ಹೊಂದಿದೆ. ಈ ಎರಡು ಕಂಬಗಳ ಮೇಲೆ ಆಚೆ ಈಚೆಗೆ ಹೊಂದಿಕೊಂಡಿರುವಂತೆ ಅಡ್ಡ ಹಾಕಿರುವ ಶಿಲಾಪಟ್ಟಿಕೆಯು ಚೌಕಾಕಾರದಾಗಿ ಎರಡು ಅಡಿ ದಪ್ಪದ ಸುತ್ತಳತೆ ಹೊಂದಿದೆ. ಈ ಅಡ್ಡ ಶಿಲಾಪಟ್ಟಿಕೆಯ ಮಧ್ಯದ ಮೇಲ್ಭಾಗಕ್ಕೆ ತ್ರಿಶೂಲದ ಸಂಕೇತವಾಗಿ ಮೂರು ಮೊನಚಾದ ಆಕಾರಗಳನ್ನು ಕಲ್ಲಿನಲ್ಲಿಯೇ ನಿರ್ಮಿಸಲಾಗಿರುತ್ತದೆ. ಈ ಅಡ್ಡ ಶಿಲಾಪಟ್ಟಿಕೆಯ ಎರಡೂ ಕೊನೆಭಾಗದಲ್ಲಿ ಶಿಲೆಯಿಂದ ಕೆತ್ತಿದ ಮೊನಚಾದ ಆಕೃತಿಗಳನ್ನು ಹೊರಚಾಚಿರುವಂತೆ ಅಳವಡಿಸಿದ್ದಾರೆ. ಈ ಮೊನಚಾದ ಶಿಲಾಕೃತಿಗಳ ಮಧ್ಯ ಆಚೆ ಈಚೆ ಗೋಲಾಕೃತಿಯಲ್ಲಿ ಚೂಪಾದ ಎರಡು ಶಿಲೆಗಳನ್ನು ಆಳವಡಿಸಿದ್ದಾರೆ. ಈ ಶಿಬಾರದ ಎರಡು ಕಂಬಗಳ ಮಧ್ಯ ತಳಭಾಗದಲ್ಲಿ ಮೂರು ಅಡಿ ಎತ್ತರದ, ಎರಡು ಅಡಿ ಅಗಲದ ಚೌಕಾಕಾರದ ಗದ್ದುಗೆಯನ್ನು ಸ್ಥಾಪಿಸಲಾಗಿದೆ. ಈ ಗದ್ದುಗೆಯ ಬಗ್ಗೆ ಪೂಜಾರಿಗಳಿಗೆ ಕೇಳಿದಾಗ ಅವರು ಹೀಗೆ ಹೇಳುತ್ತಾರೆ. ಬಹಳ ದಿನಗಳ ಹಿಂದೆ ಸರಪಳಿ ಪವಾಡ ನಡೆಯುವಾಗ ವಗ್ಗಯ್ಯನವರು, ಪೂಜಾರಿಗಳು, ಅದನ್ನು ಹರಿಯಲು ಅಸಾಧ್ಯವಾದಾಗ ಗುಡಿಯ ಪೂಜಾರಿಯು ಶಿರಸ್ ಪವಾಡ ಮಾಡಬೇಕಾಗಿ ಬಂದಿತು. ಈ ದೇವರ ಆಶೀರ್ವಾದದಿಂದ ಜೀವ ಮರಳಿ ಬರಬೇಕ್ಕಿತ್ತು, ಆದ್ರೆ ಯಾಕೋ ಪುನರ್ಜನ್ಮ ಬರದೆಯಿರುವುದರಿಂದ ಆ ಪೂಜಾರಿಯ ದೇಹವನ್ನು ಅಲ್ಲಿಯೇ ಸಮಾಧಿ ಮಾಡಲಾಗಿದ್ದರಿಂದ ಇದು ಆತನ ಗದ್ದುಯಾಗಿದೆ ಎಂದು ಹೇಳುತ್ತಾರೆ.

ಅರವತ್ತು ಕಂಬದ ಅಗಸಿ ಬಾಗಿಲಿಗೆ ಅಭಿಮುಖವಾಗಿ ಆಂಜನೇಯನ ಗುಡಿಯ ಎಡಭಾಗದ ಮುಂಭಾಗದಲ್ಲಿ ಇನ್ನೊಂದು ಶಿಬಾರವಿದೆ. ಇದು ಗುಡಿಗೆ ಬರುವ ಮುಖ್ಯಮಾರ್ಗದಲ್ಲಿದೆ. ಈ ಶಿಬಾರವು ಹತ್ತು ಅಡಿ ಎತ್ತರವಾಗಿದೆ. ಶಿಬಾರದ ಎರಡೂ ಕಂಬಗಳು ತಳಭಾಗದಲ್ಲಿ ಒಂದು ಅಡಿ ಎತ್ತರದ ಮೂರು ಅಡಿ ಉದ್ದಗಲದ ಚೌಕಾಕಾರದ ಶಿಲೆಯ ಮೇಲೆ ತಲಾ ಒಂದರಂತೆ ನಿಲ್ಲಿಸಲಾಗಿದೆ. ಈ ಚೌಕಾಕಾರದ ತಳಗಲ್ಲುಗಳು ಹತ್ತು ಅಡಿ ಉದ್ದ ಮೂರು ಅಡಿ ಅಗಲದ ಬಂಡೆಗಲ್ಲುಗಳ ಮೇಲೆ ಇರಿಸಲಾಗಿದೆ. ಒಂದೊಂದು ಕಂಬಗಳು ನಾಲ್ಕು ಭಾಗದ ರೀತಿಯಲ್ಲಿ ವಿಶೇಷವಾದ ವಾಸ್ತುಶಿಲ್ಪ ಹೊಂದಿವೆ. ಅದು ಹೇಗೆಂದರೆ ಕಂಬಗಳ ತಳಭಾಗ ಒಂದುವರೆ ಅಡಿ ಎತ್ತರದವರೆಗೆ ಚೌಕಾಕೃತಿ ಹೊಂದಿವೆ. ಇದರ ಮೇಲ್ಭಾಗವು ಅಷ್ಟಾಯತಾ (ಎಂಟು ಆಯಾತ ಆಕಾರ) ಆಕೃತಿಯಲ್ಲಿ ಕೆತ್ತಿದೆ. ತದನಂತರದ ಭಾಗ ಒಂದು ಅಡಿ ಎತ್ತರದವರೆಗೆ ಚೌಕಾಕಾರದ ಕೆತ್ತನೆಯಾಗಿದೆ. ಇದರ ಒಂದು ಅಡಿ ಮೇಲ್ಭಾಗ ಕೊನೆಯ ತುದಿಯವರೆಗೆ ವೃತ್ತಾಕಾರವಾಗಿ ಸೂಕ್ಷ್ಮ ಕೆತ್ತನೆಯನ್ನು ಹೊಂದಿವೆ. ಈ ಎರಡು ಕಂಬಗಳ ಮೇಲ್ತುದಿ ಭಾಗದಲ್ಲಿ ಒಂದು ಅಡಿ ಎತ್ತರ, ಎರಡು ಅಡಿ ಉದ್ದಗಲದ ಚೌಕಾಕೃತಿಯ ಕಲ್ಲುಗಳನ್ನು ಜೋಡಿಸಲಾಗಿದೆ. ಇವುಗಳ ಮೇಲೆ ಎರಡು ಶಿಲಾ ಕಂಬಕ್ಕೆ ಅಡ್ಡವಾಗಿ ಹೊಂದಿಕೊಂಡಂತೆ ಹತ್ತು ಅಡಿ ಉದ್ದವಾದ, ಎರಡು ಅಡಿ ಸುತ್ತಳತೆ, ದಪ್ಪವಾದ ಆಯಾತಾಕಾರದ ಶಿಲಾಪಟ್ಟಿಕೆಯನ್ನು ಜೋಡಿಸಿದೆ. ಈ ಅಡ್ಡ ಶಿಲಾಪಟ್ಟಿಕೆಯ ಮೇಲ್ಭಾಗದ ಮಧ್ಯಭಾಗದಲ್ಲಿ ತ್ರಿಶೂಲದ ಸಂಕೇತವಾದ ಮೂರು ಮೊನಚಾದ ಆಕಾರದಲ್ಲಿ ಆಕೃತಿಯನ್ನು ಕಲ್ಲಿನಲ್ಲಿಯೇ ರಚಿಸಿದೆ. ಈ ಮೇಲ್ಭಾಗದ ಶಿಲಾ ಪಟ್ಟಿಕೆಯ ಎಡ ಮತ್ತು ಬಲಭಾಗದ ಕೊನೆಯಲ್ಲಿ ಮೊನಚಾದ ಹೊರಚಾಚಿತ ಶಿಲೆಗಳನ್ನು ಜೋಡಿಸಿದ್ದಾರೆ. ಈ ಶಿಲೆಗಳ ಒಳಭಾಗದಲ್ಲಿ ಗೋಲಾಕೃತಿಯ ಉದ್ದನೆಯ ಶಿಲೆಯನ್ನು ಇದರಲ್ಲಿ ಅಳವಡಿಸಿದ್ದಾರೆ. ಈ ಶಿಬಾರದ ಮಧ್ಯದ ತಳಭಾಗದಲ್ಲಿ ಎರಡು ಅಡಿ ಎತ್ತರದ, ಮೂರು ಅಡಿ ಚೌಕಾಕೃತಿಯ ಕಲ್ಲಿನ ಮೇಲೆ, ಅರ್ಧ ಅಡಿ ಎತ್ತರದ ಎರಡು ಅಡಿ ಅಗಲ ಚೌಕಾಕೃತಿಯ ಕಲ್ಲಿನಲ್ಲಿ ಪಾದಗಳನ್ನು ಕೆತ್ತಿಡಲಾಗಿದೆ.

ಮೂರನೇ ಶಿಬಾರವು ಮುಖ್ಯದೇವಾಲಯದಿಂದ ಹೊಂಡಕ್ಕೆ ಹೋಗುವ ಮಾರ್ಗದಲ್ಲಿ ಸ್ಥಾಪಿಸಲಾಗಿದೆ. ಇದು ಹತ್ತು ಅಡಿ ಎತ್ತರವಾಗಿ ಆರು ಅಡಿ ಅಗಲವಾಗಿ ವಿಸ್ತಾರ ಹೊಂದಿದೆ. ಇದರ ತಳಭಾಗವು ಆರು ಅಡಿ ಉದ್ದಗಲದ ಹಾಸುಗಲ್ಲಿನ ಮೇಲೆ ಕಂಬಗಳಿಗೆ ತಲಾ ಒಂದರಂತೆ, ಒಂದು ಅಡಿ ಎತ್ತರದ, ಎರಡು ಅಡಿ ಚೌಕಾಕಾರದ ಕಲ್ಲಿನ ಮೇಲೆ ಈ ಕಂಬಗಳನ್ನು ಜೋಡಿಸಲಾಗಿದೆ. ಈ ಎರಡೂ ಶಿಲೆಕಂಬಗಳು ಕೆಳಭಾಗದಲ್ಲಿ ಎರಡು ಅಡಿ ಎತ್ತರದವರೆಗೂ ಚೌಕಾಕೃತಿ ಹೊಂದಿ, ಇದರ ಮೇಲ್ಭಾಗ ಒಂದು ಅಡಿ ಅಷ್ಟ ಚೌಕಾಕೃತಿಯಲ್ಲಿ ಕೆತ್ತನೆಯಾಗಿ, ಇದರ ಮೇಲ್ಭಾಗವು ಒಂದು ಅಡಿ ಗುಮ್ಮಟಾಕಾರದ ಚೌಕಾಕೃತಿ ಹೊಂದಿ, ತದನಂತರ ಸರಳ ಚೌಕಾಕಾರದ ಕೆತ್ತನೆಯನ್ನು ಹೊಂದಿದೆ. ಈ ಎರಡೂ ಕಂಬಗಳ ಮೇಲ್ಭಾಗದ

ಶಿಲಾ ಪಟ್ಟಿಕೆಯು ಎರಡು ಅಡಿ ದಪ್ಪದಷ್ಟು ಸುತ್ತಳತೆಯನ್ನು ಹೊಂದಿದೆ. ಹತ್ತು ಅಡಿ ಉದ್ದವಾಗಿದ್ದು ಎರಡೂ ಕಂಬಗಳಿಗೆ ಹೊಂದಿಕೊಂಡಂತೆ ಜೋಡಿಸಲಾಗಿದೆ. ಈ ಅಡ್ಡ ಪಟ್ಟಿಕೆಯ ಶಿಲೆಯ ಮಧ್ಯಭಾಗಕ್ಕೆ ತ್ರಿಶೂಲ ಆಕಾರದ ಸಂಕೇತವನ್ನು ಒಂದೇ ಶಿಲೆಯಲ್ಲಿ ಕೆತ್ತಿ ಮಧ್ಯ ಜೋಡಿಸಲಾಗಿದೆ. ಈ ಅಡ್ಡ ಶಿಲೆಯ ಕೊನೆಯ ಎರಡು ಭಾಗಕ್ಕೂ ಹೊರಚಾಚಿದ ಮೊನಚಾದ ಶಿಲೆಯನ್ನು ಜೋಡಿಸಿರುವುದೊಂದಿಗೆ, ಇವುಗಳ ಪಕಕ್ಕೆ ಗೋಲಾಕಾರವಾಗಿ, ಚೂಪಾದ ಆಕೃತಿಯಲ್ಲಿ ಮತ್ತೆರಡು ಶಿಲೆಗಳನ್ನು ಹೊಂದಿಸಲಾಗಿದೆ. ಈ ಶಿಬಾರದ ತಳಭಾಗದ ಮಧ್ಯದಲ್ಲಿ ಎರಡು ಅಡಿ ಉದ್ದಗಲದ ಚೌಕಾಕಾರದ ಕಲ್ಲಿನಲ್ಲಿ ಪಾದಗಳನ್ನು ಕೆತ್ತಿಡಲಾಗಿದೆ.

ನಾಲ್ಕನೇ ಶಿಬಾರವೂ ಹೊಂಡವನ್ನು ದಾಟಿ ಸ್ವಲ್ಪ ಮುಂದಕ್ಕೆ ಹೋದರೆ ಅದು ಅಲ್ಲಿ ಗೋಚರಿಸುತ್ತದೆ. ಇದು ಕೂಡ ಆಕಾರ, ಗಾತ್ರ, ರಚನೆಯಲ್ಲಿ ಮೂರನೆ ಶಿಬಾರದಂತೆಯೇ ನಿರ್ಮಾಣವಾಗಿದೆ. ಈ ಶಿಬಾರದ ಮಧ್ಯದ ತಳಭಾಗದಲ್ಲಿ ಎರಡು ಅಡಿ ಉದ್ದಗಲ ಚೌಕಾಕಾರದ ಕಲ್ಲಿನ ಪಾದಗಳನ್ನು ಕೆತ್ತಿಡಲಾಗಿದೆ. ಐದನೆಯ ಶಿಬಾರವು ಮುಖ್ಯ ಗುಡಿಯಿಂದ ಒಂದುನೂರು ಮೀಟರ್ ಅಂತರದಲ್ಲಿದೆ. ಇದು ಬೀಳಿಗಿಯ ಕೂಗು ಬಸವಣ್ಣನ ಕಡೆಗೆ ಹೋಗುವಂತ ಮಾರ್ಗದಲ್ಲಿ ಮೊದಲಿಗೆ ಬರುತ್ತದೆ. ಇದನ್ನು ನೋಡಿದರೆ ಇತ್ತೀಚಿಗೆ ರಚಿಸಿರುವಂತೆ ಕಾಣುತ್ತದೆ. ಏಕೆಂದರೆ ಇದರ ಪಕ್ಕದಲ್ಲಿ ಬಿದ್ದಿರುವಂತಹ ಅವಶೇಷಗಳನ್ನು ನೋಡಿದರೆ ಈ ಮೊದಲು ಇರುವಂತ ಶಿಬಾರದ ಬಿದ್ದೋಗಿರುವ ಅವಶೇಷಗಳಾಗಿವೆ. ಇದೂ ಸಹ ಎತ್ತರ, ಗಾತ್ರ, ಆಕಾರ ರಚನೆಯು ಈ ಮೊದಲಿನ ನಾಲ್ಕು ಶಿಬಾರಗಳಂತೆಯೇ ನಿರ್ಮಾಣವಾಗಿದೆ.

ಆರನೆ ಶಿಬಾರವು ಮುಖ್ಯ ಗುಡಿಯಿಂದ ಅರ್ಧ ಕಿ.ಮೀ. ದೂರದಲ್ಲಿದೆ. ಇದನ್ನು ಕೂಗು ಬಸವಣ್ಣನಿಗೆ ಹೋಗುವ ಮಾರ್ಗದಲ್ಲಿ ಕಲ್ಲುಬಂಡೆಗಳ ಬೆಟ್ಟದ ಮಾರ್ಗಮಧ್ಯ ಸ್ಥಾಪಿಸಲಾಗಿದೆ. ಈ ಶಿಬಾರವು ಈ ಮೇಲಿನ ಐದು ಶಿಬಾರಗಳಿಗಿಂತ ಹಳೆಯದಾಗಿದ್ದು ಹಾಗೂ ಎತ್ತರವಾಗಿ ಕಾಣುತ್ತದೆ. ಸುಮಾರು ಹತ್ತು ಹನ್ನೆರಡು ಅಡಿ ಎತ್ತರವಾಗಿದೆ. ಈ ಎರಡು ಶಿಲೆಕಂಬಗಳ ಅಂತರ ಹತ್ತು ಅಡಿಯಾಗಿದೆ. ಈ ಎರಡೂ ಕಂಬಗಳು ಒಂದು ಅಡಿ ಎತ್ತರ ಹಾಗೂ ಎರಡು ಅಡಿ ಉದ್ದಗಲ ಹೊಂದಿದ ಚೌಕಾಕಾರ ಹಾಗೂ ವೃತ್ತಾಕಾರದ ಕಲ್ಲಿನ ಮೇಲೆ ನಿಲ್ಲಿಸಲಾಗಿದೆ. ಈ ಶಿಬಾರದ ಎರಡು ಕಂಬಗಳ ರಚನೆಯು ಬುಡದಿಂದ ಎರಡು ಅಡಿ ಎತ್ತರದವರೆಗೆ ಚೌಕಾಕಾರದಲ್ಲಿ ಕೆತ್ತಲಾಗಿದೆ. ಇದರ ಮೇಲ್ಭಾಗ ಒಂದು ಅಡಿ ಎತ್ತರದವರೆಗೆ ವೃತ್ತಾಕಾರವಾಗಿ ಕೆತ್ತಿದೆ. ತದನಂತರ ಮೇಲ್ಭಾಗ ಎರಡು ಅಡಿ ಎತ್ತರದವರೆಗೂ ಚೌಕಾಕಾರದ ಕೆತ್ತನೆ ಹೊಂದಿದ್ದು, ಇದರ ಮೇಲ್ತುದಿಯ ಕೊನೆಯ ಎರಡು ಅಡಿ ಎತ್ತರದವರೆಗೂ ಸೂಕ್ಷ್ಮ ಕೆತ್ತನೆಯು ಎರಡು ಹಂತದ ಗೋಲಾಕೃತಿಯನ್ನು ಹೊಂದಿದೆ. ಇವೆರಡು ಕಂಬಗಳ ಮೇಲ್ತುದಿಗೆ ಹೊಂದಿಕೊಂಡಂತೆ ಅಡ್ಡಲಾಗಿ ಹತ್ತು ಅಡಿ ಉದ್ದ, ಎರಡು ಅಡಿ ದಪ್ಪ ಸುತ್ತಳತೆಯ ಶಿಲಾಪಟ್ಟಿಕೆಯನ್ನು ಜೋಡಿಸಲಾಗಿದೆ. ಈ ಅಡ್ಡ ಶಿಲಾಪಟ್ಟಿಕೆಯ ಮಧ್ಯಭಾಗದಲ್ಲಿ ಈ ಮೊದಲು ತಿಳಿಸಿರುವ ಶಿಬಾರಗಳಂತೆ ತ್ರಿಶೂಲ ಆಕಾರದ ಸಂಕೇತವನ್ನು

ಹಾಗೂ ಇನ್ನಿತರ ಆಕೃತಿಗಳನ್ನು ಹೊಂದಿದೆ. ಮಧ್ಯದ ತಳಭಾಗದಲ್ಲಿ ಪಾದುಕೆಗಳನ್ನು ಒಂದು ಅಡಿ ಎತ್ತರದ ಚೌಕಾಕಾರದ ಕಲ್ಲಿನಲ್ಲಿ ಕೆತ್ತಲಾಗಿದೆ. ಇದೇ ಮಾರ್ಗದಲ್ಲಿ ಏಳನೇ ಶಿಬಾರವು ಇದೇ ಮಾದರಿಯಲ್ಲಿ ಈ ಶಿಬಾರದಿಂದ ಅರ್ಧ ಕಿ.ಮೀ. ದೂರದಲ್ಲಿ ಕಂಡುಬರುತ್ತದೆ.

ಎಂಟನೇ ಶಿಬಾರವು ಮಾದರ ಚಂದಪ್ಪನ ಗುಡಿಯ ಮುಂಭಾಗದಲ್ಲಿದೆ. ಇದು ಪಾಳು ಬಿದ್ದ ಸ್ಥಿತಿಯಲ್ಲಿ ಗೋಚರಿಸುತ್ತಿದೆ. ಈ ಶಿಬಾರವು ಐದು ಅಡಿ ಎತ್ತರವಾಗಿದ್ದು, ಶಿಬಾರದ ಕಂಬಗಳು ಮಾತ್ರ ನಿಂತ ಸ್ಥಿತಿಯಲ್ಲಿ ಗೋಚರಿಸುತ್ತಿವೆ. ಇದರ ಮೇಲ್ಭಾಗದಲ್ಲಿರುವ ಅಡ್ಡಲಾಗಿರುವ ಶಿಲಾ ಪಟ್ಟಿಕೆಯು ಕೆಳಗೆ ಬಿದ್ದು ಹೋಗಿದೆ. ಇದರ ಕಂಬಗಳು ಎರಡು ಅಡಿ ಸುತ್ತಳತೆಯಷ್ಟು ದಪ್ಪವಾಗಿವೆ. ಮೇಲ್ಭಾಗ ಹಾಗೂ ಕೆಳಭಾಗಗಳ ಚೌಕಾಕಾರದಲ್ಲಿ ಕೆತ್ತನೆಯಾಗಿವೆ. ಆದರೆ ಮಧ್ಯಭಾಗವು ನುಣುಪಾದ ರೀತಿಯಲ್ಲಿ ಆಯಾತಾಕಾರದಲ್ಲಿ ಕೆತ್ತನೆಯಾಗಿದೆ. ಈ ಶಿಬಾರದ ಮಧ್ಯದ ಅಂತರ ಮೂರು ಅಡಿಯಾಗಿದೆ. ಈ ಮಧ್ಯದ ತಳಭಾಗದಲ್ಲಿ ಎರಡು ಅಡಿ ಎತ್ತರದ ಎರಡು ಅಡಿ ಉದ್ದಗಲದ ಚೌಕಾಕಾರದ ಕಲ್ಲಿನಲ್ಲಿ ಪಾದಗಳನ್ನು ಕೆತ್ತಲಾಗಿದೆ. ಒಂಭತ್ತನೆಯ ಶಿಬಾರವು ಸಮಗಾರ ಚಂದಪ್ಪನ ದೇವಾಲಯದ ಮುಂಭಾಗದಲ್ಲಿ ಪಾಳುಬಿದ್ದ ಸ್ಥಿತಿಯಲ್ಲಿ ಗೋಚರಿಸುತ್ತಿದೆ. ಶಿಬಾರವು ಮೇಲ್ಭಾಗವಾದ ಅಡ್ಡಪಟ್ಟಿಕೆ ಶಿಲೆಯು ಮಾತ್ರ ಯಥಾಸ್ಥಿತಿಯಲ್ಲಿ ನೆಲದ ಮೇಲೆ ಬಿದ್ದಿರುವುದು ಕಂಡುಬರುತ್ತದೆ. ಇದು ಪೂರ್ವದಲ್ಲೆ ರಚನೆಗೊಂಡ ಸ್ಥಿತಿಯಲ್ಲಿದ್ದಂತೆ ತೋರುತ್ತದೆ. ಇದರ ಕಂಬಗಳು ಅತ್ತ ಇತ್ತ ಚಲ್ಲಾಪಿಲ್ಲಿಯಾಗಿ ಬಿದ್ದಿವೆ. ಆದರೆ ಮೇಲ್ಭಾಗದ ಪಟ್ಟಿಕೆ ಮಾತ್ರ ಸ್ಪಷ್ಟವಾಗಿ ತ್ರಿಶೂಲ ಸಂಕೇತ ಹೊಂದಿದ ಸ್ಥಿತಿಯಲ್ಲಿ ಗೋಚರಿಸುತ್ತದೆ.

ಹತ್ತು ಹನ್ನೊಂದನೇ ಶಿಬಾರವು ಮುಖ್ಯ ಗುಡಿಯಿಂದ ಹನುಮಸಾಗರಕ್ಕೆ ಹೋಗುವ ಮಾರ್ಗದ ಬಲಭಾಗದಲ್ಲಿ ಸ್ಥಾಪಿಸಲಾಗಿದೆ. ಮುಖ್ಯ ಗುಡಿಯಿಂದ ಐದನೂರು ಮೀಟರ್ ಅಂತರದಲ್ಲಿ ರಸ್ತೆಯ ಪಕ್ಕಕ್ಕೆ ಚಿಕ್ಕದಾದ ಶಿಬಾರವನ್ನು ಮೂರು ಅಡಿ ಎತ್ತರ, ಮೂರು ಅಡಿ ಅಗಲ, ನಾಲ್ಕು ಅಡಿ ಉದ್ದವಾದ ಕಟ್ಟೆಯ ಮೇಲೆ ಇದನ್ನು ಸ್ಥಾಪಿಸಲಾಗಿದೆ. ಈ ಕಟ್ಟೆಯ ಮೇಲೆ ಐದು ಆಡಿ ಎತ್ತರವಾಗಿ ನಾಲ್ಕು ಅಡಿ ಅಗಲವಾದಂತ ಶಿಬಾರವನ್ನು ಸ್ಥಾಪಿಸಿದೆ. ಈ ಶಿಬಾರದ ಕಂಬಗಳು ಮಧ್ಯಮ ಗಾತ್ರವಾಗಿದ್ದು, ಇದರ ಮೇಲ್ಭಾಗದ ಅಡ್ಡಪಟ್ಟಿಕೆಯು ಮಧ್ಯಮ ಗಾತ್ರದಲ್ಲಿದೆ. ಇದರ ನಂತರ ಹನ್ನೊಂದನೆಯ ಶಿಬಾರವು ಮುಖ್ಯ ಗುಡಿಯಿಂದ ಒಂದು ಕಿ.ಮೀಟರ್ ದೂರದಲ್ಲಿದೆ. ಅಂದರೆ ನುಡಿ ಹೇಳುವ ಪ್ರದೇಶದಲ್ಲಿ ಗೋಚರಿಸುತ್ತದೆ. ಈ ಶಿಬಾರವು ಆಕಾರ, ಗಾತ್ರ, ರಚನೆಯಲ್ಲಿ ಮೊದಲನೆ ಒಂಭತ್ತು ಶಿಬಾರಗಳ ಸ್ಥಿತಿಯಲ್ಲಿ ಕಂಡುಬರುತ್ತದೆ.

ಶಿಬಾರದ ಮೂಲ : (Origin of Shibara)

ಶಿಬಾರಗಳು ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವುಗಳಿಗೆ ಕೆಲವೊಂದು ಭಾಗದಲ್ಲಿ ಗುಡಿಗಳಿಗೆ ಯಾವ ಸ್ಥಾನ ದೊರೆಯುತ್ತದೆಯೋ ಅಂತಹ ಪೂಜ್ಯ ಸ್ಥಾನಗಳು ಲಭಿಸಿವೆ. ಕರ್ನಾಟಕದಲ್ಲಿ ಪ್ರಮುಖವಾಗಿ ಚಂದಾಲಿಂಗೇಶ್ವರ ಹಾಗೂ ಮೈಲಾರಲಿಂಗೇಶ್ವರ

ಆರಾಧನಾ ಸಂಪ್ರದಾಯದಲ್ಲಿ ಮಾತ್ರ ಹೆಚ್ಚು ಕಂಡುಬರುತ್ತವೆ. ಇವು ಹೆಚ್ಚಾಗಿ ಶಿಲ್ಪರೂಪದ ಆರಾಧನೆಯಲ್ಲಿ ಇವೆರಡು ದೇವತೆಗಳಲ್ಲಿ ಬಿಟ್ಟರೆ ಬೇರೆ ಯಾವ ದೇವತೆಗಳ ಸಂಪ್ರದಾಯದಲ್ಲಿ ಕಂಡುಬರುವುದಿಲ್ಲ.

"ಕ್ರಿ.ಶ. ೧೨೨೬ನೆಯ ವರ್ಷದ ದೋಣಿಶಾಸನ (ಮುಂಡರಗಿ ತಾಲ್ಲೂಕ) ದಲ್ಲಿ 'ಮಡವರಿಬಸಯ್ಯ' ಎಂಬುವನು 'ಸಿಬಾರ' ಮಾಡಿಸಿದ ಉಲ್ಲೇಖವಿದೆ."[೭] ಹರಿಹರ ಕವಿಯ ಶಂಕರ ದಾಸಿಮಯ್ಯನ ರಗಳೆಯಲ್ಲಿ ಶಂಕರದಾಸಿಮಯ್ಯ ಪೇಂಬೇರಿನ ತರುವಾಯ ಭೈರವನ ಸ್ಥಾನವೊಂದಕ್ಕೆ ಭೆಟ್ಟಿಯಿತ್ತನೆಂದಿದೆ. ಅಲ್ಲಿದ್ದ ಭೈರವರಾಧಕರಿಂದ ಶೈವಪಂಥದ ಸಂಕೇತವಾದ 'ಶಿಭಾರ'ವನ್ನು

"ಅಸದಳದ ಶಿವಭಾರವಲ್ಲಿಪ್ಪುದಂ ಕಂಡು
ಶಿವಭಾರವೇಕೆ ತ್ರಿಶೂಲ ತಾನಿ ಮಗೇಕೆ
ಶಿವನ ಭಕ್ತರಿಗಲ್ಲದನ್ಯರ್ಗ ತಾನೇಕೆ"[೮]...

ಎಂದು ಹೇಳಿ ಅವರಿಂದ ಕಿತ್ತು ಕೊಂಡು ಪುನಃ ದಯಪಾಲಿಸಿದನೆಂದು ಹೇಳಿದೆ. ಹರಿಹರ ಕವಿಯ ಈ ವರ್ಣನೆಯಿಂದ 'ಶಿಬಾರ' ಒಂದು ಶೈವ ಸಂಕೇತವೆಂಬುದು ಸ್ಪಷ್ಟವಾಗಿದೆ. ಮತ್ತು ಅದು ತ್ರಿಶೂಲ ಯೋಗದಂಡ, ಕಮಂಡಲುಗಳಂತೆ ಧರಿಸಬಹುದಾದ ಅಥವಾ ಜೊತೆಯಲ್ಲಿ (ಹೊತ್ತು) ಒಯ್ಯಬಹುದಾದ ಒಂದು ಸಾಂಕೇತಿಕ ವಸ್ತು ಎಂದು ತೋರುತ್ತದೆ. ಆದ್ದರಿಂದ ಪ್ರಸ್ತುತ ಚಂದಾಲಿಂಗೇಶ್ವರ ದೇವರ ಕ್ಷೇತ್ರದಲ್ಲಿರುವ ಶಿಬಾರಕ್ಕೂ ಹರಿಹರ ಕವಿಹೇಳುವ ಶಿಬಾರಕ್ಕೂ ಯಾವ ಸಂಬಂಧವೂ ಇಲ್ಲವೆಂದು ಈ ಮೇಲಿನ ವಿಷಯದಿಂದ ತಿಳಿಯಬಹುದು.

"ಕೇಶಿರಾಜನು 'ಸಿರಿಯವಂಶ' ಪಾಣಿಯ ಮತ್ತು ಕಂಚಿಯ ಎಂಬ ತದ್ಭವಗಳು ಪೂರ್ವಪದಗಳಾಗಿದ್ದು ಉತ್ತರ ಪದದಲ್ಲಿ ದ್ವಾರ ಎಂಬುದು ಇದ್ದರೆ ಆದ್ವಾ ಎಂಬುದು ದರ, ದಾರ, ಮತ್ತು ಬಾರ ಎಂದಾಗುತ್ತದೆಂದು ಹೇಳಿದ್ದಾನೆ. ಈ ಸೂತ್ರಕ್ಕೆ ಮುಂದಿನ ಉದಾಹರಣೆಗಳು ಕೊಡಲ್ಪಟ್ಟಿವೆ.

೧. ಶ್ರೀದ್ವಾರಂ > ಸಿರಿಯದರಂ, ಸಿರಿಯದಾರಂ, ಸಿರಿಯಬಾರಂ

೨. ವಕ್ರದ್ವಾರಂ > ವಂಶದರು (ವಂಕದಾರಂ) ವಂಕಬಾರಂ

೩. ಪಾಣೀಯದ್ವಾರಂ > ಪಾಣಿಯಬಾರಂ

೪. ಕಂಟದ್ವಾರಂ > ಕಂಟಿಯಬಾರಂ."[೯]

ಕೇಶಿರಾಜನ ಅಭಿಪ್ರಾಯದಲ್ಲಿ ಕೊನೆಯವೆರಡು ಸಮಾಸಗಳಲ್ಲಿ (ದರ, ಧಾರ) ವಿಕಲ್ಪಗಳಲ್ಲಿ, ಲಿಂಗಣಾರಾಧ್ಯ ವೃತ್ತಿಯ ಮದ್ರಸ್ ಪ್ರತಿಯಲ್ಲಿ ಮಾತ್ರ ಸಿರಿಯದಾರ ಎಂಬುದಲ್ಲದೆ 'ಸೀಯದರಂ' ಎಂಬ ದೀರ್ಘಸ್ವರವು ಹೆಚ್ಚಿನ ರೂಪವೊಂದು ಬಂದಿದೆ.

ಈ ಮೇಲಿನ ನಾಲ್ಕೂ ಉದಾಹರಣೆಗಳಲ್ಲಿ ಕೇಶಿರಾಜನು ಹೇಳುವಂತೆ ದ್ವಾರದಲ್ಲಿ 'ವ' ವ್ಯಂಜನ ಕಾರಣವಾಗಿ 'ಬ' ಕಾರಬರುವುದು ಸಾಧ್ಯವಾದುದ್ದರಿಂದ 'ದ್ವಾರ' ಎಂಬ ಪದವೂ 'ಬಾರ' ಎಂದಾಗುತ್ತದೆ. ಕೊನೆಯರೆಡು ಉದಾಹರಣೆಗಳಲ್ಲಿಯಂತೂ ಬಾರ ಎಂಬ ರೂಪಗಳೇ ಇರಬೇಕೆಂದು ಹೇಳಿದ್ದಾನೆ. ಅದರ ವಿಕಲ್ಪಗಳಾಗಿ ದರ, ದಾರಗಳು ಬರಕೂಡದು ಎಂಬುದು ಅವನ ಅಭಿಪ್ರಾಯವಾಗಿದೆ. ಒಟ್ಟಿನಲ್ಲಿ ದ್ವಾರ ಬಾರವಾಗುತ್ತಿದ್ದುದು ಸಹಜವೆಂದು ಒಪ್ಪಲೇಬೇಕಾಗಿದೆ. ಶ್ರೀದ್ವಾರ ಎಂಬುದು ಸಿರಿಯಬಾರ ಮತ್ತು ಸೀಯದರಂ ಎಂದು ಇರಬಹುದೆಂದು ಮೇಲೆ ಸಿಬಾರ ಅಥವಾ ಸಿಬಾರವೂ ಶ್ರೀದ್ವಾರದ ತದ್ಭವ ಎಂದು ಹೇಳಬಹುದಾಗಿದೆ. ಪ್ರಸ್ತುತ ಸಿಬಾರ, ಶಿಬಾರ ಕೂಡ ಬಾಗಿಲಿನ ಆಕಾರದಲ್ಲಿಯೇ ಇರುತ್ತದೆ.

ಡಾ. ಎಂ.ಬಿ.ನೇಗಿನಾಳ ಅವರು ಅಭಿಪ್ರಾಯಿಸುವಂತೆ ಶಿಬಾರ ಪದದ ಶಬ್ದೋತ್ಪತ್ತಿಯ ವಿಧಾನಗಳನ್ನು ಶಿಬಾರದ ವಾಸ್ತುರೂಪವನ್ನು ಕಣ್ಣುಮುಚ್ಚಿ ಅನುಸರಿಸಿದರೆ ಶ್ರೀದ್ವಾರ ಸಿಬಾರ ಎಂದು ಒಪ್ಪಿ ಈ ಸಂಪ್ರದಾಯದ ಆಚರಣೆಗಳನ್ನು ಕಣ್ಣಿಟ್ಟು ನೋಡಿದರೆ ಶಿಬಾರವೂ ಕೇವಲ ದ್ವಾರ ಮಾತ್ರವಾಗಿಲ್ಲ ಅಂದು ದೇವಾಲಯದ ಪ್ರತಿನಿಧಿಯಾಗಿದೆ ಎಂದು ಹೇಳತ್ತಾರೆ.

ಶಿಬಾರಗಳಲ್ಲಿ ವಿವಿಧ ಪ್ರಕಾರದ ಶಿಬಾರಗಳು ಕರ್ನಾಟಕದಾದ್ಯಂತ ಕಂಡುಬರುತ್ತವೆ. ಅಂತಹವುಗಳಲ್ಲಿ ಸಾಮಾನ್ಯವಾದ ಶಿಬಾರಗಳು ಅಂದರೆ, ಎರಡು ಶಿಲಾಸ್ತರಗಳನ್ನು ಹೊಂದಿ ಈ ಎರಡೂ ಶಿಲಾಸ್ತಂಭಗಳ ಮೇಲೊಂದು ಆಡ್ಡ ಶಿಲಾಪಟ್ಟಿ ಇರುತ್ತದೆ. ಈ ಅಡ್ಡ ಶಿಲಾಪಟ್ಟಿಕೆಯ ಮಧ್ಯ ತ್ರಿಶೂಲಾಕಾರದ ಮೊನಚಾದ ಶಿಲೆಯಲ್ಲಿ ಕೆತ್ತಿದ ಆಕೃತಿಯನ್ನು ಜೋಡಿಸಿರುತ್ತಾರೆ. ಎರಡು ಅಂತಸ್ತಿನ ಶಿಬಾರಗಳು ಇವುಗಳ ರಚನೆಯು ಎರಡು ಶಿಲಾಸ್ತಂಭಗಳ ಬದಲಿಗೆ ನಾಲ್ಕು ಶಿಲಾಸ್ತಂಭಗಳು ಅದರ ಮೇಲೊಂದು ಮಂಟಪವನ್ನು ಮಾಡಿ ಇದರ ಮೇಲೆ ಇನ್ನೊಂದು ಚಿಕ್ಕದಾದ ಅಂತಸ್ತು ಕಟ್ಟಿ, ಈ ಎರಡನೆ ಅಂತಸ್ತಿನ ಮೇಲೆ ತ್ರಿಶೂಲ ಸಂಕೇತದ ಆಕೃತಿಯನ್ನು ಶಿಲೆಯಲ್ಲಿ ಕೆತ್ತಿ ಜೋಡಿಸಿರುತ್ತಾರೆ. ಇಂತಹ ಶಿಬಾರಗಳನ್ನು ಹಿರೇಮೈಲಾರ ಹಾಗೂ ಚಿಕ್ಕ ಮೈಲಾರದಲ್ಲಿ ಕಂಡುಬರುತ್ತವೆ. ಇವುಗಳಲ್ಲದೆ ಮಂಟಪದ ಶಿಬಾರಗಳು ಸಹ ನಿರ್ಮಾಣವಾಗಿರುವುದು ಕಂಡುಬರುತ್ತದೆ. ಕೆಲವಡೆ ಶಿಬಾರಗಳಿಗೆ ನೆರಳಾಗುವಂತೆ ದೊಡ್ಡದಾದ ಶಿಲಾಮಂಟಪಗಳನ್ನು ಕಟ್ಟುವುದೂ ಉಂಟು. ಇಂತಹ ಮಂಟಪಗಳು ದೇವರ ಗುಡ್ಡ ಹಾಗೂ ಹೊನ್ನಾವರ ಪ್ರದೇಶದಲ್ಲಿ ಗೋಚರಿಸುತ್ತವೆ. ಇದಲ್ಲದೆ ದೊಡ್ಡ ದೊಡ್ಡ ಕಟ್ಟೆಯ ಮೇಲೆ ಎತ್ತರವಾದಂತ ಶಿಬಾರಗಳು ಕರ್ನಾಟಕದ ಕೆಲವಡೆ ಕಂಡುಬರುತ್ತವೆ.

ಕೆಲವೊಂದು ಊರಿನಲ್ಲಿ ಗೊರವ-ಗೊರವಿಯವರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಆದರೆ ಆ ಊರಿನಲ್ಲಿ ದೇವಾಲಯ ಇಲ್ಲದೆ ಇದ್ದರೂ, ಶಿಬಾರಗಳ ಜಾತ್ರೆ ನಡೆಯುತ್ತವೆ. ಈ ಶಿಬಾರಗಳಿಗೆ ಅಮವಾಸ್ಯೆ ಹುಣ್ಣಿಮೆಗೆ ಭಕ್ತರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಶಿಬಾರಗಳು ಜನವಸತಿಯಿಂದ ದೂರ ಇರುತ್ತವೆ. ಜನರ ಪರಿಸರದಿಂದ ದೂರಯಿರುತ್ತವೆ.

ಅಂತಹ ಊರುಗಳಾದ ಬ್ಯಾಡಗಿ. ಚೌಡದಾನಪುರ, ಕನವಳ್ಳಿಗಳು ಉದಾಹರಣೆಗಳಾಗಿವೆ. ಹುನಗುಂದ ತಾಲೂಕಿನ ಭೀಮನಗಡ ದಾರಿಯ ಮಗ್ಗಲಲ್ಲಿ ಗುಡ್ಡದ ಮೇಲೆ ಏಕಾಏಕಿಯಾಗಿ ನಿಂತಿರುವ ಶಿಬಾರ ಅಂಥದ್ದೆ ಆಗಿದೆ. ಈ ಶಿಬಾರವು ದೈವಪ್ರತೀಕವಾಗಿ ಪರಿಣಮಿಸಿದೆ. ಗೊರವರು ಹಾಕಿಕೊಳ್ಳುವ ಕೋರಿ ಅಂಗಿಯ ಮೇಲೆ ಕನಿಷ್ಠ ಒಂದಾದರೂ ಈ ತ್ರಿಶೂಲದ ಸಂಕೇತ ಇದ್ದೇ ಇರುತ್ತದೆ. ಇದಲ್ಲದೆ ಭಕ್ತರು ತಾವು ದೋಣಿ ತುಂಬಿಸುವಂತಹ ಸಂದರ್ಭದಲ್ಲಿ ಕಂಬಳಿಯ ಮೇಲೆ ಶಶಿಯಕ್ಕಿಯಿಂದ ತ್ರಿಶೂಲದ ಚಿತ್ರವನ್ನು ಬಿಡಿಸುವಂತ ಪರಿಪಾಠವಿದೆ. ಭಕ್ತರು ತಮ್ಮ ತಮ್ಮ ಮನೆಯಲ್ಲಿ ಲಗ್ನ ಕಾರ್ಯಕ್ರಮದಲ್ಲಿ ಈ ತ್ರಿಶೂಲದ ಚಿತ್ರ ಬರೆಯುವಂತ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಇದರಿಂದ ಶಿಬಾರವೆಂದರೆ ದೇವರ ವಾಸಸ್ಥಾನ ಅಥವಾ ಪ್ರತೀಕ ಎಂಬ ಆಚರಣೆ ಭಕ್ತರಲ್ಲಿ ಹಾಸುಹೊಕ್ಕಾಗಿರುವುದು ಕಂಡುಬರುತ್ತದೆ.

ಮೊಟ್ಟ ಮೊದಲಿಗೆ ಒಂದು ನಿರ್ಧಿಷ್ಟ ಸ್ಥಳ, ಅಂದರೆ ಊರಿನಿಂದ ಸ್ವಲ್ಪ ದೂರ ನಿರ್ಜನವಾದ ಪ್ರದೇಶದಲ್ಲಿ ತ್ರಿಶೂಲವನ್ನು ನೆಟ್ಟು ಅದನ್ನು ಸ್ಥಳೀಯ ಜನರೆಲ್ಲರು ಆರಾಧಿಸುವಂತ ಪದ್ಧತಿ ಇತ್ತೆಂದು ತೋರುತ್ತದೆ. ಕಾಲ ಕಳೆದಂತೆಲ್ಲ ಆಚರಣೆ ಸಂಪ್ರದಾಯಗಳು ಹೆಚ್ಚಾದಂತೆ ಈ ತ್ರಿಶೂಲದ ಬದಲು ಬಾಗಿಲು ರೂಪದ ಚೌಕಟ್ಟಿನಂಥ ರಚನೆ ರೂಪಗೊಂಡಿತು. ಇದೇ ಇನ್ನಷ್ಟು ಬೆಳೆದು ಕಟ್ಟಡ ರೂಪದ ಗುಡಿ ಮಾರ್ಪಟ್ಟಂತೆ ಕಾಣುತ್ತದೆ. ಹೀಗೆ ಬಯಲು ಪ್ರದೇಶದಲ್ಲಿ ನಡೆಯುತ್ತಿದ್ದ ಆಚರಣೆ ಸಂಪ್ರದಾಯಗಳು ಬರುಬರುತ್ತಾ ಗುಡಿ ರಚಿಸಲ್ಪಟ್ಟು ವಿಶೇಷ ಸೌಕರ್ಯಗಳು ಕಲ್ಪಿತವಾದವೆಂದು ಇದು ತೋರಿಸಿಕೊಡುತ್ತದೆ. ಈ ಶಿಬಾರವು ದೇವಸ್ಥಾನದ ರಚನೆಯ ಮೊದಲ ಹಂತವೆಂದರೂ ತಪ್ಪಾಗಲಾರದು. ಈ ಶಿಬಾರದ ಪ್ರತಿಮೆಗಳು ಕರ್ನಾಟಕದಲ್ಲಿ ಗುಲ್ಬರ್ಗ, ರಾಯಚೂರು, ಬಿಜಾಪುರ, ಕೊಪ್ಪಳ, ಬಾಗಲಕೋಟೆ, ದಕ್ಷಿಣದಲ್ಲಿ ಬೆಂಗಳೂರು ಜಿಲ್ಲೆಯ ಕನಕಪುರದವರೆಗೂ ಹರಡಿವೆ.

ಒಟ್ಟಾರೆ ಈ ಚಂದಾಲಿಂಗೇಶ್ವರ ಕ್ಷೇತ್ರದಲ್ಲಿ ನಾನು ಕ್ಷೇತ್ರಕಾರ್ಯ ಕೈಗೊಂಡಾಗ ನನಗೆ ಗೋಚರಿಸಿದ ಸುಮಾರು ಹದಿನೈದು ಶಿಬಾರಗಳನ್ನು ಅಧ್ಯಯನಕ್ಕೊಳಪಡಿಸಿರುವೆ. ಮೂಲದಲ್ಲಿದ ಕೆಲವೊಂದು ಶಿಬಾರಗಳು ನೆಲಕಚ್ಚಿರುವುದರಿಂದ ಅವುಗಳ ಸ್ಥಳದಲ್ಲೇ ನವೀನವಾದ ಶಿಬಾರಗಳನ್ನು ಗುಡಿಯ ಆಡಳಿತ ಕಮಿಟಿಯವರೆ ಮರಳಿ ಸಿದ್ಧಿಪಡಿಸಿ ಸ್ಥಾಪಿಸಿದ್ದಾರೆ. ಚಂದಾಲಿಂಗೇಶ್ವರನ ಉತ್ಸವದ ಮೆರವಣಿಗೆ ಎಲ್ಲೆಲ್ಲಿ ನಡೆಯುತ್ತದೆಯೋ ಅಲ್ಲಲ್ಲಿ ಈ ಶಿಬಾರಗಳನ್ನು ಸ್ಥಾಪಿಸಲಾಗಿದೆ. ದಸರ ಜಾತ್ರೆಯ ಸಂದರ್ಭದಲ್ಲಿ ಈ ಕ್ಷೇತ್ರದ ಎಲ್ಲಾ ಶಿಬಾರಗಳಲ್ಲಿ ಉತ್ಸವ ನೆರವೇರುತ್ತದೆ. ಆದರೆ ಬೇಸಿಗೆ ಜಾತ್ರೆಯ ವೇಳೆ ಬೀಳಗಿ ಭಾಗದ ಶಿಬಾರಗಳಿಗೆ ಉತ್ಸವ ಹೋಗುವುದಿಲ್ಲ. ಗುಡಿಯ ಅಕ್ಕ ಪಕ್ಕದಲ್ಲಿರುವಂತಹ ಶಿಬಾರಗಳಿಗೆ ವಿವಿಧ ಬಣ್ಣಗಳಿಂದ ಅಲಂಕರಿಸಿರುತ್ತಾರೆ. ಗುಡಿಯಿಂದ ದೂರವಿರುವ ಬೀಳಗಿ ಮಾರ್ಗದಲ್ಲಿರುವ ಶಿಬಾರಗಳಿಗೆ ಒಂದೇ ರೀತಿಯ ಬಣ್ಣವನ್ನು ಬಳಿಯಲಾಗಿರುತ್ತದೆ. ಜಾತ್ರೆಯ ದಿನಗಳಲ್ಲಿ ಈ ಶಿಬಾರಗಳು ಮದುವಣಗಿತ್ತಿಯಂತೆ

ಶೃಂಗಾರಗೊಂಡಿರುತ್ತವೆ. ತಳಿರು ತೋರಣಗಳಿಂದ ಬಣ್ಣ ಸುಣ್ಣಗಳಿಂದ ಪೂಜಾಪುನಸ್ಕಾರಗಳಿಂದ ಕಂಗೊಳಿಸುತ್ತಿರುತ್ತವೆ. ಈ ಸುಕ್ಷೇತ್ರದಲ್ಲಿ ಎರಡು ರೀತಿಯ ಶಿಬಾರಗಳನ್ನು ಕಾಣಬಹುದು. ಒಂದು ಸಾಮಾನ್ಯ ಶಿಬಾರಗಳು, ಇನ್ನೊಂದು ಕಟ್ಟೆಯ ಮೇಲಿರುವ ಶಿಬಾರಗಳು. ಈ ಕಟ್ಟೆಯ ಮೇಲಿರುವ ಶಿಬಾರವು ಒಂದೇಯಾಗಿದ್ದು, ಹಾಗೂ ಚಿಕ್ಕದಾಗಿದೆ. ಮಾರ್ಗ ಮಧ್ಯ ಇರುವಂತಹ ಶಿಬಾರಗಳಿಗೆ ಉತ್ಸವದ ಸಂದರ್ಭದಲ್ಲಿ ಕಂಚಾವೀರರು, ವಗ್ಗಯ್ಯ, ಮಳ್ಳಯ್ಯ, ಕೊಂತಧಾರಿಯೂ ಹಾಗೂ ಪಾಲುಕೆಧಾರಿಗಳು ಈ ಶಿಬಾರದ ಒಳಗಿನಿಂದನೆ ಪ್ರವೇಶ ಮಾಡುವ ಪರಿಪಾಠವಿದೆ. ಈ ಶಿಬಾರದ ಪ್ರವೇಶದ್ವಾರದ ಮುಂದೆ ಕೊಂತಧಾರಿ ಉಗ್ರಭರಿತನಾಗಿ ನಿಲ್ಲುತಾನೆ. ಈ ಶಿಬಾರಕ್ಕೆ ಹಾಗೂ ಕೊಂತಧಾರಿಗೆ ಅಭಿಮುಖವಾಗಿ ಮಳ್ಳಯ್ಯ, ವಗ್ಗಯ್ಯ, ಹಾಗೂ ಕಂಚಾವೀರರು ನಿಂತಿರುತ್ತಾರೆ. ಈ ಶಿಬಾರದ ಪ್ರವೇಶದ್ವಾರದಲ್ಲಿ ಕೊಂತಧಾರಿಗೆ ಅಭಿಮುಖವಾಗಿ ನಿಂತ ಕಂಚಾವೀರರು ವಡಪು ಹೇಳುವುದರ ಮೂಲಕ ಉಗ್ರತುಂಬಿಸುವರು. ಮಳ್ಳಯ್ಯಜ್ಜನು ಮುಂದಿನ ಭಾಗಕ್ಕೆ ಹೋಗುವುದಕ್ಕೆ ಶಂಖನಾದ ಗೈಯುತ್ತ ಸೂಚನೆ ನೀಡುತ್ತಾನೆ.

ಈ ವ್ಯಾಪ್ತಿ ಪ್ರದೇಶದಲ್ಲಿ ಉತ್ಸವ ನಡೆಯುವಂತ ಭಾಗದಲ್ಲಿರುವ ಶಿಬಾರಗಳು ಮಾತ್ರ ದುರಸ್ಥಿ ಅಥವಾ ನವೀಕರಣಗೊಂಡವೆ. ಆದರೆ ಇನ್ನಿತರ ಹಳೆಯ ಗುಡಿಯ ಹತ್ತಿರ ಪಾಳು ಬಿದ್ದಿರುವ ಶಿಬಾರಗಳು ಅದೇ ಸ್ಥಿತಿಯಲ್ಲಿವೆ. ಪ್ರಸ್ತುತ ಅಧ್ಯಯನದಲ್ಲಿ ಶಿಬಾರಗಳು ಯಾವ ಕಾರಣಕ್ಕಾಗಿ ಸ್ಥಾಪಿತವಾಗಿವೆ. ಅವುಗಳಲ್ಲಿ ರಚನಾಕ್ರಮ, ವಿಧಗಳು, ಉತ್ಸವದಲ್ಲಿ ಅವುಗಳ ಬಳಕೆ ಈ ಶಿಬಾರಗಳ ಬಗ್ಗೆ ಜನರಲ್ಲಿರುವ ನಂಬಿಕೆ ತಿಳಿಯಲಾಗಿದೆ. ಈ ಕ್ಷೇತ್ರದಲ್ಲಿ ಯಾವ ಯಾವ ಭಾಗದಲ್ಲಿ ಎಷ್ಟು ಶಿಬಾರಗಳು ಕಂಡು ಬರುತ್ತವೆ ಹಾಗೂ ಇಲ್ಲಿ ನಡೆಯುವ ವರ್ಷದ ಎರಡೂ ಜಾತ್ರೆಗಳಿಗೆ ಯಾವ ಶಿಬಾರಗಳಲ್ಲಿ ಉತ್ಸವ ನೆರವೇರುತ್ತದೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೨..೨.೫..ಸಮಗಾರ ಚಂದಪ್ಪನ ಗುಡಿ : (Samagara chandappa's Cabian)

ಇದು ಹೆಸರೆ ಸೂಚಿಸುವಂತೆ ಸಮಗಾರ ಸಮುದಾಯಕ್ಕೆ ಪ್ರತ್ಯೇಕವಾದ ಚಂದಾಲಿಂಗೇಶ್ವರನ ಗುಡಿ ಇದಾಗಿದೆ. ಮೂಲ ದೇವಾಲಯ ಶೈವಪಂಥಿಯದಾದ್ದರಿಂದ ತಳಸಮುದಾಯದವರಿಗೆ ಮೂಲ ಚಂದಾಲಿಂಗೇಶ್ವರ ದೇವರಿಗೆ ಹೋಗಲು ಪ್ರವೇಶ ಇರಲಿಲ್ಲ. ಅದಕ್ಕಾಗಿಯೇ ಈ ಚಂದಾಲಿಂಗೇಶ್ವರನ ಪ್ರತಿರೂಪದ ಗುಡಿಯನ್ನು ಸಮಗಾರರಿಗಾಗೇ ಸ್ಥಾಪಿಸಿರುವುದರಿಂದ ಇದಕ್ಕೆ ಸಮಗಾರ ಚಂದಪ್ಪನ ಗುಡಿಯೆಂದು ನನಗೆ ಮನ್ನೇರಾಳದ ಚಂದನಗೌಡ ಶೆಬ್ಬಿಯವರು ವಿವರಿಸಿದರು. ಇದು ಮುಖ್ಯ ಗುಡಿಯಿಂದ ಒಂದು ನೂರು ಮೀಟರ ಅಂತರದ ಎಡಭಾಗದಲ್ಲಿ ಸ್ಥಾಪನೆಗೊಂಡಿದೆ. ಈ ಗುಡಿಯ ಮುಂಭಾಗದಲ್ಲಿ ಗೋಡೆಗೆ ಅಂಟಿಕೊಂಡಂತೆ ಎಡಕ್ಕೆ ಮತ್ತು ಬಲಭಾಗಕ್ಕೆ ಎರಡು ಕಟ್ಟೆಗಳು ಇವೆ. ಈ ಕಟ್ಟೆಗಳ ಗಾತ್ರ ತಲಾ ಐದು ಅಡಿ ಉದ್ದಗಲ ಹೊಂದಿವೆ.

ಇವತ್ತು ಇವು ಸಂಪೂರ್ಣವಾಗಿ ಶಿಥಿಲಗೊಂಡ ಸ್ಥಿತಿಯಲ್ಲಿವೆ. ಈ ಗುಡಿಯು ಇಪ್ಪತ್ತು ಅಡಿ ಅಗಲ ಮೂವತ್ತು ಅಡಿ ಉದ್ದವನ್ನು ಹೊಂದಿದೆ. ಇದರ ಮುಖ್ಯ ಭಾಗವನ್ನು ದೊಡ್ಡ ದೊಡ್ಡ ಆಯತಾಕಾರದ ಕಲ್ಲುಗಳನ್ನು ಬಳಸಿಕೊಂಡು ಈ ಮುಂಭಾಗದ ಗೋಡೆಯನ್ನು ನಿರ್ಮಿಸಿದ್ದಾರೆ. ಮುಖ್ಯದ್ವಾರಕ್ಕೆ ಹೊಂದಿಕೊಂಡಂತೆ ಎರಡೂ ಬದಿಗೆ ನಾಲ್ಕು ಹಾಗೂ ಐದು ಅಡಿಯ ಎತ್ತರವಾದ ದಪ್ಪವಾದ ಕಂಬವನ್ನು ಬಳಸಿಕೊಂಡು ಬಾಗಿಲನ್ನು ನಿರ್ಮಿಸಿದ್ದಾರೆ. ಮುಖ್ಯದ್ವಾರದ ಎತ್ತರ ನಾಲ್ಕು ಅಡಿ, ಅಗಲ ಎರಡುವರೆಯಾಗಿದೆ. ಒಟ್ಟು ಈ ಗುಡಿಯು ಮೂರು ಭಾಗಗಳಿಂದ ಕೂಡಿದೆ. ಮೊದಲನೆ ಮತ್ತು ಎರಡನೆ ಭಾಗಗಳು ಹತ್ತತ್ತಡಿ ಅಗಲ ಹೊಂದಿರುವಂತೆ ಮೊಗಸಾಲೆಯನ್ನು ಬಿಡಲಾಗಿದೆ. ಮೂರನೇ ಭಾಗವು ಮುಖ್ಯದೇವರ ಗರ್ಭಗುಡಿಯಾಗಿದೆ. ಈ ಗುಡಿಯ ವಿಶೇಷತೆ ಎಂದರೆ ಮೊದಲಿನ ಮೊಗಸಾಲೆ ಇಪ್ಪತ್ತು ಅಡಿ ಅಗಲವಾಗಿದ್ದು ತದನಂತರದ ಮೊಗಸಾಲೆ ಹದಿನೈದು ಅಡಿ ಅಗಲವಾಗಿದೆ. ಇದರ ನಂತರ ಬರುವ ಮುಖ್ಯ ಗುಡಿಯ ಹತ್ತು ಅಡಿ ಅಗಲವಾದ ಗರ್ಭಗುಡಿಯನ್ನು ಹೊಂದಿದೆ. ಇದಕ್ಕೆ ಒಳಭಾಗದಲ್ಲಿ ಹನ್ನೆರಡು ಗೋಡೆಗಂಭಗಳನ್ನು ಅಳವಡಿಸಲಾಗಿದೆ.

ಗರ್ಭಗುಡಿಯ ಮುಖ್ಯದ್ವಾರವು ನಾಲ್ಕು ಅಡಿ ಎತ್ತರವಾಗಿದ್ದು ಎರಡುವರೆ ಅಡಿ ಅಗಲವಾಗಿದೆ. ಈ ಗರ್ಭಗುಡಿಯಲ್ಲಿ ಒಂದು ಅಡಿ ಎತ್ತರದ ಈಶ್ವರಲಿಂಗುವಿನ ಮೇಲೆ ಮೂರು ಅಡಿ ಎತ್ತರದ ಚಂದಾಲಿಂಗೇಶ್ವರನ ವಿಗ್ರಹವನ್ನು ಆಸನಮಾಡಲಾಗಿದೆ. ಈ ವಿಗ್ರಹವು ಕಪ್ಪು ಬಳಪಕಲ್ಲಿನಲ್ಲಿ ಸುಕಾಸನ ಸ್ಥಿತಿಯಲ್ಲಿದೆ. ಕುಳಿತಿರುವ ಸ್ಥಿತಿಯಲ್ಲಿ ತನ್ನ ಎಡಗಾಲನ್ನು ಒಳಮಡಿಚಿಕೊಂಡು ಬಲಗಾಲನ್ನು ಕೆಳಗೆ ಇಳೆ ಬಿಟ್ಟು ಚತುರ್ಭಾಹುಗಳನ್ನು ಹೊಂದಿರುವುದಾಗಿದೆ. ಬಲಭಾಗದ ಕೈಗಳಲ್ಲಿ ಹಿಂದಿನ ಕೈಯಲ್ಲಿ ಶಂಖವನ್ನು ಹಿಡಿದು ಮುಂಭಾಗದ ಕೈಯಲ್ಲಿ ಖಡ್ಗವನ್ನು ಹಿಡಿದು ಕೊಂಡಿದ್ದಾನೆ. ಎಡಭಾಗದ ಹಿಂದಿನ ಕೈಯಲ್ಲಿ ತ್ರಿಶೂಲ ದಂಡವನ್ನು ಧರಿಸಿ, ಮುಂಭಾಗದ ಕೈಯಲ್ಲಿ ಬಟ್ಟಲನ್ನು ಹಿಡಿದಿದ್ದಾನೆ. ತಲೆಯ ಹಿಂಭಾಗದಲ್ಲಿ ಚಕ್ರದಂತ ಆಕೃತಿಯನ್ನು ಹೊಂದಿದ್ದಾನೆ.

ನಿಧಿಗಳ್ಳರ ಕೈಯಲ್ಲಿ ಸಿಕ್ಕು ಈ ಗುಡಿಯ ಗರ್ಭಗುಡಿಯ ಭಾಗ ಹಾಗೂ ಈ ಗರ್ಭಗುಡಿಯ ಮುಂಭಾಗದ ಮೊಗಸಾಲೆಯು ದುರ್ವ್ಯವಸ್ಥೆಯಾಗಿದೆ. ಈ ಗುಡಿಯಲ್ಲಿರುವಂತೆ ಇತರ ವಸ್ತುಗಳು ಚಲ್ಲಾಪಿಲ್ಲಿಯ ಸ್ಥಿತಿಯಲ್ಲಿ ಗೋಚರಿಸುತ್ತವೆ. ಗರ್ಭಗುಡಿಯ ಬಲಭಾಗದ ಗೋಡೆಯು ಭಾಗಶಃ ಬಿದ್ದೋಗಿದೆ. ಮುಂಭಾಗದ ಎಡ ಹಾಗೂ ಬಲಗೋಡೆಯ ಭಾಗಗಳು ಶಿಥಿಲಾವಸ್ಥೆಯಲ್ಲಿವೆ. ಈ ಗುಡಿಯ ಮುಂಭಾಗದಲ್ಲಿರುವಂತ ದೀಪಸ್ತಂಭವು ನೆಲಕಚ್ಚಿದೆ. ಇತ್ತೀಚೆಗಂತೂ ಈ ಗುಡಿಯಲ್ಲೇ ಗಿಡಮರಗಳು ಬೆಳೆಯುತ್ತಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಇಂದು ಈ ಗುಡಿಯು ಕಣ್ಮರೆಯಾಗುವಂತ ಸ್ಥಿತಿ ಬಂದೊದಗಿದೆ.

ಚಂದಾಲಿಂಗೇಶ್ವರನ ಸುಕ್ಷೇತ್ರ ಪ್ರದೇಶವನ್ನು ಸಂಶೋಧನ ದೃಷ್ಟಿಯಿಂದ ಅಲೆದಾಡಿ ನೋಡಿದಾಗ ವಿವಿಧ ವೈಶಿಷ್ಟ್ಯತೆಯಿಂದ ತೋರ್ಪಟ್ಟಿದೆ. ಆ ಪ್ರದೇಶವು ಗುಡ್ಡ ಬೆಟ್ಟದಿಂದ ಕೂಡಿದೆ. ಹಾಗೂ

ವಿವಿಧ ಜಾತಿಯ ಪ್ರಾಣಿ ಪಕ್ಷಿಗಳು ಮತ್ತು ಸಾವಿರಾರು ಜಾತಿಯ ಸಸ್ಯ ಸಂಪತ್ತಿನಿಂದ ಕೂಡಿದೆ. ಶಿಲೆ ಸಂಪತ್ತು, ಮರಳು, ಮಲ್ಲದ ಮಣ್ಣು, ಜಲಸಂಪತ್ತಿನ ಮೂಲಗಳು ಹೀಗೆ ಇತ್ಯಾದಿ ಪ್ರಾಕೃತಿಕ ಸಂಪತ್ತು ಕಂಡುಬರುತ್ತದೆ. ಕ್ಷೇತ್ರದ ಸಾಂಸ್ಕೃತಿಕ ಆಚರಣೆಗೆ ಸಂಬಂಧಿಸಿರುವಂತೆ ಪ್ರಾಮುಖವಾಗಿ ಆದಿ ದೈವಿ ಚಂದಾಲಿಂಗೇಶ್ವರನ ಗುಡಿ, ಗಂಗೆಮಾಳಮ್ಮನಗುಡಿ, ಹುಲಪ್ಪನಗುಡಿ, ಪಂಚಪೀಠಗಳು, ಹಂಪಿವಿರೂಪಾಕ್ಷೇಶ್ವರ ಗುಡಿ, ಇತ್ಯಾದಿ ದೇವತೆಗಳ ಗುಡಿಗಳು, ಚಂದಾಲಿಂಗೇಶ್ವರನ ಪೌಳಿಕಟ್ಟೆ ಒಳಗೆ ಕಂಡುಬರುತ್ತಿವೆ. ಹೆಸರಿಲ್ಲದ ಮರ, ಕೆಸರಿಲ್ಲದ ಕೋಟೆಯು ನಿರ್ಮಾಣವಾಗಿರುವುದು. ಬಿಸಿಲು ಬೀಳದ ಬಾವಿ ಸೃಷ್ಟಿಯು ಇಂತಹ ಸಂಗತಿಗಳು ಭಕ್ತರ ಮನಸ್ಸನ್ನು ಸೆರೆಹಿಡಿದಿವೆ. ಈ ಪ್ರದೇಶದ ಮೂಲೆ ಮೂಲೆಯಲ್ಲಿಯೂ ಸ್ಮಾರಕಗಳು, ಅವಶೇಸ್ಗಗಳು, ಚಕ್ರ ಮಂಟಪಗಳು ಹಾಗೂ ಶಿಭಾರಗಳು, ಅವುಗಳು ಭಕ್ತರಿಂದ ಹೇಗೆ ಪುಜಿತಗೊಂಡಿವೆ ಎಂಬುದನ್ನು ತಿಳಿಯಲಾಗಿದೆ. ನುಡಿ ಹೆಳುವ ಮಂಟಪ ಹಾಗೂ ತುಗ್ಲಿ ಮರಗಳು ತಮ್ಮದೇ ಅದ ಪೂಜಿತ ಸ್ಥಾನವನ್ನು ಉಳಿಸಿಕೊಂಡಿವೆ. ಹೀಗೆ ಈ ಕ್ಷೇತ್ರದ ಬಗ್ಗೆ ಅಧ್ಯಯನ ಮಾಡಿದ ನಂತರ ಚಂದಾಲಿಂಗೇಶ್ವರನು ಯಾರು? ಎಂತ? ಆತನ ಹಿನ್ನಲೆ ಏನು? ಆತನು ಹೇಗೆ ಬದುಕಿ ಬಾಳಿದನು? ಆತನ ಜೀವನ ವೃತ್ತಾಂತವೇನು? ಎಂಬ ಅಂಶಗಳನ್ನು ಇಟ್ಟುಕೊಂಡು ಈ ಮುಂದಿನ ಅಧ್ಯಾಯ ಮೂರಲ್ಲಿ "ಚಂದಾಲಿಂಗೇಶ್ವರನ ಮೂಲ ಎಂಬುದರಲ್ಲಿ ಅಧ್ಯಯನ ಮಾಡಲಾಗುವುದು.

ಅಡಿ ಟಿಪ್ಪಣಿಗಳು

೧. ಸುರೇಶ.ಕೆ.ಎಂ., ವಾಸುದೇವ ಬಡಿಗೇರ,ಕರ್ನಾಟಕ ದೇವಾಲಯಗಳ ಕೋಶ ಕೊಪ್ಪಳ ಜಿಲ್ಲೆ,೨೦೦೧,ಪು.ಸಂ.೧೧

೨. ಅದೇ,ಪು.ಸಂ.೧೩

೩. ಅದೇ,ಪು.ಸಂ.೧೨

೪. ಪರಮಶಿವಮೂರ್ತಿ.ಡಿ., ಕನ್ನಡಶಾಸನ ಶಿಲ್ಪ,೧೯೯೯,ಪು.ಸಂ.೧೯೮

೫. ನೇಗಿನಹಾಳ.ಎಂ.ಬಿ., ಮೈಲಾರಲಿಂಗ-ಖಂಡೋಬಾ, ೧೯೯೨, ಪು.ಸಂ.೨೫೦

೬. ಅದೇ,ಪು.ಸಂ.೨೫೧

೭. ಅದೇ,ಪು.ಸಂ.೩೨೬

೮. ಅದೇ,ಪು.ಸಂ.೩೨೭

೯. ಅದೇ,ಪು.ಸಂ.೩೨೭

ಅಧ್ಯಾಯ : ೩

ಚಂದಾಲಿಂಗೇಶ್ವರನ ಮೂಲ

(The Origin of chandalingeshwar)

೩.೧೧.೨. ಚಂದಾಲಿಂಗನಿಂದ ಮಲ್ಲಾಸುರನ ಮಕ್ಕಳಿಗೆ ಶಾಪ.

೩.೧೨. ಚಂದಾಲಿಂಗನು ಶಿವನ ಸ್ವರೂಪಿಯಾಗಿ ಮೈಲಾರದಲ್ಲಿ ನೆಲೆಸಿರುವುದು.

೩.೧೩. ಚಂದಾಲಿಂಗನು ಶಿವನ ಸ್ವರೂಪಿಯಾಗಿ ಪ್ರತ್ಯಕ್ಷ.

೩.೧೪. ಹುಲ್ಲಪ್ಪನು ಪ್ರಾಣರಕ್ಷಣೆಗೆ ಗುಡೂರಿಗೆ ಬಂದಿದ್ದು.

ಅಧ್ಯಾಯ : ಮೂರು

ಚಂದಾಲಿಂಗೇಶ್ವರನ ಮೂಲ

(The Origin of chandalingeshwar)

ಪ್ರಸ್ತಾವನೆ : (Introduction)

ಚಂದಾಲಿಂಗೇಶ್ವರನ ಬಗ್ಗೆ ಆ ಕ್ಷೇತ್ರದ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಜನಪದರನ್ನು ಕೇಳಿದರೆ ವಿವಿಧ ರೀತಿಯ ಕಥೆ ಸುರಳಿಯನ್ನೆ ಬಿಚ್ಚಿಡುತ್ತಾರೆ. ಈತನ ಬಗ್ಗೆ ಅಲ್ಪಸ್ವಲ್ಪವಾದಂತಹ ಲಿಖಿತ ಚರಿತ್ರೆಗಳು ಕಂಡುಬರುತ್ತವೆ. ವರ್ಗದ ಎರಡೂ ಜಾತ್ರೆಗೆ ಬರುವಂತ ಹಲವಾರು ಭಕ್ತರನ್ನು ಕೇಳಿದಾಗ ಅವರು ತಮಗೆ ತಿಳಿದಿರುವಷ್ಟನ್ನು ಹೇಳಿದ್ದಾರೆ. ಆದ್ದರಿಂದ ಈ ಮೇಲಿನ ಎಲ್ಲಾ ಅಂಶಗಳನ್ನು ಕ್ರೂಡಿಕರಿಸಿ ಸೂಕ್ಷ್ಮವಾಗಿ ಅಧ್ಯಯನ ಮಾಡಿ ವಿಮರ್ಶಿಸಿ ಹಾಗೂ ಸತ್ಯಾಸತ್ಯತೆಯ ಅಂಶಗಳನ್ನು ಪರಿಗಣಿಸಿ ವಿವರಣೆಯೊಂದಿಗೆ ವಿಶ್ಲೇಷಣೆ ಮಾಡುತ್ತಾ ಆತನ ಮೂಲವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಚಂದಾಲಿಂಗೇಶ್ವರನ ಪೂರ್ವಜರ ಹಿನ್ನೆಲೆಯನ್ನು ಅಧ್ಯಯನ ಮಾಡಿದಾಗ ಈತನು ತಮ್ಮ ವಂಶದ ಮೂರನೇ ತಲೆಮಾರಿನ ವ್ಯಕ್ತಿಯಾಗಿದ್ದಾನೆ. ಅಧ್ಯಯನದ ಅನುಕೂಲದ ದೃಷ್ಟಿಯಿಂದ ಈತನ ಮೂಲವನ್ನು ವಿವಿಧ ಆಯಾಮದಲ್ಲಿ ಅಧ್ಯಯನಗೈಯಲಾಗಿದೆ.

ಚಂದಾಲಿಂಗೇಶ್ವರನ ಪೂರ್ವಜರ ಮನೆಯ ಸ್ಥಿತಿ ಹಾಗೂ ಈತನು ಮೊದಲಿಗೆ ಲಿಂಗಯ್ಯನೆಂದು ನಾಮಕರಣಗೊಂಡಿರುವಂತವನು ಚಂದಾಲಿಂಗನಾಗಿ ಹೇಗೆ ಪರಿವರ್ತನೆಯಾದನು ಎಂಬುದನ್ನು ತಿಳಿಯುತ್ತೇವೆ. ಆತನ ವೈವಾಹಿಕ ಜೀವನ ಹುಲ್ಲಪ್ಪನನ್ನು ಸಾಕು ಪುತ್ರನನ್ನಾಗಿ ಪಡೆದುಕೊಂಡ ಹಿನ್ನೆಲೆ ಹಾಗೂ ತಂದೆ-ಮಗನ ಸಂಘರ್ಷ, ಚಂದಾಲಿಂಗೇಶ್ವರ ಮತ್ತು ಮಲ್ಲಾ ಮಣಿಕಾಸುರರೊಂದಿಗೆ ಯುದ್ಧ, ಪತ್ನಿ ಗಂಗೆಮಾಳವ್ವಳು ಪತಿಯು ಪುನರ್ಜನ್ಮದ ಕುರಿತು ತಪಸ್ಸು ಚರಣೆ ಮಾಡಿರುವುದು ತಿಳಿಯುತ್ತದೆ. ಚಂದಾಲಿಂಗ ಅವತಾರ ಪುರುಷನಾಗಿ ಶಿವನ ಸ್ವರೂಪಿಯಾಗಿ ಪ್ರತ್ಯಕ್ಷವಾಗಿ ಮಲ್ಲ ಮಣಿಕಾಸುರರಿಗೆ ವರವನ್ನು ದಯಪಾಲಿಸಿದನು. ಕಾಲ ಕಳೆದಂತೆಲ್ಲಾ ಮರಳಿ ತನ್ನ ಮಗನನ್ನು ಹುಡುಕುತ್ತಾ ಗುಡೂರಿಗೆ ಬಂದು ತದನಂತರ ಚಂದ್ರಗಿರಿ ಬೆಟ್ಟದಲ್ಲಿ ವಾಸಿಯಾದನು ಎಂದು ತಿಳಿಯುತ್ತದೆ. ಇಂತಹ ಹಲವಾರು ಅಂಶಗಳನ್ನು ಇದಕ್ಕೆ ಪೂರಕವಾದಂತೆ ವಿಶ್ಲೇಷಣೆ ಮಾಡಿದೆ.

೩.೧. ಪೂರ್ವಜರ ಹಿನ್ನೆಲೆ : (Ancestral Background)

ಮೀಯಾಪುರ ಎಂಬ ಪಟ್ಟಣದಲ್ಲಿ ಗುರುಸಂಗಯ್ಯಸ್ವಾಮಿಗಳು ಜನ್ಮತಾಳಿದ್ದರು. ಇವರು ದಿನ ನಿತ್ಯದಲ್ಲಿ ಲಿಂಗ ಪೂಜೆಯನ್ನು ಮಾಡುತ್ತಿದ್ದರು. ಆ ಲಿಂಗ ಪೂಜೆಗೆ ಭಸ್ಮ, ಗಂಧ, ತಿಲಕ, ಬಿಲ್ವಪತ್ರೆ, ಕರ್ಪೂರ, ವಿವಿಧ ರೀತಿಯ ಪುಷ್ಪಗಳನ್ನು ತಂದು ಅರ್ಪಿಸಿ ಮೌನ ವ್ರತದಿಂದ ಅಂಗೈಯಲ್ಲಿ ಲಿಂಗಪೂಜೆಯನ್ನು ಮಾಡುತ್ತಿದ್ದರು. ಇಂಥ ಸಂದರ್ಭದಲ್ಲಿ, ಜನರ ಗುಂಪೊಂದು ಕೂಡಿಕೊಂಡು ಗುರುಸಂಗಯ್ಯಸ್ವಾಮಿಗಳು ಹಿಡಿದ ನಿತ್ಯ ಮೂಕ ವ್ರತವನ್ನು ಕೆಡಿಸಬೇಕೆಂದು ಎಷ್ಟು ಕೂಗಾಡಿದರೂ, ಎಷ್ಟು ಚೀರಿದರೂ, ಅವರು ತಮ್ಮ ಮೌನ ವ್ರತವನ್ನು ಬಿಡಲಿಲ್ಲ. ಇದಿಷ್ಟೇ ಅಲ್ಲದೇ ಅವರನ್ನು ಹೊಡೆದರೂ, ಬಡಿದರೂ ತಮ್ಮ ಮೂಕ ವ್ರತವನ್ನು ಬಿಡಲಿಲ್ಲ. ಆಗ ಆ ತಿಳಿಗೇಡಿ ಜನರು ಅವರನ್ನು ಕಂಬಳಿಯಲ್ಲಿ ಕಟ್ಟಿ ಬಾವಿಗೆ ಎಸೆಯಬೇಕು ಎಂದು ತೀರ್ಮಾನಿಸಿದರು. ಅಂದರೆ ಇವರು ತಮ್ಮ ಮೌನವ್ರತ ಬಿಡುವರೆಂದು ತಿಳಿದು ಅವರನ್ನು ಕಂಬಳಿಯಲ್ಲಿ ಮೂಟೆಕಟ್ಟಿ ಬಾವಿಯ ದಂಡೆಯ ಮೇಲೆ ಇಟ್ಟು ಅವರು ಈ ರೀತಿ ನುಡಿಯುತ್ತಾರೆ, "ಎಲೈ ಗುರುಸಂಗಯ್ಯನೆ, ಇನ್ನಾದರೂ ನಿನ್ನ ಮೂಕ ವ್ರತವನ್ನು ಬಿಟ್ಟು ನಮ್ಮೊಂದಿಗೆ ಮಾತಾನಾಡು. ಅಂದರೆ ನಿನ್ನನ್ನು ಜೀವಂತ ಬಿಡುವೆವು, ಇಲ್ಲದಿದ್ದರೆ ನಿನ್ನ ಪ್ರಾಣವನ್ನು ಹತ್ಯಮಾಡುತ್ತೇವೆ" ಎಂದರು.

ಗುರುಸಂಗಯ್ಯ ಸ್ವಾಮಿಗಳು ಆ ಜನರಿಂದ ಅಷ್ಟೆಲ್ಲ ತೊಂದರೆಯಾದರೂ ತಾವು ಕೈಗೊಂಡ ಮೂಕ ವ್ರತವನ್ನು ಬಿಡಲಿಲ್ಲ. ಬಹಳ ಹಠಯೋಗಿಗಳಾಗಿದ್ದರು. ಇವರಿಗೆ ತಮ್ಮ ದೇಹದ ಮೇಲೆ ಅಂಜಿಕೆಯು ಕೂಡ ಇದ್ದಿರಲಿಲ್ಲ. ಆಗ ಜನರು ಸಿಟ್ಟಿಗೆದ್ದು ಅವರನ್ನು ಎತ್ತಿಬಾವಿಯಲ್ಲಿ ಎಸೆಯುವ ಸಮಯದಲ್ಲಿ, ಅವರು ನಂಬಿದ ಪರಮಾತ್ಮನು ಅದೇ ಬಾವಿಯಲ್ಲಿ ಸರ್ಪನಾಗಿ 'ಬುಶ್' ಎಂದು ಬೋರ್ಘರೆಯಹತ್ತಿದನು. ಇದನ್ನು ನೋಡಿ ಆ ಜನರು ದಿಕ್ಕೆಟ್ಟು ಓಡ ಹತ್ತಿದರು. ಆಗ ಪರಮಾತ್ಮನು ಸರ್ಪಿನ ಅವತಾರ ಬಿಟ್ಟು ಜಂಗಮನ ವೇಷವನ್ನು ಧರಿಸಿ ಮೇಲಕ್ಕೆ ಬಂದು ಕಂಬಳಿಯ ಮೂಟೆಯನ್ನು ಬಿಚ್ಚಿದನು. ಅಮೇಲೆ 'ಎಲೈ ಪಾಪಿ, ಜನರಿಗೆ ನೀನೇನು ಅಪರಾಧ ಮಾಡಿರುವಿ' ಎಂದು ಕೇಳಿದನು. ಆಗ ಗುರುಸಂಗಯ್ಯ ಸ್ವಾಮಿಗಳು ಎದ್ದು ಜಂಗಮನ ರೂಪದಲ್ಲಿದ್ದಂತ ಪರಮೇಶ್ವರನಿಗೆ ನಮಸ್ಕರಿಸಿ ಈ ರೀತಿ ಹೇಳುವನು. "ಕಪ್ಪೆ ಸರ್ಪವನೆರಳಿಪ್ಪಂತೆನಗಾಯಿತಯ್ಯ, ಅಕಟಕಟಾ! ಸಂಸಾರದಿಂದ ತಪ್ಪಿಸಿ ಎನಗೆ ರಕ್ಷಿಸಯ್ಯ" ದೇವಾ ಜನರಿಗೆ ನಾನು ಏನೂ ಅಪರಾಧ ಮಾಡಿಲ್ಲ. ನನ್ನ ಮೌನವ್ರತಕ್ಕೆ ಭಂಗ ತರಬೇಕೆಂದು ಜನರು ಕೂಡಿಕೊಂಡು ನನ್ನನ್ನು ಹೊಡೆದು ಬಡಿದು ಈ ಬಾವಿಯಲ್ಲಿ ದೂಡಬೇಕೆಂದು ತಂದಿದ್ದರು, ದೇವಾ! ನೀನು ಬಂದು ನನ್ನನ್ನು ರಕ್ಷಿಸಿದಿ ದೇವಾ ಎಂದನು. ಆಗ ಪರಮೇಶ್ವರನು ತನ್ನ ನಿಜ ರೂಪವನ್ನು ತೋರಿ ಗುರುಸಂಗಯ್ಯಸ್ವಾಮಿಗೆ ಪಂಚಾಕ್ಷರಿ ಮಂತ್ರವನ್ನು ಬೋಧನೆ ಮಾಡಿ, ಆಶೀರ್ವದಿಸಿ, ಎಲೈ! ಗುರುಸಂಗಯ್ಯನೆ ನಿನ್ನ ಸಂತಾನವೇ ನನ್ನ ಸರಿಸಮಾನವಾಗಲಿ, ಮತ್ತು ನಿನ್ನ ಸಂತಾನದ ಕೀರ್ತಿಯು ಜಗತ್ತಿನಲ್ಲಿ ಮೆರೆಯಲಿ ಎಂದು ಹೇಳಿ ಪರಮೇಶ್ವರನು ಅದೃಶ್ಯವಾದನು.

ಗುರುಸಂಗಯ್ಯಸ್ವಾಮಿಗಳು ಮೀಯಾಪುರ ಪಟ್ಟಣವನ್ನು ಬಿಟ್ಟು ಮಲಿಯಾಳ ಎಂಬ ಪಟ್ಟಣಕ್ಕೆ ಬಂದರು. ಆ ಪಟ್ಟಣದಲ್ಲಿ ಮಣಿಕಾಸುರ, ಮಲ್ಲಾಸುರ ಎಂಬ ರಾಕ್ಷಸರು ಇದ್ದರು. ಅವರು ಪ್ರತಿದಿನ ಎರಡು ಹೇರಿನ (ಎರಡು ಚೀಲ) ಅನ್ನವನ್ನು, ಎರಡು ಎತ್ತುಗಳನ್ನು ಹಾಗೂ ಒಬ್ಬ ಮನುಷ್ಯನನ್ನು ತಿನ್ನುತ್ತಿದ್ದರು. ಆ ಊರಿನ ಜನರು ಇದರಂತೆ ಪ್ರತಿಯೊಬ್ಬರು ಪಾಳೆಯ ಪ್ರಕಾರ ಆಹಾರವನ್ನು ಕೊಡುತ್ತಿದ್ದರು. ಒಂದು ದಿನ ಅವರಿಗೆ ಆಹಾರವನ್ನು ಕೊಡುವುದನ್ನು ತಪ್ಪಿಸಿದರೆ, ಅವರು ಊರಲ್ಲಿ ಬಂದು ಸಿಕ್ಕಿದ್ದನ್ನು ತಿಂದು ದನಕರುಗಳನ್ನು ನಾಶಮಾಡಿ ಹೋಗುತ್ತಿದ್ದರು. ಹೀಗೆ ಪಾಳೆಯ ಪ್ರಕಾರ ನಡೆಯುತ್ತಿರಲು, ಒಂದು ದಿನ ಎರಕೆಂಗೊಂಡವರ ಮನೆಯ ಸರತಿಯು ಬಂದಿತು. ಇವರ ಮನೆಯಲ್ಲಿ ಶಿವರುದ್ರಮ್ಮ ಎಂಬುವರಿಗೆ ಒಬ್ಬನೆ ಮಗನಾದ ಬಸಪ್ಪನ ಪಾಳಿಯು ಬಂದಿತು. ಆಗ ಶಿವರುದ್ರಮ್ಮ ಇರುವ ಒಬ್ಬ ಮಗನನ್ನು ಆ ರಾಕ್ಷಸರಿಗೆ ಕೊಟ್ಟರೆ ಮುಂದೆ ನಮ್ಮ ವಂಶ ಉದ್ಧಾರಕ್ಕೆ ಯಾರು ಇಲ್ಲದಾಗುತ್ತದೆ, ಎಂದು ದುಃಖದಿಂದ ಊರಲ್ಲಿ ಬೀದಿಗುಂಟ ಅಳುತ್ತಾ ಹೊರಟಿದ್ದಳು. ಆಗ ಗುರುಸಂಗಯ್ಯಸ್ವಾಮಿಗಳು ಅವಳ ಕಡೆಗೆ ಬಂದು ಅಮ್ಮ ಏಕೆ ಅಳುತ್ತಿರುವಿ, ನಿನಗೇನು ಅಂಥ ಕಷ್ಟ ಬಂದಿರುವುದು ಹೇಳಮ್ಮ ಎಂದು ಕೇಳಿದರು. ಇದರಿಂದ ಶಿವರುದ್ರಮ್ಮನು "ದೇವಾ ಮಣಿಕಾಸುರ ಮಲ್ಲಾಸುರ ಎಂಬ ರಾಕ್ಷಸರಿಗೆ ಎರಡು ಹೇರಿನ (ಚೀಲ) ಅನ್ನದ ಬಂಡಿಯನ್ನು, ಎರಡು ಎತ್ತುಗಳನ್ನು ಮತ್ತು ಒಬ್ಬ ಮನುಷ್ಯನನ್ನು ಪಾಳೆಯ ಪ್ರಕಾರ ಈ ಊರಲ್ಲಿ ಪ್ರತಿಯೊಬ್ಬರು ಅವರಿಗೆ ಆಹಾರವನ್ನಾಗಿ ಹಾಕುತ್ತಿದ್ದಾರೆ. ಇಂದು ನನ್ನ ಮಗನ ಸರತಿಯು ಬಂದಿರುವುದು. ನನಗೆ ಒಬ್ಬನೇ ಒಬ್ಬ ಮಗನಿರುವುದರಿಂದ ಮುಂದೇನು ಮಾಡಲಿ ಎಂದು ದುಃಖಿಸುತ್ತಿದ್ದೇನೆ". ದೇವಾ ನೀವಾದರೂ ನನ್ನ ಮಗನನ್ನು ಉಳಿಸಿ ನನ್ನ ವಂಶವನ್ನು ಕಾಪಾಡಬೇಕೆಂದು ಮತ್ತಷ್ಟು ದುಃಖಿಸಿ ಅಳಹತ್ತಿದಳು. ಆಗ ಗುರುಸಂಗಯ್ಯನವರು ನೀನೇನು ಚಿಂತಿಸಬೇಡ ತಾಯಿ, ನಿನ್ನ ಮಗನ ಸರತಿಯ ಬದಲಾಗಿ ನಾನೇ ಹೋಗುತ್ತೇನೆ ಎಂದು ಅನ್ನಲಾಗಿ, ಶಿವರುದ್ರಮ್ಮನು ಗುರು ಸಂಗಯ್ಯನವರನ್ನು ಮನೆಗೆ ಕರೆದುಕೊಂಡು ಹೋಗಿ ಜಳಕ ಮಾಡಿಸಿ, ಪೂಜೆ ಪುನಸ್ಕಾರ ಮಾಡಿಸಿ, ಕೊರಳಲ್ಲಿ ಹೂವಿನ ಹಾರ ಹಾಕಿ ಮಂಗಳಾರತಿಯನ್ನು ಮಾಡಿ ಎರಡು ಹೇರಿನ(ಚೀಲ) ಅನ್ನವನ್ನು ಮತ್ತು ಎತ್ತುಗಳನ್ನು ಕೊಟ್ಟು ಕಳುಹಿಸಿದಳು.

ಗುರುಸಂಗಯ್ಯ ಸ್ವಾಮಿಗಳು ಅಗಸಿಯ ಹೊರಗೆ ಬಂದು ಊರಿನ ಜನರನ್ನು ಕೂಡಿಸಿ ಎರಡು ಹೇರಿನ(ಚೀಲ) ಅನ್ನವನ್ನು ಊಟಕ್ಕೆ ಹಾಕಿದರು. ಉಳಿದ ಎರಡು ಎತ್ತುಗಳನ್ನು ಹೊಡೆದು ಕೊಂಡು ಆ ರಾಕ್ಷಸರ ಬಳಿಗೆ ಹೋದರು. ಆ ರಾಕ್ಷಸರು ಹಸಿದು ಇವರ ದಾರಿಯನ್ನು ಕಾಯುತ್ತಿದ್ದರು. ಮಣಿಕಾಸುರ ಎಂಬ ದೈತ್ಯನು ಭಯಂಕರ ಆರ್ಭಟ ಮಾಡುತ್ತಾ, ಎಲೋ! ನರ ಮನುಷ್ಯನೇ ಇಷ್ಟೇಕೆ ತಡಮಾಡಿ ಬಂದಿರುವೆ, ಹಸಿವಿನ ತಾಪದಿಂದ ಬಳಲುತ್ತಿರುವೆವು. ಎಲ್ಲಿ ನಮ್ಮ ಪಾಲಿನ ಅನ್ನವು ಬೇಗ ಹೇಳು ಎಂದು ಆರ್ಭಟ ಮಾಡಿದನು. ಆಗ ಸ್ವಾಮಿಗಳು

ಧೈರ್ಯದಿಂದ ಹೀಗೆಂದರು "ನಿಮಗಿಂತ ಬಲಶಾಲಿಯಾದ ದೈತ್ಯನು ದಾರಿಯಲ್ಲಿ ನಿಮ್ಮ ಪಾಲಿನ ಅನ್ನವನ್ನು ತೆಗೆದುಕೊಂಡು ತಿಂದನು", ಇದಕ್ಕೆ ರಾಕ್ಷಸರು ಭಯಂಕರ ಕೋಪದಿಂದ ಮೊದಲು ನಿನ್ನನ್ನು ತಿಂದು, ಆ ಮೇಲೆ ಆ ದೈತ್ಯನ ವಿಚಾರ ಮಾಡುತ್ತೇವೆ ಎಂದರು. ಆಗ ಗುರುಸಂಗಯ್ಯನವರು ನನ್ನನ್ನು ತಿನ್ನುವ ಸಾಮಾರ್ಥ್ಯವು ಹರಿಹರರ ಕಡೆಯಿಂದಲು ಸಾಧ್ಯವಿಲ್ಲ. ನನ್ನ ದೇಹವೊಂದನ್ನು ನೀವು ತಿನ್ನಬಹುದು. ಆದರೆ ನನ್ನ ಆತ್ಮವನ್ನು ತಿನ್ನುವ ಶಕ್ತಿಯು ನಿಮ್ಮಲ್ಲಿ ಇರುವುದಿಲ್ಲ ಎಂದು ಹೇಳುವನು.

"ಎಲುವಿನ ಹಂದರವು ಈ ದೇಹವು
ಮಾಂಸದ ಮುದ್ದೆಯು ಈ ದೇಹವು
ಮಲ ಮೂತ್ರಗಳು ತುಂಬಿ ತುಳುಕುತ್ತಿರುವುವು
ಚರ್ಮದ ಹೊದಿಕೆ ಹೊತ್ತಿರುವುದು ಈ ದೇಹವು ।
ದೇಹದೊಳಗೆ ಮನೆಯನ್ನು ಕಟ್ಟಿತ್ತು ಈ ಜೀವ ।
ಆ ಮನೆಯ ತೊಲೆಯ ಕಂಬಗಳು ಮುರಿದ ಮೇಲೆ
ಹಾರಿ ಹೋಗುವುದು ಈ ಜೀವ ।

ಎಂದು ಹೇಳಿ ಎಲೋ ರಾಕ್ಷಸರೇ ಜೀವವನ್ನು ನುಂಗುವ ಸಾಮರ್ಥ್ಯ ನಿಮ್ಮಲ್ಲಿಹುದೇ? ಎಂದು ಕೇಳಿದಾಗ ಮಣಿಕಾಸುರನು ಅಣ್ಣಾ! ಇವನು ನರಮನುಷ್ಯನಲ್ಲ ಸಾಕ್ಷಾತ್ ಪರಮಾತ್ಮನಿರುವನು. ತದನಂತರ ಆ ಇಬ್ಬರು ರಾಕ್ಷಸರು ಗುರುಸಂಗಯ್ಯ ಸ್ವಾಮಿಗಳಿಗೆ ನಮಸ್ಕರಿಸಿ, ದೇವಾ ನಾವು ಮಾಡಿದ ಪಾಪವನ್ನು ಪರಿಹರಿಸಬೇಕು ಎಂದು ಬೇಡಿಕೊಂಡರು. ಆಗ ಗುರುಸಂಗಯ್ಯ ಸ್ವಾಮಿಗಳು ಆ ರಾಕ್ಷಸರಿಗೆ 'ಪಂಚಾಕ್ಷರಿ ಮಂತ್ರ'ವನ್ನು ಬೋಧಿಸಿದರು. ಇದಕ್ಕೆ ಪ್ರತಿಯಾಗಿ ಆ ರಾಕ್ಷಸರು ದೇವಾ! ನಾವು ಇಲ್ಲಿಯವರೆಗೆ ಮಾಡಿದ ಪಾಪವು ಹೇಗೆ ಪರಿಹಾರವಾಗುವುದು ಹೇಳು ಎಂದು ಕೇಳಲು, ಆಗ ಗುರುಸಂಗಯ್ಯ ಸ್ವಾಮಿಗಳು ಅವರಿಗೆ "ಅಡವಿಗೆ ಹೋಗಿ ಸೂಜಿಯ ಮೇಲೆ ಸೂಜಿ, ಏಳು ಸೂಜಿಗಳನ್ನಿಟ್ಟು ಘೋರತಪಸ್ಸು ಮಾಡಿದರೆ ಹರನು ಒಲಿಯುವನು, ಗುರುವು ದೊರಕುವನು, ಆ ಪರಮಾತ್ಮನು ನಿಮ್ಮ ಪಾಪವನ್ನು ಪರಿಹಾರ ಮಾಡುವನು ನಿಮಗೆ ಬೇಡಿದ ವರವನ್ನು ಕೊಡುವನು" ಎಂದು ಹೇಳುತ್ತಾನೆ. ಆಗ ಆ ಇಬ್ಬರು ರಾಕ್ಷಸರು ನಮ್ಮ ಸಂತಾನ ಅಮರವಾಗಿ ಉಳಿಯಲಿ ಎಂದು ನಮಸ್ಕರಿಸಿ ಸ್ವಾಮಿಗಳ ಆಶೀರ್ವಾದವನ್ನು ತೆಗೆದುಕೊಂಡು ತಪಸ್ಸು ಮಾಡಲು ಹೋದರು.

ಗುರುಸಂಗಯ್ಯ ಸ್ವಾಮಿಗಳು ಮರಳಿ ಮಲಿಯಾಳ ಎಂಬ ಪಟ್ಟಣಕ್ಕೆ ಬಂದು ಊರ ಜನರನ್ನು ಕರೆಯಿಸಿ ಅವರಿಗೆ "ನಿಮ್ಮಲ್ಲಿ ಬರುತ್ತಿದ್ದಂಥ ಮಣಿಕಾಸುರ ಮಲ್ಲಾಸುರ ಎಂಬ ರಾಕ್ಷಸರನ್ನು ನಿಮ್ಮ ನಾಡನ್ನು ಬಿಡಿಸಿ ತಪಸ್ಸಾಚಾರಕ್ಕೆ ಕಳಿಸಿರುವೆನು. ಅವರ ಹೆಸರು ನಿಮ್ಮ

ನಾಡಿನಲ್ಲಿ ಉಳಿಯಲು ಮೊದಲು ಈ ನಾಡಿಗೆ ಅವರ ಹೆಸರನ್ನು ನಾಮಕರಣ ಮಾಡೋಣ ಎಂದು ಜನರಿಗೆ ಬೋಧಿಸಿದರು. ಮಣಿಕಾಸುರನ ಹೆಸರನ್ನು 'ಮನ್ನೇರಾಳ' ಎಂದೂ, ಮಲ್ಲಾಸುರನ ಹೆಸರನ್ನು 'ಮಲೆನಾಡು' ಎಂದು ನಾಮಕರಣ ಮಾಡಿದರು. ಶಿವರುದ್ರಮ್ಮನ ಮಗನಾದ ಬಸಪ್ಪನನ್ನು ಕಪ್ಪ ಕಾಣಿಕೆಯಾಗಿ ಮಾಡಿ ರಾಕ್ಷಸರಿಗೆ ಒಪ್ಪಿಸಿದರೂ ಮರಳಿ ಪಾರಾಗಿ ಬಂದುದಕ್ಕೆ ಅವನ ಹೆಸರನ್ನು 'ಕಪಲಪ್ಪ ಕಪಲಪ್ಪ' ಎಂದು ನಾಮಕರಣ ಮಾಡಿದರು. ಈ ಕಪಲಪ್ಪನು ಮುಂದೆ ಗುರುಸಂಗಯ್ಯ ಸ್ವಾಮಿಗಳಿಗೆ ಶಿಷ್ಯನಾದನು. ಗುರುಸಂಗಯ್ಯ ಸ್ವಾಮಿಗಳು ಕಪಲಪ್ಪನಿಗೆ ಗುರುಬೋಧನೆ ಮಾಡಿದರು. ಎಷ್ಟೋ ಜನ ಸ್ವಾಮಿಗಳಿಗೆ ಶಿಷ್ಯರಾದರು. ಎಷ್ಟೋ ಜನ ಗುರು ಮಾರ್ಗವನ್ನು ಕಂಡರು. ಇದರಂತೆ ಜಗತ್ತಿನಲ್ಲಿ ಅವರ ಕೀರ್ತಿಯು ದಿಕ್ಕು ದಿಕ್ಕುಗಳಲ್ಲಿ ಹಬ್ಬತೊಡಗಿತು. ಶಿವರುದ್ರಮ್ಮನ ಸಂತಾನ ಉಳಿಸಿದ್ದಕ್ಕೆ ಗುರು ಸಂಗಯ್ಯಸ್ವಾಮಿಗಳಿಗೆ ಲಗ್ನ ಮಾಡಬೇಕೆಂಬ ಉದ್ದೇಶದಿಂದ ಚಂದ್ರಗಿರಿಯ ಪಟ್ಟಣಕ್ಕೆ ಹೋಗಿ ಕಲ್ಮಠದಲ್ಲಿ ನೀಲಮ್ಮ ಎಂಬ ಕನ್ನೆಯನ್ನು ತೆಗೆದು ಸ್ವಾಮಿಗಳಿಗೆ ಲಗ್ನ ಮಾಡಿದರು. ಅವರ ಲಗ್ನದಲ್ಲಿ ಕೆಲವರು ಅರಿವೆ ದಾನವನ್ನು, ಕೆಲವರು ಅನ್ನದಾನವನ್ನು, ಮತ್ತೆ ಕೆಲವರು ಕನ್ಯಾದಾನವನ್ನು ಮಾಡಿದರು. ಇದರಂತೆ ಲಗ್ನವು ಸಂಭ್ರಮದಿಂದ ಜರುಗಿ ಮುಕ್ತಾಯವಾಯಿತು. ಮುಂದೆ ಶಿವರುದ್ರಮ್ಮನು ನೀಲಮ್ಮನನ್ನು ಕರೆತರುವುದು ಕಳಿಸುವುದನ್ನು ತಾನೇ ವಹಿಸಿಕೊಂಡಳು. ಗುರುಸಂಗಯ್ಯ ಸ್ವಾಮಿಗಳು ತನ್ನ ಮಗನೆಂದು ಭಾವಿಸಿ ನಮ್ರತೆಯಿಂದ ನಡೆಯುತ್ತಿದ್ದಳು. ಆಗ ಸ್ವಲ್ಪ ಕಾಲದಲ್ಲಿ ನೀಲಮ್ಮನು ಗರ್ಭಿಣಿಯಾದಳು. ಶಿವಶರಣೆಯರಿಗೆ ಗರ್ಭಿಣಿಯಾಗುವ ಸೂಚನೆಯೆಂದರೆ ಅವರು ಭಸ್ಮ ಮತ್ತು ರುದ್ರಾಕ್ಷಿಯನ್ನು ತೇಯ್ದು ಗಂಧಮಾಡಿ ನಿತ್ಯವೂ ಸ್ವೀಕರಿಸುತ್ತಿದ್ದರು. ಅದರಂತೆ ನೀಲಮ್ಮ ಐದು ತಿಂಗಳ ಗರ್ಭಿಣಿಯಾಗಿದ್ದಳು. ಅವರ ತವರುಮನೆಯವರು ಹಸಿರು ಕುಪ್ಪಸ, ಹಸಿರು ಸೀರೆ ಮತ್ತು ಹಸಿರು ಬಳೆಗಳನ್ನು ಇಟ್ಟು ಶಿವನ ಧ್ಯಾನವನ್ನು ಮಾಡಿ ಅವರನ್ನು ತಮ್ಮ ತವರೂರಿಗೆ ಕರೆದುಕೊಂಡು ಹೋದರು. ಹೋಗುವಾಗ ನೀಲಮ್ಮನು ತಮ್ಮ ಅತ್ತೆ ಎಂದು ಭಾವಿಸಿದ್ದರಿಂದ ಶಿವರುದ್ರಮ್ಮನಿಗೆ ಹೇಳಿ ತಮ್ಮ ಪತಿದೇವರಿಗೆ ನಮಸ್ಕರಿಸಿ ತನ್ನ ಊರಿಗೆ ಹೊರಡಲು ಅನುವಾದಳು. ದಿನದಿನಕ್ಕೆ ಮಾಸಗಳು ತುಂಬುತ್ತಿರಲು ಆಗ ನೀಲಮ್ಮನು ಯಾವಾಗಲೂ ಪತಿದೇವರ ಧ್ಯಾನದಲ್ಲಿಯೇ ಮಗ್ನಳಾಗಿರುತ್ತಿದ್ದಳು. ಹೀಗೆ ಶಿವನ ಧ್ಯಾನದಲ್ಲಿ ನವಮಾಸಗಳನ್ನು ಕಳೆದಳು.

ನವಮಾಸ ತುಂಬಿದ ಮೇಲೆ ಒಂದು ದಿನ ಗಂಡು ಕೂಸನ್ನು ಹೆತ್ತಳು. ಆಗ ಅವಳ ತಂದೆ ತಾಯಿಗಳು ಆ ಸುದ್ದಿಯನ್ನು ಅವಳ ಗಂಡನ ಮನಿಗೆ ಹೇಳಲು ಒಬ್ಬನನ್ನು ಕಳಿಸಿದರು. ಶಿವರುದ್ರಮ್ಮ ಹಾಗೂ ಗುರುಸಂಗಯ್ಯಸ್ವಾಮಿಗಳು ಮನೆಯಲ್ಲಿ ಇದ್ದ ಸಮಯದಲ್ಲಿ ಈ ಸಂತೋಷದ ಸುದ್ದಿ ಬರಲು ಅದನ್ನು ಕೇಳಿ ಶಿವರುದ್ರಮ್ಮನ ಆನಂದಕ್ಕೆ ಮೇರೆಯಿಲ್ಲದಾಯಿತು. ಆಗ ಗುರುಸಂಗಯ್ಯ ಸ್ವಾಮಿಗಳು, ಅವ್ವ ನಿನ್ನ ಸೊಸೆ ಗಂಡುಮಗುವನ್ನು ಹೆತ್ತಿರುವಳು, ಏನೆಂದು ಹೆಸರಿಡಬೇಕು ಎಂದು ಶಿವರುದ್ರಮ್ಮನಿಗೆ ಕೇಳಿದನು. ಅದಕ್ಕೆ ಅವಳು ನಿನ್ನ ತಂದೆಯ ಹೆಸರಿಡು

ಎಂದು ಹೇಳಿದಳು. ಪ್ರತಿಯಾಗಿ ಗುರುಸಂಗಯ್ಯಸ್ವಾಮಿಗಳು ಅಲ್ಲಮ್ಮಾ ನನ್ನನ್ನು ಹುಟ್ಟಿಸಿದವರು ತಂದೆ ತಾಯಿಗಳು. ಆದರೆ ಬೆಳೆಸಿದಾಕಿ ನೀನು, ನಿನ್ನ ಉಪಕಾರವನ್ನು ಹೇಗೆ ಮರೆಯಲಿ ಅದಕ್ಕೇ ನಿನ್ನ ಹೆಸರನ್ನೇ ಇಡುವೆ. ನಿನ್ನ ಒಪ್ಪಿಗೆ ಇದೆಯೇ ಎಂದು ಕೇಳಿದನು. ಅದಕ್ಕೆ ಶಿವರುದ್ರಮ್ಮನು ನಿನ್ನ ಉಪಕಾರವು ಮರೆಯದಷ್ಟಿರುವುದು ನನ್ನ ಮನೆತನವನ್ನು ಉದ್ಧಾರಮಾಡಿದವನು ನೀನು ಎಂದಳು. ಅದಕ್ಕೆ ಗುರುಸಂಗಯ್ಯನವರು ನೀನು ನನ್ನ ಹೆತ್ತ ತಾಯಿಗಿಂತ ಹೆಚ್ಚು. ನಿನ್ನನ್ನು ನೆನೆಯದೇ ನಾನು ಯಾವ ಕೆಲಸ ಮಾಡಲಾರೆನು.

ನಿನ್ನ ಹೆಸರು ನನ್ನ ಸಂತತಿಯಲ್ಲಿ ಅಮರವಾಗಿ ಉಳಿಯಲಿ. ಅದಕ್ಕೆ ನನ್ನ ಮಗನಿಗೆ ಶಿವರುದ್ರಯ್ಯ ಎಂದು ನಾಮಕರಣ ಮಾಡುವೆ ಎಂದು ಹೇಳಿ, ದ್ವಾರಪಾಲಕನನ್ನು ಕರೆದು ಶಿವರುದ್ರಯ್ಯ ಎಂದು ನಾಮಕರಣ ಮಾಡುವಂತೆ ಹೇಳಿ ಕಳಿಸಿದನು. ಆಗ ದ್ವಾರಪಾಲಕನು ಚಂದ್ರಗಿರಿ ಪಟ್ಟಣಕ್ಕೆ ಹೋದನು. ನೀಲಮ್ಮನು ಅವನ ದಾರಿಯನ್ನೇ ಕಾಯುತ್ತಿದ್ದಳು. ನನ್ನ ಪತಿದೇವರು ತಮ್ಮ ಮಗನಿಗೆ ಯಾವ ಹೆಸರಿಡಲು ಹೇಳಿರುವರು ಹೇಳು ಎಂದು ಕೇಳಿದರು. ಅದಕ್ಕೆ ದ್ವಾರಪಾಲಕನು ಅಮ್ಮ ಗುರುಸಂಗಯ್ಯನವರು ತಮ್ಮ ಪುತ್ರನು ಗುರುವಾರ ದಿನ ಹುಟ್ಟಿರುವದರಿಂದ ರೋಹಿಣಿ ನಕ್ಷತ್ರ ಚಲೋ ಇದೆ, ಅಲ್ಲದೇ ತ್ರೇತಾಯುಗ ಹೋಗುವ ಚರಣದಲ್ಲಿ ದ್ವಾಪರಯುಗ ಕೂಡುವ ಸಮಯದಲ್ಲಿ ಹುಟ್ಟಿದ್ದಕ್ಕೆ ಶಿವರುದ್ರಯ್ಯಸ್ವಾಮಿಗಳೆಂದು ನಾಮಕರಣ ಮಾಡಲು ತಿಳಿಸಿರುವರು ಎಂದು ಹೇಳಿದನು. ನನ್ನ ಮಗನಿಗೆ ಒಪ್ಪುವ ಹೆಸರನ್ನೇ ಹೇಳಿರುವರು ಎಂದು ಕರೆದು ಮಗನಿಗೆ ಶಿವರುದ್ರಯ್ಯ ಎಂದು ನಾಮಕರಣ ಮಾಡಿ ಎಲ್ಲರೂ ಜೋಗುಳ ಹಾಡಿದರು.

"ಜೋ.....ಜೋ....ಎನ್ನ ಗೋಪಿಯ ಕಂದ ॥ಜೋ॥
ಕಿರಿಕಿರಿ ಮಾಡಬೇಡ ತಂದು ಕೊಡುವೆನು ಬೆಂಡು ಬತ್ತಾಸ॥ ಜೋ॥
ಹುಬ್ಬ ನೋಡವ್ವ ಕಾಮನಬಿಲ್ಲ।
ಮೂಗು ನೋಡವ್ವ ಸಂಪಿಗೆಯ ತೆನೆಯ।
ತುಟಿಯ ನೋಡವ್ವ ತೊಂಡಿಯ ಹಣ್ಣ।
ಗಲ್ಲ ನೋಡವ್ವ ಬೆಲ್ಲದ ಕಣ್ಣಿ।
ತೋಳ ತೊಡಿಯ ನೋಡವ್ವ ಬಾಳಿಯ ಕಂಬ। ॥ ಜೋ॥
ಚಂದ್ರಗಿರಿಯ ಪಟ್ಟಣದಲ್ಲಿ ನೀಲಮ್ಮನ ಹೊಟ್ಟೆಯಲ್ಲಿ
ಜನಿಸಿದ ನಮ್ಮ ॥ಜೋ॥
ಹತ್ತು ಮಂದಿ ನಾವು ಮುತ್ತೈದೆಯರು ಕೂಡಿ ಶಿವರುದ್ರಯ್ಯ
ಸ್ವಾಮಿಗೆ ಮಂಗಳಾರತಿ ಎತ್ತಿ ॥ಜೋ॥"

ಗುರು ಸಂಗಯ್ಯ ಸ್ವಾಮಿಗಳು ಅಪಾರವಾದ ಶಿವಭಕ್ತಿಯ ಗುಣವನ್ನು ಹೊಂದಿದ್ದನು. ಪ್ರತಿನಿತ್ಯ ಲಿಂಗಪೂಜೆಯಲ್ಲಿ ತೊಡಗಿ ಮೌನವ್ರತವನ್ನು ಜಪಿಸುತ್ತಿದ್ದನು. ಇದನ್ನು ಕೆಲವು ವ್ಯಕ್ತಿಗಳು ಸಹಿಸಿಕೊಳ್ಳುತೀರಲಿಲ್ಲ ಎಲ್ಲಾ ಕಾಲದಲ್ಲೂ ಎಲ್ಲಾ ಸಮಾಜದಲ್ಲಿ ದುಷ್ಟ ವ್ಯಕ್ತಿಗಳು ಕಂಡುಬರುವುದು ಸಹಜ ಅದರಂತೆ ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ದುಷ್ಟ ಜನರ ಸ್ವಭಾವವನ್ನು ಈ ರೀತಿ ಹೇಳುತ್ತಾರೆ.

"ಜಾಲಿಯ ಮರದಂತೆ ಧರೆಯೊಳು ದುರ್ಜನರು
ಮಾಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ
ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮಾ ವಾಸನೆಯಿಲ್ಲಿ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವ್ಸದಂತೆ ಇರುತಿಹ"[೨]

ಎಂಬ ದಾಸರ ನುಡಿಯಂತೆ ಅಂತಹ ದುಷ್ಟ ವ್ಯಕ್ತಿಗಳು ಗುರುಸಂಗಯ್ಯನವರ ಕಾಲದಲ್ಲಿಯೂ ಇದ್ದುದು ತಿಳಿದುಬರುತ್ತದೆ. ದುರ್ಜನರು ಎಷ್ಟು ಕಷ್ಟಕೊಟ್ಟರೂ ಗುರುಸಂಗಯ್ಯ ಸ್ವಾಮಿಗಳು ಅಂಜದೆ ಅಳುಕದೆ ತಮ್ಮ ಮಾನವ್ರತವನ್ನು ಜಪಿಸುವದನ್ನು ಬಿಟ್ಟಿರಲಿಲ್ಲ. ಜನಪದರು ಹೇಳುವ ಮಾತಿನಂತೆ 'ಕಷ್ಟಕ್ಕೆ ಗಟ್ಟಿಯಾದರೆ ಶಿವಬೆಟ್ಟಿ ಯಾಗುವುದು' ಎನ್ನುವ ಉಕ್ತಿ ಇವರ ಜೀವನದಲ್ಲಿ ಸುಳ್ಳಾಗಲಿಲ್ಲ. ಕೊಲ್ಲುವವನು ಇರುವಾಗ ಕಾಯುವವನು ಇರುತ್ತಾನೆ. ಎಂಬಂತೆ ಶಿವನು ಪ್ರತ್ಯಕ್ಷನಾಗಿ ಆತನನ್ನು ಕಾಪಾಡಿರುವಂತ ಸಂದರ್ಭ ತಿಳಿಯುತ್ತದೆ. ಗುರುಸಂಗಯ್ಯ ಸ್ವಾಮಿಗಳು ಯಾವತ್ತೂ ತಮ್ಮ ಸ್ವಾರ್ಥಕ್ಕಾಗಿ ದುಡಿದವರಲ್ಲ ಅವರು ಇನ್ನೊಬ್ಬರ ಸಂತೋಷವೆ ತಮ್ಮ ತಮ್ಮ ಸಂತೋಷವೆಂದು ಮೆರದವರಾಗಿದ್ದಾರೆ. ಗಜೇಶ ಮಸಣಯ್ಯನವರು ಹೇಳುವಂತೆ 'ಜಗವೆಲ್ಲ ನಗುತಿರಲಿ ಜಗದಳಲು ಎನಗಿರಲಿ, ನಾನಕ್ಕೂ ಜಗವ ಅಳುತ್ತಿರುವುದನ್ನು ನೋಡಲಾರೆ' ಎಂಬ ತತ್ವವನ್ನು ಹೊಂದಿರುವಂತಹ ಶರಣರಿಗೆ ಈ ಗುರುಸಂಗಯ್ಯ ಸ್ವಾಮಿ ಸಾಮಿಪ್ಯವಾಗಿದ್ದಾನೆ. ಇವರು ಎಲ್ಲೋ ಹುಟ್ಟಿ ಇನ್ನೊಂದು ಕಡೆಗೆ ಬೆಳೆದು ಮತ್ತೊಬ್ಬರ ಸೇವೆಗೆ ಹಣಿಯಾಗುತ್ತಾರೆ. ಇದರಿಂದ ಇವರು ಲೋಕ ಸಂಚಾರದ ಪ್ರತೀಕವಾಗಿ ಕಂಡುಬರುತ್ತಾರೆ. ಅಪರಿಚಿತರ ಮನೆಯಲ್ಲಿ ಮನೆಯ ಮಗನಂತೆ ಬೆಳದು ಸಂಸ್ಕಾರಿಕ ಜೀವನವನ್ನು ಪ್ರಾರಂಭಿಸುವರು. ಈ ದಂಪತಿಗಳಿಬ್ಬರು ಶಿವ ಭಕ್ತರಾಗಿದ್ದರು. ಪತ್ನಿಯಾದವಳು ನೀಲಮ್ಮನೂ ಪತಿಗೆ ತೀರ ಅದಿನಳಾಗಿ ನಡೆದುಕೊಂಡುರುತ್ತಿದ್ದಳು ಎಂಬುದು ತಿಳಿದುಬರುತ್ತದೆ.

೩.೨. ಪೂರ್ವಜರ ಎರಡನೆಯ ತಲೆಮಾರು : (The Second Generation of ancestors)

ಗುರುಸಂಗಯ್ಯಸ್ವಾಮಿ ಹಾಗೂ ನೀಲಮ್ಮ ದಂಪತಿಗೆ ಜನಿಸಿದ ಮಗ ಶಿವರುದ್ರಯ್ಯಸ್ವಾಮಿ ದಿನ ದಿನಕೆ ಬೆಳೆಯಹತ್ತಿದನು. ಬಾಲಕನು ಚಿಕ್ಕವನಿರುವಾಗಲೇ ಸಣ್ಣ ಸಣ್ಣ ಮೂರುತಿ ಮಾಡಿ ಪೂಜಿಸುತ್ತಿದ್ದನು. ಯಾವಾಗಲೂ ಶಿವನ ಧ್ಯಾನದಲ್ಲಿರುವವನು. ಹೀಗೆ ಅವನಿಗೆ ಹತ್ತು ವರ್ಷ ತುಂಬಲು ಕೆಲವು ಜನರು ಅವನಿಗೆ ಹುಚ್ಚನೆನ್ನುತ್ತಿದ್ದರು. ಕೆಲವರು ಭಕ್ತಿವಾನ್ ಎನ್ನುತ್ತಿದ್ದರು. ಮತ್ತೆ ಕೆಲವರು ಹಾಸ್ಯಮಾಡಿ ನಗುತ್ತಿದ್ದರು. ಆದರೆ ತಾಯಿಯು ನನ್ನ ಮಗನಿಗೆ ಹುಚ್ಚನೆನ್ನುತ್ತಿದ್ದಾರಲ್ಲಾ, ದೇವರೆ! ನಾನೇನು ತಪ್ಪು ಮಾಡಿರುವೆ? ನನ್ನ ಪತಿದೇವನು ಏನು ತಪ್ಪು ಮಾಡಿರುವನು. ನಮಗೇಕೆ ಇಂಥ ಹುಚ್ಚು ಮಗನನ್ನು ಕೊಟ್ಟಿರುವಿ. ದೇವಾ! ದಯಾ ಘನಾ, ಸೃಷ್ಟಿಕರ್ತ ನಿನ್ನ ಲೀಲೆಯೊ ನಮಂಥವರಿಗೆ ತಿಳಿಯಲಾರದು ಎಂದು ಪರಮಾತ್ಮನ ಧ್ಯಾನಮಾಡಿ ಮಲಗುತ್ತಿದ್ದಳು. ಆ ದಿನ ಕನಸಿನಲ್ಲಿ ಬಂದು ಹುಚ್ಚನಲ್ಲ ಅವನು ಜಗತ್ತಿನ ಸೃಷ್ಟಿ ಕರ್ತನಿರುವನು. ಅವನು ಸ್ವಲ್ಪಕಾಲದಲ್ಲಿ ದೊಡ್ಡಯೋಗಿಯಾಗುತ್ತಾನೆ. ನೀನು ಭಯಪಡಬೇಡಮ್ಮ ಎಂದು ಹೇಳಿ ಆ ಶಂಕರನು ಮಾಯವಾದನು. ಆಗ ನೀಲಮ್ಮ ಎದ್ದು ನೋಡುವಳು. ಕನಸಿನಲ್ಲಿ ಕಂಡದ್ದು ನಿಜವಿರಬಹುದು ಎಂದು ಮನಸ್ಸಿನಲ್ಲಿ ಧೈರ್ಯ ತಂದುಕೊಂಡು ತಿರುಗಿ ಮಲಗಿಕೊಂಡಳು. ಬೆಳಿಗ್ಗೆ ಎದ್ದು ಸ್ನಾನಮಾಡಿಕೊಂಡು ಶಿವಪೂಜೆಯನ್ನು ಮಾಡುವ ಕಾಲಕ್ಕೆ ಮಗ ಶಿವರುದ್ರಯ್ಯ ಅಮ್ಮ ಲಿಂಗಪೂಜೆಯನ್ನು ಹೇಗೆ ಮಾಡುತ್ತಿರುವೆ ನನಗೂ ಹೇಳಮ್ಮ ಎಂದು ಕೇಳಿದಾಗ, ತಾಯಿಯು ಮಗು, ಆ ಲಿಂಗದ ಮಹಿಮೆ ಯಾರಿಗೂ ತಿಳಿಯದು. ಆ ಹರಿಹರನೆ ಬಲ್ಲನು. ಆಗ ಮಗು ನಮ್ಮಂಥವರ ಕೈಯಲ್ಲಿ ಲಿಂಗಪೂಜೆ ಮಾಡುವುದು ಆಗುವುದಿಲ್ಲವೇನಮ್ಮಾ? ನನ್ನ ಕೈಯಲ್ಲಿ ಆಗದಿದ್ದರೆ ನನ್ನ ಶಿರಸ್ಸನ್ನೇ ಕೊಡುವೆನು ಆ ಪರಮಾತ್ಮನಿಗೆ. ಹೇಗೆ ಮಾಡುವುದು ಹೇಳಮ್ಮ ಯಾಕೆ ಸುಮ್ಮನೇ ನಿಂತಿರುವೆ. ಆದಕ್ಕೆ ಪ್ರತಿಯಾಗಿ ತಾಯಿ ಹೀಗೆ ಹೇಳುತ್ತಾಳೆ. ನೋಡು ಮಗು ಲಿಂಗಪೂಜೆಗೆ ಗಂಧ, ಭಸ್ಮ, ಪುಷ್ಪ, ಚಂದ್ರ ತರತರಹದ ಹೂವುಗಳಿಂದ ಮುನ್ನೂರಾ ಅರವತ್ತುಕೋಟಿ ಲಿಂಗಾದಿಗಳನ್ನು ದಿನನಿತ್ಯದಲ್ಲಿ ಪೂಜೆಮಾಡಬೇಕು. ಅಂದರೆ ಆ ಶಂಕರನು ಅದರಿಂದ ಆನಂದ ಹೊಂದಿ ನಿನಗೆ ಒಲಿಯುವನು.

ತಾಯಿಯ ಆಜ್ಞೆಯಂತೆ ಮುನ್ನೂರ ಅರವತ್ತು ಕೋಟಿ ಲಿಂಗವನ್ನು ಪೂಜೆ ಮಾಡುತ್ತಿದ್ದನು. ಆತ್ಮಲಿಂಗ, ಭಸ್ಮಲಿಂಗ, ಪೂಜೆಲಿಂಗ, ಪುಷ್ಪಲಿಂಗ, ಹೀಗೆ ಮುನ್ನೂರ ಅರವತ್ತೇಳು ಕೋಟಿ ಲಿಂಗಾದಿಗಳನ್ನು ಪೂಜೆ ಮಾಡುತ್ತಲಿದ್ದನು. ಇದೇ ಸಮಯದಲ್ಲಿ ಬೀಳಗಿಯ ಎಳೆಮನಿಯ ದೇಸಾಯಿಯವರ ಮಗಳು ಸೂರ್ಯಮಣಿದೇವಿಯು ನಿತ್ಯ ಐದು ಲಿಂಗಗಳನ್ನು ಪೂಜಿಸುತ್ತಿದ್ದಳು. ಆಗ ಶಿವರುದ್ರಯ್ಯ ಸ್ವಾಮಿಗಳು ಭಕ್ತಿವಾನನೆಂಬ ಸುದ್ದಿ ಜಗತ್ತಿಗೆಲ್ಲ ಹಬ್ಬಿತ್ತು. ಅದನ್ನು ಕೇಳಿ ಸೂರ್ಯಮಣಿದೇವಿ ಅವರ ದರ್ಶನ ಯಾವಾಗ ಮಾಡೆನೋ ಎಂದು ಆತುರ ಪಡುತ್ತಿದ್ದಳು.

ಆ ಕಾಲವೂ ಕೂಡಿಬಂದಿತು. ಐದು ಲಿಂಗ ಪೂಜೆಮಾಡಿ ಸೂರ್ಯಮಣಿದೇವಿಯು, ಮುನ್ನೂರ ಅರವತ್ತೇಳು ಕೋಟಲಿಂಗ ಪೂಜೆ ಮುಗಿಸಿ ಶಿವರುದ್ರಯ್ಯ ಬರುವಾಗ ಆಕಸ್ಮಾತ್ ಇಬ್ಬರಿಗೂ ಭೇಟಿಯಾಯಿತು. ಆಗ ಸೂರ್ಯಮಣಿದೇವಿಯವರು ಅವರ ರೂಪ, ತೇಜಸ್ಸಿಗೆ ಮಾರು ಹೋಗಿ ಅವನಿಗೆ ನಮಸ್ಕರಿಸಿದರು. ದೇವಾ! ನೀವು ಯಾರು? ನನಗೆ ಮೂರು ವರಗಳನ್ನು ದಯಪಾಲಿಸು ಎಂದು ಬೇಡಿಕೊಂಡಳು.

ಶಿವರುದ್ರಯ್ಯ ಸ್ವಾಮಿಗಳು ಆ ಸೂರ್ಯಮಣಿ ದೇವಿಗೆ ನಿನಗೆ ವರಗಳನ್ನು ಕೊಡಲು ನಾನಾರು? ಹರನಲ್ಲ, ಶಿವನಲ್ಲವಮ್ಮಾ ಮನ್ನೇರಾಳ ಗ್ರಾಮದ ಜಂಗಮನ ಮಗ ಎಂದ. ಅದಕ್ಕೆ ದೇವಿಯು ಹರನೂ ನೀನೇ, ಶಂಕರನೂ ನೀನೇ, ನಿನ್ನನ್ನು ಬಿಟ್ಟು ನನಗೆ ಗತಿ ಇಲ್ಲ. ನೀನೇ ನನಗೆ ಮೂರು ವರಗಳನ್ನು ದಯಾಪಾಲಿಸಬೇಕು, ಇಲ್ಲವಾದರೆ ನಿನ್ನ ಪಾದದಡಿಯಲ್ಲಿಯೇ ನನ್ನ ಪ್ರಾಣವನ್ನು ನೀಡುವೆನು ಎಂದಳು. ಇದಕ್ಕೆ ಶಿವರುದ್ರಸ್ವಾಮಿಗಳು ಅಯ್ಯೋ! ಎಂಥ ಮಾತನಾಡಿದೆ. ಗೋಹತ್ಯ, ಶಿಶುಹತ್ಯೆ, ಸ್ತ್ರೀಹತ್ಯೆ ಮಹಾಪಾಪ ಎಂದು ಹೇಳುತ್ತಾರೆ. ಅಂಥ ಪಾಪಕ್ಕೆ ನನ್ನನ್ನು ಗುರಿ ಮಾಡಬೇಡ ಶಿವನ ಇಚ್ಛೆ ಇದ್ದಂತಾಗಲಿ. ನಿನ್ನ ಆ ಮೂರು ವರಗಳು ಯಾವವು ಹೇಳಮ್ಮ ಎಂದನು. ನಿನ್ನ ತಂದೆ ತಾಯಿಯವರ ಸಾಕ್ಷಿಯಾಗಿ ನನಗೆ ವರಗಳನ್ನು ಕೊಡುವುದಾದರೆ ಹೇಳುತ್ತೇನೆ ಎಂದಳು ಸೂರ್ಯಮಣಿದೇವಿ. ನನ್ನ ತಂದೆ ತಾಯಿಯ ಸಾಕ್ಷಿಯಾಗಿಯೂ ದಯಾಪಾಲಿಸುತ್ತೇನೆ. ನಿನ್ನವರಗಳು ಯಾವುವು ಹೇಳಮ್ಮ, ಮೊದಲನೆಯದು ನಿನ್ನ ಲಿಂಗಪೂಜೆಗೆ ಸಾಮಾಗ್ರಿ ತರವುದು, ಎರಡನೆಯದು ನೀವು ನನಗೆ ಪತಿಯಾಗಬೇಕು, ಇಷ್ಟು ಹೇಳುವುದರೊಳಗೆ ಅವಳ ತಂದೆ ದೇಸಾಯಿಯವರು ನೋಡಿ ಸಿಟ್ಟಿಗೆದ್ದು, ತಮ್ಮ ಸೇವಕರಿಗೆ ಕೂಗಿ, ಅವನನ್ನು ಹಿಡಿದು ತಂದು ಗಿಡಕ್ಕೆ ಕಟ್ಟಿ ಹೊಡೆಯಿರಿ ಎಂದು ಆಜ್ಞೆ ಮಾಡಿದರು. ಅದರಂತೆ ಎಳೆದು ತಂದು ಗಿಡಕ್ಕೆ ಕಟ್ಟಿ ಹಾಕಿ ಹೊಡಯ ತೊಡಗಿದರು.

ಸೂರ್ಯಮಣಿದೇವಿಯವರು ಅಲ್ಲಿಗೆ ಬಂದು ಅವನು ಏನು ತಪ್ಪು ಮಾಡಿರುವನು. ಏಕೆ ಬಡಿಯುತ್ತಿರುವಿರಿ ಎಂದು ಕೇಳಲು, ಆಗ ಅವಳ ತಂದೆಯು ಅಲ್ಲಮ್ಮ ನಡುದಾರಿಯಲ್ಲಿ ನಿನ್ನನ್ನು ಮಾತನಾಡಿಸುವಷ್ಟು ಧೈರ್ಯ ಬಂತೆ ಈ ಬಡಜಂಗಮನಿಗೆ ಎಂದು ಎನ್ನಲು, ಅಪ್ಪಾ! ಅವರು ಬಡಜಂಗಮನಲ್ಲ. ಸಾಕ್ಷಾತ್ ಪರಮಾತ್ಮನು. ಅವನನ್ನು ಬಡಿಯ ಬೇಡಿರಿ, ಅವನು ನನಗೆ ಪತಿಯಾಗಬೇಕು. ಏನಮ್ಮ! ನೀನು ಎಂಥ ಮಾತನಾಡಿದಿ. ಜೀಳಿಗೆಯ ದೇಸಾಯಿ ಎಂದರೆ ಜಗತ್ತಿಗೆ ಹೆಸರಾದವರು; ಅಂಥವರ ಮಗಳಾಗಿ ಬಡಜಂಗಮನನ್ನು ಲಗ್ನವಾಗುತ್ತೀಯೇನಮ್ಮ? ಬೇಡ ಮಗಳೇ ನಿನಗೆ ತಕ್ಕ ವರವನ್ನು ನೋಡಿ ಲಗ್ನ ಮಾಡಿಕೊಡುವೆನಮ್ಮಾ. ಅಪ್ಪಾ ಅವನೇ ಪತಿಯಾಗಬೇಕು, ಅವನ ಹೊರತು ನನಗೆ ಬೇರೆ ಯಾರೂ ಗತಿಯಿಲ್ಲ. ಪಾರ್ವತಿ ದೇವಿಯ ತಂದೆ ದಕ್ಷ ಬ್ರಹ್ಮನು ಶಂಕರನನ್ನು ಮಾಡಿಕೊಳ್ಳಬೇಡ ಎಂದು ಹೇಳಲಿಲ್ಲವೇ? ಅವರ ಮಾತನ್ನು ಕೇಳಿ ಪಾರ್ವತಿದೇವಿ ಬಿಟ್ಟಳೇನು? ಬಿಡಲಿಲ್ಲ. ಹೇಗೆ ದಕ್ಷಬ್ರಹ್ಮನು ಶಂಕರನನ್ನು ನಿಂದೆ

ಮಾಡಿದನೋ ಹಾಗೆ ನೀವು ಈ ಜಂಗಮನ ನಿಂದೆ ಮಾಡಬೇಡಿರಿ ಎಂದಳು. ಆಗ ಅವಳ ತಂದೆಯು ಆ ಜಂಗಮನನ್ನು ಹಾಳ ಹಗೆಯಲ್ಲಿ ಒಗೆಯಿರಿ ಎಂದು ತನ್ನ ಸೇವಕರಿಗೆ ಆಜ್ಞೆ ಮಾಡಿದನು. ಅದರಂತೆ ಅವರು ಅ ಬಡಜಂಗಮನನ್ನು ಹಾಳ ಹಗೆಯ ಮೇಲೆ ತಂದು ನಿಲ್ಲಿಸಿದರು.

ಸೂರ್ಯಮಣಿದೇವಿಯು ತನ್ನ ತಂದೆಯನ್ನು ಬೇಡಿಕೊಳ್ಳುತ್ತ ಆ ಜಂಗಮನನ್ನು ಕೊಲ್ಲಬೇಡ ನೀನು ಮುಂದೆ ಕಷ್ಟಕ್ಕೆ ಗುರಿಯಾಗುವಿ. ಹಿಂದೆ ಒಂದನೇ ತ್ರೇತಾಯುಗದಲ್ಲಿ ದಕ್ಷಬ್ರಹ್ಮನು ಬಡಜಂಗಮನಾದ ಶಂಕರನಿಗೆ ತನ್ನ ಹಿರಿಯ ಮಗಳಾದ ಪಾರ್ವತಿದೇವಿಯನ್ನು ಕೊಟ್ಟಿದ್ದು ಕುಲಹೀನ ಬಂತೆಂದು ಆರು ಗಾವುದ ಉದ್ದ, ಆರು ಗಾವುದ ಆಗಲಳತೆಯ ಅಗ್ನಿಕುಂಡವನ್ನು ತಯಾರಿಸಲಿಲ್ಲವೆ? ಆ ಅಗ್ನಿಯ ಜ್ವಾಲೆಗೆ ಭೂಮಿಯು ತಳಮಳಿಸುತ್ತಿತ್ತು. ಭೂಲೋಕವೇ ಗಡಗಡನೇ ನಡುಗುತ್ತಿತ್ತು. ಅದರ ಆರ್ಭಟವನ್ನು ಕೇಳಿ ಪರಮೇಶ್ವರನು ಒಳ್ಳೆ ಜೋರಿನಿಂದ ಬೆವತನು. ಆ ಬೆವರಿನಿಂದ ಷಣ್ಮುಖನು ಹುಟ್ಟಲಿಲ್ಲವೇ? ಅವನು ಮುರ್ಖನಾದ ದಕ್ಷಬ್ರಹ್ಮನ ತಲೆಯನ್ನು ಒಡೆದು ಆ ತಲೆಯನ್ನು ಕುಟ್ಟಿ ಹಿಟ್ಟನ್ನು ಮಾಡಿ, ಆ ಹಿಟ್ಟನ್ನು ತನ್ನ ಸರ್ವಾಂಗಕ್ಕೆ ಹಚ್ಚಿಕೊಳ್ಳಲಿಲ್ಲವೇ.? ಆಗ ಅವನ ಹೆಂಡತಿಯಾದ ನಿರ್ಮಲಾದೇವಿಯು ಶಂಕರನಿಗೆ ಸೆರಗೊಡ್ಡಿ ಬೇಡಿಕೊಳ್ಳಲಿಲ್ಲವೇ? ಆಗ ಶಂಕರನು ಕುರಿಯ ತಲೆಯನ್ನು ದಕ್ಷಬ್ರಹ್ಮನ ತಲೆಗೆ ಕೊಟ್ಟು ನಿರ್ಮಲಾ ದೇವಿಗೆ ಮುತ್ತೈದೆತನವನ್ನು ಕೊಟ್ಟನು. ಆ ದಕ್ಷ ಬ್ರಹ್ಮನಂತೆ ಪಾಪಕ್ಕೆ ನೀನು ಈಡಾಗಬೇಡ. ತಂದೆಯು ಇಲ್ಲಾ ಅವನನ್ನು ಮೊದಲಿಗೆ ಹಾಳ ಹಗೆಯಲ್ಲಿ ಹಾಕಿರಿ ಎಂದನು. ಆಗ ಶಿವರುದ್ರಸ್ವಾಮಿಗಳು ಅವರಿಗೆ ಬೀಳಿಗೆಯ ಎಳೆಮನಿ ದೇಸಾಯಿಯವರ ಮನೆತನ ನಿರ್ನಾಮವಾಗಲಿ ಎಂದು ಶಾಪಕೊಟ್ಟನು. ಆಗ ದೇಸಾಯಿಯವರ ಮಗಳು ಸೂರ್ಯಮಣಿದೇವಿಯು ಶಾಪವನ್ನು ಕೊಡಬೇಡಿರಿ ಎಂದಳು. ಇಲ್ಲಾ ಇಲ್ಲಾ ಇದು ಅಲ್ಲದೆ ಬೀಳಿಗೆಯ ಗಂಡು ಸಂತಾನವೇ ತಟಸ್ತವಾಗಲಿ ಎಂದು ಶಾಪಕೊಟ್ಟರು. ಆಗ ಸೂರ್ಯಮಣಿದೇವಿಯು ಬಡ ಜಂಗಮನಿಗೆ ಬೇಡಿಕೊಳ್ಳಹತ್ತಿದಳು. ಇದಕ್ಕೆ ಪ್ರತಿಯಾಗಿ ಶಿವರುದ್ರಯ್ಯ ಸ್ವಾಮಿಯು ಕಲಿಯುಗದ ಕಾಲಕ್ಕೆ ಬಂದು ಈಗ ಕೊಟ್ಟಂಥ ಶಾಪವನ್ನು ಹಿಂದಕ್ಕೆ ತೆಗೆದು ಕೊಳ್ಳವೆನು ಎಂದು ಹೇಳಿದರು. ಸುತ್ತಲೂ ನೆರೆದ ಜನರೆಲ್ಲರು ಅಣಕವಾಡಿದರು. ದೇಸಾಯಿಯ ಆಜ್ಞೆಯಂತೆ ಹಾಳು ಹಗೆಯಲ್ಲಿ ಶಿವರುದ್ರಯ್ಯ ಸ್ವಾಮಿಗಳನ್ನು ನೂಕಿ ಮುಚ್ಚಿ ಸಂತೋಷದಲ್ಲಿ ಮನೆಯತ್ತ ನಡೆದರು.

ಅವರೆಲ್ಲ ಮನೆಯ ಒಳಗೆ ಕಾಲಿಡಬೇಕು ಎನ್ನುವಾಗಲೇ ಅದ್ಭುತವಾದ ಪವಾಡವೊಂದು ನಡೆದು ಹೋಗಿತ್ತು. ಯಾವ ಸ್ವಾಮಿಯ ಕಾಟದಿಂದ ತಮ್ಮ ಮಗಳನ್ನು ಉಳಿಸಿಕೊಳ್ಳಬೇಕು ಎಂದು ಹಗೆಯಲ್ಲಿ ಹಾಕಿ ಮುಚ್ಚಿದ್ದನ್ನು ಎರಡೂ ಕಣ್ಣಿಂದ ನೋಡಿದ್ದರೋ ಅವೇ ಎರಡು ಕಣ್ಣಿಂದ ಈಗ ತಮ್ಮ ಪಡಸಾಲೆಯಲ್ಲಿ ಅತ್ತಿತ್ತ ನಡೆದಾಡುತ್ತಿದ್ದ ಶಿವರುದ್ರಯ್ಯ ಸ್ವಾಮಿಯವರನ್ನು ಕಂಡಾಗ ಭಯಭೀತರಾದರು. ಸೂರ್ಯಮಣಿ ಓಡಿ ಹೋಗಿ ಕಾಲಿಗೆ ನಮಸ್ಕರಿಸಿದಳು. ಅವಳ

ತುಂತುರ ಹನಿಗಳಲ್ಲಿ ಸ್ವಾಮಿಗಳು ಸಾವಿರ ರೂಪಧರಿಸಿ ನಿಂತಂತೆ ಕಂಡರು. "ದೇಸಾಯಿಯವರಿಗೆ ಬಡಜಂಗಮನ ನಿಜ ಅವತಾರ, ಆತನ ಶಕ್ತಿಯ ಅರಿವಾದಾಗ ಆತನಿಗೆ ಸೋತು ಶರಣಾದರು. ತಾವು ಮಾಡಿದ ಪಾಪದ ಕೆಲಸಕ್ಕೆ ಮರುಗಿದರು. ಶಿವರುದ್ರಯ್ಯ ಸ್ವಾಮಿಗಳ ಪಾದಕ್ಕೆ ನಮಸ್ಕರಿಸಿ ತಪ್ಪನ್ನು ಕ್ಷಮಿಸುವಂತೆ ಕೇಳಿಕೊಂಡರು. ಈ ಘೋರ ಅಪರಾಧಕ್ಕೆ ಪ್ರಾಯಶ್ಚಿತ್ತ ಎನ್ನುವಂತೆ ತಮ್ಮ ಮಗಳು ಸೂರ್ಯಮಣಿದೇವಿಯನ್ನು ಕೊಟ್ಟು ಮದುವೆ ಮಾಡಿದರು."[೩] ಅಂದಿನಿಂದ ದೇಸಾಯಿಯವರ ಮನೆಯು ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತ ಬೆಳಗಹತ್ತಿತು.

ಸೋಬಾನ ಪದ

"ಎಳೆಮನಿ ದೇಸಾಯರು ।
ಇವರೆಂಥ ಬೀಗರು ॥
ಜಂಗಮರೆನ್ನುವರು
ನಿಂದೆಯ ಮಾಡುವರು ।೧।

ಜಂಗಮರಿಗೆ ಮಗಳನ್ನು ಕೊಡುವರು
ಇವರೆಂಥ ಬೀಗರು ।೨।

ಜಂಗಮರೆನ್ನುವರು
ಪಾದಕ್ಕೆ ಬೀಳುವರು
ವರವ ಕೊಡು ಎಂದು
ಬೇಡಿಕೊಳ್ಳುವರು ।೩।

ಅವರ ಪಾದ ತೊಳೆಯುವರು
ನೀರನ್ನು ಕುಡಿಯುವರು
ಶಿವರುದ್ರಯ್ಯ ಸ್ವಾಮಿ ಎಂದು
ಪೂಜೆಯ ಮಾಡುವರು ।೪।

ಹತ್ತು ಮಂದಿ ನಾವು
ಮುತ್ತೈದೆಯರು ಕೂಡಿ
ಶಿವರುದ್ರಯ್ಯ ಸ್ವಾಮಿ ಸೂರ್ಯಮಣಿ ದೇವಿಗೆ
ಲಗ್ನ ಮಾಡಿ ಕೊಡುವೆವು ।೫।
ಹತ್ತು ಮಂದಿ ಕೂಡಿ ಸೋಬಾನೆ ಎನ್ನಿರೆ."[೪]

ಎಂಬ ಹಾಡಿನೊಂದಿಗೆ ಲಗ್ನವನ್ನು ಮುಗಿಸಿದರು. ಎಳೆಮನಿ ದೇಸಾಯಿಯವರು ಎಲ್ಲರೂ ಕೂಡಿಕೊಂಡು ಚಂದ್ರಗಿರಿಯ ಪಟ್ಟಣದಲ್ಲಿಯ ಕಲ್ಮಠದ ಪಟ್ಟಕ್ಕೆ ಆ ಜಂಗಮನನ್ನು ಅಧಿಕಾರಿ ಮಾಡಿದರು. ಅಂದಿನಿಂದ ಆ ಕಲ್ಮಠಕ್ಕೆ ಎಷ್ಟೋ ಮಂದಿ ಭಕ್ತರು ನಡೆದು ಕೊಳ್ಳಲಿಕ್ಕೆ ಹತ್ತಿದರು. ತಾವು ಬಯಸಿದ ವರಗಳನ್ನು ಪಡೆದರು. ಇದರಿಂದ ಶಿವರುದ್ರಯ್ಯಸ್ವಾಮಿಗಳ ಕೀರ್ತಿಯೂ ಜಗತ್ತಿನ ತುಂಬೆಲ್ಲಾ ಹಬ್ಬಿತು. ಮುಂದೆ ಸ್ವಲ್ಪಕಾಲದಲ್ಲಿ ಸೂರ್ಯಮಣಿ ದೇವಿಯವರು ಗರ್ಭಿಣಿಯಾದರು. ಆಗ ಶಿವರುದ್ರಯ್ಯಸ್ವಾಮಿಯವರು ತಮ್ಮ ಹೆಂಡತಿಯ ಜೊತೆ ಮಾತನಾಡುತ್ತಾ ಇದು ನಮ್ಮದಲ್ಲ ಎಲ್ಲಾ ಆ ಶಂಕರನ ಲೀಲೆ ಎಂದು ಹೇಳಿದರು. ಸೂರ್ಯಮಣಿ ದೇವಿಯವರು ಗರ್ಭಿಣಿಯಾದ ಸುದ್ದಿಯನ್ನು ಅವರ ತಂದೆ ತಾಯಿಗಳಿಗೆ ಹೇಳಿ ಕಳಿಸಿದರು. ದೇಸಾಯಿಯವರು ಬಂದು ತಮ್ಮ ಮಗಳನ್ನು ಸಂಭ್ರಮದಿಂದ ಕರೆದೊಯ್ಯುವರು. ನವಮಾಸಗಳು ತುಂಬಿ ಬಂದು ಸೋಮವಾರ ಬೆಳಗಿನ ಜಾವದಲ್ಲಿ ಗಂಡು ಮಗುವಿಗೆ ಜನ್ಮ ನೀಡಿದರು.

ಗುರುಸಂಗಯ್ಯಸ್ವಾಮಿ ಹಾಗೂ ನೀಲಮ್ಮ ದಂಪತಿಗಳಿಗೆ ಜನಿಸಿದ ಮಗ ಶಿವರುದ್ರಯ್ಯ ಸ್ವಾಮಿಯವರು ನೀತಿ ಕತೆಯಲ್ಲಿ ಬರುವಂತೆ ಕಟುಕನ ಮನೆಯಲ್ಲಿ ಸಾಕಿದಂತ ಗಿಳಿಯು ಈ ಹಿಡಿರಿ, ಬಡಿರಿ, ಹೊಡಿರಿ, ಎನ್ನುವ ಸ್ವಭಾವ ಇರುವಂತೆ ಅದೇ ರೀತಿ ಮಠದಲ್ಲಿ ಸಾಕಿರುವ ಗಿಳಿಯು ಮಠದ ಆಚಾರ-ವಿಚಾರಗಳಾದ ಭಕ್ತರನ್ನು ಆದರದಿಂದ ಕರೆಯುವುದು, ಕುಳಿತುಕೊಳ್ಳಿರಿ ಎಂದು ಹೇಳುವುದು, ಪ್ರಸಾದ ಮಾಡಿರಿ ಎಂಬ ಇತ್ಯಾದಿ ಸತ್ಕಾರದ ನುಡಿಗಳನ್ನು ನುಡಿಯುವಂತೆ ಶಿವರುದ್ರಯ್ಯ ಸ್ವಾಮಿಯು ಶಿವಭಕ್ತರ ಮತ್ರನಾಗಿರುವುದರಿಂದ ಪೂಜೆ ಪುನಸ್ಕಾರದಲ್ಲಿ ತೊಡಗುತ್ತಿದ್ದನು.

ಶಿವರುದ್ರಯ್ಯ ಸ್ವಾಮಿಗಳ ಭಕ್ತಿಯು ನಾಡಿನ ತುಂಬೆಲ್ಲ ಹರಡಿದಾಗ ಅವರಿಗೆ ಹಲವಾರು ಭಕ್ತರು ಶಿಷ್ಯರಾಗುತಾರೆ. ಅದರಂತೆ ಬೀಳಿಗಿ ದೇಸಾಯಿಯವರ ಮಗಳು ಸುರ್ಯಮಣಿದೇವಿ ಇವರ ದರ್ಶನಪಡೆಯಲು ಆತುರ ಪಡುತ್ತಿರುತ್ತಾಳೆ. ಹನ್ನೆರಡನೆಯ ಶತಮಾನದಲ್ಲಿ ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನನೆ ಪತಿಯಾಗಬೇಕೆಂದು

"ಹರನೇ ನೀನೆನನಗೆ ಗಂಡನಾಗಬೇಕೆಂದು
ಅನಂತಕಾಲ ತಪಿಸಿದ್ದೆ ನೋಡಾ!
ಹಸೆಯ ಮೇಲಣ ಮಾತು ಬೆಸಗೂಳಲಟ್ಟಿದರೆ
ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು
ಭಸ್ಮವನೆ ಪುಸಿ ಕಂಕಣವನ್ನೆ ಕಟ್ಟಿದರು
ಚೆನ್ನಮಲ್ಲಿಕಾರ್ಜುನ ತನಗೆ ನಾನಾಗೆಬೇಕೆಂದು"[೫]

ಎಂಬ ಅವಳ ಭಾವನೆಯಿರುವಂತೆ ಈ ಸೂರ್ಯಮಣಿದೇವಿಯೂ ಶಿವರುದ್ರಯ್ಯ ಸ್ವಾಮಿಗಳಿಗಾಗಿ ಪರಿತಪಿಸಿ ಕೊನೆಗೆ ಒಂದು ದಿನ ಆತನ ದರ್ಶನಪಡೆದು ತನ್ನ ಮೂರು ವರಗಳನ್ನು

ಈಡೇರಿಸಿಕೊಳ್ಳುವಳು. ಆದರೆ ಜೀಳಗಿ ದೇಸಾಯಿಯವರು ಪ್ರಸಿದ್ಧ ಶ್ರೀಮಂತರ ಮನೆತನವಾಗಿತ್ತು. ತಮ್ಮ ಮಗಳ ಈ ವೈವಾಹಿಕ ಸುದ್ದಿಯನ್ನು ತಿಳಿದು ಕೆಂಡಮಂಡಲನಾಗುತಾನೆ. ಬಡ ಜಂಗಮನಿಗೆ ಕೊಡುವುದಕ್ಕೆ ಶಿವರುದ್ರಯ್ಯ ಸ್ವಾಮಿಗಳನ್ನು ಜರಿಯುತ್ತಾನೆ. ಹಾಗೂ ದಂಡಿಸುತ್ತಾನೆ. ಇದನ್ನು ನೋಡಿದರೆ ಪ್ರಸ್ತುತ ದಿನಗಳಲ್ಲಿ ಸಮಾಜದಲ್ಲಿ ನಡೆಯುವಂತಹ ಇಂತಹ ಘಟನೆಗಳು ಆ ಕಾಲದಲ್ಲಿಯೂ ಪ್ರಚಲಿತದಲ್ಲಿದ್ದವು ಎಂಬುದು ತಿಳಿಯುತ್ತದೆ.

೩.೩. ಪೂರ್ವಜರ ಮೂರನೆಯ ತಲೆಮಾರು :(The Third Generation of ancestors)

ಸೂರ್ಯಮಣಿದೇವಿಯವರು ಗಂಡು ಮಗುವಿಗೆ ಜನ್ಮ ನೀಡಿರುವ ಶುಭ ಸುದ್ಧಿಯು ಸ್ವಾಮಿಗಳಿಗೆ ಮುಟ್ಟಿತು. ಆಗ ಅವರು ದ್ವಾಪರಯುಗ ಎರಡನೇ ಚರಣ, ಸೋಮವಾರ ನನ್ನ ಲಿಂಗ ಪೂಜೆಯ ಸಮಯಕ್ಕೆ ಹುಟ್ಟಿದ್ದರಿಂದ ಅವನಿಗೆ ಲಿಂಗಯ್ಯನೆಂದು ನಾಮಕರಣ ಮಾಡಲು ತಿಳಿಸಿದರು. ಆಗ ಸೂರ್ಯಮಣಿದೇವಿಯರು ಅಪ್ಪಾ! ನನ್ನ ಪುತ್ರನಿಗೆ ನನ್ನ ಪತಿದೇವರು ಏನು ನಾಮಕರಣ ಮಾಡಲು ತಿಳಿಸಿರುವರು ಬೇಗಹೇಳಪ್ಪಾ ಎಂದು ಕೇಳಿದಳು. ಅದಕ್ಕೆ ತಂದೆಯು ಲಿಂಗಯ್ಯಸ್ವಾಮಿ ಎಂದು ನಾಮಕರಣ ಮಾಡಲು ಹೇಳಿರುವರು ಎಂದು ಹೇಳಿದನು. ಓ ನನ್ನ ಪುತ್ರನಿಗೆ ಸರಿಯಾದ ಹೆಸರನ್ನು ಸೂಚಿಸಿರುವರು ಬೇಗನೆ ಎಲ್ಲರನ್ನು ಕರೆಯಿರಿ ಹೆಸರು ಇಡೋಣ ಎಂದು ಊರುತುಂಬ ಹಬ್ಬಿಸಿದರು (ಸುದ್ದಿ ಮುಟ್ಟಿಸುವುದು). ಎಲ್ಲರು ಸೇರಿ ಜೋಗುಳ ಪದವಾಡಿದರು.

ಚಂದ್ರಗಿರಿಯ ಪಟ್ಟಣದಲ್ಲಿ ಜನಿಸಿದರಮ್ಮಾ ।
ಲಿಂಗಯ್ಯಸ್ವಾಮಿ ಎಂದು ಹೆಸರಿಟ್ಟರಮ್ಮಾ ಜೋ॥ ಜೋ॥

"ಜೋಗುಳ ಹಾಡಿದರ ಆಗಳೇ ಕೇಳ್ಯಾನ ।
ಹಾಲ ಹಂಬಲ ಮರತಾನ ! ಕಂದೈಗ ।
ಜೋಗುಳದಾಗ ಅತಿ ಮುದ್ದ ॥ಜೋ॥ ಜೋ"॥[೬]

ಹುಟ್ಟೀದ ಕಂದನಿಗೆ ಅಕ್ಷಯ್ಯವಾಗಲಿ(ಮೋಕ್ಷ)
ಕೊಟ್ಟಂಥ ಸ್ವಾಮಿ ಮರೆವನೆ । ಕಂದಮ್ಮ
ಬೊಟ್ಟ ಬೆಟ್ಟಾಗಿ ಬೆಳೆಯಲಿ ॥

ಹಲಿಗಿ ತೊಟ್ಟಿಲದಾಗ ಹವಳದ್ಹಾಸಿಗಿ ಹಾಸಿ ।
ಗುಲಗಂಜಿ ಚಂಡು ನಡುವಿಟ್ಟು । ನನಬಾಳ ।
ಮನಬಲ್ಲಂಗಾಡೊ ನವಿಲಾಟ ॥ ಜೋ ॥ ಜೋ ॥

"ತೂಗು ತೊಟ್ಟಿಲಿಗೊಂದು ಪಾಗು ಪಟ್ಟಿಯ ಹಾಸಿ ।
ಮಾಗಾಯಿ ಮಗನ । ಮಲಗೀಸಿ । ಅವರಮ್ಮ ।
ಜೋಗುಳ ಹಾಡಿ ಹಿಗ್ಗ್ಯಾಳ" ॥೭

"ಬಣ್ಣದ ತೊಟ್ಟಿಲಕ ಜೆಗ್ಗಿ ಬಿದ್ದಾವು ಗೊಂಡೆ ।
ಇಬ್ಬರು ತೂಗಿದರ ಮಲಗನ । ಕಂದನ ।
ಅಬ್ಬರಣಿ ಭಾಳ ಮನಿಯಾಗ" ॥೮

"ತೊಟ್ಟಿಲದಾಗೊಂದು ತೊಳೆದ ಮುತ್ತಿನ ಕಂಡೆ ।
ಹೊಟ್ಟೆ ಮ್ಯಾಲಾಗಿ ಮಲಗ್ಯಾನ । ಕಂದೈಗ ।
ಮುತ್ತಿನ ದೃಷ್ಟಿ ತೆಗೆವೇನ" ॥೯

ಲಿಂಗಯ್ಯಸ್ವಾಮಿ ಬಿದಿಗೆಯ ಚಂದ್ರನಂತೆ ಬೆಳೆಯ ತೊಡಗಿದ. ಜೊತೆಗೆ ಹಣೆಗೆ ಭಸ್ಮವನ್ನು ಧರಿಸಿ ಕುಳಿತು ಹೆಚ್ಚು ವೇಳೆ ಶಿವಧ್ಯಾನದಲ್ಲೇ ಕಳೆಯುತ್ತಿದ್ದನು. ಶಿವನ ಬಗ್ಗೆ ಲಿಂಗ ಪೂಜೆಯ ಬಗ್ಗೆ ಆತನಲ್ಲಿದ್ದ ಆಸಕ್ತಿ ಭಕ್ತಿ ಕಂಡು ತಾಯಿ ಬೆರಗಾದರು. ಲಿಂಗಾಂಗದ ಸಾಮರಸ್ಯದ ಕುರುಹು ತಿಳಿಯದ ಮುಗ್ಧ ಮಗು ತನ್ನ ತಿಳುವಳಿಕೆಗಿಂತಲೂ ಹೆಚ್ಚು ಬೆಳೆಯತೊಡಗಿದ. ಆತನನ್ನು ಪಡೆದದ್ದೇ ತಮ್ಮ ಭಾಗ್ಯ ಎಂದು ಕೊಂಡರು. ಲಿಂಗಯ್ಯಸ್ವಾಮಿಯು ದಿನ ನಿತ್ಯದ ಲಿಂಗಪೂಜೆಯಿಂದ ಪ್ರಸನ್ನನಾಗಿ ಮುಖವು ಬಹಳ ತೇಜಸ್ಸಿನಿಂದ ಬೆಳಗಹತ್ತಿತು. ಅವರು ಮಾತನಾಡಿದರೆ ಮುತ್ತು ರತ್ನಗಳು ಉದುರಿದಂತೆ ಆಗುತ್ತದೆ. ಒಂದಾನೊಂದು ದಿನ ಅವರು ತಮ್ಮ ತಾಯಿಯನ್ನು ಕೇಳಿದರು. ಅಮ್ಮ ಲಿಂಗಪೂಜೆ ಮಾಡುವುದು ಹೇಗೆ ಹೇಳಮ್ಮಾ ಎಂದು ಕೇಳಲಾಗಿ, ಮಗು ಲಿಂಗದ ಮಹಿಮೆ ಆ ಜಂಗಮರಿಗೂ ಸಹ ತಿಳಿಯದು, ನಿನ್ನಂಥ ಬಾಲಕನಿಗೆ ಏನು ತಿಳಿದೀತಪ್ಪಾ ಎನ್ನಲಾಗಿ, ಅಮ್ಮಾ ನಾನು ವೀರಶೈವ ಮತದಲ್ಲಿ ಹುಟ್ಟಿರುವೆ ನನಗೆ ಲಿಂಗ ಪೂಜೆ ಮಾಡುವುದು ಆಗುವುದಿಲ್ಲವೇ? ಅದು ಹೇಗೆ ಮಾಡಬೇಕು ಹೇಳಮ್ಮಾ, ನಿನ್ನಚ್ಛೆಯಂತೆ ಲಿಂಗಪೂಜೆಯನ್ನು ಮಾಡುವೆನು. ಅದಕ್ಕೆ ತಾಯಿಯು, ಮಗು ಲಿಂಗಪೂಜೆ ಮಾಡುವುದೆಂದರೆ ತುಂಬಿದ ತಂಬಿಗೆ ನೀರು, ಬಿಲ್ವ ಪತ್ರೆ, ಗಂಧ, ಚಂದ್ರ, ತರತರಹದ ಪುಷ್ಪವನ್ನು ತಂದು ಲಿಂಗವನ್ನು ಅಂಗೈಯಲ್ಲಿಟ್ಟು ಪೂಜೆ ಮಾಡಬೇಕು. ಅಂದರೆ ಹರನು ಒಲಿಯುವನು. ಆಗ ಲಿಂಗಯ್ಯನು ತಾಯಿಯ ಆಶೀರ್ವಾದ ಪಡೆದು, ಲಿಂಗ ಪೂಜೆಗೆ ಹೊರಟನು. ಅಡವಿಯಲ್ಲಿ ಒಂದು ಗಿಡದ ಅಡಿಯಲ್ಲಿ ಕುಳಿತು, ತಾಯಿ ಹೇಳಿದಂತೆ ಲಿಂಗಪೂಜೆಯನ್ನು ಮಾಡಿದನು.

ಈ ಸುದ್ದಿಯನ್ನು ಕೇಳಿ ಅವರ ತಂದೆ ನನ್ನ ಮಗನು ಲಿಂಗಪೂಜೆಯನ್ನು ಹೇಗೆ ಮಾಡುವನೋ ಎಂದು ನೋಡಿದನು. ಆಗ ಲಿಂಗಯ್ಯ ಪೂಜೆ ಮುಗಿಸಿ ಶಿವನ ಧ್ಯಾನದಲ್ಲಿ ಲೀನವಾಗಿದ್ದನು. ಆಗ ಅವನ ಲಿಂಗದ ಮೇಲೆ ಬಿಸಿಲು ಬಿದ್ದಿತ್ತು. ಶಿವರುದ್ರಯ್ಯ ಸ್ವಾಮಿಯವರು

ಅದನ್ನು ನೋಡಿ ನಮಗೂ ಕಷ್ಟ ತನ್ನ ದೇಹಕ್ಕೆ ಕಷ್ಟ ಆ ಲಿಂಗಕ್ಕೂ ಕಷ್ಟ ಇದೇ ರೀತಿ ಆ ಪರಮಾತ್ಮನಲಿಂಗಕ್ಕೆ ಕಷ್ಟವನ್ನು ಕೊಟ್ಟರೆ ಆ ಹರನು ಒಲಿಯುವನೇ, ಗುರು ಒಲಿಯುವನೇನು? ಆ ಪರಮಾತ್ಮನೂ ಕೂಡ ಕಷ್ಟವನ್ನು ಕೊಡಲಾರದೆ ಬಿಡಬಲ್ಲನೆಂದು ತಿಳಿದಿರುವೆಯಾ? ಎಂದು ಹೇಳಿದಾಗ ಅದಕ್ಕೆ ಪ್ರತಿಯಾಗಿ ಲಿಂಗಯ್ಯನು ತಂದಿಗೆ ಅಪ್ಪಯ್ಯ ಲಿಂಗ ಪೂಜೆಯನ್ನು ಹೇಗೆ ಮಾಡಬೇಕು ಹೇಳು ಎಂದಾಗ, ಲಿಂಗದ ಮಹಿಮೆ ಹರಿಹರನು ಬಲ್ಲ. ಆ ಲಿಂಗದ ಪೂಜೆ ನಿನ್ನಂಥ ಬಾಲಕನಿಗೆ ತಿಳಿಯಲಾರದು ಎಂದರು. ಅದಕ್ಕೆ ಲಿಂಗಯ್ಯನು ಅಪ್ಪಯ್ಯಾ ಇದೆಂಥ ಮಾತನ್ನು ಆಡಿದಿಯಾ ನಾನು ವೀರಶೈವ ಮನೆತನದಲ್ಲಿ ಹುಟ್ಟಿರುವೆ. ನನಗೆ ಲಿಂಗಪೂಜೆ ಮಾಡುವುದು ಆಗುವುದಿಲ್ಲ ಅಂತ ಹೇಳುತ್ತೀಯಾ, ನಿನ್ನಿಚ್ಛೆಯಂತೆ ಇದು ನಿಜವೇ ಹೇಳು, ನೀನು ಹೇಳದೆ ಹೋದರೆ ನಾನು ಈ ದೇಹವನ್ನು ಆ ಲಿಂಗಕ್ಕೆ ಅರ್ಪಿಸುವೆನು. ಹಾಗಾದರೆ ಲಿಂಗವನ್ನು ಪೂಜಿಸುವ ವಿಧಾನವನ್ನು ಬೇಗ ಹೇಳಪ್ಪ ಎಂದನು.

ಶಿವರುದ್ರಯ್ಯ ಹಾಗೂ ಸೂರ್ಯಮಣಿದೇವಿಯವರಿಗೆ ಜನಿಸಿದ ಮಗ ಲಿಂಗಯ್ಯನೇ ಈ ಮಹಾಪ್ರಬಂಧದ ರಚನೆಗೆ ಕಾರಣಕರ್ತ. ಈ ಲಿಂಗಯ್ಯನಿಗೆ ನಾಮಕರಣ ಮಾಡುವಂತಹ ಸಂದರ್ಭದಲ್ಲಿ ಹಾಡುವಂತಹ ಹಾಡಿನಲ್ಲಿ ಲಿಂಗಯ್ಯನು ಎಲ್ಲಿ ಹುಟ್ಟಿದ, ಆತನ ಗುಣ ಸ್ವಭಾವೇನು, ಎಂಬುದು ತಿಳಿಯುತ್ತದೆ. ಇಲ್ಲಿಯೂ ಲಿಂಗಯ್ಯನು ಬೆಳೆಯುತ್ತ ದೊಡ್ಡವನಾದಂತೆಲ್ಲ ಶಿವ ಭಕ್ತಿಯಲ್ಲಿ ತೊಡಗಿಸಿಕೊಳ್ಳುತ್ತಾನೆ. ತಾವು ವೀರಶೈವ ಕುಲದಲ್ಲಿ ಹುಟ್ಟಿರುವುದರಿಂದ ತಾವು ಲಿಂಗ ಪೂಜೆಮಾಡಲೇಬೇಕು ಎಂಬ ಹಠದ ಸ್ವಭಾವ ತಿಳಿಯುತ್ತದೆ. ಆಯ್ದಕ್ಕಿ ಮಾರಯ್ಯನು ಕಾಲದ ಸ್ಥಿತಿಯನ್ನು

"ಕಾಯಕದಲ್ಲಿ ನೀರುತ್ತವಾದರೆ
ಗುರುದರ್ಶನವಾದಡೂ ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ"[೨೦]

ಎಂದು ಆಯ್ದಕ್ಕಿ ಮಾರಯ್ಯ ಹೇಳುವಂತೆ ಇದಕ್ಕೆ ಪೂರಕವಾಗಿ ಲಿಂಗಯ್ಯನು ಲಿಂಗಪೂಜೆಯನ್ನು ಒಂದು ಕಾಯಕವೆಂದು ಭಾವಿಸಿದ್ದು ಕಂಡುಬರುತ್ತದೆ.

೩.೪. ಲಿಂಗಯ್ಯನು ಚಂದಾಲಿಂಗನಾಗಿ ಪರಿವರ್ತನೆ : (Transformation of Lingayya Subscription to Chandalinga)

ಶಿವರುದ್ರಯ್ಯಸ್ವಾಮಿಗಳು ಮಗ ಲಿಂಗಯ್ಯಸ್ವಾಮಿಗೆ ಲಿಂಗಪೂಜೆಯ ಬಗ್ಗೆ ಹೀಗೆ ಹೇಳುತ್ತಾನೆ. "ಜಿಸಿಲಿಲ್ಲದ ಬಾವಿಯ ನೀರು, ಹೆಸರಿಲ್ಲದ ಪತ್ರಿ ತಂದು, ಹಸನಾದ ಅಂಗೈಯಲ್ಲಿ ಇಟ್ಟು

ಸರ್ವಶ್ವವನ್ನು ಬಿಟ್ಟು ಒಂದೇ ಭಕ್ತಿಯಿಂದ ಲಿಂಗಪೂಜೆಯನ್ನು ಮಾಡಿದರೆ ಮಾತ್ರ ಹರನು ಒಲಿಯುವನು, ಗುರು ಮುಕ್ತಿಯ ಮಾರ್ಗವನ್ನು ತೋರಿಸುವನು, ಆ ಪರಮಾತ್ಮನು ಕೂಡ ನಿನ್ನ ಭಕ್ತಿಗೆ ಮೆಚ್ಚುವನು", ಎಂದು ಹೇಳಿದಾಗ ಮಗು, ಅಪ್ಪಾ ನಿನ್ನ ಇಚ್ಛೆಯಂತೆ ಲಿಂಗಪೂಜೆಯನ್ನು ನೆರವೇರಿಸುವೆನು. ನೀನು ನನಗೆ ಆಶೀರ್ವದಿಸು ತಂದೆ ಎಂದು ಕೇಳಿ ಆಶೀರ್ವಾದ ಪಡೆದು, ಲಿಂಗಯ್ಯಸ್ವಾಮಿಯು ತಂದೆ ಹೇಳಿದಂತೆ ಬಿಸಿಲಿಲ್ಲದ ನೀರು, ಹೆಸರಿಲ್ಲದ ಪತ್ರಿಯನ್ನು ಹುಡುಕಲು ಹಳ್ಳಕೊಳ್ಳಗಳನ್ನು, ಗುಡ್ಡಗಾಡು ಪ್ರದೇಶಗಳನ್ನು ಏಳೆಂಟು ದಿನಗಳವರೆಗೆ ಸುತ್ತಿದರೂ ತಂದೆ ಹೇಳಿದ ವಸ್ತುಗಳು ಸಿಗಲೇ ಇಲ್ಲಾ. ಆಗ ಲಿಂಗಯ್ಯಸ್ವಾಮಿ ಸಾಕಷ್ಟು ಅಡ್ಡಾಡಿ ಸಾಕಾಗಿ ಬಂದು ಗಿಡದ ಬುಡದಲ್ಲಿ ನಿಂತು ಹರನನ್ನು ಸ್ಮರಿಸಿದನು. "ಹೇ ದೇವಾ ಪರಮಾತ್ಮ ನಿದ್ದೆ, ನೀರಡಿಕೆ, ಹಸಿವು, ಇವು ಯಾವುದನ್ನೂ ಲೆಕ್ಕಿಸದೇ ದೇವಾ ನಿನ್ನಯ ಲಿಂಗ ಪೂಜೆಗೆ ನಾನು ಹವಣಿಸುತ್ತಿದ್ದೇನೆ. ನನ್ನಂಥ ಪಾಪಿ ಇರಲಾರನಯ್ಯ ಇಹಲೋಕದಲ್ಲಿ. ಹೇ ಶಿವನೇ ಇದೇ ಎದುರಿಗೆ ಕಾಣುವ ಬೆಟ್ಟವನ್ನೇರಿ ಪ್ರಾಣಹರಣ ಮಾಡಿಕೊಳ್ಳುವೆ. ಶಂಕರ ನಾನು ನಿನಗೆ ಪ್ರಾಣ ಅರ್ಪಿಸುವೆ. ಹೇ ಪರಮಾತ್ಮನೆ ಇವತ್ತಿಗೆ ಏಳೆಂಟು ದಿವಸಗಳಿಂದ ನಾನು ಲಿಂಗ ಪೂಜೆಗೆ ಹವಣಿಸುತ್ತಿದ್ದೇನೆ. ನೀನು ಕೊಟ್ಟ ಲಿಂಗಪೂಜೆಯನ್ನು ನಾನು ಮಾಡದೆ ಇರಲಾರೆ. ಇದೋ ಇಲ್ಲಿರುವ ಬೆಟ್ಟವನ್ನು ಏರಿ ಪ್ರಾಣವನ್ನು ಬಿಡುವೆನು ಎಂದು ಹಾರಿ ಬಿಡುವಷ್ಟರಲ್ಲಿ ಪರಮಾತ್ಮನು ಘೋರ ಸ್ವರದಿಂದ ಕೂಗಹತ್ತಿದನು. ಆಗ ಲಿಂಗಯ್ಯನು ಗದ ಗದನೆ ನಡುಗುತ್ತಾ ತೊದಲ ನುಡಿಯಿಂದ ನುಡಿಯುತ್ತಾ ಇದೇನು ಭೂತ-ಪಿಶಾಚಿಯ ಶಬ್ದವೇ, ಆಕಾಶವಾಣಿಯ ಸ್ವರವೇ, ಆ ಶಂಕರನ ಸ್ವರವೇ, ನನ್ನಂತ ಪಾಪಿಗೆ ಇನ್ನೆಲ್ಲಿ ಪರಮಾತ್ಮನು, ಹಿಂದೆ ನಾನು ಮರಳಿ ಹೋದರೆ ವೀರಶೈವ ಮತಕ್ಕೆ ಕಳಂಕ ತಂದಂತೆ ಆಗುವುದು ಅಂತ ತಿಳಿದು ಲಿಂಗಯ್ಯನು ಬೆಟ್ಟದ ಮೇಲಿಂದ ಕೆಳಗೆ ಹಾರಿದನು. ಲಿಂಗಯ್ಯ ಕೆಳಗೆ ಬೀಳುವಷ್ಟರಲ್ಲಿ ಪರಮಾತ್ಮನು ಅವನನ್ನು ಹಿಡಿದು ಬಿಟ್ಟನು. ಈ ಕಥೆಯನ್ನು ಕೋಳೂರಿನ ಕೊಡಗೂಸಿನ ಕಥೆಗೆ ಸಾಮಿಪ್ಯ ಮಾಡಬಹುದು. ಶಿವನು ಕೆಳಗೆ ಹಾರಿದ ಮಗುವನ್ನು ಒಂದು ರೀತಿ ತೊಟ್ಟಿಲಲ್ಲಿ ಕುಳಿತಿದ್ದ ಶಿಶುವು ಹೇಗೆ ಇರುತ್ತೆ ಹಾಗೆ ಲಿಂಗಯ್ಯನನ್ನು ಹಿಡಿದನು. ಇಬ್ಬರು ಕೂಡಿ ಭೂಮಿಗೆ ಇಳಿದರು. ಲಿಂಗಯ್ಯನಿಗೆ ಏನೂ ಆಗಿರಲಿಲ್ಲ. ಆಗ ಪರಮಾತ್ಮನು ಎಲೋ ಮಗನೇ ಅಲ್ಪ ಕಾರ್ಯಕ್ಕಾಗಿ ನಿಮ್ಮಂತ ವೀರಕುಮಾರರು ಪ್ರಾಣ ತ್ಯಾಗ ಮಾಡಿಕೊಳ್ಳುವುದು ಸರಿಯಲ್ಲ ಎಂದು, ಅವನಿಗೆ ಕೂಡಲೆ ಪಂಚಾಕ್ಷರಿ ಮಂತ್ರವನ್ನು ಬೋಧನೆ ಮಾಡಿದನು. ಅವನಿಗೆ ಆಶೀರ್ವಾದ ಮಾಡಿ, ನೀನು ಬೇಡಿದ ವಸ್ತುಗಳು ಸಿಗುತ್ತವೆ, ಇದೆ ಗುಡ್ಡದ ಹೂವಿನ ಕೊಳ್ಳದಲ್ಲಿ ಇವೆ, ಅವು ಯಾವುವು ಹೇಳು ಮಗು ಎನ್ನಲಾಗಿ, ಸ್ವಾಮಿ 'ಬಿಸಿಲಿಲ್ಲದ ನೀರು, ಹೆಸರಿಲ್ಲದ ಪತ್ರೆ' ಎಂದು ಹೇಳಿದಾಗ, ಪರಮಾತ್ಮನು ನಿನಗೆ ಸಿಗುತ್ತವೆ ನಿಮ್ಮ ತಂದೆ ಹೇಳಿದಂತೆ ಅಂಗೈಯಲ್ಲಿ ಲಿಂಗವನ್ನಿಟ್ಟು ಅಂದ ಚಂದದಿಂದ ಪೂಜೆಯನ್ನು ಮಾಡಿ ಅಂದ ಚಂದಲಿಂಗಯ್ಯನೆಂದು ನಾಮಕರಣವನ್ನು ಆಶೀರ್ವಾದವನ್ನು ಮಾಡಿ ಆ ಪರಮಾತ್ಮನು ಮಾಯವಾದನು.

ಲಿಂಗಯ್ಯನು ಸುತ್ತಮುತ್ತ ನೋಡಲು ಪರಮಾತ್ಮನು ಎಲ್ಲಿಯೂ ಕಾಣಲಿಲ್ಲ. ಇದೇನು ಪರಮಾತ್ಮನ ಲೀಲೆಯು ಜಗತ್ತಿಗೆ ಇದು ತಿಳಿಯಲಾರದು. ಶಂಕರನು ಹೇಳಿದಂತೆ ಇದೇ ಗುಡ್ಡದ ಹೂವಿನ ಕೊಳ್ಳದಲ್ಲಿ ಹುಡುಕುತ್ತಾ ಹೊರಟನು. ಅಷ್ಟರಲ್ಲಿ 'ಮುದ್ದಮ್ಮ' ಎಂಬುವ ಹೆಣ್ಣು ಮಗಳ ದರ್ಶನವಾಯಿತು. ಅಮ್ಮಾ ! ಬಿಸಿಲಿಲ್ಲದ ಬಾವಿ ಎಲ್ಲಿ ಇದೆ ಮತ್ತು ಹೆಸರಿಲ್ಲದ ಪತ್ರೆ ಎಲ್ಲಿ ಇರುತ್ತದೆ ಸ್ವಲ್ಪ ತಿಳಿಸುವೆಯಾ ಎಂದು ದೈನ್ಯದಿಂದ ಬೇಡಿಕೊಂಡನು. ಅದಕ್ಕೆ ಮುದ್ದಮ್ಮನು, ಮಗನೇ ಇದೋ ಅಲ್ಲಿ ಕಾಣುತ್ತಿರುವುದೆ ಬಾವಿ ಹಾಗೂ ಪತ್ರಿಯಗಿಡ, ಹೋಗು ಅಲ್ಲಿ ಹೋಗಿ ನಿನ್ನಿಚ್ಛೆ ಪೂರ್ಣಗೊಳಿಸಿಕೊ, ಎಂದಳು.

ಲಿಂಗಯ್ಯನು ಮುದ್ದಮ್ಮ ತೋರಿಸಿದ ಕಡೆ ಹೋಗಿ ಬಿಸಿಲಿಲ್ಲದ ನೀರನ್ನು, ಹೆಸರಿಲ್ಲದ ಪತ್ರಿಯನ್ನು ತೆಗೆದುಕೊಂಡು ಬಂದು ಬಾವಿಯ ದಂಡೆಯಲ್ಲಿ ಕುಳಿತು ಅಂದ ಚಂದದಿಂದ ಲಿಂಗಪೂಜೆಯನ್ನು ನೆರವೇರಿಸಿದನು. ಆಗ ಇವರನ್ನು ನೋಡಲಿಕ್ಕೆ ಜನಗಳು ಬರುವುದಕ್ಕೆ ಪ್ರಾರಂಭಿಸಿದರು. ಲಿಂಗಯ್ಯನು ಮಾಡುವ ಅಂದಚಂದದ ಲಿಂಗಪೂಜೆಯನ್ನು ನೋಡಿ ಅವರಿಗೆ ಬಹಳ ಸಂತೋಷವಾಯಿತು. ಆ ಸಂತೋಷದ ಉತ್ಸವದಲ್ಲಿ ಎಲ್ಲರೂ ಚಂದಾಲಿಂಗಯ್ಯನೆಂದು ಜಗತ್ತಿಗೆ ಸಾರಿದರು. ಇವನು ಜಗತ್ತಿಗೆಲ್ಲ ಅಮರನಾಗಿ ಬೆಳೆದನು.

ಲಿಂಗಯ್ಯನು ಏಕಚಿತ್ತದಿಂದ ಲಿಂಗದ ಪೂಜೆಯನ್ನು ನೆರವೇರಿಸುತ್ತಾನೆ. ಆ ಲಿಂಗ ಪೂಜೆಗೆ ಬೇಕಾದಂತ ಬಿಸಿಲು ಬೀಳದ ಬಾವಿಯ ನೀರು ಹೆಸರಿಲ್ಲದ ಪತ್ರಿಯನ್ನು ತರಲು ಚಂದ್ರಗಿರಿಯ ಗುಡ್ಡದ ಪ್ರದೇಶವನ್ನೆಲ್ಲ ಸುತ್ತುತ್ತಾನೆ. ಅವು ಸಿಗದೇ ಇದ್ದಾಗ ಶಿವನನ್ನೆ ಪ್ರಾರ್ಥಿಸುತ್ತಾನೆ. ಆದರೆ ದೇವರು ಸರ್ವಕಾಲಿಕವಾಗಿದ್ದಾನೆ ಎಂಬುದು ತಿಳಿಯುತ್ತದೆ. ಬಿಸಿಲು ಬೀಳದ ಬಾವಿ ಹಾಗೂ ಹೆಸರಿಲ್ಲದ ಮರದ ಪತ್ರಿ ಇಲ್ಲದಿದ್ದರೂ ಇದೇ ನಂಬಿಗೆಯಿಂದ ಶಿವನಲ್ಲಿ ಮೊರೆಯಿಟ್ಟು ಸಾಕಾಗಿ ಗುಡ್ಡದಿಂದ ಕೆಳಗೆ ಹಾರಿ ಪ್ರಾಣ ಅರ್ಪಿಸಬೇಕುಸಬೇಕೆಂದು ತೀರ್ಮಾನಕ್ಕೆ ಬರುತ್ತಾನೆ. ಅಂದರೆ ತನ್ನ ಜೀವನಕ್ಕಿಂತ ಲಿಂಗಪೂಜೆಯೇ ಮುಖ್ಯವೆಂದು ಲಿಂಗಯ್ಯ ತಿಳಿದುಕೊಂಡಿರುವುದು ತಿಳಿಯುತ್ತದೆ. ಈ ಮಗುವಿನ ಭಕ್ತಿಯು ಕೋಳೂರು ಕೊಡಗಿನ ಕಥೆಯಲ್ಲಿ ಬರುವ ಮಗು ಶಿವಲಿಂಗನಿಗೆ ಹಾಲು ಕುಡಿಯಲು ಒತ್ತಾಯಿಸುವುದು ಹಾಗೂ ಶಿವಲಿಂಗ ಹಾಲು ಕುಡಿಯದೆ ಇದ್ದಾಗ ಗುಡಿಯ ಕಂಬಗಳಿಗೆ ತನ್ನ ತಲೆಯನ್ನು ಜಜ್ಜಿ ಪ್ರಾಣಾರ್ಪಣೆ ಮಾಡಿಕೊಳ್ಳುವಂತೆ ಸಂದರ್ಭದಲ್ಲಿ ಶಿವ ಪ್ರತ್ಯಕ್ಷವಾಗಿ ಮಗುವನ್ನು ತಬ್ಬಿಕೊಳ್ಳುತ್ತ ಘಟನೆಯಂತೆ ಇಲ್ಲಿಯೂ ಶಿವನು ಪ್ರತ್ಯಕ್ಷನಾಗಿ ಗುಡ್ಡದಿಂದ ಕೆಳಗೆ ಹಾರಿದ ಲಿಂಗಯ್ಯನನ್ನು ಎತ್ತಿಕೊಂಡು ಆತನ ಬೇಡಿಕೆಗಳನ್ನು ಈಡೇರಿಸಿದನ್ನು ನೆನೆಯಬಹುದು.

೩.೫. ಚಂದಾಲಿಂಗನ ವೈವಾಹಿಕ ಜೀವನದ ಹಿನ್ನೆಲೆ : (Background of the Marital Life of Chandalinga)

ಗ್ವಾಗೇರಿ (ಇಂದಿನ ಗಜೇಂದ್ರಗಡ ತಾಲೂಕಿನ ಗೋಗೇರಿ) ಎಂಬ ಪಟ್ಟಣದಲ್ಲಿ ಕುರುಬರ ಸಿದ್ದಣ್ಣನ ಮನೆಯಲ್ಲಿ ಅವನಿಗೆ ಇಬ್ಬರು ಮಕ್ಕಳಿರುವರು. ಗಂಡು ಮಗನ ಹೆಸರು ಬೀರಣ್ಣನೆಂದು,

ಹೆಣ್ಣು ಮಗಳಿಗೆ ಮಾಳಮ್ಮನೆಂದು ಹೆಸರಿಟ್ಟಿದ್ದರು. ಅವರು ದಿನಾಲು ಕುರಿಗಳನ್ನು ಮೇಯಿಸಲಿಕ್ಕೆ ಹೋಗುತ್ತಿದ್ದರು. ಆಗ ಪರಮಾತ್ಮನು ಜಂಗಮರ ವೇಷದಲ್ಲಿ ಲಿಂಗ ಪೂಜೆಯನ್ನು ಮಾಡುತ್ತಿರುವುದನ್ನು ಮಾಳಮ್ಮ ನೋಡಿದಳು. ಆಗ ಜಂಗಮರೆ, ಇಂತಹ ದಟ್ಟವಾದ ಅಡವಿಯಲ್ಲಿ ಏನು ಮಾಡುತ್ತಿರುವಿರಿ ಎಂದು ಕೇಳಲಾಗಿ, ಅದಕ್ಕೆ ಪ್ರತಿಯಾಗಿ ಜಂಗಮನು ಅಮ್ಮಾ ನಮ್ಮ ವೀರಶೈವ ಮತಕ್ಕೆ ಲಿಂಗ ಇರುತ್ತದೆ. ಆದಕಾರಣ ನಾವು ಲಿಂಗ ಪೂಜೆ ಮಾಡಬೇಕಮ್ಮಾ. ಹಾಗಾದರೆ, ನಮಗೇಕೆ ಆ ಲಿಂಗಗಳಿಲ್ಲ? ನಾವೂ ನಿಮ್ಮಂತೆ ಮನುಷ್ಯರಲ್ಲವೇನು? ಅಲ್ಲಮ್ಮಾ ನೀವು ಹೀನ ಕುಲದವರು. ಅದಕ್ಕೆ ನಿಮಗೆ ಆ ಪರಮಾತ್ಮ ಲಿಂಗ ಕೊಟ್ಟಿಲ್ಲ. ನಮಗಂತೂ ಆ ಪರಮಾತ್ಮ ಲಿಂಗ ಕೊಟ್ಟಿಲ್ಲ, ನಿಮ್ಮ ಕೈಯಲ್ಲಿರುವ ಲಿಂಗವನ್ನಾದರೂ ಕೊಡಿರಿ. ನಾವು ಅದನ್ನಾದರೂ ಪೂಜಿಸಿ ಧನ್ಯರಾಗುತ್ತೇವೆ. ಈ ಲಿಂಗವನ್ನು ಹಾಗೆ ಕೊಡುವುದಕ್ಕೆ ಬರುವುದಿಲ್ಲಮ್ಮಾ. ಅಕಸ್ಮಾತ್ ಆ ಲಿಂಗ ಕೊಡದೆ ಇದ್ದರೆ ನಿನ್ನನ್ನು ಹೊಡೆದು, ಬಡಿದು ನಿಮ್ಮ ಕೈಯಲ್ಲಿರುವ ಲಿಂಗವನ್ನು ಕಸಿದುಕೊಂಡು ಹೋಗುತ್ತೇವೆ. ಅದಕ್ಕೆ ಜಂಗಮನು ಇಂಥ ಅಡವಿಯಲ್ಲಿ ಒಬ್ಬನೇ ಸಿಕ್ಕಿರುವೆ ಅಂಥ ತಿಳಿದು ನನ್ನನ್ನು ಬಡಿದು ಲಿಂಗವನ್ನು ಕಸಿದುಕೊಂಡು ಹೋಗುವರೇ? ನಿಮಗೆ ಇಷ್ಟೊಂದು ಪ್ರೀತಿ ಈ ಲಿಂಗದ ಮೇಲಿದ್ದರೆ ತೆಗೆದುಕೊಳ್ಳಿ ಎಂದು ಆ ಲಿಂಗವನ್ನು ಅವರಿಗೆ ಅರ್ಪಿಸುನು, ಎಂದು ಹೇಳಿ ಸುತ್ತಮುತ್ತಲು ನೋಡಲಾಗಿ ಅಲ್ಲಿಯೇ ಸಮೀಪದಲ್ಲಿ ಒಂದು ಆಡಿನ ಹಿಕ್ಕಿ ಬಿದ್ದಿತ್ತು. ಅದನ್ನು ತೆಗೆದುಕೊಂಡು ಮಾಳಮ್ಮನ ಕೈಯಲ್ಲಿ ಕೊಟ್ಟನು. ನೀನು ಇದನ್ನು ಯಾರ ಮುಂದೆ ತೋರಿಸಬೇಡಮ್ಮ. ಎಮ್ಮೆ, ಆಡಿನ ಹಿಕ್ಕಿಯ ಗೊಬ್ಬರದಲ್ಲಿ ಹುಗಿದು ನಿತ್ಯವೂ ಪೂಜಿಸಿ, ಕುರಿಯ ಹಾಲನ್ನು ನೈವೇದ್ಯಮಾಡಿ ಆ ಮೇಲೆ ನಾನು ಕಲಿಸಿದ ಮಂತ್ರವನ್ನು ನುಡಿಯ ಬೇಕಮ್ಮಾ, ಆಗ ಮಾಳಮ್ಮನು ತಂದು, ಮೂಢಭಕ್ತಿಯಿಂದ ಆ ಪರಮಾತ್ಮನು ಹೇಳಿದ ಪ್ರಕಾರ ಮಾಡಲಿಕ್ಕೆ ಹತ್ತಿದಳು. ಒಂದು ದಿನ ಒಂದು ಆಡಿನ ಹಾಲನ್ನು, ಮತ್ತೊಂದು ದಿನ ಎರಡನೆ ಆಡಿನ ಹಾಲನ್ನು ಎರೆಯಲು ಹತ್ತಿದಳು. ಬರುಬರುತ್ತಾ ಎರಡೂ ಮಗಿ ಆಡಿನ ಹಾಲನ್ನು ಎರಿಯಲಿಕ್ಕೆ ಹತ್ತಿದಳು. ಹೀಗೆ ಅವಳ ಭಕ್ತಿಯು ಬೆಳೆಯುತ್ತ ಹೋಯಿತು. ತಂದೆ, ನಾವು ಮೂರು ಹೊತ್ತು ಉಂಡು ಹಸಿವನ್ನು ತಾಳಲಾರೆವು. ಆದರೆ ನಿನೆಂಥ ಘಟ್ಟಿಗನು. ನಾನು ಇವತ್ತು ಪೂಜೆಯನ್ನು ಮಾಡಿ ಹೋದವಳು ತಿರುಗಿ ಮರುದಿವಸವೇ ಬಂದು ಲಿಂಗ ಪೂಜೆ ಮಾಡಿ ನೈವೇದ್ಯ ಹಿಡಿಯುವೆನು. ನಾನೆಂಥ ಪಾಪ ಮಾಡುತ್ತಿರುವೆ. ನೀನು ಹಸಿವನ್ನು ಹೇಗೆ ತಡೆದುಕೊಳ್ಳುವೆ ತಂದೆ ಎಂದು ದಿನ ದಿನಕ್ಕೆ ಹೆಚ್ಚಿಗೆ ಹಾಲು ಎರೆಯುತ್ತಾ ಹೊರಟಳು.

ಒಂದಾನೊಂದು ದಿನ ಇವಳ ತಂದೆಯಾದ ಸಿದ್ದಣ್ಣನು ಮಗನಾದ ಬೀರಣ್ಣನನ್ನು ಕರೆದು ದಿನದಿನಕ್ಕೆ ಮನೆಗೆ ಕಡಿಮೆ ಹಾಲನ್ನು ತರುತ್ತಿದ್ದೀರಲ್ಲ ಏಕೆ? ಎಂದು ಕೇಳಿದನು. ಅದಕ್ಕೆ ಬೀರಣ್ಣನು, ಅಪ್ಪಾ ಅಕ್ಕನು ಕುರಿ ಗುಂಡಿಯಲ್ಲಿ ಹಾಲನ್ನು ಎರೆದು ಬರುವಳು. ನಾನು ಎಷ್ಟು ಹೇಳಿದರೂ ಕೇಳುವುದಿಲ್ಲ ಎಂದನು. ಆಗ ಸಿದ್ದಣ್ಣನು ವಿಪರೀತ ಆಲೋಚನೆಯನ್ನು ಮಾಡಿದನು.

ನನ್ನ ಮಗಳಿಗೆ ಈಗ ಹದಿನಾರು ವರ್ಷ ತುಂಬಿದವು. ತನಗೆ ಬೇಕಾದ ಪುರುಷನಿಗೆ ಕೊಡುವಳೋ ಏನೋ ಎಂದು ಯೋಚಿಸಿ ಇದನ್ನು ಪರೀಕ್ಷಿಸಬೇಕೆಂದು ಮಾಳಮ್ಮ ಬರುವುದಕ್ಕಿಂತ ಮೊದಲೇ ಅವನು ಗಿಡದ ಮೇಲೆ ಹೋಗಿ ಕುಳಿತನು. ಯಾವನಾದರೂ ಅಂತಹ ಮೂರ್ಖನು ಬಂದರೆ ಅವನನ್ನು ಕಡಿಯಬೇಕು ಎಂದು ಆಲೋಚನೆ ಮಾಡಿ ಮರದ ಮೇಲೆ ಕುಳಿತಿದ್ದ. ಆಗ ಮಾಳಮ್ಮನು ಪ್ರತಿದಿನದಂತೆ ಲಿಂಗಪೂಜೆಗೆ ಬೇಕಾಗುವ ಸಾಮಗ್ರಿಗಳು ಹಾಲಿನ ತಂಬಿಗೆಯನ್ನು ಹಿಡಿದುಕೊಂಡು ಅಲ್ಲಿ ತಿಪ್ಪೆಯ ನಡುಮಧ್ಯದಲ್ಲಿ ಪೂಜೆಯನ್ನು ಮಾಡಿ ನೈವೇದ್ಯ ಹಿಡಿದು ಹಾಲನ್ನು ಸುರಿದಳು. ಆಗ ಅವಳ ತಂದೆ ಸಿದ್ದಣ್ಣ ನೋಡಿ, ಅವ್ವ ನೀನು ಹಾಲನ್ನು ಗೊಬ್ಬರದಲ್ಲಿ ಸುರುವಿದೆಯಲ್ಲ ಎಂದನು. ನೀನಾದರೂ ಕುಡಿದದ್ದಲ್ಲಾ ಜನರಿಗಾದರೂ ಕೊಟ್ಟದ್ದಲ್ಲಾ ಎಂದು ಮಗಳನ್ನು ಕೇಳಿದನು. ಅದಕ್ಕೆ ಮಾಳಮ್ಮ ಅಪ್ಪ ನಾನು ಸುಮ್ಮನೆ ಹಾಲನ್ನು ಸುರಿಯುತ್ತಿಲ್ಲ. ಅಗೋ ಅಲ್ಲಿ ನನ್ನ ಇಷ್ಟವಾದ ಶಿವಲಿಂಗವಿದೆ. ಅದನ್ನು ತಂದು ನಮ್ಮ ತಿಪ್ಪೆಯ ಮಧ್ಯದಲ್ಲಿ ಹೂಳಿ ದಿನವೂ ಪೂಜಿಸುತ್ತಿದ್ದೇನೆ. ಲಿಂಗವನ್ನು ಕೊಟ್ಟವನು ಯಾರು ಎಂದು ಕೇಳಲಾಗಿ, ಅಡವಿಯಲ್ಲೊಬ್ಬ ಜಂಗಮ ದಿನವೂ ಪೂಜಿಸುತ್ತಿದ್ದನು. ಅದನ್ನು ತಂದು ನಾನು ಪೂಜಿಸುತ್ತಿದ್ದೇನೆ. ಇನ್ನು ಮೇಲೆ ಅಲ್ಲಿ ಹಾಲನ್ನು ಹಾಕಬೇಡ. ನಾನು ಅದೇ ಗೊಬ್ಬರವನ್ನು ನಾಳೆಯೇ ಹೊಲಕ್ಕೆ ಹಾಕುವೆನು. ಅಪ್ಪಾ! ಆ ಗೊಬ್ಬರವನ್ನು ಹೇರಬೇಡ ತಂದೆ ಎಂದಳು. ಛೀ ಹುಚ್ಚಮ್ಮ ಇದು ಗೊಬ್ಬರ, ಗೊಬ್ಬರ ಎಲ್ಲಾದರೂ ಲಿಂಗವಾಗುತ್ತಾ, ಗೊಬ್ಬರವನ್ನು ಹೊಲಕ್ಕೆ ಹಾಕಿದರೆ ಬೆಳೆಯು ಚೆನ್ನಾಗಿ ಬರುವುದು ಎಂದು, ಮರು ದಿನ ಅದನ್ನು ಹೊಲಕ್ಕೆ ಹೇರಲಿಕ್ಕೆ ಹತ್ತಿದನು. ಆಗ ಮಾಳವ್ವನು ತಂದೆಗೆ ಸೆರಗೊಡ್ಡಿ ಬೇಡಿಕೊಂಡಳು. ಅವಳ ತಂದೆ ಸಿಟ್ಟಿಗೆದ್ದು ಮಾಳವ್ವನನ್ನು ಹೊಡೆದನು. ಅಷ್ಟಾದರೂ ತನ್ನ ಹಠ ಬಿಡಲಿಲ್ಲ. ಅವಳ ತಂದೆಯ ಕೈಯಲ್ಲಿದ್ದ ಕುಡುಗೋಲಿನಿಂದ ಕಡಿಯಲಿಕ್ಕೆ ಹೋದ. ಆಗ ತಾನು ನಂಬಿದ ಪರಮಾತ್ಮನು ಎದುರಿಗೆ ಬಂದು ಅವನ ಕೈಗಳನ್ನು ಹಿಡಿದನು. ಆಗ ಮಾಳಮ್ಮನು ಪರಮಾತ್ಮನಿಗೆ ನಮಸ್ಕರಿಸಿ ಒಂದು ಶ್ಲೋಕವನ್ನು ನುಡಿದಳು.

ಶ್ಲೋಕ

"ಆಡಿನ ಹಿಕ್ಕಿ ಒಂದು ತೀಡಿ ಲಿಂಗವನ್ನು
ಮಾಡಿ ನೋಡಿರಿ ಶಿವನ ಮಹಿಮೆಯ॥
ಗ್ವಾಗೇರಿ ಲಿಂಗ ಆಡಿನ ಹಿಕ್ಕಿ ಒಳಗೆ
ನೆನೆದನೋ, ಆಡಿನ ಹಿಕ್ಕಿ ಒಳಗ
ನೆನೆದು ಹಾಲಮತಕ್ಕೆ ಲಿಂಗಧಾರಣ ಮಾಡಿದನು".॥೧೧

ಆಗ ಸಿದ್ದಣ್ಣ, ಮಾಳವ್ವ, ಜೀರಣ್ಣ ಎಲ್ಲರಿಗೂ ಲಿಂಗಧಾರಣ ಮಾಡಿಸಿ ಪರಮಾತ್ಮ ಅಂತರ್ಧಾನವಾದನು. ಅಂದಿನಿಂದ ಹಾಲುಮತಕ್ಕೆ ಲಿಂಗವು ದೊರಕಿತು. ಆಗ ಮಾಳವ್ವನಿಗೆ ದಿನದಿನಕ್ಕೆ ಭಕ್ತಿ ಬೆಳೆಯತೊಡಗಿತು.

ಅಂದಚಂದನ ಕೀರ್ತಿ ಸುತ್ತಮುತ್ತಲಿನ ನಾಡಿನಲ್ಲಿ ಪ್ರಸಿದ್ಧವಾಗಿತ್ತು. ಕೀರ್ತಿಯ ವಾರ್ತೆಯನ್ನು ಕೇಳಿ ಅವನ ದರ್ಶನವಾಗಲೇಬೇಕೆಂದು ಮಾಳವ್ವ ಆತುರ ಪಡುತ್ತಿದ್ದಳು. ಹೀಗೆ ಒಂದು ದಿನ ಅವರ ದರ್ಶನವಾಯಿತು. ಅಂದಚಂದಲಿಂಗನು ಅಂದಿನ ದಿನದಲ್ಲಿ ಬಿಸಿಲಿಲ್ಲದ ಬಾವಿಯ ನೀರನ್ನು ತಂದು ಹೆಸರಿಲ್ಲದ ಗಿಡದ ಪತ್ರೆಯನ್ನು ತಂದು ಪೂಜೆಯನ್ನು ನೆರವೇರಿಸುತ್ತಿದ್ದನು. ಅಂತ ಸಮಯದಲ್ಲಿ ಮಾಳಮ್ಮ ದರ್ಶನಕ್ಕೆ ಹೋದಳು. ಅವನ ರೂಪ ಲಾವಣ್ಯ ನೋಡಿ ಒಂದು ಶ್ಲೋಕವನ್ನು ಹಾಡಿದಳು.

ಶ್ಲೋಕ

"ಇವನಾವ ಪುರುಷನೆ । ತೋರುವ ಅದ್ಭುತವನೆ
ಇವನ ರೂಪ ಸೂರ್ಯನ ಕಿರಣ
ಇವನ ಬೆಳಕು ಚಂದ್ರನ ಬೆಳಕು
ಇವನಾವ ಪುರುಷನೆ । ತೋರುವ ಅದ್ಭುತವನೆ ॥
ಇವನು ಎನಗೆ ಪುರುಷನಾದರೆ
ಹರುಷ ವಿಲಾಸ ಸ್ವರ್ಗಕ್ಕೆ ಕೈಲಾಸ
ಇವನಾವ ಪುರುಷ ತೋರುವ ಅದ್ಭುತ" ॥೧

ಈ ರೀತಿ ಶ್ಲೋಕವನ್ನು ಹೇಳಿ ಅಂದಚಂದಲಿಂಗನ ಪಾದಕ್ಕೆ ನಮಸ್ಕರಿಸಿ ದೇವ ನನಗೆ ಮೂರು ವರಗಳನ್ನು ದಯಪಾಲಿಸಬೇಕೆಂದು ಬೇಡಿಕೊಂಡಳು. ನಿನ್ನ ವರಗಳನ್ನು ದಯಪಾಲಿಸಲು ಹರನು ನಾನಲ್ಲ, ಪರಮಾತ್ಮನು ನಾನಲ್ಲ, ಚಂದ್ರಗಿರಿಯ ಪಟ್ಟಣದಲ್ಲಿ ಬಡ ಜಂಗಮನ ಮಗನು ನಾನಮ್ಮಾ. ನನಗೆ ಯಾವ ಶಕ್ತಿಯಿರುವುದು. ನೀನೆ ಹೇಳಮ್ಮ ಎಂದನು. ಅದಕ್ಕೆ ಅವಳು ಪ್ರತಿಯಾಗಿ ದೇವಾ! ಪರಮಾತ್ಮನು ನೀನೇ ಹರಿಹರನು ನೀನೇ ನಿನ್ನ ಬಿಟ್ಟು ನನಗೆ ಯಾರೂ ಗತಿ ಇಲ್ಲ. ನನಗೆ ವರಗಳನ್ನು ದಯಪಾಲಿಸಬೇಕು. ಇಲ್ಲದಿದ್ದರೆ ನಿನ್ನ ಪಾದದಡಿಯಲ್ಲಿ ನನ್ನ ಪ್ರಾಣವನ್ನು ತ್ಯಾಗ ಮಾಡುತ್ತೇನೆ ಎಂದಳು. ಅಯ್ಯೋ ಇದೇನು ಶಿಶುಹತ್ಯೆ, ಗೋಹತ್ಯೆ, ಸ್ತ್ರೀಹತ್ಯೆ ಇವು ಮೂರು ಮಹಾಪಾಪ ಅನ್ನುವವರಲ್ಲ. ನೀನು ನನ್ನನ್ನು ಎಂಥ ಪಾಪಕ್ಕೆ ಗುರಿ ಮಾಡುವೆ. ಆಗಲ್ಲಮ್ಮ ಪರಮಾತ್ಮನ ಲಿಂಗದ ಸಾಕ್ಷಿಯಾಗಿ ನಿನಗೆ ವರಗಳನ್ನು ದಯಪಾಲಿಸುವೆನು. ಇಲ್ಲದಿದ್ದರೆ, ನಿನ್ನ ಪಾದದಡಿಯಲ್ಲಿ ನಾನೇ ಪ್ರಾಣತ್ಯಾಗ ಮಾಡಿಕೊಳ್ಳುವೆನು. ಹಾಗಾದರೆ ದೇವಾ ಆ ವರಗಳೆಂದರೆ ನಿನ್ನ ಲಿಂಗಪೂಜೆಗೆ ಬಿಸಿಲಿಲ್ಲದ ಬಾವಿಯ ನೀರು, ಹೆಸರಿಲ್ಲದ ಗಿಡದ ಪತ್ರಿ ತರುವುದು ಒಂದನೆಯ ವರವು, ಎರಡನೆಯ ವರವೆಂದರೆ ನನಗೆ ಸಕಲ ಸಂಪತ್ತು ಕೊಡಬೇಕು. ಮೂರನೆಯದಾಗಿ ನೀನು ನನಗೆ ಪತಿಯಾಗಬೇಕು ಎಂದು ಬೇಡಿಕೊಂಡಳು. ಆಗ ಲಿಂಗಯ್ಯಸ್ವಾಮಿ ಬೆಚ್ಚಿ ಬಿದ್ದು ಛೀ ಇದೆಂಥ ಮಾತನಾಡಿರಿ, ನಾನು ನಿನಗೆ ಪತಿಯಾಗುವುದು ಸಾಧ್ಯವಿಲ್ಲ. ದೇವಾ

ಲಿಂಗದ ಸಾಕ್ಷಿಯಾಗಿ ವರಗಳನ್ನು ದಯಪಾಲಿಸುವೆನೆಂದು ಹೇಳಲಿಲ್ಲವೇ? ನಿಮ್ಮಂಥವರು ವೀರಶೈವ ಮತಕ್ಕೆ ಕಳಂಕವನ್ನು ತರುವವರು ಎಂದಳು. ಆಗ ಅವನು ನಿನ್ನ ಇಚ್ಛೆಯಂತೆ ಆಗಲಿ ಎಂದನು.

ಪರಮಾತ್ಮನೆ ನೀನು ಎಂತ ಕಷ್ಟಕ್ಕೆ ಈಡುಮಾಡಿದೆ. ಸಂಸಾರ ಎಂಬ ಮಾಯದ ಬಲೆಯಲ್ಲಿ ಸಿಲುಕಿಸಿದೆನಅಯ್ಯಾ, ಪಾರು ಮಾಡಯ್ಯ ದೇವಾದಿದೇವ. ಹೊನ್ನು, ಮಣ್ಣು, ಹೆಣ್ಣಿನ ಬಲೆಯಲ್ಲಿ ಸಿಲುಕಿದೆನಯ್ಯಾ, ಪಾರುಮಾಡಯ್ಯ ದೇವಾಧಿದೇವಾ. ಅಲ್ಲಮಪ್ರಭು ಎನ್ನ ಕಾಯಯ್ಯ ಅಲ್ಲಮ ಪ್ರಭುಲಿಂಗಯ್ಯ ಎಂದು ಪ್ರಾರ್ಥಿಸಿದನು. ಚಂದಲಿಂಗಯ್ಯ ಕೊಟ್ಟಮಾತಿನಂತೆ ಒಪ್ಪಿಕೊಂಡ. ಅದರಂತೆ ತಯಾರಿಯೂ ನಡೆಯಿತು. ಸುತ್ತಮುತ್ತಲಿನ ಜನರೆಲ್ಲ ಕರೆಯಲು ಹೋದರು. ಈ ಲಗ್ನದ ಕಾರ್ಯಕ್ಕೆ ಬಂದ ಹೆಣ್ಣುಮಕ್ಕಳು ದಂಪತಿಗಳಿಗೆ ಅಭಿನಂದಿಸಿ, ಸೋಬಾನೆ ಪದಗಳನ್ನು ಹಾಡಿದರು.

ಸೋಬಾನ ಪದ

"ಬೀಳಿಗಿಯ ಗೌಡರು ಒಂದ್ಹೊತ್ತು (ಹತ್ತು ಜನ) ಇರುವರು
ಗುಡೂರ ಕಂಚೇರ ಅರಿಷಣ ಕುಂಕುಮ ಹಚ್ಚುವರು
ಮುಡ್ಡಿಯ ಬೀಗರು ಹದಗೆಟ್ಟು ಜಗಳ ತೆಗೆಯುವರು
ಮನ್ನೇರಾಳ ಗೌಡರು ಮಂದ್ಯಾಗ ಬರುವರು
ಕಬ್ಬರಗಿ ಗೌಡರು ಕದನವ ಹಚ್ಯಾರ ಸೋಬಾನ॥
ದಮ್ಮೂರ ಗೌಡರು ಬಂಡಾಗಲೆನ್ನುವರು ಹನಮಸಾಗರ
ಗೌಡರು ಸಾಗಲಿ ಎನ್ನುವರು ಹತ್ತೂರವರು ಕೂಡಿ
ಅಂದಚಂದದ ಲಿಂಗಯ್ಯನ ಕೂಡ ಮಾಳವ್ವನ
ಲಗ್ನಮಾಡೋಣ ಬನ್ನಿರೋ ।ಸೋ"[೧೩]

ಎಲ್ಲಾ ಪ್ರಮುಖರು ಕೂಡಿದ ನಂತರ ತಾಳಿಯನ್ನು ಕಟ್ಟುವ ಸಮಯದಲ್ಲಿ ಪರಮೇಶ್ವರನು ಜಂಗಮನ ರೂಪದಲ್ಲಿ ಬಂದು ಅಂದಚಂದನೇ ನೀನು ವೀರಶೈವ ಮತಕ್ಕೆ ಕಳಂಕತರುತ್ತಿರುವೆಯಲ್ಲಾ. ಅವಳು ಹಾಲುಮತದವಳು ಈ ಸಂಬಂಧ ಸರಿಯಾಗದು, ಎಂದಾ. ಆಗ ಅಲ್ಲಿದ್ದ ಜನ ಹಾಗೂ ಚಂದಾಲಿಂಗ ಮುಂದೆ ಹೇಗೆ ದೇವರೇ ಎಂದಾಗ. ತಾಳಿಯ ಬದಲು ಕಂಕಣವನ್ನು ಕಟ್ಟಿ ಬಿಡಿರಿ ಎಂದು ಹೇಳುವಷ್ಟರಲ್ಲಿ ಕೋಳಿ ಕೂಗಿತ್ತು. ಅಂದಿನಿಂದ ಇಂದಿನವರೆಗೂ ಈ ಸಂಪ್ರದಾಯ ಈಗಲೂ ನಡೆಯುತ್ತದೆ. ಎಂದು ಕಂಕಣದೊಂದಿಗೆ ಮುಗಿದರೆ ಅದೇ ವರ್ಷ ಮಹಾನವಮಿಯ ದಿನ ಚಂದಾಲಿಂಗ ಗಂಗೆಮಾಳಮ್ಮನ ಮದುವೆಯನ್ನು ಮತ್ತೊಮ್ಮೆ ಮಾಡುತ್ತಾರೆ.

೩.೬. ಚಂದಾಲಿಂಗಪ್ಪನು ಹುಲ್ಲಪ್ಪನನ್ನು ಸಾಕು ಪುತ್ರನನ್ನಾಗಿ ಪಡೆದುಕೊಂಡ ಹಿನ್ನೆಲೆ : (The Back ground of Chandalingappa's Adoption of Hullappa as a Foster Son)

ಅಂಬಿಗೇರ ಮನೆಯಲ್ಲಿ ಮಸಣಯ್ಯ, ಗವಿಸಿದ್ಧಯ್ಯ, ಕುಂಟಯ್ಯ, ಭರಮಯ್ಯ, ಗಿರಿಮಯ್ಯ, ಮಾವಿನ ಮಾರ್ತಪ್ಪ, ಹೆಗ್ಗಡೆ ಪ್ರಧಾನಿ ಎಂಬ ಏಳು ಮಂದಿ ಗಂಡು ಮಕ್ಕಳು ಹಾಗೂ ಗಂಗಾದೇವಿ ಎಂಬ ಒಬ್ಬ ಹೆಣ್ಣುಮಗಳು ಇದ್ದಳು. ಅವರು ತಮ್ಮ ಉಪ ಜೀವನದ ಸಲುವಾಗಿ ದಿನಾಲು ಬೆಟ್ಟಕ್ಕೆ ಹೋಗಿ ಕಟ್ಟಿಗೆಯನ್ನು ಕಡಿದು ಅವುಗಳನ್ನು ಸುಟ್ಟು ಇದ್ದಿಲು ಮಾಡಿಕೊಂಡು ಬಂದು ಊರಲ್ಲಿ ಮಾರುತ್ತಿದ್ದರು. ಗಂಗಾದೇವಿಯು ಅವರೆಲ್ಲರಿಗೂ ಬುತ್ತಿಯನ್ನು ಮಾಡಿಕೊಂಡು ಹೋಗಿ ಉಣಿಸುತ್ತಿದ್ದಳು. ಒಂದು ದಿನ ಹೀಗೆ ಹೋದಾಗ ಅವಳ ಅಣ್ಣನಾದ ಹೆಗ್ಗಡೆ ಪ್ರಧಾನಿಯು, ಅಮ್ಮಾ ಇಂದಿನ ಅಡುಗೆಗೆ ಎಷ್ಟೊಂದು ಖಾರ ಹಾಕಿರುವೆ. ಇಷ್ಟು ಖಾರವನ್ನು ತಿಂದರೆ ನಾವು ತಂದ ಒಂದು ಕೊಡ ನೀರು ಸಾಲದೇ, ಲಿಂಗಯ್ಯನ ಹೊಂಡಕ್ಕೆ ಹೋಗಿ ಕುಡಿಯಬೇಕಾಗುತ್ತದೆ ಎಂದು ಹೇಳಿದನು. ಆ ಪ್ರಕಾರ ಎಲ್ಲರೂ ಊಟಕ್ಕೆ ಕುಳಿತಾಗ ಕೊಡದಲ್ಲಿನ ನೀರು ಖಾಲಿಯಾಯಿತು. ಆಗ ಗಂಗಾದೇವಿಯು ತಟ್ಟನೇ ಕೊಡವನ್ನು ತೆಗೆದುಕೊಂಡು ಅಂದ ಚಂದಲಿಂಗಯ್ಯನ ಹೊಂಡಕ್ಕೆ ಹೋದಳು. ಅಲ್ಲಿಗೆ ಹೋಗಿ ನಿಂತು ನೋಡಿದಾಗ, ಹೊಂಡದಲ್ಲಿ ಒಂದು ಕಮಲದಂತಹ ಪುಷ್ಪವನ್ನು ನೋಡಿ, ನೀರು ತುಂಬುವುದನ್ನು ಬಿಟ್ಟು, ಆ ಹೂವನ್ನು ತೆಗೆದುಕೊಂಡು ಅದರ ವಾಸನೆಯನ್ನು ನೋಡಿದಳು. ಆ ವಾಸನೆ ಮಲ್ಲಿಗೆ, ಸಂಪಿಗೆ, ಸೇವಂತಿಗೆಗಿಂತಲೂ ಮೇಲಾಗಿತ್ತು. ಇಷ್ಟು ಸುವಾಸಿತ ಹೂವನ್ನು ನಾನು ಎಂದು ನೋಡಿಲ್ಲ ಎಂದು ಕೊಂಡು ಅದನ್ನು ತನ್ನ ಸೀರೆಯ ನೀರಿಗೆಯಲ್ಲಿ ಇಟ್ಟುಕೊಂಡು ಬಿಟ್ಟಳು. ಅದು ಪಾರಿಜಾತ ಹೂವು.

ಕೈಲಾಸದಲ್ಲಿ ಶಿವನು ಪೂಜೆಯ ನಂತರ ಪಾರ್ವತಿಗೆ ಪ್ರೀತಿಯಿಂದ ನೀಡಿದ. ಆಗ ಆತನ ಭಸ್ಮ ಲಾಂಛನ ನೋಡುತ್ತಾ ಮೋಹಪರವಶಳಾಗಿ ಆ ಹೂವನ್ನು ಕೈಜಾರಿ ಬಿಟ್ಟಳು. ಅದು ಭೂಮಿಗೆ ಬಿದ್ದಿತು. ಆ ಹೂವಿನಲ್ಲಿ ಶಿವ ಜೀವಾತ್ಮದ ಅಂಶವನ್ನು ಬಿಟ್ಟಿದ್ದ. ಅದನ್ನರಿಯದ ಗಂಗಾದೇವಿ ಹಾಗೆಯೇ ಕೊಡ ಹೊತ್ತು ಬಂದಳು. ತಂದಿರುವ ನೀರನ್ನು ತನ್ನ ಅಣ್ಣಂದಿರಿಗೆ ಕೊಟ್ಟಳು. ಅವರು ಕುಡಿದು ತಮ್ಮ ತಮ್ಮ ಕೆಲಸಕ್ಕೆ ಹೊರಟರು. ಹೋಗುವಾಗ ಹಿರಿಯ ಅಣ್ಣನು ಇವತ್ತಿನ ನೀರು ಬಹಳ ಸಿಹಿಯಾಗಿವೆ ಎಂದು ಹೇಳಿದನು. ಆಗ ತಂಗಿಯು ತಾನು ತಂದಂತ ಹೂವನ್ನು ತೋರಿಸಿದಳು. ಅದನ್ನು ನೋಡಿ ಅವರೆಲ್ಲರೂ ಇದಕ್ಕಿಂತ ಮೇಲಾದ ಹೂವುಗಳಿವೆ ಎಂದು ಹೇಳಿದರು. ಅವರೆಲ್ಲರೂ ತಂಗಿಯನ್ನು ಬಹಳ ಪ್ರೀತಿಸುತ್ತಿದ್ದರು. ಅವಳು ಏನು ಕೇಳಿದರೂ ತಂದು ಕೊಡುತ್ತಿದ್ದರು. ಅಂದು ಗಂಗಾದೇವಿಗೂ ಹಾಗೂ ಅವಳ ಹಿರಿಯ ಅಣ್ಣನಿಗೂ ಒಂದೊಂದು ಕನಸು ಬಿದ್ದವು. ಹಿರಿಯ ಅಣ್ಣನು ನನ್ನ ತಂಗಿಯು ಅಡವಿಯಲ್ಲಿ

ಎಲ್ಲ ಹೂವಿನಕ್ಕಿಂತಲೂ ಮಿಗಿಲಾದ ಪುಷ್ಪವನ್ನು ತೋರಿಸಿದಳಲ್ಲಾ ಅದು ಎಂತಹ ಪುಷ್ಪವಾದೀತು, ಎಂದು ಆ ಪರಮಾತ್ಮನನ್ನು ಧ್ಯಾನಿಸುತ್ತಾ ನಿದ್ರೆಗಪಿದನು. ಅಷ್ಟರಲ್ಲಿ ಗಂಗಾದೇವಿಗೂ ಕನಸು ಬಿದ್ದಿತ್ತು. ಅದು ಪಾರಿಜಾತದ ಹೂವು ಅನ್ನುತ್ತಿದ್ದರಲ್ಲ ಅದೇ ಹೂವೇನು? ಅಂದು ಕೊಂಡಳು. ಅಷ್ಟರಲ್ಲಿ ಪರಮಾತ್ಮನು ಅಮ್ಮ ನೀನು ಮಾತ್ರ ಕಷ್ಟಕ್ಕೆ ಈಡಾದರು ನಿನ್ನ ಭಕ್ತಿಗೆ ಮೆಚ್ಚಿ ಪುಷ್ಪವನ್ನು ಕೊಟ್ಟಿದ್ದೇನೆ ಎಂದು ಹೇಳಲೂ, ಅಷ್ಟರಲ್ಲಿ ಅವಳಿಗೆ ಎಚ್ಚರವಾಯಿತು. ಕಣ್ಣನ್ನು ಸವರುತ್ತಾ ಎದ್ದು ನೋಡುವಳು ಇದೇನು ಆಶ್ಚರ್ಯ ಎಂದುಕೊಂಡಳು.

ಪ್ರತಿದಿನದಂತೆ ಅಣ್ಣತಮ್ಮಂದಿರು ಮಾತನಾಡುತ್ತ ಬೆಟ್ಟಕ್ಕೆ ಹೊರಟರು. ಆಗ ಸಣ್ಣ ತಮ್ಮನು ಮಾತನಾಡುತ್ತಾ ನಮ್ಮ ತಂಗಿಯ ಬಗ್ಗೆ ಒಂದು ಸುದ್ದಿಯನ್ನು ಹೇಳಬೇಕಾಗಿದೆ ನೀವು ಸಿಟ್ಟಾಗುವುದಿಲ್ಲ ಎಂದು ಹೇಳಿದರೆ ಹೇಳುತ್ತೇನೆ ಎಂದನು. ಆಗ ಅವರೆಲ್ಲರೂ ಅದಾವ ಸುದ್ದಿ ಬೇಗನೆ ಹೇಳು ಎಂದು ಎನ್ನಲು ನಮ್ಮ ತಂಗಿಯು ಗರ್ಭಿಣಿ ಇದ್ದ ಹಾಗೆ ಕಾಣಿಸುವಳಲ್ಲ ಇದೇನು ಆಶ್ಚರ್ಯ ಎಂದು ಹೇಳಿದನು. ಆಗ ಅವರೆಲ್ಲ ತಂಗಿಯ ಕಡೆಗೆ ಲಕ್ಷ್ಯ ಕೊಟ್ಟರು. ಅವಳ ಮುಖದ ಲಕ್ಷಣಗಳು ಬದಲಾದದ್ದನ್ನು ಕಂಡು ಇದು ಏನೋ ಒಂದು ಸಂಕಟದ ಕೆಲಸವಾಯಿತು. ಈ ಹಿಂದೆ ನಮಗೆ ಒಂದು ಪುಷ್ಪವನ್ನು ತೋರಿಸಿದಳಲ್ಲ ಅದು ತನಗೆ ಬೇಕಾದ ಪುರುಷನು ಕೊಟ್ಟಿರಬಹುದೇನೋ ಎಂದು ಯೋಚಿಸಿದರು. ಇನ್ನೂ ಸ್ವಲ್ಪ ಕಾಲದಲ್ಲಿ ತಿಳಿದೇ ತಿಳಿಯುವುದು. ಏಕೆ ಆತುರ ಪಡುವುದು ಎಂದು ಸಮಾಧಾನವಾದರು. ಆಗ ಸ್ವಲ್ಪ ದಿವಸದಲ್ಲಿ ಗಂಗಾದೇವಿಯು ಕಿರಿಯ ಅಣ್ಣನಿಗೆ ಅಣ್ಣಾ, ಅಡವಿಯಲ್ಲಿ ಆ ಸರೋವರದ ನೀರು ಎಷ್ಟು ಸಿಹಿಯಾಗಿದ್ದವು. ನನಗೆ ಯಾಕೋ ಸುಟ್ಟ ರೊಟ್ಟಿಯು ಮನಸ್ಸಿಗೆ ಇಡಸದಂತೆ ಆಗಿದೆ. ಹಣ್ಣಾದರೂ ತಂದು ಕೊಡುವೆಯಾ? ಅಡವಿಯಲ್ಲಿ ಆ ಪುಷ್ಪವು ಸಿಕ್ಕರೆ ತಂದು ಕೊಡಣ್ಣ ಎಂದು ಕೇಳಿದಳು.

ಮೊದಲು ತಂಗಿಯು ಏನು ಬೇಡಿದರೂ ತಂದುಕೊಡುತ್ತಿದ್ದರು. ಎಷ್ಟು ಮಾತನಾಡಿಸಿದರೂ ಉತ್ತರವನ್ನು ಕೊಡುತ್ತಿದ್ದರು. ಆದರೆ ಈಗ ಅವರ ರೀತಿಯನ್ನು ನೋಡಿ ಅವರು ಏಕೆ ನನ್ನ ಮೇಲೆ ಸಿಟ್ಟಾಗಿರಬಹುದು. ನನ್ನ ಆಕಾರವನ್ನು ನೋಡಿ ಸಿಟ್ಟಾಗಿ ಇರಬಹುದೇ? ದೇವ ದಯಾ ಘನ ಜಗತ್ತಿಗೆ ಅಧಿಪತಿಯಾದ ಪರಮಾತ್ಮನೇ ನನಗೆ ನೀನೇ ಗತಿ ನಿನ್ನ ಹೊರತು ಬೇರೆ ಯಾರೂ ಇಲ್ಲ. ಕರುಣೆ ತೋರು ಎಂದು ಧ್ಯಾನಿಸಿದಳು.

ಪದ್ಯ

"ಸೃಷ್ಟಿಕರ್ತ ನೀನೇ ಸಕಲದಾತ।
ನಿನ್ನ ವಿನಃ ಇಲ್ಲ ಇನ್ನಾರೂ।
ಸಕಲದಾತ। ಸಕಲರ ಪೋಶಾಣ।
ರಕ್ಷಿಸು ಎನ್ನನು ಅನವರತ"॥

ಎಂದು ಪದ್ಯವನ್ನು ಹಾಡುತ್ತಾ ಮೂರ್ಛಿತಳಾಗಿ ಬಿದ್ದಳು. ಕೆಲವು ತಾಸಿನ ನಂತರ ಮೈಯಿಲ್ಲಾ ಬೆವರಿನಿಂದ ತಂಪಾಗಿ ತಿಳಿಯಾಗಲು ಪ್ರಾರಂಭವಾಯಿತು. ಆಗ ಕಣ್ಣುಗಳನ್ನು ತೆರೆದು ಮೂರ್ಛೆಯಿಂದೆದ್ದು ಸುತ್ತ ಕಡೆ ನೋಡಿ ಇದೆಲ್ಲ ಕನಸು ಎಂದು ತಿಳಿದು ಅಣ್ಣಂದಿರೊಂದಿಗೆ ಮನೆಗೆ ಬಂದಳು. ಗಂಗಾದೇವಿಯು ದಿನಗಳೆದಂತೆ ತುಂಬು ಗರ್ಭಿಣಿಯಗುತ್ತಾ ನಡೆದಳು. ಹೆಣ್ಣು ಮಕ್ಕಳಿಗೆ ಗರ್ಭಿಣಿಯರಾದಾಗ ಕಾಡುವ ಬಯಕೆಯಂತೆ ಈಕೆಗೂ ಬಯಕೆಗಳು ಕಾಡಿದವು. ಆಕೆಯು ಅಕ್ಕ-ಪಕ್ಕದ ಮನೆಯವರ ಹತ್ತಿರ ತನ್ನ ಬಯಕೆಯನ್ನು ತೋಡಿಕೊಂಡಳು. ಆಗ ಅವರು ದಿನದಿನಕ್ಕೆ ನಿನ್ನ ಮುಖ ಲಕ್ಷಣ ಬೇರೆಯಾಗುತ್ತದೆ. ನಿನ್ನ ದೇಹವು ದಿನದಿನಕ್ಕೆ ಏರ ಹೊರಟಿದೆ ಎಂದರು. ಆಕೆಯ ಈ ಸ್ಥಿತಿಯನ್ನು ಕಂಡು ಅವಳ ಅಣ್ಣಂದಿರ ಮನದಲ್ಲಿ ಆಕೆಯ ಬಗೆಗೆ ದ್ವೇಷ ತಮ್ಮ ಮನೆತನದ ಮರ್ಯಾದೆ ಹಾಳು ಮಾಡಿದಳಲ್ಲ ಎಂದು, ಬೇಡಿದ್ದನ್ನು ತಂದುಕೊಡುತ್ತಿದ್ದವರು ಈಗ ಒಣರೊಟ್ಟಿ ಹಿಂಡಿಯನ್ನು ತಿಂದರೂ ನೋಡಿ ಸುಮ್ಮನಿದ್ದರು. ರತ್ನಗಂಬಳಿಯ ಮೇಲೆ ಮಲಗುತ್ತಿದ್ದ ಅವಳಿಗೆ ಈಗ ಹರಕು ತಟ್ಟು ಚೀಲಗಳಿಗೂ ಗತಿ ಇಲ್ಲದಂತಾಯಿತು. ಎಣ್ಣೆ ಕಾಣದ ತಲೆಯು ಜಿಡ್ಡುಗಟ್ಟಿ ಹೋಯಿತು. ನವಮಾಸಗಳು ತುಂಬಿದವು. ಆಕೆಯ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತಿತ್ತು. ಇದರಿಂದ ಮನದಲ್ಲಿಯೇ ಕೊರಗಿ ದೇವರಲ್ಲಿ ಮೊರೆಯಿಟ್ಟಳು.

ಪದ್ಯ

"ಹೇ ಪ್ರಭು ನೀನೆ ವಿಖ್ಯಾತ
ಹೇ ನೀನೇ ಅನಾಥ ರಕ್ಷಕಾ
ಹೇ ಜಗದೋದ್ಧಾರಕ ಜಗತ್ಪಾಲಕ
ನಿವಾರಿಸುವ ಪರಿತಾಪವ ಜಗದೀಶ"[೧೫]

ಈ ಬಗೆಯ ಸ್ತೋತ್ರವನ್ನು ಮುಗಿಸಿ ಪುನಃ ಆಕೆ ಶ್ರೀರಾಮ ತತ್ವದ
ಬೋಧಾಮೃತವನ್ನು ಪಠಿಸಿದಳು.

ಬೋಧಾಮೃತ

"ಪ್ರಥಮಂತಿರ ರೇಚವ ॥ ದ್ವಿತಿಯಂ ದಂಡಮ ಭೃತ।
ತೃತೀಯಂ ಕುಂಡಲಾಕಾರಮಂ । ಚತುರ್ಥಿ ಅರ್ಧ
ಚಂದ್ರಕಂ । ಪಂಚಮಂ ಬಿಂದು ಸಂಯಶ್ರೀಂ॥
ಓಂ । ಮಿತ್ಯ ಜ್ಯೋತಿ ರೂಪಿತಂ॥ ನಮಃ ॥"[೧೬]

ಎಂದು ಈ ಶ್ಲೋಕವನ್ನು ಹಾಡುತ್ತಾ ಏಕ ಮನಸ್ಸಿನಿಂದ ಕುಳಿತಳು. ಆಗ ಆಕಾಶವಾಣಿಯು ಗಂಭೀರ ಸ್ವರದಿಂದ ಕೇಳಿಸಲಿಕ್ಕೆ ಹತ್ತಿತು. ಗಂಗಾದೇವಿ ನೀನು ಜೀವದ ಆಸೆಯನ್ನು ಬಿಡು, ಇನ್ನು ಕೆಲವೇ ದಿನಗಳಲ್ಲಿ ನೀನು ಅಗ್ನಿಗೆ ಆಹುತಿಯಾಗುವಿ, ನಾನು ಕೊಟ್ಟಂತ ಪುತ್ರ ಸಂತಾನ ಮಾತ್ರ ಚಿರಂಜೀವಿಯಾಗುವನು. ಅವನ ಹೆಸರನ್ನು ಕಾಪಾಡಿಕೊಂಡು ಮುಂದೆ ನನ್ನನ್ನೇ ಮರೆಯುವರು. ಅಷ್ಟು ಕೀರ್ತಿಯನ್ನು ಕೊಟ್ಟಿರುವೆನು. ನಿನ್ನ ಅಣ್ಣಂದಿರ ಹೆಸರು ಅಳಿದರೂ, ನಿನ್ನ ಮತ್ತು ನಿನ್ನ ಪುತ್ರನ ಹೆಸರು ಅಮರವಾಗುವುದು. ಅವನ ಕರ್ಣಕುಂಡಲದಲ್ಲಿ ಅಮೃತವನ್ನು ಕೊಟ್ಟಿರುವೆನು ಎಂದು ಹೇಳಿದಾಗ ಅದಕ್ಕೆ ಪ್ರತಿಯಾಗಿ ಗಂಗಾದೇವಿಯು ಸಂತೋಷಗೊಂಡು ಈ ರೀತಿ ಹಾಡನ್ನು ಹಾಡುತ್ತಾಳೆ.

ಪದ್ಯ

"ಪ್ರಭು ನಿನ್ನ ಧ್ಯಾನ । ಮೋಕ್ಷ ವಿತಾನ
ಅಭಯಾ। ಆತ್ಮನು ನೀನೇ। ಜೀವಾತ್ಮನು
ನೀನೇ। ಪರಮಾತ್ಮನು ನೀನೇ। ನಿನ್ನಯ
ರೂಪ ಕಣ್ಣಾರೆ ಕಂಡೆನಯ್ಯ"[೧೭]

ಎಂದು ಹಾಡುತ್ತಾ ಗಂಗಾದೇವಿಯು ಮನಸ್ಸಿನಲ್ಲಿ ಚಂಚಲತೆ, ಬೆದರಿಕೆ, ನೀರಡಿಕೆ, ಹಸಿವು, ಆಯಾಸ ಎಲ್ಲವೂ ಮಾಯವಾಗಿ, ಮುಖದಲ್ಲಿ ಒಂದು ರೀತಿಯ ಹೊಸ ಕಳೆ ಮೂಡುವುದು. ಅಂದಿನಿಂದ ಆಕೆಯು ಯಾವುದಕ್ಕೂ ಆಸೆಪಡಲಿಲ್ಲ. ಅಷ್ಟರೊಳಗೆ ಆಕೆಯ ಅಣ್ಣಂದಿರು ಮೂರ್ಖರಂತೆ ವೇಷವನ್ನು ಧರಿಸುವರು. ಒಂದು ರೀತಿ ಶುಕ್ರಾಚಾರಿಯ ತಲೆಯನ್ನು ಉಪಯೋಗಿಸುವರು. ಬಲಿ ಚಕ್ರವರ್ತಿಯು ಶ್ರೀಕೃಷ್ಣನಿಗೆ ಭೂದಾನಮಾಡಿ ನೀರಿನಿಂದ ಧಾರೆ ಎರೆಯುವಾಗ ಶುಕ್ರಾಚಾರಿಯು ನೀರು ಬೀಳದಂತೆ ಕಪ್ಪೆಯಾಗಿ ನಿಂತ. ಅದನ್ನು ಅರಿತ ಕೃಷ್ಣ ದರ್ಬೆಯಿಂದ ಚುಚ್ಚಿದ. ಅದು ಕಪ್ಪೆಯ ಎಡಗಣ್ಣಿಗೆ ತಗುಲಿ ಹಾ! ಕೃಷ್ಣ ಎಂದು ಹೊರಗೆ ಬಂದು ಕಾಣೆಯಾಗಿ ಹಾರಿಹೋಯಿತು. ಲಕ್ಷ್ಯಗೊಟ್ಟು ನೋಡಿದರೆ ಕಪ್ಪೆಯ ದೃಷ್ಟಿ ಎಡಗಣ್ಣಿಗೆ ಇಲ್ಲದಿರುವುದು ಕಾಣುವುದು. ಇದೇ ರೀತಿ ಕಾರ್ಕೂಟಕನಂತಿದ್ದ, ಆ ಸಹೋದರರು ನೀಚತನದಿಂದ ಒಳಸಂಚೊಂದನ್ನು ಹೂಡಿದರು. ಅಣ್ಣಾ ನಾವು ಎಂದಿನಂತೆ ನಾಳೆ ನಮ್ಮ ಕೆಲಸಕ್ಕೆ ಹೋಗೋಣ. ಆಕೆಯು ನಮಗೆ ಬುತ್ತಿಯನ್ನು ತರುವಳು. ಈಗ ಅವಳು ಬಹಳ ನಿತ್ರಾಣಳಾಗಿರುವಳು. ಹೊಟ್ಟೆಯನ್ನು ಹೊತ್ತುಕೊಂಡು, ಬುತ್ತಿಯನ್ನು ಹೊತ್ತುಕೊಂಡು, ನೀರನ್ನು ಹಿಡಿದುಕೊಂಡು ಗುಡ್ಡ ಏರಿ ಬರುವುದು ನಿಧಾನವಾಗುವುದು. ಆಗ ಕೆಲಸದ ಆಯಾಸದಿಂದಲೂ, ಬಿಸಿಲಿಗೂ, ಹಸಿವೆಯಿಂದಲೂ ಕಂಗೆಟ್ಟು ನಾವು ಅವಳು ತಡವಾಗಿ ಬಂದದ್ದಕ್ಕೆ ಕೋಪ ಬರುವುದು.

ಕೋಪದಲ್ಲಿ ಯಾವ ಕೆಲಸ ಮಾಡಿದರೂ, ಏನು ಅನಿಸುವುದಿಲ್ಲ. ಆ ಸಮಯದಲ್ಲಿ ನಾವು ಆಕೆಯನ್ನು ಒಯ್ದು ಈ ಗುಡ್ಡದಿಂದ ಆಚೆ ಗುಡ್ಡಕ್ಕೆ ಸುಮಾರು ನಾಲ್ಕು ಗಾವುದ ಆಳವುಳ್ಳ ಕೊಳ್ಳದಲ್ಲಿ ದೂಡಿಬಿಡೋಣ ಎಂದು ಎಲ್ಲರೂ ಅಭಿಪ್ರಾಯಪಟ್ಟರು. ತಲೆಯ ಮೇಲೆ ಕೈ ಹೊತ್ತು ಕುಳಿತುಕೊಂಡು ಅಣ್ಣನ ಈ ಸ್ಥಿತಿ ಕಂಡು ಇನ್ನೊಂದು ಯೋಚನೆ ಮಾಡಿದರು. ಅಣ್ಣಾ! ನಾವು ನಾಳೆ ಕೆಲಸಕ್ಕೆ ಹೋಗುವಾಗ ಎರಡು–ಮೂರು ತಾಸು ಮೊದಲೇ ಹೋಗೋಣ. ಹೋಗುವಾಗ ನೀಚಳಾದ ಪಾಪಿ ಗಂಗೆಯನ್ನು ಕರೆದುಕೊಂಡು ಹೋಗಿ ಬೆಳಗಾಗುವುದರೊಳಗೆ ಗುಡ್ಡದ ಆಚೆಗೆ ಇರುವ ಆಲದ ಮರಕ್ಕೆ ತೂಗುಹಾಕಿ ಬಂದು ಬಿಡೋಣ. ಹೀಗಾದರೆ, ತಾನೇ ಸತ್ತಳೆಂದು ಜನರು ಅನ್ನುವರು. ಇದಕ್ಕಿಂತ ಸರಳ ಉಪಾಯ ಯಾವುದು ಇಲ್ಲ. ನೀನು ಒಪ್ಪಿಗೆ ಕೊಡು ಎಂದು ಹಿರಿಯ ಅಣ್ಣನನ್ನು ಪೀಡಿಸಹತ್ತಿದರು. ಇದಕ್ಕೂ ಅವನು ಒಪ್ಪಲಿಲ್ಲ. ಇದು ಎಷ್ಟು ಆಶ್ಚರ್ಯಕರ. ಇದು ಸೃಷ್ಟಿಕರ್ತನ ಲೀಲೆಯಲ್ಲದೇ ಇನ್ನಾವುದು ಇಲ್ಲ.

ಅವರು ಕೆಲಸ ಮಾಡುವ ಗುಡ್ಡದ ಮೇಲಿನ ತಾಪ ಭಯಂಕರವಾಗಿತ್ತು. ಕೆಲವೊಂದು ಸಲ ಬಿಸಿಯ ತಾಪವನ್ನು ಸಹಿಸಲಾರದೆ, ಮೂರ್ಛಿತರಾಗುತ್ತಿದ್ದರು. ಎಲ್ಲಿ ನೋಡಿದರೂ ನೆರಳು ಕೊಡುವ ಒಂದು ಗಿಡವೂ ಕಾಣುತ್ತಿರಲಿಲ್ಲ. ಬೆಂಕಿ ಇಲ್ಲದೆ ರೊಟ್ಟಿ ಸುಡುವಷ್ಟು ತಾಪವಿತ್ತು. ಇಂತಹ ಉಗ್ರ ತಾಪದ ಸಮಯದಲ್ಲಿ ಕಡು ಮೂರ್ಖನೂ, ನೀಚನೂ, ದ್ರೋಹಿಯೂ ಆದರೂ ಎಷ್ಟು ಪಾಪಿಯಾದರೂ ಸರಿ ಇಂಥ ಘೋರ ಮನಸ್ಸನ್ನು ದೇವರು ಅವನಲ್ಲಿ ಮೂಡಿಸಬಾರದಾಗಿತ್ತು. ಅದು ಯಾವುದೆಂದರೆ ಅವರ ಹಿರಿಯಣ್ಣನು ಹೇಳುವಂತೆ, 'ನಮ್ಮ ಇದ್ದಿಲ್ರ ಭಟ್ಟಿ ದೊಡ್ಡದಾಗಿರುವುದು, ಆಕೆಯ ಕೈ ಕಾಲು ಕಣ್ಣು ಮತ್ತು ಬಾಯಿಯನ್ನು ಕಟ್ಟಿ ಮೊದಲೇ ನಮ್ಮ ಭಟ್ಟಿಯಲ್ಲಿ ಮಲಗಿಸಿ ನಂತರ ಕಟ್ಟಿಗೆ ಹೇರಿ ಬೆಂಕಿ ಹಚ್ಚೋಣ' ಎಂದು ಹೇಳಿದ್ದೇ ತಡ ಕಡುಮೂರ್ಖರಾದ ಉಳಿದೆಲ್ಲರೂ ಹಾಂ! ಎಂದು ಒಪ್ಪಿದರು. ಅಲ್ಲಿಗೆ ಅದೇ ನಿರ್ಧಾರವಾಯಿತು. ಮರುದಿನ ಎಲ್ಲರೂ ತಯಾರಾಗಿ ತಮ್ಮ ತಂಗಿಗೆ ಸಂಶಯ ಬಾರದಂತೆ ಅವಳನ್ನು ಕರೆದುಕೊಂಡು ಹೋಗುವರು.

ಅಮ್ಮ ಗಂಗಾ ನೋಡು ಆದದ್ದು ಆಗಿ ಹೋಯಿತು. ಇನ್ನು ಚಿಂತಿಸಿ ಫಲವಿಲ್ಲ. ನಿನಗೂ ನವಮಾಸ ತುಂಬಿದವು. ಮನೆಯಲ್ಲಿ ಯಾರೂ ಇರುವುದಿಲ್ಲ. ಆದ್ದರಿಂದ ನಾಳೆಯಿಂದ ನೀನು ನಮ್ಮೊಂದಿಗೆ ಮುಂಜಾನೆ ಎದ್ದು ಬಂದುಬಿಡು. ಸಾವಧಾನದಿಂದ ನಾವು ಕರೆದೊಯ್ಯುವೆವು ಎಂದು ಹೇಳಿದರು. ಹೆಣ್ಣು ಜನ್ಮ ಮಣ್ಣಾಗುವ ಸಮಯ ಎನ್ನುವ ಹಾಗೆ ಅವಳು ಅವರ ಮಾತಿಗೆ ಒಪ್ಪಿದಳು. ಆದರೆ ಆಕೆಗೆ ರಾತ್ರಿ ನಿದ್ದೆಯಲ್ಲಿ ಶ್ರೀನಾರಾಯಣನು ಬಂದು ಎಲ್ಲವನ್ನು ವಿವರವಾಗಿ ತಿಳಿಸುವನು. "ಗಂಗಾಮಾತೆ ನಾಳೆ ನಿನ್ನನ್ನು ಅಗ್ನಿಕುಂಡಕ್ಕೆ ಆಹುತಿ ಕೊಡುವರು. ನಿನ್ನ ಜೀವಾತ್ಮವು ಘಟಪ್ರಭಾ ನದಿಯಾಗಿ ಹರಿಯಲಿ, ನಿನ್ನ ದೇಹ ಗುಡಿಗುಂಡಾರದ ಬೆಳಕು, ಮನಿ ಮಠವೆ ಬಂಗಾರದ ಹೊಳಪು, ನಿನ್ನ ಶಿಖರದ ಮೇಲೆ ಸುಣ್ಣವಾಗಿ ಸುರಿಯಲಿ ಎಂದು ಶ್ರೀಕೃಷ್ಣನು ಆಶೀರ್ವಾದ ಮಾಡಿದನು. ಯಾವುದಕ್ಕೂ ಧೈರ್ಯಗೆಡಬೇಡ. ನಿನಗೆ ಯಾವುದೇ

ನೋವು ಇಲ್ಲದಂತೆ ನಾನು ಸ್ವರ್ಗಕ್ಕೆ ಒಯ್ಯುತ್ತೇನೆ. ಅಗ್ನಿಯೊಳಗೆ ಜನಿಸುವ ನಿನ್ನ ಮಗುವನ್ನು ಕಾಪಾಡುವೆ ಎಂದು ಮಾಯವಾದನು.

ಮರುದಿನ ಮುಂಜಾನೆ ಎದ್ದು ಎಂದಿಗಿಂತಲೂ ಬೇಗ ಹೊರಡುವುದು, ಹೊರಡಿಸವುದು ಕಂಡು ಗಂಗವ್ವ ತುಂಬಾ ಸಂತೋಷದಿಂದ ಹೊರಟಳು. ಅಷ್ಟರವರೆಗೆ ಇದ್ದ ಯಾವ ಚಿಂತೆ ಈಗ ಇಲ್ಲವಾಗಿತ್ತು. ಮುಖದ ಕಳೆಯು ಸಂತೋಷದಿಂದ ತುಂಬಿ ತುಳುಕುತ್ತಿತ್ತು. ಆದರೆ ಆ ಮೂರ್ಖರು ಭಾವಿಸಿದ್ದು, ಆಕೆಗೆ ಏನೂ ತಿಳಿಯದೆಂದು. ಆದರೆ ಪರಮಾತ್ಮನು ಬಂದು ಎಲ್ಲವನ್ನು ತಿಳಿಸಿ ಧೈರ್ಯ ಕೊಟ್ಟು ಹೋದ ವಿಷಯ ಅವರೇನು ಬಲ್ಲರು. ಎಂದಿನಂತೆ ಎಲ್ಲರೂ ಬೆಟ್ಟದ ತುದಿಗೆ ತಲುಪುವರು. ಅಣ್ಣಂದಿರು ಮುಖ ಮುಖ ನೋಡ ಹತ್ತಿದರು. ಒಂದೊಂದು ಸನ್ನೆ ಮಾಡ ಹತ್ತಿದರು. ಇದನ್ನು ಅರಿತು ಗಂಗೆಯು ಬಂದು ಅಣ್ಣ ನೀವು ಏನು ಕಷ್ಟ ಪಡಬೇಡಿರಿ. ನಾನು ನಿಮಗೆ ಸಹಾಯ ಮಾಡುತ್ತೇನೆ. ಎಂದು ತನ್ನ ಸಂಕಟದ ಸ್ಥಿತಿಯನ್ನು ಈ ಪದ್ಯದಲ್ಲಿ ತಿಳಿಸುವಳು.

ಪದ್ಯ

"ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗೆ ಅಂಜಿದಡೆ ಎಂತಯ್ಯ । ಸಂತೆಯ
ಲ್ಲೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆ
ಎಂತಯ್ಯ । ಸಮುದ್ರದ ತಟದಲ್ಲೊಂದು
ಮನೆಯಮಾಡಿ ತೆರೆಗಳಿಗೆ ಅಂಜಿದಾಡೆ
ಎಂತಯ್ಯ । ಬೆಂಕಿಯಲ್ಲೊಂದು ಮನೆಯ ಮಾಡಿ
ಝಳಕ್ಕೆ ಅಂಜಿದರೆ ಆಗುವದೇನಯ್ಯ,
ಅಲ್ಲಮಪ್ರಭು ಲಿಂಗಯ್ಯ । ನೀ
ಎನ್ನ ಕಾಯಯ್ಯ"[೧೮]

ಎಂದು ಗಂಗಾದೇವಿಯು ತಮ್ಮ ಅಣ್ಣಂದಿರುಗಳಿಗೆ ನಿಮ್ಮ ಕಾರ್ಯಗಳನ್ನು ನಡೆಸಿರಿ. ನನಗೆ ಸ್ಥಳ ತೋರಿಸಿದರೆ ನಾನೇ ಮಲಗಿಕೊಳ್ಳುವೆನು. ನಿಮ್ಮ ಇಷ್ಟಾನುಸಾರವಾಗಿ ನಡೆಸಿಕೊಳ್ಳಿರಿ. ಎಲ್ಲಿ ಮಲಗಬೇಕು ಹೇಳಿರಿ ನಾನೇ ಮಲಗುವೆ. ನನ್ನ ಕೊಂದ ಪಾಪವೆಲ್ಲ ನಿಮಗೆ ಬಾರದಿರಲಿ. ನಿಮಗೆ ಕೆಟ್ಟ ಹೆಸರು ತಂದು ಕೊಟ್ಟೆ ಅಣ್ಣ ಎಂದು ತಾನೇ ಹೋಗಿ ಮಲಗಿದಳು. ಆಗ ಕಿರಿಯವನು ಹಿಂಜರಿಯುವನು. ಆದರೆ ಮೂರ್ಖ ನಾದ ಹಿರಿಯವನು ಎಲ್ಲಾ ಸಾಮಗ್ರಿಗಳನ್ನು ತಂದು ತಲೆಯಮೇಲೆ ಹಾಕಿ ಬೆಂಕಿಯನ್ನು ಹಚ್ಚುವನು. ಬೆಂಕಿಯು ಕರ್ಪೂರಕ್ಕೆ ಹೇಗೆ ಹತ್ತುವುದು ಅದೇ ಪ್ರಕಾರ ಉರಿಯಲು ಆರಂಭಿಸಿತು. ಅವಳ ಗರ್ಭದಲ್ಲಿರುವ ಕೂಸು ಸಿಡಿದು

ಹೊರಗೆ ಬಿದ್ದರೂ ತಿರುಗಿ ಒಳಗೆ ನೂಕುವರು. ಅಷ್ಟರಲ್ಲಿ ಗಂಗಾದೇವಿ ಅವರಿಗೆ ಅಣ್ಣಾ ನೀವು ಚಿಂತಿಸದಿರಿ. ನೀವು ನಿಂತ ಸ್ಥಳದ ಪೂರ್ವಕ್ಕೆ ನೋಡಿ ನನ್ನ ಮಗು ಅಳುತ್ತಿದೆ. ಆತನನ್ನು ಅಲ್ಲಿ ಕಾಣುವ ಕಲ್ಲಿನ ಗವಿಯ ಒಳಗೆ ಮಲಗಿಸಿ ನಿಮ್ಮ ನಿಮ್ಮ ಕೆಲಸಕ್ಕೆ ಹೋಗಿರಿ, ಎಂದು ಗಂಭೀರ ಸ್ವರದಿಂದ ಕೂಗಿ ಸ್ವರ್ಗಸ್ಥಳಾದಳು. ಅದರಂತೆ ಪೂರ್ಣ ಭಸ್ಮವಾದ ಮೇಲೆ ಅಲ್ಲಿ ಅಳುತ್ತಿದ್ದ ಮಗುವನ್ನು ಎತ್ತಿ ತಂದು ಕಲ್ಲಿನ ಗವಿಯಲ್ಲಿ ಮಲಗಿಸಿ ಹೋದರು. ಅವರು ಸ್ವಲ್ಪ ದೂರ ಹೋದ ನಂತರ ಆ ಕೂಸಿಗೆ ಎಚ್ಚರವಾಗಿ ಅದು ಅಳಲು ಪ್ರಾರಂಭಿಸಿತು. ಆಗ ಪರಮಾತ್ಮನು ಅಲ್ಲಿಗೆ ಬಂದು ಬಂಡೆಯ ಮೇಲೆ ಜೇನು ತೂಗಾಡುವ ಹಾಗೆ ಮಾಡಿ ಅದರಿಂದ ಹನಿಹನಿ ಜೇನು ಕೂಸಿನ ಬಾಯಿಯಲ್ಲಿ ಬೀಳುವಂತೆ ಮಾಡಿದನು. ಅದರಿಂದ ಸಮಾಧಾನಗೊಂಡು ಮಗು ಆಟ ಆಡುತ್ತಿತ್ತು.

ಅಂದಚಂದಲಿಂಗಯ್ಯ ಮತ್ತು ಗಂಗೆಮಾಳವ್ವರಿಗೆ ವಿವಾಹವಾಗಿ ಐದು ಆರು ವರ್ಷಗಳು ಕಳೆದಿವೆ. ಮಾಳವ್ವನು ಪತಿಯ ಸೇವೆಯಲ್ಲಿಯೇ ತನ್ನನ್ನು ತಾನು ಮರೆಯುತ್ತಿದ್ದಳು. ಅವರಿಗೆ ಮಕ್ಕಳೆಂದರೆ ಬಹಳ ಪ್ರೀತಿ. ಇಷ್ಟು ವರ್ಷವಾದ ಮೇಲೆ ಸತಿ-ಪತಿಯರ ದೈವಭಕ್ತಿಗೆ ಶಿವ ಕಾಣಿಕೆ ನೀಡುವ ಅವಕಾಶ ಒದಗಿಬಂದಿತ್ತು. ಒಂದು ದಿನ ಗಂಗೆಮಾಳವ್ವನು ತನ್ನ ಪತಿಯ ಸೇವೆ ಮಾಡುತ್ತಾ ನನಗೆ ತುಂಬಾ ಬೇಸರವಾಗಿದೆ. ಊರ ಹೊರಗಡೆಯ ಗುಡ್ಡದ ಕಡೆಗೆ ಹೋಗಿ ಬರೋಣ ಬನ್ನಿರಿ ಎಂದು ತುಂಬಾ ಪೀಡಿಸಿದಳು. ಅಂದಚಂದನು ಪತ್ನಿಯ ಮಾತನ್ನು ಎಂದೂ ತಿರಸ್ಕರಿಸುತ್ತಿರಲಿಲ್ಲ. ಆದರೆ ಪತಿ-ಪತ್ನಿ ಇಬ್ಬರು ಜೊತೆಯಾಗಿ ಹೊರಗೆ ಹೋಗುವುದನ್ನು ತಿರಸ್ಕರಿಸುತ್ತಿದ್ದನು. ಅಂದು ಪತ್ನಿ ಹೇಳುವುದಕ್ಕಿಂತ ಮೊದಲೇ ಒಪ್ಪಿಕೊಂಡನು. ಆಕೆಗೆ ತುಂಬಾ ಸಂತೋಷವೂ ಸೋಜಿಗವೂ ಆಯಿತು.

ಗಂಗೆಮಾಳವ್ವನು ಮನೆಗೆಲಸಗಳನ್ನು ಬೇಗ ಬೇಗ ಮುಗಿಸಿ ರಾತ್ರಿಯ ಊಟಕ್ಕೆ ರೊಟ್ಟಿಯನ್ನು ಮಾಡಿ ಇಟ್ಟು, ಕೈಕಾಲು ಮುಖ ತೊಳೆದು ಕೊಂಡು ಮಡಿಯನ್ನು ಉಟ್ಟುಕೊಂಡು, ದೇವರನ್ನು ಸ್ಮರಿಸುತ್ತಾ ಗಂಧವನ್ನು ಧರಿಸಿಕೊಂಡು ಹೊರಟು ನಿಂತಳು. ಅಂದಿನ ಸಮಯಕ್ಕೆ ಮನೆಯಲ್ಲಿ ನಿಂತೂ ನಿಂತೂ ಸಾಕಾಯಿತು. ದಾರಿ ನೋಡಿ ನೋಡಿ ಬೇಸತ್ತಳು. ಕಣ್ಣುಗಳು ಸೋತವು, ಇತ್ತ ತಿರುಗಿದರೆ ಕರೆಯೋಣವೆಂದು ಎತ್ತರಕ್ಕೆ ಕೈಯೆತ್ತಿ ಸೋತು, ಕೆಳಕ್ಕೆ ಬಿಟ್ಟಳು. ನಿಟ್ಟುಸಿರು ಬಿಟ್ಟು ಬಿಟ್ಟು ಮೂಗು ಒಣಗಿ ಹೋಯಿತು. ದುಃಖದಿಂದ ಅಳುವು ಉಕ್ಕಿ ಬರುವುದು. ಇನ್ನೂ ದಾರಿ ನೋಡಿದರೆ ಸಮಯವು ಕಳೆಯುವುದು. ಸ್ವತಃ ಹೋಗಿ ಕರೆದು ಬರಬೇಕೆಂದು, ಮನೆಯಾಚೆಯಿಂದ ಕೆಳಗೆ ಇಳಿಯುವಷ್ಟರಲ್ಲಿ ಅವಳಿಗಿಂತ ಮೊದಲೇ ತಯಾರಾದ ಅಂದಚಂದನು ಈ ರೀತಿಯ ಹಾವಭಾವಗಳನ್ನು ನೋಡುತ್ತಾ ಅವಳ ಹಿಂದೆಯೇ ನಿಂತಿದ್ದನು. ಅವಳು ಮುಂದಕ್ಕೆ ಹೋಗುವುದರೊಳಗೆ ಸೀರೆಯ ಸೆರಗನ್ನು ಹಿಡಿದು ಎಳೆದನು. ಅವಳು ತುಂಬಾ ಹೆದರಿ ಅಯ್ಯೋ! ಎಂದು ಚೀರಿ ತಿರುಗಿ ನೋಡಿದಳು. ನಾನು ಎಂತ ಮರುಳೆ ಎಂದು

ನಾಚಿಕೊಳ್ಳುವಳು. ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನ ಕೊಳಲಿನ ಇಂಪಿನ ಧ್ವನಿಗೆ ತಮ್ಮನ್ನೇ ತಾವು ಮರೆಯುವರು. ಆಗ ಹಿಂಭಾಗದಿಂದ ಹೋಗಿ ಏನು ಮಾಡಿದರೂ ತಿಳಿಯದು ಅದೇ ರೀತಿ ಸ್ತ್ರೀಯರು ಎಲ್ಲಿಗಾದರೂ ಹೋಗಬೇಕೆಂದು ತಯಾರಾಗಿ ನಿಂತರೆ ಹಿಂಬದಿಯಿಂದ ಏನು ಒಯ್ದರೂ ತಿಳಿಯುವುದಿಲ್ಲ ಅಷ್ಟು ಮರಳು. ಇದೇನು ಹುಚ್ಚೇ ಎಂದು ಅಪ್ಪಿಕೊಳ್ಳುವನು.

ದಂಪತಿಗಳು ಪ್ರೀತಿಯ ಮಳೆಯನ್ನು ಸುರಿಸುತ್ತ ಮನೆಯಿಂದ ಹೊರಟರು. ಅವರು ಹಿತ್ತಲನ್ನು ದಾಟಿದ ನಂತರ ಗಂಗೆಮಾಳಮ್ಮನು ಈ ರೀತಿ ಹೇಳುತ್ತಾಳೆ. 'ಅಲ್ಲಾ' ನೀವು ಲಿಂಗ ಪೂಜೆಗೆ ಬಿಸಿಲು ಇಲ್ಲದ ಬಾವಿ, ಹೆಸರಿಲ್ಲದ ಮರದ ಪತ್ರೆಯನ್ನು ಹುಡುಕಿಕೊಂಡು ಹೋದ ಗುಡ್ಡದ ಕಡೆಗೆ ಹೋಗೋಣ. ಎಲ್ಲಿ ನೀವು ಪ್ರಾಣತ್ಯಾಗ ಮಾಡಿಕೊಳ್ಳಲು ಸಿದ್ಧರಾಗಿದ್ದು, ಆ ಕೊಳ್ಳವನ್ನು ತೋರಿಸಿ ಅದೆಲ್ಲವನ್ನು ನಾನು ನೋಡಬೇಕು ಎಂದಳು. ಹಾಗೆಯೇ ಆಗಲಿ ಎಂದು ಒಪ್ಪಿದನು. ಗುಡ್ಡವನ್ನು ಕೆಲವೇ ತಾಸುಗಳಲ್ಲಿ ತಲುಪಿದರು. ಅಲ್ಲಿ ವಿಶೇಷವೇನೂ ಇಲ್ಲವಾಗಿತ್ತು. ಮರಗಿಡಗಳು ತುಂಬಾ ಹೇರಳವಾಗಿದ್ದವು. ಮುಳ್ಳುಗಿಡಗಳು ಬಹಳ ಇದ್ದವು. ಬಿಸಿಲಿನ ತಾಪಕ್ಕೆ ಟೊಂಗೆಗಳು ಮುರಿದುಬಿದ್ದಿದ್ದವು. ಗಾಳಿಯ ರಭಸಕ್ಕೆ ಮುಳ್ಳೆಲ್ಲ ಹರಡಿದವು. ಗಂಗೆ ಮಾಳವ್ವನ ಕಾಲಿಗೆ ಮುಳ್ಳುಗಳು ಚುಚ್ಚುತ್ತಿದ್ದವು. ಆದರೆ ಪತಿಯ ಮುಂದೆ ಹೇಳಲಿಲ್ಲ, ಹೇಳಿದರೆ ಹೋಗುವುದಕ್ಕೆ ಬೇಡ ಎಂದು ಎಲ್ಲಿ ಅನ್ನುವರೋ ಎಂಬ ಚಿಂತೆ. ಆಗ ಈ ಗುಡ್ಡಕ್ಕೆ ಬೇರೆ ದಾರಿ ಇಲ್ಲವೇ? ಇದ್ದರೆ ಅಲ್ಲಿ ಹಾಸಿ ಹೋಗೋಣ ಎಂದಳು. ಅದಕ್ಕೆ ಒಪ್ಪಿದ ಅಂದ ಚಂದನು ಪಕ್ಕದಲ್ಲಿಯೇ ಇದ್ದ ಇನ್ನೊಂದು ದಾರಿ ಹಿಡಿದನು. ಆ ದಾರಿಯು ತುಂಬಾ ಸಮೀಪವಾಗಿರುವುದು. ಇದೇನು ಈ ಅಡವಿಯಲ್ಲಿ ಈ ದಾರಿ ಎಷ್ಟು ಶುದ್ಧವಾಗಿರುವುದು, ಕಾರಣವೇನು? ಎಂದು ಕೇಳಿದಳು.

ಆಗ ಚಂದಲಿಂಗನು, ಅಂಬಿಗೇರ ಮನೆಯಲ್ಲಿ ಏಳುಜನ ಗಂಡುಮಕ್ಕಳು ಒಬ್ಬ ಹೆಣ್ಣುಮಗಳು ಇದ್ದರು. ಅವರು ತಮ್ಮ ಉಪಜೀವನಕ್ಕಾಗಿ ಕಟ್ಟಿಗೆ ಸುಡುತ್ತಿದ್ದರು. ಅವರು ಇದ್ದಲಿ ಮಾಡಲು ಇದೇ ಗುಡ್ಡಕ್ಕೆ ಇದೇ ದಾರಿ ಹಿಡಿದುಕೊಂಡು ಹೋಗುತ್ತಿದ್ದರು. ಅದಕ್ಕಾಗಿ ಈ ದಾರಿಯು ಇಷ್ಟು ಶುದ್ಧವಾಗಿರುವುದು. ಇಷ್ಟು ವಿಚಾರ ತಿಳಿದ ಗಂಗೆಮಾಳವ್ವ ಇದೇನು ಎಷ್ಟು ಸೊಗಸಾಗಿ ಕಾಣಿಸುತ್ತಿದೆ ಎನ್ನಲು, ಅದೇ ಕೊಳ್ಳ ನನಗೆ ದೇವರು ತೋರಿಸಿರುವುದು. ಅದರಲ್ಲಿಯೇ ಬಿಸಿಲಿಲ್ಲದ ನೀರು, ಹೆಸರಿಲ್ಲದ ಪತ್ರೆ, ಎಂದು ಮುಂದುವರಿಯುವರು. ಸ್ವಲ್ಪದೂರ ಹೋಗುವುದರೊಳಗಾಗಿ ಒಂದು ಕಡೆಯಿಂದ ನಾನಾ ಜಾತಿಯ ಪಕ್ಷಿಗಳ ಕೂಗು, ಮತ್ತೊಂದು ಕಡೆಯಿಂದ ವಿವಿಧ ಕ್ರೂರ ಪ್ರಾಣಿಗಳ ಕೂಗು, ಕೇಳಿ ಎದೆ ಝಲ್ ಎಂದಂಗಾಯಿತು. ಪರಮಾತ್ಮನನ್ನು ಧ್ಯಾನಿಸುತ್ತಾ, ಬಾ ನೋಡೋಣ ಹೆದರಬೇಡ ಇದೇ ನೋಡು ನಾನು ಜೀವ ಕೊಡಲು ಸಿದ್ಧವಾದ ಹೊಂಡ ಎಂದು ತೋರಿಸುವಷ್ಟರಲ್ಲಿ ಒಂದು ಹುಲಿ ಇವರ ಮುಂದೆ ಬಂತು. ಏನು ಗತಿಯೆಂದು ಪತ್ನಿಯು ಕೇಳಿದಳು. ಹುಲಿಯು ಆರ್ಭಟಿಸುತ್ತ ತನ್ನ ಚೂಪಾದ ಬಿಳಿಹಲ್ಲುಗಳನ್ನು ತೋರಿಸುತ್ತಾ ಜಿಗಿದು ಜಿಗಿದು ಬರುತ್ತಿತ್ತು. ದಂಪತಿಗಳು ಬಹಳ ಹೆದರಿ ಶಿವನನ್ನು ಧ್ಯಾನಿಸುವರು.

ಅಷ್ಟರಲ್ಲಿ ಎಲ್ಲಿಂದಲೋ ಬಂದ ಒಂದು ಸಿಂಹ ಹುಲಿಯ ಮೇಲೆ ಜಿಗಿಯಿತು. ಅವುಗಳಲ್ಲಿ ಹೋರಾಟ ನಡೆಯಿತು. ಮುಂದೆ ನೋಡಿದರೆ ತೋಳಗಳು ಚಿಗುರೆ ಮರಿಯನ್ನು ಹೊರಲು ಪ್ರಯತ್ನಿಸುತ್ತಿದ್ದವು. ಅಷ್ಟರಲ್ಲಿ ಒಂದು ಕೂಸಿನ ಅಳು ಕೇಳಿಸಿತು. ಇಂಥ ಅಡವಿಯಲ್ಲಿ ಮನುಷ್ಯರ ಧ್ವನಿ ಅದು ಕೂಸಿನ ಧ್ವನಿಯಾಗಿ ಇರುವುದು. ಎಲ್ಲಿ ನೋಡಿರಿ ಹುಲಿ ಏನಾದರೂ ಹೊತ್ತು ತಂದು ಕೊಲ್ಲುತ್ತಿದೆಯೋ ನೋಡಿರಿ, ಬೇಗನೆ ಹೋಗಿ ನೋಡಿಕೊಂಡು ಬರೋಣ ನಡೆಯಿರಿ ಎಂದು ಗಂಗೆಮಾಳವ್ವ ಪತಿಗೆ ಹೇಳಿದಳು. ಅವರಿಬ್ಬರೂ ಸ್ವಲ್ಪ ದೂರ ಹೋಗಿ ನಿಂತು ನೋಡಲು ಸುಟ್ಟ ಸ್ಥಳವು ಕಾಣಿಸಿತು. ಇದೇನು ಎಂದು ಪತ್ನಿ ಕೇಳಿದಳು. ಅದು ಸುಟ್ಟ ಕಿಚ್ಚು ಎಂದು ಹೇಳಿದನು. ಅವಳು ಆಶ್ಚರ್ಯಪಟ್ಟು ಹೊರಳಿ ನೋಡಲು ಅಲ್ಲಿ ಬಳೆಗಳು ಒಡೆದು ಚೂರು ಚೂರಾಗಿ ಬಿದ್ದಿದ್ದವು. ಅವುಗಳನ್ನು ನೋಡಿ ಯಾವನೋ ಒಬ್ಬ ದೂರ್ತನು ಹೆಂಗಸಿನ ಕೊಲೆಯನ್ನು ಮಾಡಿ ಆ ಹೆಂಗಸನ್ನು ಕಿಚ್ಚಿನಲ್ಲಿ ಸುಟ್ಟು ಆ ಹೆಣ್ಣು ಮಗಳ ಕೂಸನ್ನು ಕಸಿದುಕೊಂಡು ಕಲ್ಲುಬಂಡೆಯ ಮೇಲೆ ಚೆಲ್ಲಿ ಹೋಗಿರಬಹುದೆಂದು ಹೇಳಿದನು. ಅವರು ಸುತ್ತಮುತ್ತ ನೋಡುತ್ತ ಮುಂದೆ ಸಾಗುವಷ್ಟರಲ್ಲಿ ಮಗು ಅಳುವುದು ಕೇಳಿಸಿತು.

ಅಲ್ಲಿ ಹೋಗಿ ನೋಡಲು ಗಂಡು ಕೂಸು ಹುಲ್ಲು ಹಾಸಿಗೆಯ ಮೇಲೆ ಹೊರಳಾಡಿ ಅಳುವುದು. ಮೈಯೆಲ್ಲ ಮೇಲಿನಿಂದ ಸುರಿದ ಜೇನು ಆವರಿಸಿತ್ತು. ನೋಡಿ ಆಶ್ಚರ್ಯವಾಯಿತು. ಮಾಳಮ್ಮ ಅದನ್ನು ನೋಡಿ ಹುಲ್ಲಿನಿಂದ ಆ ಮಗುವನ್ನು ಮೇಲೆತ್ತಿಕೊಂಡು ಅದರ ಮೈಯನ್ನೆಲ್ಲ ಒರೆಸಿದಳು. ಆಗ ಚಂದಾಲಿಂಗನು ಹೋಗೋಣ ನಡೆ ಆ ಸೃಷ್ಟಿಕರ್ತನು ಹೇಗೆ ಜೋಪಾನ ಮಾಡುವನು. ಅವನ ಕೃಪೆ ನಮ್ಮ ಮೇಲೆ ಹಾಗೂ ಈ ಮಗುವಿನ ಮೇಲೆ ಇದ್ದರೆ ಸಾಕು ಎಂದು ಹೆಂಡತಿಯೊಂದಿಗೆ ಹಿಂತಿರುಗಿದನು.

ಈ ಮಗು ಹುಟ್ಟಿದ್ದು ದ್ವಾಪರಯುಗದ ನಾಲ್ಕನೇ ಚರಣದಲ್ಲಿ. ಇವರ ಜನ್ಮ ದಿನ ಭಾನುವಾರ. ಇವರಿಗೆ ಸಿಕ್ಕಿದ್ದು ಭಾನುವಾರ ದಿವಸವೇ. ಆ ಕೂಸನ್ನು ಮನೆಗೆ ತೆಗೆದುಕೊಂಡು ಬಂದ ಮೇಲೆ ಆ ಕೂಸು ಬೆಳೆದಂತೆ ಅವರ ಮನೆಯು ದಿನ ದಿನಕ್ಕೆ ಬೆಳೆಯಹತ್ತಿತು. ಇದನ್ನು ಕಂಡು ಭಕ್ತರು ಇವನು ಕೀರ್ತಿವಂತನಾಗುವನು. ಜಗತ್ತಿಗೆ ಒಂದು ದೊಡ್ಡ ವಸ್ತು ಎನಿಸುವನು. ಇವನು ನಮ್ಮ ಊರಿಗೆ ಅಲ್ಲದೆ ಜಗತ್ತಿಗೇ ದೇವರೂ ಎಂದರೂ ಅಡ್ಡಿಯಿಲ್ಲ. ಅವರ ವಾಣಿ ಅವರ ಜೀವನದ ಸರಳತೆಯೇ ಆಗಿತ್ತು. ಆ ಹುಡುಗನನ್ನು ನೋಡಲು ಇಡೀ ಊರ ಮಂದಿಯೇ ಬರಹತ್ತಿತು. ಬಿಸಿಲಿನಿಂದ ಸುಟ್ಟು ಬೆಂಡಾಗಿದ್ದ ಆ ಊರು ಕಷ್ಟದಲ್ಲಿ ತೊಳಲಾಡುತ್ತಿತ್ತು. ಅವನು ಎಂದು ಆ ಊರಿಗೆ ಕಾಲಿಟ್ಟನೋ ಅಂದಿನಿಂದ ಮಳೆ-ಬೆಳೆ ಸರಿಯಾಗಿ ಆಗಿ ಸೃಷ್ಟಿ ಸೌಂದರ್ಯದಿಂದ ಕಂಗೊಳಿಸಹತ್ತಿತು. ಅಂಧಕಾರದಲ್ಲಿ ಚಂದ್ರನು ಹೇಗೆ ಪ್ರಕಾಶಿಸುವನೋ ಹಾಗೆ ಆತನಿಂದ ಊರು ಬೆಳಗಹತ್ತಿತು. ದಿನ ದಿನಕ್ಕೆ ಆ ಊರ ಕಳೆ ಏರ ಹತ್ತಿತು. ಇದಕ್ಕೆ ಆತನನ್ನು ಎಲ್ಲರೂ ಬಹಳ ಪ್ರೀತಿಸುತ್ತಿದ್ದರು. ಈತನನ್ನು ದೇವರೆಂದು ತಿಳಿದರು. ಆತನಿಂದ ಆಶೀರ್ವಾದ ಪಡೆದು ಸುಖದಿಂದ ಇರುತ್ತಿದ್ದರು.

ಗಂಗೆಮಾಳವ್ವ ಮಗನಿಗೆ ನಾಮಕರಣ ಮಾಡಬೇಕೆಂದು ಆಸೆ ಪಟ್ಟಳು. ಅದಕ್ಕೆ ಮೂಹೂರ್ತ ನೋಡಲಾಗಿ ಭಾನುವಾರ ಅರ್ಧ ರಾತ್ರಿಗೆ ಹೆಸರಿಡುವುದೆಂದು ಗೊತ್ತಾಯಿತು. ಅದನ್ನು ತಿಳಿದ ಊರಜನ ಸೇರಿ, ಯಾರೋ ಅಡುಗೆಯ ವ್ಯವಸ್ಥೆಯನ್ನು, ಯಾರೋ ನೀರಿನ ವ್ಯವಸ್ಥೆಯನ್ನು, ಇನ್ನಿತರರು ತೊಟ್ಟಿಲಿಗೆ ಬೇಕಾಗುವ ಸಾಮಗ್ರಿಗಳನ್ನು ತಂದರು. ಸುಂದರವಾದ ತೊಟ್ಟಿಲನ್ನು ತಂದು ಅದಕ್ಕೆ ನಾನಾ ರೀತಿಯ ಆಭರಣಗಳಿಂದ ಶೃಂಗರಿಸಿ ಝುಗಮಗಿಸುವಂತೆ ಮಾಡಿದರು. ವಿವಿಧ ರೀತಿಯ ಹೂಗಳಿಂದಲೂ ತೊಟ್ಟಿಲನ್ನು ಶೃಂಗರಿಸಿದರು. ಇಷ್ಟೆಲ್ಲಾ ಮಾಡುವುದರೊಳಗೆ ಶುಭ ಮೂಹೂರ್ತವು ಸಮೀಪಿಸಿತು. ಮಗುವನ್ನು ತೊಟ್ಟಿಲಿಗೆ ಹಾಕಲು ತಯಾರಾದರು ಜೋಗುಳ ಪದ ಹಾಡಿದರು.

ಪದ್ಯ

“ಜೋ..... ಜೋ..... ಎನ್ನಿ ಗೋಪಿಯ ಕಂದ
ನಿನ್ನ ಹಡೆದ ತಂದೆ–ತಾಯಿ ಯಾರ ಜೋ ಜೋ
ಕಲ್ಲ ಪಡೆಯು ತೊಟ್ಟಿಲವೇನೆ
ಹುಲ್ಲು ಹಾಸಿಗೆಯೇನೆ
ಜೇನು ತುಪ್ಪ ಹಾಲು ಏನೇ
ಜೇನು ಹುಳುಗಳು ಮಂದಿ ಬಳಗವೇನೇ ಜೋ.... ಜೋ....॥
ಬಲ್ಲಿದರೆಲ್ಲರೂ ಕೂಡಿಕೊಂಡು
ಹುಲ್ಲಲ್ಲಿ ಹುಟ್ಟಿದ ಹುಲ್ಲಪ್ಪ ನೆಂದು
ಹೆಸರಿಡೋಣ ಬನ್ನಿರೋ ಜೋ.... ಜೋ....॥[೧೯]

ಹುಲ್ಲಪ್ಪನ ಮುಖ ಲಕ್ಷಣವನ್ನು ನೋಡಿದರೆ ದೇವಲೋಕದ ಷಣ್ಮುಖನಂತೆ ತೋರಹತ್ತಿದನು. ಎಲ್ಲರೂ ಕೂಡಿ ಆರತಿ ಬೆಳಗಿದರು. ದೇವಲೋಕವೇ ಭೂಮಿಗೆ ಬಂದಂತಾಗಿತ್ತು. ಸೂರ್ಯನು ತನ್ನ ಕಿರಣದಿಂದ ಭೂಮಿಯನ್ನು ಬೆಳಗುವನೋ ಹಾಗೆ ಹುಲ್ಲಪ್ಪನು ಪ್ರಕಾಶಿಸಹತ್ತಿದನು. ಹುಲ್ಲಿನಲ್ಲಿ ಸಿಕ್ಕಿದ್ದರಿಂದ ಹುಲ್ಲಪ್ಪನೆಂದು ಹೆಸರಿಟ್ಟು ಎಲ್ಲರೂ ಹೊರಟರು.

ಜೇನುಗೂಡಿನಂತಿದ್ದ ಅಂಬಿಗರ ಕುಟುಂಬವು ಕೇವಲ ಒಂದು ಪಾರಿಜಾತಹೂವು ಏಳುಜನ ಒಡಹುಟ್ಟಿದ ಅಣ್ಣಂದಿರ ಮನದಲ್ಲಿ ತಂಗಿ ಗಂಗಾದೇವಿಯ ಕುರಿತು ಕ್ರೌರ್ಯದ ಮನೋಭಾವನೆಯನ್ನು ಬೆಳೆಸುತ್ತದೆ. ಸತ್ಯದ ಸಂಗತಿಯನ್ನು ಅರಿಯದ ಅಮ್ಮಂದಿರು ಗಂಗಾದೇವಿಯ ಶೀಲದ ಬಗ್ಗೆ ಶಂಕಿಸಿ ಅಮಾನವೀಯ ಕೃತ್ಯಕ್ಕೆ ಕೈ ಹಾಕುತ್ತಾರೆ. ಅಂದಿನ ಸಮಾಜದಲ್ಲಿಯೂ ಮಹಿಳೆಯು ಸಬಲೆಯಾದಂತೆ ತೋರುವುದಿಲ್ಲ. ಗಂಗಾದೇವಿಯು ಮದುವೆಯಾಗದೆ ಗರ್ಭಧರಿಸುವುದು ಆ ಕುಟುಂಬದವರಿಗೆ ನುಂಗದತುತ್ತಾಗಿತ್ತು. ಇದೊಂದು ಹೀಗಿನ ಕೆಲವೊಂದು ಸಮಾಜದಲ್ಲಿ ನಡೆಯುವ

ಮರ್ಯಾದೆ ಹತ್ಯೆ ಪ್ರಕರಣಗಳಂತೆ ಈ ಹಿಂದೆಯೂ ಪ್ರಚಲಿತದಲ್ಲಿರುವುದು ಗೋಚರಿಸುತ್ತದೆ. ತನ್ನ ಗರ್ಭದ ಬಗ್ಗೆ ಏನೂ ಅರಿಯದ ಮುಗ್ಧ ಗಂಗಾದೇವಿಯು ಬಲಿಪಶುವಾಗಿ ಮರಣ ತೇತ್ತುತ್ತಾಳೆ. ಗಂಗಾದೇವಿಯು ತನ್ನನ್ನು ಕೊಲ್ಲಲು ಹೂಡಿದ ಕುಟಿಲತಂತ್ರ ತಿಳಿದು ತನ್ನ ಅಂಣಂದಿರಿಗೆ ತಾನೇ ಸಹಕರಿಸುತ್ತಾಳೆ. ಅವಳ ಅಂತಹ ಮನಸ್ಥಿತಿಯನ್ನು ತಿಳಿಯಲಾರದ್ದು ಅವಳ ಅಣ್ಣಂದಿರು ತಮ್ಮ ಮನೆಯ ಮರ್ಯಾದೆಯ ಅಂದಕಾರದಲ್ಲಿ ತಮ್ಮ ವಿವೇಚನೆಯ ಅರಿವನ್ನೇ ಮರೆಯುತ್ತಿರುವುದು ಘೋರವಗಿ ತೋರುತ್ತದೆ.

೩.೬.೧. ಹುಲ್ಲಪ್ಪನ ಬಾಲ್ಯ ದಿನಗಳು : (Hullappa's Childwood Day's)

ಹುಲ್ಲಪ್ಪನು ದಿನದಿಂದ ದಿನಕ್ಕೆ ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಿದ್ದನು. ಆತನ ಆಟ, ನೋಟಗಳು. ತೊದಲ್ನುಡಿಗಳು, ಬುದ್ಧಿಕುಶಲತೆಯೂ, ಅವನ ಗುಣಗಳು ಎಲ್ಲರಿಗಿಂತಲೂ ಮಿಗಿಲಾಗಿ ತೋರಹತ್ತಿದವು. ಅವನು ತನ್ನ ಎಲ್ಲ ಗುಣಗಳಿಂದ ಎಲ್ಲರನ್ನೂ ತನ್ನ ಕಡೆ ಸೆಳೆಯುತ್ತಿದ್ದನು. ಹೀಗೆ ಬೆಳೆಯುತ್ತಿರಲು ಅವನಿಗೆ ಎಂಟು ವರ್ಷಗಳು ತುಂಬಿದವು. ಒಂದು ದಿನ ಹುಲ್ಲಪ್ಪನು ಗೆಳೆಯರೊಂದಿಗೆ ಚೆಂಡಿನ ಆಟವನ್ನು ಆಡುತ್ತಿದ್ದನು. ಆಟವು ಬಹಳ ಹುರುಪಿನಿಂದ ಸಾಗಿತ್ತು. ಆಗ ಚಂಡು ಹುಲ್ಲಪ್ಪನ ಕೈಯಲ್ಲಿ ಬಂತು. ಅದೇ ಹೊತ್ತಿಗೆ 'ಪರಮ್ಮಾ' ಎಂಬ ಮುದುಕಿಯು ಕೊಡವನ್ನು ಹೊತ್ತುಕೊಂಡು ಹೋಗುತ್ತಿದ್ದಳು. ಹುಲ್ಲಪ್ಪನು ಒಗೆದ ಚೆಂಡು ಸೀದಾ ಅವಳಿಗೆ ಬಡಿದು ಬಿಂದಿಗೆ ಕೆಳಗೆ ಬಿದ್ದು ಒಡೆದು ಹೋಯಿತು. ಆ ಮುದುಕಿಯು ಸಿಟ್ಟಿನಿಂದ ಎಲೋ... ಎಲೋ... ಹುಲ್ಲಾ ನಿನ್ನ ತಂದೆ-ತಾಯಿ ಇದ್ದರೆ ಇನ್ನು ಎಷ್ಟು ಉರಿತಿದ್ದಿ, ಇಲ್ಲದೇ ಇಷ್ಟು ಉರಿತಿದಿ, ತಂದೆ ತಾಯಿ ಇಲ್ಲದ ದಿಕ್ಕೇಡಿ ಎಂದು ಬೈದಳು. ಆಗ ಹುಲ್ಲಪ್ಪನು ಆ ಕ್ಷಣ ಬಂದು ಅಮ್ಮ ಚಂಡು ನಿನಗೆ ಬಡಿಸಿದ್ದು ನನ್ನದು ತಪ್ಪಾಯಿತು. ಅಮ್ಮಾ ನನ್ನ ತಂದೆ-ತಾಯಿ ಯಾರು? ಬೇಗ ಹೇಳಮ್ಮ, ಅಂದಚಂದಲಿಂಗನು, ಗಂಗೆಮಾಳವ್ವರು ನನ್ನ ತಂದೆ-ತಾಯಿಗಳಲ್ಲವೇ? ಅವರು ನಿನ್ನ ತಂದೆ ತಾಯಿಯಾಗಿದ್ದರೆ, ಇಷ್ಟೇಕೆ ನಿನ್ನನ್ನು ಪೋಷಿಸುತ್ತಿದ್ದರು. ಹಾಗಾದರೆ ನನ್ನ ತಂದೆ ತಾಯಿ ಯಾರು ಬೇಗ ಹೇಳಮ್ಮ. ಅದು ನಿನ್ನ ಸಾಕಿದವರಿಗೆ ಗೊತ್ತು ಎಂದು ಹೇಳಲು, ಅವನು ಆಟವನ್ನು ಬಿಟ್ಟು ಮನೆ ಕಡೆ ಹೊರಟನು.

ಜನರ ನಿಂದೆಯನ್ನು ತಾಳಲಾರದೆ ತನ್ನ ತಂದೆ ತಾಯಿಗಳು ಯಾರೆಂದು ಗಂಗೆಮಾಳವ್ವನ ಹತ್ತಿರ ಬಂದು ಕೇಳಿದನು. ತಾಯಿಂದ ಉತ್ತರ ಬಾರದಿದ್ದಾಗ, ಚಂದಾಲಿಂಗಯ್ಯನಿಗೆ ನನ್ನ ತಂದೆ-ತಾಯಿ ಯಾರು..? ಹೇಳಪ್ಪ ಎಂದಾಗ ಆತನಿಂದ ಉತ್ತರ ಬಾರದಿದ್ದಾಗ ಹುಲ್ಲಪ್ಪ ಮನದಲ್ಲಿಯೇ ಚಿಂತೆಯಿಂದ ಕೊರಗತೊಡಗಿದ. ಇದರಿಂದ ಅವನಿಗೆ ದಿನದಿನಕ್ಕೆ ಚಿಂತೆ ಹೆಚ್ಚಾಗಿ ಮಲ್ಲಿಗೆ ಹೂವಿನಂತೆ ಬಾಡಹತ್ತಿದನು. ಒಂದು ದಿನ ಹುಲ್ಲಪ್ಪನು ತಾನು ಎಂದಿನಂತೆ ಊಟೋಪಚಾರಗಳನ್ನು ಮುಗಿಸಿಕೊಂಡು ತನ್ನನ್ನು ಸಾಕಿದವರಲ್ಲಿಗೆ ಬಂದು ನಾನು ಬೆಟ್ಟಕ್ಕೆ ಹೋಗಿ ಶ್ರೀ ಪರಮಾತ್ಮನ ಧ್ಯಾನ ಮಾಡಿ ನನ್ನ ತಂದೆ-ತಾಯಿಗಳು ಯಾರೆಂಬುದನ್ನು

ತಿಳಿದುಕೊಂಡು ಬರುತ್ತೇನೆ ಎಂದು ಅವರಿಗೆ ನಮಸ್ಕಾರ ಮಾಡಿದನು. ಅವರು ಬಹಳ ಸಂತೋಷದಿಂದ ಅವನಿಗೆ ಒಪ್ಪಿಗೆ ಕೊಟ್ಟರು. ಎಂದಿನಂತೆ ಹುಲ್ಲಪ್ಪನು ಬೆಳಿಗ್ಗೆ ಎದ್ದು ನಿತ್ಯಕರ್ಮಗಳನ್ನು ಮುಗಿಸಿಕೊಂಡು ಊಟೋಪಚಾರಗಳನ್ನು ಮಾಡಿಕೊಂಡು ತಂದೆತಾಯಿಗಳ ಆಶೀರ್ವಾದ ಪಡೆದುಕೊಂಡು ಅಲ್ಲಿಯೇ ಐದಾರು ಮೈಲು ದೂರದಲ್ಲಿರುವ ಕಾಡಿಗೆ ಹೋದ. ಕಾಡಿಗೆ ಹೋಗಿ ಒಂದು ಗಿಡದ ಅಡಿಯಲ್ಲಿ ಕುಳಿತು ಘೋರ ತಪಸ್ಸನ್ನು ಆಚರಿಸುತ್ತಿದ್ದನು.

ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ನನಗೆ ಮತ್ತ್ಯಾರು ಇಲ್ಲವಯ್ಯ ಎಂದು ಈ ಪ್ರಕಾರವಾಗಿ ಹುಲ್ಲಪ್ಪ ಪರಮೇಶ್ವರನ ಧ್ಯಾನದಲ್ಲಿ ಮಗ್ನನಾದನು. ಹೀಗೆ ಆಹಾರ ನೀರು ಸೇವಿಸದೇ ಹುಲ್ಲಪ್ಪನು ಎಂಟು ವರ್ಷಗಳವರೆಗೆ ದೇವರ ಧ್ಯಾನ ಮಾಡಿದನು. ಅದೇ ಸಮಯದಲ್ಲಿ ಈತನ ತಂದೆ-ತಾಯಿಗಳು ಮಗನ ಚಿಂತೆಯಲ್ಲಿ ತುಂಬಾ ಕಷ್ಟದಿಂದ ಕಾಲಕಳೆಯುತ್ತಿದ್ದರು. ಮಗನನ್ನು ಕಳೆದುಕೊಂಡ ತಂದೆ ತಾಯಿಗಳು ಪರಮೇಶ್ವರನನ್ನು ಧ್ಯಾನಿಸುತ್ತಿದ್ದರು. ಇವರ ಧ್ಯಾನವು ಇಡೀ ಬ್ರಹ್ಮಾಂಡವನ್ನು ಅಲ್ಲೋಲ ಕಲ್ಲೋಲ ಮಾಡಹತ್ತಿತು. ಅತ್ತ ಚಿಕ್ಕ ಮಗುವಾದ ಹುಲ್ಲಪ್ಪನ ಸ್ವರವು ಇಡೀ ಕಾಡನ್ನೇ ನಡುಗಿಸಹತ್ತಿತು ಆಗ ಪರಮೇಶ್ವರನು ಜಂಗಮನ ರೂಪವನ್ನು ತಾಳಿ ಹುಲ್ಲಪ್ಪನ ಹತ್ತಿರ ಬಂದು ಎಲೈ ಹುಡುಗನೇ ಇಂಥ ಘೋರಾರಣ್ಯದಲ್ಲಿ ಏಕಾಂಗಿಯಾಗಿ ಏಕೆ ಬಂದಿರುವೆ ಎನ್ನಲು, ಹುಡುಗನಾದ ಹುಲ್ಲಪ್ಪ ಜಂಗಮನರೂಪಿ ಪರಮೇಶ್ವರನಿಗೆ ನಮಸ್ಕರಿಸಿ ದೇವಾಧಿದೇವಾ, ನನ್ನ ಹೆತ್ತ ಮಾತಾಪಿತೃಗಳು ಯಾರು? ಎಂದು ಕೇಳಲಾಗಿ ಎಲೈ ಹುಡುಗನೇ ಇಂತಹ ಘೋರಾರಣ್ಯದಲ್ಲಿ ಮಾತಾಪಿತೃಗಳನ್ನು ಯಾರು ಹೇಳುವರು? ಊರಲ್ಲಿ ಯಾರನ್ನಾದರೂ ಕೇಳಿದರೆ ಹೇಳುವರು. ಆದರೆ ಇಲ್ಲಿ ಕಾಡುಪ್ರಾಣಿಗಳು ಬಹಳ. ಕಾರಣ ನೀನು ಸುಮ್ಮನೆ ಪ್ರಾಣವನ್ನು ಕಳೆದುಕೊಳ್ಳಬೇಡ ಎಂದು ಅಜ್ಞಾಪಿಸಿದನು.

ಆಗ ಹುಡುಗನಾದ ಹುಲ್ಲಪ್ಪನು ಕೋಪದಿಂದ ನೀವು ಕಾವಿ ಬಟ್ಟೆಯನ್ನು ಧರಿಸಿ, ಕೊರಳಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿ ಹಣೆಗೆ ಭಸ್ಮವನ್ನು ಪೋಷಿಸಿ ಈ ವೇಷದಲ್ಲಿ ಬಂದು ವೇದಾಂತವನ್ನು ಹೇಳಿದರೆ ಕೇಳುವವನಲ್ಲ. ಹುಡುಗ ಹುಲ್ಲಪ್ಪ ನನಗೆ ಕೋಪವನ್ನು ತರಿಸಿ ನಿಮ್ಮ ಪ್ರಾಣವನ್ನು ಕಳೆದುಕೊಳ್ಳಬೇಡಿ, ಎಂದು ಪರಮೇಶ್ವರನಿಗೆ ಹೇಳಿದನು. ಆಗ ಮುಕ್ಕಣ್ಣನು ಮುಂದಕ್ಕೆ ಬಂದು ತನ್ನ ನಿಜರೂಪವನ್ನು ತಾಳಿದನು. ಆಗ ಹುಡುಗ ಎದ್ದು ಹೋಗಿ ಆತನನ್ನು ತನ್ನ ಕೈಗಳಿಂದ ಅಪ್ಪಿಕೊಂಡು ಕಾಲ ಮೇಲೆ ಹತ್ತಿ ಬಿಕ್ಕಿಬಿಕ್ಕಿ ಅಳುತ್ತಿದ್ದನು. ಅಳುತ್ತಾ ಕೇಳಿದ ಹೇ ದೇವಾಧಿದೇವ ನನ್ನ ತಾಯಿ ಯಾರು? ನನ್ನ ತಂದೆ ಯಾರು? ಹೇಳು ಹೇಳದಿದ್ದರೆ ನಿನ್ನ ಕುತ್ತಿಗೆಯನ್ನು ಹಿಚುಕಿ ಬಿಡುವೆನು ಎಂದು ಬಿಗಿಯಾಗಿ ಹಿಡಿಯುವನು. ಆಗ ಪರಮೇಶ್ವರನು ಈ ಪ್ರಕಾರವಾಗಿ ಹುಲ್ಲಪ್ಪನಿಗೆ ಹೇಳುವನು. ಇರುವ ಎಂಭತ್ತೆಂಟು ಕೋಟಿ ಜೀವರಾಶಿಗಳಲ್ಲಿ ನನ್ನ ಕುತ್ತಿಗೆಯನ್ನು ಹಿಚುಕುವವರು ಯಾರು ಇಲ್ಲ. ಆದರೆ ನಿನ್ನಂತ ಸಣ್ಣ ಬಾಲಕನಿಗೆ

ಸಾಧ್ಯವೇ? ಹಾಗಾದರೆ ನಿನ್ನ ತಾಯಿ ತಂದೆ ಯಾರೆಂಬುದು ಹೇಳುವೆನು ಕೇಳು. ಹುಲ್ಲಪ್ಪ ನಿನ್ನ ತಂದೆ ತಾಯಿ ಯಾರೆಂದರೆ ಅಂಬಿಗೇರ ಮನೆಯ ಗಂಗಾದೇವಿ. ಆಕೆ ತನ್ನ ಅಣ್ಣಂದಿರಿಗೆ ಬುತ್ತಿ ಕೊಡುತ್ತಿದ್ದಳು. ಒಂದು ದಿನ ಊಟದಲ್ಲಿ ಖಾರ ಹೆಚ್ಚಾಯಿತು. ಮಧ್ಯದಲ್ಲಿಯೇ ಇದ್ದ ನೀರು ಮುಗಿದು ಹೋಯಿತು. ಆಕೆ ನೀರು ತರಲೆಂದು ಕೊಳ್ಳಕ್ಕೆ ಹೋಗಿ ಅಲ್ಲಿದ್ದ ಹೂವನ್ನು ಕಂಡು ಕಿತ್ತು ವಾಸನೆಯನ್ನು ನೋಡಿ ತನ್ನ ಸೀರೆಯ ನೀರಿಗೆಯ ಮಧ್ಯೆ ಇಟ್ಟುಕೊಂಡಳು. ಅದರಲ್ಲಿದ್ದ ಜೀವಾತ್ಮ ಒಂದು ಆಕೆಯ ಗರ್ಭ ಸೇರಿ ಗರ್ಭಿಣಿಯಾದಳು. ಇದೊಂದೂ ತಿಳಿಯದ ಅಣ್ಣಂದಿರು ತನ್ನ ತಂಗಿ ಯಾರನ್ನೋ ಮೋಹಿಸಿದ್ದಾಳೆ. ಅದರ ಪ್ರತಿಫಲ ಇದು ಎಂದು ಸಂಶಯದಿಂದ ಗರ್ಭಿಣಿಯಾದ ಅವಳನ್ನು ಬೆಂಕಿಯಲ್ಲಿ ಹಾಕಿ ಸುಟ್ಟರು. ಆಗ ನೀನು ಹುಟ್ಟಿದೆ. ನಿನ್ನನ್ನು ನಿನ್ನ ಸೋದರಮಾವ ಹೆಗ್ಗಡೆ ಪ್ರಧಾನಿಯೂ ಕಲ್ಲು ಗವಿಯಲ್ಲಿ ಹಾಕಿ ಹೋದನು. ಅದೇ ವೇಳೆಯಲ್ಲಿ ವಾಯುವಿಹಾರಕ್ಕೆ ಬಂದ ಚಂದಾಲಿಂಗ ಮಾಳಮ್ಮಗೆ ದೊರಕಿದಿ, ಎಂದು ಹೇಳಿ ಶಿವ ಅದೃಶ್ಯನಾದನು. ಹುಲ್ಲಪ್ಪ ತನ್ನ ಪೂರ್ವದ ಇತಿಹಾಸವನ್ನು ತಿಳಿದ ನಂತರ ಮನೆಗೆ ಬಂದನು. ಅತ್ತ ಸಾಕು ತಂದೆ-ತಾಯಿಯಾದರೂ ತುಂಬಾ ವಯಸ್ಸಿಗೆ ಬಂದಿದ್ದರು. ಮಕ್ಕಳಿಲ್ಲವೆಂಬ ಕೊರಗು ದಿನೇದಿನೇ ಕಾಡುತ್ತಿತ್ತು. ಅದೇ ಚಿಂತೆಯಲ್ಲಿ ತುಂಬಾ ಕಷ್ಟ ಪಡುತ್ತಿದ್ದರು. ಅಂತ ಸಂದರ್ಭದಲ್ಲಿ ಹುಲ್ಲಪ್ಪ ಸೀದಾ ಮನೆಯ ಬಾಗಿಲಲ್ಲಿ ನಿಂತು. ಅಮ್ಮಾ ಅಮ್ಮಾ ಎಂದು ಕೂಗಿದನು. ಅಮ್ಮನಿಗೆ ಚಿಂತೆಯಿಂದ ರಾತ್ರಿ ನಿದ್ದೆ ಇಲ್ಲದೆ ತಲೆ ಸುತ್ತಿದ್ದರಿಂದ ತುಂಬಾ ತ್ರಾಸ್ ಆಗಿತ್ತು. ಹಾಗೂ ಇತ್ತ ಕಡೆ ಧ್ವನಿಯು ದೂರದ ಗುಡ್ಡದ ಮೇಲಿಂದ ಕೂಗಿದ ಸ್ವರ ಆಗತಾನೆ ನಿದ್ದೆ ಹತ್ತಿತ್ತು. ಸ್ವಪ್ನಾವಸ್ಥೆಯಲ್ಲಿ ಕೇಳಿದ ಹಾಗೆ ಅನಿಸಿತು. ಆಹಾ! ಇದ್ಯಾರ ಸ್ವರ ಹಾಗಾದರೆ ನನ್ನ ಮುದ್ದು ಬಾಲಕ ಬಂದನೆ ಶಿವಾ... ಶಿವಾ... ಹರಾ... ಹರಾ.... ರಕ್ಷಿಸು ಎನ್ನ ಮಗನನ್ನು ಎಂದಳು. ಅಷ್ಟರಲಿ ಪುನಃ ಅಮ್ಮಾ ಎನ್ನುವ ಸ್ವರ ಕೇಳಿಬಂತು. ಇದೇನು ಕನಸಲ್ಲ ತಾನೆ ಎಂದು ದೀಪವನ್ನು ಹಚ್ಚಿ ನೋಡುತ್ತಾಳೆ ಎದುರಿಗೆ ಮಗ ಅಪ್ಪಾ ! ನನ್ನ ಮಗನೇ ಯಾವಾಗ ಬಂದೆಪ್ಪಾ? ಎಂದು ದುಃಖಿಸುವಳು.

ಹುಲ್ಲಪ್ಪನು ಒಳಗಡೆ ಬಂದ ಕೂಡಲೇ ಅಮ್ಮ ನನ್ನ ತಂದೆ ಎಲ್ಲಿ ಎಂದು ಕೇಳಿದಾಗ ಅದಕ್ಕೆ ತಾಯಿ ಆಗೋ ಅಲ್ಲಿ ನೋಡು ನಿನ್ನದೆ ಚಿಂತೆಯಿಂದ ನಿನ್ನನ್ನೇ ನೆನೆಯುತ್ತ ಅಲ್ಲಿ ಮಲಗಿದ್ದಾರೆ. ನೋಡು ಅರಿಬಿಯ ಮೇಲೆ ಮಲಗಿದ್ದಾರೆ ಎಂದು ತೋರಿಸಿದಳು. ಅಷ್ಟರಲ್ಲಿ ತಂದೆಯು ಎಚ್ಚರವಾಗಿ ಬಂದು ಮಗು ಎಂದು ಕೂಗಿ ಅಪ್ಪಿ ಮುದ್ದಾಡಿದರು. ಆಮೇಲೆ ಎಲ್ಲರೂ ಕೂಡಿ ನಗೆಗಡಲಲ್ಲಿ ಮುಳುಗಿದರು. ನೆರೆಮನೆಯವರು ಎದ್ದು ಹುಡುಗನಾದ ಹುಲ್ಲಪ್ಪನ ಧ್ವನಿಯನ್ನು ಕೇಳಿ 'ಪರಮ್ಮಾ' ಎಂಬ ಮುದುಕಿಯು ಎಲೋ ಹುಲ್ಲಪ್ಪ ಇಲ್ಲಿಯವರೆಗೆ ಎಲ್ಲಿಗೆ ಹೋಗಿದ್ದಿ ಎಂದು ಕೇಳುವುದರೊಳಗಾಗಿ ಊರಜನ ಕೂಡಿದರು. ಎಲ್ಲರೂ ಹುಲ್ಲಪ್ಪ ಬಂದನೆಂದು ತಿಳಿದು ಸಂತೋಷಪಡುತ್ತಿದ್ದರು. ನೋಡಿದರೆ ಅಂದಿನ ರಾತ್ರಿ-ಹಗಲಾಗಿ ಕಾಣಿಸುತ್ತಿತ್ತು. ಇದರಂತೆ

ಅವನನ್ನು ಪ್ರೀತಿಸುತ್ತಿದ್ದರು. ಕೆಲವು ಜನರು ಮಂಗಳಾರತಿಯನ್ನು ಎತ್ತುವರು. ಕೆಲವು ಜನರು ಪುಷ್ಪವನ್ನು ಏರಿಸುವರು. ಅಲ್ಲಿ ದೇವಲೋಕವೇ ನಿರ್ಮಾಣವಾದಂತೆ ಕಾಣಿಸುತ್ತಿತ್ತು. ಆದರೆ 'ಪರಮ್ಮಾ' ಎಂಬ ಮುದುಕಿಯು ಎಲೋ ಹುಲ್ಲಪ್ಪ ನೀನು ಊರಲ್ಲಿ ಇಲ್ಲದಿದ್ದರೆ ಊರೇ ತಣ್ಣಗಿತ್ತು. ಮತ್ತೆ ಬಡವರ ಕೊಡಗಳನ್ನು ಒಡೆಯಲಿಕ್ಕೆ ಬಂದಿಯ ಎಂದಳು.

ಅಷ್ಟರಲ್ಲಿ ಹುಲ್ಲಪ್ಪ ಆ ಮುದುಕಿಯ ಹತ್ತಿರ ಬಂದು ನಮಸ್ಕಾರ ಮಾಡಿದನು. ತಾಯಿ ಈಗ ನಾನು ಅಂತಹ ಕೆಲಸ ಮಾಡುವುದಿಲ್ಲ. ನನ್ನ ತಂದೆ-ತಾಯಿಯನ್ನು ವಿಚಾರಣೆ ಮಾಡುವುದಕ್ಕೆ ಬಂದಿದ್ದೇನೆ. ಆದರೆ ನೀನು ಬಹಳ ಉಪಕಾರ ಮಾಡಿದೆ. ಅದಕ್ಕೆ ಮುದುಕಿ ಬಹಳ ಒಳ್ಳೆಯದಾಯಿತು ಎಂದಳು. ಹುಲ್ಲಪ್ಪನು ಅದಾಗಲೇ ತುಂಬಾ ದೊಡ್ಡವನಾಗಿ ಅಂದರೆ ಹದಿನಾರು ವರ್ಷ ವಯಸ್ಸು ಆಗಿತ್ತು. ಹುಲ್ಲಪ್ಪ ದೊಡ್ಡ ವ್ಯಕ್ತಿಯ ಹಾಗೆ ಬಂದು ಮೂಲೆಯಲ್ಲಿದ್ದ ಮಣಿಯ ಮೇಲೆ ಹತ್ತಿ ನಿಂತು ಎಲ್ಲರೂ ಕೂಡ್ರಿ ಎಂದು ಹೇಳುವನು. ಆದರೆ ಅವನ ಮಾತು ಯಾರೂ ಗಮನಿಸಲಿಲ್ಲ. ಆವಾಗ ಆತನು ನೀವು ಎಲ್ಲರೂ ಕೂಡ್ರೂವಿರೋ ಅಥವಾ ನಾನು ನೀವು ಎಲ್ಲರೂ ಕೂಡ್ರುವಾಂಗ ಮಾಡಲೇ ಅಂತ ಗರ್ಜಿಸಿದನು. ಇದನ್ನು ಕೇಳಿದ ಪ್ರತಿಯೊಬ್ಬರೂ ನಿಬ್ಬೆರಗಾಗಿ ಚಟಪಟ ಅಂತ ಕುಳಿತರು. ಹುಲ್ಲಪ್ಪ ತನ್ನ ಬಾಯಿಂದ ನರ ಭೂತಗಳಿರಾ! ಕೇಳಿರಿ ಎಂದು ಶುರುಮಾಡಿದನು ತನ್ನ ಚರಿತ್ರೆಯನ್ನು.

ಪದ್ಯ

"ಅಂಬಿಗರ ಮನೆಯಲ್ಲಿ ಆ ನನ್ನ ತಾಯಿ ಗಂಗಾದೇವಿಯು ॥೧॥
ದಿನನಿತ್ಯ ಬುತ್ತಿ ಒಯ್ಯುತ್ತಿದ್ದಳು ಎನ್ನ ತಾಯಿ ಬೆಟ್ಟದಲ್ಲಿ
ಜನಿಸಿದವ ನಾನೇ! ಭೂಮಿಯ ಮೇಲೆ ಹುಟ್ಟಿದವನು ನಾನೇ!
ತಾಯಿಯನ್ನು ಸ್ವರ್ಗಕ್ಕೆ ಕಳಿಸಿದ ಪಾಪಿಯು ನಾನೇ!
ಕಲ್ಲು ಪಡೆಯೋ ನನಗೆ ತೊಟ್ಟಿಲು ಹುಲ್ಲು ನನಗೆ ಹಾಸಿಗೆಯು
ಹರಾ ಹರಾ ಶಿವ ಶಿವ॥ ಜೇನುತುಪ್ಪವೇ ಎನಗೆ ಹಾಲು
ಜೇನು ಹುಳವೇ ನನಗೆ ಮಂದಿ ಬಳಗವಾಗಿತ್ತು. ॥೨॥"[೨೦]

ಈ ಹಾಡನ್ನು ಅಲ್ಲಿ ನೆರೆದಿರುವ ಮಂದಿಯ ಮುಂದೆ ಹಾಡಿ ಹೇಳಿ ವಿವರಿಸುವನು. ಇದನ್ನು ಕೇಳಿ ಎಲ್ಲರೂ ತುಂಬಾ ಮರುಗುವರು. ಆತನಿಗೆ ಆಶೀರ್ವಾದ ಮಾಡಿ ತಮ್ಮ ತಮ್ಮ ಮನೆಗೆ ಮನಸ್ಸಿಲ್ಲದೆ ತುಂಬಾ ಚಿಂತೆಯಿಂದ ಎದ್ದು ಹೋದರು. ಇತ್ತ ಹುಲ್ಲೇಶ್ವರನು ಅಮ್ಮ ನಾನು ಎಲ್ಲಾ ಮರೆತಿರುವೆ ಭೂಮಿಯಲ್ಲಿ ಎಲ್ಲಾ ನಿಮಗಾಗಿಯೇ ಉಂಟುಮಾಡಿರುತ್ತೇನೆ. ಜಾತಿಗಳನ್ನು ಬೇಡುವುದು ಯೋಗ್ಯವಲ್ಲ. ಪ್ರಾಣಿಯು ಬಂದಾದರೆ ಅದನ್ನು ನೀನು ಪ್ರೀತಿಸು. ಎಲ್ಲದರ ಮೇಲೆ ದಯೇ ತೋರು. ನಾನು ಎಲ್ಲಾ ಕಡೆ ಇರುತ್ತೇನೆ. ನನ್ನನ್ನು ನೆನಸು ನಿನ್ನ

ಕಾರ್ಯ ಕೈಗೂಡುವುದು. ಅಮ್ಮ ನಾನು ಒಣಗಿದ ರೊಟ್ಟಿ ಎಷ್ಟಂತಹ ತಿನ್ನಲಿ ನಾನು ಬೇರೆ ಆಹಾರ ತರುತ್ತೇನೆ. ನನಗೆ ಒಂದು ಬಿಲ್ಲನ್ನು ಕಟ್ಟಿಕೊಡು ಎಂದು ಹಠ ಮಾಡಿದನು. ಬಿಲ್ಲು ಕಟ್ಟಿಕೊಡಲು ದಾರವಿಲ್ಲ ಮಗು ಎಂದಳು. ಆದರೂ ಮಗು ಕೇಳಲಿಲ್ಲ. ತಾಯಿ ನಮ್ರತೆಯಿಂದ ಮಗು.. ಬಿಲ್ಲು ಕಟ್ಟಿಕೊಡಲು ದಾರ ಇಲ್ಲ ಅಂತಹ ಪ್ರೀತಿಯಿಂದ ಹೇಳುತ್ತಾಳೆ. ಆದರೂ ಮಗು ತನ್ನ ಹಠ ಬಿಡಲಿಲ್ಲ. ಇಂತಹ ಅಡವಿಯಲ್ಲಿ ದಾರ ಎಲ್ಲಿ ಅಂತ ಹುಡುಕಲಿ. ನಿಮ್ಮ ತಂದೆಗೆ ಶಿವಪೂಜೆಗೆ ಕೊರತೆ ಬೇರೆ ಆಗುತ್ತೆ. ದಯವಿಟ್ಟು ಹಠ ಮಾಡಬೇಡ ಪುಟ್ಟ ಎಂದಳು. ಆದರೂ ಮಗು ತನ್ನ ಹಠ ಬಿಡದೆ ಅಮ್ಮಾ ನೀ ಉಟ್ಟಿರುವ ಸೀರೆಯ ದಡಿಯಿಂದ ಬಿಲ್ಲನ್ನು ಕಟ್ಟಿಕೊಟ್ಟರೆ ಹುಲಿ, ಸಿಂಹ, ಕರಡಿ, ಚಿರತೆ, ಜಿಂಕೆ, ಹಲವಾರು ಪ್ರಾಣಿ ಪಕ್ಷಿಗಳನ್ನು ನಿನ್ನ ಪಾದಸೇವೆ ಮಾಡಲಿಕ್ಕೆ ಅಣಿಮಾಡುವೆ. ತಾಯಿ ನನಗೆ ಬೇಗ ಬಿಲ್ಲು ಕೊಡು ಎಂದು ದುಂಬಾಲುಬಿದ್ದನು.

ತಾಯಿ ಗಂಗೆಮಾಳವ್ವ ತಾನು ಉಟ್ಟ ಪಿತಾಂಬರಿ ಸೀರೆಯನ್ನು ಹರಿದು ಬಿಲ್ಲು ಕಟ್ಟಿಕೊಟ್ಟಳು. ಹಾಗೆ ಒಂದು ಪದ ಹಾಡಿ ಕಳಿಸಿದಳು. ನಿನ್ನ ಕಾರ್ಯದಲ್ಲಿ ಸದಾ ಜಯ ಸಿಗಲಿ ಎಂದು ಹಾರೈಸಿದರು. ಆತ್ಮದ ಕಾರ್ಯಕ್ಕೆ ಪರಮಾತ್ಮನ ದಯೇ ಇರಲಿ ನಿನ್ನ ಕೆಲಸ ಸುಲಭವಾಗಿ ನೆರವೇರುವುದು. ಹೋಗಿ ಬಾ ಮಗು. ಹುಲ್ಲಪ್ಪ ಅಡವಿ, ಅಡವಿ ತಿರುಗುತ್ತಾ ಬಿಲ್ಲನ್ನು ಎದೆಗೇರಿಸಿ ತನ್ನ ಕಾರ್ಯ ಶುರು ಮಾಡುತ್ತಾ, ಕಂಡ ಪ್ರಾಣಿಗಳ ಮೇಲೆ ಬಿಲ್ಲು ಪ್ರಯೋಗ ಮಾಡುತ್ತ ಮುಂದೆ ಸಾಗುವನು. ಅಲ್ಲಿ ಹೊಳೆಯುತ್ತಿರುವ ಕಣ್ಣು ಕಂಡು ಇದು ಜಿಂಕೆ ಇರಬೇಕೆಂದುಕೊಂಡನು. ಎಲ್ಲಾ ನಿನೆ ಶಿವಾ ಎಲ್ಲಾ ನಿನ್ನದೇ ಶಿವಾ ಎಂದು ಧ್ಯಾನಿಸುತ್ತ ಬಾಣ ಹೊಡೆದನು. ಜಿಂಕೆ ಅವನ ಪಕ್ಕದಲ್ಲಿ ಬಂದು ಸತ್ತಿತು. ಅಲ್ಲಿಯೇ ಅದರ ಚರ್ಮಸುಲಿದು ಪಕ್ಕದಲ್ಲಿದ್ದ ಗುಡಿಗೆ ಹೋಗಿ ಎದುರು ನಿಂತನು. ಆಗ ಗುಡಿಯಲ್ಲಿ ಒಂದು ಮೂರ್ತಿ ಇತ್ತು. ಅದು ಶಿವಲಿಂಗಮೂರ್ತಿಯಾಗಿತ್ತು. ಬೇಟೆಯಾಡಿ ತಂದಿದ್ದ ಜಿಂಕೆಯ ಮಾಂಸದ ತುಂಡುಗಳನ್ನು ಲಿಂಗಕ್ಕೆ ಪೂಜೆ ಮಾಡಿದನು. ತಾನು ತಂದಿದ್ದ ಜಿಂಕೆಯ ಚರ್ಮವನ್ನು ನಗಾರಿ ಮಾಡಿ ವಾದ್ಯ ಘೋಷಗಳಿಂದ ಪೂಜಿಸುತ್ತಾನೆ. ಈ ವಿಷಯ ಯಾರಿಂದಲೋ ಹೇಗೋ ಈತನ ಸಾಕು ತಂದೆಯಾದ ಅಂದಚಂದಲಿಂಗನಿಗೆ ತಿಳಿಯಿತು. ಇದನ್ನು ಕೇಳಿದ್ದೇ ತಡ ಉಗ್ರಕೋಪ ತಾಳಿ ಹಲ್ಲುಗಳನ್ನು ಮಸೆಯುತ್ತ ತನ್ನ ಸೊಂಟದಲ್ಲಿದ್ದ ಖಡ್ಗವನ್ನು ಹೊರಗೆ ತೆಗೆದು ಮೇಲೆಕ್ಕೆತ್ತಿ ಎಲಾ ಮೂರ್ಖ ನನ್ನ ಮನೆಯಲ್ಲಿ ಬೆಳೆದ ಜಂಗಮನ ವೇಷದವನಾದ ನೀನು ಇಂಥ ಕೇಡು ಕಾರ್ಯವನ್ನು ಮಾಡುವೆಯಾ ಎಂದು, ನಿನ್ನ ಶಿರಚ್ಛೇದ ಮಾಡದೆ ಈ ಖಡ್ಗವನ್ನು ಒಳಗೆ ಇಡುವುದಿಲ್ಲವೆಂದು ಕಟ್ಟಪ್ಪಣೆ ಮಾಡಿಕೊಳ್ಳುವನು.

ಈ ವಿಷಯವನ್ನೆಲ್ಲ ಮಾಯಾದಿಂದ ಕೃಷ್ಣದಾತನು ನೋಡುತ್ತಿದ್ದನು. ಅಂದಚೆಂದ ತಾಳು ಕೋಪಕ್ಕೆ ಇಡಾಗಬೇಡ ಎನ್ನಲಾಗಿ, ಅಂದಚಂದಲಿಂಗನು ಕೋಪಿಯಾಗಿ ಕೈಯಲ್ಲಿ ಖಡ್ಗ ಹಿಡಿದು ಮಗನಾದ ಹುಲ್ಲಪ್ಪನನ್ನು ಕೊಲ್ಲಬೇಕೆಂದು ದೇವಸ್ಥಾನಕ್ಕೆ ಹೋದನು. ಹೊರಗೆ ನೋಡಿದರೆ

ಡೊಳ್ಳು ನಗಾರಿಗಳು ಢಣ ಢಣಗೂಡುತ್ತಿದ್ದವು. ಒಳಗೆ ನೋಡಿದರೆ ಓಂಕಾರ ಶಬ್ದ ಕೇಳಿ ಬರುತ್ತಿತ್ತು. ಖಡ್ಗವನ್ನೆತ್ತಿ ಹೊಡೆಯಬೇಕು ಎನ್ನುವಷ್ಟರಲ್ಲಿ ಹಿಂಭಾಗದಿಂದ ಪರಮೇಶ್ವರನು ಬಂದು ಅಂದ ಚಂದಲಿಂಗನೇ ಸ್ವಲ್ಪತಾಳು. ನಿನ್ನ ಮಗ ಮಾಡಿದ್ದು ಅನ್ನವನ್ನಲ್ಲ, ಕಾಡುಪ್ರಾಣಿಗಳನ್ನು ಕಡಿದು ನೈವೇದ್ಯ ಮಾಡಿದ್ದಾನೆ. ಅದು ಅವನು ತಿಳಿಯದೇ ಮಾಡಿರುವನು. ಆ ಮೇಲೆ ಅವನು ಹೆಸರಿಲ್ಲದ ಪತ್ರಿಯನ್ನು ಏರಿಸಿದ್ದಾನೆ. ಅದೇ ಮುಂದೆ ದೇಶದ ದಸರೆ ಹಬ್ಬಕ್ಕೆ ಬಳಸುವ ಬಂಗಾರದ ಪತ್ರಿಯಾಗಿ ಪರಿಣಮಿಸುತ್ತದೆ. ಹೀಗೆ ಹೇಳಿ ಪರಮಾತ್ಮ ಅದೃಶ್ಯನಾದನು. ಹುಲ್ಲಪ್ಪ ಮನೆಗೆ ಓಡಿಹೋದನು. ಅಂದ ಚಂದಲಿಂಗನು ಸುತ್ತಮುತ್ತ ನೋಡಲಾಗಿ ಪರಮೇಶ್ವರನೂ ಇದ್ದಿಲ್ಲ. ಆಗ ಹೆಗ್ಗಡೆ ಪ್ರಧಾನಿ ಈ ಹುಡುಗನಾದ ಹುಲ್ಲಪ್ಪನನ್ನು ಕೊಲ್ಲಿಸಬೇಕೆಂದು, ಒಳ ಸಂಚಾಕಿ "ಹೊಳೆಯ ದಿಕ್ಕಿನಲ್ಲಿರುವ ತ್ರಿಶೂಲವು ನಿನ್ನದು ಆ ತ್ರಿಶೂಲವನ್ನು ತರುವವರು ಯಾರು, ಆ ತ್ರಿಶೂಲವು ನಿನ್ನ ಮಗನಿಗೆ ದೊರೆಯದೆ, ಬೇರೆ ಯಾರಿಗೂ ತರಲು ಆಗುವುದಿಲ್ಲ." ಎಂದು ಹೆಗ್ಗಡೆಪ್ರಧಾನಿಯು ಚಂದಾಲಿಂಗನಿಗೆ ಹೇಳಿದನು.

ಇತ್ತ ಹುಲ್ಲಪ್ಪ ತಂದೆಯ ಉಗ್ರರೂಪವನ್ನು ನೋಡಿ ಅಳುತ್ತಾ ಮನೆಗೆ ಬರುವನು. ತಾಯಿ ಗಂಗೆಮಾಳವ್ವ ಬಾಗಿಲ ಬಳಿ ಮಗನನ್ನು ನೆನಸುತ್ತಾ ನಿಂತಿದ್ದಳು. ಮಗನು ಅಳುತ್ತಾ ಬರುವುದನ್ನು ಕಂಡು ವಿಚಾರಿಸುತ್ತಾಳೆ. ಎಷ್ಟು ವಿಚಾರಿಸಿದರು, ಹೇಳದೆ ಬಿಕ್ಕಿ ಬಿಕ್ಕಿ ಆಳುತ್ತಾನೆ. ಆಗ ತಾಯಿ, ಮಗು ನಿನಗೆ ಬೇರೆ ಬಿಲ್ಲು ಬೇಕೆ? ಎಂದು ತಾಯಿ ಕೇಳುವಳು. ಆಗ ಹುಲ್ಲಪ್ಪನು ಅಮ್ಮ ನನ್ನನ್ನು ಕೊಲ್ಲುವುದಕ್ಕಾಗಿ ಅಪ್ಪ ಬಂದಿದ್ದರು. ಆದರೆ ಒಬ್ಬ ಜಂಗಮ ವೇಷಧಾರಿಯಾದ ವ್ಯಕ್ತಿ ಬಂದು ತಡೆದರು. ಇಲ್ಲದಿದ್ದರೆ ನನ್ನ ಪ್ರಾಣ ಹೋಗುತ್ತಿತ್ತು. ಅಮ್ಮ ನಾನು ಇನ್ನು ಈ ಮನೆಯಲ್ಲಿ ಇರಲಾರೆ. ಎಲ್ಲಾದರೂ ಹೋಗಿ ಬದುಕುತ್ತೇನೆಂದು ಆಳುತ್ತಾ ಹೇಳುತ್ತಿದ್ದನು. ಆಗ ಅಂದಚೆಂದನು ಎಲೋ... ಎಲ್ರೂ ಕೇಳ್ರಿ ಈ ನಮ್ಮ ನಾಡಿನಲ್ಲಿ ಒಂದು ತ್ರಿಶೂಲವು ಇದೆ ಅದನ್ನು ತರಲು ಯಾರಿಗೂ ಸಾಧ್ಯವಿಲ್ಲ. ಅದನ್ನು ತರುವವರು ಯಾರಾದರೂ ಇದ್ದೀರಾ. ಆಕಸ್ಮಾತ್ ಇದ್ದಿದ್ದರೆ ನನ್ನ ಮುಂದೆ ಬಂದು ನಿಲ್ಲಿ ಎಂದು ಅಜ್ಞಾಪಿಸಿದನು. ಆಗ ಹೆಗ್ಗಡೆಪ್ರಧಾನಿ ನಿಮ್ಮ ಪುತ್ರನೇ ಹೊರತು ಬೇರೆ ಯಾರಿಗೂ ತರಲು ಆಗದು ಸ್ವಾಮಿ ಎಂದು ಅಂದನು. ಹಾಗಾದರೆ ನನ್ನ ಮಗನನ್ನು ಕರೆದು ತನ್ನಿ ಎಂದು ಆಜ್ಞಾಪಿಸಿದನು. ತಕ್ಷಣ ಹೆಗ್ಗಡೆಪ್ರಧಾನಿ ಹುಲ್ಲಪ್ಪನ ಬಳಿ ಹೋಗಿ ನಿಮ್ಮ ತಂದೆ ನಿನ್ನನ್ನು ಕರೆಯುತ್ತಿದ್ದಾರೆ, ಬಾ ಎಂದನು. ಆಗ ಹುಲ್ಲಪ್ಪ ತಂದೆಯ ಬಳಿಗೆ ಬಂದು ತಂದೆ, ನನ್ನನ್ನು ಕರೆಸಿದ ಕಾರಣವೇನು? ಎಂದು ಕೇಳಲಾಗಿ, ಈ ನಾಡಿನ ಆ ಸಮುದ್ರ ದಿಕ್ಕಿನಲ್ಲಿ ತ್ರಿಶೂಲವೊಂದಿದೆ. ಆದು ನಮ್ಮಲ್ಲಿಗೆ ಬರುತ್ತೇನೆ ಎನ್ನುತ್ತಿದೆ. ಅದನ್ನ ತರುವೆಯಾ? ಆಗಲಿ ತಂದೆ ನಿನ್ನ ಆಶೀರ್ವಾದ ಒಂದಿದ್ದರೆ ಅತಳ, ವಿತಳ, ರಸತಳ, ಪಾತಾಳ, ಲೋಕದಲ್ಲಿದ್ದರೂ ಕೂಡ ತಂದು ಒಪ್ಪಿಸುತ್ತೇನೆ. ಮಗು ನಿನ್ನ ಕಾರ್ಯಕ್ಕೆ ಜಯ ಸಿಗಲೆಂದು ಆಶೀರ್ವದಿಸಿದನು.

ತಾಯಿಯಾದ ಗಂಗೆಮಾಳವ್ವನ ಬಳಿ ಬಂದು ಅಮ್ಮಾ ಹೊಳೆಯ ದಿಕ್ಕಿನಲ್ಲಿ ಇರುವ ತ್ರಿಶೂಲ ತೆಗೆದುಕೊಂಡು ಬಾ ಎಂದು ಹೇಳಿರುವರಮ್ಮ. ನಾನು ಹೋಗಿ ಬರುವೆನು ಆಶೀರ್ವಾದ ಮಾಡು ತಾಯಿ ಎಂದು ಕೇಳಲಾಗಿ, ತಾಯಿಯು ಇದು ಎಂಥ ಘೋರ ಆಜ್ಞೆ ಮಗನೇ ನೀನು ತಿರುಗಿ ಬರಲೇಬಾರದೆಂದು ನಿಮ್ಮ ತಂದೆಯ ಆಸೆ ಇರಬಹುದು. ಅದಕ್ಕೆ ಇಂತಹ ಆಜ್ಞೆ ಮಾಡಿರುತ್ತಾರೆ. ನೀನು ಹೋಗಬೇಡ ಮಗು ನೀನು ಹೋದರೆ ತಿರುಗಿ ಬರಲಾರೆ ಮಗನೆ ದಯವಿಟ್ಟು ನನ್ನ ಮಾತು ಕೇಳು. ನೀನು ಹೋಗ ಬೇಡ. ಅಮ್ಮಾ, ತಂದೆಯ ಆಜ್ಞೆಯನ್ನು ಎಂದೂ ಮೀರಲಾರೆ. ತಾಯಿ, ದಯವಿಟ್ಟು ನೀನು ಆಶೀರ್ವಾದ ಮಾಡುತಾಯಿ. ಮಗು, ತ್ರಿಶೂಲ ತರುವುದು ನೀ ತಿಳಿದುಕೊಂಡಿರುವಷ್ಟು ಸುಲಭವಲ್ಲ. ಮಗನೇ ಏಕೆಂದರೆ ಹಲವಾರು ಸಮುದ್ರಗಳನ್ನು ದಾಟಿ ಹಾಲುಸಮುದ್ರ, ಕೀಲುಸಮುದ್ರ, ದಾಟಿ ಏಳುಕೋಟಿ ರಾಕ್ಷಸರನ್ನು ಸದೆಬಡಿದು, ಹುತ್ತದಡಿಯಲ್ಲಿ ಇರುವಂತಹ ತ್ರಿಶೂಲವನ್ನು ತರಬೇಕಾಗುತ್ತದೆ. ಮಗನೇ ನಿನ್ನಿಂದ ಸಾಧ್ಯವಾಗದು. ಅದಕ್ಕಾಗಿ ತಾಯಿಯ ಕರುಳು ಬೇಡವೆನ್ನುತ್ತಿದೆ.. ಬೇಡ ಮಗನೇ ಅಮ್ಮಾ, ನೀನು ಬೇಗನೆ ಆಶೀರ್ವಾದ ಮಾಡು. ತಾಯಿ ನಾನು ಸತ್ತರೂ ಚಿಂತೆಯಿಲ್ಲ ಹೋಗಿಬರುವೆ. ಆಗಲಿ ನನ್ನ ಆಶೀರ್ವಾದ ಸದಾ ನಿನಗೆ ಇರುತ್ತೆ ಹೋಗಿ ಬಾ ಮಗು.

ತಕ್ಷಣ ಹುಲ್ಲಪ್ಪ ಹಲವಾರು ಸಮುದ್ರ ದಾಟಿ ಬಂದನು. ಹೇ ಮಾತೆ ಕಡಲ ದೇವಿಯೇ ದಾರಿ ತೋರಮ್ಮ ಎನ್ನ ಚಿಕ್ಕ ಬಾಲಕನಿಗೆ ಹೇ ದೇವಿ ಜಲಜಳೆ ನನ್ನ ತಾಯಿ ಜಾರಣಿಯಿಂದ ನನ್ನ ಹಡೆದಿದ್ದರೆ ನೀನು ದಾರಿ ತೋರಬೇಡ. ನನ್ನ ತಾಯಿ ಒಳ್ಳೆಯ ಮನಸ್ಸಿನಿಂದ ನನ್ನನ್ನು ಹಡೆದಿದ್ದರೆ ನೀನು ತಕ್ಷಣದಾರಿ ತೋರು. ಅಷ್ಟು ಅಂದ ತಕ್ಷಣವೇ ಸಮುದ್ರ ಎರಡು ಭಾಗವಾಗಿ ನಡುವೆ ದಾರಿಯಾಗಿ ಕಾಣಿಸಿತು. ಆ ದಾರಿಗುಂಟ ಹಾಲು ಸಮುದ್ರಕ್ಕೆ ಹೋದನು. ಹಾಲಸಮುದ್ರ ದಂಡೆಯಲ್ಲಿ ಕುಳಿತು ಸುತ್ತಮುತ್ತಲು ನೋಡುತ್ತಿರಲು ಅಲ್ಲಿಯೇ ಸಮೀಪದಲ್ಲಿದ್ದ ಏಳು ಕೋಟಿ ರಾಕ್ಷಸರು ಇವನನ್ನು ದುರುಗುಟ್ಟಿ ನೋಡಿ, 'ನಮಗೆ ಏಳೆಂಟು ದಿವಸಗಳಿಂದ ಆಹಾರ ಇದ್ದಿಲ್ಲ, ಈಗ ನಮಗೆ ಈ ಬಾಲಕನೇ ಆಹಾರ' ಎಂದು ಆನಂದದಿಂದ ಏಳು ಕೋಟಿ ರಾಕ್ಷಸರು ಕುಣಿದಾಡುತ್ತಿದ್ದರು. ಆಗ ಹುಲ್ಲಪ್ಪನು ಎಲೈ! ರಾಕ್ಷಸರೆ ನೀವೇನೂ ಚಿಂತೆ ಮಾಡಬೇಡ್ರಿ, ನಾನು ನಿಮ್ಮ ಹಸಿವನ್ನು ಹಿಂಗಿಸುತ್ತೇನೆ ಅಂತ ಹೇಳಿ, ತನ್ನ ತೊಡೆಯನ್ನು ಕೊಯ್ದು ಹಾಲು ಸಮುದ್ರಕ್ಕೆ ಕೂಡಿಸಿದನು. ಇಡೀ ಹಾಲ ಸಮುದ್ರ ರಕ್ತಮಯವಾಗಿ ತೋರುತ್ತಿತ್ತು. ಏಳು ಕೋಟಿ ರಾಕ್ಷಸರು ರಕ್ತಮಯವಾದ ನೀರನ್ನು ಕುಡಿದು ಸಾಕಷ್ಟು ಹೊಟ್ಟೆ ತುಂಬಿಸಿಕೊಂಡರು. ಎಲೈ! ನರಮನುಷ್ಯನೇ ಎಲ್ಲರಿಗೂ ಆಹಾರವನ್ನು ಕೊಟ್ಟಿರುವೆ ನಿನ್ನ ಉಪಕಾರ ಹೇಗೆ ತೀರಿಸೋಣ ಹೇಳು ಎಂದವು. ಆಗ ಹುಲ್ಲಪ್ಪನು ಘಟ್ಟಿ ಧೈರ್ಯ ಮಾಡಿ ಎಲೈ! ರಾಕ್ಷಸಗಳಿರಾ ನಾನು ಬೇಡಿದ ವರಗಳನ್ನು ಕೊಡುವಿರಾ? ಹಾಗಾದರೆ ಕೇಳ್ರಿ ನಮ್ಮ ತಂದೆ ನಿಮ್ಮಲ್ಲಿರುವ ತ್ರಿಶೂಲವನ್ನು ತೆಗೆದುಕೊಂಡು ಬಾ ಎಂದಿದ್ದಾನೆ, ಅದನ್ನು ತಂದು ಕೊಡುತೀರಾ.

ಆಗ ರಾಕ್ಷಸರು ಎಲೈ ನರಮನುಷ್ಯನೇ ಎದುರಿಗೆ ಕಾಣುವ ಹುತ್ತದಡಿಯಲ್ಲಿ ನೀನು ಬೇಡಿದ ವಸ್ತುವಿರುವುದು. ಅದರ ಅಲಗಿನ ಮೇಲೆ ಕಂಚಿಬೀರನೆನ್ನುವವನು ಘೋರ ತಪಸ್ಸು ಮಾಡುತ್ತಿರುವನು ಎಂದು ಹೇಳಿದವು. ಹುಲ್ಲಪ್ಪನು ಹುತ್ತದಡಿಯಲ್ಲಿ ಹೋಗಿ ಆ ತ್ರಿಶೂಲವನ್ನು ಹಿಡಿದು ಜಗ್ಗಾಡಲಿಕ್ಕೆ ಹತ್ತಿದನು. ಅದು ಬೇಗನೆ ಬರದ ಕಾರಣ ಏಳು ಏಳು ಅನ್ನಲಿಕ್ಕೆ ಪ್ರಾರಂಭಿಸಿದನು. ಏಳು ಏಳು ಎನ್ನುತ್ತ ಏಳು ಕೋಟಿಗೆ ಎಂಬ ಶಬ್ಧವಾಯಿತು. ಆಗ ಕಂಚಿಬೀರನು ಆ ಅಲಗಿನ ಮೇಲೆ ಕುಳಿತು ಎಲೈ ಹುಲ್ಲಪ್ಪನೇ ನನ್ನ ತಪಸ್ಸಿಗೆ ಹಾನಿಯನ್ನು ಮಾಡಿದಿ ನಾನು ಇನ್ನು ಎಲ್ಲಿಗೆ ಹೋಗಲಿ. ಹುಲ್ಲಪ್ಪನು, ತನ್ನ ಹೇಳಿಕೆಯನ್ನು ಹೇಳುತ್ತಾ ಏಳು ಕೋಟಿ ಏಳು ಕೋಟಿಗೆ ಎಂಬ ಶಬ್ಧಮಾಡುತ್ತಾ ಕೂಗುತ್ತಾ ನೀನು ಮುಂದೆ ಮುಂದೆ ಹೋಗು, ನಾನು ನಿನ್ನ ಹಿಂದೆ ಹಿಂದೆ ಈ ತ್ರಿಶೂಲ ಹೊತ್ತುಕೊಂಡು ಬರುತ್ತೇನೆ ಎಂದನು. ಆಗ ಕಂಚಿಬೀರನು ಏಳುಕೋಟಿ ಏಳುಕೋಟಿ ಎಂದು ನುಡಿಯುತ್ತಾ ಹೊರಟಿದ್ದನು.

ಇತ್ತ ಹುಲ್ಲಪ್ಪನ ತಾಯಿಯಾದ ಗಂಗೆಮಾಳಮ್ಮ ಮಗ ಬರಲಿಲ್ಲವೆಂದು ದುಃಖಿಸುತ್ತಿದ್ದಳು. ಕಂಚಿಬೀರನ ಧ್ವನಿ ಕೇಳಿ ಧಗ್ಗನೆ ಎದ್ದು ಸುತ್ತಮುತ್ತ ಹೊಳೆಯ ದಿಕ್ಕಿನಲ್ಲಿ ನೋಡಿದಳು. ಆಗ ದೂರದಲ್ಲಿ ಹುಲ್ಲಪ್ಪ ತ್ರಿಶೂಲ ಹೊತ್ತುಕೊಂಡು ಬರುವುದನ್ನು ಹಾಗೂ ಕಂಚಿಬೀರನು ಏಳುಕೋಟಿ ಎಂದು ಕೂಗುತ್ತಾ ಬರುವುದನ್ನು ನೋಡಿ, ತುಂಬಾ ಸಂತೋಷಪಟ್ಟಳು. ತಾಯಿಗೆ ಎಲ್ಲಿಲ್ಲದ ಹರ್ಷ ಉಕ್ಕಿ ಬಂದಿತ್ತು. ಅದೇ ಸಂತೋಷದಲ್ಲಿ ಅರವತ್ತು ಖಂಡಗದ ಖಣಕದ ಆರತಿಯನ್ನು ತೆಗೆದುಕೊಂಡು ಆರತಿಯನ್ನು ಮಾಡಿ ಮಗನಿಗೆ ಮಂಗಳಾರತಿಯನ್ನು ಎತ್ತಿದಳು. ಮನೆಯೊಳಗೆ ಕರೆದುಕೊಂಡು ಬಂದಳು. ಮಗು ಊಟಮಾಡು ಎಷ್ಟು ದಿನಗಳಾದವೋ ಏನೋ, ನಿನ್ನ ಮುಖವು ತುಂಬಾ ಬಾಡಿ ಹೋಗಿದೆ. ನಿನಗೆ ಏನು ಊಟ ನೀಡಲಿ ಬೇಗ ಹೇಳು ಮಗನೆ ಎಂದಾಗ, ಅಮ್ಮ ನಿನಗೆ ಏನು ಇಷ್ಟವೋ ಅದನ್ನು ಕೊಡುತಾಯಿ. ನೀ ಏನು ತಿನ್ನಲು ಕೊಟ್ಟರು ಅದು ಅಮೃತವೇ ತಾಯಿ. ನೀನು ಏನು ಕೊಟ್ಟರು ಅದು ತುಂಬಾ ರುಚಿಯಾಗಿರುತ್ತದೆ. ಹೆತ್ತ ತಾಯಿಯು ನೀನೆ, ನನ್ನನ್ನು ಸಂರಕ್ಷಣೆ ಮಾಡಿದ ತಾಯಿಯು ನೀನೆ, ಒಂಬತ್ತು ತಿಂಗಳು ಹೊತ್ತು ಹೆತ್ತ ತಾಯಿಗಿಂತ ಹೆಚ್ಚು ಸಂರಕ್ಷಣೆ ಮಾಡಿದ ತಾಯಿ ನೀನು. ನಿನ್ನನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ ತಾಯಿ, ಇದು ಆ ಪರಮೇಶ್ವರ ಒದಗಿಸಿಕೊಟ್ಟ ನನ್ನ ಭಾಗ್ಯ ತಾಯಿ ಎಂದನು. ಅದಕ್ಕೆ ಮಾಳಮ್ಮನು ಹೌದಪ್ಪ ಮಗು ಮಕ್ಕಳಿಲ್ಲದೆ ಬಂಜೆಯಾಗಿ ಇದ್ದ ನನಗೆ ಆ ಪರಮಾತ್ಮನು ನಿನ್ನನ್ನು ಕರುಣಿಸಿದನು. ಇಲ್ಲದಿದ್ದರೆ ಸದಾ ಬಂಜೆಯಾಗಿ ಲೋಕದ ಕಣ್ಣಿಗೆ, ಹೀನ ನುಡಿಗಳೊಂದಿಗೆ ಬದುಕಬೇಕಿತ್ತು. ಆ ಪರಮಾತ್ಮ ಅದನ್ನು ತಪ್ಪಿಸಿ ನಿನ್ನನ್ನು ದೊರಕಿಸಿಕೊಟ್ಟು ಬಹಳ ಪುಣ್ಯ ಕಟ್ಟಿಕೊಂಡಾನಪ್ಪ. ಆಯಿತು ಮಗು ನಿನಗೆ ಬೇಳೆ ರೊಟ್ಟಿ ಬೇಕೆ, ಮೊದಲು ನಿಮ್ಮ ತಂದೆಯ ಆಜ್ಞೆಯ ಪ್ರಕಾರ ತಂದ ತ್ರಿಶೂಲವನ್ನು ಅವರ ಕೈಯಲ್ಲಿ ಕೊಟ್ಟು ಬಾ. ನಿಮ್ಮ ತಂದೆ ನಿನಗೆ ತಿನ್ನಲು ಏನು ಬೇಕು ಅದನ್ನು ಕೊಡು ಅಂತ ಹೇಳಿರುವನು. ನಿನಗೆ ಏನು

ಕೊಡಲಿ ಹೇಳು ಹುಲ್ಲಪ್ಪಾ! ಏನು ಬೇಡುತ್ತಿ ಬೇಡು ಈ ಸಂದರ್ಭದಲ್ಲಿ ಮಗನಾದ ಹುಲ್ಲಪ್ಪನು ಅಮ್ಮ ನಿನ್ನ ಇಚ್ಛೆ ಏನಿದೆಯೋ ಅದನ್ನು ನೀಡುತಾಯಿ, ಆಗ ಗಂಗೆಮಾಳಮ್ಮ ಕಾಮಧೇನುವಿನ ಕೆನೆ ಹಚ್ಚಿಕೊಟ್ಟಳು. ಆಗ ಹುಲ್ಲಪ್ಪ ಸಂಭ್ರಮದಿಂದ ಬಹಳ ಹರುಷದಿಂದ ತಿಂದು ಅಮ್ಮಾ ಇದು ಯಾರ ಮನೆಯ ಕೆನೆ ಎಷ್ಟು ರುಚಿಯಾಗಿದೆಯಲ್ಲಾ? ಹೇಳು ತಾಯಿ ಎಂದನು. ಮಗು ನಿನ್ನ ತಂದೆಯ ಭಕ್ತಿಗೆ ಮೆಚ್ಚಿ ಪರಮೇಶ್ವರನು ಕೊಟ್ಟ ಕಾಮಧೇನು ಕಲ್ಪವೃಕ್ಷ. ಆ... ಹಾ... ಹಾ... ಅಮ್ಮಾ ಕಾಮಧೇನುವಿನ ಕೆನೆ ಇಷ್ಟು ರುಚಿ ಇರಬೇಕಾದರೆ ಅದರ ಮಾಂಸ ಎಷ್ಟು ರುಚಿ ಇರಬಹುದು ಎಂದು ಮನಸ್ಸಿನಲ್ಲಿ ಚಿಂತಿಸಿದ.

೩.೬.೨. ಹುಲ್ಲಪ್ಪನು ಕಾಮಧೇನುವಿನ ಶಿರಚ್ಛೇದ ಮಾಡಿದ್ದು : (Hullappa was Beeheaded by Kamadhenu)

ತಾಯಿ ನೀಡಿದ ಕಾಮಧೇನುವಿನ ಕೆನೆಯಿಂದ ರುಚಿಗೊಂಡು ಆ ಗೋವಿನ ಮಾಂಸ ಇನ್ನೆಷ್ಟು ರುಚಿ ಇರಬಹುದೆಂದು ಕೊಲ್ಲಲು ನಿರ್ಧರಿಸಿದ. ಎಲೈ! ಕಾಮಧೇನು ನಿನ್ನ ಮರಣ ಸಮೀಪಿಸಿತು ಎಂದು ಆ ಕಾಮಧೇನುವನ್ನು ಹೊಡೆದುಕೊಂಡು ಹಾಗೂ ಕಂಚಿಬೀರನನ್ನು ಕರೆದುಕೊಂಡು ಕಪಿಲ ಮುನೇಶ್ವರ ಕೊಳ್ಳಕ್ಕೆ ಹೋದನು. ಕಪಿಲಮುನೇಶ್ವರ ಕೊಳ್ಳದಲ್ಲಿ ಆಕಳನ್ನು ಕೊಲೆ ಮಾಡಬೇಕೆಂದು ಖಡ್ಗವನ್ನು ಎತ್ತಿದನು. ಇದನ್ನೆಲ್ಲ ನೋಡುತ್ತಿದ್ದ ಕಂಚಿಬೀರನು ಹೇ! ದೇವಾಧಿದೇವಾ ಆಕಳನ್ನು ಕೊಲ್ಲಬೇಡ. ಇದನ್ನು ಕೊಂದು ಪಾಪಿಯಾಗ ಬೇಡ. ಲೋಕದಲ್ಲಿ ಕೊಲೆಗಾರ ಎಂಬ ನಾಮ ಪಡೆಯಬೇಡ. ದಯವಿಟ್ಟು ಕೊಲ್ಲಬೇಡ ಎಂದು ಅಂಗಲಾಚಿ ಬೇಡಿಕೊಂಡನು.

ಪದ್ಯ

"ಆಕಳ ಕೊಲ್ಲಬೇಡಯ್ಯ ನೀ ದೇವಯ್ಯ ॥ಪಲ್ಲವಿ॥
ಆಕಳದಿಂದಲೇ ಆರೋಗ್ಯ! ಆಕಳದಿಂದಲೇ ಸೌಭಾಗ್ಯ!
ಆಕಳ ಕೊಲ್ಲಬೇಡಯ್ಯ ಹೇ ದೇವಾಧಿದೇವಾ
ಆಕಳದಿಂದಲೇ ನಮ್ಮ ಎತ್ತು! ಆಕಳದಿಂದಲೇ ನಮ್ಮ ಹೋರಿ!
ಆಕಳದಿಂದಲೇ ನಮ್ಮ ಬಾಳು! ಆಕಳದಿಂದಲೇ ನಮ್ಮ ಜೀವಾ!
ಆಕಳ ಕೊಲ್ಲಬೇಡಯ್ಯ ಹೇ ದೇವಾಧಿದೇವಾ ॥೧॥
ಆಕಳ ಹೊಟ್ಟೆಯಲ್ಲಿ ಅಡಗಿಹರು ಕೋಟಿ ಕೋಟಿ ದೇವರುಗಳು
ಆಕಳ ಹೊಟ್ಟೆಯಲ್ಲಿ ಅಡಗಿಹರು ಕೋಟಿ ಕೋಟಿ ಪವಾಡದವರು
ಆಕಳ ಕೊಲ್ಲ ಬೇಡಯ್ಯ ಹೇ ದೇವಾಧಿದೇವಾ ॥೨॥

ಆಕಳದಿಂದಲೇ ಹಾಲು! ಆಕಳದಿಂದಲೇ ಮೊಸರು!
ಆಕಳದಿಂದಲೇ ಬೆಣ್ಣೆ! ಆಕಳದಿಂದಲೇ ತುಪ್ಪಾ!!
ಆಕಳ ಕೊಲ್ಲಬೇಡಯ್ಯ ಹೇ ದೇವಾಧಿದೇವಾ ॥೩॥

ಆಕಳ ಹಾಲು ಬೇಕು ಅಭಿಷೇಕಕ್ಕೆ! ಆಕಳ ಹಾಲು ಬೇಕು ಜನಿಸಿದ ಕೂಸಿಗೆ
ಆಕಳ ಹಾಲು ಬೇಕು ವನೌಷಧಿಗೆ! ಆಕಳ ಹಾಲು ಬೇಕು ವಿಭೂತಿಗೆ
ಆಕಳ ಕೊಲ್ಲಬೇಡ ಹೇ ದೇವಾಧಿದೇವಾ ॥೪॥

ಆಕಳ ಮನಸ್ಸು ತಿಳಿದುಕೋ! ಆಕಳ ಸ್ವಭಾವ ತಿಳಿದುಕೋ!
ಆಕಳ ಕೊಲ್ಲಲು ಹೋಗಬೇಡ! ಆಕಳ ಕೊಲೆಮಾಡಿ ಹೊಲೆ ಹುಲ್ಲನಾಗಿ ಬಾಳಬೇಡ!
ಆಕಳ ಕೊಲ್ಲಬೇಡ ಹೇ ದೇವಾಧಿದೇವಾ॥೫॥"[೨೧]

ಎಷ್ಟೇ ಪರಿಪರಿಯಿಂದ ದೈನ್ಯತೆಯಿಂದ ಕೇಳಿಕೊಂಡರೂ ಹುಲ್ಲಪ್ಪ ತನ್ನ ಹಠ ಬಿಡಲಿಲ್ಲ. ಪರಮಾತ್ಮನ ಧ್ಯಾನ ಮಾಡಿ ಖಡ್ಗವನ್ನೆತ್ತಿ ತುಂಡರಿಸಿ ಪಾಲು ಮಾಡಿದನು. ಇದನ್ನೆಲ್ಲ ನೋಡುತ್ತಿದ್ದ ಅವನ ಮಾವ ಮಸಣಯ್ಯ ಗೋಮಾತೆಯನ್ನು ಕೊಲೆಮಾಡಿದ ಪಾಪಿ ಯಾರು? ಅದನ್ನು ಹೇಗೆ ಕೊಲೆ ಮಾಡಿದ್ದೀಯೋ ಹಾಗೆಯೇ ನಿನ್ನ ಕೊಲೆ ಮಾಡುವೆ. ಎನ್ನುವಷ್ಟರಲ್ಲಿಯೇ ಹುಲ್ಲಪ್ಪನು ಸಿಟ್ಟಿಗೆದ್ದು, ನನ್ನನ್ನು ಕೊಲ್ಲುವ ಸಮಸ್ಯೆಯು ನಿಮ್ಮಲ್ಲಿರುವುದೆ. ಹಾಗೆಂದವನೆ ಅವನಿಗಿಂತ ಮೊದಲೇ ಹುಲ್ಲಪ್ಪನು ಸಿಟ್ಟಿಗೆದ್ದು ತನ್ನ ನಡುವಿನಲ್ಲಿದ್ದ ಕವಚವನ್ನು ತೆಗೆದು ಕೊಲ್ಲಬೇಕೆಂದು ಹೋದನು. ಮಸಣಯ್ಯನು ವಿಚಾರಿಸಿದ ಇವನು ನನ್ನನ್ನು ಕೊಲ್ಲದೆ ಬಿಡಲಾರ ಎಂದು ತಿಳಿದು. ಹೇಗೆ ಮಾಡಲೆಂದು, ನನ್ನನ್ನು ಕೊಲ್ಲಬೇಡಪ್ಪ ನನಗೂ ಒಂದಿಷ್ಟು ಮಾಂಸ ಕೊಡು ಎಂದು ಬೇಡಿದನು. ಹಾಗಾದರೆ ಬಾ ನಿನಗೂ ಸರಿಯಾದ ಪಾಲು ಕೊಡುತ್ತೇನೆ. ಎಲ್ಲರೂ ಕೂಡಿ ಒಂದು ಗಿಡದ ನೆರಳಲ್ಲಿ ಕುಳಿತರು. ಹುಲ್ಲಪ್ಪನು ಅವರಿಗೆ ಒಂದು ಚಿಕ್ಕ ಕಥೆಯನ್ನು ಹೇಳಿರಿ ಎಂದನು. ಅವರು ನಮಗೆ ಬರುವುದಿಲ್ಲ ನೀನೇ ಹೇಳಿಬಿಡಪ್ಪಾ ಎಂದರು.

ಹುಲ್ಲಪ್ಪ ಕಥೆ ಹೇಳಲು ಪ್ರಾರಂಭ ಮಾಡಿದ. ಅಂಬಿಗೇರ ಮನೆಯಲ್ಲಿ ಬೆಳೆದ ನನ್ನ ತಾಯಿಯ ಹೊಟ್ಟೆಯಲ್ಲಿ ಜನಿಸಿದವನು ನಾನು. ನನ್ನ ತಾಯಿಯನ್ನು ಸ್ವರ್ಗಕ್ಕೆ ಕಳಿಸಿದ ಪಾಪಿ ನಾನು. ಆಗ ಕಲ್ಲು ಪಡೆಯು ನನಗೆ ತೊಟ್ಟಿಲು, ಹುಲ್ಲು ನನಗೆ ಹಾಸಿಗೆ, ಜೇನು ತುಪ್ಪವೇ ನನಗೆ ಹಾಲು, ಜೇನು ಹುಳುವೇ ನನಗೆ ಆಗ ಬಂಧು-ಬಳಗ. ಇದನ್ನೆಲ್ಲ ತಿಳಿದವರು ನನಗೆ ಹುಲ್ಲಲ್ಲಿ ಹುಟ್ಟಿದವ ಹುಲ್ಲಪ್ಪಂತ ನಾಮಕರಣ ಮಾಡಿದರು. ಅಷ್ಟರಲ್ಲಿ ಅವರ ಸೋದರ ಮಾವನಾದ ಮಸಣಯ್ಯನ ಕಣ್ಣಲ್ಲಿ ನೀರು ದಳದಳ ಇಳಿದವು. ಹಾ! ನಿನ್ನ ಕಣ್ಣಲ್ಲಿ ನೀರು ಏಕೆ ಬಂದವು? ನನಗೆ ಬೇಗ ಹೇಳು, ಆಗ ಮಸಣಯ್ಯ ನಾನೇ ನಿನ್ನ ಸೋದರಮಾವ

ಅನ್ನುವಷ್ಟೇ ತಡ ಹುಲ್ಲಪ್ಪ ರೊಚ್ಚಿಗೆದ್ದು ಎಲೈ! ಪಾಪಿಗಳೇ ನನ್ನ ತಾಯಿಯಾದ ಗಂಗಾಮಾತೆಯನ್ನು ಹೇಗೆ ಕೊಲ್ಲಿದಿರಿ ಹಾಗೆಯೇ ನಿನ್ನನ್ನು ಕೊಲ್ಲದೆ ಬಿಡಲಾರೆನು? ಹುಲ್ಲಪ್ಪ ತನ್ನ ಕವಚದಲ್ಲಿದ್ದ ಖಡ್ಗವನ್ನು ಹಿರಿದು ಜೋರಾಗಿ ಚೀರಿ ನನ್ನ ತಾಯಿಯನ್ನು ಅಗ್ನಿಗೆ ಆಹುತಿ ಕೊಟ್ಟ ಮೂರ್ಖರೇ, ಅವಳನ್ನು ಕೊಂದದ್ದು ಸಾಲಲಿಲ್ಲವೇ ನನ್ನನ್ನು ಕೂಡ ಕೊಲ್ಲಲು ಬಂದಿರುವೆಯಾ? ಇಕೋ ನೋಡು ಎಂದು ಖಡ್ಗವನ್ನು ಕೈಯಲ್ಲಿಡಿದು ಪರ್ವತದ ಹಾಗೆ ಎದೆ ಉಬ್ಬಿಸಿ ಒಮ್ಮೆ ಮೇಲಕ್ಕೆ ಹಾರಿ ಕೆಳಗೆ ಬೀಳುವನು. ಅವನು ಕೆಳಗೆ ಬಿದ್ದ ರಭಸಕ್ಕೆ, ಆರ್ಭಟಕ್ಕೆ ಭೂಮಂಡಲವೆ ನಡುಗಿದ ಹಾಗೆ ಆಯಿತು. ಜಲಚರ ಪ್ರಾಣಿಗಳು ದಿಕ್ಕೆಟ್ಟು ಓಡಿ ಹೋದ ಹಾಗೆ ಆಯಿತು. ಅಷ್ಟರೊಳಗೆ ಮಸಣಯ್ಯ ಅವನಿಂದ ತಪ್ಪಿಸಿಕೊಂಡು ಅಂದಚೆಂದಲಿಂಗನ ಹತ್ತಿರ ಬಂದನು.

ಮಸಣಯ್ಯ ಗಾಬರಿಯಾಗಿ ಬರುವುದನ್ನು ಕಂಡು ಯಾಕೋ ಮಸಣಯ್ಯ ಇಷ್ಟೊಂದು ತರಾತುರಿಯಲ್ಲಿ ಬರುತ್ತಿ ಏನು ಕೆಲಸ ಎಂದನು. ಅಂದ, ಏನಂತ ನಿನ್ನ ಮುಂದೆ ಹೇಳಲಿ, ಅಲ್ಲಿ ನಡೆದ ವಿಷಯವನ್ನೆಲ್ಲ ವಿವರವಾಗಿ ಅಂದನ ಮುಂದೆ ತಿಳಿಸಿದ. ಅಂದಚಂದ ಮತ್ತಷ್ಟು ಕೋಪತಾಳಿ ಎಷ್ಟೋ ದಿನ ಪರಮಾತ್ಮನ ಕುರಿತು ತಪಸ್ಸು ಮಾಡಿದ್ದಕ್ಕೆ ಪ್ರೀತಿಯಿಂದ ಪರಮಾತ್ಮ ಆ ಕಾಮಧೇನುವನ್ನು ನನಗೆ ಅರ್ಪಿಸಿದ್ದ. ಆ ಕಾಮಧೇನು ಇವನಿಗೇನು ಮಾಡಿತ್ತು. ಅದನ್ನು ಕೊಲ್ಲುವಂತಹ ದುರ್ಬುದ್ಧಿ ಏಕೆ ಬಂದಿರಬಹುದು. ಈ ಹುಲ್ಲನಿಗೆ ಕೊಲೆ ಮಾಡಲು ಮನಸ್ಸಾದರೂ ಹೇಗೆ ಬಂದಿತು ಏನೋ, ಸಿಟ್ಟಿಗೆದ್ದು ತನ್ನಲ್ಲಿರುವ ಖಡ್ಗ ಹಾಗೂ ಕಠಾರಿಗಳನ್ನು ಬೆನ್ನಿನಲ್ಲಿ ಇಟ್ಟುಕೊಂಡು ಬತ್ತಳಿಕೆ ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಉಗ್ರ ಕೋಪಿಯಾಗಿ ಕಪಿಲಮುನೇಶ್ವರಕ್ಕೆ ಬಂದು ಎಲ್ಲಿ ಆ ಹೊಲೆಹುಲ್ಲನೆಂದು ಕೂಗಿದನು.

ಹುಲ್ಲಪ್ಪನು ತಂದೆಯನ್ನು ನೋಡಿದಾಕ್ಷಣ ಇನ್ನು ತನ್ನ ತಂದೆಯಿಂದ ಪಾರಾಗಲು ಸಾಧ್ಯವಿಲ್ಲ ಎಂದು ಕೊಂಡು ಆತನ ಉಗ್ರಕೋಪಕ್ಕೆ ಬೆದರಿ ಬೆಚ್ಚಿದ. ಆತನಿಂದ ತಪ್ಪಿಸಿಕೊಳ್ಳಲು ಅಲ್ಲಿಂದ ಮೇಲಕ್ಕೆ ನೆಗೆದು ಬೀಳಿಗಿಯ ತುದಿ ಗುಡ್ಡದಲ್ಲಿಳಿದ. ಅಲ್ಲಿ ಗಂಡುಗಾರಿ ಮುಳ್ಳು ಆತನ ಪಾದಗಳಿಗೆ ಚುಚ್ಚಿ ರಕ್ತವೆಲ್ಲ ದಳದಳನೆ ಸುರಿಯಿತು. ಮಸಣ್ಣಯ್ಯ ಅಲ್ಲಿಯೇ ಕಾವಲಾಗಿ ಕುಳಿತಿದ್ದ. ಹಿಂದೆಯೇ ಅವರ ತಂದೆ ಬರುವುದನ್ನು ಕಂಡು ಅಲ್ಲಿಂದ ಕಳಕಗಿರಿಗೆ (ಇಂದಿನ ಕಾಲ ಕಾಲೇಶ್ವರ) ತೆರಳಿ ಕಳಕಮಲ್ಲೇಶ್ವರನಿಗೆ ರಕ್ಷಿಸೆಂದು ಕೇಳಿದ. ಆಗ ಕಳಕಮಲ್ಲೇಶನು (ಈಗಿನ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಸಮೀಪವಿರುವ ಕಾಲಕಾಲೇಶ್ವರ) ನಿನ್ನ ತಂದೆಯ ಉಗ್ರ ಕೋಪಕ್ಕೆ ಈಡಾಗುವುದಿಲ್ಲ. ಎಲ್ಲಾದರೂ ಹೋಗಿ ಜೀವವನ್ನು ಉಳಿಸಿಕೋ ಎಂದನು. ಹುಲ್ಲಪ್ಪ ಅಲ್ಲಿಂದ ಹಿಮಾಲಯ ಪರ್ವತಕ್ಕೆ ಹೋದನು; ಅಲ್ಲಿ ವಿಷ್ಣು ಮಹೇಶ್ವರ ಮಹಾದೇವನು ನಂದಾದೀಪವನ್ನಿಟ್ಟು ಘೋರ ತಪಸ್ಸನ್ನು ಮಾಡುತ್ತಿದ್ದರು. ಹುಲ್ಲಪ್ಪ ಅವರ ಹತ್ತಿರ ಹೋಗಿ ಕೂಗಾಡಿದ. ಒದರಾಡಿದನು. ಚಿಂತಿಸಿದನು, ಅಷ್ಟಾದರೂ ತಮ್ಮ ತಪಸ್ಸುಬಿಡಲಿಲ್ಲ. ಆವಾಗ ಹುಡುಗ ಹುಲ್ಲಪ್ಪ ದುಃಖತಪ್ತನಾಗಿ ಒಂದು ಹಾಡನ್ನು ಹಾಡುತ್ತಾ ಕಾಲ ಕಳೆದನು.

ಪದ್ಯ

"ಕರುಣೆಯನ್ನು ತೋರೋ ಹೇ ಪರಮಾತ್ಮ!ವರವನ್ನೋ ನೀಡೋ

ಓ ಪರಮಾತ್ಮ....... ಕರುಣೆಯನ್ನು ತೋರೊ ಪರಮಾತ್ಮ!!ಪ!!

ಕಟುಗನ ಮನೆಯಲ್ಲಿ ಜನಿಸಿದೆ ದೇವಾ! ಸಾಕಿದ ತಂದೆ ತಾಯಿ

ದೇವಾ! ನಿಜವಾದ ತಾಯಿ ಎಲ್ಲಿಯನೋ ನಿಜವಾದ ತಾಯಿ ಎಲ್ಲೊ ಏನೋ॥೧॥

ಕರುಣೆಯನ್ನು ತೋರೊ॥

ಜೇನು ತುಪ್ಪವೇ ಹಾಲೆಂದು ಕುಡಿಸಿದೆ! ಜೇನು ಹುಳವು ಮಂದಿ

ಬಳಗವೆನಿಸಿದೆ! ಕಲ್ಲು ಪಡಿಯೋ ತೊಟ್ಟಿಲು ದೇವಾ ಹುಲ್ಲು ಹೊದಿಕೆ ಹಾಸಿಗೆ

ದೇವಾ॥೨॥

ಅಂದ ಚಂದದಿಲಿಂಗನ ಪುತ್ರ! ನಿನ್ನ ಋಣ ಬಹಳ ದೇವಾ ನಿನ್ನ ಋಣ ಬಹಳ

ದೇವಾ॥೩॥

ಕರುಣೆಯನ್ನು ತೋರೊ

ಇನ್ನಾದರೂ ದೇವಾ ನನ್ನ ಕಡೆ ನೋಡಿ! ನಿಮ್ಮ ತಪವನ್ನು ಸ್ವಲ್ಪ

ಹೊತ್ತು ತಡೀರಿ! ಸ್ವಲ್ಪ ಹೊತ್ತು ತಡೆದು ನನ್ನನು ರಕ್ಷಿಸಿ

ಸ್ವಲ್ಪ ಹೊತ್ತ ತಡೆದು ನನ್ನನ್ನು ರಕ್ಷಿಸಿ ॥೪॥

ಕರುಣೆಯನ್ನು ತೋರೊ"[೨೨]

ಇಷ್ಟು ಶೋಕ ಗೀತೆ ಹಾಡಿದನು. ಆದರೂ ಅವರು ತಪಸ್ಸು ಬಿಡಲಿಲ್ಲ. ತಪಸ್ಸನ್ನು ಭಂಗ ಪಡಿಸಲು ಹತ್ತಿರವಿದ್ದ ತ್ರಿಶೂಲವನ್ನು ಎಳೆದುಕೊಂಡ. ಆಗಲೂ ತಪಸ್ಸು ಭಂಗಗೊಳ್ಳಲಿಲ್ಲ. ಅಷ್ಟರಲ್ಲಿ ಅವನ ತಂದೆ ಆವೇಶದಲ್ಲಿ ಬರುವುದು ಕಾಣಿಸಿತು. ಇನ್ನು ಜೀವ ಉಳಿಯದು ಎಂದು ಪ್ರಾಣ ಭೀತಿಯಿಂದ ಮೈಲಾರ ಗ್ರಾಮಕ್ಕೆ ಹೋದ.

೩.೭. ಚಂದಾಲಿಂಗಪ್ಪನು ಮೈಲಾರಕ್ಕೆ ಬಂದಿದ್ದು : (Chandalingappa Came to Mylar)

೩.೭.೧. ಮೈಲಾರದ ಆಗಿನ ಭೌಗೋಳಿಕ ಪರಿಸರ : (The Geograthical Environment of mylar)

ಹುಲ್ಲಪ್ಪನನ್ನು ಕೊಂದು ಹಾಕಬೇಕೆಂದು ಅವನನ್ನು ಹುಡುಕುತ್ತಾ ಚಂದಾಲಿಂಗೇಶ್ವರನು ಮೈಲಾರಕ್ಕೆ ಬಂದನು. ಆಗ ಮೈಲಾರವು ದೈವ ನಿರ್ಮಿತವಾದ ಭೂಮಂಡಲದಲ್ಲಿ ಪ್ರಖ್ಯಾತನಾದ ಈ ಭರತ ಖಂಡದಲ್ಲಿ ಮೋಕ್ಷಕ್ಕಾಗಿ ಪಕ್ಷಿಗಳು, ಸಜ್ಜನರಿಗೆ ಸಾಕ್ಷಾತ್ ಕೈಲಾಸ ಸದೃಶ್ಯವಾಗಿಯೂ, ಪರಶಿವನ ವಾಸಸ್ಥಾನವಾಗಿಯೂ ಇರುವ ದೇವರ ಪಟ್ಟಣವೆಂಬ ಪರ್ವತವಾಗಿ ಮೆರೆಯುತ್ತಿತ್ತು.

ಈಗಿನ ಮೈಲಾರಗುಡ್ಡ ನವರತ್ನ ಖಚಿತವಾಗಿ ಬಹಳ ಸುಂದರವಾಗಿ ವಿಶಾಲವಾಗಿ ಎಲ್ಲಾ ಸೌಕರ್ಯಗಳಿಂದ ಕೂಡಿತ್ತು. ಬಂದಂತ ಭಕ್ತರು ಎಲ್ಲೂ ಹೋಗದೆ ಅಲ್ಲೇ ನೆಲೆಸಬೇಕೆಂದು ಆಸೆ ಹುಟ್ಟಿಸುತ್ತಿತ್ತು. ಈ ಮೈಲಾರಗುಡ್ಡ ಎತ್ತ ನೋಡಿದರೂ ಪೂಜೆಗೆ ಯೋಗ್ಯವಾದ ಮಲ್ಲಿಗೆ, ಜಾಜಿ, ಸುರಗಿ, ಸೇವಂತಿಗೆ, ಬಿಲ್ವಪತ್ರಿ, ಮುಂತಾದ ಹೂಪತ್ರೆಗಳಿಂದ ತುಂಬಿಕೊಂಡಿರುತಿತ್ತು. ಅಷ್ಟೇ ಅಲ್ಲದೆ ಬಾಳೆ, ತೆಂಗು, ಹಲಸು ಇನ್ನೂ ಮುಂತಾದ ಫಲ ವೃಕ್ಷಗಳಿಂದಲೂ ಹಾಗೂ ತಿಳಿ ನೀರಿನ ಸರೋವರಗಳಿಂದಲೂ ಶೋಭಿಸುತ್ತಿತ್ತು. ಎಲ್ಲಾ ಭಕ್ತರಿಗೂ ತುಂಬಾ ಸಂತೋಷವನ್ನುಕೊಡುತಿತ್ತು. ಹಾಗೂ ಸ್ವರ್ಗವೇ ಧರೆಗಿಳಿದು ಬಂದಿದೆ ಅಂತ ಭಾಸವಾಗುತ್ತಿತ್ತು. ಅಲ್ಲಿ ವನದಲ್ಲಿ ದಿನ ಪ್ರತಿ ವಾಸಿಸುತ್ತಿದ್ದ ಗಿಳಿ, ಕೋಗಿಲೆ, ನವಿಲು, ಜಿಂಕೆ, ಮುಂತಾದ ಹಲವಾರು ಪ್ರಾಣಿಗಳು ತಮ್ಮ ಧ್ವನಿಯಿಂದ ಹಾಗೂ ಸ್ವ-ಸಂತೋಷದಿಂದ ಎಲ್ಲ ಭಕ್ತರನ್ನು ಬರಮಾಡಿಕೊಳ್ಳುತ್ತಿದ್ದವು. ಇಲ್ಲಿ ಧ್ಯಾನ ಮಾಡುವ ಋಷಿಗಳಿಗೆ ಮತ್ತಷ್ಟು ಆನಂದವನ್ನುಂಟು ಮಾಡುವುದಲ್ಲದೆ ಅವರ ತಪಸ್ಸಿಗೆ ಎಳ್ಳಷ್ಟು ತೊಂದರೆ ಆಗುವುದಿಲ್ಲ. ಅಂತಹ ಸುಂದರವಾದ ತಾಣ ಈ ಪ್ರಸಿದ್ಧ ಮೈಲಾರಗುಡ್ಡ.

ಜೀವನದಲ್ಲಿ ಪ್ರತಿಯೊಬ್ಬ ಮನುಷ್ಯನು ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಶ್ರೀ ಮೈಲಾರ ದೇವರ ದರ್ಶನ ಪಡೆದು ಅಲ್ಲಿ ಇಂತಹ ಸೌಂದರ್ಯವನ್ನೆಲ್ಲ ಅನುಭವಿಸಿ ಆತನ ಕೃಪೆಗೆ ಪಾತ್ರರಾಗಿ ಪಾವನರಾಗುವುದು ಮುಖ್ಯ. ಅಂತೆಯೇ ಅನೇಕ ತಪಸ್ವಿಗಳು ತಮ್ಮ ನಿತ್ಯ ಕರ್ಮಕ್ಕೆ ಅನುಗುಣವಾಗಿ ಅನುಕೂಲವಾಗಿರುವ ವನದಲ್ಲಿ ತದೇಕಚಿತ್ತದಿಂದ ಧ್ಯಾನಸ್ಥರಾಗಿ ತಪಸ್ಸು ಮಾಡುತ್ತಿದ್ದರು. ಹೀಗಿರಲು ಒಂದು ದಿನ ಆ ಪ್ರದೇಶದ ಅಧಿಪತಿಯಾದ, ನಾನೇ ಶ್ರೇಷ್ಠನೆಂದು ಮೆರೆಯುತ್ತಿದ್ದ ವ್ಯಕ್ತಿ ಹಾಗೂ ರಾಕ್ಷಸಿ ಕುಲದವನಾದ ಮಲ್ಲಾಸುರನೆಂಬ ದೈತ್ಯನು ತನ್ನ ಸ್ವಕುಟುಂಬ ಪರಿವಾರ ಸಮೇತರಾಗಿ ಆಗಮಿಸಿದನು. ಅಲ್ಲಿ ಸೌಂದರ್ಯಕ್ಕೆ ಮರುಳಾಗಿ ಈ ಕ್ಷೇತ್ರ ಶಿವಾಧ್ಯಾನ ಮಾಡಲು ಯೋಗ್ಯವಾಗಿದೆ, ಇಲ್ಲಿ ಶಿವಧ್ಯಾನ ಮಾಡೋಣ ಎಂದು ನಿರ್ಧರಿಸಿ, ತನ್ನ ಸಹೋದರನಾದ ಮಣಿಕಾಸುರನನ್ನು ಕರೆದು ಈ ಸುಂದರವಾದ ತಾಣದಲ್ಲಿ ನಾವಿಬ್ಬರೂ ತಪಸ್ಸನ್ನು ಆಚರಿಸೋಣವೆಂದು ತಪಸ್ಸು ಮಾಡಲು ಅಣಿಯಾದರು. ಆದರೂ ಅವರಿಗೆ ಸಮಾಧಾನವಾಗಲಿಲ್ಲ. ತಪಸ್ಸಿನಲ್ಲಿ ಸ್ವಲ್ಪ ಅದಲು ಬದಲು ಮಾಡಿ ಒಂದು ದಿನ ಒಂದು ಸೂಜಿಯ ಮೇಲೆ ನಿಂತು ತಪಸ್ಸು ಮಾಡಿದರು. ಆದರೆ ಅವರಿಗೆ ತೃಪ್ತಿ ಎನಿಸಲಿಲ್ಲ. ಎರಡನೆಯ ಸೂಜಿಯ ಮೇಲೆ ನಿಂತು ತಪಸ್ಸು ಗೈದರು. ಆದರೂ, ಅವರಿಗೆ ಸಂತೃಪ್ತಿ ಆಗಲಿಲ್ಲಾ ಕೊನೆಗೆ ಮೂರು, ನಾಲ್ಕು, ಐದು, ಆರು, ಏಳು, ಹೀಗೆ ಏಳು ಸೂಜಿಯ ಮೇಲೆ ನಿಂತು ತಪಸ್ಸನ್ನು ಆಚರಿಸಿ ತುಂಬಾ ಸಂತೃಪ್ತಿ ಹೊಂದಿ, ತಪಸ್ಸಿನ ಫಲವಾಗಿ ಸಾಕ್ಷಾತ್ ಶಿವನೇ ಪ್ರತ್ಯಕ್ಷವಾಗಿ ಬಿಟ್ಟಿದ್ದ.

ಇದರಿಂದ ಅವರ ಸಂತೋಷಕ್ಕೆ ಪಾರವೇ ಇಲ್ಲದಾಯಿತು. ಸ್ವರ್ಗಲೋಕದ ಅಧಿಪತಿ ಎಲ್ಲರ ಪಾಲಿನ ಪರಮಾತ್ಮ ಗಂಗೆಯನ್ನು ಧರಿಸಿದ ಗಂಗಾಧರ, ಮುಕ್ಕಣ್ಣ, ಹಾಲಾಹಲವನ್ನು ಒಂದೇ

ಕ್ಷಣದಲ್ಲಿ ವಿಚಾರ ಮಾಡದೆ ಕುಡಿದು ನೀಲಕಂಠ ಎನಿಸಿಕೊಂಡಂತ ಶಿವನು ಇಬ್ಬರೂ ರಾಕ್ಷಸರನ್ನು ಕುರಿತು ಎಲೈ! ದೈತ್ಯರೆ ನೀವು ಈ ತೆರನಾಗಿ ತಪವ ಗೈಯಲು ಕಾರಣ. ನೀವಿಬ್ಬರೂ ಈ ಸುಂದರವಾದ ತಾಣದಲ್ಲಿ ಏಳುಸೂಜಿಯ ಮೇಲೆ ನಿಂತು ತಪಸ್ಸು ಮಾಡಿದ್ದು ನೋಡಿ ನನಗೆ ತುಂಬಾ ಹಾಗೂ ಬಹಳ ಸಂತೋಷ. ಸ್ವರ್ಗವೇ ಹಿಡಿಸಲಾರದಷ್ಟು ಸಂತೋಷವಾಗಿದೆ. ಹೇಳಿ ನಿಮಗೆ ಏನು ವರ ಬೇಕು ಕೇಳಿ ನಾನು ಸ್ವಸಂತೋಷದಿಂದ ನಿಮ್ಮಿಬ್ಬರಿಗೂ ಅರ್ಪಿಸಿ ಮುಂದಿನ ಪಯಣ ಕೈಗೊಳ್ಳುವೆ. ಹೇ ಗಂಗಾಧರ, ಗೌರಿವರ, ನಿನಗೆ ಆಶ್ಚರ್ಯವಾಗಿರುವಂತ ವರಕೇಳಿಕೊಳ್ಳಬೇಕು ಎಂಬ ಆಸೆಯಾಗಿದೆ. ನೀನು ತಥಾಸ್ತು ಎನ್ನ ಬಲ್ಲಿಯಾ? ನೋಡು ವಿಚಾರ ಮಾಡು ಎಂದರು. ಆಗ ಶಿವನು ನಿಮ್ಮ ವರ ಏನಿದ್ದರೂ ನಾನು ಕೊಡಬಲ್ಲೆ ಬೇಗನೆ ಕೇಳಿ ಎಂದನು. ಆಗ ಆ ಇಬ್ಬರು ರಾಕ್ಷಸರು "ನಮಗೆ ಗಂಡು ಹೆಣ್ಣು ಮಿಲನದ ಸಹಿತ ಹುಟ್ಟಿದವರಿಂದ ಮರಣ ಬರಬಾರದು"[೨೩] ಎಂದು ವರಕೊಡು ಎಂದರು. ಆಗ ಶಿವನು ತಥಾಸ್ತು ಎಂದನು. ಆದರೆ ನಿರಂಕಾರ ರೂಪದಲ್ಲಿ ನಿಮಗೆ ಮರಣ ಎಂದು ವರವನ್ನು ಕೊಟ್ಟಿದ್ದೇನೆ.

ರಾಕ್ಷಸರು ಅದನ್ನು ತಿಳಿಯದೇ ಆ ತಮ್ಮ ಅಟ್ಟಹಾಸದಿಂದ ಆ ವನದ ಅಂದಕ್ಕೆ ಬೆರಗಾಗಿ ಮಲ್ಲಾಸುರ ತನ್ನ ಅನುಯಾಯಿಗಳೊಂದಿಗೆ ಪ್ರವೇಶ ಮಾಡಿದನು. ಅಲ್ಲಿ ತಪಸ್ಸು ಮಾಡುತ್ತಿದ್ದ ಋಷಿಮುನಿಗಳನ್ನು ತಮ್ಮ ಮನ ಬಂದಂತೆ ಥಳಿಸುತ್ತಾ, ಅಲ್ಲಿರುವ ಶಿಷ್ಯಂದಿರನ್ನು ಬಡಿಯುತ್ತಾ ಅಲ್ಲಿ ಸುತ್ತಮುತ್ತ ಇರುವ ವನದ ಸೌಂದರ್ಯವನ್ನು ಹಾಳುಗೆಡವುತ್ತಾ, ಮುನ್ನುಗ್ಗಿದರು. ಅಲ್ಲಿರುವ ಕೆಲವು ಋಷಿ-ಮುನಿಗಳು ದೈನ್ಯತೆಯಿಂದ ಬೇಡಿಕೊಂಡರೂ, ಕೇಳಲಿಲ್ಲ. ಎಷ್ಟೊಂದು ವಿನಂತಿಯಿಂದ ನಮ್ರತೆಯಿಂದ ಬೇಡಿಕೊಂಡರೂ ಅವರ ಅಟ್ಟಹಾಸ ಮುಂದುವರೆದಿತ್ತು. ಆ ರಾಕ್ಷಸರು ತಮ್ಮ ಹರಿತವಾದ ಖಡ್ಗದಿಂದ ಅಲ್ಲಿರುವ ಫಲವೃಕ್ಷಗಳನ್ನು ನಾಶಮಾಡುತ್ತಾ, ಇವನ ಅನುಚರರು ಋಷಿಗಳನ್ನು ಅವರು ಮಾಡುತ್ತಿರುವ ತಪಸ್ಸನ್ನು ಹಾಗೂ ಅವರು ಮಾಡುತ್ತಿದ್ದ, ಹೋಮ, ಯಜ್ಞಕುಂಡಲದಲ್ಲಿ ಯಥೇಚ್ಛವಾಗಿ ನೀರು ಸುರಿದು ಸಾಕಷ್ಟು ಹೇಯ ಕೃತ್ಯವನ್ನು ಎಸಗಿದರು.

ಇಷ್ಟಕ್ಕೂ ತೃಪ್ತರಾಗದೇ ಆ ದೈತ್ಯರು ಪೂಜಾ ಸಾಮಾಗ್ರಿಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿ ಪೂಜಾ ಮಂಟಪದ ಮೇಲೆ ಮಧ್ಯ ತುಂಬಿದ ವಸ್ತುಗಳನ್ನು ಇಟ್ಟು ಆ ಸ್ಥಾನ ಅಪವಿತ್ರಗೊಳಿಸಿದರು. ಅಲ್ಲಿದ್ದ ಸಣ್ಣಪುಟ್ಟ ಮುನಿಕುಲ ಇವರ ಹಿಂಸೆಯನ್ನು ತಡೆಯಲಾರದೆ ದಿಕ್ಕೆಟ್ಟು ಪಲಾಯನ ಮಾಡಿದರು. ದೈತ್ಯ ರಾಕ್ಷಸರು ತೃಪ್ತರಾಗದೇ ಅಲ್ಲಿದ್ದ ಕೆಲ ಋಷಿಮುನಿಗಳನ್ನು ಸೆರೆಹಿಡಿದು ಅವರ ಕುತ್ತಿಗೆಗೆ ಹಗ್ಗವನ್ನು ಕಟ್ಟಿ ದರ ದರ ಎಳೆದುಕೊಂಡು ಸರೋವರದ ಬಳಿ ಹೋಗಿ ಅಲ್ಲಿ ಅವರನ್ನು ಮುಳುಗಿಸುತ್ತಾ ಹಾಗೂ ಋಷಿಪತ್ನಿಯರಿಗೆ ಚಿತ್ರಹಿಂಸೆ ಕೊಡುತ್ತಾ ಅವರಲ್ಲಿದ್ದ ಕಾಮಧೇನು ಕಲ್ಪವೃಕ್ಷಕ್ಕೆ ಸರಿಸಮಾನವಾದ ಗೋವುಗಳನ್ನು ಕನಿಕರವಿಲ್ಲದೆ ಹತ್ಯೆ ಮಾಡಿ, ತಮ್ಮ ಕಾರ್ಯವನ್ನು ಸಂಪೂರ್ಣವಾಗಿ ನೆರವೇರಿಸಿಕೊಂಡರು. ಬಹಳ ಸಂತೋಷದಿಂದ ಕೋಲಾಹಲ ಮಾಡುತ್ತಾ ದಶದಿಕ್ಕುಗಳಲ್ಲಿ ಭಯ ತಲೆದೋರುವಂತೆ ಮಾಡಿ ಮನ ಬಂದಂತೆ ಕೇಕೆ ಹಾಕುತ್ತ ಚೀರಾಡುತ್ತಾ ತಮ್ಮ ನಗರಾಭಿಮುಖವಾಗಿ ತೆರಳಿದರು.

ಇತ್ತ ದೈತ್ಯರಿಂದ ಹಿಂಸೆಗೆ ಗುರಿಯಾಗಿ ನಾನಾ ಯಾತನೆಗಳನ್ನು ಅನುಭವಿಸಿದ ಬೆರಳೆಣಿಕೆಯಷ್ಟು ಜನ, ಋಷಿಮುನಿಗಳು ಸಿಂಹದ ಕೈಗೆ ಸಿಕ್ಕು ಬದುಕಿ ಬಂದ ಜಿಂಕೆಯಂತೆ ಉಳಿದವರಾಗಿ ತಮ್ಮ ನಡುಗುವ ಹೃದಯದಿಂದ ಕಂಪಿಸುತ್ತಾ ಸಣ್ಣ ಧ್ವನಿಯಿಂದ ಆ ದೇವಾಧಿದೇವನನ್ನು ನಮ್ರತೆಯಿಂದ ಬೇಡಿಕೊಳ್ಳುತ್ತಾರೆ. "ಹೇ ದೇವಾ ಅಯ್ಯೋ! ದಯಾಘನ! ನಿನ್ನದೇ ನಾಮ ಜಪಿಸುತ್ತಿರಬೇಕಾದರೇ ಈ ಕೃತ್ಯ ಬಂದೊದಗಿತು. ಇದಕ್ಕೆ ನಿನ್ನಿಂದ ಪರಿಹಾರವಿಲ್ಲವೇ ದೇವಾ! ನೀನು ಕೂಡಾ ಮೂಕವಾಗಿ ಬಿಟ್ಟೆಯೋ ದೇವಾ! ನಿನಗಾದರೂ ಇದನ್ನು ರಕ್ಷಣೆ ಮಾಡಬೇಕು ಬಿಡಬೇಕು ಅಂತ ತಿಳಿಯಲಿಲ್ಲವೇ ದಯಾಘನ! ನೀನೇಕೆ ಹೀಗೆ ಮಾಡಿದೆ ತಂದೆ! ದೇವಾ ನಿನ್ನ ತಪ್ಪು ಅಲ್ಲಾ ತಂದೆ! ನಾವು ಮಾಡಿದ ಪೂರ್ವಜನ್ಮದ ದುಷ್ಕರ್ಮವೇ ಈ ಪರಿತಾಪ ಆಗಲಿ ತಂದೆ, ಬಾರದು ಬಪ್ಪದು ಬಪ್ಪದು, ಎಂದೂ ತಪ್ಪದು. ನಡೆದದ್ದು ನಡೆಯಲಿ ದೇವಾ ಎಲ್ಲಿದೆಯೋ ನಿನ್ನಲೀಲೆ ಬೇರೇನೊ ಅಲ್ಲ ಅಲ್ಲವೇ."[೨೨]

ಅಕಟಕಟಾ! ದೇವೇಂದ್ರನನ್ನು ಜಯಸಿದ ಈ ಮಲ್ಲಾಸುರನಿಗೆ ಯಾರು ಎದುರಿಲ್ಲದಂತಾಗಿದೆ ಎಂದು ನಾನಾ ವಿಧವಾಗಿ ಪ್ರಲ್ಹಾಪಿಸುತ್ತಾ ಭೀಕರವಾಗಿ ಕಾಣುತ್ತಿರುವ ವನದಲ್ಲಿ ಒಂದು ಕಡೆ ಸೇರಿದರು. ಅವರಲ್ಲಿ ಸನತ್ಕುಮಾರನೆಂಬುವನು ಮುಂದೆ ಬಂದು, ಪೂಜ್ಯ ಋಷಿವೃಂದವೇ ನಾವು ಈ ರೀತಿ ಶೋಕಿಸುತ್ತ ಕುಳಿತರೆ ನಮಗಾಗುವ ಲಾಭವಾದರೂ ಏನು? ಮುಂದೆ ಏನು ಮಾಡಬೇಕೆಂಬುದನ್ನು ನಿರ್ಧರಿಸೋಣ. ತಮ್ಮೆಲ್ಲರ ಅಭಿಪ್ರಾಯವನ್ನು ತಿಳಿಸಿರಿ ಎಂದು ಅತಿ ವಿನಯದಿಂದ ಪೂಜ್ಯಭಾವನೆಯಿಂದ, ಅತೀ ನಮ್ರತೆಯಿಂದ ಪುನಃ ಪುನಃ ಪ್ರಾರ್ಥಿಸಿದನು. ಆಗ ಋಷಿ ಮುನಿಗಳಲ್ಲಿ ಮೊದಲಿಗರಾದ ಋಷಿಮುನಿ ಹೀಗೆ ಹೇಳುತ್ತಾರೆ. 'ನಾವು ಹೀಗೆಯೇ ಕೈಕಟ್ಟಿ ಸುಮ್ಮನೆ ಕುಳಿತರೆ ಸುಜನರಿಗೆ ಹಿಂಸೆಯು ಹೆಚ್ಚು ಹಾಗೂ ಭೂಮಿಯ ಮೇಲೆ ವಾಸಮಾಡುವುದೇ ದುರ್ಲಭ. ಆದಕಾರಣ ನಮ್ಮ ತಪಸ್ಸು ಶಕ್ತಿಯಿಂದ ಆ ನೀಚನಿಗೆ ಶಾಪಕೊಟ್ಟು ತಕ್ಕ ಪಾಠ ಕಲಿಸಬೇಕೆಂದನು.' ಆಗ ದ್ವಿತಿಯ ಋಷಿವರ್ಯರೂ ಹೀಗೆ ಹೇಳುತ್ತಾರೆ. 'ನಾವು ಇದುವರೆಗೂ ಸಾಕಷ್ಟು ಪರಿಶ್ರಮದಿಂದ ತಪಸ್ಸನ್ನು ಮಾಡಿದ್ದೇವೆ. ಮಾಡಿದ ತಪವನ್ನು ಹಾಳುಮಾಡಲು ಇವನಾರು ಇವನಿಗೆ ಹೇಳುವವರು ಕೇಳುವವರು ಯಾರೂ ಇಲ್ಲವೇ', ಮೂರನೇ ಋಷಿವರ್ಯರೂ ನಡುವೆ ಪ್ರವೇಶಮಾಡಿ, 'ಹಾಗಾದರೇ ತಮ್ಮ ವಿಚಾರವೇನು ತಮ್ಮ ಅಭಿಪ್ರಾಯವಾದರೇನು? ಮುಂದೇನು ಮಾಡುವುದು ಹೇಳಿರಿ'. ಇದಕ್ಕೆ ಪುನಃ ದ್ವಿತಿಯ ಋಷಿವರ್ಯರೂ, 'ಈ ಸ್ಥಳವನ್ನು ಬಿಟ್ಟು ದೂರವಾದ ಅರಣ್ಯ ಪ್ರದೇಶಕ್ಕೆ ಹೋಗಿ ತಪವಗೈದರಾಯಿತು' ಅಂತ ಹೇಳಿದರು.

"ಸನತ್ಕುಮಾರನು, 'ಪೂಜ್ಯರೇ ತಾವು ಹೇಳುವುದೆಲ್ಲಾ ಸರಿ. ಆದರೆ ಈಗ ನಾವು ಆಚರಿಸಬೇಕಾಗುವುದು ಏನೆಂಬುದು ತಿಳಿಯಲಿಲ್ಲ. ನನ್ನ ಮನದಲ್ಲಿ ಒಂದು ಆಲೋಚನೆಯಿದೆ. ಅದನ್ನು ತಮ್ಮ ಮುಂದೆ ವ್ಯಕ್ತಪಡಿಸಲೇ'? ಋಷಿವರ್ಯ ನ್ಯಾಯವಾದರೆ ಅದರಂತೆ ಆಚರಿಸಬಹುದು. ಅದೇನು ಹೇಳು ಸನತ್ಕುಮಾರ. 'ಪ್ರಿಯ ಋಷಿವರ್ಯರೆ ನಾವು ಎಲ್ಲ ಪರಿವಾರ ಒಂದುಗೂಡಿ

ಪರಮೇಶ್ವರ ಸ್ವರೂಪಿಯಾದ ದೇವೇಂದ್ರನಲ್ಲಿಗೆ ಹೋಗಿ ನಮ್ಮೆಲ್ಲ ಕಷ್ಟವನ್ನು ತಿಳಿಸಿಬಿಡೋಣ. ದೇವೇಂದ್ರನು ದುಷ್ಟ ಶಿಕ್ಷಕನಾಗಿಯೂ ಶಿಷ್ಟ ಪರಿಪಾಲಕನಾಗಿಯೂ ಇರುವುದರಿಂದ ನಾವು ಹಾಗೇ ಮಾಡುವುದು ಉಚಿತವೆಂದು ಕಾಣುತ್ತದೆ.’ ಇದು ನಿಮ್ಮೆಲ್ಲರಿಗೆ ಒಪ್ಪಿಗೆಯೇ' ಎಂದು ಕೇಳಿದ ತಕ್ಷಣ ಎಲ್ಲರೂ ಇದೇ ಸರಿ ಎಂದು ಹೊರಡಲು ಸಿದ್ಧರಾದರು.

ಋಷಿ ಮುನಿಗಳಲ್ಲಿ ಕೆಲವರು ತಮ್ಮ ಪರಿವಾರವನ್ನು ಗುಪ್ತವಾದ ಸ್ಥಳದಲ್ಲಿರಿಸಿದರು. ಕೆಲವರಂತೂ ದೇವರ ಮೇಲೆ ಭಾರಹಾಕಿ ಅಲ್ಲೇ ಬಿಟ್ಟು ದೇವಲೋಕಕ್ಕೆ ಪ್ರಯಾಣಮಾಡಿದರು. ಸ್ವರ್ಗಲೋಕದಲ್ಲಿ ವೈಭವದಿಂದ ಸಕಲರಿಂದೊಡಗೂಡಿ ಸುಧರ್ಮ ಸಭೆಯಲ್ಲಿರಲು ಅಷ್ಟದಿಕ್ಪಾಲಕರು, ದೇವಮುನಿಗಳು ಹಾಗೂ ಜಗತ್ತಿನಲ್ಲಿ ಸೌಂದರ್ಯಕ್ಕೆ ಹೆಸರಾದ ಮೂರು ಲೋಕಗಳಲ್ಲಿ ಬಾರಿ ಸುಂದರಿಯರು ಎಂದು ಬಿರುದು ಪಡೆದ ರಂಭೆ, ಊರ್ವಶಿ, ಮೇನಕೆಯರು ಕೂಡಾ ದೇವೇಂದ್ರನ ಸಭೆಯಲ್ಲಿ ತೊಡಗಿ ಆತನನ್ನು ತುಂಬಾ ಸಂತೋಷಪಡಿಸುತ್ತಿದ್ದರು. ಅಂತಹ ಒಂದು ಶುಭ ಸಂದರ್ಭದಲ್ಲಿ ಭೂಲೋಕದಿಂದ ಹೊರಟ ಋಷಿ ಮುನಿಗಳು ಕೂಡ ದೇವೇಂದ್ರನ ಆ ಠೀವಿ ಅವನು ಕುಳಿತ ರತ್ನಖಚಿತವಾದ ಸಿಂಹಾಸನ, ದೇವೇಂದ್ರನ ಹೊಳೆಯುತ್ತಿರುವ ಸಭಾಮಂಟಪ, ಭಾರಿ ಜನಸ್ತೋಮ, ಹಾಗೂ ಸ್ವರ್ಗಲೋಕದ ಕನ್ಯೆಯರು, ಇದೆಲ್ಲಕ್ಕೂ ಮೆರಗು ನೀಡುವ ದೇವೇಂದ್ರನ ಗಂಧರ್ವಗಾನ ಎಲ್ಲವನ್ನೂ ಕಣ್ಣುತುಂಬಿ ನೋಡಿ ಭೂಲೋಕದಿಂದ ಬಂದ ಋಷಿ ಮುನಿಗಳೆಲ್ಲ ತಾವು ಯಾವ ಕಾರಣಕ್ಕೆ ಬಂದಿದ್ದೇವೆ, ಅಂತ ತಿಳಿಯದ ಹಾಗಾದರು. ಇದನ್ನೆಲ್ಲಾ ನೋಡುತ್ತ ಪುನಃ ಪುನಃ ನೋಡುತ್ತಾ ನಿಬ್ಬೆರಗಾದರು ಋಷಿಮುನಿಗಳು.

ದೇವೇಂದ್ರನೇ ಸ್ವತಃ ಆಸನದಿಂದ ಎದ್ದು ಮಹಾತ್ಮರ ಬಳಿಗೆ ಬಂದು ಪೂಜ್ಯರೇ, ತಾವು ಬಂದ ಕಾರಣ ತಮ್ಮ ದರ್ಶನದಿಂದ ನನಗೆ ಮಹದಾನಂದವಾಯಿತು. ನನ್ನ ಹಾಗೂ ನನ್ನ ಅನುಯಾಯಿಗಳಿಗೆ ತಮ್ಮ ದರ್ಶನದಿಂದ ಪುಣ್ಯಲಭಿಸಿತು. ಅಷ್ಟೇ ಅಲ್ಲ ನಮ್ಮ ಜನ್ಮ ಕೂಡ ಪಾವನವಾಯಿತು. ಇನ್ನು ತಾವು ಬಂದ ಕಾರಣ? ದಯಮಾಡಿ ನನಗೆ ತಿಳಿಸುವಿರಾ? ಎಂದು ದೇವೇಂದ್ರನು ವಿನಯ ಪೂರ್ವಕವಾಗಿ ಕೇಳಿಕೊಂಡನು. ಅದಕ್ಕೆ ಅವರು ಹೇ ‘ದೇವೇಂದ್ರ ನಿನಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ನೀನು ಮಹಾನ್ ಧೈರ್ಯವಂತ, ಮಹಾನ್ ಶಕ್ತಿಶಾಲಿ, ತ್ರೈಲೋಕದ ಒಡೆಯ. ಭಾರಿಸುಂದರ ಸ್ವರ್ಗಲೋಕವನ್ನೇ ಆಳುವ ಮಹಾಧೀರ ನಿನಗೆ ಅನ್ಯ ವೈರಿಗಳಿಲ್ಲ. ಅಷ್ಟದಿಕ್ಪಾಲಕರು ಸಕಲ ನವಗ್ರಹಗಳು ನಿನ್ನ ದಾಸನುದಾಸರು ಸಕಲ ಕಾರ್ಯಗಳಲ್ಲಿ ಸಹಾಯಕನಾಗಿ ನಿನ್ನ ಮತ್ತು ನಿನ್ನ ಪೂಜಾ ಜನರ ಹಿತವನ್ನೇ ಬಯಸುತ್ತಾ ಧೀರರು ಪರಾಕ್ರಮದಿಂದಲೂ ಆದ ನಿನಗೆ ಮತ್ತಷ್ಟು ಕೀರ್ತಿಯನ್ನುಂಟು ಮಾಡುತ್ತಾರೆ. ಹೇ ದೇವೇಂದ್ರನೇ ನಿನ್ನ ಪರಾಕ್ರಮದಿಂದಲೂ ನಿನ್ನ ಅಭಯದಂತೆ ಇದುವರೆಗೂ ಸುಖವಾಗಿ ಇದ್ದೇವು. ಈ ಭೂಲೋಕದಲ್ಲಿ ಮಲ್ಲಿಕಾಸುರ ಮಲ್ಲಾಸುರರೆಂಬ ದೈತ್ಯರು ಗೋವುಗಳಿಗೂ, ಬ್ರಾಹ್ಮಣರಿಗೂ, ಸ್ತ್ರೀಯರಿಗೂ, ಚಿತ್ರವಿಚಿತ್ರವಾದ ಹಿಂಸೆಯನ್ನು ಕೊಡುತ್ತಾ ನಮ್ಮ ತಪಸ್ಸನ್ನು

ಭಂಗಮಾಡುವುದಲ್ಲದೇ, ಸರ್ವರೀತಿಯ ಸೃಷ್ಟಿ ಸೌಂದರ್ಯವನ್ನು, ಹಾಗೂ ಅಲ್ಲಿನ ಪರಿಸರವನ್ನು ನಾಶ ಮಾಡುತ್ತಿದ್ದಾರೆ. ಅವರ ಈ ಹೇಯ ಕೃತ್ಯ ದಿನೇ ದಿನೇ ಹೆಚ್ಚಾಗುತ್ತಾ ಭೂಲೋಕದ ತುಂಬಾ ಅವರ ಅಟ್ಟಹಾಸ ಹಾಗೂ ಅವರ ಹೆದರಿಕೆ ಜಾಸ್ತಿಯಾಗಿದೆ. ಹೀಗಾಗಿ ಅವರ ಸಂಹಾರ ಮಾಡಿ ನಮ್ಮ ಕಷ್ಟ ಪರಿಹರಿಸಿ ದೇವಾ. ದೇವೇಂದ್ರನು ಋಷಿಗಳ ಮಾತಿಗೆ ಹೀಗೆ ಹೇಳುತ್ತಾನೆ. ನಿಮ್ಮ ಕಷ್ಟ ನನಗೂ ಕೂಡ ಅರ್ಥವಾಯಿತು. ನಾನು ಕೂಡ ಆ ದೇವನ ಆಜ್ಞೆಯಿಲ್ಲದೆ, ಏನು ಮಾಡಲಾಗುವುದಿಲ್ಲ, ಏಕೆಂದರೆ ಆ ದೈತ್ಯರಿಬ್ಬರೂ ಮಹಾ ತಪಸ್ವಿಗಳು ಅವರು ಕೇವಲ ಹೆಬ್ಬೆರಳಿನ ಸಹಾಯದಿಂದ ಸೂಜಿಯ ಮೇಲೆ ಸೂಜಿಯನ್ನು ಇಟ್ಟು ವಾಯು ಸೇವನೆಯಿಂದ ತಪಸ್ಸನ್ನಾಚರಿಸಿ, ಬ್ರಹ್ಮನಿಂದ ಬಲವಾದ ವರಪಡೆದು ತುಂಬಾ ಸೊಕ್ಕಿನಿಂದ ಮೆರೆಯುತ್ತಿದ್ದಾರೆ. ಹೀಗಾಗಿ ನೀವು ಸೀದಾ ವೈಕುಂಠನ ಸನ್ನಿಧಿಗೆ ಹೋಗಿ ನಿಮ್ಮ ಸಮಸ್ಯೆಗೆ ಪರಿಹಾರ ಹುಡುಕಿಕೊಳ್ಳಿ ಅಂತ ಹೇಳಿ ಸಕಲ ಉಪಚಾರ ಮಾಡಿ ಋಷಿಮುನಿಗಳನ್ನು ಸಂತೋಷದಿಂದ ಬೀಳ್ಕೊಟ್ಟನು. ಆಗ ಋಷಿ ಮುನಿಗಳೆಲ್ಲ ವೈಕುಂಠಾಭಿಮುಖವಾಗಿ ಹೊರಟರು.

ಮುನಿಗಳು ಆಕಾಶ ಮಾರ್ಗವಾಗಿ ಶ್ರೀಹರಿಯನ್ನು ಕಾಣಲು ಹೊರಟು ವೈಕುಂಠಕ್ಕೆ ಬಂದು ಭಕ್ತವತ್ಸಲನಾದ ಶ್ರೀ ವಿಷ್ಣುವಿನ ನಾಮ ಸ್ಮರಣೆ ಮಾಡುತ್ತಾ, ದ್ವಾರಪಾಲಕರಾದ ಜಯ-ವಿಜಯರಿಂದ ಅಪ್ಪಣೆ ಪಡೆದು ಅವರ ಆಜ್ಞಾನುಸಾರ ಒಳಗೆ ಪ್ರವೇಶಿಸಿ, ಲಕ್ಷ್ಮೀಸಮೇತನಾಗಿ ಆದಿಶೇಷನಡಿಯಲ್ಲಿ ಕುಳಿತ ಶ್ರೀಹರಿಯನ್ನು ಹಾಗೂ ನಾರದನನ್ನು ಕಂಡು ತುಂಬು ಹೃದಯದಿಂದ ಅವರೆಲ್ಲ ಶ್ರೀಹರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಹೇ ವೈಕುಂಠವಾಸಿಯೇ, ಹೇ ದೇವಾಧಿದೇವನೇ ಶ್ರೀಹರಿಯೇ ನಮ್ಮವರಿಗೆಲ್ಲ ಒಂದು ಸಮಸ್ಯೆ ಎದುರಾಗಿದೆ. ಅದಕ್ಕೆ ಪರಿಹಾರ ನಿಮ್ಮಿಂದ ಸಿಗುವುದು ಎಂಬ ಆಸೆಯಿಂದ ನಾವೆಲ್ಲ ಭೂಲೋಕದಿಂದ ನಿಮ್ಮ ಸನ್ನಿಧಿಗೆ ಬಂದಿದ್ದೇವೆ. ಎಲ್ಲವನ್ನೂ ತಿಳಿದಿರುವ ನೀವು ನಮ್ಮ ಸಮಸ್ಯೆಗೆ ಪರಿಹಾರ ದೊರಕಿಸಿಕೊಡಿ ಶ್ರೀಹರಿ. ಎನ್ನುತ್ತಾ ಮಂತ್ರ ಪಠಣದಿಂದ ಋಷಿಮುನಿಗಳನ್ನು ದೈನ್ಯದಿಂದ ಬೇಡಿಕೊಂಡರು.

॥"ನ ಸಂಪರಾಯಃ ಪ್ರತಿಭಾತಿ ಬಾಲಂ ಪ್ರಮಾದ್ಯಂತಂ
ವಿತ್ತ ಮೋಹೇನ ಮೂಢಮ್! ಅಯಂ ಲೋಕಃ ನಾಸ್ತಿಪರ
ಇತಿ ಮಾನೀ ಪುನಃ ಪುನರ್ವಶ ಮಾಪದ್ಯತೇ ಮೇ" ॥೨

ಅರ್ಥ : (ಲೋಕದಲ್ಲಿ ಐಶ್ವರ್ಯ ಮದದಿಂದ ಮೂಢನಾಗಿ ದುಷ್ಕರ್ಮಗಳನ್ನು ಎಸಗುವ ರಾಕ್ಷಸ ಬುದ್ಧಿ ಯವನಿಗೆ ಅಥವಾ ರಾಕ್ಷಸನಿಗೆ ಉದ್ಧಾರ ಹೊಂದುವ ಪರಲೋಕ ಸಾಧನದ ಮೂಲಕ ಹೊಳೆಯದು. ಪರ ಲೋಕವಿಲ್ಲ ಇಹಲೋಕ ಒಂದೇ ಇರುವುದು ಎಂದು ಭಾವಿಸುವ ರಾಕ್ಷಸರು ಮತ್ತೆ-ಮತ್ತೆ ದೇವರೊಂದಿಗೆ ಸಹಕಾರ ಹೊಂದಿರುತ್ತಾರೆ.)

ಈ ರೀತಿ ಋಷಿ-ಮುನಿಗಳು ನೀಲಮೇಘ ಶಾಮನನ್ನು ಕಂಡು ಭಕ್ತಿಯಿಂದ ವೈಕುಂಠನಾಥನನ್ನು ನಾನಾ ವಿಧವಾಗಿ ಸ್ತುತಿಸಿದರು. ನಂತರ ಶ್ರೀಹರಿ ಋಷಿಮುನಿಗಳ ಭಕ್ತಿಗೆ ಮೆಚ್ಚಿ ತುಂಬಾ

ತೃಪ್ತನಾಗಿ ಹೇಳುತ್ತಾನೆ. ಹೇ, ಋಷಿಮುನಿಗಳಿರಾ ನೀವು ನನ್ನ ಮೇಲೆ ಇಟ್ಟಂಥ ಪ್ರೀತಿ–ವಿಶ್ವಾಸ ಗುಣ ನಡತೆಗೆ ಎಂದು ದಕ್ಕೆ ಬಾರದ ಹಾಗೆ ನೋಡಿಕೊಳ್ಳುವುದು ನನ್ನ ಸದಾ ಬಯಕೆ. ಹತಭಾಗ್ಯ ನೀಚ ಅದಮನಿಂದ ನಿಮಗೆ ಬಹಳ ತೊಂದರೆಯಾಗಿದೆ. ಹೇಳಿ ಆ ನೀಚನ ಹೆಸರನ್ನು ಜಾಗೃತವಾಗಿ ಹೇಳಿರಿ. ನಿಮಗೆ ಕಂಟಕವಾಗಿರುವ ನೀಚನಿಗೆ ತಕ್ಕ ಪ್ರಾಯಶ್ಚಿತ ಮಾಡೋಣವಂತೆ ನೀವು ಏನು ಭಯಪಡಬೇಡಿ. ಶಾಂತಚಿತ್ತರಾಗಿ ಎಲ್ಲವನ್ನು ಸವಿಸ್ತಾರವಾಗಿ ಹೇಳಿ ನಾನು ನಿಮ್ಮ ಬಾಯಿಂದ ಕೇಳಿ ಮುಂದೆ ಏನು ಮಾಡಬೇಕೆಂಬುದನ್ನು ತಕ್ಷಣ ತಿಳಿಸಲು ಪ್ರಯತ್ನಿಸುತ್ತೇನೆ.

ಮುನಿಗಳೆಲ್ಲರು: ಪ್ರಭು ಪರಮಾತ್ಮ ದಯಾಮಯಾ ಹೇ ದುಷ್ಟರ ಸಂಹಾರಕ ಭಕ್ತಿ ಪ್ರಿಯಾ! ಏನು ಹೇಳೋಣ ದೇವಾಧಿದೇವಾ, ಅಮರೇಶನು ಭಯಭೀತನಾಗಿ ಗಡ ಗಡನೆ ನಡುಗುವನು. ಅಷ್ಟದಿಕ್ಪಾಲಕರು ದಾಸಾನುದಾಸರಾಗಿ ನಡೆದುಕೊಳ್ಳುವರು. ಭೂಮಂಡಲದಲ್ಲಿ ನಮಗೆ ಸಮಾನರಾರಿಲ್ಲವೆಂಬ ಗರ್ವದಿಂದ ಮೆರೆಯುತ್ತಿದ್ದಾರೆ. ಮಣಿಕಾಸುರ ಮತ್ತು ಮಲ್ಲಾಸುರರೆಂಬ ದೈತ್ಯರು ನಮಗೂ ಸಜ್ಜನರಿಗೂ ಗೋಬ್ರಾಹ್ಮಣರಿಗೂ, ಸಹಿಸಲಾರದಷ್ಟು ಚಿತ್ರಹಿಂಸೆ ಕೊಡುತ್ತಿದ್ದಾರೆ. ದೇವ ಕಷ್ಟವನ್ನು ಪರಿಹರಿಸಬೇಕು ಶ್ರೀಹರಿ. ಅದಕ್ಕಾಗಿಯೇ ನಾವೆಲ್ಲಾ ಕೂಡಿ ನಿನ್ನ ಸನ್ನಿಧಿಗೆ ಬಂದಿದ್ದೇವೆ.

ನಾರಾಯಣ ಬಳಿಕ ಶ್ರೀಹರಿ ಋಷಿ ಮುನಿಗಳನ್ನು ಕುರಿತು ಈ ರೀತಿ ಹೇಳುತ್ತಾನೆ. ಕೇಳಿ ಋಷಿ ಮುನಿಗಳೇ, ಆ ಇಬ್ಬರು ದೈತ್ಯರು ಸಾಮಾನ್ಯರಲ್ಲ. ಅವರು ಬ್ರಹ್ಮದೇವನಿಂದ ವರಪ್ರಸಾದ ಸಂಪಾದಿಸಿ ದೇವಾನುದೇವರಿಂದ ಜಯಿಸಲಾಗಿರುವ ಆ ದೈತ್ಯರನ್ನು ವಧೆ ಮಾಡುವ ಕೆಲಸ ಕೈಲಾಸನಾಥನಾದ ಪರಶಿವನದು. ನಾವೆಲ್ಲರೂ ಸೇರಿ ಶಶಿಧರನ ಸನ್ನಿಧಿಗೆ ಹೋಗೋಣ. ಶ್ರೀಹರಿ ಸಮೇತ ಋಷಿ ಮುನಿಗಳೆಲ್ಲಾ ಕೈಲಾಸ ಪರ್ವತಕ್ಕೆ ಪ್ರಯಾಣ ಬೆಳೆಸುತ್ತಾರೆ. ಅವರು ಹೋಗುತ್ತಾ ಹೋಗುತ್ತಾ ಕೈಲಾಸ ಶಿಖರ ಕಣ್ಣಿಗೆ ಬೀಳುತ್ತದೆ. ಅದು ಕಂಡ ತಕ್ಷಣ ಶಿವನಾಮ ಸ್ಮರಣೆ ಮಾಡುತ್ತಾ, ಆನಂದದಿಂದ ಕೈಲಾಸವನ್ನು ತಲುಪಿದರು. ಕೈಲಾಸ ತಲುಪಿದ ತಕ್ಷಣ ಮಂತ್ರ ಪಠಣದಿಂದ (ನಮಸ್ತೆ ಅಸ್ತು ಭಗವಾನ್ ವಿಶ್ವೇಶ್ವರಾಯ, ಮಹಾದೇವಾಯ, ತ್ರಯಂಬಕಾಯ, ತ್ರಿಪುರಾಂತಕಾಯ, ತ್ರಿಕಾಗ್ನಿಕಾಲಯ, ಕಾಲಾಗ್ನಿರುದ್ರಾಯ, ನೀಲಕಂಠಾಯ, ಮೃತ್ಯುಂಜಯಾಯ, ಸರ್ವೇಶ್ವರಾಯ, ಮಹಾದೇವಾಯ ಶ್ರೀಮನ್ ಮಹಾದೇವಾಯ ನಮಃ) ಶಿವನ ದರ್ಶನ ಪಡೆದು ಧನ್ಯರಾಗಿ ಕೈಲಾಸದಲ್ಲಿ ಶ್ರೀಪರಮಾತ್ಮನೊಂದಿಗೆ ಪಾರ್ವತಿ, ನಂದಿ, ಬೃಂಗಿ, ಶೃಂಗಿ, ಮುಂತಾದ ಶಿವಗಣಾದಿಗಳಿಂದಲೂ ಗಣಪತಿ, ಷಣ್ಮುಖ, ಮೊದಲಾದ ವೀರಪುತ್ರರಿಂದಲೂ ಭೂತ ಗಣಪರಿಪೂರಿತರಾಗಿ ಸಭೆಯು ಅತಿ ವೈಭವದಿಂದಿರುವ ಸಕಾಲಕ್ಕೆ ಸರಿಯಾಗಿ ವಿಷ್ಣು ಸಮೇತನಾಗಿ ಋಷಿ ಮುನಿಗಳೆಲ್ಲ ಒಳಗೆ ಪ್ರವೇಶಿಸಿ ಶಿವನ ದರ್ಶನ ಪಡೆದು ಧನ್ಯರಾಗಿ ನಿಂತರು.

ಶ್ರೀ ಗಂಗಾಧರನು ಅಷ್ಟೇ ಉತ್ಸಾಹದಿಂದ ತಾನು ಕುಳಿತಿದ್ದ ಸಿಂಹಾಸನದಿಂದ ಎದ್ದು ಬಂದು ಅವರನ್ನು ಆದರದಿಂದ ಬರಮಾಡಿಕೊಂಡನು. ಹಾಗೂ ಶ್ರೀಹರಿಯನ್ನು ಆಲಂಗಿಸಿಕೊಂಡು ಕುಶಲ ಪ್ರಶ್ನೆಗೈಯುತ್ತಾ, ಈ ರೀತಿಯಾಗಿ ಬರುವ ಕಾರಣವೇನು? ತಪಸ್ವಿಗಳಾದ ಇವರೇಕೆ ಖಿನ್ನರಾಗಿರುವರು? ಇವರ ಮುಖದ ಮೇಲೆ ಸ್ವಲ್ಪವೂ ಕಳೆ ಇಲ್ಲಾ. ನನಗೂ ನಾರಾಯಣನಿಗೂ ಅಂತರಂಗ ಬೇಧವಿದೆ. ರೂಪ ಮಾತ್ರ ಬೇಧವಾಗಿದೆ. ಹೀಗಿರುವಾಗ ನಿನ್ನಿಂದಾಗದ ಕೆಲಸವಾವುದು? ನನ್ನಿಂದಾಗಬೇಕಾದ ಕೆಲಸವೇನು? ಕಾರಣವನ್ನು ವಿವರವಾಗಿ ತಿಳಿಸಿರಿ ಎಂದು ಕೇಳಲು ಪಾರ್ವತಿಯು, ದೇವಾ ತಮ್ಮ ಪಾದಕಮಲಗಳಲ್ಲಿ ಅನನ್ಯ ಭಕ್ತಿಯಿಂದ ಕೈ ಜೋಡಿಸಿಕೊಂಡು ಫಲಾಪೇಕ್ಷೆಯಿಂದ ನಿಂತಿರುವ ಅವರೇ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ. ಆಲಿಸಬೇಕಾಗಿ ಬೇಡಿಕೊಳ್ಳುತ್ತೇನೆ. ಪರಮಾತ್ಮನ ಸಾನಿಧ್ಯದಲ್ಲಿ ನಿಂತು ತಾವು ಹಿಂದೆ ಅನುಭವಿಸಿದ ನಾನಾ ಹಿಂಸೆಗಳನ್ನು ಜ್ಞಾಪಿಸಿಕೊಂಡರು.

ಋಷಿ-ಮುನಿಗಳು ಗಡಗಡನೆ ನಡುಗುತ್ತ ಪ್ರಭು ದಯಾಮಯಾ ಭಕ್ತವತ್ಸಲ ಹೇ ಗಿರಿಜಾಪತಿಃ ನೀಲಕಂಠ, ಸರ್ವೇಶ್ವರ, ಶಂಭುವೇ ನಿನ್ನ ಭಕ್ತರಾದ ನಮ್ಮ ಪಾಡು ಪ್ರಾಣೆಗಿಂತಲೂ ಕಡೆಯಾಗಿದೆ. ಭೂಲೋಕದಲ್ಲಿ ಸಾಕಷ್ಟು ತೊಂದರೆ ಅನುಭವಿಸಿ ಕೊನೆಗೆ ಇಂದ್ರನ ಮೊರೆಹೊಕ್ಕೆವು. ಆದರೆ ಆ ಇಂದ್ರದೇವ ಅವರ ಹೆಸರುಗಳನ್ನು ಕೇಳುತ್ತಲೇ ಭಯಭೀತನಾಗಿ ನೀವೆಲ್ಲರೂ ವೈಕುಂಠವಾಸಿಯ ಶ್ರೀಹರಿಯ ಬಳಿಗೆ ಹೋಗಿರೆಂದು ಕಳುಹಿಸಿದನು. ಶಂಖಚಕ್ರ ಗದಾಧಾರಿಯಾದ ನಾರಾಯಣನಲ್ಲಿಗೆ ಬಂದು ನಮ್ಮ ಕಷ್ಟವನ್ನೆಲ್ಲ ತೋಡಿಕೊಂಡೆವು. ಬ್ರಹ್ಮಪಿತನೂ ಸರ್ವೇಶ್ವರನಾದ ಶ್ರೀಹರಿಯನ್ನು ತಮ್ಮ ಸನ್ನಿಧಿಗೆ ಕರೆತಂದನು. ಆ ಭಯಂಕರ ಕ್ರೂರ ರಾಕ್ಷಸನಾದ ಮಣಿ ಮಲ್ಲಾಸುರರು ನಮ್ಮ ತಪವನ್ನು ಭಂಗ ಮಾಡುವುದಲ್ಲದೆ, ನಮ್ಮ ಪರಿವಾರವನ್ನು ಗೋವುಗಳನ್ನು ಚಿತ್ರಹಿಂಸೆಗೆ ಗುರಿಮಾಡಿ ಬ್ರಾಹ್ಮಣರಿಗೆ ನಾನಾ ಹಿಂಸೆಯನ್ನು ಕೊಟ್ಟು ಕೈಲಾಸ ಸಮಾನವಾದ ಪವಿತ್ರ ಸ್ಥಳಗಳನ್ನು ಅಪವಿತ್ರ ಮಾಡುತ್ತಾರೆ. ದೇವಾ! ಇದ್ದ ಸಂಗತಿಯನ್ನು ಅರಿಕೆಮಾಡಿಕೊಂಡೆವು. ನಮ್ಮನ್ನು ಕಾಪಾಡುವ ಭಾರವು ತಮ್ಮನ್ನೆ ಕೂಡಿರುತ್ತದೆ. ಆಗ ಪರಮೇಶ್ವರನು ಅವರೆಲ್ಲರಿಗೂ ಆಶೀರ್ವದಿಸಿ, ಋಷಿಗಳೇ ಕೇಳಿರಿ ಮಣಿಕಾಸುರ ಮಲ್ಲಾಸುರ ದೈತ್ಯರು ಬಹಳ ತೊಂದರೆ ತೆಗೆದುಕೊಂಡು, ಸೂಜಿಯ ಮೇಲೆ ಸೂಜಿಗಳನ್ನಿಟ್ಟು ಏಳು ಸೂಜಿಯ ಮೇಲೆ ನಿಂತು ಘೋರ ತಪಸ್ಸನ್ನು ಮಾಡಿದರು. ಅವರ ಭಕ್ತಿಗೆ ಮೆಚ್ಚಿ ಏನು ವರಬೇಕೆಂದು ಕೇಳಿದೆನು. ಅವರು ನಮಗೆ ಗಂಡು ಮತ್ತು ಹೆಣ್ಣು ರೂಪದಲ್ಲಿ ಮರಣಾಗಬಾರದು, ಎಂದು ವರ ಕೇಳಿಕೊಂಡರು. ಅವರ ಭಕ್ತಿಗೆ ಮೆಚ್ಚಿ ನಾನು ತಥಾಸ್ತು ಎಂದು ವರ ಕೊಟ್ಟೆನು. ಆದರೆ ನಿರಂಕಾರ ರೂಪದಲ್ಲಿ ಮರಣ ಇದೆ ಎಂದು ಆಶೀರ್ವಾದ ಮಾಡಿರುತ್ತೇನೆ. ಆದರೆ ಕೊಟ್ಟ ವರಗಳನ್ನು ಹೇಗೆ ತೆಗೆದುಕೊಳ್ಳಬೇಕು ಭಕ್ತರೇ ನೀವೇ ಹೇಳಿರಿ. ಆದರೂ ಕೂಡಾ ಶ್ರೀಹರಿಯನ್ನು ಜೊತೆಗೆ ಲಕ್ಷ್ಮಿಯನ್ನು ನರಲೋಕಕ್ಕೆ ಅವರ ಸಂಹಾರಕ್ಕಾಗಿ ಕಳಿಸಿಕೊಟ್ಟಿರುವೆನು? ಶ್ರೀವಿಷ್ಣು ಮನ್ನೇರಾಳ ಪಟ್ಟಣದಲ್ಲಿ ಜಂಗಮರ

ಹೊಟ್ಟೆಯಲ್ಲಿ ಅಂದಚಂದಲಿಂಗನಾಗಿ ಜನಿಸಿರುವನು. ಹಾಗೂ ಲಕ್ಷ್ಮಿಯು ಕೂಡಾ ಗ್ವಾಗೇರಿ ಎಂಬ ಪಟ್ಟಣದಲ್ಲಿ ಕುರುಬರ ಸಿದ್ದಣನ ಮನೆಯಲ್ಲಿ ಜನಿಸಿರುವಳು. ಆಕೆಯ ಹೆಸರು ಮಾಳವ್ವ ಇನ್ನೂ ಸ್ವಲ್ಪ ದಿನದಲ್ಲಿ ಆ ದೈತ್ಯರನ್ನು ನಿರಂಕಾರ ರೂಪದಲ್ಲಿ ಸಂಹಾರ ಮಾಡುವರು. ನೀವೇನು ಭಯಪಡಬೇಡಿರಿ. ನಾವೆಲ್ಲ ಅವರಿಗೆ ಸಹಾಯ ಮಾಡೋಣ ನಡೆಯಿರಿ ಎಂದು ನರಲೋಕಕ್ಕೆ ಬಂದರು.

೩.೭.೨. ಹುಲ್ಲಪ್ಪನಿಗೆ ಮಣಿಕಾಸುರ ಮಲ್ಲಾಸುರರಿಂದ ಆಶ್ರಯ : (Hullappa gets Shelter from Manikasura Mallasura)

ಹುಲ್ಲಪ್ಪನು ಪ್ರಾಣ ರಕ್ಷಣೆಗೆ ಹಲವಾರು ಸ್ಥಳಗಳಿಗೆ ಹೋಗಿ ಅಲ್ಲಿ ರಕ್ಷಣೆಯು ದೊರೆಯದಿರುವುದರಿಂದ ಈ ಮೈಲಾರ ಪಟ್ಟಣಕ್ಕೆ ಬಂದನು. ರಕ್ಷಣೆಗಾಗಿ ಈ ಪಟ್ಟಣದ ಸುತ್ತ ಮುತ್ತಲಿನ ಪ್ರದೇಶವನ್ನೆಲ್ಲ ಶೋಧ ಮಾಡುತ್ತಿದ್ದನು. ಆಗ ಮಣಿಕಾಸುರ ಮಲ್ಲಾಸುರ ಎಂಬ ದೈತ್ಯರು ಎಲೈ! ಬಾಲಕ ನೀನು ಯಾರು? ನಮ್ಮ ಪಟ್ಟಣಕ್ಕೆ ಏಕೆ ಬಂದಿರುವೆ, ಎಂದು ಕೇಳಲಾಗಿ, ಆಗ ಹುಲ್ಲಪ್ಪನು ಕೈಮುಗಿಯುತ್ತಾ, ದೇವಾ ದಯಾದೀನನೇ ನನ್ನನ್ನು ರಕ್ಷಿಸಿರಿ. ನನ್ನ ತಂದೆ ನನ್ನನ್ನು ಕೊಲ್ಲಲು ಬರುತ್ತಿರುವನು. ಆದ್ದರಿಂದ ನನ್ನನ್ನು ನಿಮ್ಮ ಮಗನೆಂದು ತಿಳಿದು ರಕ್ಷಿಸುತ್ತೀರೆಂದು ಬೇಡಿಕೊಳ್ಳುತ್ತೇನೆ. ಆಗ ಮಣಿಕಾಸುರ ಮಲ್ಲಾಸುರರು ಎಂಬ ದೈತ್ಯರು ಎಲೈ ಹುಡುಗನೇ ನಿನ್ನ ತಂದೆ ಯಾರು? ಅವನು ಬಹಳ ಶೂರನಿರುವನೇ? ನಾವು ಯಾರು ಬಲ್ಲೆಯಾ? ಸೂಜಿಯ ಮೇಲೆ ಸೂಜಿಯನ್ನಿಟ್ಟು ಏಳು ಸೂಜಿಯ ಮೇಲೆ ಘೋರ ತಪಸ್ಸು ಮಾಡಿದಂತ ಅಸುರರು. ನಾವು ನಮ್ಮ ವಿಶಿಷ್ಟ ಹಾಗೂ ವಿಚಿತ್ರವಾದ ತಪಸ್ಸನ್ನು ಆಚರಿಸುವದು ನೋಡಿ ಶಿವನು ಪ್ರತ್ಯಕ್ಷನಾಗಿ ಸಂತೋಷದಿಂದ ಏನು ವರ ಬೇಕು ಕೇಳು ಎಂದನು. ಆಗ ನಮಗೆ ಗಂಡು ರೂಪದಲ್ಲಿ ಮರಣ ಬೇಡ ಹೆಣ್ಣು ರೂಪದಲ್ಲಿಯೂ ಮರಣ ಬೇಡ ಅಂತ ವರ ಕೇಳಿಕೊಂಡೆವು.

ಈ ಭೂಮಂಡಲದಲ್ಲಿ ನಮ್ಮಂತ ಶೂರರು ಯಾರೂ ಇಲ್ಲ. ಆದರೂ ಕೂಡ ನಿಮ್ಮ ತಂದೆ ಯುದ್ಧಮಾಡುವನೇ? ನಮ್ಮ ಜೋಡಿ ಸೆಣಸಾಡಿ ನಮ್ಮನ್ನು ಗೆದ್ದು ನಿನ್ನನ್ನು ಕರೆದುಕೊಂಡು ಹೋಗಲಿ ನೋಡೋಣ. ನಮಗೊಬ್ಬಳು ತಂಗಿ ಇದ್ದಾಳೆ, ಅವಳನ್ನು ನಿನಗೆ ಕೊಟ್ಟು ವಿವಾಹ ಮಾಡುತ್ತೇವೆಂದು, ಆ ಹುಡುಗನಿಗೆ ಧೈರ್ಯವನ್ನು ಹೇಳಿದರು. ಆಗ ಹುಲ್ಲಪ್ಪನು ಅವರಿಗೆ ನೀವೇನು ಹೇಳುತ್ತೀರಿ ಅದನ್ನು ಕೇಳಿಕೊಂಡು ನಿಮ್ಮ ಇಚ್ಛೆಯಂತೆ ನಡೆಯುತ್ತೇನೆ. ನನ್ನನ್ನು ರಕ್ಷಣೆ ಹಾಗೂ ಸಾಕುವ ಭಾರ ಮಾತ್ರ ನಿಮ್ಮದು ಎಂದನು.

ಹುಲ್ಲಪ್ಪನ ತಂದೆ ಅಂದಚಂದಲಿಂಗನು ಅದೇ ವೇಳೆ ಮೈಲಾರ ಪಟ್ಟಣವನ್ನು ಪ್ರವೇಶಿಸಿದನು. ಅಲ್ಲಿದ್ದ ಮಣಿಕಾಸುರ ಮಲ್ಲಾಸುರನನ್ನು ಕುರಿತು ಎಲೈ ದೈತ್ಯರೆ ನನ್ನ ಮಗನು ಎಲ್ಲಿ? ಎಂದು ಕೇಳಿದನು. ಆಗ ದೈತ್ಯರು ಎಲೋ ನರ ಮಾನವನೇ ನಮ್ಮ ಬೆನ್ನಿಗೆ ಬಿದ್ದ ನಿನ್ನ ಮಗನನ್ನು

ಎಂದಿಗೂ ಬಿಟ್ಟು ಕೊಡಲಾರೆವು. ಸುಮ್ಮನೆ ಬಂದ ದಾರಿಗೆ ಸುಂಕವಿಲ್ಲದೆ ಹಾಗೆ ಹೋಗಿಬಿಡು. ಇಲ್ಲದಿದ್ದರೆ ನಿನ್ನ ಪ್ರಾಣ ತೆಗೆಯಬೇಕಾಗುತ್ತದೆ. ಹೂಂ... ಯಾವ ನಿರ್ಧಾರ ತೆಗೆದುಕೊಳ್ಳುತ್ತಿ. ಇಲ್ಲವಾದರೆ ಯುದ್ಧಕ್ಕೆ ಸಿದ್ದನಾಗು ಆಗ ಅಂದ ಚಂದನು ಬಹಳ ರೊಚ್ಚಿಗೆದ್ದು ತನ್ನಲ್ಲಿದ್ದ ಖಡ್ಗವನ್ನು ಹೊರತೆಗೆದು ಎಲೈ ದೈತ್ಯರೆ ಇನ್ನು ನಿಮ್ಮ ಸಾವು ಸಮೀಪಿಸಿತು. ಹೋರಾಟಕ್ಕೆ ಸಿದ್ಧಾನಾಗಿ ನಿಂತ. ದೈತ್ಯ ಮತ್ತು ಅಂದ ಚಂದಲಿಂಗನ ನಡುವೆ ಯುದ್ಧ ನಡೆಯುತ್ತಿರಲು ಅಂದ ಚಂದಲಿಂಗನು ಮೂರ್ಛಿತನಾದನು. ಇದರಿಂದ ಮಣಿಕಾಸುರ ಮಲ್ಲಾಸುರ ದೈತ್ಯರು ವೀರ ಬೊಬ್ಬೆಯನ್ನು ಹೊಡೆಯುತ್ತಾ ಆನಂದದಿಂದ ಕುಣಿಯುತ್ತಾ ನಗುತ್ತಾ ಸಂತೋಷದಿಂದಿದ್ದರು. ಆಗ ಸಮಯಕ್ಕೆ ಸರಿಯಾಗಿ ನಾರದನು ಅಲ್ಲಿಗೆ ಬಂದುನೋಡಿ ಎಲೈ ದೈತ್ಯರೆ ನಿಮ್ಮಂಥ ಪರಾಕ್ರಮಶಾಲಿಗಳನ್ನು ನಾನು ನೋಡೇ ಇಲ್ಲಾ, ನಿಮ್ಮಂತ ಭಕ್ತರ ಜೊತೆ ಕಾದಾಡಲು ಈ ನರಮನುಷ್ಯ ಬಂದಿದ್ದನೆ. ಶಾಂತಂ, ಪಾಪಂ, ಶಾಂತಂ, ಪಾಪಂ, ಬಹುಷಃ ಈ ನರಮನುಷ್ಯನ ಸಾವು ಸಮೀಪಿಸಿದೆ, ಅಂತ ಕಾಣಿಸುತ್ತದೆ. ಇದರಂತೆ ಮಣಿಕಾಸುರ ಮಲ್ಲಾಸುರ ಶೂರರಾಗುವರೋ ಅಥವಾ ಸ್ವರ್ಗವಾಸಿಗಳಾಗುವರೋ ಮುಂದೆ ನೋಡೋಣ.

ನಾರದರು ಮುಂದೆ ಚಂದ್ರಗಿರಿಯ ಪಟ್ಟಣಕ್ಕೆ ಹೋಗಿ ಅಂದ ಚಂದಲಿಂಗನ ಮಡದಿಯಾದ ಗಂಗೆಮಾಳವ್ವನಿಗೆ ಬೋಧೆಯನ್ನು ಮಾಡಿದರು, ಅವು ಯಾವುವೆಂದರೆ ಭೂಮಂಡಲದಲ್ಲಿ ದೈತ್ಯರ ಹಾವಳಿ ನಡೆದಿದೆ. ನೀನು ಹೇಗಾದರೂ ಮಾಡಿ ಆ ಇಬ್ಬರೂ ದೈತ್ಯರನ್ನು ಕೊಲ್ಲಿಸಲೇಬೇಕು ಎಂದನು. ಅದಕ್ಕೆ ಗಂಗೆಮಾಳವ್ವಳ ಲಿಂಗಪೂಜೆ ಮಾಡಲಿಕ್ಕೆ ಹೋದ ಗಂಡನು ಇನ್ನೂ ಬಂದಿರಲ್ಲಿಲ್ಲ. ಹೋಗಿ ಐದು ಆರು ದಿನಗಳು ಕಳೆದಿವೆ. ಮಗನು ಆಕಳನ್ನು ಮೇಯಿಸಲಿಕ್ಕೆ ಹೋದವನು ಅವನು ಸಹಿತ ಮನೆಗೆ ಬರಲಿಲ್ಲಾ ಇದು ಏನೂ ನನಗೆ ತಿಳಿಯದಾಗಿದೆ ದೇವಾ ಜಗನ್ನಾಥ ಇದೇನು ವಿಚಿತ್ರ? ಎಂದು ಹೇಳುವ, ಆಗಲೇ ಪರಮೇಶ್ವರನು ಗಂಭೀರವಾದ ಸ್ವರದಲ್ಲಿ ಕೂಗುವುದಕ್ಕೆ ಪ್ರಾರಂಭಿಸಿದ "ಗಂಗೆಮಾಳವ್ವ ನಿನ್ನ ಪತಿದೇವಾ ಮೈಲಾರ ಎಂಬ ಪಟ್ಟಣದಲ್ಲಿ ಮೂರ್ಛಿತನಾಗಿ ಬಿದ್ದಿದ್ದಾನೆ. ನಿನಗೆ ಮುತ್ತೈದೆ ಭಾಗ್ಯಬೇಕಾದರೆ. ಮೈಲಾರ ಪಟ್ಟಣಕ್ಕೆ ಹೋಗಿ ಪಡೆದುಕೋ"[೨೨] ಎಂದ ತಕ್ಷಣ ಗಂಗೆಮಾಳವ್ವಳು ಮೈಲಾರ ಗುಡ್ಡಕ್ಕೆ ಹೋಗಿ ಸುತ್ತ ಮುತ್ತಾ ನೋಡಲಾಗಿ ಏನು ಕಾಣಲಿಲ್ಲ. ಅಲ್ಲಿ ಸಮೀಪದಲ್ಲಿ ನರಳುತ್ತಿರುವ ಧ್ವನಿಕೇಳಿ ಓಡಿ ಹೋದಳು. ಆದರೆ ಅಲ್ಲಿ ಆಕೆಯ ಪತಿದೇವ ಮೂರ್ಛಿತನಾಗಿ ಬಿದ್ದಿದ್ದನು ನೋಡಿ ದುಃಖಿಸುತ್ತಿದ್ದಳು.

೩.೭.೩. ಗಂಗೆ ಮಾಳವ್ವನ ತಪಸ್ಸು : (The Penance of Gange Mallavva)

ಏಕ ಮನಸ್ಸಿನಿಂದ ಧ್ಯಾನಾಸಕ್ತಳಾಗಿ ಶಂಕರನ ಸ್ಮರಣೆ ಮಾಡುತ್ತಿದ್ದಳು. ಮಣಿಕಾಸುರ ಮಲ್ಲಾಸುರ ದೈತ್ಯರು ಗಂಗೆ ಮಾಳವ್ವನನ್ನು ಅವಳ ರೂಪ ಲಾವಣ್ಯವನ್ನು ನೋಡಿ, ಅವಳ ಅದ್ಭುತ ಸೌಂದರ್ಯಕ್ಕೆ ಮರುಳಾಗಿ ಇವಳನ್ನು ನಾನು ಮದುವೆಯಾಗುತ್ತೇನೆಂದು ಮಣಿಕಾಸುರ, ಮಲ್ಲಾಸುರ ಇಬ್ಬರೂ ತಮ್ಮೊಳಗೆ ಜಗಳವಾಡುತ್ತಾ ಅವಳ ಮೇಲೆ ಬಲತ್ಕಾರ ಮಾಡಬೇಕೆಂದುಕೊಂಡರು.

ಆದರೆ ಅವಳು ದುಃಖಿಸುವುದನ್ನು ನೋಡಿ ಮಣಿಕಾಸುರ, ಮಲ್ಲಾಸುರ ದೈತ್ಯರು ಹೇ ಮಣಿ, ಹೇ ಮಲ್ಲ ನಮಗಾಗಿಯೇ ಆ ದೇವನು ಈ ಸುಂದರಳಾದವಳನ್ನು ಕಳಿಸಿರಬೇಕು. ಆ ಶಂಕರ ಈ ಮೂರ್ಖನನ್ನು ಯಮಲೋಕಕ್ಕೆ ಕರೆದೊಯ್ದಿರಬೇಕು. ಇನ್ನು ಅವನ ಚಿಂತೆ ಬಿಡು. ನೀನು ನನ್ನ ರಾಜ್ಯದಲ್ಲಿ ಇರುವಂತೆ ಬಾ, ನನ್ನ ಪಟ್ಟದ ರಾಣಿಯಾಗಿ ಬಾಳುವಂತೆ ಬಾ ಎನ್ನ ಮೋಹದ ರಾಣಿ ಎಂದು ಅಟ್ಟಹಾಸದಿಂದ ಅವಳನ್ನು ಮುಟ್ಟಲು ಹೋದರು. ಆಗ ಪರಮೇಶ್ವರನು ಕಲ್ಲಿನ ಸರ್ಪನ ಅವತಾರ ತಾಳಿ ಮಲ್ಲಾಸುರ ಮಣಿಕಾಸುರರ ಮೇಲೆ ಹೋದನು. ಆಗ ಅವರಿಬ್ಬರೂ ನೋಡುತ್ತಿದ್ದಂತೆ ದಿಕ್ಕೆಟ್ಟು ಓಡಿದರು.

ಗಂಗೆಮಾಳವ್ವಳು ಪರಮೇಶ್ವರನ ಧ್ಯಾನದಲ್ಲಿ ತೊಡಗಿದ್ದಳು. ಪರಮೇಶ್ವರನು ಕಲ್ಲಿನ ಸರ್ಪನ ಅವತಾರ ಬಿಟ್ಟು ಜಂಗಮರ ರೂಪತಾಳಿ ಅಮ್ಮಾ! ನಿಮ್ಮ ಪತಿದೇವನು ಮೂರ್ಛಿತನಾಗಿ ಬಿದ್ದಿರುತ್ತಾನೆ. ನೀನು ನಿಜವಾಗಿ ಪತಿವ್ರತೆಯಾಗಿದ್ದರೆ, ಸೂಜಿಯ ಮೇಲೆ ಸೂಜಿ ಎಂಟು ಸೂಜಿಯನ್ನಿಟ್ಟು ಅದರ ಮೇಲೆ ನಿಂತು ಘೋರ ತಪಸ್ಸು ಮಾಡಿದರೆ, ಆ ಪರಮೇಶ್ವರನು ನಿನ್ನ ಭಕ್ತಿಗೆ ಹಾಗೂ ತಪಸ್ಸಿಗೆ ಮೆಚ್ಚಿ ಬೇಡಿದ ವರ ಕೊಡುವನು. ಆ ದೈತ್ಯರಿಬ್ಬರೂ ಏಳು ಸೂಜಿಯ ಮೇಲೆ ನಿಂತು ಘೋರ ತಪಸ್ಸು ಮಾಡಿರುವರು. ಅಮ್ಮಾ ಅವರಿಗೆ ಆ ದೇವನು ಗಂಡು ಹಾಗೂ ಹೆಣ್ಣು ರೂಪದಲ್ಲಿ ನಿಮಗೆ ಮರಣವಿಲ್ಲ ಎಂದಿದ್ದಾನೆ. ಇಷ್ಟು ಅಂದು ಆ ಜಂಗಮ ವೇಷಧಾರಿಯಾದ ಪರಮೇಶ್ವರನು ಮಾಯವಾಗಿಬಿಟ್ಟನು.

ಆ ಜಂಗಮನು ಹೇಳಿದಹಾಗ್ಗೆ ಗಂಗೆಮಾಳವ್ವಳು ಎಂಟು ಸೂಜಿಯ ಮೇಲೆ ನಿಂತು ಘೋರ ತಪಸ್ಸನ್ನಾಚರಿಸಿದಳು. ಆಕೆಯ ತಪಸ್ಸಿಗೆ ಭೂಲೋಕವೇ ಗಡಗಡನೇ ನಡುಗುತ್ತಿತ್ತು. ಕೈಲಾಸವೆಲ್ಲ ಗರಗರನೇ ತಿರುಗುತ್ತಿತ್ತು. ಆಗ ಪರಮೇಶ್ವರನು ಬಂದು ಅಮ್ಮಾ ನೀನು ಯಾರು. ನಿನಗೆ ಯಾವ ವರಬೇಕು ಕೇಳು ತಾಯಿ ಎಂದನು. ಅದಕ್ಕೆ ಅವಳು ದೇವಾ ಎನಗೆ ಯಾವ ವರವೂ ಬೇಡ, ಎನಗೆ ಮುತ್ತೈದೆತನವನ್ನು ಕೊಡು ಎಂದು ಕೇಳಿದಳು. ಅದಕ್ಕೆ ಶಿವನು ಚಿಂತಿಸಬೇಡ ಮಗಳೇ ನಿನಗೆ ಮುತ್ತೈದೆತನವು ಹೆಣ್ಣಿನ ರೂಪದಲ್ಲಿ ಸಿಗುವುದಿಲ್ಲ. ನಿರಂಕಾರದಲ್ಲಿ ನಿನಗೆ ಮುತ್ತೈದೆತನವು ಸಿಗುವುದಮ್ಮಾ. ಮೇಲಕ್ಕೆ ಎದ್ದೇಳೆಂದು ಆಗ ಪರಮೇಶ್ವರನು ತನ್ನ ಕೊರಳಲ್ಲಿದ್ದ ಸರ್ಪವನ್ನು ತೆಗೆದು ಕಂಬಳಿ ಉಡುಗೆ ಮಾಡಿ ಕೊಡುವನು. ತನ್ನ ಹಣೆಯ ಮೇಲಿನ ಭಸ್ಮವನ್ನು ತೆಗೆದು ಬಂಢಾರವನ್ನು ಮಾಡಿ ಕೊಡುವನು. ತನ್ನ ಕೈಯಲ್ಲಿದ್ದ ತ್ರಿಶೂಲವನ್ನು ಕೊಟ್ಟು ಮಣಿಕಾಸುರ ಮಲ್ಲಾಸುರನನ್ನು ಸಂಹಾರ ಮಾಡೆಂದು ಹೇಳಿ ಪರಮೇಶ್ವರನು ಮಾಯವಾದನು. ಗಂಗೆಮಾಳವ್ವ ದೈತ್ಯರ ಸಂಹಾರಕ್ಕಾಗಿ ಘೃತಮಾಳಿ(ತುಪ್ಪದಮಾಳವ್ವ)ಯ ಅವತಾರ ಎತ್ತಿದಳು. ಋಷಿ ಮುನಿಗಳ ಬ್ರಾಹ್ಮಣರ ತಪಸ್ಸು ಭಂಗ ಮಾಡಿ, ಗೋಹತ್ಯೆ ಮಾಡುತ್ತಿದ್ದ ದುಷ್ಟ ರಾಕ್ಷಸರ ಸಂಹಾರಕ್ಕಾಗಿ ಸಿದ್ಧಾಳಾಗಿ ಉಗ್ರರೂಪದವಳಾಗಿ ಸರ್ಪಜಡೆಯನ್ನು ಹೊಂದಿದ್ದ ಮಾಳವ್ವನನ್ನು ಋಷಿ ಬ್ರಾಹ್ಮಣರೆಲ್ಲರೂ ತುಪ್ಪದಿಂದ ಅಭಿಷೇಕವನ್ನು ಮಾಡಿ ತುಪ್ಪದ ಮಾಳವ್ವ ಎಂದು ಕರೆದರು.

೩.೭.೪. ಅವತಾರದ ಪುರುಷನಾಗಿ ಚಂದಾಲಿಂಗೇಶ್ವರ : (**Chandalingeshwara as The Incarnate Male**)

ಚಂದಾಲಿಂಗನು ಶಿವನ ಕೃಪೆಯಿಂದಾಗಿ ಅವತಾರ ಧರಿಸಿ ಪರಶಿವನು ಭಕ್ತರ ಮನೋರಥವನ್ನು ನೆರವೇರಿಸಲು ಏಕಮುಖಿಯಾಗಿಯು ಚತುರ್ಬಾಹುಗಳನ್ನು ಉಳ್ಳವನಾಗಿಯೂ ತ್ರಿನೇತ್ರ ಪೂರಿತನಾಗಿಯೂ ಕೊರಳಲ್ಲಿ ರುಂಡಮಾಲೆ, ರುದ್ರಾಕ್ಷಿಗಳನ್ನು ಧಾರಣಮಾಡಿ ಕೋಟಿ ಸೂರ್ಯರ ಪ್ರಕಾಶಮಾನವಾದ ಕಾಂತಿಯನ್ನು ಹೊಂದಿ ದಶದಿಕ್ಕುಗಳು ನಡುಗುವಂತೆ ತನ್ನ ಏಳುಕೋಟಿ ಗಣಂಗಳಿಂದಲೂ ಭೂತ, ಬೇತಾಳ, ಪಿಶಾಚಿಗಳಿಂದಲೂ ಸನ್ನದ್ದನಾಗಿ ಇಂದ್ರಾದಿ ದೇವತೆಗಳಿಗೂ ತಮ್ಮ ಸಕಲ ಪರಿವಾರದೊಂದಿಗೆ ಆಯುಧ ಸಮೇತರಾಗಿ ಬರಲು ಆಜ್ಞೆಮಾಡಿದನು. ಕೂಡಲೆ ಸಕಲ ಪರಿವಾರವು ಯುದ್ಧ ಸನ್ನದ್ಧರಾಗಿ ಕೈಲಾಸ ಪರ್ವತದ ತಪ್ಪಲಿನಲ್ಲಿ ಸೇರಿದರು. ಮಲ್ಲ ದೈತ್ಯನನ್ನು ಕೊಲ್ಲಲು ಹೊರಟ ಅಂದಚಂದಾಲಿಂಗನು ತನ್ನ ಒಂದು ಕೋಟಿ ರುದ್ರಗಣಂಗಳು ಒಂದು ಕೋಟಿ ಬೇತಾಳ, ಒಂದುಕೋಟಿ ಡಮರರು, ಒಂದು ಕೋಟಿ ಶಂಖನಿಗಳು, ಒಂದು ಕೋಟಿ ಮಾತೃಗಣ, ಒಂದು ಕೋಟಿ ಪ್ರೇತ ಪಿಶಾಚಿಗಳು, ಒಂದು ಕೋಟಿ ಭರ್ಚಿ, ಬಲ್ಲೆ ಹೀಗೆ ಏಳುಕೋಟಿ ಅತ್ಯುಗ್ರವಾದ ಸೈನ್ಯವು ಬಲ್ಲೆ, ಬಾಣ, ಭರ್ಚಿ, ಗದೆ, ಮುಂತಾದ ಆಯುಧ ಸನ್ನದ್ಧರಾಗಿಯೂ ಮೂರು ತಲೆ, ನಾಲ್ಕು, ಆರು, ಎಂಟು ಕೈಗಳುಳ್ಳವರಾಗಿಯು ಮಲ್ಲಾಸುರನ ಸೈನ್ಯ ಸಂಹಾರಕ್ಕಾಗಿ ಸಿದ್ಧರಾಗಿ ಜಯ ಘೋಷ ಮಾಡುತ್ತಾ ಇರಲು, ಇವರನ್ನು ಕೂಡಿ ಅಂದಚಂದನು ಹೊರಟನು.

೩.೭.೫. ಚಂದಾಲಿಂಗ ಯುದ್ದಕ್ಕೆ ಹೊರಟ ಸಂದರ್ಭ : (**The Outing of The Subaltern War**)

ಸೈನ್ಯದ ಜಯಘೋಷಣೆಯೊಂದಿಗೆ ಚದುರಂಗ ಬಲಯುಕ್ತರಾಗಿ ಏಳುಕೋಟಿ ಸೈನ್ಯವನ್ನು ಕೂಡಿಕೊಂಡು ದಶದಿಕ್ಕುಗಳಿಗೂ ವ್ಯಾಪಿಸಿದ. ಈ ಕೋಲಾಹಲವನ್ನು ನೋಡಿದ ಕೆಲ ದೈತ್ಯರು ತಮ್ಮ ನಗರಾಭಿಮುಖವಾಗಿ ಬರುತ್ತಿರುವ ಈ ಸೈನ್ಯವನ್ನು ನೋಡಿ ನಡುಗಿದವರಾಗಿ ಏಳುತ್ತಾ ಬೀಳುತ್ತಾ ದಿಕ್ಕು ತೋಚದೆ ತಮ್ಮ ಅರಸನಾದ ಮಲ್ಲಾಸುರನಿಗೆ ಈ ವಿಷಯವನ್ನು ನಡುಗುವ ಧ್ವನಿಯಲ್ಲಿ ಹೇಳಿದರು. ದೈತ್ಯೇಂದ್ರನೆ, ಹಿಂದೆ ನೀವು ಅಂದಚಂದಲಿಂಗನನ್ನು ಯುದ್ಧದಲ್ಲಿ ಸದೆಬಡಿದು ಯಮಲೋಕಕ್ಕೆ ಕಳಿಸಿದ್ದರೆ, ಈಗ ಈ ತೊಂದರೆ ಬರುತ್ತಿದ್ದಿಲ್ಲ. ಈಗ ನೋಡಿ ಅಂದ ಚಂದಲಿಂಗನು ನಿಮ್ಮ ಉಪ್ಪು ತಿಂದು ಬೆಳೆದರೂ ಸಹ ಈ ಎಲ್ಲಾ ಸಕಲ ಸಿದ್ಧತೆಯೊಂದಿಗೆ ನಿಮ್ಮ ಮೇಲೆ ಯುದ್ಧಕ್ಕೆ ಬಂದಿರುವನು ಪ್ರಭು. ತನ್ನ ಸಕಲ ಪರಿವಾರ ಸಮೇತನಾಗಿ ನಮ್ಮ ನಗರಾಭಿಮುಖವಾಗಿ ಬರುತ್ತಿರುವನು. ದೇವಾ ಆತನ ಸೈನಿಕರ ಕೋಲಾಹಲವು ಕಿವಿಯು ಕಿವುಡಾಗುವಂತೆ ಮಾಡುತ್ತಿದೆ. ಕುದುರೆಗಳ ಕಾಲು ಹೊಡೆತದಿಂದೇಳುವ ರಭಸಕ್ಕೆ ಧೂಳು ನಭೋಮಂಡಲವನ್ನು ವ್ಯಾಪಿಸಿದೆ. ರಥದ ಗಾಲಿಗಳು ಕಲ್ಲಿಗೆ ತಗುಲುವುದರಿಂದೇಳುವ ಬೆಂಕಿಯು

ಭೂಮಂಡಲವನ್ನೇ ವ್ಯಾಪಿಸಿದೆ. ಇದ್ದ ಸಮಾಚಾರವನ್ನು ಅರಿಕೆ ಮಾಡಿಕೊಂಡಿರುವೆ ಎಂದು ತಿಳಿಸಿದರು.

ಮಲ್ಲಾಸುರನು ತನ್ನ ಸೇವಕರ ಮಾತುಗಳನ್ನು ಕೇಳಿ, ನೀಚರೆ ಏನು ಬೊಗಳುತ್ತಿರುವಿರಿ, ಜಗತ್ತಿನಲ್ಲಿ ಅತುಲ ಬಲಶಾಲಿಯಾಗಿಯೂ ತ್ರಿಮೂರ್ತಿಗಳಿಂದಲೂ ಜಯಿಸಲು ಅಸಾಧ್ಯವಾಗಿಯೂ ಇರುವ ನನ್ನನ್ನು ಜಯಿಸಲು ಸ್ಮಶಾನವಾಸಿಯು, ಬೂದಿಬಡುಕನೂ ರುಂಡವನ್ನೇ ಮಾಲೆಯನ್ನಾಗಿ ಧರಿಸಿದವನೂ ಆದ ಅಲ್ಪನು, ನನ್ನ ಮೇಲೆ ಯುದ್ಧಕ್ಕೆ ಬರುವರನ್ನು ಹೊಡೆಯಿರಿ. ಈ ನೀಚರ ಕಂಠನಾಳವನ್ನೇ ಸೀಳಿ ಬಿಸಾಡಿರಿ ಎಂದು ಕೆಲವರಿಗೆ ತಿಳಿಸಿದನು. ಅಂಜುವ ಕುರಿಗಳೇ ನಮ್ಮ ಸಮ್ಮುಖದಲ್ಲಿ ಗಡ ಗಡನೆ ನಡುಗುತ್ತಾ ಈ ವರ್ತಮಾನವನ್ನು ತಿಳಿಸಲು ನಿಮಗೆ ನಾಚಿಕೆಯಾದರೂ ಬರುವುದಿಲ್ಲವೇ? ನಡೆಯಿರಿ ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಬಂದು ನನಗೆ ತಿಳಿಸಬೇಕು ಎಂದು ಉತ್ತರಿಸಿದನು. ಬಹುಶಃ ಕಪಾಲಿಯು ತನಗೆ ಒದಗಿರುವ ಯಾವುದೇ ತೊಂದರೆಯಿಂದ ನನ್ನ ಸಹಾಯ ಪಡೆಯಲು ನನ್ನ ಜಯ ಘೋಷಣೆ ಮಾಡುತ್ತಾ ಮನವೊಲಿಸಲು ಬರುತ್ತಿರಬಹುದು. ಈ ನೀಚರು ಏನೇನೋ ಹೇಳುತ್ತಿರುವರು ಎಂದು ನುಡಿದು ಶಿಖರದ ಮೇಲೆ ನಿಂತು ಸುತ್ತಲೂ ನೋಡಿ ತನ್ನ ಮೇಲೇರಿ ಬರುತ್ತಿರುವ ಏಳುಕೋಟಿ ಸೈನ್ಯ ನೋಡಿ ಮನಸ್ಸಿನಲ್ಲಿ ಭಯಪಟ್ಟು ಮೇಲೆ ತೋರ್ಪಡಿಸದೆ ತನ್ನ ಸೈನಿಕರನ್ನು ಕರಿಸಿ ಅದರಲ್ಲಿ ದೂರಾದವರಿಗೆ ತನ್ನಲ್ಲಿದ್ದ ಶ್ರೇಷ್ಠ ವಸ್ತುಗಳಾದ ಕರ್ಪೂರ ತಿಲಕವೆಂಬ ಕುದುರೆಯನ್ನು, ಐರಾವತ ಸಮಾನವಾದ ಗಜವನ್ನು, ಖಡ್ಗ, ಗದೆ, ರಥ, ಕಾಲಾಳು, ಮುಂತಾದವುಗಳನ್ನು ಕೊಟ್ಟು ಯುದ್ಧಕ್ಕೆ ಸನ್ನದ್ಧರಾಗಲು ಆಜ್ಞೆಮಾಡಿದನು.

ಮಲ್ಲಾಸುರನು ಸರ್ವಾಲಂಕಾರ ಭೂಷಿತನಾಗಿ ವಿರಾಜಿಸುತ್ತಿರುವ ಆನೆಯ ಮೇಲಿನ ಅಂಬಾರಿಯಲ್ಲಿ ಕುಳಿತು ಹೊರಟನು. ಕ್ರೂರಿಯಾದ ಮಲ್ಲನು ಬರುತ್ತಿರುವ ಸೈನ್ಯವನ್ನು ತಡೆಯಲು ಹೊರಟ ಸಮಯದಲ್ಲಿ ಇವನ ಸೈನಿಕರು ಮಾಡುತ್ತಿದ್ದ ಕೋಲಾಹಲ ಧ್ವನಿ ಕೇಳಿ ಅರಣ್ಯದಲ್ಲಿ ಅಡಗಿದ್ದ ಮೃಗಪಕ್ಷಿಗಳು ದಿಕ್ಕೆಟ್ಟು ಓಡತೊಡಗಿದವು. ಹಾವುಗಳು ಹುತ್ತದಿಂದ ಮೇಲಕ್ಕೆ ಬಂದು ಥರ ಥರನೆ ನಡುಗುತ್ತಾ, ಸಿಕ್ಕ ಕಡೆ ಓಡತೊಡಗಿದವು. ಸಮುದ್ರವು ಅಲ್ಲೋಲ ಕಲ್ಲೋಲವಾಯಿತು. ಪರಮೇಶ್ವರನಲ್ಲಿ ಕುಳಿತ ಪಾರ್ವತಿಯು ಹೆದರಿ ಪತಿಯನ್ನು ಗಟ್ಟಿಯಾಗಿ ಅಪ್ಪಿಕೊಂಡಳು. ದೇವತೆಗಳು ನಡಿಗಿ ಪರಶಿವನ ಧ್ಯಾನಾಸಕ್ತರಾಗಿ ಧೈರ್ಯವನ್ನು ತಂದುಕೊಂಡು ಮುಂದುವರೆಯ ತೊಡಗಿದರು.

೩.೮. ಚಂದಾಲಿಂಗ ಹಾಗೂ ಮಲ್ಲಾಸುರನ ಯುದ್ಧ : (The Battle of Chandalinga and Mallasura)

ಈ ಹಿಂದೆ ಹೇಳಿದಂತೆ ಅಂದಚಂದಲಿಂಗನು ತನ್ನ ಏಳುಕೋಟಿ ಸೈನ್ಯವನ್ನು ತೆಗೆದುಕೊಂಡು ರಣರಂಗಕ್ಕೆ ಬರಲು, ಇತ್ತ ಮಲ್ಲಾಸುರನು ತನ್ನ ಅತುಲಬಲ ಸೈನ್ಯಸನ್ನದ್ಧನಾಗಿ ಯುದ್ಧಕ್ಕೆ ಸಿದ್ಧನಾದನು. ತದನಂತರ ಸುಸಜ್ಜಿತವಾದ ಸೈನ್ಯಗಳೆರಡು ಆವೇಶಭರಿತವಾಗಿ ರಣಭೇರಿಯ

ನಾದವಾಗಲು, ಮೊದಲು ವೀರಕೇಸರಿ ಮೊದಲಾದ ರಥಯುದ್ಧ ಪ್ರಾರಂಭವಾಯಿತು. ಗಜಯುದ್ಧವು ಪ್ರಾರಂಭವಾಗಿ ನಂತರ ಜಗದೀಶನ ಆಜ್ಞೆಯಂತೆ ಯುದ್ಧಕ್ಕೆ ಬಂದು ಏಳುಕೋಟಿ ಪರಾಕ್ರಮಿಗಳಾದ ಶೂರ ಸೈನಿಕರು ಯುದ್ಧವನ್ನಾರಂಭಿಸಿದರು. ಇವರ ವೀರತ್ವ ಶತೃ ಸೈನ್ಯಕ್ಕೆ ಖಡ್ಗ ಧಾರಿಗಳಾಗಿ ಶತೃಗಳನ್ನು ತುಂಡು ತುಂಡಾಗಿ ಮಾಡುತ್ತಾ ಹೊರಟ ಇವರ ಖಡ್ಗಗಳ ತಾಕಲಾಟದಿಂದ ಉದ್ಭವಿಸಿದ ಪ್ರಕಾಶವು ಶತೃಗಳ ಕಣ್ಣು ಕೊರೈಸುವಂತಿತ್ತು. ಶೂರಸೈನಿಕ ಕಾಲಾಳುಗಳು ಶತೃ ಸಮೂಹವನ್ನು ಸವರುತ್ತ, ವೀರರು ಕಿವಿಯವರೆಗೂ ಎದೆಯನ್ನೇರಿಸಿ ಬಾಣದ ಮಳೆಗರೆಯುತ್ತಿದ್ದರು. ಖಡ್ಗ ಮಸಲ, ಮದ್ಗರ, ಗದೆ, ಬಾಣಗಳ ಪ್ರಹಾರದಿಂದ ರಾಕ್ಷಸ ಸೈನಿಕರ ರಕ್ತ ಕಾಲುವೆಯೇ ಹರಿಯತೊಡಗಿತು. ಅದರಲ್ಲಿಯ ಅಲೆಗಳ ಹೊಡೆತಕ್ಕೆ ವೀರ ಸ್ವರ್ಗವನ್ನು ಹೊಂದಿದ ಯೋಧರ ಬಿಲ್ಲು, ಬಾಣಗಳು ರುಂಡ ಮುಂಡಗಳೂ ಹೊಯ್ದಾಡುತ್ತಾ ಮುಳಗುತ್ತಾ ಹೋಗುತ್ತಿದ್ದವು. ಜಯಶೀಲರಾದ ಯೋಧರು ಜಯ ಧ್ವನಿ ಮಾಡುತ್ತ ಅಂದಚಂದಲಿಂಗನನ್ನು ಸುತ್ತಿ ಆನಂದದಿಂದ ಸ್ತುತಿ ಮಾಡುತ್ತಿರಲು ಗಂಧರ್ವರು ತಮ್ಮ ಇಂಪಾದ ಧ್ವನಿ ಹಿಂದೆ ಜಯಗೀತೆಗಳನ್ನು ಹಾಡಿದರು. ದೇವತೆಗಳು ಅಂದಚಂದಲಿಂಗಣ್ಣನಿಗೆ ಜಯಕಾರ ಮಾಡುತ್ತಾ ಸ್ವರ್ಗದಿಂದ ಪುಷ್ಪವೃಷ್ಟಿಯನ್ನೇ ಹರಿಸಿದರು.

ಇತ್ತ ಮಲ್ಲಾಸುರನು ತನ್ನ ಸೈನ್ಯವು ನಾಶವಾದದ್ದನ್ನು ಕಂಡು ಮಹಾ ಕ್ರೋಧದಿಂದ ಕಣ್ಣುಗಳಲ್ಲಿ ಕಿಡಿಗಳನ್ನು ಸಿಡಿಸುತ್ತಾ ರಥಾರೂಢನಾಗಿ ರಥವನ್ನು ಜಾಗ್ರತೆಯಾಗಿ ರಣರಂಗದತ್ತ ನಡೆಸಲು ಸಾರಥಿಗೆ ಆಜ್ಞೆಯನ್ನು ಗೈದನು. ಅದನ್ನು ಕೇಳಿ ಖಡ್ಗದಷ್ಪ್ರನೆಂಬ ಮಲ್ಲಾಸುರನ ಸೈನ್ಯಾಧಿಪತಿಯು ಪ್ರಭು ಇದು ಯಾವ ದೊಡ್ಡ ಸೈನ್ಯವೆಂದು ತಾವು ಸನ್ನದ್ಧರಾಗುವಿರಿ? "ಈ ತಮ್ಮ ಚರಣ ಸೇವಕನಿಗೆ ಆಜ್ಞೆಯಾಗಲಿ ಈವರೆಗೆ ಸಾವಿರಾರು ಸೈನಿಕರನ್ನು ರಥ, ಕರಿ, ತುರಗ, ಕಾಲಾಳುಗಳನ್ನು ನಿಮಿಷಾರ್ಧದಲ್ಲಿ ಧ್ವಂಸಮಾಡಿದುದು ತಮಗೆ ತಿಳಿದೇ ಇದೆ. ಈಗಲಾದರೂ ಅಪ್ಪಣೆಯಾದರೆ ಸಿದ್ಧನಿರುವೆನೆಂದು, ಮಲ್ಲಾಸುರನು ಮಹದಾನಂದದಿಂದ ಅವನ ಸಹಾಯಕ್ಕೆ ಇಪ್ಪತ್ತೈದು ಲಕ್ಷ ಕಾಲಾಳುಗಳು, ಹತ್ತುಲಕ್ಷ ರಥಗಳನ್ನು, ಇಪ್ಪತ್ತು ಲಕ್ಷ ಅಶ್ವಸೈನ್ಯವನ್ನು ಕೊಟ್ಟು ಯುದ್ಧಕ್ಕೆ ತೆರಳಲು ಆಜ್ಞಾಪಿಸಿದನು."[೨೮] ಇದನ್ನು ಅರಿತ ಮಲ್ಲಾರಿಯು ತನ್ನ ಕುಮಾರ ಷಣ್ಮುಖನಿಗೆ ಪುತ್ರನೇ ಈಗ ಯುದ್ಧಕ್ಕೆ ಬಂದಿರುವ ಖಡ್ಗದಂಷ್ಟ್ರನ ಸಂಗಡ ಯುದ್ಧಮಾಡಿ ಎಂದು ತಿಳಿಸಿ ಅವನ ಸಹಾಯಕ್ಕೆ ಚದುರಂಗ ಬಲವನ್ನು ಕಳುಹಿಸಿದನು. ಷಣ್ಮುಖನು ರಥಾರೂಢನಾಗಿ ಅಂದ-ಚಂದಲಿಂಗನು ಜಯ ಘೋಷಣೆ ಮಾಡುತ್ತಿರುವ ಶತ್ರು ಸೈನ್ಯಕ್ಕೆ ಎದುರಾದನು.

೩.೯. ಚಂದಾಲಿಂಗ ಹಾಗೂ ಮಣಿಕಾಸುರನ ಯುದ್ಧ : (The Battle of Chandalinga and Manikasura)

ಮಣಿಕಾಸುರ ಮಲ್ಲಾಸುರರು ತಮ್ಮ ಸೈನ್ಯವೆಲ್ಲ ಹಾಳುದುದನ್ನು ಕಂಡು ಕೆಂಡದಂತೆ ಕೋಪವನ್ನು ತಾಳಿ ದಂಡಾಳುಗಳನ್ನು ಚಂಡಾಡುವೆವೆಂದು ರಣರಂಗಕ್ಕೆ ಭರದಿಂದ ನುಗ್ಗಿದರು.

ಆಗ ಮಣಿಕಾಸುರನು ತನ್ನ ಅಣ್ಣನಾದ ಮಲ್ಲಾಸುರನಿಗೆ ರಾಕ್ಷಸಾಧಿಪನೇ, ದೈತ್ಯಕುಲ ಸಂಭೂತನೇ ಈ ಯುದ್ಧದಲ್ಲಿ ನನ್ನ ಮಹಾ ಭಾಗ್ಯೋದಯವಾಗುವುದೆಂದು ತಿಳಿ. ಯಾಕೆಂದರೆ ಯಾವನು ತ್ರೈಲೋಕಕ್ಕೆ ಒಡೆಯನಾಗಿರುವನೋ, ಯಾವನು ಇಂದ್ರಾದಿ ದೇವತೆಗಳಿಂದ ಪೂಜಿತನಾಗಿರುವನೋ, ಯಾವನು ಈ ಯುದ್ಧಕ್ಕೆ ಬಂದಿರುವನೋ ಆ ದೇವ ದೇವೋತ್ತಮನಾದ ಚಂದ್ರ ಮೌಳಿಯೇ ನನ್ನ ಸಂಗಡ ಯುದ್ಧಕ್ಕೆ ಕಾದಾಡುವನು. ಈ ಯುದ್ಧದಲ್ಲಿ ನನಗೆ ಜಯಸಿಗಲಿ ಅಥವಾ ಸಿಗದಿರಲಿ ನಾನು ಅದಕ್ಕೆ ಅಂಜುವುದಿಲ್ಲ. ಜಯಲಕ್ಷ್ಮಿಯು ನಿಜವಾಗಿಯೂ ನನ್ನ ಕೊರಳಿಗೆ ಮಾಲೆ ಹಾಕುವಳೆಂದು ನಾನು ಅತ್ಯಂತ ದೃಢವಾಗಿ ನಂಬಿರುತ್ತೇನೆ. ತಾವು ಚಿಂತಿಸದೆ ನನಗೆ ಯುದ್ಧಕ್ಕೆ ಅಪ್ಪಣೆ ಮಾಡಿ ಎಂದು ಬೇಡಿಕೊಳ್ಳುತ್ತಾ ಭಯಂಕರ ಘರ್ಜನೆ ಮಾಡಿದನು. ಇವನ ಆರ್ಭಟಕ್ಕೆ ತ್ರಿಲೋಕವು ನಡುಗಿತು, ದಶದಿಕ್ಕುಗಳು ಪ್ರತಿಧ್ವನಿಸಿದವು. ಸಿದ್ಧರು, ಗಂಧರ್ವರು, ದೇವತೆಗಳು, ಭಯದಿಂದ ತತ್ತರಿಸಿದರು. ಮಣಿಕಾಸುರನು ದೃಢಕಾಯನಾಗಿ ವಿಸ್ತಾರವಾದ ಇಪ್ಪತ್ತು ಬಾಹುಗಳನ್ನು ಕುಣಿಸುತ್ತಾ ನಾನಾ ವಿಧವಾದ ಆಯುಧಗಳಿಂದಲೂ ಕಿರೀಟ ಭುಜದಂಡ ಪಿತಾಂಬರ ಮುಂತಾದ ವಸ್ತ್ರೋಪವಸ್ತ್ರಗಳನ್ನು ಧರಿಸಿ, ತುಂಬಾ ಶೋಭಿಸುತ್ತಾ ಯಾವ ವಾಹನವನ್ನು ಬಯಸದೇ ಪಾದಾಚಾರಿಯಾಗಿಯೇ ನಡೆದುಬರುತ್ತಿದ್ದನು. ಹೀಗೆ ಮಣಿಕಾಸುರನು ಯುದ್ಧಕ್ಕೆ ಬರುವುದನ್ನು ಕಂಡು ಶಶಿಧರನು ತನ್ನ ಗಣ ಸಮೂಹಕ್ಕೆ ಹೋಗಬೇಕೆಂದು ಆಜ್ಞಾಪಿಸಿದನು. ಮತ್ತು ನೀವುಗಳು ನಿಂತು ನನ್ನ ಯುದ್ಧವನ್ನು ನೋಡಿರಿ.

ಅತುಲ ಪರಾಕ್ರಮಿಯೂ, ಶೂರನೂ, ಆದ ಮಣಿಕಾಸುರನನ್ನು ಪರೀಕ್ಷಿಸುವೆನೆಂದು ಹೇಳಿ ಅಂದಚಂದಲಿಂಗನು ಪಾದಚಾರಿಯಾಗಿಯೇ ರಣರಂಗಕ್ಕಿಳಿದನು. ಇದನ್ನು ಕಂಡು ಮಣಿಕಾಸುರನು ಎಲೈ ಚಂದ್ರಶೇಖರ! ಏತಕ್ಕೆ ಯುದ್ಧ ಮಾಡುವೆ? ಪರರು ನಿನ್ನನ್ನು ವಂಚಿಸಿದಂತೆ ಕಾಣುವುದು. ಯುದ್ಧದಿಂದ ನಿನಗಾಗುವ ಪ್ರಯೋಜನವಾದರು ಏನು? ಎಂಬುದಾಗಿ ನಿರುಪಯುಕ್ತವಾದ ಮಾತುಗಳನ್ನಾಡಲು ಕುಪಿತನಾದ ಶ್ರೀಅಂದಚಂದಲಿಂಗನು ದುರಾತ್ಮನಾದ ಮಣಿಕಾಸುರನ ಮೇಲೆ ಲೋಹದ ಗದೆಯಿಂದ ಮಸ್ತಕಕ್ಕೆ ಗುರಿಯಿಟ್ಟು ಹೊಡೆದನು. ಕುಶಲನಾದ ಮಣಿಕಾಸುರನು ತನ್ನ ಢಾಲಿನಿಂದ ಅದನ್ನು ತಪ್ಪಿಸಿಕೊಂಡು ಗದೆಯನ್ನು ನೆಲಕ್ಕುರುಳಿಸಿದನು.

ಮಣಿಕಾಸುರ ಎಲೈ ಚಂದ್ರಶೇಖರನೇ ನಿನ್ನ ಬಲವು ನನ್ನ ಮುಂದೆ ತುಚ್ಛವಾಗಿರುವುದು. ನೋಡು ನೀನು ಉನ್ನತ ಕಾಯನಾಗಿದ್ದರೂ ನಿನ್ನಲ್ಲಿ ಸಾವಿಲ್ಲದ್ದರಿಂದ ನೀನು ಬಹಳ ದುರ್ಬಲನೂ, ಅಲ್ಪನೂ ಆಗಿರುವನೆಂದು ನುಡಿದನು. ಇದರಿಂದ ಶಿವನು ಮಹಾ ಕ್ರೋಧದಿಂದ ಒಂದಕ್ಕೆ ಸಾವಿರವಾಗಿ ಹುಟ್ಟುವ ಅನೇಕ ಬಾಣಗಳನ್ನು ಬಿಟ್ಟನು. ಅದನ್ನು ಕಂಡು ದೈತ್ಯನು ಕಿರುನಗೆಯಿಂದ ತನ್ನ ಖಡ್ಗವನ್ನು ತಿರುವುತ್ತ ಜಿತೇಂದ್ರಿಯನಾದ ಉತ್ತಮ ಯೋಗಿಯು ತನ್ನ ದೃಢ ಚಿತ್ತದಿಂದ ಅರಿಷಡ್ವರ್ಗಗಳನ್ನು ಜಯಿಸುವಂತೆ ಪರಶಿವನಿಂದ ಬಿಡಲ್ಪಟ್ಟ ಬಾಣಗಳನ್ನು ತುಂಡರಿಸಿ ಮುಂದೆ ಈತನು ಸೂರ್ಯ ತೇಜದಿಂದೊಡಗೂಡಿದ ಬಾಣಗಳನ್ನು ಮಹೇಶನ

ಮೇಲೆ ಅತಿವೇಗದಿಂದ ಬಿಟ್ಟನು. ಆಗ ಮಹಾದೇವನ ಹೂಂಕಾರಕ್ಕೆ ಆ ಬಾಣಗಳು ಕೆಳಗೆಬಿದ್ದವು. ಇದನ್ನು ಕಂಡ ಮಣಿಕಾಸುರನು ಕ್ರೋಧಯುಕ್ತನಾಗಿ ತನ್ನ ಉಗ್ರವಾದ ದೊಡ್ಡ ಬಾಣವನ್ನು ಅಂದಚಂದಲಿಂಗನ ಕಿರೀಟಕ್ಕೆ ಹೊಡೆದನು. ಸಿಟ್ಟಿಗೆದ್ದ ಶಿವನು ತನ್ನ ಶತ್ರುವನ್ನು 'ಕೃತಿಕೆ' ಎಂಬ ಆಯುಧದಿಂದ ಹೊಡೆದನು. ಆ ಕೃತಿಕೆಯನ್ನು ದೈತ್ಯನು ಔಷಧಿ ಗುಳಿಗೆಯನ್ನು ನುಂಗುವಂತೆ ನುಂಗಿಬಿಟ್ಟನು.

ಶಿವನ ಬಾಣಗಳನ್ನು ಲೆಕ್ಕಿಸದೆ ದೈತ್ಯನು ಮುಂದುವರೆಯುತ್ತಾ ತನ್ನ ತೀಕ್ಷ್ಣವಾದ ಖಡ್ಗದಿಂದ ಶಿವನ ಭುಜಕ್ಕೆ ಬಲವಾಗಿ ಹೊಡೆದನು. ಸರ್ಪಭೂಷಣನಾದ ಶಿವನಿಗೆ ಭುಜದಲ್ಲಿ ಭೂಷಣವಾಗಿದ್ದ ಸರ್ಪವು ತುಂಡು ತುಂಡಾಗಿ ಬಿದ್ದಿತು. ಇದನ್ನು ಕಂಡ ಶಿವನು ತನ್ನಲ್ಲಿದ್ದ ಅಗ್ನಿ ಅಸ್ತ್ರವನ್ನು ಮಣಿಕಾಸುರನ ಮೇಲೆ ಪ್ರಯೋಗಿಸಲು ಅದರ ತಾಪ ತಾಳಲಾರದೆ ತನ್ನ ಕುದುರೆಯ ಸಹಿತ ನೀರಿನಲ್ಲಿ ಬಿದ್ದು, ತನ್ನ ಮಾಯಾ ಬಲದಿಂದ ಅದನ್ನು ನಿರ್ವಹಿಸಿಕೊಂಡು ಮೇಲಕ್ಕೆ ಬಂದು ತಮ್ಮ ತಪೋಬಲದಿಂದ ಸಮಸ್ತವನ್ನು ನಿರ್ನಾಮ ಮಾಡಿ, ಮಹಾ ಬಾಣವನ್ನು ಪ್ರಯೋಗಿಸಲು ವಿಧಿವಶದಿಂದ ಶಿವನ ಸರ್ವಾಂಗಕ್ಕೂ ತಾಗಿದವು. ಈ ಬಾಣಗಳ ತಾಗುವಿಕೆಯಿಂದ ಶಿವನ ಜಟಾಜೂಟನಾದ (ಜಡೆಗಟ್ಟಿದ ಜುಟ್ಟು) ಚಂದ್ರನಿಗೆ ಮಹಾಬಾಧೆಯುಂಟಾಯಿತು. ಗಂಗೆಯು ಕಾರಿದಳು. ಶಿವನು ತನ್ನ ಭಕ್ತನ ಯುದ್ಧ ಕೌಶಲ್ಯ ಕಂಡು ನಿಬ್ಬೆರಗಾದನು. ಸಜ್ಜನರ ಹಿತಕ್ಕಾಗಿ ತನ್ನ ಆಜ್ಞೆಯಂತೆ ತೇಜಸ್ಸುಳ್ಳ ಮಹಾ ಕ್ರೂರವಾದ ತ್ರಿಶೂಲವನ್ನು ದೈತ್ಯನ ಮೇಲೆ ಪ್ರಯೋಗಿಸಿದನು. ಪರಾಕ್ರಮಿಯಾದ ಮಣಿಕಂಠನು ತನ್ನ ಸರ್ವ ಸಾಮರ್ಥ್ಯಕ್ಕೆ ಅನುಗುಣವಾಗಿ ತ್ರಿಶೂಲದ ಮೇಲೆ ಪ್ರಯೋಗಿಸಿದನು. 'ಪರಸು' ಎಂಬ ಚಕ್ರವನ್ನು ಬಿಟ್ಟನು. ಆದರೂ ಅವನ ಕರ್ಮವು ಅವನನ್ನು ತ್ರಿಶೂಲಕ್ಕೆ ಆತಂಕ ಮಾಡದೆ ಅವನ ಹೃದಯಕ್ಕೆ ನಾಟಿತು. ಅದರಿಂದ ಪಾರಾಗದ ದೈತ್ಯನು ಅರಚುತ್ತಾ ಕಣ್ಣುಗುಡ್ಡೆಗಳನ್ನು ತಿರುಗಿಸುತ್ತಾ ನೆಲಕ್ಕೆ ಬಿದ್ದನು.

೩.೯.೧. ಚಂದಾಲಿಂಗನಿಂದ ಮಣಿಕಾಸುರನಿಗೆ ವರ ಪ್ರದಾನ : (Presentation of Manikasura From Chandalinga)

ನೆಲಕ್ಕೆ ಬಿದ್ದ ಮಣಿಕಾಸುರನನ್ನು ಕೂಡಲೇ ಶಂಭುವು ತನ್ನ ಪವಿತ್ರ ಪಾದದಿಂದ ಶಿರಕ್ಕೆ ಒದೆಯಲು ಹೋದನು. ದೈತ್ಯನಾದ ಮಣಿಕಾಸುರನು ಶ್ರೀಶಂಕರನ ಪವಿತ್ರ ಪಾದ ಕಮಲಗಳನ್ನು ಹಿಡಿದುಕೊಂಡು, ದೇವ ಶಂಕರ! ನೀಲಕಂಠ! ದಯಾಮಯಾ! ಭಕ್ತವತ್ಸಲ! ಪಾರ್ವತೀಶನೇ! ಚಂದ್ರಶೇಖರಾ! ನಿನ್ನ ವೈರಿಯಾದ ಈ ಮಣಿಕನ ಯುದ್ಧದಿಂದ ಸಂಪ್ರೀತನಾದ ನೀನು ಅಂತ್ಯಕಾಲಕ್ಕೆ ಪ್ರಸನ್ನವಾದೆ. ನನ್ನನ್ನು ಬಿಟ್ಟು ನೀನೆಲ್ಲಿ ಹೋಗುವೆ. ನಿನಗೆ ನನ್ನ ಅನಂತ ಸಾಷ್ಟಾಂಗ ನಮಸ್ಕಾರವಿರಲಿ. ಭಕ್ತವತ್ಸಲನಾದ ಶಂಕರನು, ಮಣಿಕಾಸುರನ ಭಕ್ತರೂ ಅವನ ಯುದ್ಧ ಕೌಶಲ್ಯಕ್ಕೂ ಮೆಚ್ಚಿ ಸಂತುಷ್ಟನಾಗಿರುವೆನು. ನಿನ್ನ ಮನದಿಚ್ಛೆಯನ್ನು ಬೇಡು ಎಂದು ಅತ್ಯಂತ ಪ್ರೀತಿಯಿಂದ ನುಡಿದನು. ಆಗ ಮಣಿಕನು ಹೇ ದೇವೇಶಾ! ಭಕ್ತವತ್ಸಲಾ! ನೀನು

ನನ್ನ ಸ್ತೋತ್ರಕ್ಕೆ ಸಂತುಷ್ಟವಾದುದ್ದು ನಿಜವಾದರೆ, ನಾನು ಕೇಳುವ ಮೂರು ವರಗಳನ್ನು ಕರುಣಿಸುವ ಕೃಪೆಮಾಡು. ಆಗ ಶಿವನು ಎಲೈ ಭಕ್ತಶಿಖಾಮಣಿಯೇ ನಿನ್ನ ಮನದ ಬಯಕೆಯನ್ನು ತಿಳಿಸು. ಅತೀ ತ್ವರಿತದಿಂದ ಪೂರ್ಣ ಮಾಡುವೆನೆಂದು ಹೇಳಿದನು.

ದೈತ್ಯನು ಶಶಿಧರನೆ ನಾನು ನಿನ್ನ ಕುರಿತು ಮಾಡಿದ ಸ್ತೋತ್ರವನ್ನು ಯಾವ ಮನುಜನು ಪಠಣಮಾಡುವನೋ ಅಥವಾ ಶ್ರವಣ ಮಾಡುವನೋ ಇಲ್ಲವೇ ಧ್ಯಾನಗೈಯುವನೋ ಅಂತಹ ವ್ಯಕ್ತಿಗೆ ಸಕಲೈಶ್ವರ್ಯವು ಸಿಗಲಿ, ನನ್ನ ಶಿರವು ನಿರಂತರವೂ ನಿಮ್ಮ ಪಾದಗಳ ಕೆಳಗಿರಲಿ, ಕುದುರೆ ಏರಿದ ನನ್ನ ರೂಪವೂ ನಿನ್ನ ಸನ್ನಿಧಿಯಲ್ಲಿರಲಿ ಎಂಬುದಾಗಿ ಬೇಡಿದನು. ತದನಂತರ ಅಂದಚಂದಲಿಂಗ ಮಣಿಕಾಸುರನೆ, ನಿನ್ನ ಮನದಿಷ್ಟವನ್ನು ಪೂರ್ಣ ಮಾಡುವೆನು. ನನ್ನ ಆಜ್ಞೆಯಂತೆ ನೀನು ಪರಮ ಪೂಜ್ಯವೂ ಶಾಶ್ವತವೂ ಆದ ಕೈವಲ್ಯ ಪದವಿಯನ್ನು ಅನುಭವಿಸು. ನಮ್ಮೀರ್ವರಿಗೆ ನಡೆದ ಯುದ್ಧ ವೃತ್ತಾಂತವನ್ನು ಕೇಳುವರು. ಯಾವಾಗಲೂ ಸಕಲೈಶ್ವರ್ಯವನ್ನು ಹೊಂದಿ ಸುಖವಾಗಿ ಬಾಳಲಿ ಮತ್ತು ನಿನ್ನ ಬಯಕೆಯಂತೆ ಎಲ್ಲವನ್ನು ನೆರವೇರಿಸುವೆನೆಂದು ವರವನ್ನು ಕೊಟ್ಟನು. ಇದನ್ನು ಕೇಳಿದ ಮಣಿಕನು ಆನಂದದಿಂದ ಕೈವಲ್ಯ ಪದವಿಯನ್ನು ಹೊಂದಿದನು.

೩.೯.೨. ಮಲ್ಲಾಸುರನಿಗೆ ಶ್ರೀಹರಿಯಿಂದ ಹಿತೋಪದೇಶ : (Srihari's Counsel to Mallasura)

ಶಿವನು ತನ್ನ ಪ್ರಿಯ ಭಕ್ತನಾದ ಮಲ್ಲಾಸುರನಿಗೆ ಮುಕ್ತಿಯನ್ನು ಕೊಡಬೇಕೆಂದು ಬಯಸಿ ಶ್ರೀ ನಾರಾಯಣನನ್ನು ಕುರಿತು, ದೇವೇಶನಾದ ಶ್ರೀಹರಿಯೇ, ನೀನು ಈಗಾಗಲೇ ಮಲ್ಲಾಸುರನ ಬಳಿ ಹೋಗಿ ಎಲೈ ದೈತ್ಯನೇ ನಿನ್ನ ತಮ್ಮನಾದ ಮಣಿಕಾಸುರನು ಪರಶಿವನ ಕ್ರೋಧಕ್ಕೆ ಸಿಲುಕಿ ಹತನಾದನು. ತ್ರಿಲೋಕಾಧಿಪತಿಯಾದ ಅಂದಚಂದಲಿಂಗನು ರೂಪಿ ಮಹಾದೇವನನ್ನು ನೀನು ಗೆಲ್ಲಲು ಸಾಧ್ಯವಿಲ್ಲ. ಆದ್ದರಿಂದ ನೀನು ಈಗಲೇ ಉಳಿದ ಸೈನ್ಯವನ್ನು ಹಾಗೂ ಪರಿವಾರವನ್ನು ಕೂಡಿಕೊಂಡು ಪಾತಾಳಲೋಕಕ್ಕೆ ಹೋಗು. ಎಲ್ಲಾ ಋಷಿಗಳು ತಮ್ಮ ತಮ್ಮ ಆಶ್ರಮದಲ್ಲಿ ತಪವನ್ನು ಆಚರಿಸುತ್ತಾ ಸುಖವಾಗಿರಲಿ. ದೇವತೆಗಳು ತಮಗೆ ಸಲ್ಲಿಸಲ್ಪಡುವ ಹವಿರ್ಭಾಗವನ್ನು ಆನಂದದಿಂದ ಭುಂಜಿಸಲಿ (ಅನುಭವಿಸಲಿ). ಹೀಗೆ ನೀನು ಮಾಡಗೊಟ್ಟರೆ ಎಲ್ಲರಿಗೂ ಹಿತವಾಗುವುದು. ಇಲ್ಲವಾದರೆ ಅಂದಚೆಂದಲಿಂಗನ ಖಡ್ಗಕ್ಕೆ ಆಹುತಿಯಾಗು ಎಂದು ತಿಳಿಸೆಂದು ಅರಹಲು ಶ್ರೀಮನ್ನನಾರಾಯಣನು ಗಜಾರೂಢನಾಗಿಯೂ ಪರಶಿವನ ಅಪ್ಪಣೆಯನ್ನು ಪಡೆದು ಮಲ್ಲ ದೈತ್ಯನ ಬಳಿಗೆ ಹೋದನು.

ಪರಮಾತ್ಮನು ನೀಲಮೇಘ ಶ್ಯಾಮನಾದ ಹರಿಯನ್ನು ಕಂಡು ದೈತ್ಯೇಂದ್ರನು ಕೂಡಲೇ ಅತ್ಯಂತ ವಿನಯದಿಂದಲೇ ಭಕ್ತಿಯಿಂದಲೂ ಎದ್ದು ಬಂದು ವಂದಿಸಿ ಸಕಲ ಪೂಜಾ ಸಾಮಗ್ರಿಗಳನ್ನು ತಂದು ಅತ್ಯಂತ ಭಕ್ತಿಯಿಂದ ಪೂಜಿಸಿದನು. ಶ್ರೀಹರಿಯು ಸಂತುಷ್ಟನಾಗಿ ಎಲೈ ಭಕ್ತ ಶ್ರೇಷ್ಠನಾದ

ದೈತ್ಯನೇ ಈಗ ನಡೆಯುತ್ತಿದ್ದ ಯುದ್ಧದಲ್ಲಿ ನಿನ್ನ ಅನುಜನಾದ ಮಣಿಕಾಸುರನು ಹತನಾದನು. ನೀನು ಈಗಲೇ ಅಂದಚಂದಲಿಂಗನ ರೂಪಿಯಾದ ಪರಶಿವನಲ್ಲಿ ಶರಣು ಹೋಗಿ ನಿನ್ನ ಉಳಿದ ಸೈನ್ಯವನ್ನು ನಿನ್ನ ಪರಿವಾರವನ್ನು ಕಾಪಾಡಿಕೊಂಡು ಶೀಘ್ರವಾಗಿ ಪಾತಾಳಲೋಕಕ್ಕೆ ಹೋಗಿ ನಿನ್ನ ಪ್ರಾಣವನ್ನು ಉಳಿಸಿಕೊ. ಈಗ ಕುಪಿತನಾದ ಅಂದಚಂದಲಿಂಗ ಯಾರನ್ನೂ ಲೆಕ್ಕಿಸದೆ ಯುದ್ಧಾಸಕ್ತನಾಗಿರುವನು. ಅವನನ್ನು ಎದುರಿಸಲು ಯಾರಿಂದಲೂ ಸಾಧ್ಯವಿಲ್ಲ. ನೀನು ಆತನೊಡನೆ ಖಂಡಿತವಾಗಿ ಯುದ್ಧ ಮಾಡಬೇಡ ಶ್ರೀರುದ್ರನ ಕ್ರೋಧಾಗ್ನಿಗೆ ಆಹುತಿ ಆಗಬೇಡ. ನೀನು ನನ್ನ ಪರಮಭಕ್ತನಾದ ಪ್ರಹ್ಲಾದನ ಕುಲದಲ್ಲಿ ಹುಟ್ಟಿದವನೆಂಬ ಕರುಣೆಯಿಂದ ನಿನಗೆ ತೊಂದರೆಯಾಗದಿರಲೆಂದು ಬಯಸಿ ಉಪದೇಶ ಮಾಡುತ್ತಿರುವೆನು. ನನ್ನ ಮಾತಿನಂತೆ ನಡೆ ನಿನಗೆ ಹಿತವಾಗುವುದು ಎಂಬುದಾಗಿ ನಾನಾ ರೀತಿಯಿಂದ ತಿಳಿಸಿದನು.

೩.೧೦. ಘೃತಮಾರಿ(ಮಾಳವ್ವ) ಹಾಗೂ ಮಲ್ಲಾಸುರನ ಯುದ್ಧ : (The Battle of Gange Malavva and Mallasura)

"ಶ್ರೀವಿಷ್ಣುವಿನ ಉಪದೇಶ ಕೇಳಿದ ಮಲ್ಲಾಸುರನು ದೇವಾ ಭಕ್ತವತ್ಸಲ! ಜನಾರ್ಧನ! ನೀನು ನಮ್ಮ ಕುಲ ಪೂಜ್ಯನಾದ ದೇವನಿರುವೆ. ನಾನು ಈ ಮುಂದೆ ಹೇಳುವ ಒಂದು ವರವನ್ನು ನೆರವೇರಿಸಿವೆ ಎಂಬ ಅಭಯವನ್ನು ಕೊಡಬೇಕು."[೨೯] ನನ್ನ ಪ್ರೀತಿಯ ತಮ್ಮನನ್ನು ಕೊಂದ ಶಿವನನ್ನು ಎಲ್ಲಿ ಹುಡುಕಲಿ? ಅವನ ಹೊಟ್ಟೆಯನ್ನು ಬಗೆದು ಚೆಲ್ಲಾಡಿ ಬಿಡುವೆನು. ಗಧಾಧರನಾದ ವಿಷ್ಣುವೆ, ನಾನು ಶಿವನ ಸಂಗಡ ಯುದ್ಧ ಮಾಡುವವರೆಗೆ ನೀನು ಇಲ್ಲಿಯೇ ಇದ್ದು ನನ್ನ ಯುದ್ಧ ಚಾತುರ್ಯವನ್ನು ನೋಡುವ ಅವಕಾಶವನ್ನು ಕಲ್ಪಿಸಿಕೊಡಿ ಎಂದು ವರ ಕೇಳಿದನು. ಅದಕ್ಕೆ ವಿಷ್ಣುವು ಎಲೈ ದೈತ್ಯಾಸುರನೆ ನನ್ನ ಆಲೋಚನೆಯನ್ನು ಲಕ್ಷ್ಯಗೊಟ್ಟು ಕೇಳು, ಸುಮ್ಮನೆ ದುಡಿಕಿ ಕೆಡಬೇಡ ಶಾಂತಿಯನ್ನು ತಾಳು, ತಾಳಿದವನು ಬಾಳಿಯಾನು ಎಂದು ಹೇಳಲು ಮಲ್ಲಾಸುರನು ಅತ್ಯಂತ ಕ್ರೋಧದಿಂದ ದೇವಾ ನನ್ನ ಅನುಜನ ಮರಣದಿಂದುಂಟಾದ ಸಂತಾಪವು ಶಮನವಾಗಲಾರದು. ಇನ್ನೆಲ್ಲಿಯ ಶಾಂತಿ ಮೊದಲು ಶಿವನ ಸಮಾಧಿ. ನಂತರ ಶಾಂತಿ ಎಂದು ಗರ್ವದಿಂದ ನುಡಿದನು. ಶ್ರೀಹರಿಯ ಉಪದೇಶವು ನಿರರ್ಥಕವಾಯಿತು. ನಂತರ ಮಲ್ಲಾಸುರನು ತನ್ನ ಉಳಿದ ಚದುರಂಗ ಬಲ ಸಮೇತ ಬಹು ಉತ್ಸಾಹದಿಂದ ಯುದ್ಧಕ್ಕೆ ಹೊರಟನು.

ಮಲ್ಲಾಸುರನು ಯುದ್ಧಕ್ಕೆ ಹೊರಟ ರಭಸಕ್ಕೆ ವಾಯುದೇವನು ಬೆವರಿದನು. ಭೂದೇವಿಯು ಅವನ ತುಳಿತಕ್ಕೆ ನಡುಗಿದಳು. ಅಷ್ಟದಿಕ್ಪಾಲಕರು ಭಯಭರಿತರಾಗಿ ಶಿವ ನಾಮವನ್ನು ನುಡಿಯುತ್ತಾ ಮುಂದೇನಾಗುವುದೋ ಎಂದು ಭಾಸವಾಗುತ್ತಿದ್ದಿತು. ಇವನ ಸೈನ್ಯದ ಸಾಗುವಿಕೆಯಿಂದ ಕೆಂದೂಳಿ ಭೂಮ್ಯಾಕಾಶಗಳಿಗೆ, ಇದೇನು ಪ್ರಳಯ ಕಾಲದ ಚಿಹ್ನೆಯು ಎಂದು ಭಾಸವಾಗುತ್ತಿದ್ದಿತು. ಹೀಗೆ ಬಹು ಭೀಕರವಾದ ಮತ್ತು ಬಲವಾದ ಸೈನ್ಯ ಸಮೇತನಾದ ಮಲ್ಲಾಸುರನು ಯುದ್ಧ ರಂಗಕ್ಕಿಳಿಯಲು ಇವನು ಬರುವುದನ್ನೇ ನಿರೀಕ್ಷಿಸುತ್ತಿದ್ದ ಘೃತಮಾರಿಯೂ ಯುದ್ಧಕ್ಕೆ ಸನ್ನದ್ಧಳಾಗಿ ಎದುರು ಆದಳು.

ಇವಳನ್ನು ಕಂಡ ದೈತ್ಯನು ಮಾರಿಯೇ ಎಲ್ಲಿ ನಿನ್ನ ಶಿವನು? ಹೇಡಿ ಅಂಜುಬುರಕ ಹೆದರಿ ತಲೆ ತಪ್ಪಿಸಿಕೊಳ್ಳುವಂತೆ ಬಡಪಾಯಿ ಯಾದ ಹೆಂಗಸನ್ನು ಕಳಿಸಿ ಎಲ್ಲಿ ಓಡಿ ಹೋಗಿರುವನು, ಕರೆ ಅವನನ್ನು. ಪರಾಕ್ರಮಿಯಾದ ನನ್ನನ್ನು ಕಂಡು ಹೆದರಿದಂತೆ ಕಾಣುತ್ತದೆ. ಅವನ ಹೊಟ್ಟೆಯನ್ನು ಬಗೆದು ರಕ್ತವನ್ನು ಗಟಗಟನೆ ಕುಡಿದು ಜಠರಾಗ್ನಿಯನ್ನು ಶಾಂತ ಮಾಡಿಕೊಳ್ಳುವೆ. ಎಂದು ಮುಂತಾಗಿ ನುಡಿಯುತ್ತಿರಲು ಸಿಡಿಲಿನಂತೆ ಆರ್ಭಟಿಸಿ ದಶದಿಕ್ಕುಗಳೂ ಮೊಳುಗುವಂತೆ ಘೃತಮಾರಿಯೂ ಒದರಿ ಎಲೈ! ಅಧಮನಾದ ದೈತ್ಯನೇ ಏತಕ್ಕೆ ಮನಬಂದಂತೆ ಬೊಗಳಿ ನಿನ್ನ ಪಾಪವನ್ನು ಹೆಚ್ಚಿಸಿಕೊಳ್ಳುವಿ. ಸೃಷ್ಟಿ ಸ್ಥಿತಿ ಭಯಕರ್ತನಾದ ಮಹಾಶಂಭುವಿಗೆ ಅಂಜುಕುಳಿ ಎಂದೆನ್ನುವೆಯಾ? ನೀಚಾ, ಪರಶಿವನ ದೃಷ್ಟಿ ಮಾತ್ರದಿಂದ ಬಸ್ಮವಾದೀ. ಮೊದಲು ಶಿವನ ಸೇವಕಳೂ, ಏಕ ಭಕ್ತ ನಿರತಳೂ, ನಿನಗೆ ಯಮಸ್ವರೂಪಳೂ ಆದ ಈ ಮಾರಿಯೊಡನೆ ಯುದ್ಧವನ್ನು ಮಾಡು. ಅಂಜುಕುಳಿಯ ಭಕ್ತಳು ಅಬಲೆಯು ಆದ ನನ್ನನ್ನು ಜಯಿಸಿದ ಮೇಲಲ್ಲವೇ ರಣಶೂರನಾದ ನಿನ್ನ ಪರಾಕ್ರಮವು ಗೊತ್ತಾಗುವುದು.

ಎಲೈ! ಆತ್ಮವಂಚಕ ಸುಮ್ಮನೆ ಬಡಾಯಿಕೊಚ್ಚಿಕೊಳ್ಳುವೆ. ಎಲೈ! ನಾಯಿ ಸಾಕು ಮಾಡು ನಿನ್ನ ಪೌರುಷವನ್ನು ತೋರಿಸು ನನ್ನ ಮುಂದೆ ಎನ್ನುತ್ತಾ, ತನ್ನ ಮುಷ್ಟಿಯನ್ನು ವೇಗವಾಗಿ ಸುತ್ತ ತಿರುಗಿ ಸೈನ್ಯದ ಮೇಲೆ ರಭಸದಿಂದ ನುಗ್ಗಿ ಆನೆ, ಕುದುರೆ, ರಥ, ಕಾಲಾಳುಗಳನ್ನು ಸದೆಬಡಿದು ಸಿಕ್ಕ ಸಿಕ್ಕವರನ್ನು ಸದೆಬಡಿದು. ಸೀಳಿ ಹಾಕುತ್ತಾ ನಡೆದಳು. ತನ್ನ ನಾಲಿಗೆಯನ್ನು ಚಾಚಿ ಹಲ್ಲನ್ನು ಕಡಿಯುತ್ತ ಯಾರಿಂದಲೂ ಜಯಿಸಲು ಸಾಧ್ಯವಾಗದ ದೈತ್ಯ ವೀರರನ್ನು ಸಕಲಾಯುದ್ಧಗಳನ್ನು ಕರಕರನೆ ಕಡಿದು ನುಂಗಿಬಿಟ್ಟಳು. ಇದರಿಂದ ಮಾರಿಯು ಪುಷ್ಟಳಾಗಿಯೂ ಅತ್ಯಂತ ಶಕ್ತಿಯುಳ್ಳಳ್ಳಾಗಿಯೂ ಬೆಳೆದದ್ದನ್ನು ಕಂಡು, ದೈತ್ಯನು ಸಿಟ್ಟಿಗೆದ್ದು ಎಲೈ ಮಾರಿಯೇ ಪಶುಭಕ್ಷಣದಿಂದ ಇಷ್ಟು ಕೊಬ್ಬಿರುವ ನಿನ್ನ ಗರ್ವವನ್ನು ಕ್ಷಣಮಾತ್ರದಲ್ಲಿ ದೂರ ಮಾಡುವೆನು. ನೀನು ನನಗೊಂದು ತುತ್ತು, ಎಂದು ತನ್ನ ಗದೆಯನ್ನು ತಿರುಗಿಸಿ ಬಲವಾಗಿ ಹೊಡೆದನು. ಮಾರಿ ಅದನ್ನು ಕೈಯಲ್ಲಿ ಹಿಡಿದು ನಗುತ್ತಾ ವಿಶ್ವರೂಪವನ್ನು ತಾಳಿ ಬಾಣದ ಮಳೆಗೆರೆದಳು. ಆ ಬಾಣಗಳನ್ನು ಮಲ್ಲಾಸುರನು ತನ್ನ ಸಮೀಪಕ್ಕೆ ಬರಗೊಡದಂತೆ ತಡೆದು ಕೆಡವಿದನು. ಮತ್ತೆ ಮಾರಿಯ ಮೇಲೆ ಬಾಣಗಳನ್ನು ಬಿಟ್ಟನು. ಆ ಬಾಣಗಳು ಮಾರಿಯ ಹೊಟ್ಟೆಯನ್ನು ಸೇರಿ ಶಯನಿಸಿದವು. ಇದರಿಂದ ಸಿಟ್ಟಿಗೆದ್ದು ಮಾರಿಯು ತ್ರಿಶೂಲವನ್ನು ಕೈಗೆ ತೆಗೆದುಕೊಂಡು ಬಲವಾಗಿ ದೈತ್ಯನ ಹೆಗಲಿಗೆ ಹೊಡೆಯಲು ಹೋಗಿ ಹೆಗಲು ಜಾರಿ ನೆಲಕ್ಕುರುಳಿತು. ಭುಜದಿಂದ ರಕ್ತವು ನದಿಯೋಪಾದಿಯಲ್ಲಿ ಹರಿಯಿತು. ಅಲ್ಲಿ ಶೋಣ ತೀರ್ಥವು (ರಕ್ತದನದಿ) ಉತ್ಪತ್ತಿಯಾಯಿತು.

ಮಲ್ಲಾಸುರನು ಕೂಡಲೆ ಕತ್ತರಿಸಿದ ಹೆಗಲಿನಿಂದ ಕಣ್ಣುಮುಚ್ಚಿ ತೆರೆಯುವಷ್ಟರೊಳಗಾಗಿ ಹೊಸಬಾಹು ಆಭರಣ ಖಡ್ಗದಿಂದ ಅಲಂಕೃತವಾಗಿ ಉದ್ಭವಿಸಿತು. ಇದನ್ನು ಕಂಡ ಘೃತಮಾರಿಯು ಸಿಂಹನಾದ ಮಾಡುತ್ತಾ ಗಗನಕ್ಕೆ ಹಾರಿದಳು. ಅಂತರಿಕ್ಷದಿಂದ ಬಹುಭಾರವಾದ ಆಣೆಕಲ್ಲು

ಬಂಡೆಗಳನ್ನು ಶತ್ರುಸೈನ್ಯದ ಮೇಲೆ ಮಳೆಗೆರೆದಳು. ಇದರಿಂದ ಮಲ್ಲಾಸುರನ ಸೈನ್ಯವು ದಿಕ್ಕು ತೋಚದೆ ಬೊಬ್ಬೆಹಾಕಿತು. ಅನೇಕರು ಮಡಿದರು. ಕೆಲವರು ಓಡಿದರು. ಕೂಡಲೆ ದೈತ್ಯರ ಅರಸನು ಕುಪಿತನಾಗಿ ಕೇಕೆಹಾಕುತ್ತಾ ಆ ಯುದ್ಧ ಸಮೇತನಾಗಿ ತಾನು ಗಗನಕ್ಕೆ ಹಾರಿದನು. ಮಾರಿಯು ಕೂಡಲೆ ಭೂಮಿಗಿಳಿದು ಶತ್ರುಸೈನ್ಯವನ್ನು ನಾಶಮಾಡತೊಡಗಲು, ಕುಪಿತನಾದ ಮಲ್ಲಾಸುರನು ತನ್ನ ಅಮೋಘವಾದ ಬಾಣವನ್ನು ಎದೆಗೇರಿಸಿ ಕುಲದೈವಕ್ಕೆ ನಮಿಸಿ ಸಿಂಹನಾದ ಮಾಡುತ್ತಾ, ಬಾಣ ಪ್ರಯೋಗ ಮಾಡಲು ಅದರಿಂದ ಸಹಸ್ರಾರು ಬಾಣಗಳು ಉದ್ಭವಿಸಿ ಮಾರಿಯನ್ನು ಮುತ್ತಿ ಅವಳು ಮೂರ್ಛಿತಳಾದಳು.

೩.೧೧. ಚಂದಾಲಿಂಗ ಹಾಗೂ ಮಲ್ಲಾಸುರನ ಪುನರ್‌ಯುದ್ಧ : (Re-War of Chandalinga nad Mallasura)

ಘೃತಮಾರಿಯು ಮೂರ್ಛಿತಳಾದ ಕೂಡಲೆ, ಅಂದಚಂದಾಲಿಂಗನು ಪ್ರಳಯಾಗ್ನಿಯಂತೆ ಕಾಲಭೈರವನಾಗಿ ಕಣ್ಣುಗಳಲ್ಲಿ ಕಿಡಿಯನ್ನು ಕಾರುತ್ತಾ ರಣಘರ್ಜನೆಯನ್ನು ಮಾಡುತ್ತಾ ತನ್ನ ಢಮರು ತ್ರಿಶೂಲ ಮುಂತಾದ ಆಯುಧಗಳಿಂದೊಡಗೂಡಿದ ವಸ್ತುಗಳಿಂದ ರಣರಂಗಕ್ಕಿಳಿದನು. ಅಂದ ಚಂದಾಲಿಂಗನು ತನ್ನ ಅನುಯಾಯಿಗಳಿಗೆ ಮಾರಿಯನ್ನು ಉಪಚರಿಸಲು ತಿಳಿಸಿ ಯುದ್ಧಸನ್ನದ್ಧನಾದುದ್ದನ್ನು ಕಂಡು ಮಲ್ಲಾಸುರನು, ಎಲೈ! ಅಂಜುಕುಳಿಯೂ, ಬೂಧಿಬಡಕನೂ ಆದ ಶಿವನೆ ನೀನು ಹೆದರಿ ಮಾರಿಯನ್ನು ಕಳಿಸಿದವನು ನೀನಲ್ಲವೆ? ಏನು ಶೂರನೊ ನೀನು ಈಗಲಾದರೂ ಕೈಲಾಸಕ್ಕೆ ಹೋಗಿ ಸುಖದಿಂದಿರು. ಪ್ರಬಲ ಪರಾಕ್ರಮಿಯಾದ ನನ್ನ ಐಶ್ವರ್ಯವೇನು? ಬೂದಿಬಡಕನಾದ ನಿನ್ನ ಐಶ್ವರ್ಯವೇನು? ಸಮರ ಪ್ರವೀಣನಾದ ನನ್ನ ಭುಜಬಲವೇನು? ಭಿಕ್ಷುಕನಾದ ನಿನ್ನ ಬಲತೋಳಿನ ಬಲವೇನು? ಇದನ್ನೆಲ್ಲಾ ಯೋಚಿಸಿ ನೋಡಿ ಸುಮ್ಮನೆ ಹಿಂತಿರುಗದೆ, ನನ್ನೊಡನೆ ಯುದ್ಧಮಾಡುವೆ ಎನ್ನಲು ನಿನಗೆ ನಾಚಿಕೆಯಾದರು ಬರುವುದಿಲ್ಲವೇ? ಎಂದು ನುಡಿಯಲು ಭಕ್ತವತ್ಸಲನಾದ ಶಿವನು, ಹೌದು ಕೇಳು ಇದುವರೆಗೂ ಮಾತನಾಡಿದುದು ಸತ್ಯವೆಂದು ತಿಳಿ. ಅಂಜುಕುಳಿಯೂ, ಭಿಕ್ಷುಕನೂ, ಆದ ನನ್ನ ಸಂಗಡ ಯುದ್ಧಮಾಡಲು ಮಾತ್ರ ಮರೆಯಬೇಡ ಎಂದು ತನ್ನ ಡಮರುಗವನ್ನು ಬಾರಿಸುತ್ತಾ ಸಿಂಹನಾದವನ್ನು ಮಾಡಿ ಬಾಣಪ್ರಯೋಗ ಮಾಡಲು ದೈತ್ಯನು ಆ ಬಾಣಗಳನ್ನು ತನ್ನ 'ಜಟವೆಂಬ' ಆಯುಧದಿಂದ ತಡೆದು ಕಡುಕೋಪದಿಂದ ಶಿವನ ಮೇಲೆ ಖಡ್ಗದಿಂದ ಹೊಡೆಯಲು ಮಲ್ಲಾಸುರನು ಕಡುಕೋಪಗೊಂಡು ಆರ್ಭಟಿಸಿ ತನ್ನ ರಾಕ್ಷಸೀ ಮಾಯೆಯಿಂದ 'ಮಹಾಗಜದ' (ಆನೆ) ಆಕಾರವುಳ್ಳವನಾಗಿ ಭೂಮಿ ಆಕಾಶಗಳಿಗೆ ಏಕಾಗಿ ಬೆಳೆದನು. ಇದರಿಂದ ಘೋರ ಸಾಗರವು ಅಲ್ಲೋಲ ಕಲ್ಲೋಲವಾಯಿತು. ಭೂಮಿಯು ಗಡ ಗಡನೆ ನಡುಗುತ್ತಾ ಪಾತಾಳಕ್ಕಿಳಿಯುವುದೋ ಎಂಬಂತಾಗಲು ಶಿವನು ಸಿಟ್ಟಿನಿಂದ ಮಹಾ ಪ್ರಬಲವೂ ಅತೀ ತೀಕ್ಷ್ಣವು ಆದ ತನ್ನ ಅಗ್ನಿಯಾಸ್ತ್ರವನ್ನು ಬಿಟ್ಟನು. ಇದರ ತಾಪಕ್ಕೆ ಸಪ್ತ ಸಮುದ್ರಗಳು ಕುದಿಯತೊಡಗಿದವು. ಪರ್ವತಗಳು

ಕಂಪಾದವು. ಪ್ರಜೆಗಳು ಪ್ರಳಯಕಾಲ ಬಂತೆಂದು ಭಾವಿಸಿ ಶಿವ ಧ್ಯಾನಾಸಕ್ತರಾದರು. ದೇವೇಂದ್ರನ ಸಹಸ್ರ ಕಣ್ಣುಗಳಲ್ಲಿ ನೀರು ಸುರಿಯಲು ಮೊದಲಾಯಿತು.

ದೈತ್ಯ ಸೈನ್ಯಕ್ಕೆ ದಿಕ್ಕು ಕಾಣದಾಯಿತು. ಇದರಿಂದ ಬಳಲಿ ಬೆಂಡಾದ ಮಲ್ಲನು ಮಹಾ ಪ್ರಯಾಸದಿಂದ 'ಮೇಘಾಸ್ತ್ರ' ಬಿಟ್ಟನು. ಈ ಮೇಘಾಸ್ತ್ರದ ಮಹಿಮೆಯಿಂದ ಸಮುದ್ರದ ನೀರು ಕುದಿಯುವುದು ನಿಂತಿತು. ಪರ್ವತಗಳು ಕಪ್ಪಾಗತೊಡಗಿದವು. ಆಕಾಶದಲ್ಲಿ ಸಿಡಿಲು ಕಿವಿಯು ಒಡೆದು ಹೋಗುವಂತೆ ಆರ್ಭಟ ಮಾಡಲಾಯಿತು. ಜಲಧಾರೆಯು ಭೋರ್ಗರೆಯುತ್ತಾ ಬಂದು ಅಗ್ನಿಯಾಸ್ತ್ರವನ್ನು ನಂದಿಸಿ ಬಿಟ್ಟಿತು. ಬಹಳ ರಭಸದಿಂದ ಬೀಳುತ್ತಿದ್ದ ಆಣೆಕಲ್ಲಿನ ಹೊಡೆತಕ್ಕೆ ಸಿಲುಕಿ ಅನೇಕ ಮರಣಗಳು ಮತ್ತು ದೈತ್ಯದಾವರ ತಲೆಗಳು ಒಡೆದು ಚುರು ಚುರಾದವು. ಗಜತುರುಗಗಳು ಯಾರ ಹಿಡಿತಕ್ಕೂ ಸಿಕ್ಕದೆ ಒಡತೊಡಗಿದವು.

ರಣಾಂಗಣದಲ್ಲಿ ಮೇಘಾಸ್ತ್ರ ಬಲದಿಂದ ಮಳೆ ಬೀಳಲು ಸಮುದ್ರವೇ ನುಗ್ಗಿ ಬಂದಂತೆ ಕಾಣುತ್ತಿತ್ತು. ಅನೇಕ ನದಿಗಳು ಒಡೆದು ಕೂಡಿಕೊಂಡು ಹರಿಯುತ್ತಿದ್ದವು. ಈ ಹರಿಯುತ್ತಿದ್ದ ನೀರಿನಲ್ಲಿ ಅನೇಕರು ಮೃತಪಟ್ಟರು. ಕೆಲವರು ತೇಲುತ್ತ ಮುಳುಗುತ್ತಾ ಕೂಗಾಡುತ್ತಿದ್ದರು. ಕೆಲವರು ತಮ್ಮ ಸರ್ವಶಕ್ತಿಯನ್ನು ಉಪಯೋಗಿಸಿ ಪ್ರಾಣದಾಸೆಯಿಂದ ಈಜುತ್ತಿದ್ದರು. ಈ ರೀತಿಯಲ್ಲಿ ಸಕಲರೂ ಮಹಾಪ್ರಳಯ ಜಲದಲ್ಲಿ ಮುಳುಗುವುದನ್ನು ಕಂಡು ಅಂದಚಂದಲಿಂಗನು ವಾಯುಅಸ್ತ್ರವನ್ನು ಬಿಟ್ಟನು. ಇದರ ಸಹಾಯದಿಂದ ಯುದ್ಧ ಭೂಮಿಯು ಮೊದಲಿನಂತೆ ನಿರ್ಜನವಾಯಿತು. ಶಿವನು ತನ್ನ ಕೋಪವನ್ನು ತಡೆಯಲಾರದೆ ತನ್ನ ಮಂತ್ರ ಯುಕ್ತವಾದ 'ಪಾಶುಪತಾಸ್ತ್ರವನ್ನು' ಬಿಟ್ಟು ತ್ರಿಶೂಲವನ್ನು ಮಲ್ಲಾಸುರನ ಎದೆಗೆ ಗುರಿಯಿಟ್ಟು ಹೊಡೆಯಲು ಪ್ರಬಲವಾದ ಅಸ್ತ್ರಗಳನ್ನು ಹಿಮ್ಮೆಟ್ಟಿಸಲಾರದೆ, ಸರ್ವ ಆಯುಧಗಳೂ ಅನುಪಯೋಗವಾಗಲು ಮಲ್ಲಾಸುರನು ತನ್ನ ಹೃದಯದಲ್ಲಿ ಸ್ಥಳವನ್ನು ಕೊಟ್ಟನು. ಇವನ ಸೈನ್ಯದಲ್ಲಿ ಅಹಂಕಾರವು ಹುಟ್ಟಿತು. ದಂಡು ರಣರಂಗವನ್ನು ಬಿಟ್ಟೋಡಿತು. ಹೃದಯದಲ್ಲಿ ಹೊಕ್ಕ ತ್ರಿಶೂಲದ ಭಾದೆಯನ್ನು ತಾಳಲಾರದೆ ಗಗನಾಭಿಮುಖವಾಗಿ ಅರಚುತ್ತಾ ಕಣ್ಣುಗುಡ್ಡೆಗಳನ್ನು ತಿರುಗಿಸುತ್ತಾ ನೆಲಕ್ಕುರುಳಿದನು.

೩.೧೧.೧. ಚಂದಾಲಿಂಗನಿಂದ ಮಲ್ಲಾಸುರನಿಗೆ ವರ ಪ್ರದಾನ : (Presentation of Mallasura From Chandalinga)

ಮಲ್ಲಾಸುರನು ನೆಲಕ್ಕುರುಳಿದ ಕೂಡಲೆ ಪರಶಿವನು ತನ್ನ ಭಕ್ತನಿಗೆ ಮುಕ್ತಿಯನ್ನು ಕೊಡಬೇಕೆಂದು ಆತುರದಿಂದ ಎಲೈ ನೀಚನಾದ ಮಲ್ಲನೇ ನನ್ನೊಡನೆ ಯುದ್ಧಕ್ಕೆ ಬರುವೆಯಾ ಎಂದು ಆರ್ಭಟಿಸುತ್ತಾ ಬಂದು ತನ್ನ ಪವಿತ್ರ ಪಾದಕಮಲಗಳಿಂದ ಮಲ್ಲಾಸುರನ ಮಸ್ತಕಕ್ಕೆ ಶ್ರೀಶಂಕರನ ಪಾದದ ಸ್ಪರ್ಶದಿಂದ. ಮಲ್ಲಾಸುರನ ದುಷ್ಟಬುದ್ಧಿಯು ಇಂದ್ರಜಾಲದಂತೆ ಮಾಯವಾಯಿತು. ಕೂಡಲೇ ಶಿವನ ಪಾದಗಳನ್ನು ಹಿಡಿದುಕೊಂಡು ನಾನಾ ರೀತಿಯಾಗಿ ಸ್ತೋತ್ರಮಾಡಿ ಹೇ ಪರಮೇಶ್ವರಾ. ದೀನದಯಾಳು. ಪ್ರಭುವೇ. ನಿತ್ಯ ಶಿರೋಮಣಿಯೇ. ನಿರ್ವಿಕಾರನೆ. ಸಾಂಬಸದಾಶಿವಃ

ಚಂದ್ರಶೇಖರನೆ ನಿನಗೆ ನನ್ನ ಅನಂತ ನಮಸ್ಕಾರಗಳು. ಭಕ್ತವತ್ಸಲನಾದ ಶಂಕರನೆ ನಾನು ಪೂರ್ವ ಜನ್ಮದಲ್ಲಿ ಮಾಡಿದ ಪಾಪದ ಮೂಲಕ ಅಸುರ ಯೋನಿಯಲ್ಲಿ ಜನಿಸಿ ಮಹದಂಕಾರದಿಂದಲೂ, ದುರ್ಬುದ್ಧಿಯಿಂದಲೂ, ತುಂಬಾ ಮಾಡಬಾರದ, ಅನಂತ ಪಾಪ ಕಾರ್ಯಗಳನ್ನು ಮಾಡಿ ಪಾಪಕೂಪದಲ್ಲಿ ಬಿದ್ದಿರುವೆನು. ಈ ಮಡುವಿನಿಂದ ಎತ್ತಿ ಉದ್ಧರಿಸುವ ಭಾರವು, ಭಕ್ತ ಪರಿಪಾಲಕನಾದ ನಿನ್ನನ್ನೇ ಕೂಡಿದೆ. ದೇವಾ! ಅಹಂಕಾರದಿಂದಲೂ ಬುದ್ಧಿಲೋಪದಿಂದಲೂ ನಿನಗೆ ಹೀನವಾಗಿ ನುಡಿದೆನು.

ದೇವಾ ದೇವಾ ಸದಾಶಿವ; ನನ್ನ ಭುಜಬಲ ಪರಾಕ್ರಮದಿಂದಲೂ ನಿನ್ನ ಆಶೀರ್ವಾದ ಬಲದಿಂದಲೂ ಅಮರೇಶನಾದ ದೇವೇಂದ್ರನನ್ನು ದಾಸಾನು ದಾಸರನ್ನಾಗಿ ಮಾಡಿಕೊಂಡೆನು. ದೇವತೆಗಳಿಗೆ ಸಾಧ್ಯವಾದ ಅನೇಕ ಸುಖ ಭೋಗಗಳನ್ನು ನನ್ನ ಇಚ್ಛಾ ಪೂರ್ತಿಯಾಗಿ ಅನುಭವಿಸಿ ಸಂತೃಪ್ತನಾದೆನು. ದೇವರ ದೇವನೂ, ಮೃತ್ಯುಂಜಯನೂ ಆದ ನಿನ್ನೊಡನೆ ಯುದ್ಧಮಾಡಿ ನಿನ್ನಿಂದ ಹತನಾಗಿರುವೆನು. ನಿನ್ನ ದರ್ಶನ ಲಾಭವು ಅಂತ್ಯಕ್ಕೆ ಲಭಿಸಿತು. ಇನ್ನು ನನಗೆ ಸ್ವರ್ಗದಾಸೆಯಾದರೂ ಏತಕ್ಕೇ ನಾನು ಬೇಡತಕ್ಕದಾದರೂ ಏನಿರಬಹುದು. ಆದರೂ ದೇವೇಶನ ಕೀರ್ತಿಯು ಜಗತ್ತಿನಲ್ಲಿ ಅಜರಾಮರಾ ಉಳಿಯಲು, ಜನರು ಮೊದಲು ನನ್ನ ಹೆಸರನ್ನೆ ಉಚ್ಚರಿಸಿ ನಂತರ ನಿನ್ನ ಹೆಸರನ್ನು ಅಂದರೆ 'ಮಲ್ಲಾರಿ' ಎಂದು ಕರೆಯಲಿ. ನನ್ನ ಶಿರವು ನಿನ್ನ ಪವಿತ್ರ ಪಾದದ ಕೆಳಭಾಗದಲ್ಲಿರಲಿ. ಯಾವ ಭಕ್ತರು ಏಕನಿಷ್ಠೆಯಿಂದಲೂ, ನಿರ್ಮಲ ಭಕ್ತಿಯಿಂದಲೂ, ಮನಃಪೂರ್ವಕವಾಗಿ ನಿನ್ನನ್ನು ಉಪಾಸನೆಯಿಂದ ಆರಾಧಿಸುವರೋ, ಅಂತವರ ಮನೋರಥಗಳು ಈಡೇರಲಿ. ಅವರ ವಂಶ ವೃದ್ಧಿಯಾಗಲಿ. ಅವರು ಕೈಗೊಂಡ ಸಕಲ ಕಾರ್ಯಗಳು ನಿರಾಯಾಸವಾಗಿ ಕೈಗೂಡಲಿ. ನಾನು ಮರಣ ಕಾಲದಲ್ಲಿ ನಿನ್ನನ್ನು ಕುರಿತು ಮಾಡಿದ ಸ್ತೋತ್ರವನ್ನು ಯಾರು ಪ್ರತಿದಿನವೂ ಹರಸುವರೋ, ಅವರಿಗೆ ಯಾವಾಗಲೂ ಸಿದ್ಧಿಯನ್ನು ಕೊಡು. ಅವರಲ್ಲಿ ಯಾವ ದುಷ್ಟ ಬುದ್ಧಿಯೂ, ರೋಗವೂ, ದಾರಿದ್ರ ತೊಲಗುವಂತೆ ಮಾಡು. ಮತ್ತು ಅವರು ನೆನೆದಾಗ ನೀನು ಪ್ರಸನ್ನನಾಗುವ ಕೃಪೆ ಮಾಡಬೇಕೆಂದು ಬೇಡಿಕೊಂಡನು. ಕೂಡಲೆ ಚಂದ್ರ ಮೌಳಿಯು ಆಗಲಿ ಭಕ್ತಾಗ್ರಾಣಿಯೇ ನಿನ್ನ ಇಷ್ಟದಂತೆಯೇ ನಡೆಸಿಕೊಡುವೆನೆಂದು ನುಡಿದು ಮಲ್ಲಾಸುರನಿಗೆ ಮುಕ್ತಿಯನ್ನು ಕೊಟ್ಟು, ಇದನ್ನು ಕಂಡು ಅಮರರು ಪುಷ್ಪವೃಷ್ಟಿಮಾಡಿದರು. ಮಲ್ಲಾಸುರನು ಕೈವಲ್ಯ ಪದವಿಯನ್ನು ಸೇರಿದ.

೩.೧೧.೨. ಚಂಡಾಲಿಂಗನಿಂದ ಮಲ್ಲಾಸುರನ ಮಕ್ಕಳಿಗೆ ಶಾಪ : (Curses From Chandalinga to Mallasura's Children)

ತರುವಾಯ ಕಂಬಶೂಲ, ಶೂಲಧರ, ದೇವಗಂಧರ್ವ, ಲೋಹಾರ್ಗಲಿ, ಮಹಿಬಾಹು ಎಂಬ ಐದು ಮಂದಿ ಮಲ್ಲನ ಮಕ್ಕಳು, ಪರಶಿವನ ಮೇಲೆ ಏಕಕಾಲಕ್ಕೆ ಯುದ್ಧಕ್ಕೆ ಬಂದರು. ಅವರು ಬರುವುದನ್ನು ಕಂಡು ಅಂದಚಂದಲಿಂಗನು ಮನದಲ್ಲಿಯೇ ಕನಿಕರಪಟ್ಟು ತನ್ನ

ಪ್ರಿಯಭಕ್ತನ ಮಕ್ಕಳೆಂದು ಉದಾಶೀನ ಮಾಡಿ ಬಿಟ್ಟನು. ಇದರಿಂದ ಅವರ ಅಹಂಕಾರವು ಹೆಚ್ಚಿತು. ಹೀನಕುಲದಲ್ಲಿ ಹುಟ್ಟಿದವರಾದ ಇವರಿಗೆ ಗುರುಹಿರಿಯರೆಂಬುದು ಕೂಡಾ ಮನಸ್ಸಿಗೆ ತೋಚದೆ ಹೀನಕೃತ್ಯಗಳನ್ನು ಮಾಡಲು ಪ್ರವರ್ಧಕರಾದರು. ಸಹಿಸಲಸಾಧ್ಯವಾದ ತೊಂದರೆಗಳನ್ನು ಕೊಡುವುದರಿಂದ ಸುಜನರಿಗೆ ಮುಂದೆ ಕಂಠಕರಾಗಬಹುದೆಂದು ಊಹಿಸಿ, ಶಿವನು ಎಲೈ! ಮೂರ್ಖರೆ ನೀವು ಈ ರೀತಿಯಾಗಿ ಅಹಂಕಾರದಿಂದ ಕೊಬ್ಬಿ ಸಹಿಸಲಸಾಧ್ಯವಾದ ತೊಂದರೆ ಕೊಡುತ್ತಿರುವುದರಿಂದ ನೀವು ಪರ್ವತಗಳಾಗಿ ಬೀಳಿರಿ ಎಂದು ಶಾಪಕೊಟ್ಟನು.

೩.೧೨. ಚಂಡಾಲಿಂಗನು ಶಿವನ ಸ್ವರೂಪಿಯಾಗಿ ಮೈಲಾರದಲ್ಲಿ ನೆಲೆಸಿರುವುದು : (Chandalinga is The Likeness of Lord Shiva in Mylara)

ಈ ರೀತಿ ದೈತ್ಯ ವಂಶವು ನಿರ್ಮೂಲವಾದ ನಂತರ ಮಹಾದೇವನು ಋಷಿಗಳನ್ನು ಕರೆದು, ಎಲೈ ತಪಸ್ವಿಗಳೇ ಇಂದಿಗೆ ಮದೋನ್ಮತ್ತರಾದ ಮಲ್ಲಾಸುರರು ನಾಶವಾದರು. ಇನ್ನು ಮೇಲೆ ನಿರ್ಭಯವಾಗಿ ತಪಸ್ಸನ್ನು ಆಚರಿಸಿರಿ ಎಂದು ಆಶೀರ್ವದಿಸಿದನು. ಶಿವನ ವಾಕ್ಯವನ್ನು ಕೇಳಿ ಮುನಿಗಳು ಚಂದ್ರಶೇಖರನಿಗೆ ಶಿರಬಾಗಿ ಅನನ್ಯ ಭಕ್ತಿಯಿಂದ ನಮಿಸಿ. ದೇವಾ ಶಂಕರ! ಮಲ್ಲಾರಿ ಅಂದಚಂದಲಿಂಗನ ಕಲಿಕಾಲ ಮಹಾತ್ಮೆಯಿಂದ, ಪೀಡಿತರಾದ ನಿನ್ನ ಭಕ್ತರ ಸಲುವಾಗಿಯೂ, ನಮ್ಮ ರಕ್ಷಣೆಗಾಗಿಯೂ, ತುಂಬಾ ತೊಂದರೆಯನ್ನು ಅನುಭವಿಸಿದ, ನೀನು ಮರಳಿ ನಿನ್ನ ಸ್ಥಳಕ್ಕೆ ಹೋದರೆ ನಿನ್ನ ನೆನಪು ಬಾರದಂತಾಗಿ, ಪ್ರಜಾಹಿಂಸೆಗೆ ಕಾರಣವಾಗಬಹುದು. ಆದ್ದರಿಂದ ನಮ್ಮ ಪ್ರಾರ್ಥನೆಯಂತೆ ನೀನು ಇಲ್ಲಿಯೇ ನೆಲಸಿ ನಮ್ಮವರಿಗೆ ದರ್ಶನ ಭಾಗ್ಯವನ್ನು ಕೊಡುವ ಕೃಪೆಯಾಗಬೇಕೆಂದು ಬೇಡಿಕೊಂಡರು.

ಆಗ ಚಂದಾಲಿಂಗನ ರೂಪದಲ್ಲಿದ್ದ ಶಿವನು ಹಾಗೆಯೇ ಆಗಲೆಂದು ಮುನಿಗಳಿಗೆ ವಚನವನ್ನು ಕೊಟ್ಟು ಪ್ರಕಾಶಮಾನವೂ, ಪವಿತ್ರವೂ ಆದ, ಭೂಕೈಲಾಸ ಸಮಾನವು ಆದ ಕಲ್ಪವೃಕ್ಷದ ಕೆಳಗೆ ತನ್ನ ಶಕ್ತಿಯಿಂದ, ಪಾರ್ವತಿ ಸಮೇತನಾಗಿ ದಿವ್ಯತಪಸ್ಸಿನಿಂದೊಡಗೂಡಿ ಎರಡು (೨) ಲಿಂಗಗಳಾಗಿ ಮಾರ್ಗಶಿರ, ಶುಕ್ಲಪಕ್ಷದ ಷಷ್ಠಿ ರವಿವಾರದಲ್ಲಿ, ಚಂದ್ರನು ಶತತಾರಾ ನಕ್ಷತ್ರದಲ್ಲಿದ್ದಾಗಲೇ ಶಿವನು ಮೂಡಿದನು. ಅಂತಹ ಸುದಿನದಲ್ಲಿ ಯಾತ್ರಾರ್ಥಿಗಳಾಗಿ ಸ್ವರ್ಗದಿಂದ ದೇವತೆಗಳು, ಋಷಿಗಳು, ಗಂಧರ್ವರು, ಇಂದ್ರಾದಿ ದೇವತೆಗಳು, ಸ್ವರ್ಗಲೋಕದ ಸುಂದರಿಯರು, ಮೊದಲಾದ ದೇವಾನುದೇವತೆಗಳು ಬಂದರು. ಅದರಂತೆ ಪಾತಾಳದಿಂದ ನಾಗರಾಜನು, ನಾಗಕನ್ಯೆಯರು, ಹಲವಾರು ಸರ್ಪಗಳು ಬಂದಿದ್ದವು. ಶಿವನು ಕರುಣಿಸಿದ ವರಪ್ರದಾನದಂತೆ, ಮಣಿ-ಮಲ್ಲಾಸುರರ ಪಟ್ಟಣವಾದ 'ಪ್ರೇಮಪುರಿ'ಯನ್ನು 'ಮಲ್ಲಾರಿಪುರವೆಂದು' ಕರೆದರು. ಅದೇ ಈಗ ಮೈಲಾರಲಿಂಗವೆಂದೂ, ಗುಡ್ಡವಲ್ಲಿ ದೇವರು ನೆಲೆಸಿರುವದರಿಂದ ದೇವರ ಗುಡ್ಡ ಎಂದೂ ಕರೆಯುವರು. ಇಂದು ಸರ್ವಭಕ್ತಾದಿಗಳಿಂದಲೂ ಪೂಜೆಗೆ ಅಣಿಯಾಗುವಂತಾಗಿದೆ ಹಾಗೂ ದರ್ಶನ ಭಾಗ್ಯ ಪಡೆಯುವಂತಾಗಿದೆ.

೩.೧೩. ಚಂದಾಲಿಂಗನು ಶಿವನ ಸ್ವರೂಪಿಯಾಗಿ ಪ್ರತ್ಯಕ್ಷ : (Chandalinga is The Counterpart of Lord Shiva)

ದೇವತೆಗಳು ಅಂದಚಂದಲಿಂಗನನ್ನು ನಂದನವನದ ದಿವ್ಯಪುಷ್ಪಗಳಿಂದಲೂ ಧೂಪ, ದೀಪ, ನೈವೇದ್ಯ ಗಳಿಂದಲೂ, ಗಂಟೆ, ಜಾಗಟೆ, ಶಂಖ, ಡಮರು ಮುಂತಾದ ವಾದ್ಯಗಳಿಂದಲೂ ವೇದೋಕ್ತ ಮಂತ್ರಗಳಿಂದಲೂ ಭವಪೂರಿತ ನಿಷ್ಕಳಂಕ ಭಕ್ತಿಯಿಂದ ಪೂಜಿಸಿದರು. ನಂತರ ಶಿವನು ತನ್ನ ನಿಜರೂಪಿನಿಂದ ಪ್ರಕಟನಾಗಿ, ಎಲೈ ಭಕ್ತವೃಂದವೇ, ನಿಮ್ಮ ಅಖಂಡವಾದ ಭಕ್ತಿಗೆ ನಾನು ಬಹಳ ಮೆಚ್ಚಿದೆನು. ನಿಮಗೆ ಬೇಕಾದ ವರಗಳನ್ನು ಬೇಡಿರಿ ಎಂದು ಹೇಳಿದನು. ಆಗ ಭಕ್ತವೃಂದವು ಹೇ ಶಿವನೆ ಸಕಲ ವಿಧದಲ್ಲಿಯೂ, ಸದಾಕಾಲದಲ್ಲಿಯೂ, ಸಹಾಯ ಮಾಡುತ್ತಿರುವಿ. ಆದರೆ ಭೂಲೋಕದ ಜನರು ಕಲಿ ಮಹಾತ್ಮನ ಕ್ರೂರ ಅಟ್ಟಹಾಸಕ್ಕೊಳಗಾಗಿ ಮಾಡಬಾರದ್ದನ್ನು ಮಾಡುವರು. ಅವರಿಗೆ ಸುದ್ದಿಯನ್ನು ದಯಪಾಲಿಸಿ ಭರತಖಂಡದಲ್ಲಿರುವ ಸಮಸ್ತರಾದ ರಾಜರು ನಿನ್ನ ಕೃಪೆಯಿಂದ ದುಷ್ಟಶಿಕ್ಷಕರಿಗೂ, ಶಿಷ್ಟ ಪರಿಪಾಲಕರೂ ಆಗುವಂತೆ ಮಾಡು. ಸಕಲರಿಗೂ ಸಕಲೇಶ್ವರ್ಯ ಭಾಗ್ಯವನ್ನು, ನಿನ್ನಂತೆ ಸಮರ ಶೂರರಾಗುವರೋ ಯಾರೂ, ನಿನಗಾಗಿ ಉಪವಾಸಾಧಿವ್ರತಗಳನ್ನು ನಡೆಸುವರೋ, ಅಂಥವರ ಮನೆಗಳನ್ನು ಉದ್ಧರಿಸು. ಹಾಗೂ ಸದಾ ಅವರನ್ನು ಕಾಪಾಡು ಎಂದು ಬೇಡಿದರು.

ಶಿವನು ಭಕ್ತ ಸಮೂಹಕ್ಕೆ ಭಕ್ತರೇ ನೀವು ನಿಮ್ಮ ಹಿತದ ಕಡೆಗೆ ಲಕ್ಷ್ಯಕೊಡದೆ, ಭೂಲೋಕದ ಜನರ ಹಿತಕ್ಕಾಗಿ ವರವನ್ನು ಬೇಡಿದಿರಿ, ನೀವು ನಿಜವಾಗಲೂ ಸತ್ಯವಂತರೂ ಆಗಲಿ. ನನ್ನ ಈ ಚರಿತ್ರೆಯನ್ನು ಯಾರು ಪಠಣ ಮಾಡುವರೋ, ಅಥವಾ ಕೇಳುವರೋ ಅಂಥವರು ಸದಾಸುಖದಿಂದ ಇರುತ್ತಾರೆ. ಯಾರ ಮನೆಯಲ್ಲಿ ನನ್ನ ಪ್ರತಿಮೆಯು ಪೂಜೆಗೊಳ್ಳುವುದೋ ಆ ಸ್ಥಳದಲ್ಲಿ ವಾಸ ಮಾಡುವೆನು, ಅಂಥವರಿಗೆ ಯಾವ ಬಾಧೆಯೂ ತಟ್ಟದಂತೆ ನಾನು ನೋಡಿಕೊಳ್ಳುವೆನು. ನನ್ನ ಧ್ಯಾನಮಾಡುವ ಭಕ್ತರಿಗೆ ಅಂತ್ಯಕ್ಕೆ ನೀತಿಯನ್ನು ಕೊಡುವೆನು. ನೀವು ಇಲ್ಲಿಯಾಗಲಿ, ಅಥವಾ ಮಣಿಕಾಸುರನ ವಾಸಸ್ಥಾನವಾದ ಗುಡ್ಡದಲ್ಲಿಯಾಗಲಿ, ನನ್ನನ್ನು ನೆನೆದರೆ ಸಾಕು ನಿಮಗೆ ಪ್ರಸನ್ನನಾಗುವೆನು. ಎಲ್ಲೆಡೆಯಲ್ಲಿಯೂ ಏಕಕಾಲಕ್ಕೆ ನೆಲೆಸಿ ಭಕ್ತರ ಕಷ್ಟವನ್ನು, ಅವರ ಬಯಕೆಯನ್ನು ಪೂರ್ಣ ಮಾಡುವೆನು ಎಂಬುದಾಗಿ ಅರುಹಿ, ಮುನಿಗಳನ್ನು ಅವರ ವಾಸಸ್ಥಳಕ್ಕೆ ಕಳುಹಿಸಿ ಅಂತರ್ದಾನವಾದನು.

೩.೧೪. ಹುಲ್ಲಪ್ಪನು ಪ್ರಾಣರಕ್ಷಣೆಗೆ ಗುಡೂರಿಗೆ ಬಂದಿದ್ದು : (Hullappa Came to Gudur For Life)

ಹುಡುಗನಾದ ಹುಲ್ಲಪ್ಪನು ಮೈಲಾರದಲ್ಲಿ ತಮ್ಮ ತಂದೆಯು ಪರಾಕ್ರಮಶಾಲಿಯಾಗಿರುವುದನ್ನು ನೋಡಿ. ಗಾಬರಿಗೊಂಡು ನನ್ನ ಜೀವಾತ್ಮ ಉಳಿಯುವುದಿಲ್ಲ ಎಂದು ಶಿವ... ಶಿವಾ... ಹರ... ಹರಾ... ನನ್ನನ್ನು ರಕ್ಷಿಸು ದೇವಾ. ನಿನ್ನ ಬಿಟ್ಟು ನನಗೆ ಯಾರೂ ಗತಿಯಿಲ್ಲ ಎಂದು

ತದೇಕಚಿತ್ತದಿಂದ ಆ ಪರಮೇಶ್ವರನ ಧ್ಯಾನವನ್ನು ಮಾಡಲಿಕ್ಕೆ ಹತ್ತಿದನು. ಪರಮೇಶ್ವರನು ಅವನ ಭಕ್ತಿಗೆ ಸಂತುಷ್ಟನಾಗಿ ಅವನನ್ನು ಮೆಚ್ಚಿ ಎಲೈ, ಹುಡುಗ ಹುಲ್ಲಪ್ಪನೆ ನಿನಗೇನು ವರ ಬೇಕು ಕೇಳು ನಾನು ತಕ್ಷಣ ಕೊಡುವೆನು ಎಂದನು. ಅದಕ್ಕೆ ಹುಲ್ಲಪ್ಪನು ಹೇ ದೇವಾ, ದಯಾಗುಣನು ಸೃಷ್ಟಿಕರ್ತ, ಸಕಲಧಾತ, ನನ್ನ ಸಂಕಟವನ್ನೆಲ್ಲಾ ನೀನೇ ಪರಿಹಾರಮಾಡು ನಿನ್ನ ಹೊರತು ಬೇರೆ ಯಾರಿಂದಲೂ ಕಷ್ಟ ಪರಿಹಾರವಾಗದು. ದೇವಾ ನನ್ನ ತಂದೆಯು ನನ್ನನ್ನು ಕೊಲ್ಲಲಾರದೆ ಬಿಡನು. ಆದರೆ ಎಂತೆಂಥ ಪರಾಕ್ರಮಶಾಲಿಗಳು ಅವನ ಕೈಯಲ್ಲಿ ಸ್ವಾಧಿಷ್ಟರಾದರು. ನನ್ನಂಥವನ ಪಾಡು ಏನು ದೇವಾ ನೀನೇ ನನ್ನನ್ನು ರಕ್ಷಿಸು ಎಂದನು.

ಪರಮಾತ್ಮನು ಹುಡುಗನಾದ ಹುಲ್ಲಪ್ಪನಿಗೆ ಬೋಧನೆ ಮಾಡಿದ್ದೇನೆಂದರೆ, ಎಲೈ, ಹುಡುಗನೇ ಕೈಯಲ್ಲಿ ಜಾಗಟೆಯನ್ನು ಹಿಡಿದುಕೊಂಡು, ಕೋರಿ ಅಂಗಿಗಳನ್ನು ತೊಟ್ಟು, ಹಣೆಯ ಮೇಲೆ, ಬಂಢಾರವನ್ನು ಧರಿಸಿ ಬಲಗೈಯಲ್ಲಿ ಶಂಖವನ್ನು ಹಿಡಿದು 'ಏಳ್ಕೋಟಿ' ಶಬ್ದವನ್ನು ನುಡಿಯುತ್ತಾ. ಹೊಳೆಯ ದಿಕ್ಕಿನ ಕಡೆಗೆ ಹೋದರೆ ನಿನ್ನ ಪ್ರಾಣವು ಉಳಿಯುವುದು ಎಂದನು. ಹುಡುಗನಾದ ಹುಲ್ಲಪ್ಪ ದೇವಾ, ನನಗೆ ಕೋರಿ ಅಂಗಿಯೇ, ನನಗೆ ಶಂಖವೇ, ಎನಗೆ ಜಾಗಟಿಯೇ, ಎಂಥ ವರಗಳನ್ನು ದೊರಕಿಸಿದೆ. ಹೊ... ಹೊ....ಕುರುಬರ ಮನೆಯಲ್ಲಿ ಹುಟ್ಟಿದ ಕಂಬಳಿಯೇ ಪಾಪಿಯ ಪರದೇಶಿಯೇ ಜೋಪಾನ ಮಾಡಿದ ಕಂಬಳಿಯ ಅಂಗಿ, ಜಂಗಮರ ಹೆಗಲಮೇಲೆ ಮೆರೆಯುವ ಕಂಬಳಿಯೇ, ಪಾರ್ವತಿಯ ಮದುವೆಯಾಗುವಾಗ ಲಕ್ಷ್ಮೀದೇವಿಯ ರೋಮದಿಂದ ಹುಟ್ಟಿದ ಕಂಬಳಿಯೇ ಎನಗೆ ಉಡುಗಿಯೇ?. ಆಗಲಿ ದೇವಾ ಎಂದು ಶಿವನ ಅಣತಿಯಂತೆ ಉಡುಪು ಧರಿಸಿ ಕೈಯಲ್ಲಿ ಶಂಖವನ್ನು ಹಿಡಿದು ಏಳುಕೋಟಿ>ಏಳುಕೋಟಿ ಶಬ್ದ ನುಡಿಯುತ್ತಾ ಅರಸೀ ಬೀಡಿಗೆ (ಗುಡೂರಿಂದ ಎರಡು ಕಿ.ಮೀ ದೂರ) ಬಂದ. ಅಲ್ಲಿ ಆತನಿಗೆ ವಾಸಸ್ಥಾನಕ್ಕೆ ಸರಿ ಹೋಗದೆ ಇದ್ದಾಗ ಗುಡೂರ ಗುಡ್ಡಕ್ಕೆ ಬಂದನು. ಗುಡ್ಡವನ್ನು ಏರಿ ಇಳಿದು ಮುಂದೆ ಬಂದು ಗುಡ್ಡದ ತುದಿಗೆ ನಿಂತು ಸುತ್ತ ಮುತ್ತ ನೋಡಿದ.

ಗುಡೂರು ಗುಡ್ಡಗಳ ನಡುವೆ ಆಶ್ರಯ ಪಡೆಯಲು ಸಾಧ್ಯ ಎಂದು ಕೊಂಡ. ಆದರೆ ಕೆಳಗೆ ಗುಡಿಯೊಂದು ಕಾಣಿಸಿತು. ಅದು ವೀರಭದ್ರನ ದೇವಸ್ಥಾನ. ಇಲ್ಲಿ ತನಗೆ ರಕ್ಷಣೆ ಸಿಕ್ಕಿತೆಂದು ಮೇಲಿನಿಂದ ಕೆಳಕ್ಕೆ ಹಾರಿದವನು ವೀರಭದ್ರದೇವರ ಬೆನ್ನಿಗೆ ಬಿದ್ದು, ವೀರಭದ್ರನೇ ಎನ್ನನ್ನು ನನ್ನ ತಂದೆಯಿಂದ ರಕ್ಷಿಸು. ನೀನಲ್ಲದೆ ಎನಗೆ ಯಾರು ಕಾಪಾಡುವರು ಎನ್ನುವಷ್ಟರಲ್ಲಿ ಅವನ ತಂದೆಯು ಭೋರ್ಗರೆಯುತ್ತಾ, ಕೋಪದಿಂದ ಹುಲ್ಲಪ್ಪನನ್ನು ಕೊಚ್ಚಿ ಹಾಕಲು ಬಂದ. ಅವನ ತಾಯಿ ಗಂಗೆಮಾಳವ್ವನೂ ಹಿಂದೆಯೇ ಓಡಿಬಂದಳು. ಚಂದಾಲಿಂಗಪ್ಪನು ಎಲೋ ಹುಲ್ಲನೇ ಎಲ್ಲಿ ಹೋಗುವೆ ನಿನ್ನನ್ನು ಕೊಲ್ಲಲಾರದೆ ಈ ಖಡ್ಗವನ್ನು ಕೆಳಗಿಳಿಸಲಾರೆನು ಎಂದು ಅಂದಚಂದಲಿಂಗನು ಉಗ್ರಕೋಪಿಯಾದನು. ಆಗ ವೀರಭದ್ರೇಶ್ವರನು, ಅಂದಚಂದಲಿಂಗನೆ ಸುಮ್ಮನೆ ನೀನು ಪಟ್ಟಣಕ್ಕೆ ಹೋಗು. ಇಲ್ಲದಿದ್ದರೆ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು

ಬೇಕಾದವರನ್ನು ಕರೆದುಕೊಂಡು ಹೋಗು. ಬೆನ್ನಿಗೆ ಬಿದ್ದವರನ್ನು ಮಾತ್ರ ಎಂದಿಗೂ ಕೊಡಲಾರೆ, ಇಲ್ಲದಿದ್ದರೆ ಯುದ್ಧ ಮಾಡಿ ನಿನ್ನ ಮಗನನ್ನು ಗೆದ್ದು ಒಯ್ಯುವೆನು ಎಂದು ವೀರಭದ್ರೇಶ್ವರನು ತನ್ನ ಉಗ್ರ ಮುಖದಿಂದ ಹೇಳಿದನು. ಅಂದಚಂದಲಿಂಗನು ಈ ಮಾತುಗಳನ್ನು ಕೇಳಿ ತನ್ನ ಹೆಂಡತಿ ಗಂಗೆಮಾಳವ್ವನಿಗೆ ನಡೆ, ನಮ್ಮ ಪಟ್ಟಣಕ್ಕೆ ಹೋಗೋಣ ಎಂದು ತನ್ನ ಹೆಂಡತಿಯನ್ನು ಕರೆದನು.

ಗಂಗೆಮಾಳಮ್ಮ ಬಂಜೆಯಾಗಿ ಬರಲಾರೆನು ನಾನು. ಆದರೆ ನಾನು ಶಿಶು ಇರುವಾಗ ಈ ಹುಡುಗನಾದ ಹುಲ್ಲಪ್ಪನನ್ನು ಕರೆದುಕೊಂಡು ಬಂದು ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಿಂತ ಹೆಚ್ಚಿಗೆ ಜೋಪಾನ ಮಾಡಿದವಳು ನಾನು. ಆದರೆ ಇವನನ್ನು ಹೇಗೆ ಬಿಟ್ಟು ಬರಲಿ ಮತ್ತು ಇದಲ್ಲದೆ, ಅಡವಿಯಲ್ಲಿ ಬಿಲ್ವಾಸ್ತ್ರವನ್ನು ಕೇಳಿದಾಗ ಉಟ್ಟಿರುವ ಸೀರೆಯ ದಡಿಗಳನ್ನು ಹರಿದು ಬಿಲ್ವಾಸ್ತ್ರಮಾಡಿಕೊಟ್ಟಿರುವೆ. ನಾನು ಇದಲ್ಲದೆ ಕಾಮಧೇನುವಿನ ಕೆನೆಯನ್ನು ತಿನ್ನಲು ಕೊಟ್ಟಿರುವೆನು. ಸರ್ವ ರೀತಿಯಿಂದ ಸಂರಕ್ಷಣೆ ಮಾಡಿದವಳು. ಅವನನ್ನು ದೊಡ್ಡವನನ್ನಾಗಿ ಮಾಡಿ ಈಗ ಹೇಗೆ ಬಿಟ್ಟು ಬರಲಿ ಎಂದಳು. ಆಗ ಚಂದಾಲಿಂಗ ಸಿಟ್ಟಿಗೆದ್ದು ತನ್ನ ಹೆಂಡತಿಯಾದ ಗಂಗೆಮಾಳವ್ವನನ್ನು "ಶಿರ್ಶಪವಾಡ" (ಶಿರಚ್ಛೇದ) ಮಾಡಿದನು. ಶಿರ್ಶಪವಾಡ ಮಾಡಿದ್ದಕ್ಕೆ "ಸರಪಳಿ ಪವಾಡ"ಎನ್ನುತ್ತಿರುವರು.

ಹುಡುಗನಾದ ಹುಲ್ಲಪ್ಪನು, ತಂದೆ ತನ್ನ ಸಾಕಿದ ತಾಯಿಯನ್ನು ಕೊಲ್ಲಿದ, ನಾನು ಇನ್ನಾರಿಗೆ ತಾಯಿ ಎನ್ನಲಿ? ನಾನು ಯಾರಿಗೆ ಅಮ್ಮಾನೆಂದು ಕೂಗಲಿ, ನನ್ನನ್ನು ತಾಯಿಯಿಲ್ಲದ ತಬ್ಬಲಿ ಮಗನನ್ನು ಮಾಡಿದೆ. ನನ್ನನ್ನು ಮಗನೆಂದು ಯಾರು ಕರೆಯುವರು. ಹೆತ್ತ ತಾಯಿಯಂತೆ ತುತ್ತು ಮಾಡಿ ಉಣಿಸುತ್ತಿದ್ದಳಲ್ಲ, ಈಗ ನನ್ನ ಆ ತಾಯಿಯನ್ನು ಎಲ್ಲಿ ಹುಡುಕಲಿ. ಈಗ ನನ್ನ ತಾಯಿಯನ್ನು ಬದುಕಿಸಿದರೆ ಸರಿ, ಇಲ್ಲದಿದ್ದರೆ, ನಿನ್ನನ್ನು ಕೊಲ್ಲದೆ ಬಿಡಲಾರೆನು. ಅನ್ನುವುದರೊಳಗಾಗಿ ಅಂದಚಂದಲಿಂಗನು ಖಡ್ಗವನ್ನು ಇರಿದನು. ಇದನ್ನು ಕಂಡು ಹುಲ್ಲಪ್ಪನು ತನ್ನ ನಡುವಿನಲ್ಲಿದ್ದ ಕತ್ತಿಯನ್ನು ಇರಿದನು. ಆಗ ಯುದ್ಧ ಸುರು ಆಗುವ ಸಂದರ್ಭದಲ್ಲಿ ವೀರಭದ್ರೇಶ್ವರನು ಎಲೈ! ಅಂದಚಂದಲಿಂಗನೆ ಯುದ್ಧ ಮಾಡುವುದು ಸರಿಯಲ್ಲ. ಹುಡುಗನಾದ ಹುಲ್ಲಪ್ಪ ನೀನು ಕೂಡ ಖಡ್ಗ ಇರಿಯ ಬೇಡ. ಆಗ ಹುಲ್ಲಪ್ಪನು ವೀರಭದ್ರೇಶ್ವರನ ಮಾತು ಕೇಳಿ ಅವನ ಪಾದಕ್ಕೆ ಬಿದ್ದು ಹಾಗಾದರೆ ನನ್ನ ತಾಯಿಯನ್ನು ಬದುಕಿಸಿ ಕೊಡಿ, ಎಂದು ಕೇಳಿದ. ಆಗ ವೀರಭದ್ರನು, ಮೂವರು ಸೇರಿ ಶಿವನನ್ನು ಧ್ಯಾನಿಸೋಣ ಅದರಂತೆ ಮೂರು ಜನ ಶಿವನನ್ನು ಧ್ಯಾನಿಸಿದರು. ಇವರ ಧ್ಯಾನಕ್ಕೆ ಪರಮಾತ್ಮನು ನಿಜರೂಪತಾಳಿ, ಏನು ವರಬೇಕು ಬೇಡರಿ ಎಂದು ಕೇಳಿದನು.

ದೇವಾ ನನ್ನ ಸಾಕು ತಾಯಿ ಗಂಗೆಮಾಳಮ್ಮನನ್ನು ಬದುಕಿಸಿಕೊಡು ಎಂದ. ಅವನ ಇಚ್ಛೆಯಂತೆ ಶಿವನು ಗಂಗೆಮಾಳಮ್ಮನ ಶಿರವನ್ನು ಜೋಡಿಸಿ ಆಕೆಗೆ ಜೀವಾತ್ಮವನ್ನು ನೀಡಿ ಅದೃಶ್ಯವಾದನು. ಆಗ ಹುಲ್ಲಪ್ಪ ತನ್ನ ತಂದೆಯ ಕಡೆಗೆ ತಿರುಗಿ ಏನು ವರಗಳನ್ನು ಕೊಡುತ್ತಿ

ಕೊಡು ತಂದೆಯೇ ನಿನ್ನಂಥ ಪರಾಕ್ರಮಶಾಲಿ ತಂದೆಯನ್ನು ಕಂಡು ಏನು ಕೇಳಬೇಕು ತಿಳಿಯುತ್ತಿಲ್ಲ ಎಂದ. ಆಗ ಚಂದಾಲಿಂಗನು ಮಗನೇ ನಿನಗೆ ವರಗಳನ್ನು ಕೊಡುವುದೇನೆಂದರೆ, ನಿನ್ನ ಜಾತ್ರೆಯಾದ ಮೂರು ದಿನಕ್ಕೆ ನನ್ನ ಜಾತ್ರೆಯಾಗಲಿ. ನಿನ್ನಲ್ಲಿ ತ್ರಿಶೂಲ, ಸರಪಳಿ ಪವಾಡ ಆಗಲಿ, ನನ್ನಲ್ಲಿ ವೀರಭದ್ರೇಶ್ವರ ನುಡಿ, ಅವತಾರ ನಿನ್ನದು ಎಂದು ಹೇಳಿ ತನ್ನ ಪಟ್ಟಣಕ್ಕೆ ಹೋದನು.

ಚಂದಲಿಂಗೇಶ್ವರನ ಮೂಲದ ಬಗ್ಗೆ ಅಧ್ಯಯನ ಕೈಗೊಂಡಾಗ ಆತನ ಪೂರ್ವಜರ ಮನೆತನವು ಶೈವ ಆರಾಧಕರಾಗಿದ್ದರು ಎಂಬುವುದು ತಿಳಿಯುತ್ತದೆ. ಸಂಪೂರ್ಣವಾಗಿ ಈತನ ಮನೆಯ ವಾತಾವರಣವೇ ಶಿವ ಭಕ್ತಿಯಿಂದ ತುಂಬಿತುಳುಕುತ್ತಿತ್ತು ಎಂದರೂ ತಪ್ಪಾಗಲಾರದು. ಈತನ ಪೂರ್ವಜರು ಪವಾಡ ಪುರ್ಸುರಂತೆ ಮೆರೆದಿರುವುದು ತಿಳಿಯುತ್ತದೆ. ಇವರ ಕಾಲದಲ್ಲಿ ವೈವಾಹಿಕ ಸಂಬಂಧಗಳು ಅವರವರ ಶಿವನ ಆರಾಧನಾ ಭಕ್ತರ ಮನೆಯಲ್ಲಿ ನಡೆಯುತ್ತಿರುವುದು ಗೋಚರಿಸುತ್ತದೆ. ಮಕ್ಕಳಿಲ್ಲದ ದಂಪತಿಯಾದ ಚಂದಾಲಿಂಗೆಪ್ಪ ಹಾಗೂ ಗಂಗೆಮಾಳವ್ವರಿಗೆ ಪವಾಡ ಸದೃಶ್ಯ ವೆಂಬಂತೆ ದಟ್ಟವಾದ ಕಾಡಿನಲ್ಲಿ ಸಿಕ್ಕ ಮಗು (ಹುಲ್ಲಪ್ಪ) ನನ್ನು ಅವರು ಬೆಳೆಸುವಂತ ಸಂಪ್ರದಾಯಗಳು ತಿಳಿಯುತ್ತವೆ. ಕಾಲ ಕಳೆದಂತೆಲ್ಲಾ ಸಾಕುಮಗ (ಹುಲ್ಲಪ್ಪ)ನ ಜೀವನ ವೃತ್ತಾಂತ ತಿಳಿಯುತ್ತದೆ.

ಹುಲ್ಲಪ್ಪನ ಮೂಲ ತಾಯಿ ಗಂಗಾದೇವಿಯು ತನ್ನ ಅಣ್ಣಂದಿರಯಿಂದ ಶೀಲಶಂಕೆಗೆ ಗುರಿಯಾಗಿ ಚಿತ್ರ ಹಿಂಸೆಯಿಂದ ಘೋರವಾದ ಸಾವಿಗೆ ಬಲಿಯಾಗುತ್ತಾಳೆ. ಇಂತಹ ಮನಕಲಕುವಂತ ಚಿತ್ರಣವು ಚಂದಾಲಿಂಗಪ್ಪನ ಮೂಲಕ್ಕೆ ಪೂರಕವಾಗಿದೆ. ಗಂಗಾದೇವಿ ಉದರದಿಂದ ಜನಿಸಿದ ಮಗು ಹುಲ್ಲಪ್ಪನು ಮುಂದೆ ಬೆಳೆಯುತ್ತಾ ಹಠಮಾರಿ ಸ್ವಭಾವದವನಾಗಿ ಪವಾಡ ಪುರುಷನಾಗುತ್ತಾನೆ. ಚಂದಾಲಿಂಗಪ್ಪನ ಮನೆಯಲ್ಲಿ ಹುಲ್ಲಪ್ಪ ಬಾಲಕನಾಗಿರುವಾಗ ತಮ್ಮ ಆಕಳನ್ನು ಶಿರಚ್ಛೇದ ಮಾಡಿದ್ದರಿಂದ ತಂದೆ ಚಂದಾಲಿಂಗಪ್ಪನ ಕೆಂಗಣ್ಣಿಗೆ ಗುರಿಯಾಗುತ್ತಾನೆ. ಇದರಿಂದ ಇಬ್ಬರಿಗೂ ಸಂಘರ್ಷ ನಡೆದು ಮೈಲಾರ ಪ್ರದೇಶಕ್ಕೆ ಬಂದು ಹುಲ್ಲನ್ನು ಮಲ್ಲಮಣಿಕಾಸುರ ಆಶ್ರಯ ಪಡೆಯುತ್ತಾನೆ. ಇದರಿಂದ ಬೆನ್ನಹತ್ತಿಬಂದ ಚಂದಾಲಿಂಗಪ್ಪನು ಆ ಪ್ರದೇಶದಲ್ಲಿ ಮಲ್ಲ ಮಣಿಕಾಸುರ ಮಧ್ಯೆ ಸಂಘರ್ಷ ನಡೆದು ಪವಾಡ ಪುರ್ಸನಾಗಿ ಶಿವನ ರೂಪವನ್ನು ತಾಳಿ ರಾಕ್ಷಸರನ್ನು ಸಂಹಾರಮಾಡುವನು. ಗಂಗೆಮಾಳವ್ವಳು ಘೃತಮಾರಿ ರೂಪತಾಳಿ ಮಲ್ಲಾಸುರ ಎಂಬ ದೈತನೊಡನೆ ಹೋರಾಟ ಮಾಡುವಳು. ಕೊನೆಗೆ ಇಬ್ಬರೂ ದಂಪತಿಗಳು ಅವತಾರ ಪುರುಷರಾಗಿ ಹುಲ್ಲಪ್ಪನನ್ನು ಹುಡುಕುತ್ತಾ ಗುಡೂರಿಗೆ ಬಂದು ವೀರಭದ್ರೇಶ್ವರನ ಸನ್ನಿಧಿಯಲ್ಲಿ ಹುಲ್ಲಪ್ಪನನ್ನು ಭೇಟಿಯಾಗುತ್ತಾರೆ. ಅಲ್ಲಿ ಚಂದಾಲಿಂಗಪ್ಪನು ಹುಲ್ಲಪ್ಪನನ್ನು ಖಡ್ಗದಿಂದ ಕೊಲ್ಲುವುದಕ್ಕೆ ಮುಂದಾದಾಗ ವೀರಭದ್ರನು ಇವರ ಮಧ್ಯ ಬಂದು ನ್ಯಾಯತೀರ್ಮಾನಿಸಿ ಇವರನ್ನು ಸ್ವಕ್ಷೇತ್ರ ಚಂದ್ರಗಿರಿಗೆ ಕಳಿಸುವನ್ನು ದಂಪತಿಗಳಿಬ್ಬರೂ ಅವತಾರ ಪುರುಷರಾಗಿ ಚಂದ್ರಗಿರಿ ಬೆಟ್ಟದಲ್ಲಿ ನೆಲೆಸಿಸುವರು. ಅಂದಿ ನಿಂದ

ಇವರು ದೈವ ಮಾನವರಾಗಿ ಜನಗಳಿಂದ ಆರಾಧನೆಗೆ ಪಾತ್ರರಾದರು. ಇದರಿಂದ ಭಕ್ತರು ಈ ದೈವ ಮನುಷ್ಯರ ಬಗ್ಗೆ ಆಚರಣೆ, ನಂಬಿಕೆ ಮತ್ತು ವಿಧಿ-ನಿಷೇಧಗಳನ್ನು ಅನುಸರಿಸುತ್ತಿದ್ದಾರೆ. ಅವುಗಳನ್ನು ಈ ಮುಂದಿನ ಅಧ್ಯಾಯ ನಾಲ್ಕರಲ್ಲಿ ತಿಳಿಸಲಾಗಿದೆ.

ಅಡಿ ಟಿಪ್ಪಣಿಗಳು

೧. ಚಂದಪ್ಪ ಕಂಚೇರ,ಚಂದಾಲಿಗೇಶ್ವರ ಪುರಾಣ,೧೯೬೨,ಪು.ಸಂ.೧೫

೨. ನಾಗರತ್ನ.ಟಿ.ಎನ್.(ಸಂ),ದಾಸಸಾಹಿತ್ಯ ಸೌರಭ,೧೯೯೨,ಪು.ಸಂ.೧೧೫

೩. ಪ್ರಭು.ಅ.ಗಂಜಿಹಾಳ,ಹುಲ್ಲೇಶ್ವರ ಚರಿತೆ,೧೯೯೨,ಪು.ಸಂ.೧೧

೪. ಚಂದಪ್ಪ ಕಂಚೇರ,ಚಂದಾಲಿಗೇಶ್ವರ ಪುರಾಣ,೧೯೬೨,ಪು.ಸಂ.೨೬

೫. ಮರುಳಸಿದ್ಧಪ್ಪ.ಕೆ.,ನಾಗರಜ.ಕಿ.ರಂ,(ಸಂ),ವಚನಕಮ್ಮಟ,೨೦೧೫,ಪು.ಸಂ.೬೧

೬. ಹಲಸಂಗಿ ಗೆಳೆಯರು,ಗರತಿಯ ಹಾಡು,೧೯೮೪,ಪು.ಸಂ.೮೭

೭. ಅದೇ,ಪು.ಸಂ.೯೪

೮. ಅದೇ,ಪು.ಸಂ.೯೩

೯. ಅದೇ,ಪು.ಸಂ.೮೮

೧೦. ಮರುಳಸಿದ್ಧಪ್ಪ.ಕೆ.,ನಾಗರಜ.ಕಿ.ರಂ,(ಸಂ),ವಚನಕಮ್ಮಟ,೨೦೧೫,ಪು.ಸಂ.೧೦೫

೧೧. ಚಂದಪ್ಪ ಕಂಚೇರ,ಚಂದಾಲಿಗೇಶ್ವರ ಪುರಾಣ,೧೯೬೨,ಪು.ಸಂ.೪೧

೧೨. ಅದೇ,ಪು.ಸಂ.೪೨

೧೩. ಅದೇ,ಪು.ಸಂ.೪೫

೧೪. ಅದೇ,ಪು.ಸಂ.೫೦

೧೫. ಅದೇ,ಪು.ಸಂ.೫೨

೧೬. ಅದೇ,ಪು.ಸಂ.೫೩

೧೭. ಅದೇ,ಪು.ಸಂ.೫೪

೧೮. ಅದೇ,ಪು.ಸಂ.೬೦

೧೯. ಅದೇ,ಪು.ಸಂ.೭೪

೨೦. ಅದೇ,ಪು.ಸಂ.೮೬

೨೧. ಅದೇ,ಪು.ಸಂ.೯೯

೨೨. ಅದೇ,ಪು.ಸಂ.೧೦೩

೨೩. ಪ್ರಭು.ಅ.ಗಂಜಿಹಾಳ,ಹುಲ್ಲೇಶ್ವರ ಚರಿತೆ,೧೯೯೨,ಪು.ಸಂ.೨೯

೨೪. ಅದೇ,ಪು.ಸಂ.೩೨

೨೫. ಚಂದಪ್ಪ ಕಂಚೇರ,ಚಂದಾಲಿಗೇಶ್ವರ ಪುರಾಣ,೧೯೬೨,ಪು.ಸಂ.೧೧೧

೨೬. ಅದೇ,ಪು.ಸಂ.೧೧೫

೨೭. ಅದೇ,ಪು.ಸಂ.೧೨೪

೨೮. ಪ್ರಭು.ಅ.ಗಂಜಿಹಾಳ,ಹುಲ್ಲೇಶ್ವರ ಚರಿತೆ,೧೯೯೨,ಪು.ಸಂ.೩೩

೨೯. ಚಂದಪ್ಪ ಕಂಚೇರ,ಚಂದಾಲಿಗೇಶ್ವರ ಪುರಾಣ,೧೯೬೨,ಪು.ಸಂ.೧೪೩

ಅಧ್ಯಾಯ : ೪

ಆಚರಣೆ, ನಂಬಿಕೆ ಮತ್ತು ವಿಧಿ-ನಿಷೇಧಗಳು

(Ritual, Faith and Fate-Prohinitions Hands)

೪. ಆಚರಣೆಗಳು

೪.೧. ಜೀವನಾವರ್ತನದ ಆಚರಣೆಗಳು

೪.೧.೧. ಹುಟ್ಟು

೪.೧.೨. ನಾಮಕರಣ

೪.೧.೩. ಮದುವೆ

೪.೧.೪. ಮರಣ

೪.೨. ವಾರ್ಷಿಕಾವರ್ತನದ ಆಚರಣೆಗಳು

೪.೨.೧. ದಿನಂಪ್ರತಿ

೪.೨.೨. ವಾರದ ದಿನಗಳು

೪.೨.೩. ಅಮವಾಸ್ಯೆ

೪.೨.೪. ಹುಣ್ಣಿಮೆಯ ದಿವಸ

೪.೨.೫. ಹಬ್ಬ-ಹರಿದಿನಗಳು

೪.೨.೬. ಜಾತ್ರೆ

೪.೨.೭. ಜಾತ್ರಾ ಆಚರಣೆಗಳು

೪.೨.೭.೧. ಕಳಸಾರೋಹಣ

೪.೨.೭.೨. ಖಡ್ಗದ ಆಗಮನ

೪.೨.೭.೩. ಖಂಡೇದೇವರ ಪೂಜೆ ಹಾಗೂ ಕ್ಷೇತ್ರಕ್ಕೆ ಆಗಮನ

೪.೨.೭.೪. ಕೊಂತದೇವರ ಆಗಮನ

೪.೨.೭.೫. ಕೊಂತದೇವರ ಗಂಗಾಸ್ನಾನ

೪.೨.೭.೬. ದೋಣಿ ತುಂಬುವುದು

೪.೨.೭.೭. ಚಂದಾಲಿಂಗ ಹಾಗೂ ಗಂಗೆಮಾಳಮ್ಮರ ಮದುವೆ ಕಾರ್ಯಕ್ರಮ

೪.೨.೭.೮. ಲೆಕ್ಕಿ ಬರ್ಲಿನ ಸೇವೆ

೪.೨.೭.೯. ಭಂಡಾರದ ಪವಾಡ

೪.೨.೭.೧೦. ಸುಡಿಹೇಳುವುದು

೪.೨.೭.೧೧. ಕೊಂತ ಮಿಂಚುವುದು

೪.೨.೭.೧೨. ಸರಪಳಿಪವಾಡ

೪.೨.೭.೧೩. ಬನ್ನಿ ಮುಡಿಯುವುದು

೪.೩. ನಂಬಿಕೆ ಮತ್ತು ವಿಧಿ–ನಿಷೇಧಗಳು

ಅಧ್ಯಾಯ : ನಾಲ್ಕು
ಆಚರಣೆ, ನಂಬಿಕೆ ಮತ್ತು ವಿಧಿ–ನಿಷೇಧಗಳು
(Ritual, Faith and Fate-Prohinitions Hands)

ಪ್ರಸ್ತಾವನೆ : (Introduction)

ಜನಪದರು ಹುಟ್ಟಿನಿಂದ ಸಾವಿನವರೆಗೂ ಚಾಚುತಪ್ಪದೆ ಆಚರಣೆಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಅದರಂತೆ ಚಂದಾಲಿಂಗೇಶ್ವರನ ಆಚರಣೆಗಳು ಸಮಾಜವನ್ನು ಒಂದುಗೂಡಿಸುವ, ವ್ಯಕ್ತಿಗಳನ್ನು ಅಡ್ಡದಾರಿಗೆ ಹೋಗದಂತೆ ತಡೆಯುವ ಶಕ್ತಿ ಇದೆ. ಭಕ್ತರಿಗೆ ಈ ಚಂದಾಲಿಂಗೇಶ್ವರನ ಬಗ್ಗೆ ಇರುವಂತಹ ವಿಧಿ–ನಿಷೇಧಗಳು ಭಕ್ತಿಯ ಜೊತೆ ಭಯ ಮೂಡಿಸಿವೆ. ಇದರಿಂದ ವ್ಯವಸ್ಥಿತವಾಗಿ ಆಚರಣೆಗಳು ಏರ್ಪಡುವಲ್ಲಿ ಸಹಾಯಕವಾಗಿವೆ. ಕಂಠಸ್ಥ ಪರಂಪರೆಯ ಒಂದು ಭಾಗವಾಗಿ ಆಚರಣೆಗಳ ಬಗ್ಗೆ ಪ್ರಸ್ತುತ ಅಧ್ಯಯನ ಮಾಡಲಾಗಿದೆ. ದೇ.ಜ.ಗೌ ಅರವರು ಹೇಳುವಂತೆ "ಸಂಪ್ರದಾಯಗಳ ಮೂತ್ತವೆ ಸಮಾಜ, ಅವುಗಳ ಆಚರಣೆಯೇ ಜೀವನ"[೧] ದೈವಿ ಬಯದ ಹಿನ್ನೆಲೆಯಲ್ಲಿ ಆಚರಣೆಗಳು ಇಂದಿಗೂ ಸಮಾಜದ ಶಾಂತಿಯನ್ನು ಕಾಪಾಡುತ್ತೀವೆ. ಸಾಮರಸ್ಯದ ಬದುಕಿಗೆ ನಾಂದಿಯಾಗಿವೆ. ಸಮಸ್ತ ಜನರ ಭಾಗವಹಿಸುವಿಕೆಯಿಂದ ಸಾಮೂಹಿಕ ಪ್ರಜ್ಞೆ ಮೂಡುತ್ತದೆ. ಹೀಗೆ ಪರಸ್ಪರ ಸಹಕಾರ ಭಾವ ಹೊಂದಲು ಹಾಗೂ ಒಗ್ಗಟ್ಟನ್ನು ಉಂಟುಮಾಡಿ ನೆಮ್ಮದಿಯಿಂದಿರಲು ಆಚರಣೆಗಳಲ್ಲಿ ಹಲವಾರು ಮಾರ್ಗೋಪಾಯಗಳು ಹಾಗೂ ರೀತಿ ನೀತಿಗಳುಂಟು.

ಮಾನವನ ಜೀವನವು ಹುಟ್ಟಿನಿಂದ ಸಾವಿನವರೆಗೂ ಒಂದಲ್ಲ ಒಂದು ರೀತಿಯ ಸಂಪ್ರದಾಯ ಆಚರಣೆಗಳ ಮೂಲಕ ಸಾಗಿ ಬರಲೇಬೇಕು. ತಲೆಮಾರಿನಿಂದ ತಲೆಮಾರಿಗೆ ಹಿರಿಯರಿಂದ ಕಿರಿಯರಿಗೆ ವರ್ಗಾವಣೆಗೊಳ್ಳುತ್ತ ಬರುತ್ತಿದೆ. ಇದಕ್ಕೆ ಲಿಖಿತ ಶಾಸನಗಳಿಲ್ಲ, ಕಾನೂನುಗಳಿಲ್ಲ, ಆದರೂ ನಿರಂತರವಾಗಿ ಸಾಗಿ ಬರುವ ಶಕ್ತಿ ಪಡೆದಿದೆ. ಜನಪದರ ಬದುಕಿಗೆ ಪೂರಕವಾದ ಅಂಶಗಳನ್ನು ಹೊಂದಿರುವುದೇ ಇದಕ್ಕೆ ಕಾರಣ. ಹಾಗಾಗಿ 'ಜಾನಪದಕ್ಕೆ ಎಂದು ಸಾವಿಲ್ಲ' ಎಂದು ವಿದ್ವಾಂಸ ಫಾಟರ್ ಹೇಳಿರುವುದು ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಜನಪದ

ಆಚರಣೆಗಳಿಗೆ ಜೀವಂತಿಕೆ ಇದೆ. ಅದರಂತೆ ಚಂದಾಲಿಂಗೇಶ್ವರನ ಆಚರಣೆಗಳನ್ನು ಜೀವನಾವರ್ತನದ ಆಚರಣೆಗಳು ವಾರ್ಷಿಕಾವರ್ತನದ ಆಚರಣೆಗಳು ಹಾಗೂ ನಂಬಿಕೆ ಮತ್ತು ವಿಧಿ-ನಿಷೇಧಗಳನ್ನು ವಿಶ್ಲೇಷಣಾತ್ಮಕವಾಗಿ ನೋಡಲಾಗಿದೆ.

೪. ಆಚರಣೆಗಳು

೪.೧. ಜೀವನಾವರ್ತನದ ಆಚರಣೆಗಳು : (Liveli Hood Practices)

ನಮ್ಮ ಜನಪದರುಗಳು ತಮ್ಮ ಬದುಕು, ಜೀವನಕ್ಕೆ ಸಂಬಂಧಿಸಿದಂತೆ ದೈವಿಕ ಆಚರಣೆಗಳನ್ನು ಅನಾದಿಕಾಲದಿಂದಲೂ ಸಂಪ್ರದಾಯ ಬದ್ಧವಾಗಿ ಆಚರಿಸುತ್ತಾ ಬಂದಿದ್ದಾರೆ. ಅಂತಹವುಗಳಲ್ಲಿ ಅವರ ಹುಟ್ಟು ನಾಮಕರಣ, ಯೌವ್ವನ, ಮದುವೆ, ಮರಣ ಇಂತಹ ಕ್ರಿಯಾಧಿಗಳಿಗೆ ಚಂದಾಲಿಂಗೇಶ್ವರನನ್ನು ನಂಬಿದ್ದಾರೆ.

೪.೧.೧. ಹುಟ್ಟು : (The Birth)

ಎಷ್ಟೋ ದಂಪತಿಗಳಿಗೆ ಸಂತಾನ ಭಾಗ್ಯವಿಲ್ಲದಿದ್ದಾಗ ಈ ದೈವದ ಸನ್ನಿಧಿಗೆ ಬಂದು, ದೇವತೆಯ ಮೊರೆ ಹೋಗಿ ತಮ್ಮ ಈ ಸಂತಾನ ಭಾಗ್ಯ ಈಡೇರಿಸಿದರೆ ದೀಡ್‌ನಮಸ್ಕಾರ, ಹಾಕುವುದಾಗಿ, ಉರುಳುಸೇವೆ, ಕಾಯಿಕಟ್ಟುವುದು, ಮರಗಳಿಗೆ ತೂಗುತೊಟ್ಟಿಲಂತೆ ಅರವೆಯಿಂದ ಜೋಳಿಗೆ ಕಟ್ಟುವರು. ಚಂದಾಲಿಂಗೇಶ್ವರನ ಕೃಪೆಯಿಂದ ಜನಿಸಿದ ಮಗುವಿಗೆ ಆತನ ಹೆಸರನ್ನು ಚಂದಾಲಿಂಗಪ್ಪ ಎಂದು ಕರೆಯುವುದು, ಹುಟ್ಟಿದ ಮಗುವಿನ ಜವುಳವನ್ನು ಈ ದೈವಕ್ಕೆ ಬಿಡುವುದಾಗಿ ಬೇಡಿಕೊಂಡು ಅದರಂತೆ ಫಲ ಈಡೇರಿದಾಗ ಈ ಜವುಳ ಕಾರ್ಯಕ್ರಮವನ್ನು ನಿರ್ವಹಿಸುವರು. ಚಂದಾಲಿಂಗೇಶ್ವರನ ಹರಕೆಯಂತೆ ಹುಟ್ಟಿದ ಮಕ್ಕಳಿಂದ ಈ ದೇವತೆಗೆ ಬೆಳ್ಳಿ ತೊಟ್ಟಿಲನ್ನು ಕೊಡಿಸುವರು ಸಂತಾನ ಫಲವಾದವರು ಕೆಲವು ಅಮವಾಸ್ಯೆಗಳ ಆಚರಣೆಯ ಎಲ್ಲಾ ಖರ್ಚು ವೆಚ್ಚವನ್ನು ತಾವೇ ನೋಡಿಕೊಳ್ಳುವರು.

೪.೧.೨. ನಾಮಕರಣ : (Nomenclature)

ಚಂದಾಲಿಂಗೇಶ್ವರನು ತಮ್ಮ ಮನೆಯ ದೇವರಾದವರು ತಮ್ಮ ಮನೆಗಳಿಗೆ ಚಂದಾಲಿಂಗೇಶ್ವರ ನಿಲಯವೆಂದು ನಾಮಕರಿಸುತ್ತಾರೆ. ಚಂದಾಲಿಂಗೇಶ್ವರನಿಗೆ ಬೇಡಿಕೊಂಡಿದರ ಫಲವಾಗಿ ದಂಪತಿಗಳಿಗೆ ಜನ್ಮತಾಳಿದ ಮಗುವಿಗೆ ಹೆಣ್ಣಾಗಿದ್ದರೆ-ಚಂದವ್ವ, ಚಂದ್ರಾ, ಚಂದಮ್ಮ, ಎಂದು ಕರೆದರೆ, ಗಂಡು ಮಗುವಾಗಿದ್ದರೆ, ಚಂದಪ್ಪ, ಚಂದಾಲಿಂಗಪ್ಪ, ಚಂದಪ್ಪ ಎಂದು ನಾಮಕರಿಸುವರು.

ಈತನ ಭಕ್ತರು ಹೊಸದಾಗಿ ವಾಹನ ಖರೀದಿಸಿದ್ದರೆ, ವ್ಯಾಪಾರದ ಮಳಿಗೆಯನ್ನು, ಆಸ್ಪತ್ರೆಯನ್ನು ತೆರೆದರೆ, ಕಿರಾಣಿ ಅಂಗಡಿ, ದಿನಸಿ ಅಂಗಡಿಗಳನ್ನು ತೆರೆದರೆ, ಶಾಲೆ-ಕಾಲೇಜುಗಳು, ಬ್ಯಾಂಕ್ ಖಾಸಗಿಯಾಗಿ ಸ್ಥಾಪನೆ ಮಾಡಿದಾಗ ಚಂದಾಲಿಂಗೇಶ್ವರನ ಹೆಸರಿನಲ್ಲಿ ಪ್ರಾರಂಭಿಸುವುದು ಸರ್ವೇಸಾಮಾನ್ಯವಾಗಿದೆ.

೪.೧.೩. ಮದುವೆ : (Marrige)

ಮದುವೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಚಂದಾಲಿಂಗೇಶ್ವರನನ್ನು ಮನೆಯ ದೇವರನ್ನಾಗಿ ಮಾಡಿಕೊಂಡವರು ತಮ್ಮ ಮನೆಯಲ್ಲಿ ಮದುವೆಗಳಿದ್ದರೆ, ಚಂದಾಲಿಂಗೇಶ್ವರನ ಭಕ್ತರಾದ ಗೊರವರನ್ನು ಕರೆಯಿಸಿ ದೋಣಿ ತುಂಬುವ ಸಂಪ್ರದಾಯವನ್ನು ಮಾಡುವರು.

* ವಯಸ್ಕ ಯುವಕ-ಯುವತಿಯರಿಗೆ ಎಷ್ಟೋ ದಿನಗಳು ಗತಿಸಿದರೂ ಕಂಕಣಭಾಗ್ಯ ಬರದೆಯಿದ್ದಾಗ ಇಂತಹವರು ಚಂದಾಲಿಂಗೇಶ್ವರನ ವಾರ, ಅಮವಾಸ್ಯೆ, ಜಾತ್ರೆಯಲ್ಲಿ ಈತನ ಸನ್ನಿಧಿಗೆ ತೆರಳಿ, ಒಂದು ದಾರದಲ್ಲಿ ಅರಿಷಿಣಕೊಂಬನ್ನು ಕಟ್ಟಿ, ಅದನ್ನು ಆತನ ವ್ಯಾಪ್ತಿಯಲ್ಲಿ ಇರುವ ಮರಗಳಿಗೆ ಹಾಗೂ ಮುಖ್ಯ ಗುಡಿಯ ಮುಂಭಾಗದಲ್ಲಿರುವ ಕಬ್ಬಿಣದ ಕಟಾಂಜನಿಗೆ ಕಟ್ಟುವರು.

* ಮದುವೆಯಾದ ನವದಂಪತಿಗಳು ವಿವಾಹವಾದ ವರ್ಷವೇ ಚಂದಾಲಿಂಗೇಶ್ವರ ಜಾತ್ರೆಯಲ್ಲಿ ಭಾಗಿಯಾಗುತ್ತಾರೆ.

೪.೧.೪. ಮರಣ : (Death)

ಚಂದಾಲಿಂಗೇಶ್ವರನನ್ನು ಮನೆದೇವರನ್ನಾಗಿ ಮಾಡಿಕೊಂಡವರ ಮನೆಯಲ್ಲಿ ಸಾವು ಸಂಭವಿಸಿದ್ದಲ್ಲಿ ಅಂತಹವರು ದಿನಕರ್ಮ ಮಾಡುವಾಗ ಹಾಗೂ ದೈವದೊಳಗೆ ಕರೆದುಕೊಳ್ಳುವಾಗ ಇವರ ಮನೆಯಲ್ಲಿ ಯಾರಾದರೂ ಈ ಕ್ಷೇತ್ರಕ್ಕೆ ಬಂದು, ಬಿಸಿಲು ಬೀಳದ ಬಾವಿಯ ನೀರನ್ನು ತುಂಬಿಕೊಂಡು ಪೂಜಾರಿಗಳಿಂದ ಪೂಜಿಸಿಕೊಂಡು ಹೋಗಿ ಅವತ್ತಿನ ದಿನಗಳಲ್ಲಿ ತಮ್ಮ ಮನೆಯ ತುಂಬ ಸಿಂಪಡಿಸುವರು. ಇದರಿಂದ ಮೈಲಿಗೆ ತೊಳೆದಂತೆಯಾಗುತ್ತದೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ.

೪.೨. ವಾರ್ಷಿಕಾವರ್ತನದ ಆಚರಣೆಗಳು : (Anniversary Celebration)

ಚಂದಾಲಿಂಗೇಶ್ವರ ಕ್ಷೇತ್ರವನ್ನು ಸಾಂಸ್ಕೃತಿಕ ಆಚರಣೆಯ ಕ್ಷೇತ್ರವಾಗಿ ಕಾಲಕಾಲಾಂತರದಿಂದ ಜನಪದರು ಬಳಕೆ ಮಾಡಿಕೊಂಡು ಬಂದಿದ್ದಾರೆ. ಜನಪದರ ಸಾಂಸ್ಕೃತಿಕ ವೀರನಾದ ಚಂದಾಲಿಂಗೇಶ್ವರನ ಕುರಿತು ದಿನಂಪ್ರತಿ ಆ ಕ್ಷೇತ್ರದಲ್ಲಿ ಆರಾಧನೆಯ ಕ್ರಮ ಹೇಗಿರುತ್ತದೆ ಹಾಗೂ ಈತನ ಭಕ್ತರಾದವರು ತಮ್ಮ ತಮ್ಮ ಮನೆಯಲ್ಲಿ ಈತನ ಭಾವಚಿತ್ರಕ್ಕೆ ಪೂಜಿಸುವುದು ತಿಳಿಯುತ್ತದೆ. ಇದರ ಹಾಗೆ ಪ್ರತಿ ರವಿವಾರವೂ ಈತನಿಗೆ ವಿಶೇಷವಾದಂತಹ ಪೂಜೆ ಮತ್ತು ಭಕ್ತರಿಗೆ ಆ ದಿನವೂ ಪವಿತ್ರ ದಿನವಾಗಿ ಪರಿಣಮಿಸುತ್ತದೆ. ತದನಂತರ ಹುಣ್ಣಿಮೆ, ಅಮಾವಾಸ್ಯೆ ದಿನಗಳಲ್ಲಿ ವಿಶೇಷವಾಗಿರುತ್ತದೆ. ಇದಲ್ಲದೆ ಹಬ್ಬ-ಹರಿದಿನಗಳು ವಿಶೇಷವಾದ ಪೂಜೆ, ಶ್ರಾವಣ ಮಾಸದಲ್ಲಿ ವಿವಿಧ ಆಚರಣೆಗಳು ನಡೆಯುತ್ತವೆ. ತದನಂತರ ವರ್ಷದ ಎರಡೂ ಜಾತ್ರೆಗಳು ಆಗಿ ಹುಣ್ಣಿಮೆಯಾಗಿ ಮೂರು ದಿನಕ್ಕೆ ಒಂದು ಜಾತ್ರೆ ನಡೆದರೆ, ಮಹಾನವಮಿಯಾಗಿ ಮೂರುದಿನಕ್ಕೆ ಮತ್ತೊಂದು

ಜಾತ್ರೆ ನಡೆಯುತ್ತದೆ. ಇದರಿಂದ ಈ ಎರಡೂ ಅವಧಿ ಜಾತ್ರೆಗಳಿಗೆ ಜನಪದರು ಮೊದಲಿನ ಜಾತ್ರೆಗೆ ಬೇಸಿಗೆ ಜಾತ್ರೆಯೆಂದರೆ ವರ್ಗದ ಎರಡನೆಯ ಬಾರಿ ನಡೆಯುವ ಜಾತ್ರೆಗೆ ಸುಗ್ಗಿ ಜಾತ್ರೆ ಎಂದು ಕರೆಯುವುದು ವಾಡಿಕೆಯಲ್ಲಿದೆ.

೪.೨.೧. ದಿನಂಪ್ರತಿ : (Habitually)

ಪ್ರತಿದಿನವೂ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮೂರು ಹೊತ್ತು ತ್ರಿಕಾಲ ಪೂಜೆ ಚಂದಾಲಿಂಗೇಶ್ವರನಿಗೆ ಸಲ್ಲುತ್ತದೆ. ಬೆಳಿಗ್ಗೆ ಎಂಟು ಗಂಟೆಗೆ ದೇವರನ್ನು ಶುಭ್ರಗೊಳಿಸಿ ಹೂವು, ಪತ್ರಿಗಳನ್ನು ಏರಿಸಿ ಆತನ ಸನ್ನಿಧಿಯಲ್ಲಿರುವ ದೇವರ ಗುಡಿಯ ವಿವಿಧ ಕಳಸಗಳಿಗೆ ಗಂಧ ಪುಷ್ಪಗಳನ್ನು ಏರಿಸಿ ಧೂಪಾರ್ತಿ ತುಂಬಾ ಲೋಬಾನವನ್ನು ಹಾಕಿ ಗರ್ಭಗೃಹದ ತುಂಬಾ ಧೂಪದ ಹೊಗೆಯು ಪೂಜಿತ ಎಲ್ಲಾ ವಸ್ತುಗಳಿಗೂ ಸ್ಪರ್ಶಿಸುವಂತೆ ಮಾಡುವರು. ಧೂಪ ದೀಪಾರ್ತಿ ಮಾಡಿ, ಮಂಡಾಳು (ಚುರಮರಿ) ನೈವೇದ್ಯಯೊಂದಿಗೆ ಶಂಖ, ಗಂಟೆ, ಜಾಗಟೆ, ಇತ್ತೀಚಿಗೆ ವಿದ್ಯುತ್ ಯಂತ್ರಚಾಲಿತ ಢಕ್ಕಿಯ ವಾದ್ಯಗಳಿಂದ ನಾದಗೈಯುತ್ತಾ, ಸುಮಾರು ಒಂದುವರೆ ತಾಸಿನವರಿಗೆ ಈ ಪೂಜಾ ಕೈಂಕಾರ್ಯ ನಡೆಯುತ್ತದೆ.

ಇದೇ ದೇವತೆಯ ಪೂಜೆಯೊಂದಿಗೆ ಎದುರಿಗೆ ಇರುವ ತೆರೆದ ಮಂಟಪದ ಬಸವಣ್ಣನಿಗೂ ಮತ್ತು ಗಂಗೆಮಾಳಮ್ಮನಿಗೆ ಈ ಪೂಜೆಸಲ್ಲುತ್ತದೆ. ಪೂಜಾರಿಗಳಾದವರು ಈ ಪೂಜೆದ ಕಾರ್ಯ ಕೈಗೊಳ್ಳಬೇಕಾದರೆ, ಆ ವ್ಯಕ್ತಿಯ ಉಸಿರು ದೇವರಿಗೆ ಹಾಗೂ ಆತನಿಗೆ ಮಾಡುವ ನೈವೇದ್ಯಕ್ಕೆ ಬಡಿಯಬಾರದು ಎಂಬ ಪದ್ಧತಿಯಿದೆಯಂತೆ. ಅದರಂತೆ ಪೂಜಾರಿಯು ಲಿಂಗದವಸ್ತ್ರದಿಂದ ಮೂಗು-ಬಾಯಿ ಮುಚ್ಚಿಕೊಳ್ಳುವಂತೆ ಕಟ್ಟಿಕೊಳ್ಳುತ್ತಾರೆ. ಈ ಪದ್ಧತಿಯು ಎಲ್ಲಾ ಅವಧಿಯ ಪೂಜಾದಲ್ಲಿ ಕಂಡುಬರುತ್ತದೆ.

ಮಧ್ಯಾಹ್ನದ ಅವಧಿಯಲ್ಲಿ ಎರಡು ಗಂಟೆಗೆ ಪೂಜೆ ನಡೆಯುವ ಅವಧಿಗೆ ಅನ್ನದ ನೈವೇದ್ಯ ಮಾಡುತ್ತಾರೆ. ಈ ಅನ್ನದ ನೈವೇದ್ಯ ಮಾಡುವವರು ಪುರುಷರಾಗಿರುತ್ತಾರೆ. ವಿಶೇಷತೆಯೆಂದರೆ ಮಹಿಳೆಯರು ಈ ದೇವರ ಯಾವುದೇ ಕಾರ್ಯದಲ್ಲಿ ಬಾಗಿಯಾಗುವುದಿಲ್ಲ. ಈ ಅನ್ನವನ್ನು ತಯಾರಿಸುವಂತಹ ಸಮಯದಲ್ಲೂ ಒಲೆಯನ್ನು ಬಾಯಿಯಿಂದ ಉಫ್... ಎಂದು ಉದದೆ ಯಾವುದಾದರೂ ಚಪ್ಪಟೆಯಾಕಾರದ ವಸ್ತುವಿನಿಂದ ಗಾಳಿಯನ್ನು ಬೀಸಿ ನಂದಿದ ಓಲೆಯನ್ನು ಹೊತ್ತಿಸುವ ಪರಿಪಾಠವಿದೆ. ಹೀಗೆ ನೈವೇದ್ಯವನ್ನು ತಯಾರಿಸಿ ಬೆಳಗಿನ ಪೂಜಾಕ್ರಮವನ್ನು ಅನುಸರಿಸುವರು. ಸಾಯಂಕಾಲದ ಪೂಜೆಗೂ ಅದೇ ಪೂಜಾ ಕ್ರಮವನ್ನು ಅನುಸರಿಸುತ್ತಾರೆ. ಈ ಅವಧಿಯ ಪೂಜೆಗೆ ಎಳ್ಳು-ಬೆಲ್ಲದ ನೈವೇದ್ಯವನ್ನು ಮಾಡಿ ಎಂಟು ಗಂಟೆಗೆ ಪೂಜಾವನ್ನು ನೆರವೇರಿಸುವರು.

೪.೨.೨. ವಾರದ ದಿನಗಳು : (Week days)

ಸೋಮವಾರ ಬಸವಣ್ಣನ ವಾರ, ಮಂಗಳವಾರ ದೇವಿವಾರ, ಬುಧುವಾರ ಬೃಹಸ್ಪತಿವಾರ, ಗುರುವಾರ ರಾಘವೇಂದ್ರನವಾರ, ಶುಕ್ರವಾರ ಲಕ್ಷ್ಮೀವಾರ, ಶನಿವಾರ ಆಂಜನೇಯನವಾರ. ಇಂತಹವು ವಿಶೇಷವಾರಗಳೆಂದು ನಮ್ಮ ಜನಪದರು ಹಲವಾರು ನೇಮ ನಿತ್ಯ ಆಚರಿಸುವಂತೆ, ರವಿವಾರವನ್ನೂ ಚಂದಾಲಿಂಗೇಶ್ವರನ ವಾರವೆಂದು ವಿಶೇಷವಾಗಿ ಆಚರಿಸುತ್ತಾರೆ. ಪ್ರತಿನಿತ್ಯದ ಪೂಜೆಯಂತೆ ಎಲ್ಲಾ ತಯಾರಿ ಮಾಡಿಕೊಳ್ಳುವರು. ಈ ಪ್ರತಿ ರವಿವಾರದ ಪೂಜಾಕ್ಕೆ ಆ ಕ್ಷೇತ್ರದಲ್ಲಿರುವ, ಶಂಕರಲಿಂಗದೇವರು, ವೀರಭದ್ರದೇವರು, ತುಪ್ಪದ ಮಾಳಮ್ಮ, ಮುದ್ದಮ್ಮತಾಯಿ, ಕಾಲಕಾಲೇಶ್ವರ, ಪಂಚಪೀಠಗಳು, ದುರ್ಗಾದೇವಿ ಹೀಗೆ ಮುಂತಾದ ದೇವರುಗಳು ಪೂಜೆಗೊಳಪಡುತ್ತವೆ. ಈ ಪ್ರತಿ ರವಿವಾರದ ಪೂಜೆಗೆ ನೀರಿನ ದೀಪವನ್ನು ಚಂದಾಲಿಂಗೇಶ್ವರನ ಮುಂದೆ ಹಚ್ಚಲಾಗುತ್ತದೆ. ಈ ದೀಪವನ್ನು ಚಿಕ್ಕದಾದ ಪಾತ್ರೆಯಲ್ಲಿ ನೀರನ್ನು ತುಂಬಿ ಅರಳಿಗೆ ಸಂಪೂರ್ಣವಾಗಿ ಒಳ್ಳೆಎಣ್ಣೆಯಲ್ಲಿ ನೆನಸಿ ಅದಕ್ಕೆ ಬೆಂಕಿಯನ್ನು ಸ್ಪರ್ಶಿಸಿ ದೀಪವನ್ನು ಹಚ್ಚಿಡುವರು.

ರವಿವಾರದಂದು ಈ ಕ್ಷೇತ್ರಕ್ಕೆ ಬರುವಂತ ಭಕ್ತರು ಸುತ್ತ ಮುತ್ತಲಿನ ಹಳ್ಳಿಗಳಾದ ಹನುಮನಾಳ, ಕಬ್ಬರಿಗೆ, ಚಂದ್ರಗಿರಿ, ಮನ್ನೇರಾಳ, ಹನುಮಸಾಗರ, ಮಾವಿನ ಇಟಗಿ ಇನ್ನೂ ದೂರ ದೂರದ ಪ್ರದೇಶಗಳಿಂದ ಬರುತ್ತಾರೆ. ಬರುವಂತ ಭಕ್ತರು ದೇವಾಲಯಕ್ಕೆ ದವಸ-ಧಾನ್ಯಗಳು, ಮುಡುಪುಕಟ್ಟಿದ್ದ ದಕ್ಷಿಣೆಯನ್ನು ತಲುಪಿಸುವರು. ತುಪ್ಪದ ದೀಪವನ್ನು ಹಚ್ಚಲು ಬೇಡಿಕೊಂಡವರು ಈ ದೀಪವನ್ನು ಹಚ್ಚುವರು. ಕೆಲವರು ರುದ್ರಾಭಿಷೇಕ, ಜವುಳ, ಮದುವೆ, ಮುಂಜಿ, ಉರುಳುಸೇವೆ ಮಾಡುವವರು, ಹಣ್ಣು-ಕಾಯಿ ಮಾಡಿಸುವವರು, ಆರತಿ ಮಾಡಿಸುವವರು, ವಾಹನ ಪೂಜೆ ಮಾಡಿಸುವವರು ಇದ್ರೆ, ಅದಕ್ಕೆ ಕಮಿಟಿಯವರು ಆಯಾ ಪೂಜಾಕ್ಕೆ ನಿಗಧಿಪಡಿಸಿದ ಅರ್ಚಕರ ದರವನ್ನು ಪಾವತಿಸಿ ರಸೀದಿ ಪಡೆಯುವದಾಗಿರುತ್ತದೆ. ಹಾಗೆ ಬಂದಿರುವ ಭಕ್ತರು ದೇವಾಲಯಕ್ಕೆ ಏನಾದರೂ ದೇಣಿಗೆ ಕೊಡುವುದಿದ್ದರೆ ಹೆಸರು ನೋಂದಾಯಿಸಿ ಪಾವತಿಸಿ ಸ್ವೀಕರಿಸುವ ಪದ್ಧತಿಯಿದೆ. ರವಿವಾರದ ದಿನಕ್ಕೆ ಬಂದ ಭಕ್ತರಿಗೆ ಗುಡಿಯ ಕಮಿಟಿ ಅವರು ಅನ್ನ ಸಾಂಬಾರಿನ ಪ್ರಸಾದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಅದನ್ನು ಸ್ವೀಕರಿಸಿ ಭಕ್ತರು ಪುನೀತರಾಗಿ ಮರಳಿ ತಮ್ಮೂರಿಗೆ ಪ್ರಯಾಣ ಬೆಳೆಸುವರು.

೪.೨.೩. ಅಮವಾಸ್ಯೆ : (New Moon)

ಚಂದಾಲಿಂಗೇಶ್ವರನ ಭಕ್ತರಿಗೆ ಅಮವಾಸ್ಯೆಯೇ ಮುಖ್ಯವಾದ ಆರಾಧನ ದಿನವಾಗಿರುತ್ತದೆ. ಆ ದಿನ ಬೆಳಿಗ್ಗೆ ಕ್ಷೇತ್ರದಲ್ಲಿರುವಂತ ಎಲ್ಲಾ ದೇವರುಗಳಿಗೆ ನೀರನ್ನು ಹಾಕಿ ಸುಭ್ರಗೊಳಿಸುವರು ಮುಖ್ಯ ಗುಡಿಯನ್ನು ಹಾಗೂ ಬಸವೇಶ್ವರನ ಮಂಟಪವನ್ನು ನೀರನ್ನು ಹಾಕಿ ಶುದ್ಧಗೊಳಿಸುವರು. ಗುಡಿಗಳ ಬಾಗಿಲಿಗೆ ತೋರಣಗಳನ್ನು, ಕಂಬಗಳಿಗೆ ತಳಿರುಗಳನ್ನು, ಗುಡಿಯ ಮುಖ್ಯ ದ್ವಾರ

ಬಾಗಿಲಿಗೆ ತೆಂಗಿನ ಮರದ ಗರಿಗಳನ್ನು, ಬಾಳಿಯ ದಿಂಡುಗಳನ್ನು ಅಲಂಕೃತವಾಗಿ ಕಟ್ಟುವರು. ಆ ಎಲ್ಲಾ ಪ್ರದೇಶವನ್ನು ಮಡಿ ಉಡಿಯಿಂದ ಸಿದ್ಧಗೊಳಿಸುತ್ತಾರೆ. ಅದು ಅಮವಾಸ್ಯೆಯ ದಿನವಾಗಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಭಕ್ತರು ಬರುತ್ತಾರೆ. ಅಕಸ್ಮಾತ್ ರವಿವಾರದ ಅಮವಾಸ್ಯೆ ಅಗಿದ್ದರಂತೂ ದೂರದ ಊರುಗಳಾದ ಹೆಬ್ಬಾಳ, ರೋಣ, ಹೊಳೆಆಲೂರು, ಸಿಂಧನೂರು, ಬಾಗಲಕೋಟೆ, ಕೊಪ್ಪಳ, ಗಂಗಾವತಿ ಮುಂತಾದ ಭಾಗಗಳಿಂದ ಭಕ್ತರು ಟೆಂಪೋ, ಟ್ರ್ಯಾಕ್ಟರ್, ಮಿನಿಲಾರಿಗಳು, ಕಾರು, ದ್ವಿಚಕ್ರವಾಹನಗಳು, ಇನ್ನಿತರ ವಾಹನಗಳನ್ನು ತೆಗೆದುಕೊಂಡು ಬರುತ್ತಾರೆ. ದೇವರಿಗೆ ಅಭ್ಷೇಕ ಮಾಡಿಸುವವರು, ಆರತಿ ಪೂಜೆ ಮಾಡಿಸುವವರಿದ್ದರೆ ಮಾಡಿಸುವರು. ದೂರದಿಂದ ಬಂದಿರುವಂತ ಭಕ್ತರು ಅಮವಾಸ್ಯೆಯ ದಿನ ಅಲ್ಲಿಯೇ ಉಳಿದುಕೊಂಡು ಆದಿನ ದೇವರ ಯಾವುದಾದರೂ ಸೇವೆ ಕಾರ್ಯದಲ್ಲಿ ತೊಡಗುವರು. ಬಂದಿರುವ ಎಲ್ಲಾ ಭಕ್ತರೂ ರಾತ್ರಿಯ ವೇಳೆ ಕೂಡಿಕೊಂಡು ಭಜನೆ, ಡೊಳ್ಳಿನ ಹಾಡುಗಳು, ಸುಗ್ಗಿಯ ಹಾಡುಗಳನ್ನು, ವಾದ್ಯಗಳನ್ನು ನುಡಿಸುತ್ತಾ ಹಾಡುವರು. ಮಹಿಳೆಯರಾದವರು ಸೋಬಾನ ಪದಗಳನ್ನು, ಮದುವೆಯ ಹಾಡುಗಳನ್ನು ಹಾಡುತ್ತಾ ಬೆಳಗಾಗುವರೆಗೂ ಜಾಗರಣೆ ಮಾಡುವರು.

ರವಿವಾರ ಕಟ್ಟ ಅಮವಾಸ್ಯೆಯ ದಿನವಾಗಿದ್ದರೆ ಬಂದಿರುವಂತಹ ಭಕ್ತರು ತಮ್ಮ ಹರಕೆ ಬೇಡಿಕೆಗಾಗಿ ಕಾಯಿ ಕಟ್ಟುವ ಸಂಪ್ರದಾಯವಿದೆ. ಕೆಲವರು ಮಕ್ಕಳ ಸಂತಾನಕ್ಕಾಗಿ ಅಲ್ಲಿರುವಂತ ಮರಗಳಿಗೆ ಒಂದು ಅರವಿಯ ಬಟ್ಟೆಯನ್ನು (ಲಿಂಗದವಸ್ತ್ರ) ತೆಗೆದುಕೊಂಡು ಜೋಳಿಗೆಯನ್ನು ಕಟ್ಟಿ ಅದರಲ್ಲಿ ಒಂದು ಚಿಕ್ಕದಾದ ಕಲ್ಲನ್ನು ಮಗುವಿನ ರೂಪದಲ್ಲಿ ಹಾಕುತ್ತಾರೆ. ಇನ್ನೂ ಕೆಲವರು ಮನೆ ಬೇಕಾದರೆ ಆ ಪ್ರದೇಶದಲ್ಲಿರುವ ಕಲ್ಲುಗಳನ್ನು ಆಯ್ದುಕೊಂಡು ಮನೆಯ ಆಕಾರದಲ್ಲಿ ಕಟ್ಟಿ ಬರುತ್ತಾರೆ. ಯಾರಾದರೂ ಹೊಸ ವಾಹನವನ್ನು ಖರೀದಿಸಿದರೆ ಅಥವಾ ಇದ್ದ ವಾಹನವನ್ನು ಪೂಜಾರಿಗಳಿಂದ ಪೂಜಿಸಿ ದಕ್ಷಿಣೆಯನ್ನು ಕೊಟ್ಟು ಧನ್ಯರಾಗುತ್ತಾರೆ. ಎಲ್ಲ ರೀತಿಯ ಬೇಡಿಕೆ ಇರುವ ಜನರು ರವಿವಾರದ ಅಮವಾಸ್ಯೆಗೆ ಬಂದಿರುತ್ತಾರೆ.

೪.೨.೪. ಹುಣ್ಣಿಮೆಯ ದಿವಸ : (Full Moonday)

ಈ ದಿನಗಳಲ್ಲಿ ಮೊದಲಿನಂತೆ ಮುಖ್ಯ ಗುಡಿಯನ್ನು ಹಾಗೂ ಇತರ ಗುಡಿಗಳನ್ನು ಮಡಿ ಮಾಡಿ ಬೆಳಗಿನ ಪೂಜೆಯನ್ನು ಮಂಗಳಾರತಿಯಲ್ಲಿ ಹಾಡುವುದರೊಂದಿಗೆ ಪ್ರಾರಂಭಿಸುವರು.

ಜಯ ಜಯ ಮಂಗಲ, ಜಯ ಜಯ ಮಂಗಲ
ಚಂಡಾಲಿಂಗನಿಗೆ ದ್ರುಶಕ್ತಿಯನ್ನು ನಾಶಮಾಡಿದ
ಪರಶಿವಮೂರ್ತಿಗೆ ಶಂಭೋಶಂಕರ ಲೋಚನ
ಗೌರಿ ಲಂಬೋಧರ ಪುತ್ರನೇ ಸರಪಳಿ ಹರಿದು
ಮುಳ್ಳಿನ ಆವಿಗೆ ಹತ್ತಿ ಮೆರೆದು ಬಂದವನೇ ॥

ಮಧ್ಯಾಹ್ನದ ಪೂಜೆಗೆ ನೀರಿನ ದೀಪ ಹಾಗೂ ದೃಷ್ಟಿ ಎಡೆಯನ್ನು ಮಾಡಿ ಅದಕ್ಕೆ ತಮ್ಮ ಉಸಿರನ್ನು ಬಡಿಸದೆ ಪೂಜಿಸುವದು ವಿಶೇಷವಾಗಿರುತ್ತದೆ. ಹುಣ್ಣಿಮೆಗೆ ಬರುವಂತವರ ಸಂಖ್ಯೆ ಕಡಿಮೆಯಾಗಿರುತ್ತದೆ.

೪.೨.೫. ಹಬ್ಬ-ಹರಿದಿನಗಳು : (Feast-Feast's)

ಈ ಕ್ಷೇತ್ರದಲ್ಲಿ ಹಬ್ಬ-ಹರಿದಿನಗಳಾದ ಶ್ರಾವಣ ಮಾಸದಲ್ಲಿ ಹೆಚ್ಚಾಗಿ ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆಯುತ್ತವೆ. ಅಂತಹವುಗಳಲ್ಲಿ ಮದುವೆ, ಮುಂಜಿ, ಮಹಾಭಿಷೇಕ, ಉರುಳುಸೇವೆ, ದೀಡ್‌ನಮಸ್ಕಾರ, ರುದ್ರಾಭಿಷೇಕ ನೆರವೇರುತ್ತವೆ. ಹೊಸ್ತಿಲು ಹುಣ್ಣಿಮೆಯ ದಿನದಂದು ಚಂದಾಲಿಂಗೇಶ್ವರನಿಗೆ ನವಣೆ ಉಂಡಿಯ ನೈವೇದ್ಯ ಮಾಡಿ ಪೂಜಿಸುವುದು ವಿಶೇಷವಾಗಿದೆ.

ಶಿವರಾತ್ರಿಯಲ್ಲಿ ಈತನಿಗೆ ವಿಶೇಷವಾದಂತ ಪೂಜೆ ನಡೆಯುತ್ತದೆ. ಆ ದಿನ ಉತ್ರಾಣಿ ಕಡ್ಡಿಯನ್ನಿಟ್ಟು ಪೂಜೆ ಮಾಡುತ್ತಾರೆ. ಆದರೆ ಪೂಜೆಯ ವಿಧಿ-ವಿಧಾನಗಳು ಏರುಪೇರು ಆದರೆ ದೇವರ ಮುಂದೆ ರಬಸವಾದ ಗಾಳಿ ಎದ್ದುಬಿಡುತ್ತದೆ. ಅಥವಾ ಗುಡಿಯೇ ಗಡಗಡನೇ ನಡಗಿದಂತಾಗುತ್ತದೆ. ಹಾಗೂ ಪೂಜಾರಿಯ ಜೀವನಕ್ಕೆ ಕುತ್ತು ಬಂದು ಮುಂದಿನ ಜಾತ್ರೆ ನಡೆಯುವಂತಹ ವೇಳೆಗೆ ಆತ ಜೀವಂತವಿರುವುದಿಲ್ಲ. ಈ ಘಟನೆಗೆ ಉದಾಹರಣೆಯೆಂದರೆ ಬೀಳಗಿಯವನಿಗೆ ನಡೆದ ಸ್ಥಿತಿಯನ್ನು ಗುಡಿಯ ಪೂಜಾರಿಗಳಾದ ಚಂದನಗೌಡ ಶಬ್ಬಿಯವರು ಹೇಳಿದ್ದಾರೆ. ಇದರಿಂದ ಪೂಜಾರಿಯು ಉಳಿದುಕೊಳ್ಳಲು ಹನ್ನೊಂದು ಪೂಜೆ, ಹನ್ನೊಂದು ರುದ್ರಾಭಿಷೇಕ ನಡೆಸುತ್ತಾರೆ. ಈ ರುದ್ರಾಭ್ಷೇಕಕ್ಕೆ ನೀರನ್ನು ಜೀರ್ರ ಕಾಯಿಸಿ ಕೊಡುತ್ತಾರೆ. ಈ ರೀತಿ ಪೂಜೆಮಾಡುವುದಕ್ಕೆ ಬೇರೆ ಸ್ವಾಮಿಗಳನ್ನು ಕರೆಸಲಾಗುತ್ತದೆ. ಅದೇ ಸ್ವಾಮಿಯು ಮರುದಿನ ದೇವರ ಕೊರಳಿನಲ್ಲಿರುವ ಮಾಲೆಯನ್ನು ತೆಗೆದುಕೊಂಡು ತನ್ನ ಕೊರಳಿನಲ್ಲಿ ಧರಿಸಿ ಪೂಜೆ ಮಾಡಿ ಹೋಗುವನು.

೪.೨.೬. ಜಾತ್ರೆ : (Fair)

ಪ್ರತಿ ವರ್ಷದಲ್ಲಿ ಎರಡು ಜಾತ್ರೆಗಳು ನಡೆಯುತ್ತವೆ. ವರ್ಷದ ಆಗಿಹುಣ್ಣಿಮೆಯ ಬಾದ್ರಪದ ತದಿಗಿ ದಿವಸ, ಹಾಗೂ ಮಹಾನವಮಿಯಲ್ಲಿ ಶುಕ್ಲಪಕ್ಷ ದ್ವಾದಶಿ ದಿವಸ ಜಾತ್ರೆಗಳು ಪ್ರಾರಂಭವಾಗುತ್ತವೆ. ಈ ಜಾತ್ರೆಗಳಿಗೆ ಸ್ಥಳೀಯವಾಗಿ ಸುಗ್ಗಿಜಾತ್ರೆ, ಬ್ಯಾಸಿಗೆಜಾತ್ರೆ ಎಂದು ಕರೆಯುವರು. ಮಹಾನವಮಿಯ ದಸರೆಯಲ್ಲಿ ನಡೆಯುವ ಜಾತ್ರೆಗೆ 'ಸುಗ್ಗಿಜಾತ್ರೆ' ಎಂದು ಕರೆದರೆ, ಆಗಿಹುಣ್ಣಿಮೆಯಲ್ಲಿ ನಡೆಯುವ ಜಾತ್ರೆಗೆ ಬ್ಯಾಸಿಗೆ (ಬೇಸಿಗೆ) ಜಾತ್ರೆ ಎಂದು ಕರೆಯುವುದು ವಾಡಿಕೆಯಾಗಿದೆ. ಈ ಜಾತ್ರೆಗಳ ಆಚರಣೆಗಳ ಎರಡೂ ಅವಧಿಯಲ್ಲಿ ಕೆಲವೊಂದು ಆಚರಣೆಗಳು ಭಿನ್ನತೆಯಿಂದ ಕಂಡುಬರುತ್ತವೆ. ಬೇಸಿಗೆ ಜಾತ್ರೆಯ ಕೊಂತ ಮಿಂಚುವ ಸ್ಪರ್ಧೆ, ತುಗ್ಗಲಿ ಮರ ಏರಿ ಮಳ್ಳಯ್ಯನವರು ನುಡಿ ಹೇಳುವುದು ಈ ತರಹದ ಆಚರಣೆಗಳು ಸುಗ್ಗಿ ಜಾತ್ರೆಯಲ್ಲಿ ಕಂಡುಬರುವುದಿಲ್ಲ. ಸುಗ್ಗಿ

ಜಾತ್ರೆಯಲ್ಲಿ ನುಡಿ ಹೇಳುವ ಸ್ಥಳ ಬದಲಾವಣೆಗೊಳ್ಳುತ್ತದೆ. ಅದು ಬೀಳಿಗಿಯ ಸಮೀಪದ ನುಡಿ ಮಂಟಪದಲ್ಲಿ ನಡೆಯುತ್ತದೆ. ಇದೇ ಸುಗ್ಗಿಯ ಜಾತ್ರೆಯ ಸಂದರ್ಭದಲ್ಲಿ ಮಧ್ಯಾಹ್ನದ ಅವಧಿಯಲ್ಲಿ ಚಂದಾಲಿಂಗಪ್ಪ ಮತ್ತು ಗಂಗೆಮಾಳಮ್ಮನವರ ವಿವಾಹ ಜರಗುತ್ತದೆ. ತದನಂತರ ಖಂಡೇದೇವರ ಮೆರವಣಿಗೆಯೂ ಪಾಲುಕೆಯೊಂದಿಗೆ ಹೊಂಡಕ್ಕೆ ಪೂಜೆಗೆ ಹೋಗುತ್ತದೆ. ಅಲ್ಲಿ ಪೂಜೆಯನ್ನು ಖಂಡೇದೇವರು (ಖಡ್ಗವನ್ನು ಧರಿಸಿದ ವ್ಯಕ್ತಿ) ಖಡ್ಗದಿಂದಲೇ ತನ್ನ ದೇಹದ ಭಾಗಗಳಾದ ಹಣೆಗೆ, ಎರಡೂ ತೋಳುಗಳಿಗೆ, ಹೊಟ್ಟೆಗೆ, ಎದೆಗೆ, ಭುಜಗಳಿಗೆ, ಬೆನ್ನಿಗೆ ಗಂಧವನ್ನು ಲೇಪಿಸಿಕೊಳ್ಳುತ್ತಾನೆ. ಆದರೆ ಈ ತರಹದ ಗಂಧದ ಲೇಪನೆಯ ವಿಧಿಯು ಬೇಸಿಗೆ ಜಾತ್ರೆಯಲ್ಲಿ ನಡೆಯುವುದಿಲ್ಲ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಜನಪದರ ಜೀವನ ಪರಂಪರೆ ಬಹಳ ಮಹತ್ವ ಪೂರ್ಣತೆಯನ್ನು ಪಡೆದುಕೊಂಡಿದೆ. ಆದಿಮಾನವನ ನೆಲೆಯನ್ನು ತಿಳಿಸಿಕೊಡುವ ಜನಪದರ ಸಂಸ್ಕೃತಿಯು ಮಾನವಕುಲದ ಬೆಳವಣಿಗೆಯನ್ನು ವ್ಯಾಪಕದ ನೆಲೆಯಲ್ಲಿ ವಿವಿಧ ಹಂತದಲ್ಲಿ ತಿಳುವಳಿಕೆ ಕೊಡುವಲ್ಲಿ ತನ್ನದೇ ಆದ ಪಾತ್ರವನ್ನು ತೋರಿದೆ. ಇಂತಹ ಜನಪದರಲ್ಲಿ ಜಾತ್ರೆ, ಹಬ್ಬ, ಆಚರಣೆ ಸಂಪ್ರದಾಯ, ವಿಧಿ–ವಿಧಾನ, ನಂಬಿಕೆ, ಸಂಸ್ಕಾರ, ಕೀಡೆ, ಮುಂತಾದ ವಿಧಾನಗಳನ್ನು ತಮ್ಮ ಜೀವನದುದ್ದಕ್ಕೂ ಮುಂದುವರೆಸಿಕೊಂಡು ಬಂದಿದ್ದಾರೆ, ಜನಪದರು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮರೆಯಲಾಗದಂತಹ ಗುರುತನ್ನು ಮೂಡಿಸುವಲ್ಲಿ ಯಶಸ್ವಿಯನ್ನು ಕಂಡುಕೊಂಡಿದ್ದಾರೆ. ಜನಪದರ ಸಾಂಸ್ಕೃತಿಕ ಪರಂಪರೆಗೆ ಜಾತ್ರೆಗಳು ಭದ್ರವಾದ ಬುನಾದಿಯಾಗಿವೆ. ಜಾತ್ರೆಗಳು ಆಯಾಪ್ರದೇಶದ ಜನಜೀವನದ ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ. ಸಮಾಜದ ಪ್ರತಿಯೊಂದು ಸ್ತರದ ಜನತೆಯು ಒಂದಡೆ ಸೇರಿ ಸಾಂಸ್ಕೃತಿಕ ಏಕತೆಯನ್ನು ಪ್ರತಿಪಾದಿಸುವ ಕೇಂದ್ರ ಸ್ಥಳವಾಗಿ ಜಾತ್ರೆಗಳು ಕಂಡುಬರುತ್ತವೆ. ಹೀಗೆ ಭಿನ್ನವಿಭಿನ್ನ ನೆಲೆಯನ್ನು ಸಂಸ್ಕೃತಿಯನ್ನು ಪಾಲಿಸುವ ಜಾತ್ರೆಗಳ ಅಧ್ಯಯನ ಇಂದಿಗೂ ಪ್ರಸ್ತುತವೆನಿಸಿವೆ. "ಜಾತ್ರೆ ಎಂದರೆ ಒಂದು ನಿರ್ದಿಷ್ಟ ಭೂಪ್ರದೇಶದಲ್ಲಿ ವಾಸಿಸುವ ಜನಪದ ವರ್ಗವೊಂದು ನಿರ್ಧಿಷ್ಟ ಕಾರಣಕ್ಕಾಗಿ ನಿರ್ಧಿಷ್ಟ ದೈವವೊಂದಕ್ಕೆ ಸಾಂಪ್ರದಾಯಿಕ ಪೂಜಾ ಪುನಸ್ಕರಾದಿ ಆಚರಣೆಗಳಿಂದ ನಡೆದುಕೊಳ್ಳುವದಕ್ಕೆ ಜಾತ್ರೆ ಎಂದು ಕರೆಯಲಾಗುತ್ತದೆ."[೨]

ಜಾತ್ರೆ ಪದದ ಅರ್ಥ : (The Meaning of the Word Fair)

ಜಾತ್ರೆ ಎಂಬಪದ 'ಯಾತ್ರೆ' ಎಂಬ ತದ್ಭವ ರೂಪದಿಂದ ಬಂದಿದೆ. ಪ್ರಾಚೀನ ಕಾಲದ ಸಂದರ್ಭದಲ್ಲಿ ಜನರು ತಮ್ಮ ತಮ್ಮ ಜೀವನದ ಕೊನೆಯ ಭಾಗದಲ್ಲಿ ಅಥವಾ ಮನಸ್ಸಿನ ಆಸೆಗಳ ಈಡೇರಿಕೆಗಾಗಿ ಪವಿತ್ರ ದೇವಸ್ಥಾನಗಳ ಪ್ರದೇಶಗಳಿಗೆ ಹೋಗಿ ದೇವರ ದರ್ಶನವನ್ನು ಮಾಡಿಕೊಂಡು ಬರುವುದು ಒಂದು ರೂಢಿ ಪದ್ಧತಿಯಾಗಿತ್ತು. ದೇವಸ್ಥಾನ ಅಥವಾ ದೇವರಿರುವ ಸ್ಥಾನವೆಂದರೆ ಅಲ್ಲಿ ನೂರಾರು ವಿವಿಧ ರೀತಿಯ ಭಕ್ತರು ಸೇರಿರುತ್ತಾರೆ. ಧರ್ಮ ಮತ ಪಂಗಡಗಳೆನ್ನದೆ ಜನರು

ಇಂತಹ ಪವಿತ್ರ ಸ್ಥಳಗಳನ್ನು ನೋಡುವುದರಿಂದ ಮತ್ತು ದೇವರ ದರ್ಶನ ಪಡೆಯುವುದರಿಂದ ಪುಣ್ಯಲಭಿಸುತ್ತದೆ. ಜನರು ಇಂತಹ ಯಾತ್ರೆ ಮಾಡುವುದರಿಂದ ದೇವರಿಗೆ ಹತ್ತಿರವಾಗುತ್ತೇವೆ ಎಂದು ಹಾಗು ಸ್ವರ್ಗಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಕೆಲವು ಭಕ್ತರು ದೈವ ಪರವಶರಾಗಿ ಯಾತ್ರಾ ಸ್ಥಳಗಳಲ್ಲೇ ಇದ್ದು, ತಮ್ಮ ಮುಂದಿನ ಜೀವನವನ್ನು ನಡೆಸುತ್ತಿರುವರು. ಇನ್ನು ಕೆಲವರು ಜೀವನದ ಮೇಲೆ ವಿರಕ್ತಿ ಹೊಂದಿ ಸಂಸಾರ ಜಂಜಾಟಗಳಿಂದ ಮುಕ್ತಿಹೊಂದಿ ಸನ್ಯಾಸಿಗಳಾಗಿ ದೇಶಾಂತರ ಹೋಗುವುದರಿಂದ ತಾವು ದೇವರ ಕೃಪೆಗೆ ಪಾತ್ರರಾಗುತ್ತವೆ ಎಂಬ ನಂಬಿಕೆಯಿಂದ ಕೂಡಿದ್ದರು. ಹೀಗೆ ತಂಡೋಪತಂಡಗಳು ಸೇರಿ ದೇವರನ್ನು ಭಜಿಸುವುದು, ಆರಾಧಿಸುವುದು, ದೇವರನ್ನು ಕೊಂಡಾಡುವುದು, ಮೆರವಣಿಗೆ ಮಾಡುವುದು ಇಂತ ಕೆಲವು ಆಚರಣೆಗಳು ಜಾರಿಗೆ ಬಂದವು. ಮುಂದೆ ಯಾತ್ರೆ ಎಂಬುದು ಜನಸಾಮಾನ್ಯರ ನಾಲಿಗೆಗೆ ನಿಲುಕದೆ ಯಾತ್ರೆ ಹೋಗಿ ರೂಪಾಂತರ ಹೊಂದಿತು. ಅಲ್ಲಿಂದ ಯಾತ್ರೆ ಹೋಗಿ ಜಾತ್ರೆಯಾಯಿತು. ತದನಂತರ ಜಾತ್ರೆ ಎಂಬ ಪದವೇ ನಿರ್ಧಿಷ್ಟವಾಗಿ ನಿತ್ಯ ನಿರಂತರವಾಗಿ ಬಳಕೆಯಲ್ಲಿ ಜಾರಿಯಾಯಿತು. ಹೀಗೆ ಜಾತ್ರೆ ಎಂಬ ಪದ ನಿಷ್ಪನ್ನ ಹೊಂದಿ ಜನಪದರ ಜೀವನದಲ್ಲಿ ಮಹತ್ವದ ಸ್ಥಾನ ಪಡೆಯಿತು ಎನ್ನಬಹುದು.

ಜಾತ್ರೆಗಳು ನಡೆದು ಬಂದದಾರಿ : (The Way the Fairies Walked)

ಹಿಂದಿನ ಕಾಲದಲ್ಲಿ ಜಾತ್ರೆಗಳೆಂದರೆ ಮುಖ್ಯವಾಗಿ ಧಾರ್ಮಿಕ ವಿಭಿನ್ನಗಳು ಕಾಣುವಂತಹ ಅಥವಾ ಧರ್ಮವನ್ನು ಎತ್ತಿ ಹಿಡಿಯುವಂತಹ ಸ್ಥಳಗಳಾಗಿ ಪರಿಚಯವಿದ್ದವು. ವಾಹನಗಳ ಸೌಲಭ್ಯವಿಲ್ಲದ ಕಾರಣದಿಂದ ಆ ಕಾಲದಲ್ಲಿ ಜನಪದರು ಕೇವಲ ಕಾಲ್ನಡಿಗೆಯಲ್ಲೇ ಜಾತ್ರೆ ನಡೆಯುವ ಸ್ಥಳಕ್ಕೆ ಹೋಗುತ್ತಿದ್ದರು. ಸ್ವಲ್ಪ ಆರ್ಥಿಕವಾಗಿ ಸುಧಾರಿಸಿದವರು ಎತ್ತಿನ ಬಂಡಿಗಳನ್ನು ಕಟ್ಟಿಕೊಂಡು ತಮ್ಮ ಕುಟುಂಬ ಸಮೇತ ಅವುಗಳಲ್ಲಿ ಪ್ರಯಾಣಿಸುತ್ತಿದ್ದರು. ರಾತ್ರಿ–ಹಗಲು ಎನ್ನದೆ, ಎರಡು ಮೂರು ದಿನಗಳವರೆಗೆ ಪ್ರಯಾಣ ಮಾಡುತ್ತಿದ್ದರು. ಇನ್ನೂ ಕೆಲವು ಭಕ್ತಾದಿಗಳು ಜಾತ್ರೆಗಳ ಸಂದರ್ಭದಲ್ಲಿ ದೇವರು ತಮಗೆ ಬಂದಂತಹ ತೊಂದರೆಗಳನ್ನು ನಿವಾರಿಸಿದರೆ ಕಾಲ್ನಡಿಗೆಯಲ್ಲಿ ಬಂದು ಹರಕೆಯನ್ನು ತೀರಿಸುತ್ತೇವೆ ಎಂದು ಬೇಡಿಕೊಳ್ಳುತ್ತಿದ್ದರು. ಅದರಂತೆ ಅವರು ಚಾಚೂ ತಪ್ಪದಂತೆ ಪಾಲಿಸುತ್ತಿದ್ದರು. ತಮ್ಮ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಿದ ದೇವರಿಗೆ ನಾವು ಮಾಡುವ ಸೇವೆ ಎಂದೇ ಭ್ರಮಿಸುತ್ತಿದ್ದರು. ಜಾತ್ರೆಗಳೆಂದರೆ ಪ್ರಮುಖವಾಗಿ ಧಾರ್ಮಿಕವಾದ ಆಚರಣೆಗಳಾಗಿರುವುದರಿಂದ ಇದರಲ್ಲಿ ಅನೇಕ ಅಂಶಗಳು ಅಡಗಿವೆ. ಸಂಸ್ಕೃತಿ, ಸಂಪ್ರದಾಯ, ಇತಿಹಾಸ, ಪುರಾಣ, ಮುಂತಾದ ವಿಷಯಗಳನ್ನು ಒಳಗೊಂಡಂಹ ಜಾತ್ರೆಗಳು ಜನಪದರಿಗೆ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿ ಸಂತೋಷವನ್ನು ನೀಡುವಂತಹವುಗಳಾಗಿವೆ.

ಜಾತ್ರೆ ಎಂದರೆ ಮಡಿ–ಮೈಲಿಗೆ, ಕೆಲವು ನಿರ್ದಿಷ್ಟ ನಿಯಮಗಳನ್ನು ಕಟ್ಟು ಪಾಡುಗಳನ್ನು ಪಾಲಿಸಿಕೊಂಡು ಬರುತ್ತಿದ್ದ ಜನಪದರು ನಿಷ್ಠೆಯಿಂದ ಜಾತ್ರೆಗಳನ್ನು ಆಚರಿಸಿ ಭಕ್ತಿಯಿಂದ

ಪಾಲ್ಗೊಳ್ಳುತ್ತಿದ್ದರು. ಯಾವುದೇ ವಿಧಿಯನ್ನು ಹಿಂದಿನವರು ಆಚರಿಸಿಕೊಂಡು ಬಂದಂತೆ ಪದ್ಧತಿಯನ್ನು ಬದಲಾಯಿಸಿದರೆ ದೇವರ ಕೋಪಕ್ಕೆ ತುತ್ತಗಬೇಕಾಗುತ್ತದೆ. ಇದರಿಂದ ಜೀವನಕ್ಕೆ ಅಪಾಯ ಅನಾಹುತಗಳು ಆಗಬಹುದೆಂಬ ಭಯದ ವಾತಾವರಣದಲ್ಲೇ ಬೆಳೆದರು.

ಹಳ್ಳಿಗಳಲ್ಲಿ ಜಾತ್ರೆಗಳೆಂದರೆ ಪ್ರತಿಷ್ಠೆಯ ಸಂಕೇತವಾಗಿ ಆಚರಣೆಗಳಾಗುತ್ತಿರುವುದನ್ನು ನಾವಿಂದು ಕಾಣಬಹುದು. ಪರಸ್ಪರ ಜನಪದರು ಸಾಮುದಾಯಿಕ ಭಾವನೆಯನ್ನು ಮರೆತು ಪರಸ್ಪರ ದ್ವೇಷ ಅಸೂಯೆಗಳಿಂದ ಗುಂಪು ಗುಂಪಾಗಿ ಅವರದೇ ರೀತಿ ನೀತಿಗಳನ್ನು ಜಾರಿಮಾಡುವುದರ ಮೂಲಕ ಜಾತ್ರೆಗಳನ್ನು ಆಚರಿಸಲಾಗುತ್ತಿದೆ. ಅದಕ್ಕೆ ಇಂದು ಪ್ರಬಲವಾಗುತ್ತಿರುವ ರಾಜಕೀಯ ಪ್ರಭಾವ ಸಾಕಷ್ಟಿದೆ. ಅದೇನೇ ಇದ್ದರೂ ಜಾತ್ರೆಗಳು ಪರಂಪರೆಯಿಂದಲೂ ವೈಭವವಾಗಿ ಆಚರಿಸಿಕೊಂಡು ಬರುತ್ತಿವೆ. ರೂಪ ಸ್ವರೂಪ ಆಶಯಗಳಲ್ಲಿ ಕೆಲವು ಬದಲಾವಣೆಯಾಗುತ್ತಿದ್ದರೂ, ಪರಂಪರೆ ಮಾತ್ರ ಇಂದಿಗೂ ಜಾರಿಯಲ್ಲಿದೆ. ಅದೇ ರೀತಿಯಲ್ಲಿ ಇಂದು ಕೆಲವು ಸೌಲಭ್ಯಗಳು ಜನಪದರ ಕೈಗೆ ಸುಲಭವಾಗಿ ದೊರೆಯುತ್ತಿದ್ದು; ಹಿಂದಿನ ಸಂದರ್ಭದಲ್ಲಿ ಆಗುತ್ತಿದ್ದಂತ ಕೆಲವು ತೊಂದರೆಗಳಿಂದ ಮುಕ್ತಿ ಹೊಂದಿದ್ದಾರೆ. ಹೀಗೆ ಜಾತ್ರೆಗಳು ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ತನ್ನದೇ ಆದ ಆ ಶ್ರೇಷ್ಠತೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಮುಂದುವರೆಸಿಕೊಂಡು ಬರುತ್ತಿವೆ. ಸಣ್ಣ ಪ್ರಮಾಣದಲ್ಲಿ ಆಚರಿಸಲಾಗುತ್ತಿದ್ದಂತ ಹಬ್ಬಗಳು ಜಾತ್ರೆಗಳು ಇಂದು ದೊಡ್ಡ ಪ್ರಮಾಣದಲ್ಲಿ ಆಚರಣೆಯಾಗುತ್ತವೆ. ಇದರಿಂದ ನಮಗೆ ತಿಳಿದಿರುವದೇನೆಂದರೆ ಜನರು ಪ್ರಜ್ಞಾವಂತರಾಗುತ್ತಿದ್ದಾರೆ. ಸಾಮಾಜಿಕವಾಗಿ ಬಲಿಷ್ಠರಾಗುತ್ತಿರುವುದರಿಂದ ಜನಪದರ ಆಚರಣೆಗಳು ಎಂದಿಗೂ ಅವರಿಂದ ಮರೆಯಲಾಗುವುದಿಲ್ಲ ಎಂಬುದು ತಿಳಿದುಬರುತ್ತದೆ.

ಜಾತ್ರೆಗಳ ಮಹತ್ವ : (The Significance of Fairie)

ಮಾನವನು ಆಚರಿಸಿಕೊಂಡು ಬಂದಿರುವ ಪ್ರತಿಯೊಂದು ಕ್ರಿಯೆಗಳು, ವಿಧಿಗಳು ಒಂದಲ್ಲ ಒಂದು ರೀತಿಯಲ್ಲಿ ಅವನಿಗೆ ಉಪಯುಕ್ತವಾದಂತಹವುಗಳಾಗಿರುತ್ತವೆ. ಜೀವನದ ವಿವಿಧ ಹಂತಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಹಲವು ವಯೋಮಾನದವರಿಗೆ ವಿಶೇಷವಾದ ಜೀವಂತಿಕೆಯನ್ನು ನೀಡುತ್ತಲೆ ಬಂದಿವೆ. ಮಾನವನು ಜಾತ್ರೆಗಳ ಮಹತ್ವದಿಂದ ತನ್ನ ಮುಂದಿನ ಜೀವನ ನಿರಾಂತಂಕವಾಗಿ ಸಾಗಿ ಬಂದಿದ್ದು ಪ್ರತಿಕ್ಷಣವೂ ಅವನ ಏಳ್ಗೆಗೆ ಸಹಕಾರಿಯಾಗಿವೆ. ಸಾಂಘಿಕವಾಗಿ ಮನುಷ್ಯರೆಲ್ಲ ಒಂದಾಗಿ ದುಡಿಯುವ ಈ ವಿಧಿ ಏಕಕಾಲಕ್ಕೆ ಹಲವಾರು ಜನರಿಗೆ ಈ ಜಾತ್ರೆಯೇ ಆಗಿದೆ. ತಲೆಮಾರುಗಳಿಂದ ಇಂದಿನ ಪೀಳಿಗೆಯವರೆಗೂ ಆ ಕಾಯಕವನ್ನು ಹಾಗೆ ಮುಂದುವರೆಸಿಕೊಂಡುಬರುತ್ತದೆ. ಜನಪದರು ಸಹ ಅಷ್ಟೇ ಮುತುವರ್ಜಿಯಿಂದ ಜಾತ್ರೆಯ ಲಾಭವನ್ನು ಜಾತ್ರೆಯ ಉಪಯುಕ್ತವನ್ನು ಪಡೆಯುತ್ತಲೇ ಬಂದಿದ್ದಾರೆ. ಜನಪದರು ಧರ್ಮ, ಕಾಮ, ಮೋಕ್ಷ ಎಂಬ ಸಾರ್ಥಕ ವಿಧಿಗಳಿಗೆ ಜಾತ್ರೆಗಳು ಪ್ರೇರಣೆಯಾಗಿವೆ. "ಹಗಲಿರಳು ಎನ್ನದೇ ಬಿಸಿಲಲ್ಲಿ ಬೆವರಿ, ಮಳೆಯಲ್ಲಿ ನೆನೆದು, ಚಳಿಗೆ ನಡುಗುತ್ತಲೇ ತಮ್ಮ ದಿನನಿತ್ಯದ ಕಾಯಕಗಳಲ್ಲಿ

ನಿರಂತರವಾಗಿ ಬಿಡುವಿಲ್ಲದೆ ದುಡಿಯುವ ಜನತೆ ಆಗಾಗ್ಗೆ ಬಿಡುವು ಮಾಡಿಕೊಂಡು ಸಂತೋಷದಿಂದ ನೆಂಟರೊಡನೆ ಸಾಮೂಹಿಕವಾಗಿ ಕಲೆತು ವಿಶೇಷವಾದ ಊಟ-ಉಪಚಾರಗಳನ್ನು ಸವಿಯುತ್ತ ತಮ್ಮ ತಮ್ಮ ಕಷ್ಟಸುಖಗಳನ್ನು ಪರಸ್ಪರರು ಹಂಚಿಕೊಳ್ಳಲು ಮಾಡಿಕೊಂಡಿರುವ ವ್ಯವಸ್ಥೆಯ ಫಲವಾಗಿಯೇ ಹಬ್ಬ-ಜಾತ್ರೆಗಳು. ಉತ್ಸವ ಎಂಬ ಬದುಕಿನ ಅವಿಭಾಜ್ಯ ಅಂಗವಾಗಿರುವದರಿಂದ ಸಮಾಜದ ಎಲ್ಲರ ಒಳಿತನ್ನು ಬಯಸುವುದೇ ಇವುಗಳ ಮುಖ್ಯ ಉದ್ದೇಶವಾಯಿತು.[೫೩] ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧಿ ಹೊಂದಿರುವ ಜಾತ್ರೆಗಳು ಮನುಕುಲದ ಧರ್ಮವನ್ನು ಎತ್ತಿ ಹಿಡಿಯುವಲ್ಲಿ ಸಾಕಷ್ಟು ಮಹತ್ವವಾಗಿವೆ. ಅನೇಕ ಧರ್ಮಿಯರು ಜಾತ್ರೆಗಳಲ್ಲಿ ಸೇರುತ್ತಿದ್ದು ಪರಸ್ಪರ ಧಾರ್ಮಿಕ ಸಹಿಷ್ಣುತೆ ವಾತವರಣವನ್ನು ಜಾತ್ರೆಗಳಲ್ಲಿ ಕಾಣಬಹುದು. ಕಾರಣ ಹಳ್ಳಿಗಳಲ್ಲಿರುವ ವಾತಾವರಣವನ್ನು ಅಲ್ಲಿ ನೋಡಬಹುದು.

ಜನಪದರು ತಮ್ಮಲ್ಲಿ ತಾವೇ ಹೆಣೆದುಕೊಂಡಿರುವ ಸಾಮುದಾಯಿಕ ಬಾಂಧವ್ಯಗಳು ಅಪ್ಪ, ಅಮ್ಮ, ಅಣ್ಣ, ತಮ್ಮ, ಅಕ್ಕ, ಮಾವ, ದೊಡ್ಡಪ್ಪ, ಚಿಕ್ಕಪ್ಪ, ಚಿಕ್ಕಮ್ಮ, ಬೀಗ-ಬೀಗತಿ ಹೀಗೆ ತಾವು ವಾಸಿಸುವ ಹಳ್ಳಿಗಳಲ್ಲಿ ಪರಸ್ಪರ ಅವರವರಲ್ಲೇ ತಮ್ಮ ನಡುವಿನ ಬಾಂಧವ್ಯ ಗಟ್ಟಿಯಾಗಲು, ಕೂಡಿಬದುಕಲು ಏರ್ಪಡಿಸಿಕೊಂಡಿರುವ ಈ ಬಂಧನಗಳು ಸಮುದಾಯ ಧರ್ಮ ಮತಗಳನ್ನು ಮೀರಿ ನಿಂತಿವೆ. ಹುಟ್ಟು ಸಾವಿನ ಸಂದರ್ಭಗಳಲ್ಲಿ ಎಲ್ಲರೂ ಒಗ್ಗಟ್ಟಾಗಿಯೇ ವಿಧಿ-ವಿಧಾನಗಳನ್ನು ಮಾಡುತ್ತಾರೆ. ಮದುವೆ-ಮುಂಜಿ, ಹಬ್ಬ-ಹರಿದಿನ, ಜಾತ್ರೆಗಳು ಹೀಗೆ ಜೀವಿತಾವದಿಯಲ್ಲಿ ಬರುವಂತಹ ಎಲ್ಲಾ ಆಚರಣೆಗಳಲ್ಲಿ ಎಲ್ಲರೂ ಒಗ್ಗಟ್ಟಾಗಿಯೇ ಸ್ವೀಕರಿಸಿ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಜೊತೆಗೆ ದೂರದ ಊರುಗಳಿಂದ ಬಂದು ಸೇರಿದಂತ ಹಲವಾರು ಬಂಧುಗಳೊಡನೆ ಜನಪದರು ಕಳೆಯುವ ಕ್ಷಣ ಅವರ ಜೀವನದುದ್ದಕ್ಕೂ ಮರೆಯಲಾರದಂತವುಗಳು. ಜಾತ್ರೆಗಳು ನಮ್ಮ ಸಾಮಾಜಿಕ ಪರಂಪರೆಯನ್ನು ಪ್ರತಿನಿಧಿಸುವ ಬಹುತೇಕ ಅಂಶಗಳನ್ನು ಮೈಗೂಡಿಸಿಕೊಂಡು ಬಂದಿವೆ. ಜಾತ್ರೆಯ ರೂಪದಲ್ಲಿ ನಡೆಯುವ ಸಂಕೀರ್ಣ ಸ್ವರೂಪದ ಚಟುವಟಿಕೆಗಳು ಸಾಮಾಜಿಕವಾಗಿ ನಡೆಯುವಂತಹವುಗಳು

ಜನಪದರಿಗೆ ಕಾಡಿಸುವ ಅನಾರೋಗ್ಯ, ಕಷ್ಟ-ಕಾರ್ಪಣ್ಯ, ಕೌಟುಂಬಿಕ ಸಮಸ್ಯೆಗಳು, ಸಾಮಾಜಿಕ ತೊಂದರೆಗಳಿಂದ ಮುಕ್ತಿ ಹೊಂದಲು ಜನಪದರು ಹರಕೆ ಮುಡುಪುಗಳನ್ನು ಕಟ್ಟಿಕೊಂಡು ವರ್ಷಾಂತ್ಯದಲ್ಲಿ ನೆಡೆಯುವ ಅಥವಾ ತಮ್ಮ ಆರಾಧ್ಯ ದೈವದ ಜಾತ್ರೆ ನಡೆಯುವ ಸಂದರ್ಭಗಳಲ್ಲಿ, ಬೆಳೆಯಲ್ಲಾ ನಾಶವಾಗುವಂತಹ ಸಂದರ್ಭ ಬಂದಾಗ ಹರಕೆ ಹೊತ್ತರೆ ದೇವರು ರೈತರ ಫಸಲನ್ನು ಕಾಪಾಡುತ್ತದೆ. ಇದರಿಂದ ದೇವರಿಗೆ ತಮ್ಮ ಫಸಲಿನಲ್ಲಿ ಇಂತಿಷ್ಟು ಎಂದು ಹರಕೆಯ ರೂಪದಲ್ಲಿ ನೀಡುತ್ತಾರೆ. ಹಾಗೇ ಊರಿಗೆ ಊರೇ ಕ್ಷಾಮ ಬರಗಾಲಗಳಿಂದ ಹಾಗೂ ದನ-ಕರುಗಳಿಗೆ ಖಾಯಿಲೆ ಬಂದರೆ ಅದರಿಂದ ಪಾರಾಗಲು ಜನಪದರು ದೇವರುಗಳಲ್ಲಿ ಮೊರೆ ಹೋಗಿ ಬೇಡಿಕೊಂಡಗ ದೇವರು ಅಂತಹ ಕಷ್ಟಗಳನ್ನು ಪರಿಹಾರ ಮಾಡುತ್ತವೆ. ಇದರಿಂದ

ಉತ್ಸಾಹಗೊಂಡ ಜನಪದರು ಜಾತ್ರೆಗಳನ್ನು ಮತ್ತಷ್ಟು ವಿಜೃಂಭಣೆಯಿಂದ ಎಲ್ಲರೂ ಒಂದಾಗಿ ವೈಭವದಿಂದ ಆಚರಿಸುತ್ತಾರೆ. ದೇವರಲ್ಲಿ ಜನಪದರು ಸಂತಾನ ಭಾಗ್ಯ, ವಿವಾಹ ಭಾಗ್ಯ, ಮತ್ತಿತರ ಬೇಡಿಕೆಗಳನ್ನು ಬೇಡಿಕೊಳ್ಳುತ್ತಾರೆ. ತಮ್ಮ ಬೇಡಿಕೆ ಈಡೇರಿದರೆ ಅದರ ನೆಪಕ್ಕಾಗಿ ಜನಪದರು ದೇವರಿಗೆ ಹಣ್ಣು, ಕಾಯಿ, ಪೂಜೆ, ಅಭಿಷೇಕ, ಉರುಳು ಸೇವೆ, ಮಡಿಸೇವೆ, ಇಂತಹ ಹಲವು ಸೇವೆಗಳನ್ನು ಮಾಡುವುದರ ಮೂಲಕ ತಮ್ಮ ಹರಕೆಯನ್ನು ತೀರಿಸುತ್ತಾರೆ. ಇದು ಇಂದಿಗೂ ಜನಪದರಲ್ಲಿ ಜೀವಂತಿಕೆಯಾಗಿದೆ. ಇಂತಹ ಮಾನವನ ನಂಬಿಕೆಗಳು ಎಲ್ಲಿಯವರೆಗೆ ಜೀವಂತವಾಗಿರುತ್ತವೆಯೋ ಅಲ್ಲಿಯವರೆಗೂ ಈ ರೀತಿಯ ಹರಕೆ ಬೇಡಿಕೆಗಳು ಮರುಹುಟ್ಟನ್ನು ಪಡೆಯುತ್ತಲೇ ಇರುತ್ತವೆ. ಜನರ ಬದುಕಿನ ಬಗ್ಗೆ ಬದ್ಧ ವ್ಯವಸ್ಥೆ ನಿರ್ಮಾಣವಾಗಲು ಈ ಜಾತ್ರೆಗಳು ಹೀಗೆ ಪ್ರಮುಖ ಪಾತ್ರ ನಿರ್ವಸುತ್ತಿವೆ.

೪.೨.೭. ಜಾತ್ರೆ ಆಚರಣೆಗಳು : (Fair Fairs)

೪.೨.೭.೧. ಕಳಸಾರೋಹಣ : (Despair)

ಜಾತ್ರೆ ಪ್ರಾರಂಭದ ದಿನ ಡೊಳ್ಳು, ಭಜನೆ, ಮಜಲುಗಳಲ್ಲಿ ಬೆಳಿಗ್ಗೆ ೧೧.೦೦ ಗಂಟೆಗೆ ವರಾಂಡದಲ್ಲಿರುವ ಎಲ್ಲಾ ದೇವರುಗಳ ಗುಡಿಗಳ ಗೋಪುರಗಳಿಗೆ ಕಳಸಾರೋಹಣ ನಡೆಯುತ್ತದೆ, ಇದಕ್ಕಿಂತ ಪೂರ್ವದಲ್ಲಿ ಗೋಪುರದ ಕಳಸಗಳನ್ನು ಪರಿಶುದ್ಧತೆ ಮಾಡಿ ಚಂದಾಲಿಂಗನ ಸನ್ನಿದಿಯಲ್ಲಿ ಪೂಜಿಸುತ್ತಾರೆ. ತದನಂತರ ಮೆರವಣಿಗೆಯಲ್ಲಿ ಮುಖ್ಯ ಗುಡಿಯನ್ನು ಐದುಸುತ್ತು ಪ್ರದಕ್ಷಿಣೆ ಹಾಕಿ ಒಂದೊಂದು ಗುಡಿಗೆ ಕಳಸ ಏರಿಸುತ್ತಾರೆ. ಕಂಚಾವೀರರು ಈ ಗುಡಿಯ ಸುತ್ತಲೂ ಪ್ರದಕ್ಷಿಣೆ ಹಾಕುವಂತ ಸಂದರ್ಭದಲ್ಲಿ ವಡಪನ್ನ ಹೇಳುತ್ತಾರೆ. ಗುಡಿಯ ಗೋಪುರಕ್ಕೆ ಕಳಸವನ್ನು ಕೂಡಿಸಿ ಅಲ್ಲಿಯೇ ಪೂಜೆಗೈದು, ಕಾಯಿ ಕರ್ಪೂರದಿಂದ ಪೂಜಿಸುತ್ತಾರೆ. ಏಳುಕೋಟಿ.. ಏಳುಕೋಟಿ... ಎಂದು ನಾಮ ಘೋಷಣೆಯನ್ನು ಕೂಗುತ್ತಾರೆ. ಗುಡಿಯಿಂದ ಮುಖ್ಯ ಪೂಜಾರಿಯೇ ಈ ಕಳಸವನ್ನು ಗೋಪುರಕ್ಕೆ ತೊಡಿಸುತ್ತಾರೆ. ಹುಲ್ಲಪ್ಪನ ಗುಡಿಗೆ, ಗಂಗೆಮಾಳಮ್ಮನ ಗುಡಿಗೆ, ಮುಖ್ಯ ದೇವರ ಗುಡಿಗೆ ಕಳಸಾರೋಹಣ ನೆರವೇರುತ್ತವೆ. ಈ ಕಾರ್ಯಕ್ರಮ ನೆರವೇರಿದ ನಂತರ ಭಕ್ತರು ಬೇಡಿಕೊಂಡ ಹರಕೆಗಳಾದ ದೀಡ್‌ನಮಸ್ಕಾರ ಹಾಕುವುದು, ಜವುಳ ಇಳಿಸುವುದು ಹಾಗೂ ವಸ್ತುಗಳ ರೂಪದಲ್ಲಿ ದೇಣಿಗೆ ನೀಡುವಂತಹವು. ಕಳಸಗಳನ್ನು ಕೊಡುವವರಿದ್ದರೆ ಉತ್ಸವದ ಮೂಲಕ ಕೊಡುವರು ಇನ್ನೂ ಇತ್ಯಾದಿಗಳು ನೆಡೆಯುತ್ತವೆ.

೪.೨.೭.೨. ಖಡ್ಗದ ಆಗಮನ : (Arrival of The Sword)

ಜಾತ್ರೆ ದಿನದಂದು ೧೧.೩೦ ಗಂಟೆಗೆ ಮನ್ಯಾರಾಳದಿಂದ ಖಡ್ಗದ ಮೆರವಣಿಗೆ ಬರುತ್ತದೆ. ಈ ಖಡ್ಗವನ್ನು ಹಿಂದೆ ಚಂದಾಲಿಂಗೇಶ್ವರನು ರಾಕ್ಷಸರನ್ನು ಸಂಹಾರ ಮಾಡುವುದಕ್ಕೆ ಬಳಸಿದ್ದನು ಎಂಬ ನಂಬಿಕೆ ಇದೆ. ಆದ್ದರಿಂದ ಈ ಖಡ್ಗ ಬಂದ ಮೇಲೆ ಜಾತ್ರೆ ಪ್ರಾರಂಭವಾಗುವದು.

ಖಡ್ಗದ ಮೆರವಣಿಗೆಯವರು ಚಂದಾಲಿಂಗನ ಮುಖ್ಯದ್ವಾರವಾದ ಅರವತ್ತು ಕಂಬದ ಅಗಸಿಯಿಂದ ಸುಮಾರು ಒಂದು ನೂರು ಮೀಟರ ದೂರದಲ್ಲಿರುವ ಹುಲ್ಲಪ್ಪನ ಪಾದಗಟ್ಟೆಯ ಹತ್ತಿರ ತಂಗಿರುತ್ತಾರೆ. ಇವರು ಬಂದಿರುವ ಸುದ್ದಿಯನ್ನು ಗುಡಿಯ ಪೂಜಾರಿಗಳಿಗೆ ತಲುಪುತ್ತದೆ. ಪೂಜಾರಿಯು ಹಾಗೂ ಇತರ ಸೇವಕರು ಹಾಗೂ ಡೊಳ್ಳಿನವರು ಈ ಪಾದಗಟ್ಟೆಗೆ ತಲುಪುತ್ತಾರೆ. ಪೂಜಾರಿಯು ಖಡ್ಗಕ್ಕೆ ಪೂಜಿಸಿ ಹೂವಿನ ಹಾರವನ್ನು ಹಾಕಿ ಕಾಯಿ ಕರ್ಪೂರವನ್ನು ಅರ್ಪಿಸುತ್ತಾರೆ. ತದನಂತರ ಕಂಚಾವೀರರು ವಡಪನ್ನು ಹೇಳುತ್ತಾರೆ. ಇದರಿಂದ ಖಡ್ಗಧಾರಿಯಾದ ಖಂಡೆದೇವರು (ಖಡ್ಗ ಹೊತ್ತಿರುವ ವ್ಯಕ್ತಿಯು) ಉಗ್ರಗೊಳ್ಳುತ್ತಾನೆ. ಖಂಡೆದೇವರಿಗೆ ಮೈಯಲ್ಲಿ ಉಗ್ರಬಂದ ತಕ್ಷಣ ಹೂಂ..... ಹೂಂ... ಎಂದು ಮುಖ್ಯ ಗುಡಿಯ ಕಡೆಗೆ ಓಡಿಬರುತ್ತಾನೆ. ಗುಡಿಯನ್ನು ರಬಸದಿಂದ ಓಡುತ್ತಾ ಪ್ರದಕ್ಷಿಣೆ ಹಾಕಿ ಚಂದಾಲಿಂಗನಿಗೆ ಎದುರಾಗಿ ನಿಂತು ಉಗ್ರಗೊಂಡು ಗುಡಿಯೊಳಗೆ ಪ್ರವೇಶಿಸುವರು. ನಂತರ ಖಡ್ಗವನ್ನು ಪಾಲುಕೆಯಲ್ಲಿ ಆಸನಗೊಳಿಸುವರು. ಈ ಪಾಲುಕೆಯನ್ನು ವಿವಿಧ ಹೂವಗಳಿಂದ ಅಲಂಕರಿಸುತ್ತಾರೆ. ಕೊಂತ ದೇವರೊಂದಿಗೆ ಗಂಗೆಸ್ನಾನಕ್ಕೆ ಹೊಂಡಕ್ಕೆ ಹೋಗುವರು. ಕಂಚಾವೀರರು ಕೊಂತದೇವರಿಗೆ ವಡಪುಗಳನ್ನು ಹೇಳುವುದರ ಮೂಲಕ ಉಗ್ರರೂಪವನ್ನು ತಾಳುವಂತೆ ಮಾಡುತ್ತಾರೆ. ಕೊಂತ (ತ್ರಿಶೂಲ) ವನ್ನು ಹೊತ್ತುಕೊಂಡ ಭಕ್ತನು ತನ್ನ ಮೈಯಲ್ಲಿ ಚಂದಾಲಿಂಗನನ್ನು ಆಹ್ವಾನ ಮಾಡಿಕೊಂಡು ಮೇಲೆ ಕೆಳಗೆ ಜಿಗಿಯುವನು. ಈತನು ಸಾಧಾರಣವಾಗಿ ಧೋತ್ರ, ಅಂಗಿ, ತಲೆಯ ಮೇಲೆ ರುಮಾಲು, ನಡುವಿಗೆ ಶಾಲನ್ನು ಕಟ್ಟಿಕೊಂಡಿರುತ್ತಾನೆ. ಕೊರಳಲ್ಲಿ ಒಂದು ಹೂವಿನ ಮಾಲೆ, ತನ್ನ ಬಲಭುಜದ ಹೆಗಲ ತ್ರಿಶೂಲ ದಂಡವನ್ನು ಹೊತ್ತುಕೊಂಡಿರುತ್ತಾನೆ. ಗಂಗೆಸ್ನಾನಕ್ಕೆ ಹೋಗಲು ಮೂವರು ಮಳ್ಳಯ್ಯಗಳು ಭಾಗಿಯಾಗಿರುತ್ತಾರೆ. ಕೊಂತ ದೇವರು ಗಂಗೆಸ್ನಾನಕ್ಕೆ ಹೋಗುವಂತ ಸಂದರ್ಭದಲ್ಲಿ ಕಂಚಾವೀರರು ಈ ಕೊಂತ ದೇವರನ್ನು ತಡೆದು, ತಡೆದು ವಡಪುಗಳನ್ನು ಹೇಳುತ್ತಾ ಉಗ್ರರೂಪವನ್ನು ತಾಳುವಂತೆ ಮಾಡುತ್ತಾರೆ. ಕೊಂತ ದೇವರು ಮುಂದೆ ಸಾಗಲು ಮಳ್ಳಯ್ಯ ಶಂಖನಾದ ಮಾಡುವುದರ ಮೂಲಕ ಸೂಚನೆ ನೀಡುತ್ತಾನೆ. ಹಾಗೆ ಹೊಂಡಕ್ಕೆ ಬಂದು ಪಾಲುಕೆಯನ್ನು ಹೊಂಡದ ಕಟ್ಟೆಯ ಮೇಲೆ ಆಸನ ಗೊಳಿಸುತ್ತಾರೆ.

ಒಂದು ಕಡೆ ಪಾಲುಕೆಯಲ್ಲಿರುವ ಖಡ್ಗದ ಸ್ನಾನ ನಡೆದರೆ, ಇನ್ನೊಂದು ಕಡೆ ತ್ರಿಶೂಲದ ಸ್ನಾನವನ್ನು ಸುಮಾರು ಮೂರು ನಾಲ್ಕು ಭಕ್ತರು ಮಾಡಿಸುತ್ತಾರೆ. ಖಡ್ಗದ ಸ್ನಾನವಾದ ನಂತರ ಮಸ್ಯಾರಾಳದಿಂದ ಬಂದಂತ ಖಂಡೇದೇವರು ಅದೇ ಖಡ್ಗದಿಂದ ತನ್ನ ದೇಹದ ಭಾಗಗಳಾದ ಹಣೆ, ಕೈಗಳು, ಕಾಲುಗಳಿಗೆ, ಹೊಟ್ಟೆಗೆ, ಬೆನ್ನಿಗೆ, ಗಂಧವನ್ನು ಲೇಪಿಸಿಕೊಳ್ಳತ್ತಾನೆ. ಸ್ನಾನ ಮಾಡಿಸಿದ ತ್ರಿಶೂಲಕ್ಕೆ ಹಾಗೂ ಖಡ್ಗಕ್ಕೂ ಪೂಜೆಗೈದು ಹೂವಿನ ಹಾರ ಹಾಕುತ್ತಾರೆ. ಇಲ್ಲಿ ಭಾಗಿಯಾಗಿರುವಂತ ಮಳ್ಳಯ್ಯಗಳಿಗೂ, ಕುದುರೆಕಾರರಿಗೂ, ಕಂಚಾವೀರರಿಗೂ ಜಾತ್ರೆಯನ್ನು ನಡೆಸುವಂತಹ ಹಿರಿಯರಿಗೂ, ಪೂಜಾರಿಗಳಿಗೂ ಎಲ್ಲರ ಕೊರಳಿಗೆ ಹೂವಿನ ಮಾಲೆಯನ್ನು

ಧರಿಸುತ್ತಾರೆ. ವಿಶೇಷವಾಗಿ ಈ ಪೂಜೆಯಲ್ಲಿ ಭಾಗವಹಿಸಿದ ಹಾಗೂ ಈ ಕಾರ್ಯಕ್ರಮ ಉಸ್ತುವಾರಿ ವಹಿಸಿದ ಎಲ್ಲರೂ ಗಾಂಧಿಟೋಪಿಯನ್ನು ಹಾಕಿಕೊಂಡಿರುತ್ತಾರೆ. ಎಲ್ಲಾ ಪೂಜೆಯನ್ನು ಮಾಡಿಕೊಂಡು ಮರಳಿ ಅದೇ ಮಾರ್ಗದ ಮೂಲಕ ಬರುತ್ತಾರೆ. ಹೊಂಡದಿಂದ ಮರಳಿ ದೇವಾಲಯಕ್ಕೆ ಬರುವಾಗಲೂ ಕಂಚಾವೀರರು ಕ್ಷಣ ಕ್ಷಣಕ್ಕೂ ಪಾಲಿಕೆ ಹಾಗೂ ಕೊಂತ ದೇವರನ್ನು ತಡೆದು ತಮ್ಮ ವಡಪುಗಳ ಮೂಲಕ ಉಗ್ರರೂಪಗೊಳಿಸುತ್ತಾರೆ. ತದನಂತರ ಮುಂದೆ ಮುಖ್ಯ ಗುಡಿಯ ಕಡೆಗೆ ಸಾಗುತ್ತಾರೆ. ಗುಡಿಯನ್ನು ತಲುಪಿದ ನಂತರ ಐದು ಬಾರಿ ಪ್ರದಕ್ಷಿಣೆಯನ್ನು ಸಾಮೂಹಿಕವಾಗಿ ಹಾಕುತ್ತಾರೆ. ತದನಂತರ ಪಾಲಿಕೆಯನ್ನು ಗುಡಿಯ ಮುಂಭಾಗದ ಬಲಗಡೆಯ ಕಟ್ಟೆಯ ಮೇಲೆ ಆಸನಗೊಳಿಸುತ್ತಾರೆ. ಕೊಂತವನ್ನು ಗುಡಿಯೊಳಗಡೆ ಕೊಂಡೊಯ್ದು ಚಂದಾಲಿಂಗನ ಬಲಭಾಗದಲ್ಲಿ ನಿಲ್ಲಿಸಲಾಗುತ್ತದೆ.

೪.೨.೭.೩. ಖಂಡೇದೇವರ ಪೂಜೆ ಹಾಗೂ ಕ್ಷೇತ್ರಕ್ಕೆ ಆಗಮನ : (The Continent Worshies God and Arrives at the Field)

ಚಂದಾಲಿಂಗೇಶ್ವರನ ಜಾತ್ರೆಯ ಆರಂಭದ ಕಾಲದಿಂದಲೂ ಈ ಖಂಡೇ ಪೂಜೆ ನೆರವೇರುತ್ತದೆ. ಖಂಡೇದೇವರ ಪ್ರಮುಖ ಉದ್ದೇಶವೆಂದರೆ, ಪೂರ್ವದಲ್ಲಿ ಜಗತ್ತಿನ ಕಲ್ಯಾಣಕ್ಕಾಗಿ ಹುಲ್ಲಪ್ಪನು ಜಿಂಕೆಗಳ ಬೇಟೆಯಾಡಿ ಶಿವನಿಗೆ ನೈವೇದ್ಯ ಮಾಡಿದಾಗ, ತಂದೆ ಚಂದಾಲಿಂಗಪ್ಪ ಕೋಪದಿಂದ ಮಗನನ್ನು ಕೊಲ್ಲಲು ಹೋದ. ಇದರಿಂದ ಶಿವ ಪ್ರತ್ಯಕ್ಷನಾಗಿ ನಿನ್ನ ಮಗ ಮಾಡಿದ್ದು ಖಂಡ ಖಂಡವಲ್ಲ ನೈವೇದ್ಯ. ಇದು ಜಗತ್ತಿನ ಕಲ್ಯಾಣಕ್ಕೆ ಮಾಡಿದ್ದು. ಇದರಿಂದ ಇದು ಖಂಡೇ ಪೂಜೆಯಾಗಲಿ ಎಂದು ಶಿವ ಹರಸಿ ಮಾಯವಾದ. ಖಂಡೇ ಎಂದರೆ ಇಲ್ಲಿ ಚಂದಾಲಿಂಗೇಶ್ವರನ ಖಡ್ಗಕ್ಕೆ ಎಂದು ಕರೆದರೆ, ದೇವರು ಎಂದರೆ ಖಡ್ಗವನ್ನು ಹಿಡಿದವರಿಗೆ ದೇವರು ಎಂದು ಕರೆದರು. ಈ ಖಡ್ಗದ ವಾಸಸ್ಥಳ ಮನ್ನೇರಾಳ. ಇಲ್ಲಿ ಪೂರ್ವದಲ್ಲಿ ಇದ್ದಂತ ಒಂದು ಗದ್ದುಗೆ. ಈ ಗದ್ದುಗೆಯು ಆ ಮನ್ನೇರಾಳದ ಶೆಬ್ಬಿಯವರ ಮನೆತನದವರಿಗೆ ಸೇರಿದೆ. ನೋಡುವುದಕ್ಕೆ ಮನೆಯಂತೆ ಕಂಡರೂ ಅಲ್ಲಿ ಈ ಖಂಡೇದೇವರ ಗದ್ದುಗೆ ಸ್ಥಾಪಿತವಾಗಿದೆ. ಈ ಗದ್ದುಗೆಯ ಮೇಲೆ ಚಂದಾಲಿಂಗೇಶ್ವರ ಖಡ್ಗವನ್ನು ಇಟ್ಟು ಪೂಜಿಸುತ್ತಾರೆ. ಚಂದನಗೌಡ ಶಬ್ಬಿಯವರನ್ನು, ಈ ಖಡ್ಗ ಯಾರದು? ಏನು? ಎಂದು ಕೇಳಿದರೆ ಅವರು ಹೀಗೆ ಅದರ ಬಗ್ಗೆ ಪ್ರತಿಕ್ರಿಯಿಸುತ್ತಾರೆ. 'ಈ ಕತ್ತಿ ತೊಗಂಡು ಹಿಂದಾ ಚಂದಾಲಿಂಗಪ್ಪ ರಾಕ್ಷಸರನ್ನು ಕೊಂದ್ನಂತ ಅದ್ಕಾ ಇದ್ನಾ ನಮ್ಮ ಹಿರ್‍ಯಾರ ಕಾಲ್ದಾಗಿಂದ ಪೂಜಾ ಮಾಡ್ತಾ ಬರ್ತಿವಿ, ಮತ್ಯಾ ಇದಷ್ಟಾ ಅಲ್ಲರ್ರಿ, ನಮ್ಮೂರಿಂದ ಈ ಖಡ್ಗ ಹೋದ ಮ್ಯಾಲನೇ ಜಾತ್ರೆ ಸುರುವಾಗೋದು', ಎಂದು ಹೇಳುತ್ತಾರೆ. ಪ್ರಸ್ತುತ ದಿನಗಳಲ್ಲಿ ನೋಡಿದ್ರೆ ಮನ್ನೇರಾಳದಿಂದ ಖಡ್ಗ ಬಂದ ಮೇಲೆ ಜಾತ್ರೆ ಪ್ರಾರಂಭವಾಗುವುದು ಸತ್ಯವಾಗಿದೆ.

ಪ್ರತಿವರ್ಷದ ಎರಡೂ ಜಾತ್ರೆಯಲ್ಲಿ ಈ ಖಂಡೇದೇವರು ಬಂದ ಮೇಲೆ ಜಾತ್ರೆ ಆಚರಣೆಗಳು ಪ್ರಾರಂಭವಾಗುತ್ತವೆ. ಮನ್ನೇರಾಳದಿಂದ ಸುಮಾರು ಹತ್ತು-ಹನ್ನೆರಡು ಜನ ಭಕ್ತರು ಸೇರಿ ಕೆಲವರು ಡೊಳ್ಳು ವಾದ್ಯಗಳೊಂದಿಗೆ ಹಾಗೂ ಕುತನಿ ಬಟ್ಟೆಯಿಂದ ತಯಾರಿಸಿದ ಕೆಂಪು ಬಣ್ಣದಿಂದ ಕೂಡಿದ ಛತ್ರಿಯೊಂದಿಗೆ ಬಂದಿರುತ್ತಾರೆ. ಆ ಛತ್ರಿಯ ಸುತ್ತಲೂ ಅದರ ಅಂಚಿನ ಭಾಗವು ನೂಲಿನ ಹೆಣಿಕೆಯಿಂದ ಅಲಂಕೃತಗೊಂಡಿರುತ್ತದೆ. ಇದು ಸುಮಾರು ಏಳು ಅಡಿ ಎತ್ತರದ, ಹಾಗೂ ಸಾಂಸ್ಕೃತಿಕ ಆಚರಣೆಯಲ್ಲಿ ಬಳಕೆಮಾಡುವಂತ ಛತ್ರೆಯೊಂದಿಗೆ ಕ್ಷೇತ್ರಕ್ಕೆ ಪ್ರಯಾಣ ಬೆಳಸುತ್ತಾರೆ. ಪಾದಯಾತ್ರೆಯ ಮೂಲಕವೇ ಮನ್ನೇರಾಳದಿಂದ ಗುಡ್ಡದ ಮೂಲಕ ಕಾಲ್ದಾರಿಯಲ್ಲಿ ಏಳುಕೋಟಿ... ಏಳುಕೋಟಿ... ಏಳುಕೋಟಿ... ಎಂದು ಜಯ ಘೋಷಣೆ ಕೂಗುತ್ತಾ ಚಂದಾಲಿಂಗನ ಸನ್ನಿಧಿಗೆ ಬರುತ್ತಾರೆ. ಖಂಡೇದೇವರೊಂದಿಗೆ ಬರುವಂತವರು ಎಲ್ಲರೂ ಮಡಿ ಉಡಿಯಿಂದ ಬಂದಿರುತ್ತಾರೆ. ಖಂಡೇದೇವರಾದರು ಸಂಪ್ರದಾಯದಂತೆ ಧೋತಿ, ನೆಹರು ಶರ್ಟ್, ಗಾಂಧಿ ಟೋಪಿ ಕೊರಳಲ್ಲಿ ಹೂವಿನ ಮಾಲೆ ಧರಿಸಿಕೊಂಡು, ಹಣೆಗೆ ಗಂಧ, ವಿಭೂತಿ, ಕುಂಕುಮ ಪೋಷಿಸಿಕೊಂಡಿರುವರು.

ಮೂರು ಅಡಿ ಉದ್ದವಿರುವ ಖಡ್ಗದೊಂದಿಗೆ ಬೆಳಿಗ್ಗೆ ಸುಮಾರು ಹನ್ನೊಂದುವರೆ ಸಮಯಕ್ಕೆ ಆಗಮನವಾಗುತ್ತಾರೆ. ಈ ದೇವರು ಬಂದು ಗುಡಿಯ ಮುಂಭಾಗದಲ್ಲಿರುವ ಶಿಬಾರದ ಹತ್ತಿರ ನಿಲ್ಲುವರು. ಇವರು ಬಂದಿರುವ ಸುದ್ದಿಯು ಗುಡಿಯ ಪೂಜಾರಿಗಳಿಗೆ ತಿಳಿದ ತಕ್ಷಣ, ವಾದ್ಯಗಳೊಂದಿಗೆ, ಕಾಯಿ, ಕರ್ಪೂರ, ಹೂವಿನ ಮಾಲೆಯೊಂದಿಗೆ ದೌಡಾಯಿಸುತ್ತಾರೆ. ಬಂದಿರುವ ಖಂಡೇದೇವರಿಗೆ ಪೂಜಾರಿಗಳು ಪೂಜೆಗೈಯುವಂತೆ ಸಂದರ್ಭದಲ್ಲಿ ಈ ದೇವರಿಗೆ ಮೈಯಲ್ಲಿ ಉಗ್ರಬರುತ್ತದೆ. ಇದನ್ನು ನೋಡುತ್ತಾ ಪೂಜಾರಿಗಳು ಪೂಜಿಸಿ, ಖಡ್ಗಕ್ಕೆ ಹಾಗೂ ಖಂಡೇದೇವರಿಗೆ ಹೂವಿನ ಹಾರ ಹಾಕುವರು. ಈ ಪೂಜೆ ಮುಗಿದ ತಕ್ಷಣ ಖಂಡೇದೇವರು ಉಗ್ರಭರಿತನಾಗಿ ಗುಡಿಯೊಳಗೆ ಓಡಿಬರುವನು. ಬಂದು ಗುಡಿಯೊಳಗೆ ಅಜ್ಜನಿಗೆ ನಮಸ್ಕರಿಸಿ ಖಡ್ಗವನ್ನು ಆತನ ಸನ್ನಿಧಿಯಲ್ಲಿರಿಸುವನು.

ಈ ಖಂಡೇ ದೇವರ ಪೂಜೆ ನಡೆಯಲು ಪ್ರಮುಖವಾದ ಕಾರಣವೆಂದರೆ ಹುಲ್ಲಪ್ಪನು ಜಿಂಕೆಗಳನ್ನು ಬೇಟೆಯಾಡಿಯಿರುತ್ತಾನೆ. ಅದರ ಚರ್ಮ ತೆಗೆದು ಸನಿಹದಲ್ಲಿದ್ದ ಗುಡಿಗೆ ಹೋಗಿ ಅಲ್ಲಿದ್ದ ಶಿವಲಿಂಗಕ್ಕೆ ತಾನು ತಂದಿದ್ದ ಜಿಂಕೆಯ ಮಾಂಸದ ತುಂಡನ್ನು ನೈವೇದ್ಯಮಾಡಿ ಅದರ ಚರ್ಮವನ್ನು ಡೊಳ್ಳು ನಗಾರಿಗಳನ್ನಾಗಿ ಪೂಜಿಸುತೊಡಗಿದ್ದನು. ಈ ವಿಷಯ ಚಂದಾಲಿಂಗಪ್ಪ ಹೇಗೋ ತಿಳಿದುಕೊಂಡು ಸಿಟ್ಟಿನಿಂದ ಅವನಿದ್ದಲ್ಲಿಗೆ ಹೋಗಿ ಶಿರಚ್ಛೇದ ಮಾಡಬೇಕೆಂದು ಧಾವಿಸಿದನು. ಹೋಗಿ ಖಡ್ಗವನ್ನು ತೆಗೆದು ಹುಲ್ಲಪ್ಪನ ಶಿರಚ್ಛೇದ ಮಾಡಬೇಕೆಂದು ಕೈ ಎತ್ತಿದಾಗ ತಕ್ಷಣ ಶಿವ ಪ್ರತ್ಯಕ್ಷನಾಗಿ "ಚಂದಾಲಿಂಗನೆ ತಾಳು ದುಡುಕಬೇಡ ನಿನ್ನ ಮಗ ಮಾಡಿದ ನೈವೇದ್ಯ ಖಂಡ ಖಂಡವಲ್ಲ ಅದು ಹೇಗೆಂದರೆ ಜಗತ್ತಿನ ಕಲ್ಯಾಣಕ್ಕಾಗಿ ಮಾಡಿದ ನೈವೇದ್ಯ ಇದರಿಂದ ಇದು ಖಂಡೇ ಪೂಜೆಯಾಗಲಿ, ನಿನ್ನ ಹೆಸರಿಲ್ಲದ ದಶ ಪತ್ರಿಯು ದೇಶದಲ್ಲಿ ದಸರೆಯ (ದಸರಾ)ಹಬ್ಬವಾಗಲಿ ಶಿವ ಹರಸಿ ಅದೃಶ್ಯವಾದನು".[೪]

೪.೨.೬.೪. ಕೊಂತದೇವರ ಆಗಮನ : (The Arrival of the kontha God)

ಗುಡೂರು ಗ್ರಾಮದಿಂದ ಐಹೊಳೆ ಕೊಂತಬರುತ್ತದೆ. ಗುಡೂರು ಹುಲ್ಲಪ್ಪನ ಜಾತ್ರೆಯಾದ ಮೂರು ದಿನಗಳ ನಂತರ ಚಂದಾಲಿಂಗೇಶ್ವರ ಜಾತ್ರೆಯು ಪ್ರಾರಂಭವಾಗುತ್ತದೆ. ಈ ಎರಡು ಕ್ಷೇತ್ರದಲ್ಲಿ ಕೊಂತಧಾರಿಯಾಗಿ ಕರಿಯಪ್ಪ ಕಂಚೀಯವರು ಕೊಂತದೇವರಾಗಿ ಜಾತ್ರೆಯ ಕೇಂದ್ರಬಿಂದುವಾಗಿ ಇರುತ್ತಾನೆ. ಮುಂತಾದವರೊಂದಿಗೆ ಮಳ್ಳಯ್ಯನವರು ಕಲಾವಿದರುಗಳು, ಭಜನೆ, ನಂದಿಕೋಲಿನವರು, ಗೊರವರು, ಗೊರವಿಯರು ಮುಂತಾದ ಭಕ್ತರು ತಂಡೋಪತಂಡವಾಗಿ ಪಾದಯಾತ್ರೆಯ ಮೂಲಕ ಮಧ್ಯಾಹ್ನ ಒಂದು ಗಂಟೆಯ ವೇಳೆಗೆ ಬರುತ್ತಾರೆ.

ಕೊಂತಧಾರಿಯೂ ಸಾಂಪ್ರದಾಯಕವಾದ ಉಡುಗೆಗಳಾದ ಧೋತ್ರ, ಬಿಳಿ ನೆಹರು ಶರ್ಟ್, ತಲೆಯ ಮೇಲೆ ಹಳದಿ ರೇಷ್ಮೆ ಪೇಟ, ಸೊಂಟಕ್ಕೆ ಕೆಂಪು ಲಿಂಗದವಸ್ತ್ರ, ಕೊರಳಲ್ಲಿ ಹೂವಿನ ಮಾಲೆ ಹಾಕಿಕೊಂಡು ತನ್ನ ಬಲಭುಜದ ಮೇಲೆ ಸುಮಾರು ಹತ್ತು ಅಡಿ ಉದ್ದ ತ್ರಿಶೂಲವನ್ನು ಮುಂದೆ ಮುಖ ಮಾಡಿ ಹೊತ್ತುಕೊಂಡು ಬರುವರು. ಚಂದಾಲಿಂಗೇಶ್ವರನ ಕ್ಷೇತ್ರಕ್ಕೆ ಬಂದು ವಾದ್ಯಗಳೊಂದಿಗೆ ಕೊಂತದೇವರು ಮಳ್ಳಯ್ಯಜ್ಜ ವಗ್ಗಯ್ಯನವರು, ಕಂಚಿವೀರರು ಮುಖ್ಯ ಗುಡಿಯನ್ನು ಐದು ಬಾರಿ ಪ್ರದಕ್ಷಿಣೆಯನ್ನು ಹಾಕುವರು. ತದನಂತರ ಮಳ್ಳಯ್ಯಜ್ಜ, ವಗ್ಗಯ್ಯಜ್ಜನವರು, ಕೊಂತದೇವರು, ಚಂದಾಲಿಂಗನಿಗೆ ನಮಿಸಿ ಕೊಂತವನ್ನು ಆತನ ಸನ್ನಿಧಿಯಲ್ಲಿರಿಸುವರು.

ಈ ಜಾತ್ರೆಯಲ್ಲಿ ಎರಡು ಕೊಂತ (ತ್ರಿಶೂಲ)ಗಳು ಉತ್ಸವದ ಪ್ರಮುಖ ಪಾತ್ರವಹಿಸುತ್ತವೆ. ಈ ಕೊಂತಗಳ ಉತ್ಸವಕ್ಕೆ ಪೂರ್ವದ ಘಟನೆಯ ಹಿನ್ನೆಲೆಯನ್ನು ಹೊಂದಿವೆ. ಹುಲ್ಲಪ್ಪನು ಕೊಂತ ತರಲು ಕಿಲುಸಮುದ್ರ, ಹಾಲುಸಮುದ್ರದ ಭಾಗಕ್ಕೆ ಹೋದಾಗ ಅಲ್ಲಿರುವ ದೈತ್ಯರು ಹುಲಪ್ಪನಿಗೆ ಎಲ್ಯೆ ಸಹೋದರನೆ ಅಲ್ಲಿ ಎದರು ಕಾಣುವ ಹುತ್ತದ ಅಡಿಯಲ್ಲಿ ನಿನಗೆ ಬೇಕಾದ ತ್ರಿಶೂಲ ಇದೆ. ಅದರ ಅಲಗಿನ ಮೇಲೆ ಕಂಚಿವೀರನೆನ್ನುವ (ಕಂಚಿವೀರ ಶಬ್ದವೇ ಮುಂದೆ ಅಪಭ್ರಂಶವಾಗಿ ಕಂಚಿವಿರ, ಕಂಚಿ ಬೀರ, ಕಂಚೆರ ಆಗಿರಬಹುದೆಂದು ಊಹಿಸಲು ಅವಕಾಶವಿದೆ. ಈಗಲೂ ಈ ವಂಶದವರು ಹುಲ್ಲೇಶ್ವರನ ಹಾಗೂ ಚಂದಲಿಂಗೇಶ್ವರನ ಸೇವೆಗಯ್ಯುತ್ತಾರೆ) ಗೊರವ ತಪಸ್ಸು ಮಾಡುತ್ತಿದ್ದಾನೆ. ತೆಗೆದುಕೊಂಡು ಹೋಗು ಎಂದರು. ಅದರಂತೆ ಬಾಲಕ ಹುಲ್ಲಪ್ಪ ಹುತ್ತದ ಮೇಲಿದ್ದ ತ್ರಿಶೂಲವನ್ನು ತೆಗೆಯಲು ಏಳು... ಏಳು... ಎಂದು ಹೇಳುತ್ತಾ ಜಗ್ಗಾಡಿದ ಆಗ ಏಳುಕೊಟ್ಟಿಗೆ ಎಂದು ಶಬ್ದವಾಯಿತು. ಹಾಗಾದರೆ ಮೇಲೆ ತಪಸ್ಸಿಗೆ ಕುಳಿತಿದ್ದ ಕಂಚಿವೀರನು "ಏಲೋ ಬಾಲಕ ನನ್ನು ತಪಸ್ಸಿಗೆ ಬಂಗಮಾಡಿದೆ. ನಾನಿನ್ನು ಎಲ್ಲಿಗೆ ಹೋಗಲಿ? ಆಗ ಹುಲ್ಲಪ್ಪ ನನ್ನ ಹೊಗಳಿಕೆಯನ್ನು ಹೋಗುತ್ತಾ ಏಳುಕೋಟಿ.... ಏಳುಕೋಟಿ... ಎಂದು ಹೇಳುತ್ತಾ ನನ್ನ ಮುಂದೆ ನಡೆ ಎಂದು ಹೇಳಿ ಹುಲಪ್ಪ ಆ ತ್ರಿಶೂಲವನ್ನು ಕಿತ್ತು ಹೆಗಲ ಮೇಲೆ ಇಟ್ಟುಕೊಂಡು ಕಂಚಿವೀರನ ಹಿಂದೆ ಹೊರಟನು".[೫] ತ್ರಿಶೂಲವು ಆಗಿ ಹುಣ್ಣಿಮೆ ಆದ ಎರಡು ದಿನಗಳಲ್ಲಿ ಬಂದದ್ದರಿಂದ ಆ ತ್ರಿಶೂಲವನ್ನು ಉಳಿದ ದಿನಗಳಲ್ಲಿ ಈಗಲೂ ಹೂರತರುವುದಿಲ್ಲ. ಪ್ರತಿವರ್ಷದ

ಆಗಿ ಹುಣ್ಣಿಮೆ ಮರುದಿನ ಒಂದೇ ದಿನ ಮಾತ್ರ ಹೊರತಂದು ಹೊಂಡಕ್ಕೆ ಹೋಯಿದು ಸ್ನಾನ ಮಾಡಿಸಿ ವಿಭೂತಿ ಭಂಡಾರವನ್ನು ಲೇಪಿಸಿ ಬೀಳಿಗಿಯ ಗೌಡರು ಉಗ್ರ ದಿಂದ ಹೊತ್ತುಕೊಂಡು ಮಜಲ ನಿಂದ ಹೆಸರಿಲ್ಲದ ಮರಕ್ಕೆ ಕಟ್ಟಿರುಬರುತ್ತಾರೆ. ಈ ಸಂಪ್ರದಾಯ ಈಗಲೂ ಕಂಡುಬರುತ್ತದೆ.

೪.೨.೭.೫. ಕೊಂತದೇವರ ಗಂಗಾಸ್ನಾನ : (The Baptism of the God of Kontha)

ವರ್ಷದ ಎರಡೂ ಜಾತ್ರೆಯ ಅವಧಿಯಲ್ಲಿ ಈ ಆಚರಣೆ ನಡೆಯುತ್ತದೆ. ಮಧ್ಯಾಹ್ನ ಹನ್ನೆರಡು ಗಂಟೆಗೆ ಪ್ರಾರಂಭವಾಗುತ್ತದೆ. ಡೊಳ್ಳು ಮಜಲುಗಳೊಂದಿಗೆ ಕೊಂತದೇವರು ಹಾಗೂ ಪಾಲ್ಕಿಯೊಂದಿಗೆ ಖಂಡೇದೇವರು, ಕಂಚಿವೀರರು, ಮಳ್ಳಯ್ಯಜ್ಜ, ವಗ್ಗಯ್ಯನವರು, ಕುದುರೆಕಾರರು ಹಾಗೂ ಜಾತ್ರೆಗೆ ಬಂದಿರುವ ಇಡೀ ಭಕ್ತರ ಸಮೂಹವೆ ಇದರಲ್ಲಿ ಭಾಗವಹಿಸುತ್ತಾರೆ. ಹೋಗುವಾಗ ಚಂದಾಲಿಂಗೇಶ್ವರನ ಪಾಲ್ಕಿಯ ಎರಡೂ ಬದಿಗೆ ಒಂದ್ಬು ಜನರು ಗೊರವಿಯವರಿಂದ ಚೌರವನ್ನು ಬೀಸುತ್ತಾ ಹೊರಡಿಸುತ್ತಾರೆ. ಹೊಂಡದ ಸ್ನಾನಕ್ಕೆ ಹೋಗುವಾಗ ಕಂಚಿವೀರರು ತಮ್ಮ ವಡಪುಗಳನ್ನು ಹೇಳುತ್ತಾ ಕೊಂತದೇವರಿಗೆ ಉಗ್ರ ತರಿಸುತ್ತಾ ಓಡಿಹೋಗುತ್ತಾರೆ. ಹೊಂಡವನ್ನು ತಲುಪಿದ ನಂತರ ಕೊಂತದೇವರ ಸ್ನಾನ ಒಂದು ಕಡೆ ನಡೆದರೆ ಅದೇ ಭಾಗದಲ್ಲಿ ಬೇಸಿಗೆ ಜಾತ್ರೆಯಲ್ಲಿ ಮಾತ್ರ ಖಂಡೇದೇವರ ಪೂಜಾ ಪ್ರಾರಂಭವಿರುತ್ತದೆ. ಖಂಡೇದೇವರು ತನ್ನ ಖಡ್ಗದಿಂದ ಗಂಧವನ್ನು ತನ್ನ ಹಣೆಗೆ, ಹೊಟ್ಟೆಗೆ ಎರಡು ಮೊಣ ಕೈಗಳಿಗೆ ಲೇಪಿಸಿಕೊಳ್ಳುವುದು ನಡೆಯುತ್ತದೆ.

ಕೊಂತದೇವರ ಸ್ನಾನವು ನೆಡೆಯುವಾಗ ಮಳ್ಳಯ್ಯಜ್ಜ ಮತ್ತು ವಗ್ಗಯ್ಯನವರು, ಕುದುರೆಕಾರರು, ಜೀರರು, ಕಂಚಿವೀರರು, ಗೊರವ ಗೊರವೆಯರು ದೇವಸ್ಥಾನದ ಹಿರಿಯ ಭಕ್ತರು, ಎಲ್ಲರೂ ಹೊಂಡದ ಮೆಟ್ಟಿಲುಗಳ ಮೇಲೆ ಸಾಲಾಗಿ ಆಸೀನರಾಗುತ್ತಾರೆ. ಪಾಲ್ಕೆ ಹಾಗೂ ಪಾಲ್ಕೆ ದಾರಿಗಳು ಮೆಟ್ಟಿಲಿನ ಕೆಳಭಾಗದಲ್ಲಿರುವ ಬಂಡೆಗಲ್ಲಿನ ಮೇಲೆ ಗದ್ದುಗೆ ಮಾಡಿ ತಾವೂ ಕುಳಿತುಕೊಳ್ಳುತ್ತಾರೆ. ಕಂಚಾವೀರರಲ್ಲಿ ಅನುಭವವುಳ್ಳ ಕೆಲವರು ಕೊಂತದ ಸ್ನಾನವನ್ನು ಮಾಡಿಸುವರು. ಇಲ್ಲಿ ಒಂದು ವಿಶೇಷತೆಯನ್ನು ನಾವು ಗಮನಿಸಬಹುದು. ಅದೇನೆಂದರೆ ಕೊಂತದ ಸ್ನಾನದ ನಂತರ ಅದರ ಒದ್ದೆ ಬಟ್ಟೆಯನ್ನು ಬಿಡಿಸುವಾಗ ಮದುವಿಯ ಹಂದರದಲ್ಲಿ ಮದುಮಕ್ಕಳು ತಮ್ಮ ದೇಹದ ಗೌಪ್ಯತೆಯನ್ನು ಕಾಪಾಡುವುದಕ್ಕೋಸ್ಕರ ಒದ್ದೆ ಬಟ್ಟೆಯ ಮೇಲೆ ಹೊಸಬಟ್ಟೆಯನ್ನು ಹಾಕಿಕೊಳ್ಳುತ್ತ ಒದ್ದೆ ಬಟ್ಟೆಯನ್ನು ಮೆಲ್ಲಗೆ ಹೇಗೆ ಕಳಚುವರೋ ಹಾಗೆ ಕೆಂತದ ಒದ್ದೆ ಬಟ್ಟೆಯನ್ನು ಕಳಚುತ್ತಾ ಹೊಸ ಬಟ್ಟೆಯನ್ನು ಹೊದಿಸುತ್ತಾರೆ. ಕೊಂತ(ತ್ರಿಶೂಲ)ದ ಮೇಲ್ಮುಖವನ್ನು ತೋರಿಸುತ್ತಾ ಕೆಳಭಾಗವನ್ನು ಮರೆಮಾಡುತ್ತಾ ಬಟ್ಟೆ ಹೊದಿಸುವರು. ಕೊಂತದ ಪೂಜೆ ನೆರವೇರುವ ಸಂದರ್ಭದಲ್ಲಿ ಯಾರೂ ಇಳಿಯುವುದಾಗಲಿ ಹಾಗೂ ದಂಡೆಯ ಮೇಲೆ ಕಾಲು ಇಳಿಬಿಟ್ಟು ಕೂಡುವುದಾಗಲಿ, ಪಾದರಕ್ಷೆಗಳನ್ನು ಹಾಕಿಕೊಂಡು ಬರುವುದಾಗಲೀ ನಿಷಿದ್ಧವಾಗಿದೆ.

೪.೨.೭.೬. ದೋಣಿ ತುಂಬುವುದು : (Filling the Boat)

ಚಂದಾಲಿಂಗೇಶ್ವರನ ವರ್ಷದ ಎರಡೂ ಜಾತ್ರೆಗೆ ಬರುವಂತಹ ಭಕ್ತರಲ್ಲಿ ಕೆಲವರು ದೋಣಿ ತುಂಬುವ ಸಂಪ್ರದಾಯ ಹೊಂದಿದ್ದಾರೆ. ಇದರಂತೆ ಸಿಂಧನೂರು, ಗೋಕಾಕ, ನರಗುಂದ ಹೆಬ್ಬಾಳ, ಹೊಳೆಆಲೂರಿ ನಿಂದ ಬಂದಿರುವ ಕೆಲವರು ಈ ಸಂಪ್ರದಾಯದ ಆಚರಣೆಯನ್ನು ಮಾಡುತ್ತಾರೆ. ಅದರಂತೆ ಇವರು ತಾವು ಇಳಿದುಕೊಂಡ ಸ್ಥಳದಲ್ಲಿಯೇ ಈ ದೋಣಿ ತುಂಬಿಸುವ ಕಾರ್ಯಕ್ರಮ ಪ್ರಾರಂಭಿಸುತ್ತಾರೆ. ಇವರು ಮೊದಲು ದೋಣಿ ತುಂಬಲು ಏನೇನು ಬೇಕೋ ಅದನ್ನೆಲ್ಲ ಸಿದ್ಧತೆ ಮಾಡಿಕೊಂಡಿರುತ್ತಾರೆ. ಉದಾಹರಣೆಗೆ, ಸಿಹಿ ಪದಾರ್ಥಗಳಾದ ಹುಗ್ಗಿ, ಹೋಳಿಗೆ, ಕರಿಗಡುಬು ಇವುಗಳಲ್ಲಿ ಯಾವುದಾದರೂ ಒಂದನ್ನು ತಯಾರಿಸಿ ಅದರ ಜೋಡಿ ಅನ್ನ ಹಾಗೂ ವಿವಿಧ ರೀತಿಯ ಹಣ್ಣು ಹಂಪಲುಗಳು ತಂದು ಇಟ್ಟುಕೊಂಡಿರುತ್ತಾರೆ. ದೋಣಿ ತುಂಬುವ ಮೊದಲಿಗೆ ಗೊರವಪ್ಪ ಮತ್ತು ಗೊರವಮ್ಮರನ್ನು ಬರಮಾಡಿಕೊಂಡು ಕಂಬಳಿಯನ್ನು ಗದ್ದುಗೆ ಮಾಡುತ್ತಾರೆ. ಅದರ ಮೇಲೆ ಚೌಕಾಕಾರವಾಗಿ ಶಶಿಯಕ್ಕಿಯಿಂದ ಶಿಬಾರ ಕಟ್ಟೆಯನ್ನು ಬರೆಯುತ್ತಾರೆ. ನಂತರ ಅದರ ಮಧ್ಯೆ ಮತ್ತೊಂದು ಗೆರೆಯಂತೆ ಶಶಿಯಕ್ಕಿಯಿಂದ ಬರೆಯುತ್ತಾರೆ. ಆಗ ಉದ್ದವಾಗಿ ತ್ರಿಶೂಲದ ಚಿಹ್ನೆಯನ್ನು ಬರೆದು ಕತ್ತರಿಯ ರೂಪದ ಗೆರೆಯಂತೆ ಶಶಿಯಕ್ಕಿಯನ್ನು ಹೊಯ್ಯುವರು. ಆ ತ್ರಿಶೂಲ ಆಕಾರದ ಚಿಹ್ನೆಯ ಕೆಳಭಾಗದ ದಂಡಕ್ಕೆ ಹೊಂದಿಕೊಂಡಂತೆ ಡಮರುಗದ ಚಿತ್ರವನ್ನು ಬರೆಯುವರು. ಆ ತ್ರಿಶೂಲದ ಎಡ ಬಲ ಭಾಗಕ್ಕೆ ಚಂದ್ರ ಸೂರ್ಯನ ಚಿತ್ರ ಬರೆದು ತ್ರಿಶೂಲದ ದಂಡದ ಕೆಳಭಾಗದ ಬಲಗಡೆ 'ಓಂ' ಎಂಬ ಚಿಹ್ನೆಯನ್ನು ಶಶಿಯಕ್ಕಿಯಿಂದ ಬರೆದಿರುತ್ತಾರೆ. ಇದಲ್ಲದೆ ಖಾಲಿಯಿರುವ ಚೌಕಗಳಲ್ಲಿ ವೃತ್ತಾಕಾರವಾಗಿ ಚಿಕ್ಕದಾದ ಚುಕ್ಕಿಗಳನ್ನು ಒಂದೊಂದಾಗಿ ಹಾಕಿರುತ್ತಾರೆ. ತದನಂತರ ಆ ಎಲ್ಲಾ ಶಶಿಯಕ್ಕಿಯಿಂದ ತಯಾರಿಸಿದ ಚಿಹ್ನೆಗಳಿಗೆ ಭಂಡಾರ, ಕುಂಕಮವನ್ನು ನಡುವೆ ಗೆರೆಯಂತೆ ಗೋಚರಿಸುವ ಭಾಗಕ್ಕೆ ಸಿಂಪಡಿಸುವರು. ಆ ತ್ರಿಶೂಲದ ಮೇಲ್ಮುಖಕ್ಕೆ ಹೂವಿನ ಮಾಲೆಯನ್ನು ಹೊದಿಸುವರು. ಆ ಶಿಬಾರಕಟ್ಟೆಯ ಚಿಹ್ನೆಯ ಎಲ್ಲಾ ಭಾಗಕ್ಕೂ ಒಂದೊಂದು ಹೂವಿಡುವರು. ತದನಂತರ ಹೂವಿನ ದಳಗಳನ್ನು ಕಿತ್ತು ಸ್ವಲ್ಪವಾಗಿ ಉದುರಿಸುವರು. ಸುಮಾರು ಎರಡರಿಂದ ಐದು ದೋಣಿಗಳನ್ನು ಗದ್ದುಗೆಯ ಮೇಲಿರಿಸುವರು. ಅಕಸ್ಮಾತ್ ಆ ಗೊರವರ ಹತ್ತಿರ ಗಂಟೆ ಶಂಖಗಳಿದ್ದರೆ ಅವುಗಳನ್ನು ಅಲ್ಲಿಟ್ಟು ಅವೆಲ್ಲ ಪರಿಕರಗಳಿಗೆ ವಿಭೂತಿ, ಕುಂಕುಮವನ್ನು ಲೇಪಿಸುವರು. ಇದಲ್ಲದೆ ಆ ಶಿಬಾರಕಟ್ಟೆಯ ಗದ್ದುಗೆಯ ನಾಲ್ಕು ಭಾಗಕ್ಕೂ ವಿಭೂತಿ, ಕುಂಕಮವನ್ನು ಲೇಪಿಸುವರು. ಇದೇ ಸಂದರ್ಭದಲ್ಲಿ ಚೌರಿಗೊರವಿಯರಿದ್ದರೆ ಅವರು ತಮ್ಮ ಚೌರಿಯ ತಳಭಾಗದ ದಂಡಕ್ಕೆ ವಿಭೂತಿ, ಬಂಢಾರ ಲೇಪಿಸಿಕೊಳ್ಳುವರು.

ಗದ್ದುಗೆ ಮೇಲಿಟ್ಟಿರುವ ಎಲ್ಲಾ ದೋಣಿಗಳ ಮುಂದೆ ಎರಡೆರಡು ಬಾಳೆಹಣ್ಣು, ಒಂದೊಂದು ನಿಂಬೆಹಣ್ಣು, ಎಲೆ, ಅಡಿಕೆ ಹಾಗೂ ತ್ರಿಶೂಲದ ಮೇಲ್ಮುಖಕ್ಕೂ, ಡಮರುಗಕ್ಕೆ, ಸೂರ್ಯ-

ಚಂದ್ರರಿಗೆ ಎರಡೆರಡು ಬಾಳೆಹಣ್ಣುಗಳನ್ನು, ಲಿಂಬು ಹಣ್ಣುಗಳು ಹೆಚ್ಚಿಗಿದ್ದರೆ ಅವುಗಳನ್ನು ಎಲ್ಲಾ ಭಾಗಕ್ಕೂ ಇಟ್ಟಿರುತ್ತಾರೆ. ಇದಲ್ಲದೆ ಹಣ್ಣುಗಳನ್ನು ಅರ್ಪಿಸಿದ ನಂತರ ಕಂಕಣಗಳನ್ನು ತಯಾರಿಸಿ ಬಂದಿರುವಂತಹ ಗೊರವಪ್ಪ ಗೊರವಿಯವರಿಗೆ ಕೊಡುವರು. ಗೊರವಿಯವರು ತಮ್ಮ ಚೌರದ ದಂಡದ ಭಾಗಕ್ಕೆ ಕಟ್ಟಿಕೊಂಡರೆ, ಅದೇ ಗೊರವಪ್ಪರವರು ತಮ್ಮ ತ್ರಿಶೂಲ ದಂಡಕ್ಕೆ ಕಟ್ಟುವರು. ಬೆಳಗುವ ಆರತಿಗೂ ಕಟ್ಟುವರು. ಇದಾದ ನಂತರ ಎಲ್ಲಾ ದೋಣಿಯ ಮುಂದೆ ಆ ಭಕ್ತರು ಸಾಧ್ಯವಾದ್ದು ದಕ್ಷಿಣವನ್ನು ಇಡುವರು. ಕಂಕಣಗಳು ಇನ್ನೂ ಹೆಚ್ಚಿಗೆ ಉಳಿದಿದ್ದರೆ ಎಲ್ಲಾ ಗೊರವ ಗೊರವಿಯರು ಮತ್ತು ದೋಣಿ ತುಂಬುವ ಪೂಜಾದಲ್ಲಿ ತೊಡಗಿರುವ ವ್ಯಕ್ತಿಯು ಹಾಗೂ ಇತರರು ತಮ್ಮ ಕೈಗೆ ಕಟ್ಟಿಕೊಳ್ಳುವರು. ಇದಾದ ನಂತರ ಎಲ್ಲಾ ದೋಣಿಗಳಿಗೊಂದರಂತೆ ಐದೈದು ಕರಿಗಡುಬು ಅಥವಾ ಹೋಳಿಗೆ ಇದ್ದರೆ ಹೋಳಿಗೆ, ಅನ್ನ, ಪಲ್ಯ, ಕರಿದ ಮೆಣಸಿನಕಾಯಿ ಒಟ್ಟು ಎಲ್ಲವನ್ನೂ ಕೈಯಿಂದ ನೀಡುವಂತ ಪದಾರ್ಥಗಳು ಇದ್ದರೆ ಎರಡೂ ಕೈಗಳಿಂದ ಏಳುಕೋಟಿ.... ಏಳುಕೋಟಿ.... ಏಳುಕೋಟಿಗೋ...ಎನ್ನುತ್ತಾ ತುಂಬುವರು.

ದೋಣಿ ತುಂಬಿಸುವ ಕುಟುಂಬದವರೆಲ್ಲರೂ, ಗೊರವರು, ಗೊರವಿಯರು ಎದ್ದುನಿಂತು ಎಲ್ಲರೂ ಏಳುಕೋಟಿ... ಏಳುಕೋಟಿ... ಏಳುಕೋಟಿಗೋ ಎನ್ನುತ್ತಿದ್ದರೆ, ಗೊರವಪ್ಪ ಗಂಟೆ ಶಂಖನಾದ ಗೈಯುವರು. ಗೊರವಿಯವರು ಏಳುಕೋಟಿ... ಏಳುಕೋಟಿ... ಏಳುಕೋಟಿಗೋ... ಎನ್ನುತ್ತಾ ಚೌರಿಬೀಸುವರು. ಪೂಜೆಮಾಡುವಂತಹ ವ್ಯಕ್ತಿಯು ಎಲ್ಲಾ ದೋಣಿಗಳಿಗೆ ಉದಿನಕಡ್ಡಿಗಳನ್ನು ಬೆಳಗಿ ಕಾಯಿ ಒಡೆದು ದೋಣಿ ಮುಂದಿರಿಸಿ, ನಮಸ್ಕರಿಸಿ ಕರ್ಪೂರದ ಆರತಿಯನ್ನು ಬೆಳಗುವನು. ಹಾಗೆಯೇ ಮುಂದುವರೆದು ವೀಳ್ಯದೆಲೆಯಿಂದ ತುಂಬಿದ ಆರತಿಯನ್ನು ಐದು ಜನ ಬೆಳಗಿ ಗೊರಪ್ಪ ಗೊರವಿಯರೊಂದಿಗೆ ಆರತಿ ಹಿಡಿದುಕೊಂಡು ಏಳುಕೋಟಿ... ಏಳುಕೋಟಿ... ಏಳುಕೋಟಿಗೋ ಎಂದು ಐದು ಸುತ್ತು ಶಿಬಾರದ ಗದ್ದುಗೆಯನ್ನು ಸುತ್ತುವರೆಯುವರು. ಈ ದೋಣಿ ತುಂಬಿಸುವರೊಂದಿಗೆ ಬಂದಂತವರು ಯಾರು ಬೇಕಾದರೂ ಈ ಗದ್ದುಗೆಯ ಮುಂದೆ ಕಾಯಿ ಒಡೆಸುವವರು ಇದ್ದರೆ ಒಡೆಸಿ ನಮಸ್ಕರಿಸುವರು.

ದೋಣಿ, ಡೋಣಿ, ಕೊಟಮಿ, ಕೋಟಂಬಾ ಇತ್ಯಾದಿಯಾಗಿ ಇದನ್ನು ಕರೆಯುತ್ತಾರೆ. ಇದರ ಇತರ ವಿವರಗಳು ಈಗಾಗುತ ಬಂದಿವೆ. ಇನ್ನುಳಿದ ಕೆಲವೊಂದು ಮಾಹಿತಿಯನ್ನು ಮಾತ್ರ ಇಲ್ಲಿ ಮಾಡಿಕೊಡಲಾಗಿದೆ. ಗೊರವ ಗೊರವಿಯವರಲ್ಲಿ ದೇವರ ಸಂಕೇತವಾಗಿ ಈ ದೋಣಿ ಇರಲೇಬೇಕು ದೋಣಿ ಇದ್ದರಾಯಿತು. ಅದು ಮೈಲಾರಲಿಂಗ ದೇವರ ಸಂಪ್ರದಾಯದ ನಿಶ್ಚಿತ ಸೂಚನೆಯೆಂದು ತಿಳಿಯಬೇಕು. ಆದ್ದರಿಂದ ಗೊರವ ಗೊರವಿಯವರಲ್ಲಿ ಇತರ ಲಾಂಛನಗಳು ಇಲ್ಲದಿದ್ದರೂ ದೋಣಿಯೊಂದು ಇದ್ದರೆ ಸಾಕು. ಅವರಿಗೆ ಭಕ್ತರಿಂದ ಗೌರವ ಸಲ್ಲುತ್ತದೆ. "ಎಲ್ಲಮ್ಮನ ಜೋಗಿಗಳಿಗೆ 'ಪಡ್ಡಲಿಗೆ' ದಾಸರಿಗೆ 'ಗೋಪಾಳಬುಟ್ಟಿ' ರೇವಣಸಿದ್ಧನ ಭಕ್ತರಿಗೆ ಗುಂಡ ಬಟ್ಟಲು ಇರುವಂತೆ ಗೊರವರಿಗೆ ಇದು ಇದ್ದೇ ಇರುತ್ತದೆ."[೬] ಹಂತವುಗಳಿಂದ ಇತರ ಸಂಪ್ರದಾಯಗಳಿಂದ ಅವರನ್ನು ಪ್ರತ್ಯೇಕಿಸುತ್ತವೆ ಪ್ರಮುಖ ಸಾಧನ.

ಕೆಲವೊಮ್ಮೆ ಭಕ್ತರಿಗೆ ಗೊರವ ಗೊರವಿಯವರು ಲಭ್ಯವಾಗುವುದಿಲ್ಲ. ಅಂತಹ ಅನಿವಾರ್ಯ ಸ್ಥಿತಿಯಲ್ಲಿ ಭಕ್ತರು 'ಹಸಿರು' ದೋಣಿ ತುಂಬುತ್ತಾರೆ. ಎಂದರೆ ಬಾಳೆಯ ಎಲೆಯಲ್ಲಿ ಕ್ರಮದಂತೆ ಎಲ್ಲವನ್ನೂ ತುಂಬಿ ಅರುತಿಮಾಡಿ, ಕಾಯಿಒಡೆದು, ಏಳು ಕೋಟಿ... ಏಳು ಕೋಟಿ... ಚಾಂಗ ಬಲೋ ಎಂದು ಉಗ್ಗಡಿಸಿ ದೋಣಿಗೆ ನಮಸ್ಕರಿಸುತ್ತಾರೆ. ದೋಣಿಯನ್ನು ಯಾವತ್ತು ಹೊತ್ತು ಅಡ್ಡಾಡುವುದು ಗೂರವರ ವಿಧಿ. ಅದನ್ನು ಎಂದೂ 'ಡಬ್ಬ' ಬಿಡುವುದಿಲ್ಲ. ಯಾವತ್ತೂ ಪೂಜಿಸುತ್ತಿರಬೇಕು. ಅದರಲ್ಲಿ ನೀಡಿದ್ದನ್ನೆಲ್ಲ ಗೊರವರು ಊಟ ಮಾಡಲೇಬೇಕು.

೪.೨.೭.೭. ಚಂದಾಲಿಂಗ ಹಾಗೂ ಗಂಗೆಮಾಳಮ್ಮರ ಮದುವೆ ಕಾರ್ಯಕ್ರಮ :
(Chandaling and Gange Malamma's Wedding Ceremony)

ಚಂದಾಲಿಂಗನ ಗುಡಿಯ ಮುಂಭಾಗದಲ್ಲಿ ನಡೆಯುತ್ತದೆ. ಈ ಕಾರ್ಯಕ್ರಮವು ಮೊದಲಿಗೆ ಮರಳನ್ನು ತಂದು ಗದ್ದುಗೆಯ ತರಹದ ಕಟ್ಟೆಯನ್ನು ಮಾಡುತ್ತಾರೆ. ಈ ಮರಳಿನ ಗದ್ದುಗೆಯ ಮೇಲೆ ಕಂಬಳಿಯನ್ನು ಹಾಸುತ್ತಾರೆ. ಈ ಕಂಬಳಿಯ ಗದ್ದುಗೆಯ ಮೇಲೆ ಶಶಿಯಕ್ಕಿಯನ್ನು ಹೊಯ್ಯುತ್ತಾರೆ. ಈ ಶಶಿಯಕ್ಕಿಯ ಗದ್ದುಗೆಯ ನಾಲ್ಕು ಭಾಗಗಳಿಗೆ ಆರತಿ ಮಾಡುವ ಕಳಸವನ್ನು ಇಟ್ಟು ವೀಳ್ಯದೆಲೆಯಿಂದ ಕಳಸ ತುಂಬುತ್ತಾರೆ. ಇಲ್ಲಿ ಹೆಣ್ಣಿನವರು ಒಂದು ಭಾಗವಾಗಿ, ಗಂಡಿನವರು ಒಂದು ಭಾಗವಾಗಿ ಒಂದೊಂದು ಕಡೆಗೆ ಕುಳಿತುಕೊಂಡಿರುತ್ತಾರೆ. ಈ ಗದ್ದುಗೆಯ ನಾಲ್ಕು ಭಾಗಕ್ಕೆ ಜನ ಕುಳಿತುಕೊಂಡು ಸುರಗಿಯನ್ನು ಸುತ್ತುತ್ತಾರೆ. ಅಕ್ಷತೆಗಳನ್ನು ಹಾಗೂ ಕಂಕಣಗಳನ್ನು ತಯಾರಿಸಿಕೊಂಡಿರುತ್ತಾರೆ. ಈ ಸುರಗಿ ಸುತ್ತುವ ಸಂದರ್ಭದಲ್ಲಿ ಅಲ್ಲಿ ನೆರವೇರಿದ ಮಹಿಳೆಯರು ಮದುವೆ ಸಂಪ್ರದಾಯದ ಹಾಡುಗಳನ್ನು ಹಾಡುತ್ತಾರೆ. ಕೆಲವು ಸಮಯದ ನಂತರ ಪೂಜಾರಿಗಳು ಮುಖ್ಯದೇವರುಗಳನ್ನು ಹಾಗೂ ಇತರ ದೇವರುಗಳನ್ನು ಪೂಜಿಸಿಕೊಂಡು ಬರುತ್ತಾನೆ. ಎರಡು ಬೆತ್ತದಂತೆ ಇರುವ ಕೋಲುಗಳಿಗೆ ಹೂವಿನ ಮಾಲೆಯನ್ನು ಧರಿಸಿಕೊಂಡು ಚಂದಾಲಿಂಗನ ವಾಹನವಾದ ಕುದುರೆಯನ್ನು ಹಾಗೂ ಖಡ್ಗವನ್ನು ಶಶಿಯಕ್ಕಿ ಕಟ್ಟೆಯ ಹತ್ತಿರ ತರುತ್ತಾರೆ.

ಚಂದಾಲಿಂಗ ಹಾಗೂ ಗಂಗೆಮಾಳಮ್ಮನವರ ಪ್ರತೀಕವಾಗಿ ಶಶಿಯಕ್ಕಿ ಕಟ್ಟೆಯ ಮೇಲೆ ಎಡಭಾಗಕ್ಕೆ ಹಿತ್ತಾಳೆಯ ಲೋಹದಿಂದ ಮಾಡಿದ ಕುದುರೆಯನ್ನು ಹಾಗೂ ಸುಣ್ಣದಿಂದ ಸಾರಿಸಿದ ಹೊಸ ಬಿಂದಿಗೆ ಮತ್ತು ಬೆತ್ತದ ಕೋಲುಗಳನ್ನು ಹಿಡಿದುಕೊಂಡು ಒಬ್ಬರೊಬ್ಬರು ಕುಳಿತುಕೊಳ್ಳುತ್ತಾರೆ, ಕುಳಿತಿರುವಂತವರು ಲಿಂಗದ ವಸ್ತ್ರವನ್ನು ತಲೆಯ ಮೇಲೆ ಹೊದಿಸಿಕೊಂಡಿರುತ್ತಾರೆ. ಆ ಶಶಿಯಕ್ಕಿ ಕಟ್ಟೆಯ ಬಲಭಾಗಕ್ಕೆ ಚಂದಾಲಿಂಗನ ಪ್ರತೀಕವಾಗಿ ಆತನ ಖಡ್ಗ ಹಾಗೂ ಹಿತ್ತಾಳೆಯ ಲೋಹದಿಂದ ಮಾಡಿದ ಕುದುರೆಯ ಮೂರ್ತಿಯನ್ನು ಇಡಲಾಗಿರುತ್ತದೆ. ಖಡ್ಗಕ್ಕೆ ಧೋತ್ರಾವನ್ನು ತೊಡಿಸಿ ಪೂಜೆಯನ್ನು ಮಾಡುತ್ತಾರೆ. ಖಡ್ಗದ ತಲೆಯ ಭಾಗಕ್ಕೆ ಪೇಟಾರೂಪದಲ್ಲಿ ಧೋತ್ರವನ್ನು ತೊಡಿಸಿ ಪೂಜೆಯನ್ನು ಮಾಡುತ್ತಾರೆ. ಆ ಖಡ್ಗದ ಕೊರಳಿಗೆ ಹೂವಿನ ಮಾಲೆಯನ್ನು ಹಾಕಿ

ಕೆಳಭಾಗಕ್ಕೆ ಬಾಸಿಂಗವನ್ನು ಕಟ್ಟುತ್ತಾರೆ. ಅಲ್ಲಿ ನೆರವೇರಿದವರು ಕಂಕಣಗಳನ್ನು ಕಟ್ಟಿ ಕೊಳ್ಳುತ್ತಾರೆ. ಮಳ್ಳಯ್ಯನವರಿಗೆ ಎರಡೆರಡು ಕಂಕಣಕೊಡುವ ಪದ್ಧತಿಯಿದೆ. ಈ ಕಂಕಣಗಳನ್ನು ತೆಗೆದುಕೊಳ್ಳಲು ಭಕ್ತರು ನಾಮುಂದೆ ತಾಮುಂದೆ ಎಂದು ಪ್ರಯತ್ನಿಸುತ್ತಾರೆ. ಕಂಕಣಗಳನ್ನು ಪಡೆದುಕೊಂಡವರು ಅವುಗಳನ್ನು ತಮ್ಮ ಕೈಗಳಿಗೆ ಕಟ್ಟಿಕೊಳ್ಳುತ್ತಾರೆ. ಹಾಗೂ ಬಣ್ಣವನ್ನು ಎರಚುವಂತ ಪದ್ಧತಿಯು ಇದೆ. ಅಕ್ಷತೆಯ ಕಾಳುಗಳನ್ನು ಹಾಕುವಂತ ಪೂರ್ವದಲ್ಲಿ ಚಂದಾಲಿಂಗ ಹಾಗೂ ಗಂಗೆಮಾಳಮ್ಮ ಇವರಿಗೆ ಪುರುಷರು ಮಾತ್ರ ಆರತಿಯನ್ನು ಮಾಡುತ್ತಾರೆ. ತದನಂತರ ಅಕ್ಷತೆಯಕಾಳನ್ನು ಹಾಕುತ್ತಾರೆ. ಅಲ್ಲಿರುವಂತ ಇತರ ದೇವರುಗಳಿಗೆ ಚಂದಾಲಿಂಗ ಹಾಗೂ ಗಂಗೆಮಾಳಮ್ಮನವರ ದರ್ಶನ ನಡೆಯುತ್ತದೆ. ಕೊನೆಗೆ ಮದುವೆಯಾದ ನಂತರ ಗದ್ದಿಗೆ ಮಾಡಿದ ಉಸುಕನ್ನು ಭಕ್ತರು ತಗೆದುಕೊಳ್ಳುವುದಕ್ಕೆ ಮುಂದಾಗುತ್ತಾರೆ. ಆ ಮರಳನ್ನು ತಗೆದುಕೊಂಡು ತಮ್ಮ ಹೊಲದಲ್ಲಿ ಚೆರೆಸುತ್ತಾರೆ.

೪.೨.೭.೮. ಲೆಕ್ಕಿ ಬರ್ಲಿನ ಸೇವೆ : (Service of Lekki Burley)

ಮದುವೆ ನೆರವೇರಿದ ನಂತರ ಗಂಗೆಮಾಳಮ್ಮನ ಗುಡಿಯ ಹತ್ತಿರವಿರುವಂತ ದೇವರುಗಳಿಗೆ ಪೂಜಿಸುತ್ತಾರೆ. ಅಲ್ಲಿ ಗಂಡಿನ ಕಡೆಯವರು ಅಲ್ಲಿರುವ ಕಟ್ಟೆಯ ಮೇಲೆ ಸಾಲಾಗಿ ಕುಳಿತುಕೊಂಡಿರುತ್ತಾರೆ. ಸಾಧ್ಯವಾದಷ್ಟು ಹೆಣ್ಣಿನ ಕಡೆಯವರು ವರದಕ್ಷಣೆಯ ರೂಪವಾಗಿ ಹಣ ಹಂಚುತ್ತಾರೆ. ಇನ್ನೊಂದು ಪಕ್ಕಕ್ಕೆ ಕುದುರೆಕಾರರು ತಮ್ಮ ಚಾವಟಿಯಿಂದ ಕಡಲ್... ಕಡಲ್... ಅಂತ ಶಬ್ದ ಬರುವಂತೆ ಹೊಡೆದುಕೊಳ್ಳುತ್ತಾ ಒಂದು ಸುತ್ತನ್ನು ತೆಂಗಿನಮರ ಸುತ್ತುತ್ತಾರೆ. ನಂತರ ಹೆಣ್ಣಿನವರು ಲೆಕ್ಕಿಬರ್ಲಿನೊಂದಿಗೆ ಗಂಗೆಮಾಳಮ್ಮನ ಗುಡಿಯ ಎದುರಿಗೆ ಎರಡು ಸಾಲುಗಳಾಗಿ ನಿಂತುಕೊಂಡಿರುತ್ತಾರೆ. ಈ ಸಾಲುಗಳ ಮಧ್ಯ ಕುದುರೆಕಾರರು ಹೋಗಬೇಕಾಗುತ್ತದೆ. ಇವರು ಹೋಗುವಂತ ಸಂದರ್ಭದಲ್ಲಿ ಹೆಣ್ಣಿನವರು ಲೆಕ್ಕಿಬರ್ಲಿನಿಂದ ಹೊಡೆಯುತ್ತಾರೆ. ಇದರಿಂದ ಅವರು ಹೊಡೆಸಿಕೊಳ್ಳುತ್ತಾರೆ. ಗಂಗೆಮಾಳಮ್ಮನ ಗುಡಿಯನ್ನು ಸೇರಿಕೊಳ್ಳುತ್ತಾರೆ.

೪.೨.೭.೯. ಭಂಡಾರದ ಪವಾಡ : (The Miracle of Bandhar)

ಚಂದಾಲಿಂಗ ಹಾಗೂ ಗಂಗೆಮಾಳಮ್ಮರ ಮದುವೆ ಕಾರ್ಯಕ್ರಮದ ನಂತರ ಸಾಯಂಕಾಲ ಐದು ಘಂಟೆಯಿಂದ ಆರು ಗಂಟೆಯವರೆಗೂ ಹೆಗ್ಗಡೆಪ್ರಧಾನಿ ಗುಡಿಯಲ್ಲಿ ಮಳ್ಳಯ್ಯ ಹಾಗೂ ವಗ್ಗಪ್ಪನವರು ತಮ್ಮ ವೇಷಭೂಷಣಗಳನ್ನು ಧರಿಸಿಕೊಂಡು ಭಂಡಾರದ ಪವಾಡ ನೆಡೆಸಲು ಪ್ರಾರಂಭಿಸುತ್ತಾರೆ. ಈ ಭಂಡಾರದ ಪವಾಡ ನಡೆಯುವಂತಹ ಸಂದರ್ಭದಲ್ಲಿ ಡೊಳ್ಳಿನವರು ಡೊಳ್ಳಿನ ದವನ್ನು ಜೋರಾಗಿ ಮಾಡುವುದರ ಮೂಲಕ ಮರಳಯ್ಯ ಹಾಗೂ ವಗ್ಗಪ್ಪನವರಿಗೆ ಉಗ್ರವನ್ನು ತುಂಬುತ್ತಾರೆ. ಇದರಿಂದ ಅವರು ಭಂಡಾರವನ್ನು ನೀರಿನಲ್ಲಿ ಕಲಸಿಕೊಂಡು ಮುಖಕ್ಕೆ ಲೇಪಿಸಿಕೊಳ್ಳುತ್ತಾರೆ. ಈ ಭಂಡಾರದ ಕಾರ್ಯಕ್ರಮವನ್ನು ನೋಡಲು ಜನರು ನೂಕು ನುಗ್ಗಲಿನಿಂದ ಕೂಡಿಕೊಂಡಿರುತ್ತಾರೆ. ಇದು ಸುಮಾರು ಅರ್ಧಗಂಟೆಗಿಂತ ಹೆಚ್ಚು ಅವಧಿ ನಡೆಯುತ್ತದೆ.

ಭಂಡಾರವನ್ನು ಸಣ್ಣದಾದ ಪಾತ್ರೆಯಲ್ಲಿ ನೀರಿನಲ್ಲಿ ಬೆರೆಸುತ್ತಾರೆ. ಆದರೆ ಈ ಭಂಡಾರದ ಪವಾಡ ನಡೆಸಲು ಮಳ್ಳಯ್ಯನವರು ತಮ್ಮ ಕೈಗೆ ಬರುವಷ್ಟು ಭಂಡಾರವನ್ನು ತೆಗೆದುಕೊಂಡು ಎಡ ಅಂಗೈಯಲ್ಲಿ ಹಾಕಿಕೊಳ್ಳುತ್ತಾರೆ. ಅದನ್ನು ದೋಣಿಯಂತೆ ದುಂಡಾಗಿ ಮಾಡಿರುತ್ತಾರೆ. ಇದನ್ನು ಕೆರೆಯ ರೂಪಕ್ಕೆ ಹೋಲಿಕೆ ಕೊಡುತ್ತಾರೆ. ತಾಮ್ರ ತಂಬಿಗೆಯಲ್ಲಿರುವ ನೀರನ್ನು ಅದಕ್ಕೆ ಹಾಕುತ್ತಾರೆ. ಇದು ತುಂಬಿ ಒಡೆದು ಯಾವ ಭಾಗಕ್ಕೆ ಹರಿಯುತ್ತದೆಯೋ ಆ ಭಾಗಕ್ಕೆ ಮಳೆ ಪ್ರಮಾಣ ಜಾಸ್ತಿಯಾಗುತ್ತದೆ ಎಂದು ಭವಿಷ್ಯವಾಣಿಯನ್ನು ಸೂಚಿಸುತ್ತದೆ. ಈ ಕಾರ್ಯವು ಆರತಿ ತಟ್ಟೆಯ ದೀಪದ ಬೆಳಕಿನಲ್ಲಿ ನಡೆಯುತ್ತದೆ. ಈ ಭಂಡಾರ ಪವಾಡಕ್ಕೆ ಕುಳಿತುಕೊಂಡಿರುವ ಮಳ್ಳಯ್ಯ ಹಾಗೂ ವಗ್ಗಪ್ಪನವರು ಆ ಮೂವರು ನೀರಿನಲ್ಲಿ ಬೆರೆಸಿದ ಅರಿಷಿಣವನ್ನು ತಮ್ಮ ತಮ್ಮ ಮುಖಕ್ಕೆ ಲೇಪಿಸಿಕೊಳ್ಳುತ್ತಾರೆ. ಈ ಭಂಡಾರದ ಪವಾಡವನ್ನು ಗುರುತಿಸುವ ರೀತಿ ಹೇಗೆ ಎಂದರೆ ಮಳ್ಳಯ್ಯನವರು ಕಲಸುವಂತ ಭಂಡಾರವು ತನ್ನಷ್ಟಕ್ಕೆ ತಾನೆ ಬಹಳಷ್ಟು ನೀರಾಗಿ ಕೈಯಲ್ಲಿ ಹರಿದಾಡಿದರೆ ಅಧಿಕವಾಗಿ ಮಳೆಗಾಲವು ಆಗುತ್ತದೆ. ಆದರೆ ಅದು ಗಟ್ಟಿಯಾಯಿತೆಂದರೆ ಅಲ್ಪಸಲ್ಪ ಮಳೆಗಾಲ ಆಗುವ ಸಂಭವ ಇದೆ ಎಂಬುದರ ಭವಿಷ್ಯ ತಿಳಿಯುತ್ತದೆ. ಈ ಭಂಡಾರದ ಪವಾಡ ಮಾಡುತ್ತಾ ಮಾಡುತ್ತಾನೇ ಇವರು ಮೈಯಲ್ಲಿ ದೇವರನ್ನು ಆಹ್ವಾನ ಮಾಡಿಕೊಂಡು ತಕ್ಷಣ ರಭಸವಾಗಿ ಈ ಮೂವರು ಚಂದಾಲಿಂಗನ ಗುಡಿಯ ಹತ್ತಿರ ಹೋಗುತ್ತಾರೆ. ಅಲ್ಲಿ ಆತನಿಗೆ ಎದುರು ನಿಂತು ಶಂಖನಾದವನ್ನು ಗೈಯುತ್ತಾರೆ. ಇಲ್ಲಿ ಕೆಲವು ಕ್ಷಣಗಳ ಕಾಲ ನಿಂತು ತದನಂತರ ನುಡಿಹೇಳುವ ಸ್ಥಳಕ್ಕೆ ಹೋಗುತ್ತಾರೆ.

೪.೨.೭.೧೦. ನುಡಿ ಹೇಳುವುದು : (Saying the Word)

ಸುಗ್ಗಿ ಜಾತ್ರೆಯಲ್ಲಿ ಚಂದಾಲಿಂಗೇಶ್ವರ ದೇವಾಸ್ಥಾನದಿಂದ ಸುಮಾರು ಎರಡು ಮೂರು ಕಿ.ಮೀ.ನಷ್ಟು ದೂರವಿರುವ ಅಂದರೆ ಬೀಳಗಿ ಎಂಬ ಗ್ರಾಮದ ಸಮೀಪವಿರುವ ಮಂಟಪದ ಬಸವಣ್ಣನ ಹತ್ತಿರ ಹೋಗುತ್ತಾರೆ. ಜನರು ತಂಡೋಪತಂಡವಾಗಿ ನೋಡಲು ಹೋಗುತ್ತಾರೆ. ಚಂದಾಲಿಂಗನ ಪಾಲಿಕೆ ಹಾಗೂ ಮಳ್ಳಯ್ಯನವರು ಅತೀವೇಗವಾಗಿ ಹೋಗುತ್ತಾರೆ. ರಾತ್ರಿ ೮:೦೦ ಗಂಟೆಗೆ ನಡೆಯುವ ಈ ಕಾರ್ಯಕ್ರಮವು ಕತ್ತಲು ವಾತಾವರಣವಿರುವದರಿಂದ ಪಂಜಿನವರು ತಮ್ಮ ಪಂಜಿನ ಸೇವೆಯನ್ನು ಮಾಡುತ್ತಾರೆ. ಬೀಳಗಿ ಸಮೀಪವಾಗುವುದರಿಂದ ಅಲ್ಲಿಯ ಜನರು ಸಹ ಈ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಾರೆ. ನುಡಿ ಹೇಳುವಂತಹ ಸಂದರ್ಭದಲ್ಲಿ ಮಳ್ಳಯ್ಯನು ಮಂಟಪದ ಬಸವಣ್ಣನಿಗೆ ಎದುರು ನಿಂತು ನೋಡುತ್ತಾ, ತನ್ನ ಮೈಯಲ್ಲಿ ಚಂದಾಲಿಂಗನನ್ನು ಆವಾಹನ ಮಾಡಿಕೊಳ್ಳುತ್ತಾನೆ. ಸುಮಾರು ಅರ್ಧ ಗಂಟೆ ಕಾಲ ಹಿಂದಕ್ಕೆ ಮುಂದಕ್ಕೆ ಹೋಗುವುದು ಬರುವುದು ಮಾಡುತ್ತಾನೆ. ಅದು ಬಸವಣ್ಣನಿಂದ ಹೇಳಿಕೆಯನ್ನು ನುಡಿಯಲು ಸೂಚನೆಯು ಸಿಗುವವರೆಗೂ ಇದೇ ರೀತಿ ಓಡಾಡುತ್ತಿರುತ್ತಾನೆ. ಕಂಚಾವೀರರು, ಮಳ್ಳಯ್ಯನ ಹತ್ತಿರ ಬಂದು ಆತನ ಎರಡು ಕಿವಿಗಳ ಬದಿಗೆ ಒಬ್ಬೊಬ್ಬರು ಬಂದು ವಡಪು ಹೇಳುತ್ತಾ ಉಗ್ರಗೊಳಿಸುತ್ತಾರೆ.

ಅವರು ಏಳುಕೋಟಿ... ಏಳುಕೋಟಿ.... ಏಳುಕೋಟಿ... ಎಂದು ಜೋರಾಗಿ ನುಡಿಯುತ್ತಾರೆ. ಬಸವಣ್ಣನಿಂದ ಸೂಚನೆ ದೊರೆತ ನಂತರ ಬಸವಣ್ಣನಿಗೆ ಜೋರಾಗಿ ಶಂಖನಾದವನ್ನು ಗೈಯುತ್ತಾನೆ. ಇತ್ತ ಕಡೆಗೆ ಬಸವಣ್ಣನಿಗೆ ಪೂಜಾರಿಗಳು ಪೂಜೆಯನ್ನು ಪ್ರಾರಂಭಿಸಿರುತ್ತಾರೆ. ಕೊನೆಗೆ ಹೇಳಿಕೆ ಹೇಳುವಂತ ಸಮಯದಲ್ಲಿ ಡೊಳ್ಳಿನ ಶಬ್ದ ನಿಶಬ್ಧಗೊಳಿಸುತ್ತಾರೆ. ಆಗ ಮುಳ್ಳು ಆವಿಗೆಯ ಮೇಲೆ ನಿಂತು ಮಳ್ಳಯ್ಯ ಹೂಯ್ಯತ್.... ಎಂದು ಧ್ವನಿಮಾಡುತ್ತಾನೆ. ಇದಕ್ಕೆ ಪ್ರತಿಯಾಗಿ ಭಕ್ತರು ಹೂಯ್ಯತ್... ಎಂದು ಧ್ವನಿಮಾಡಿ ನಿಶಬ್ಧರಾಗುತ್ತಾರೆ, ತಕ್ಷಣ ಮಳ್ಳಯ್ಯ "ಹಿಂಗಾರಿ ಮುಂಗಾರಿ ತಕಟ ಮಸನ" ಎಂದು ನುಡಿಯುತ್ತಾನೆ. ಅವಾಗ ಭಕ್ತರು ಎಲ್ಲರು ಏಳುಕೋಟಿ.....ಏಳುಕೋಟಿ... ಏಳುಕೋಟಿ.. ಎಂದು ಘೋಷಣೆಮಾಡುತ್ತಾರೆ. ಇದೇ ಸ್ಥಳದಲ್ಲಿ ನಡೆಯಲು ಕಾರಣ ಹಿಂದೆ ಹುಲ್ಲಪ್ಪನು ಕಾರಿ ಮುಳ್ಳನ್ನು ತುಳಿದಿರುವದರಿಂದ ಅದೇ ಸ್ಥಳದಲ್ಲಿ ಈ ಮುಳ್ಳು ಅವಿಗೆಯ ಮೇಲೆ ನಿಂತು ನುಡಿಹೇಳುತ್ತಾನೆ. ತದನಂತರ ಮಡಿಕೆಯಲ್ಲಿ (ಬಿಂದಿಗೆ) ಶೇಖರಿಸಿದ ಪಡಿಯಕ್ಕಿಯನ್ನು ದೇವಸ್ಥಾನಕ್ಕೆ ಸೇವೆಸಲ್ಲಿಸಿದ ಬಾಬುದಾರರಾದ ಕಂಚಿಯವರು, ಕುದುರೆಕಾರರು, ಪಂಜಿನವರು, ಜೀರ್ರರು, ವಾಲಿಕಾರರಿಗೆ ಒಂದಿಷ್ಟು ಕೋಡುತ್ತಾರೆ. ಈ ಪಡಿಯಕ್ಕಿಯನ್ನು ಹಂಚುತ್ತಿರುವವನು ಸುಮಾರು ಐದು ಅಡಿ ಎತ್ತರದ ಕಂಬದ ಮೇಲೆ ನಿಂತು ಹಂಚುತ್ತಾನೆ. ಇಲ್ಲಿಂದ ಮರಳಿ ಸರಪಳೀ ಪವಾಡ ನಡೆಯುವ ಸ್ಥಳಕ್ಕೆ ಬರುತ್ತಾರೆ.

ಬೇಸಿಗೆ ಜಾತ್ರೆಯಲ್ಲಿ ಸಾಯಂಕಾಲ ಆರು ಗಂಟೆಗೆ ಮುಖ್ಯ ಗುಡಿಯಿಂದ ಪಾಲ್ಕೆ ನುಡಿಹೇಳುವ ತುಗ್ಗಲಿಯ ಮರದಡಿಗೆ ಹೊರಡುತ್ತದೆ. ಮಳ್ಳಯ್ಯಜ್ಜ, ವಗ್ಗರು, ಕಂಚಿವೀರರು, ಭಕ್ತರು, ವಾದ್ಯಕಾರರು ವಿವಿಧ ವಾದ್ಯಗಳನ್ನು ಭಾರಿಸುತ್ತ ನಂದಿಕೋಲನ್ನು ಹೊತ್ತುಕೊಂಡು ಓಡೋಡುತ್ತಾ ಕೂಗು ಬಸವಣ್ಣನ ಹತ್ತಿರ ಬರುತ್ತಾರೆ. ಇಲ್ಲಿ ಮಳ್ಳಯ್ಯಜ್ಜ ನುಡಿಹೇಳಲು ಸೂಚ (ಸೂಚನೆ) ಪಡೆಯುವುದಕ್ಕೆ ಬಸವಣ್ಣನ ಹತ್ತಿರ ಹರಸಾಹಸ ಪಡುತ್ತಾನೆ. ಸುಮಾರು ಮುಕ್ಕಾಲು ಗಂಟೆಯವರೆಗೆ ಈ ಬಸವಣ್ಣನ ಕಿವಿ ಹತ್ತಿರ ತನ್ನ ಕಿವಿಗೊಟ್ಟು ಕೇಳೋದು ಬರೋದು, ಕೇಳೋದು ಬರುವುದು ಹೀಗೆ ನಡೆದಿರುತ್ತದೆ. ಕಂಚಿವೀರರು ವಡುಪನ್ನು ಹೇಳುತ್ತಾ ಉಗ್ರವನ್ನು ತುಂಬಿಸುತ್ತಾರೆ. ಮರಳಿ ಮರಳಿ ಬಸವಣ್ಣನ ಹತ್ತಿರ ಹೋಗಿ ಶಂಖನಾದ ಗೈಯ್ಯುತ್ತಾ ಬಸವಣ್ಣನ ಮುಖದ ಮುಂದೆ ತನ್ನ ಕಿವಿಗೊಟ್ಟು ಕೇಳುವಂತ ಸಂದರ್ಭದ ಕೊನೆಗೆ ಮಳ್ಳಯ್ಯನಿಗೆ ಆ ವರ್ಷದ ಕಾರಣಿಕದ ಸೂಚನೆ ಸಿಕ್ಕಿತೆಂಬಂತೆ ಶಂಖನಾದವನ್ನು ಜೋರಾಗಿ ಮಾಡುತ್ತಾ ನುಡಿ ಹೇಳುವ ಈ ತುಗ್ಗಲಿ ಮರದಡಿಗೆ ಬರುತ್ತಾನೆ. ಚಂದಾಲಿಂಗನ ಗುಡಿಯ ಪೂಜಾರಿಯು ಮರವನ್ನು ಖಾಯಿ ಕರ್ಪೂರ ಮಾಲೆಗಳೊಂದಿಗೆ ಪೂಜಿಸುತ್ತಾನೆ. ತದನಂತರ ಮಳ್ಳಯ್ಯನಿಗೆ ಪೂಜಿಸಿ ಆ ಮರವೇರಲು ಅಣಿಗೊಳಿಸುತ್ತಾನೆ. ಅಲ್ಲಿ ನೆರೆದಿರುವ ಹಿರಿಯ ಭಕ್ತರು ಈತನಿಗೆ ಮರವೇರಲು ಸಹಕರಿಸುತ್ತಾರೆ. ಮಳ್ಳಯ್ಯ ಮರವೇರಿ "ಹೂಯ್ಯತ್" ಎಂದು ಧ್ವನಿ ಮಾಡುತ್ತಾನೆ. ಹಾಗೆ ಅಲ್ಲಿ ನೆರವೇರಿದ ಸಾವಿರಾರು ಭಕ್ತರು ತುಟಿಪಿಟುಕ್ಕೆನ್ನದೆ ನಿಶ್ಯಬ್ದರಾಗುತ್ತಾರೆ. ತಕ್ಷಣ

ಮಳ್ಳಯ್ಯ ಕೂಗು ಬಸವಣ್ಣನಿಂದ ಸೂಚಿಸಿದ ವಾಣಿಯನ್ನು ಹಿಂಗಾರಿ ಮುಂಗಾರಿ ಟಕಟಕಮಸನ ಅಥವಾ ಮುಂಗಾರಿ ಹಿಂಗಾರಿ ಟಕಟಮಸನ ಎಂದು ಯಾವುದಾದರೊಂದು ನುಡಿದು ಮರದಿಂದ ಕೆಳಗಿಳಿಯುತ್ತಾನೆ.

ನುಡಿ ಹೇಳುವಂತವರು ದಮ್ಮೂರು ಗಿರಿಯಪ್ಪ ಮಳ್ಳಯ್ಯ ಅಜ್ಜನವರು. ಇವರು ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಈ ಪದ್ಧತಿಯು ಇವರ ಮನೆತನಕ್ಕೆ ತಲೆತಲಾಂತರದಿಂದ ಬಂದಿರುವದಾಗಿದೆ. ಗುಡೂರಿನ ಹುಲ್ಲಪ್ಪಜ್ಜನ ನುಡಿಯನ್ನೂ ಇವರೇ ನುಡಿಯುತ್ತಾರೆ. ಹುಲ್ಲೇಶ್ವರನ ನುಡಿಯಾದ ಎರಡು ದಿನಕ್ಕೆ ಚಂದಾಲಿಂಗೇಶ್ವರನ ನುಡಿಯನ್ನು ನುಡಿಯುವರು. ಇವರ ವೇಷಭೂಷಣಗಳಾದ ಕೈಯಲ್ಲಿ ಶಂಖ, ಜಾಗಟೆ, ಕೋರಿಯಾ, (ಕಂಬಳಿ)ನಿಲುವಂಗಿ, ಕೊರಳಲ್ಲಿ ಹೂವಿನ ಮಾಲೆ, ತಲೆಗೆ ಕಂಬಳಿಯ ಪೇಟವನ್ನು ಸುತ್ತಿಕೊಂಡಿರುವರು. ಸೊಂಟಕ್ಕೆ ಬಿಳಿದಾದ ಶಾಲನ್ನು ಕಟ್ಟಿಕೊಂಡಿರುವವರು. ಈ ನುಡಿಯ ಪ್ರಮುಖವಾದ ಉದ್ದೇಶವನ್ನು ಎಲ್ಲಾ ಭಕ್ತರನ್ನು ಕೇಳಿದಾಗ ಅವರು ಹೇಳಿದಂತೆ ಮಳೆ ಬೆಳೆಯ ಭವಿಷ್ಯ ನುಡಿಗೆ ಸಂಬಂಧಿಸಿದ್ದಾಗಿದೆ ಎನ್ನುವರು. "ಮೀನಗುಂದಿ ಮಲ್ಲಯ್ಯನಲ್ಲಿ ಜಿರ್ರ ಕಾರಣಿಕದ ನುಡಿ ನುಡಿದರೆ ನೆರಣಿಕೆಯಲ್ಲಿ ಕಾರಣಿಕದ ಮಲ್ಲಯ್ಯ ಸ್ವಾಮಿಯೇ ನುಡಿ ಹೇಳಿದರೆ, ಮೈಲಾರದಲ್ಲಿ ಕಾರಣಿಕದ ಗೊರವನು ನುಡಿಯುವಂತೆ"[೭] ಚಂದ್ರಗಿರಿಯ ಕ್ಷೇತ್ರದಲ್ಲಿ ಮಲ್ಲಯ್ಯಜ್ಜನು ನುಡಿ ಹೇಳುವನು.

೪.೨.೬.೧೧. ಕೊಂತ ಮಿಂಚುವುದು : (Lightning of Kontha)

ಕೊಂತ ಎಂದರೆ, ತ್ರಿಶೂಲ., ಮಿಂಚುವುದು ಎಂದರೆ ಸ್ಪರ್ಧೆ. ಒಟ್ಟಾರೆ ತ್ರಿಶೂಲಧಾರಿಗಳ ಓಟದಿಂದ ಮೊದಲಿಗೆ ಬಂದು ತಮ್ಮ ತಮ್ಮ ಸ್ಥಳವನ್ನು ತಲುಪುವುದಾಗಿದೆ. ಅಂದರೆ ಇಲ್ಲಿ ಯಾವ ಯಾವ ಕೊಂತಧಾರಿಯು ಮೊದಲಿಗೆ ಮುಂದೆ ಬಂದು ಕಟ್ಟೆಯನ್ನು ಹತ್ತಿ ಎಲ್ಲರಿಗೂ ಕಾಣುತ್ತಾನೆ ಅದನ್ನೆ ಕೊಂತ ಮಿಂಚುವುದು ಎಂದು ಕರೆಯುವ ಸಂಪ್ರದಾಯ ರೂಢಿಗತವಾಗಿದೆ. ಈ ದೇವತೆಯ ಜಾತ್ರೆಯು ವರ್ಷದಲ್ಲಿ ಎರಡು ಬಾರಿ ನಡೆಯುವುದರಿಂದ ಈ ಆಚರಣೆ ನಡೆಯುವುದು. ಬೇಸಿಗೆ ಜಾತ್ರೆಯಲ್ಲಿ ಮಾತ್ರ ಕಂಡುಬರುತ್ತದೆ. ಐಹೊಳೆ ಕೊಂತ ಹಾಗೂ ಯಲಬುರ್ಗಿ ಕೊಂತ ಎಂಬ ಹೆಸರಿನ ಒಟ್ಟು ಎರಡು ಕೊಂತಗಳು ಈ ಸ್ಪರ್ಧೆಯಲ್ಲಿರುತ್ತವೆ. ಕೊಂತಧಾರಿಗಳು ಗುಡೂರಿನ ವಾಲ್ಮೀಕಿ ಸಮುದಾಯ ಕಂಚಿಯವರು ಹೊತ್ತುಕೊಳ್ಳುವಂತ ಸಂಪ್ರದಾಯವಿದೆ. ಇದು ಇವರಿಗೆ ತಲೆತಲಾಂತರದಿಂದ ವಂಶ ಪರಂಪರೆಯಿಂದ ಬಂದಿರುವುದಾಗಿ ತಿಳಿಸುವರು.

ಆಗಿ ಹುಣ್ಣಿಮೆಯಾದ ಮೂರು ದಿನಗಳ ನಂತರ ಚಂದಾಲಿಂಗೇಶ್ವರನ ಜಾತ್ರೆ ನಡೆಯುತ್ತದೆ. ಆ ದಿನ ಸಾಯಂಕಾಲದ ಅವಧಿಯಲ್ಲಿ 'ನುಡಿ' ಹೇಳುವ ಕಾರ್ಯ ಮುಕ್ತಾಯದ ನಂತರವೇ ನಡೆಯುತ್ತದೆ. ಕೊಂತ ಮಿಂಚುವ ಸ್ಥಳಕ್ಕೆ ಬಂದು ಈ ಮೊದಲೇ ಅವತ್ತಿನ ದಿನದಲ್ಲಿ ಮಧ್ಯಾಹ್ನ ಗುಡೂರಿನಿಂದ ಬಂದಂತ ಕೊಂತವನ್ನು ಹೆಸರಿಲ್ಲದ ಮರದ ಹತ್ತಿರ ಪೂಜಿಸಿ ಇಟ್ಟಿರುತ್ತಾರೆ.

ಕೊಂತವನ್ನು ಈ ಕಂಚಿವೀರರಲ್ಲಿ ಒಬ್ಬರು ಹೊರುತ್ತಾರೆ. ನುಡಿ ಹೇಳುವ ಸ್ಥಳಕ್ಕೆ ಹೋಗಿ ಬಂದಿರುವಂತ ಕೊಂತಧಾರಿಯು ಆ ಕೊಂತಮಿಂಚುವ ಸ್ಥಳವಾದ ಮುಖ್ಯ ಗುಡಿಯ ಬಲಭಾಗದ ಹೊಂಡಕ್ಕೆ ಹೋಗುವ ಮಾರ್ಗದಲ್ಲಿ ಬರುತ್ತಾರೆ. ಈ ಕೊಂತ ಧಾರಿಗಳೊಂದಿಗೆ ಚಂದಾಲಿಂಗೇಶ್ವರನ ಪಾಲಿಕೆ ಹಾಗೂ ಮಳ್ಳಯ್ಯಜ್ಜ, ವಗ್ಗಯ್ಯನವರು, ಕಂಚಿವೀರರು, ಗುಡಿಯ ಪೂಜಾರಿಗಳು, ಹಿರಿಯ ಭಕ್ತರು ಮತ್ತು ದೇವಸ್ಥಾನದ ಧಾರ್ಮಿಕ ಆಚರಣೆಯ ಹಿರಿಯ ಭಕ್ತರು ಕೂಡಿರುವರು. ಕೊಂತಧಾರಿಗಳು ಸ್ಪರ್ಧೆಗೆ ಅಣಿಗೊಳ್ಳಲು ಆ ದ್ವಿಕೊಂತಧಾರಿಗಳು ತಮ್ಮ ವೇಷಭೂಷಣಗಳನ್ನು ಭದ್ರವಾಗಿ ಕಟ್ಟಿಕೊಂಡು ಸಿದ್ಧವಾಗುವರು. ಗುಡಿಯ ಪೂಜಾರಿಗಳು ಈ ಕೊಂತಧಾರಿಗಳಿಗೆ ಪೂಜಾ-ಪುನಸ್ಕಾರ ಮಾಡುತ್ತಿರುತ್ತಾರೆ. ಕಂಚಾವೀರರು ವಡುಪು ಹೇಳುವುದರೊಂದಿಗೆ ಇವರಿಗೆ ಉಗ್ರಗೊಳಿಸುತ್ತಿರುತ್ತಾರೆ. ಇದು ಒಂದು ಕಡೆಗೆ ಹೀಗೆ ನಡೆದಿದ್ದರೆ, ಇವರು ಹೋಗುವ ಇನ್ನೊಂದು ಕಡೆ ಮಾರ್ಗದಲ್ಲಿ ಪ್ರೇಕ್ಷಕರು ಯಾರೂ ಅಡ್ಡ ಬರಬಾರದೆಂದು ಕುದುರೆಕಾರರು ತಮ್ಮ ಛಾಟಿಯಿಂದ ದಡಲ್... ದಡಲ್... ಎಂದು ಶಬ್ಧ ಬರುವಂತೆ ಹೊಡೆದು ಜನರಿಗೆ ಹೆದರಿಸಿ ಹಿಂದಕ್ಕೆ ಸರಿಸುತ್ತಾರೆ. ಆ ಕೊಂತಧಾರಿಗಳು ಓಡುವ ಮಾರ್ಗಕ್ಕೆ ಈ ಕುದುರೆಕಾರರು ಕಾವಲಾಗಿ ನಿಂತಿರುತ್ತಾರೆ. ಈ ಆಚರಣೆಯನ್ನು ನೋಡಲು ಪ್ರೇಕ್ಷಕರು ಜನ ಜಂಗುಳಿಯಿಂದ ಕೂಡಿರುತ್ತಾರೆ. ಇದರಿಂದ ಅಲ್ಲಿರುವ ಮರ-ಗಿಡಗಳಲ್ಲಿ, ದೇವಾಲಯದ ಕೋಟೆ ಗೋಡೆಯ ಮೇಲೆ, ಕಲ್ಯಾಣ ಮಂಟಪದ ಮೇಲೆ, ಜಾತ್ರೆಗೆ ಬಂದಿರುವ ವಾಹನಗಳ ಮೇಲೆ ನಿಂತು ಕೊಂತಧಾರಿಗಳು ಸ್ಪರ್ಧೆಗೆ ಬರುವುದನ್ನು ಕಣ್ಣು ಪಿಳುಕಿಸದೆ ಏಕ ನೋಟ ಬೀರುತ್ತಾರೆ.

ಕೊಂತಧಾರಿಗಳಿಗೆ ಕೊನೆಗೆ ಕೊರಳಿಗೆ ಹೂವಿನ ಮಾಲೆ ಹಾಕಿ ಆರತಿಯನ್ನು ಬೆಳಗಿ, ಕಂಚಾವೀರರ ವಡುಪುಗಳಿಂದ ಉಗ್ರಗೊಂಡಾಗ ಮಳ್ಳಯ್ಯಜ್ಜ ಹಾಗೂ ವಗ್ಗಯ್ಯಜ್ಜನವರು ತಲಾ ಒಬ್ಬೊಬ್ಬರನ್ನು ಹಿಡಿದುಕೊಂಡು ಶಂಖನಾದ ಗೈದು ಅವರ ಬೆನ್ನು ಚಪ್ಪರಿಸಿ ಒಂದೇ ಕ್ಷಣಕ್ಕೆ ಮುಂದಕ್ಕೆ ತಳ್ಳುವರು. ಇವರು ಶರವೇಗದಲ್ಲಿ ಓಡುತ್ತಿರುವಾಗ, ಇವರ ಮುಂದೆ ಮುಂದೆ ಪಂಜುದಾರಿಗಳು ಓಡುತ್ತಾರೆ. ಮುಂದೆ ಕೊಂತಧಾರಿಗಳು ಗೊತ್ತು ಮಾಡಿದ ಸ್ಥಳವನ್ನು ತಲುಪುವರು. ಇವರ ಬರುವಿಕೆಗಾಗಿ ಈ ಮೊದಲೇ ಹೋಗಿ ನಿಂತಿರುವ ಗುರುತುದಾರರು, ಯಾವ ಕೊಂತ ಮೊದಲಿಗೆ ಬಂದಿತು ಎಂದು ಸುದ್ಧಿ ಸಾರುವರು. ಇದರಿಂದ ಐಹೊಳೆ ಕೊಂತ ಮೊದಲಿಗೆ ಬಂದರೆ, ಆ ವರ್ಷದ ಮುಂಗಾರಿಯ ಎಲ್ಲಾ ಮಳೆ-ಬೆಳೆ ಸರಿಯಾಗಿ ಆಗುತ್ತವೆ ಎಂಬುದನ್ನು ಸೂಚನೆ ಪಡೆದರೆ, ಅದೆ ಇನ್ನೊಂದು ಯಲಬುರ್ಗಿ ಕೊಂತ ಮೊದಲಿಗೆ ಬಂದರೆ ಆ ವರ್ಷ ಮುಂಗಾರಿಯ ಮಳೆ-ಬೆಳೆ ಅಲ್ಪವಾಗುತ್ತವೆ ಎಂಬ ನಂಬಿಕೆ ಭಕ್ತರಲ್ಲಿದೆ.

ಕೊಂತಮಿಂಚುವುದು ಎಂದರೇನು? ಏಕೆ ನಡೆಸುತ್ತಾರೆ ಎಂದು ಜನಪದರಲ್ಲಿ ಪ್ರಶ್ನಿಸಿದಾಗ ಊಹಾತ್ಮಕವಾದ ಹಲವಾರು ಉತ್ತರಗಳು ಹೊರಬರುತ್ತಿವೆ. ಅವುಗಳಲ್ಲಿ ಕೆಲವನ್ನು ಹೀಗೆ ತಿಳಿಯಬಹುದು. ಜಾತ್ರೆಗೆ ಬಂದ ಭಕ್ತರು ಹೇಳುವಂತೆ, "ಈ ಕೊಂತ ಮಿಂಚುವುದರಿಂದ ಈ

ವರ್ಷದಾಗ ಜೊಲ ಆಗೋದು ಕೇಡಾಗೋದು ಗೊತ್ತಾಗತೈತಿರ್ರಿ" ಹಾಗೇ ಇನ್ನೊಬ್ಬ ಭಕ್ತರಿಗೆ ಕೇಳಿದಾಗ ಅವರು ಈ ರೀತಿ ಹೇಳುತ್ತಾರೆ, "ಈ ಕೊಂತಗಳಲ್ಲಿ ಯಾವ ಕೊಂತ ಮುಂಚಾಕ ಬರತ ಅದರ ಮ್ಯಾಲೆ ಗೊತ್ತಾಗತ್ರಿರಿ ಮಳೆ-ಬೆಳೆ ಭವಿಷ್ಯ" ಎಂದು ನುಡಿಯುತ್ತಾರೆ. ಆ ಕೊಂತಗಳ ಹೆಸರುಗಳ ಬಗ್ಗೆ ಕೇಳಿದಾಗ ಹಳವಂಡಿಯ ಭರಮಜ್ಜನವರು ಹೀಗೆ ಹೇಳುತ್ತಾರೆ 'ಹಂಗ ಹಿಂದ್ನಿಂದ ಹಿರ್‍ಯಾರು ಅನ್ಕಂತ ಬಂದಾರ ನಾವು ಅಂತಿವ್ರಿ, ಏನಪಂದ್ರ... ಯಲ್ಬರ್ಗಿ ಕೊಂತಾನ, ಯಲಬುರ್ಗಿಯರು ಮಾಡಿಸಿಕೊಟ್ಟರಂತ ಮತ್ತಿನ್ನೊಂದು ಐತಲ್ರ್ರಿ ಅದ್ನ ಐಹೊಳೆವರು ಮಾಡಿಸ್ಯಾರಂತರ್ರಿ, ಅದ್ಕ ಎಲ್ಲಾರು ಹಂಗ ಕರ್‍ಯಾಕತ್ಯಾರ್ರಿ'. ಇವರೆಲ್ಲರ ಮಾತಿನಿಂದ ತಿಳಿದಾಗ ಕೊಂತಮಿಂಚುವುದು ಎಂದರೆ ವಿಶೇಷವಾಗಿ ಎದ್ದು ಕಾಣುವಂಥದ್ದು, ಅಂದರೆ ಇವೆರಡರಲ್ಲಿ ಯಾವುದಾದರೊಂದು ಮೊದಲಿಗೆ ಬಂದಾಗ ಅದರ ಹೆಸರು ಎಲ್ಲರ ಬಾಯಿಯಲ್ಲಿ ಇರುವುದು. ಎಲ್ಲಾ ಕಡೆ ಅದರ ಹೆಸರೇ ಹರಡುವುದರಿಂದ ಗುರುತಿಸಿಕೊಳ್ಳುವುದನ್ನೇ ಮಿಂಚುವುದು ಎಂದು ಹೇಳಬಹುದು.

ಈ ಕೊಂತಗಳ ಹೆಸರುಗಳ ಬಗ್ಗೆ ಭಕ್ತರು ಹೇಳುವಂತೆ ಸತ್ಯ ಸಮೀಪ ಇದೆ. ಏಕೆಂದರೆ ಹಿಂದೆ ಐಹೊಳೆಯ ಕಡೆಯ ಯಾರೋ ಒಬ್ಬ ಭಕ್ತ ತನಗೆ ಯಾವುದೋ ರೀತಿಯಲ್ಲಿ ಒಳ್ಳೆಯದಾಗಲಿ ಎಂದು ಬೇಡಿಕೊಂಡಿರಬೇಕು, ಅಥವಾ ಆ ಊರಿನವರೆ ತಮ್ಮೂರಿಗೆ ಏನಾದರೂ ಕಂಟಕ ಬಂದಾಗ ಆ ಊರಿನವರು ಸಾಮೂಹಿಕವಾಗಿ ಕಂಟಕ ನಿವಾರಣೆಗೋಸ್ಕರ ಈ ದೇವತೆಗೆ ಬೇಡಿಕೊಂಡಿದ್ದರಿಂದ ಅದು ಯಾವುದೇ ರೂಪದಲ್ಲಿ ನಿವಾರಣೆಯಾಗಿದ್ದರೆ, ಅದಕ್ಕೆ ಇದೆ ದೇವತೆಯೇ ಕಾರಣವೆಂದು ತ್ರಿಶೂಲವನ್ನು ಹರಕೆ ಬೇಡಿಕೆ ಎಂದು ತೀರಿಸಿದರಿಂದ ಅದೇ ಹೆಸರಿನಿಂದ ಇಂದಿಗೂ ಕರೆಯುತ್ತಿರಬಹುದು.

೪.೨.೬.೧೨. ಸರಪಳಿ ಪವಾಡ : (The Chain is a Miracle)

ದೇವಾಲಯದ ಮುಖ್ಯದ್ವಾರವಾದ ಅರವತ್ತು ಕಂಬದ ಅಗಸಿಯ ಬಾಗಿಲಿನಿಂದ ಒಳಗಡೆ ಪ್ರವೇಶಿಸಿದರೆ ಮಾರ್ಗ ಮಧ್ಯದಲ್ಲಿಯೇ ಎದುರಿಗೆ ಕಾಣುವ ಬಯಲು ಪ್ರದೇಶದಲ್ಲಿ ಎರಡು ಮೂರು ಅಡಿ ಎತ್ತರದ ಕಲ್ಲು ಕಂಬಗಳಿವೆ. ಅದರಲ್ಲಿ ಪ್ರತಿ ಜಾತ್ರೆಗೆ ಬೇರೆ ಬೇರೆ ಕಲ್ಲು ಕಂಬಗಳನ್ನು ಬಳಸಿಕೊಂಡು ಸರಪಳಿ ಪವಾಡ ನಡೆಯುತ್ತದೆ. ಈ ಸರಪಳಿ ಪವಾಡ ನಡೆಯುವಂತ ಸ್ಥಳ ಜನದಟ್ಟಣೆಯಿಂದ, ನೂಕು ನುಗ್ಗಲಿನಿಂದ ಕೂಡಿಕೊಂಡಿರುತ್ತದೆ. ವೀಕ್ಷಕರು ಎಲ್ಲೆಂದರೆ ಅಲ್ಲಿ ನಿಂತು ವೀಕ್ಷಣೆ ಮಾಡುತ್ತಾರೆ. ಸುತ್ತಲೂ ಇವರು ಕೋಟೆಗೋಡೆ, ಮುಖ್ಯದ್ವಾರದ ಅಗಸಿ ಮೇಲ್ಛಾವಣೆಯ ಮೇಲೆ ಹಾಗೂ ಪಕ್ಕದಲ್ಲಿರುವ ಹುಣಿಸೆಮರವು ಭಕ್ತರಿಂದ ತುಂಬಿಕೊಂಡಿರುತ್ತದೆ. ಡೊಳ್ಳಿನ ಧ್ವನಿಯು ಅತಿಯಾದ ಜೋರಿನಿಂದ ಮೊಳಗುತ್ತದೆ. ಇಂತಹ ಸಂದರ್ಭದಲ್ಲಿ ಸರಪಳಿ ಪವಾಡ ನಡೆಯುವಂತ ಕಲ್ಲಿಗೆ ಎರಡು ಆರತಿ ತಟ್ಟೆ (ಪ್ಲೇಟ್) ನಿಂದ ಆರತಿ ಬೆಳಗಲಾಗುತ್ತದೆ. ಪವಾಡದ ಕಲ್ಲಿಗೆ ಎಣ್ಣೆಬತ್ತಿ, ಚೆಂಡು ಹೂವಿನ ಹಾರ ಹಾಕಲಾಗಿರುತ್ತದೆ. ಎಲ್ಲ ರೀತಿಯ ಪೂಜೆ

ಪುನಸ್ಕಾರಗೊಂಡ ನಂತರ ವಗ್ಗಪ್ಪ ತನ್ನ ತಲೆಯ ಮೇಲಿನ ಪೇಟವನ್ನು ತೆಗೆಯುತ್ತಾನೆ. ಕಬ್ಬಿಣದ ಸರಪಳಿಯನ್ನು ಕಲ್ಲಿನಲ್ಲಿ ಹಾಕಿದ ರಂಧ್ರದ ಮೂಲಕ ಹೊರತಂದು ತನ್ನ ಕತ್ತಿನ ಹಿಂಭಾಗಕ್ಕೆ ಹಾಕಿಕೊಂಡು ಹರಿಯಲು ಪ್ರಯತ್ನಿಸುತ್ತಾನೆ. ಅದು ಒಂದು ಎರಡು, ಮೂರು, ಪ್ರಯತ್ನಕ್ಕೆ ಹರಿದು ಹಿಂದಕ್ಕೆ ಬೀಳುತ್ತಾನೆ. ಆಗ ಭಕ್ತರು ಆತನನ್ನು ಮೇಲೆತ್ತುತ್ತಾರೆ. ಹೀಗೆ ಸಮ ಸಂಖ್ಯೆಗಳ ಪ್ರಯತ್ನದ ಮೂಲಕ ಹರಿದರೆ ಕೇಡು ಅಥವಾ ಒಳ್ಳೆಯದು, ಎಂಬ ಭಕ್ತರ ನಂಬಿಕೆಯು ಇರುತ್ತದೆ. ಈ ಪವಾಡ ನೆರವೇರಿದ ಮೇಲೆ ಭಕ್ತರೆಲ್ಲರು ಏಳುಕೋಟಿ... ಏಳುಕೋಟಿ... ಏಳುಕೋಟಿ... ಎಂದು ಘೋಷಣೆ ಕೂಗುತ್ತಾರೆ. ತದನಂತರ ಸನ್ನಿಧಿಗೆ ಹೋಗುತ್ತಾರೆ. ಗುಡಿಯ ವರಾಂಡದಲ್ಲಿನ ದ್ವಾರದಲ್ಲಿ ಬಂದು ನಿಲ್ಲುತ್ತಾರೆ. ಇತ್ತ ಕಡೆ ಮತ್ತೊಬ್ಬ ಪೂಜಾರಿಯು ಹಾಗೂ ಇತರ ಸೇವಕರೊಂದಿಗೆ ಗೋಧಿ ಕಣಕದಿಂದ ತಯಾರಿಸಿದ ಐದು ಆರತಿ ತಟ್ಟೆಗಳನ್ನು ತರುತ್ತಾರೆ. ಒಂದು ಆರತಿ ತಟ್ಟೆಯಲ್ಲಿ ಎರಡು ಗೋಧಿ ಕಣಕದ ದೀಪಗಳಿರುತ್ತವೆ. ಒಂದೊಂದು ಆರತಿ ತಟ್ಟೆಯನ್ನು ಮಳ್ಳಯ್ಯ, ವಗ್ಗಪ್ಪ ಹಾಗೂ ಇತರ ಸೇಕವರಿಗೆ ಬೆಳಗುತ್ತಾರೆ. ಇದಾದ ನಂತರ ಮಳ್ಳಯ್ಯನವರು ಅತೀ ವೇಗವಾಗಿ ಮುಖ್ಯ ಗುಡಿಯನ್ನು ಒಂದು ಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಮುಂದೆ ಚಂದಾಲಿಂಗನಿಗೆ ಎಲ್ಲರೂ ನಮಸ್ಕರಿಸಿ, ಪಾಲುಕೆಯನ್ನು ಇತರ ಪರಿಕರಗಳನ್ನು ಗುಡಿಯ ಸನ್ನಿಧಿಯಲ್ಲಿ ಇಡುತ್ತಾರೆ. ಜಾತ್ರೆಗೆ ಬಂದಿರುವಂತ ಎಲ್ಲಾ ಭಕ್ತರು ದೇವರಿಗೆ ನಮಸ್ಕರಿಸಿ ಬನ್ನಿ ಮುಡಿಯುವ ಕಾರ್ಯಕ್ರಮ ಪ್ರಾರಂಭವಾಗುತ್ತದೆ.

ಚಂದಾಲಿಂಗನ ಜಾತ್ರಾ ಆಚರಣೆಯಲ್ಲಿ ಈ ಸರಪಳಿ ಪವಾಡ ನಡೆಯುವುದರ ಪ್ರಮುಖ ಉದ್ದೇಶವೇನು ಎನ್ನುವುದರ ಬಗ್ಗೆ ಒಮ್ಮತವಾದ ಅಭಿಪ್ರಾಯವಿಲ್ಲ. ಆ ಕ್ಷೇತ್ರದ ಜನಪದರನ್ನು ಕೇಳಿದಾಗ ಅವರು ಹೇಳುವಂತೆ ಹಿಂದೆ ಗುಡೂರಿನಲ್ಲಿ ವೀರಭದ್ರೇಶ್ವರ ದೇವರ ಸನ್ನಿಧಿಯಲ್ಲಿ ಚಂದಾಲಿಂಗಪ್ಪ ಮತ್ತು ಹುಲ್ಲಪ್ಪರ ಮಧ್ಯ ಸಂಘರ್ಷ ನಡೆದಿತ್ತು. ಆಗ ವೀರಭದ್ರದೇವರ ಮಧ್ಯ ಬಂದು ಅವರ ಕಲಹವನ್ನು ನಿವಾರಿಸಿದನು. ಇದರಿಂದ ಹುಲ್ಲಪ್ಪನು ವೀರಭದ್ರನ ಸನ್ನಿಧಿಯಲ್ಲಿ ಉಳಿದುಕೊಳ್ಳುವಂತೆ ಸಂದರ್ಭ ನಡೆಯಿತು. ಇದರಿಂದ ಚಂದಾಲಿಂಗನು ಆತನನ್ನು ಅಲ್ಲೇ ಬಿಟ್ಟು ತನ್ನ ಸ್ವಪ್ರದೇಶ ಚಂದ್ರಗಿರಿ ಪ್ರದೇಶಕ್ಕೆ ಬರುವುದಕ್ಕೆ ತಿರ್ಮಾನಿಸಿ ಪತ್ನಿ ಗಂಗಿಮಾಳಮ್ಮ ಕರೆಯುತ್ತಾನೆ. ಅದಕ್ಕೆ ಪ್ರತಿಯಾಗಿ ಗಂಗೆಮಾಳಮ್ಮಳು ಇಲ್ಲ ನಾನು ಸಾಕಿದ ಮಗ ಹುಲ್ಲಪ್ಪನನ್ನು ಬಿಟ್ಟು ಬಂದು ಬಂಜೆ ಎಂಬ ಪಟ್ಟವನ್ನು ಕಟ್ಟಿಸಿಕೊಳ್ಳಲಾರೆ ಎಂದು ಹಿಂಜರಿದಳು. ಇದರಿಂದ ಕೋಪಗೊಂಡ ಚಂದಾಲಿಂಗಪ್ಪನು ಗಂಗಿಮಾಳಮ್ಮಳ ಶಿರಚ್ಛೇದ ಮಾಡಿದನು ಇದನ್ನು ಕಂಡ ಹುಲ್ಲಪ್ಪನು ಕೋಪಗೊಂಡು ತಂದೆಯನ್ನು ಕೊಲ್ಲಲು ಖಡ್ಗವನ್ನು ಹೊರತೆಗೆದನು. ಇದನ್ನು ಗಮನಿಸಿದ ವೀರಭದ್ರ ದೇವರು ಮಧ್ಯ ಬಂದು ಇಬ್ಬರಿಗೂ ಬುದ್ಧಿ ಹೇಳಿ ನಾವು ಮೂವರು ಶಿವನ ಧ್ಯಾನ ಮಾಡಿ ಗಂಗೆ ಮಾಳಮ್ಮನನ್ನು ಬದುಕಿಸಿಕೊಡಿ ಎಂದು ವರ ಕೇಳೋಣ ಎಂದನು. ಅದರಂತೆ ಎಲ್ಲಾ ನೆರವೇರಿ ಗಂಗಮಾಳಮ್ಮ ಪುನರ್ಜನ್ಮ ತಾಳಿದಳು. ಇದರ ಪ್ರತೀಕವಾಗಿ ಸರಪಳಿ ಪವಾಡ ನಡೆಯುತ್ತದೆ. ಎಂದು ಕೆಲವರು ಹೇಳುವರು.

ಇನ್ನೂ ಕೆಲವರು ಚಂದಾಲಿಂಗಪ್ಪನು ಕರತೂಕ (ಶಕ್ತಿ) ತೋರಿಸುವುದಕ್ಕೆ ಇಂಥ ಪವಾಡ ಮಾಡುತ್ತನೆಂದು ಹೇಳಿದರೆ; ಆದರೆ ಬಹುಪಾಲು ಜನರು ಹೇಳುವಂತೆ ಈ ಸರಪಳಿ ಪವಾಡವು ರೈತರ ಮಳೆ-ಬೆಳೆ ಕುರಿತದ್ದಾಗಿದೆ ಎಂದು ಹೇಳುವರು. ಈ ಬಹುಪಾಲು ಜನರು ಹೇಳುವ ಅಭಿಪ್ರಾಯವನ್ನು ಗಮನಿಸಿದಾಗ ಸತ್ಯಕ್ಕೆ ಸಮೀಪ ಎನಿಸಿತು. ಒಟ್ಟಾರೆ ಈ ಸರಪಳಿಯು ಬೆಸಸಂಖ್ಯೆ ಪ್ರಯತ್ನದಲ್ಲಿ ಹರಿದರೆ ಮಳೆ-ಬೆಳೆಗಳು ಸಂಪಾಗುತ್ತವೆ ಎಂಬುದು ನಂಬಿಕೆ ಇದೆ. ಇದನ್ನು ನಂಬಬಹುದು ಏಕೆಂದರೆ ವರ್ಷದಲ್ಲಿ ಎರಡು ಬಾರಿ ಜಾತ್ರೆ ನಡೆಯುತ್ತದೆ. ಅದರಿಂದ ಮುಂಗಾರು ಮತ್ತು ಹಿಂಗಾರು ಮಳೆಯ ಅವಧಿಯ ಮುಂಚಿತವಾದ ಸಮಯದಲ್ಲಿ ನಡೆಯುತ್ತವೆ. ಆಗ ಆಯಾ ಅವಧಿಯ ಮಳೆ ಬೆಳೆಯ ಭವಿಷ್ಯವನ್ನು ಸೂಚನೆಯ ಮೂಲಕ ತಿಳಿಯುವರು.

ಈ ಸರಪಳಿ ಪವಾಡ ಮಾಡುವಂಥವರು ಕಬ್ಬರಗಿ ಕುರುಬರು ಜನಾಂಗದವರಾದ ಚಂದಾಲಿಂಗಪ್ಪ ವಗ್ಗರು. ಈ ಸಂಪ್ರದಾಯ ತಲೆತಲಾಂತರದಿಂದ ಬಂದಿರುವದಾಗಿದೆ. ಇವರ ವೇಷಭೂಷಣಗಳು ಕೋರಿ ನಿಲುವಂಗಿ (ಕಂಬಳಿ) ಕೋರಿಯನ್ನ ತಮ್ಮ ತಲೆಗೆ ತಲೆಗೆ ಟವೆಲದಂತೆ ಸುತ್ತಿಕೊಂಡಿರುವರು. ಕೋರಿ ಅಂಗಿಯ ಮೇಲೆ ಸೊಂಟಕ್ಕೆ ಬಿಳಿದಾದಂತ ಶಾಲನ್ನು ಕಟ್ಟಿಕೊಂಡಿರುವರು. ಕೈಯಲ್ಲಿ ಕಂಕರ ಹಿಡಿದುಕೊಂಡಿರುವರು ಬಗಲ ಚೀಲದಲ್ಲಿ ತಮಗೆ ಅವಶ್ಯಕವಾದವಸ್ತುಗಳನ್ನು ಹಿಡುವುದಕ್ಕ ಬಳಸುವರು. ಇದರಂತೆ ಮನ್ನಾರಾಳದ ಹುಲ್ಲಪ್ಪ ಗಿರಿಯಪ್ಪವಗ್ಗರು ಇವರು ಗುಡೂರು ಹುಲ್ಲೇಶ್ವರನ ಜಾತ್ರೆಯಲ್ಲಿ ಸರಪಳಿ ಪವಾಡ ಮಾಡುವರು. ಈ ಸರಪಳಿಯು ಸುಮಾರು ಐದು ಅಡಿ ಉದ್ದದ ಕಬ್ಬಿಣದಿಂದ ತಾಯರಿಸಿರುವರು. ಇಂತಹ ಸರಪಳಿ ಪವಾಡ ನಡೆಯುವಂತಹ ಕೆಲವು ಪ್ರಮುಖವಾದ ಕ್ಷೇತ್ರಗಳಾದ "ಮೀನಗೊಂದಿ ಮಲ್ಲಯ್ಯನ ದೇವಾಲಯಕ್ಕೆ ಸರಪಳಿಯು ಬಲ್ಲೂರಿನಿಂದ ಬರುತ್ತದೆ. ಬೆಳಗ್ಗೆ ಏಳು ಮೂವತ್ತಕ್ಕೆ ಈ ಸರಪಳಿಯ ಪವಾಡ ನಡೆಯುತ್ತದೆ".[೮] ಅದರಂತೆ ಈ ಚಂದ್ರಗಿರಿಯ ಚಂದಾಲಿಂಗೇಶ್ವರನಿಗೆ ಗುಡೂರ ನಿಂದ ಸರಪಳಿಯು ಬರುತ್ತದೆ.

೪.೨.೭.೧೩. ಬನ್ನಿ ಮುಡಿಯುವುದು : (Catching the Bunny)

ಸುಗ್ಗಿ ಜಾತ್ರೆಯಲ್ಲಿ ಬನ್ನಿ ಹಬ್ಬದ ನಂತರ ಮೂರು ದಿನಕ್ಕೆ ಈ ಜಾತ್ರೆಯ ಪ್ರಾರಂಭವಾಗುತ್ತದೆ. ಆ ದಿನ ಬೀಳಗಿಯ ಮಂಟಪದ ಬಸವಣ್ಣನ ಹತ್ತಿರ ನುಡಿಯಾದ ನಂತರ ಸರಪಳಿ ಪವಾಡವು ಏಳು ಗಂಟೆಗೆ ನೆರವೇರುತ್ತದೆ. ಇದಾದ ನಂತರವೇ ಈ ಬನ್ನಿ ಮುಡಿಯುವ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಇಲ್ಲಿ ನಾಡಿನ ವಿವಿಧ ಭಾಗಗಳಿಂದ ಹಲವಾರು ಜನರು ಬನ್ನಿ ಹಬ್ಬಕ್ಕಿಂತ ಮೊದಲಿಗೆ ಬಂದಿರುತ್ತಾರೆ. ಇದಕ್ಕಿಂತ ಮೂರು ದಿನಗಳ ಮುಂಚಿತವಾಗಿ ಗುಡೂರು ಹುಲ್ಲಪ್ಪನ ಜಾತ್ರೆಗೆ ಭಕ್ತರು ಬಂದಿರುತ್ತಾರೆ. ಹಬ್ಬದಲ್ಲಿ ತಮ್ಮೂರಿನಿಂದ ಎರಡೂ ಜಾತ್ರೆಗೆ ಬಂದಿರುವುದರಿಂದ ತಮ್ಮಲ್ಲಿನ ಆಚರಿಸುವ ಹಬ್ಬದಿಂದ ವಂಚಿತರಾಗಿರುತ್ತಾರೆ. ಏಕೆಂದರೆ ಆ ಹಬ್ಬಕ್ಕಿಂತ ಈ ಎರಡೂ ದೇವರುಗಳ ಜಾತ್ರೆಯು ಎಷ್ಟೋ ಭಕ್ತರಿಗೆ ಮುಖ್ಯವಾಗಿರುತ್ತದೆ. ಆದ್ದರಿಂದ ಇಲ್ಲಿ ಬಂದು

ತಂಗಿದ್ದರಿಂದ ಎಲ್ಲರೂ ಇದೇ ಕ್ಷೇತ್ರದಲ್ಲಿ ಬನ್ನಿ ಮುಡಿಯುವುದರಲ್ಲಿ ಪಾಲ್ಗೊಳ್ಳುತ್ತಾರೆ. ರಾತ್ರಿ ಸುಮಾರು ಎಂಟು ಗಂಟೆಯಿಂದ ಬನ್ನಿ ಮುಡಿಯುವಲ್ಲಿ ಬಂದ ಭಕ್ತರೆಲ್ಲ ತೊಡಗುತ್ತಾರೆ. ಮೊದಲಿಗೆ ಭಕ್ತರೆಲ್ಲರು ಬನ್ನಿಯನ್ನು ಚಂದಾಲಿಂಗೇಶ್ವರನ ಸನ್ನಿಧಿಗೆ ಅರ್ಪಿಸಿ, ಆ ಗುಡಿಯ ಪೌಳಿಯಲ್ಲಿರುವ ತೆರದ ಮಂಟಪದ ಬಸವಣ್ಣ, ಗಂಗಿಮಾಳಮ್ಮ, ತುಪ್ಪದಮಾಳಮ್ಮ, ವೀರಭದ್ರೇಶ್ವರ, ಹುಲ್ಲೇಶ್ವರ, ಹಾಗೂ ಕಾಲಕಾಲೇಶ್ವರ, ಶ್ರೀದುರ್ಗಾದೇವಿ ಹೀಗೆ ಭಕ್ತರು ತಮಗೆ ಇಷ್ಟವಾದ ಮುಂತಾದ ದೇವತೆಗಳಿಗೆ ಬನ್ನಿಯನ್ನು ಅರ್ಪಿಸುವರು. ತದನಂತರ ಹುಲ್ಲೇಶ್ವರನ ಗುಡಿಯ ಕಟ್ಟೆ ಹಾಗೂ ಹೆಗ್ಗಡೆಪ್ರಧಾನಿ ಗುಡಿಯ ಕಟ್ಟೆಯ ಮೇಲೆ ಆಸೀನರಾದ ಮಳ್ಳಯ್ಯಜ್ಜ ಮತ್ತು ವಗ್ಗಯ್ಯನವರಿಗೂ, ಕೊಂತಧಾರಿಗಳಿಗೆ ಗೊರಪ್ಪ ಗೊರಮ್ಮನವರಿಗೂ ಬನ್ನಿ ಮುಡಿಯುತ್ತಾರೆ. ಇವರೆಲ್ಲರಿಗೂ ಕೊಟ್ಟನಂತರ ಜಾತ್ರೆಗೆ ಬಂದಿರುವಂತ ಭಕ್ತರು ಒಬ್ಬರಿಗೊಬ್ಬರಿಗೆ ಬನ್ನಿಯನ್ನು ಕೊಡುತ್ತಾ 'ನಾವು ನೀವು ಬನ್ನಿ ತಗೊಂಡು ಬಂಗಾರಾಗಿರೋಣ ಅಂತ ಕೆಲವೊಂದಿಷ್ಟು ಭಕ್ತರು ಅಂದರೆ, ಇನ್ನು ಕೆಲವರು ಬನ್ನಿ ಬಂಗಾರವಾಗಿರಲಿ' ಎಂದು ಶಿರಬಾಗಿಸಿ ನಮಸ್ಕರಿಸುವರು. ಭಕ್ತರು ಗುಡಿಯ ಪೂಜಾರಿಗಳಿಗೆ ಹಾಗೂ ಮಳ್ಳಯ್ಯಜ್ಜ ಮತ್ತು ವಗ್ಗಯ್ಯನವರಿಗೆ ಗೊರವಪ್ಪನವರಿಗೆ ಮತ್ತು ಗೊರವಿಯವರಿಗೆ ಬನ್ನಿಯೊಂದಿಗೆ ತಮಗೆ ಸಾಧ್ಯವಾದ್ದು ದಕ್ಷಿಣ ನೀಡಿ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುವರು.

೪.೩. ನಂಬಿಕೆ ಮತ್ತು ವಿಧಿ-ನಿಷೇಧಗಳು : (Faith and Destiny-Prohibitions)

ನಮ್ಮ ಪೂರ್ವಜರ ಕಾಲದಿಂದ ಇಂದಿನವರೆಗೂ ಜನಪದರಲ್ಲಿ ನಂಬಿಕೆ ವಿಧಿ-ನಿಷೇಧಗಳು ಅವರ ಮನಸ್ಸಿನಲ್ಲಿರುವ ಒಂದು ಕರಾರು ಪತ್ರವಾಗಿದೆ ಎಂದರೆ ತಪ್ಪಾಗಲಾರದು. ಈ ಮಾನವ ಪರಿಸರದ ಸಾಂಸ್ಕೃತಿಕ ಜನಜೀವನ, ಧರ್ಮ, ಸಾಮಾಜಿಕ ಹಾಗೂ ಆತನ ಆಹಾರ-ಆರೋಗ್ಯ, ನಡೆ-ನುಡಿ, ಕೃಷಿ ಕಾರ್ಯ, ಉಡುಗೆ-ತೊಡುಗೆ, ನೋವು-ನಲಿವು, ಹುಟ್ಟು-ಸಾವುಗಳಲ್ಲಿ ಈ ನಂಬಿಕೆಗಳು ಉದಯಿಸಿವೆ. ಒಟ್ಟಾರೆ ನಂಬಿಕೆಯೆಂದರೆ ಸಾಂಪ್ರದಾಯಿಕವಾಗಿ ಜನಪದರುಗಳಿಂದ ಅಂಗೀಕಾರವಾದ ಒಂದು ತಿಳುವಳಿಕೆಯನ್ನು ನಂಬಿಕೆ ಎನ್ನಬಹುದು. ಈ ನಂಬಿಕೆಗಳ ಹಿಂದೆ ನ್ಸೀಧವೂ ಜೊತೆಗಿರುತ್ತದೆ. ಯಾವುದೇ ಒಂದು ವಸ್ತು, ಒಂದು ಘಟನೆ, ಒಂದು ಆಚರಣೆ ಮಾಡಬೇಕು ಎನ್ನುವಂಥದ್ದು ಕೆಲವು ಇದ್ದರೆ, ಕಡ್ಡಾಯವಾಗಿ ಮಾಡಲೇಬಾರದು ಎನ್ನುವಂತಹವುಗಳು ಕೆಲವೊಂದಿರುತ್ತವೆ ಅವುಗಳೇ ನಿಷೇಧಗಳು. ಈ ನಿಷೇಧಗಳು. ವೈಯಕ್ತಿಕ ಕಾರಣಗಳಿಂದರಬಹುದು ಅಥವಾ ಮತ ಸಂಬಂಧಿಯಾಗಿರಬಹುದು. ಬೇಟೆ ಮತ್ತು ಬಲಿ ಸಂಬಂಧಿಯಾಗಿರಬಹುದು. ಅವು ಆಯಾ ನೆಲೆಗಟ್ಟಿನಲ್ಲಿ ತಮ್ಮದೇ ಆದಂತ ಸಂಬಂಧವನ್ನು ಕಟ್ಟಿಕೊಡುತ್ತವೆ. ಈ ಪ್ರಸ್ತುತ ಅಧ್ಯಯನ ಆಚರಣಾತ್ಮಕ ನೆಲೆಯಲ್ಲಿ ಚಂದಾಲಿಂಗೇಶ್ವರನಿಗೆ ಸಂಬಂಧಿಸಿ ಅಲ್ಲಿನ ಪ್ರಾದೇಶಿಕ ಜನಪದರಲ್ಲಿ ಯಾವ ರೀತಿಯ ನ್ಸೀಧಗಳಿವೆ ಎಂಬುದನ್ನು ವಿವರಿಸುತ್ತದೆ.

ನಂಬಿಕೆಗಳು (Beliafs)

ಜನನ (Birth)

* ಚಂದಾಲಿಂಗೇಶ್ವರ ಕ್ಷೇತ್ರದ ಸುತ್ತ-ಮುತ್ತಲಿನ ಗ್ರಾಮದ ಮತ್ತು ದೂರದ ಊರುಗಳಲ್ಲಿರುವಂತ ಭಕ್ತರು ತಮಗೆ ಜನಿಸಿದ ಮಗುವನ್ನು ಅದು ತಮಗೆ ಚಂದಾಲಿಂಗೇಶ್ವರನ ಕೃಪೆಯಿಂದ ಫಲ ದೊರೆತಿದ್ದು ಎಂದು, ಗಂಡು ಮಗುವಾಗಿದ್ದರೆ ಚಂದಾಲಿಂಗಪ್ಪನೆಂದು, ಹೆಣ್ಣು ಮಗುವಾಗಿದ್ದರೆ ಮಾಳಮ್ಮನೆಂದು ಈ ರೀತಿ ಹೆಸರಿಡುವುದರಿಂದ ವಂಶ ಚೆನ್ನಾಗಿ ಬೆಳೆಯುತ್ತದೆ ಎಂಬ ನಂಬಿಕೆಯಿದೆ.

* ಗುಡೂರಿನಿಂದ ಈ ಕ್ಷೇತ್ರದ ಜಾತ್ರೆಗೆ ಬಂದ ಸಂಗಮ್ಮ ದೊಡ್ಡಮನಿಯವರನ್ನ ಮಗುವಿನ ನಾಮಕರಣದ ಪದ್ಧತಿಯ ಬಗ್ಗೆ ಕೇಳಿದ್ದಾಗ ಅವರು ಹೀಗೆ ಹೇಳುತ್ತಾರೆ, "ನಾವು ಹೆಸರಿಡುವಾಗ ಗೊರವಪ್ಪನ ಕರಸ್ಸಿ ಆತ್ನಗ ನಮ್ಮ ಮನೆಯಲ್ಲಿ ದೋಣಿ ತುಂಬುತ್ತೀವಿ ಯಾಕಂದ್ರ, ನಮ್ಮ ಮನ್ಯಾಗ ಹುಟ್ಟಿದ ಮಗ ಮುಂದ್ಯಾ ನಾಕ ಮಂದಿಗೆ ಅನ್ನಹಾಕ್ತನಂತ ನಂಬಿಕೆ ಐತಿರಿ"...ಎಂದು ಹೇಳುತ್ತಾಳೆ.

ಬಹಳ ದಿನಗಳಿಂದ ಮಕ್ಕಳ ಭಾಗ್ಯಯಾಗದವರು ಚಂದಾಲಿಂಗೇಶ್ವರನ ಮೊರೆಹೋಗಿ ನಮಗೆ ಸಂತಾನ ಭಾಗ್ಯ ಕೊಟ್ಟರೆ ಅದು ಹೆಣ್ಣಾಗಿದ್ದರೆ, ತುಪ್ಪದ ಮಾಳಮ್ಮಗೆ ಮೀಸಲಿಟ್ಟ ತುಪ್ಪವನ್ನ ಆ ಮಗುವಿನಿಂದಲೇ ದೀಪ ಹಚ್ಚಿಸುತ್ತೇವೆ. ಅಥವಾ ಗಂಡು ಮಗುವಾಗಿದ್ದರೆ ಚಂದಪ್ಪನ ಕುದರಿಯಾಗಿ ಸೇವೆಗೆ ಬಿಡುತ್ತೇವೆ ಎಂಬ ನಂಬಿಕೆಯನ್ನು ಇಟ್ಟುಕೊಂಡಿರುವರು.

ವಿವಾಹ (Wedding)

ಮದುವೆಗೆ ಸಂಬಂಧಿಸಿದಂತೆ ಭಕ್ತರು ಚಂದಾಲಿಂಗೇಶ್ವರನ ಮೇಲೆ ನಂಬಿಕೆ ಇಟ್ಟುಕೊಂಡಿದ್ದಾರೆ. ಅಂತಹವುಗಳಲ್ಲಿ ಕೆಲವು ಹೀಗಿವೆ.

* ಬಹುದಿನಗಳವರೆಗೆ ಮದುವೆ ಭಾಗ್ಯಕೂಡಿ ಬರದೆಯಿರುವಂತಹವರು ಈತನ ಸನ್ನಿಧಿಗೆ ಅಮವಾಸ್ಯೆ ಅಥವಾ ರವಿವಾರ ದಿನ ಬಂದು ಅಲ್ಲಿರುವ ಗಿಡ-ಮರಗಳಿಗೆ ದಾರದಲ್ಲಿ ಅರಿಷಿಣಕೊಂಬನ್ನು ಕಟ್ಟಿ ಹೋಗುವುದರಿಂದ ವರ್ಷ ತುಂಬುವುದರರೊಳಗೆ ಕಂಕಣ ಬಲ ಕೂಡಿಬರುತ್ತದೆ ಎಂಬ ನಂಬಿಕೆಯಿದೆ.

* ವಧು-ವರರ ಮದುವೆ ಸಂದರ್ಭದಲ್ಲಿ ಸುರಿಗಿ ನೀರು ಹಾಕುವಾಗ ಆ ಕೊಡಗಳಲ್ಲಿ ಸ್ವಲ್ಪ-ಸ್ವಲ್ಪ ಭಂಡಾರವನ್ನು ಬೆರೆಸುವರು. ಇದರಿಂದ ಆ ನೂತನ ದಂಪತಿಗಳ ದಾಂಪತ್ಯ ಜೀವನ ಸುಖಕರವಾಗಿರುತ್ತದೆ ಎಂಬ ನಂಬಿಕೆಯಿದೆ.

* ಸುಗ್ಗಿ ಜಾತ್ರೆಯಲ್ಲಿ ಚಂದಾಲಿಂಗೇಶ್ವರ ಹಾಗೂ ಗಂಗಿಮಾಳಮ್ಮನವರ ಮದುವೆಯಾಗುತ್ತದೆ. ಅಂತ ಸಂದರ್ಭದಲ್ಲಿ ಕೆಲವೊಂದಿಷ್ಟು ಕಂಕಣಗಳನ್ನು ಕೊಡುತ್ತಿರುತ್ತಾರೆ. ಅವು ಯಾರಿಗೆ ಸಿಗುತ್ತವೆ

ಅವರಿಗೆ ಬೇಗನೆ ಮದುವೆಯಾಗುವ ಭಾಗ್ಯಸಿಗುತ್ತದೆ ಎನ್ನುವುದು ಕಾಲಕಾಲಂತರದಿಂದ ಬಂದಿರುವ ನಂಬಿಕೆಯಾಗಿದೆ.

* ನವದಂಪತಿಗಳು ತಾವು ಮದುವೆಯಾದ ವರ್ಷವೇ ದಸರ ಹಬ್ಬಕ್ಕೆ ಈ ಜಾತ್ರೆಯಲ್ಲಿ ಭಾಗಿಯಾಗಿ ಅಲ್ಲಿ ನಡೆಯುವ ಉತ್ಸವದಲ್ಲಿ ಪಾಲ್ಗೊಂಡರೆ ತಮಗೆ ಶುಭವಾಗುತ್ತದೆ ಎಂಬ ನಂಬಿಕೆಯಿದೆ.

* ಮದುವೆಯಾಗಿ ಹಲವಾರು ದಿನಗಳು ಕಳೆದರೂ ಮಕ್ಕಳಾಗದವರು ಈ ಅಜ್ಜನ ಜಾತ್ರೆಯಲ್ಲಿ ಸೇವೆ ಮಾಡಿದರೆ ಸಂತಾನ ಫಲ ದೊರೆಯುತ್ತದೆ ಎಂಬ ಜನಜನಿತವಾದ ನಂಬಿಕೆ.

* ದಂಪತಿಗಳಿಗೆ ಮಕ್ಕಳಾದ ನಂತರ ಆ ಮಗುವಿನೊಂದಿಗೆ ಜಾತ್ರೆಗೆ ಹೋಗಿ ಆ ಮಗುವಿನ ಕೈಯಿಂದಲೇ ಗೊರವರ ದೋಣಿಗೆ ಬೆಂಡು, ಬತ್ತಾಸು ಹಾಕಿದರೆ ದಂಪತಿಗಳ ಆರೋಗ್ಯ ವೃದ್ಧಿಸುತ್ತದೆ ಎಂದು ನಂಬಿಕೆಯಿದೆ.

ಮರಣ : (Death)

* ಚಂದಾಲಿಂಗೇಶ್ವರನ ಸ್ಥಾನಿಕರ ಮನೆಯಲ್ಲಿ ಸಾವು ಸಂಭವಿಸಿದ್ದರೆ, ಅವರು ಮೂರುದಿನದ ಸೂತಕವನ್ನು ಕಳೆಯಲು ಈತನ ಸನ್ನಿಧಿಗೆ ಬಂದು, ಬಿಸಿಲು ಬೀಳದ ಬಾವಿಯ ನೀರು ತೆಗೆದುಕೊಂಡು ಪೂಜಾರಿಗಳಿಂದ ಪೂಜಿಸಿಕೊಂಡು ಹೋಗಿ ತಮ್ಮ ಮನೆಯ ತುಂಬಾ ಸಿಂಪಡಿಸಿದರೆ ಆ ಮುಡಿ ಚಟ್ಟ ಹೋಗುತ್ತದೆ ಎಂದು ನಂಬಿರುತ್ತಾರೆ.

* ಈತನ ಸ್ಥಾನಿಕರು ತಮ್ಮ ಊರಿನಲ್ಲಿ ಅಥವಾ ಯಾವುದೇ ಕಡೆಯ ಭಾಗದಿಂದ ಸಾವಿನ ಸುದ್ದಿ ಕೇಳಿ ಬಂದರೆ ಅವರ ಶವಸಂಸ್ಕಾರವಾಗದೆ ಊಟಮಾಡಿದರೆ ವಿಷಗೂಳು ತಿಂದಂತೆ ಎಂದು ನಂಬಲಾಗಿದೆ.

ಹಬ್ಬ-ಹರಿದಿನ : (Feast Day)

ಚಂದಾಲಿಂಗೇಶ್ವರನು ಉಗ್ರವಾದ ದೇವರು ಎಂಬ ನಂಬಿಕೆಯನ್ನು ನಮ್ಮ ಪೂರ್ವಜರು ಮೊದಲೆ ಈ ದೇವರ ಜಾತ್ರೆ, ಹಬ್ಬ, ಹರಿದಿನಗಳಲ್ಲಿ ಹಲವಾರು ನಂಬಿಕೆಗಳನ್ನು ಹೊಂದಿದ್ದಾರೆ. ಅಂತಹವುಗಳು ಹೀಗಿವೆ;

* ಕೊಂತಗಳ ಸ್ಪರ್ಧೆಯಲ್ಲಿ ಐಹೊಳೆ ಕೊಂತ ಮಿಂಚಿದರೆ ಆ ವರ್ಷ ಮುಂಗಾರಿಯಲ್ಲಿ ಮಳೆ-ಬೆಳೆಗಳು ಸಂಪಾಗುತ್ತವೆ ಎಂದು ನಂಬುತ್ತಾರೆ.

* ಸರಪಳಿ ಪವಾಡದ ಸಂದರ್ಭದಲ್ಲಿ ಆ ಸರಪಳಿಯ ಕೊಂಡಿ ಕಿತ್ತುಕೊಂಡು ಯಾರಿಗಾದರೂ ಸಿಕ್ಕರೆ ಅವರ ಜೀವನ ಪೂರ್ತಿ ಸುಖ ಸಂಪತ್ತು ಸಾಕಷ್ಟು ದೊರೆಯುತ್ತದೆ ಎಂಬ ನಂಬಿಕೆಯಿರುತ್ತದೆ.

* ಮಳ್ಳಯ್ಯನವರು, ವಗ್ಗಯ್ಯನವರು ಹಾಗೂ ಕೊಂತ ದೇವರುಗಳು ಉತ್ಸವದಲ್ಲಿ ತೊಡಗಿದಾಗ

ಯಾರಾದರೂ ವ್ಯಕ್ತಿಗಳು ಪಾದರಕ್ಷೆಗಳನ್ನು ಹಾಕಿಕೊಂಡು ಬಂದರೆ ಉತ್ಸವಕ್ಕೆ ಅಪಶಕುನ ಎಂದು ತಿಳಿಯುತ್ತಾರೆ.

* ಶಿವರಾತ್ರಿ ಹಬ್ಬದಲ್ಲಿ ಚಂದಾಲಿಂಗೇಶ್ವರನ ವಿಶೇಷ ಪೂಜಾದಿನ ಪೂಜಾರಿಗಳಾದವರು ಪೂಜಾ ವಿಧಾನವನ್ನು ಏನಾದರೂ ಏರುಪೇರು ಮಾಡಿದರೆ ಅವರ ಜೀವನಕ್ಕೆ ಕುತ್ತು ಬರುತ್ತದೆ ಎಂಬುದು ನಂಬಿಕೆ.

* ಸರಪಳಿ ಪವಾಡದ ದಿನ ಸರಪಳಿಯು ಯಾರಿಂದಲೂ ಹನ್ನೆರಡು ಏಟಿನಲ್ಲಿ ಹರಿಯಲಾಗದಿದ್ದರೆ ಪೂಜಾರಿಗಳಿಗೆ ಶಿರಸ್ ಪವಾಡವಾಗುತ್ತದೆ ಎಂದು ನಂಬಲಾಗಿದೆ.

ಭಂಡಾರ ಹಿನ್ನಲೆಯಲ್ಲಿ ವೈದ್ಯ : (Physician in the Wake of the Bandar)

ಚಂದಾಲಿಂಗೇಶ್ವರನ ಪೂಜೆಗೆ ಅತಿ ಮುಖ್ಯವಾಗಿ ಬೇಕಾಗುವಂತಹುದು ಬಂಢಾರ. ಬಂಢಾರ ಎಂದರೆ store, stock ಎನ್ನುವ ಅರ್ಥದ ಜೊತೆಗೆ ಬೊಕ್ಕಸ, ಕೋಶ ದೇವರ ಪ್ರಸಾದ ರೂಪವಾಗಿ ಕೊಡುವ ಅರಿಷಿಣ ಎಂಬ ಇತ್ಯಾದಿ ಅರ್ಥಗಳಿವೆ. ಭಂಡಾರವೇ ಆತನಿಗೆ ಪ್ರಿಯವಾದುದ್ದರಿಂದ 'ಭಂಡಾರದಯ್ಯ' ಎಂದು ಕರೆಯುತ್ತಾರೆ.

* ವೈದ್ಯಕೀಯ ದೃಷ್ಟಿಕೋನದಿಂದ ಭಂಡಾರದ ಬಗ್ಗೆ ತಿಳಿದಾಗ ಇದರಿಂದ ಕಾಯಿಲೆಯನ್ನು ತೊಲಗಿಸುವಂತ "ರೋಗನಿರೋಧಕ ಗುಣ" ಇದೆ ಎಂದೆನಿಸುತ್ತದೆ.

* ಭಂಡಾರವನ್ನು ಧಾರ್ಮಿಕ ಆಚರಣೆಯಲ್ಲಿ ಪವಿತ್ರವೆಂದು ಭಾವಿಸಲಾಗಿದೆ. ಇದಲ್ಲದೆ ಮಹಿಮೆ ಹಿನ್ನಲೆಯಲ್ಲಿ ಭಂಡಾರ ಜನಪದರ ಮನಸ್ಸಿನಲ್ಲಿ ಗಾಢವಾಗಿ ಸಕಲ ರೋಗಗಳ ನಿರೋಧಕವಾಗಿದೆ ಎಂಬ ಭಾವನೆ ಬೆಳೆದಿದೆ.

* ಕೆಲವು ವ್ಯಕ್ತಿಗಳಿಗೆ ನಿಗೂಢವಾದಂತ ಕಾಯಿಲೆಗಳಾದ ಸಂಕಟವಾಗುವುದು, ಹೊಟ್ಟೆಯಲ್ಲಿ ಉರಿ, ಮೈ ಉರಿದಂತೆಯಾಗುವುದು, ತಲೆಯಲ್ಲಿ ಒಂದೇಸವನೆ ಚುಚ್ಚಿದಂತೆ ಅಗುವುದು. ಇಂಥ ಹಲವಾರು ಸಮಸ್ಯೆಗಳಿಗೆ ಪರಿಹಾರವಾಗಿ ಭಂಡಾರ, ಬಿಸಿನೀರು, ಬಿಲ್ವಪತ್ರೆ ಕಾಯಿಯೊಳಗಿನ ಅಂಟನ್ನು ತೆಗೆದುಕೊಂಡು ನೀರಿನೊಳಗೆ ಬೆರೆಸಿ ರೋಗಿಗೆ ಕುಡಿಸಿ, ಎಲ್ಲದಕ್ಕೂ ಅಜ್ಜ ಅದನ ಆರಾಮಾಗತ್ತ ನಡಿರಿ ಎಂದು ಪೂಜಾರಿಗಳು ಹೇಳುವಂತ ನಂಬಿಕೆಯಿದೆ.

* ತಾಯಿಯಂದಿರು ತಮ್ಮ ಮಗು ಹೆಚ್ಚಾಗಿ ಕಿರಿ ಕಿರಿ ಮಾಡುತ್ತಿದ್ದರೆ ಒಂದು ಚಮಚದಲ್ಲಿ ತಮ್ಮ ಮೊಲೆ ಹಾಲಿನಲ್ಲಿ ಭಂಡಾರ ಹಾಕಿ ಕಲಿಸಿ ಕುಡಿಸಿದರೆ ಮಗುವು ಅಳುವುದನ್ನು ನಿಲ್ಲಿಸುತ್ತದೆ ಎಂಬ ನಂಬಿಕೆಯಿದೆ.

ಪಶುವೈದ್ಯ : (The veterinarian)

ಆದಿಕಾಲದಿಂದ ಮಾನವ ಮೊದಲು ಪಶುಪಾಲನಾ ವೃತ್ತಿಯಲ್ಲಿ ಬಂದಿದ್ದಾನೆ. ಅಂದಿನಿಂದ ಇಂದಿನವರೆಗೂ ಮನುಷ್ಯ ತನ್ನ ಜೀವನೋಪಾಯಕ್ಕೆ ಪಶುಗಳನ್ನೆ ಹೆಚ್ಚಾಗಿ ಅವಲಂಬಿಸಿದ್ದಾನೆ.

ಕೃಷಿಗೆ ಬೇಕಾದಂತ ಜಾನುವಾರುಗಳನ್ನು ಅತ್ಯಂತ ಹೆಚ್ಚು ಕಾಳಜಿಯಿಂದ ಸಾಕುತ್ತಾನೆ. ಆದ್ದರಿಂದ ನಮ್ಮ ಜನಪದರು ಅವುಗಳಿಗೂ ಕಾಯಿಲೆ ಬಂದರೆ ಭಂಡಾರದ ಉಪಯೋಗವನ್ನು ಮಾಡಿಕೊಂಡು ಕೆಲವು ಕಾಯಿಲೆಯನ್ನು ವಾಸಿಮಾಡುವರು.

* ಜನಪದರು ತಮ್ಮ ದನಕರುಗಳಿಗೆ ಹೊಟ್ಟೆ ಉಬಾರವಾಗಿದ್ದರೆ, ಇವರು ಬಿಸಿನೀರನ್ನು ಕಾಯಿಸಿ ಅದರೊಳಗೆ ಭಂಡಾರವನ್ನು ಹಾಕಿ ಬೆರೆಸಿ ಗೊಟ್ಟಗಳಿಂದ ಪ್ರಾಣಿಗಳಿಗೆ ಕುಡಿಸುವರು. ಇದರಿಂದ ಉಬಾರವಾದ ಹೊಟ್ಟೆ ಕರಗಿ ಸಾಪಾಗುತ್ತದೆ ಎಂಬ ಅಚಲವಾದ ನಂಬಿಕೆ ಇವರಲ್ಲಿರುತ್ತದೆ.

* ಕೆಲವೊಂದು ಸಂದರ್ಭದಲ್ಲಿ ಪಶುಗಳು ಸರಿಯಾಗಿ ಮೇವನ್ನು ತಿನ್ನದಿದ್ದಾಗ ಮೇವಿನ ರಾಶಿಯನ್ನು ಬಿಚ್ಚಿ ಅದಕ್ಕೆ ಭಂಡಾರವನ್ನು ಸಿಂಪಡಿಸಿ ದನಗಳಿಗೆ ಹಾಕಿಬಿಟ್ಟರೆ ಸರಳವಾಗಿ ತಿನ್ನುತ್ತವೆ ಎಂದು ನಂಬಿರುವರು.

* ಹಸುಗಳು, ಎಮ್ಮೆಗಳು ಹಾಲನ್ನು ಸರಿಯಾಗಿ ಕೊಡದಿದ್ದಾಗ ಕಲಗಚ್ಚಿನಲ್ಲಿ ಅಥವಾ ಬಾನಿಯಲ್ಲಿ ಭಂಡಾರ ಹಾಕಿ ಕುಡಿಸುವುದರಿಂದ ಸರಿಯಾದ ಹಾಲನ್ನು ಕೊಡುತ್ತವೆ ಎಂಬ ನಂಬಿಕೆ ಹೊಂದಿರುವರು.

ಹೀಗೆ ನಮ್ಮ ಜನಪದರು ಚಂದಾಲಿಂಗೇಶ್ವರನ ಬಂಢಾರವನ್ನು ತಮ್ಮ ಜಾನುವಾರುಗಳಿಗೆ ಆರೋಗ್ಯ ದೃಷ್ಟಿಯಿಂದ ನಂಬಿ ಸ್ವೀಕರಿಸುತ್ತಾ ತೊಂದರೆಗಳನ್ನು ನಿವಾರಿಸಿಕೊಳ್ಳುತ್ತಿದ್ದಾರೆ. ಒಟ್ಟಾರೆ ಇಲ್ಲಿ ಭಂಡಾರವನ್ನೇ ಪ್ರಮುಖ ಆಧಾರವಾಗಿಟ್ಟುಕೊಂಡು ಎಲ್ಲಾ ರೀತಿಯ ಸಮಸ್ಯೆಗಳಿಗೆ ನಿವಾರಣೋಪಾಯವೆಂಬಂತೆ ಬಳಸಲಾಗುತ್ತಿದೆ. ಇದು ಜನಪದರ ಆತ್ಮ ತೃಪ್ತಿಯ ಸಂಕೇತವಾಗಿ ಇರುವ ಭಂಡಾರವು ಅವರ ನಂಬಿಕೆ ಸಂಜೀವಿನಿಯಾಗಿದೆ.

ಗೊರವಯ್ಯ ವೈದ್ಯ : (Goravaya Physician)

ಜನರಿಗೆ ಮಾರಕವಾಗುತ್ತಿದ್ದ ಮಣಿ-ಮಲ್ಲಾಸುರ ಎಂಬ ರಾಕ್ಷಸರನ್ನು ಕೊಲ್ಲಲು ಶಿವನು ಕಂಬಳಿ ಹೊದ್ದು ಗೊರವನ ವೇಷದಲ್ಲಿ ಬಂದು ರಾಕ್ಷಸರನ್ನು ಸಂಹಾರ ಮಾಡಿದನು. ಅಂದಿನ ಶಿವನ ರೂಪವೇ ಇಂದು ಗೊರವರಾಗಿ ತೋರುತ್ತಾರೆ. ಆದರೆ ಇಲ್ಲಿ ಗೊರವರೆಂದರೆ ಶಿವನ ಒಂದು ರೂಪವೆಂದು ಜನಪದರು ನಂಬುತ್ತಾರೆ. ಗೊಗ್ಗಯ್ಯಗಳಿಗೆ ಗೊರವರೆಂದು ಕರೆಯಲಾಗಿದೆ. ಗೊರವ ಎಂದರೆ ಶಿವ ಬಿಕ್ಷು ಎಂದರ್ಥ, ಡಾ.ಎಂ. ಚಿದಾನಂದಮೂರ್ತಿ ಅವರ ಅಭಿಪ್ರಾಯದಂತೆ ಗುರು ಎಂಬ ಸಂಸ್ಕೃತ ಪದದ ಬಹುವಚನ ರೂಪ ಗುರುವಃ ಎಂಬುದೇ ಗುರವ ಎಂದಾಗಿ ಅದಕ್ಕೆ 'ಅಡಿಗಳ' ಎಂಬುದು ಸೇರಿ ಗುರುವಡಿಗಳ ಅಥವಾ ಗೊರವಡಿಗಳ ಎಂದಾಗುತ್ತದೆ. ಆದರೆ ಜನಪದರ ನಂಬಿಕೆಯ ದೃಷ್ಟಿಯಲ್ಲಿ ಶಿವನೆ ಮೈಲಾರನಾಗಿ ಗೊರವರ ವೇಷದಲ್ಲಿ ಬಂದನೆಂದು ನಂಬುತ್ತಾರೆ. ಗೊರವಯ್ಯನವರು ತಮ್ಮ ಕೊರಳಲ್ಲಿ ಹಾಕಿಕೊಂಡಿರುವ ಭಂಡಾರದ

ಚೀಲದಲ್ಲಿನ ಭಂಡಾರವನ್ನು ಭಕ್ತರ ಹಣೆಗೆ ಹಚ್ಚಿದರೆ ಅದು ಶುಭವಾಗುತ್ತದೆ ಎಂಬ ನಂಬಿಕೆಯೇ ಜನಪದರದಾಗಿದೆ. ಅದರಂತೆಯೇ ಗೊರವಯ್ಯನವರು ವೈದ್ಯಕ್ಕೆ ಸಂಬಂಧಿಸಿದ ಅಂಶಗಳನ್ನು ಈ ಕೆಳಗಿನಂತೆ ನಮೂದಿಸಲಾಗಿದೆ.

* ಜಾತ್ರೆಯಲ್ಲಿ ಹಾಗೂ ಇತರೆ ದಿನಗಳಲ್ಲಿ ಗೊರವಯ್ಯ ಮಕ್ಕಳಿಗೆ ಜಡ್ಡು ಜಾಪತ್ರೆಗಳು ಬಂದಾಗ ಆ ಮಕ್ಕಳಿಗೆ ಕರಿಯ ಕಂಬಳಿಯಿಂದ ಉಣ್ಣೆ (ದಾರ)ಯನ್ನು ತೆಗೆದು ಚಿಕ್ಕಮಕ್ಕಳ ಉಡದಾರಕ್ಕೆ ಕಟ್ಟಿ ಅವರ ಕಿವಿಯಲ್ಲಿ, ಚಂದಾಲಿಂಗ, ಚಂದಾಲಿಂಗ ಎಂದು ಹೇಳಿ ಢಮರುಗ ಬಾರಿಸಿ ಬಿಡುವರು. ಈ ರೀತಿ ಮಾಡುವುದರಿಂದ ಮಕ್ಕಳಿಗೆ ಯಾವ ಕಾಯಿಲೆ ಸುಳಿಯಲಾರವು ಎಂಬುದು ನಂಬಿಕೆಯಾಗಿದೆ.

* ತಂದೆತಾಯಿಗಳು ಮಗುವಿನ ಆರೋಗ್ಯ ದೃಷ್ಟಿಯಿಂದ ಗೊರವಯ್ಯನ ಹತ್ತಿರ ಕರೆದುಕೊಂಡು ಬಂದು ಮಗುವಿನ ಕಿವಿಯಲ್ಲಿ ಗೊರವಯ್ಯನವರಿಂದ 'ಉಫ್' ಎಂದು ಊದಿಸುತ್ತಾರೆ. ಇದಕ್ಕೆ ಕಾರಣವಾಗಿ ಮಗುವಿನ ತಲೆಯಲ್ಲಿರುವ ಯಾವುದೇ ಜಂಜಾಟಗಳು ಒಂದು ಕಿವಿಯಿಂದ ಇನ್ನೊಂದು ಕಿವಿಯ ಮೂಲಕ 'ಉಫ್' ಎಂದು ಊದಿದಾಗ ಹೋಗಿಬಿಡುತ್ತವೆ ಎಂಬ ಬಲವಾದ ನಂಬಿಕೆಯಿದೆ. ಜಂಜಾಟಗಳೆಂದರೆ ಮಗುವಿಗೆ ಉಂಟಾಗುವ ವೃಥಾ, ಹೆದರಿಕೆ, ಭಯ-ಆತಂಕ, ಮುಂತಾದ ಭಾವನೆಗಳು ಮಗುವಿನ ತಲೆಯಿಂದ ಕಳೆದುಹೋಗುತ್ತವೆ ಎಂದು ನಮ್ಮ ಜನಪದರ ನಂಬಿಕೆಯಾಗಿವೆ.

* ಕೆಲವು ಕುಟುಂಬಗಳು ಪರಂಪರೆಯಿಂದ ಸಂಪ್ರದಾಯಗಳನ್ನು ಆಚರಿಸಿಕೊಂಡು ಬಂದವರು ಹಾಗೂ ಚಂದಾಲಿಂಗೇಶ್ವರನನ್ನು ತಮ್ಮ ಮನೆ ದೇವರನ್ನಾಗಿ ಮಾಡಿಕೊಂಡು ಬಲವಾಗಿ ನಂಬಿರುತ್ತಾರೆ. ಇವರ ನಂಬಿಕೆಯಲ್ಲಿ ಪ್ರತಿಯೊಂದು ಸಮಸ್ಯೆಯು ಉಪಶಮನವಾಗುತ್ತವೆ. ಪ್ರಸ್ತುತ ಗೊರವಯ್ಯನವರ ಉಪಶಮನಕ್ಕೆ ಜಾತ್ರೆಗೆ ಬಂದಿರುವ ಜನಗಳನ್ನು ಕೇಳಿದರೆ, ಅವರು ತಮ್ಮ ಗ್ರಾಮೀಣ ಮಾತಿನಲ್ಲಿ ಹೀಗೆ ವ್ಯಕ್ತಪಡಿಸುತ್ತಾರೆ. "ಭಂಡಾರ ಅಂದ್ರ ಹಿಂದ್ಕ ಪರಮಾತ್ಮನ ಕಾಲ್ದಾಗಿನಿಂದ ಬಂದೈತ್ರಿ; ನಾವು ಅದ್ನ ಶಿವನ ಭಂಡಾರಂತ ಹಚ್ಚಿಗೊಂತವ್ರಿ, ಯಾಕೆಂದ್ರ ಇದನ್ನ ನಂಬಿದವರಿಗೆ ಅಜ್ಜಂದ ಭಂಡಾರಾಗತ ನಂಬದವರಿಗೆ ಅರಿಷ್ನಿತರ ಕಾಣ್ಸತೈತಿರ್ರಿ, ಇದರಿಂದ ನಮಗೆ ಒಳ್ಳೆಯದಾಗಾತೈತಿರಿ" ಎಂದು ಭಂಡಾರದ ಬಗ್ಗೆ ಶಿರಹಟ್ಟಿಯ ಬಸಮ್ಮನವರು ನುಡಿಯುತ್ತಾರೆ.

ವ್ಯವಸಾಯ : (Agriculture)

ಈ ಕ್ಷೇತ್ರದ ಜನರು ಕೃಷಿಕಾರರು ಹಾಗೂ ಕೂಲಿಕಾರರು ಹೆಚ್ಚಿನ ಪ್ರಮಾಣದಲ್ಲಿ ಕಾಣುತ್ತಾರೆ. ಇವರೆಲ್ಲ ತಮ್ಮ ಆರಾಧ್ಯ ದೈವರಾಗಿ ಚಂದಾಲಿಂಗೇಶ್ವರನ್ನು ಮಾಡಿಕೊಂಡಿದ್ದಾರೆ. ಅದಕ್ಕಾಗಿ ಇಲ್ಲಿಯ ಜನರು ಯಾವುದೇ ಕೆಲಸ ಕಾರ್ಯವನ್ನು ಮಾಡಿದರೆ, ತಮ್ಮ ಆದಿ ದೈವವನ್ನು ನೆನೆದು ತಮ್ಮ ಕ್ರಿಯೆಗಳಾದ ಬಿತ್ತುವಾಗ, ಊಳುವಾಗ, ಕುಂಟೆ, ಕೂರಿಗೆ ಹೊಡೆಯುವಾಗ ವ್ಯಾಪಾರಕ್ಕೆ ತೆರಳುವಾಗ ಹೀಗೆ ಇತ್ಯಾದಿ ಕೆಲಸಕಾರ್ಯಗಳಲ್ಲಿ ಈತನನ್ನು ಆರಾಧಿಸುವ ಪದ್ಧತಿ ರೂಢಿಯಲ್ಲಿದೆ. ಅದರಂತೆ ವರ್ಷದಲ್ಲಿ ನಡೆಯುವ ಎರಡೂ ಜಾತ್ರೆಗಳ ಕಾರಣಿಕದ ನುಡಿಯನ್ನು ಅನುಸರಿಸುತ್ತಾರೆ.

* ರೈತರು ತಾವು ಯಾವುದೇ ಬೆಳೆಯನ್ನು ಬಿತ್ತಲಿ ಈ ಅಜ್ಜನ ಬಂಢಾರವನ್ನು ತಾವು ಬಿತ್ತುವ ಕಾಳು ಕಡಿಯಲ್ಲಿ ಬೆರೆಸುವರು. ಇದರಿಂದ ನಾಟಿಯು ನಾಶ ಹೊಂದದೆ ಬೆಳೆಯು ಚೆನ್ನಾಗಿ ಬರುವುದೆಂಬ ನಂಬಿಕೆ ಇದೆ.

* ಈ ಕೃಷಿಕರು ತಾವು ಬಿತ್ತಿದ ಬೆಳೆಗಳಿಗೆ ಯಾವುದಾದರೂ ಕಾಯಿಲೆ ಅಥವಾ ಕ್ರಿಮಿಕೀಟಗಳು ಬಂದರೆ ಇವರು ಚಂದಾಲಿಂಗೇಶ್ವರನ ಸನ್ನಿಧಿಗೆ ಹೋಗಿ ಬಿಸಿಲು ಬೀಳದ ಬಾವಿಯ ನೀರನ್ನು ಪೂಜಾರಿಗಳಿಂದ ಪೂಜಿಸಿಕೊಂಡು ಬೆಳೆಗಳಿಗೆ ಸಿಂಪಡಿಸಿದರೆ ಬೇಗ ವಾಸಿಯಾಗಿ ಬೆಳೆಯು ಚೆನ್ನಾಗಿ ಬೆಳೆಯುತ್ತದೆ ಎಂಬುದನ್ನು ಬಲವಾಗಿ ನಂಬಿರುವರು.

* ಕೃಷಿಕರು ತಮ್ಮ ಬೆಳೆಗಳು ಯಾವುದೇ ಕಾಯಿಲೆಗಳಿಗೆ ತುತ್ತಾಗಬಾರದು ಮತ್ತು ಫಸಲು ಹುಲುಸಾಗಬೇಕೆಂದು ಸುಕ್ಷೇತ್ರದಿಂದ ಒಂದು ಕಾಯಿಯನ್ನು ಪೂಜಾರಿಗಳಿಂದ ಪೂಜಿಸಿಕೊಂಡು ಬಂದು ಅದನ್ನು ತಮ್ಮ ಹೊಲಗಳಲ್ಲಿ ಇರುವ ಮರಗಳಿಗೆ ಕಟ್ಟುವರು. ಇದರಿಂದ ತಾವು ನಂಬಿಕೆ ಇಟ್ಟುಕೊಂಡಿದ್ದು ನೆರವೇರುತ್ತವೆ ಎಂಬುದು ತಿಳಿಯುತ್ತದೆ.

* ಸುಗ್ಗಿಯ ಜಾತ್ರೆಯಲ್ಲಿ ನಡೆಯುವಂತಹ ಸರಪಳಿ ಪವಾಡದಿಂದ ವ್ಯವಸಾಯಕ್ಕೆ ಸಂಬಂಧಿಸಿದ ಭವಿಷ್ಯವನ್ನು ನಂಬುತ್ತಾರೆ ಆ ಪವಾಡ ನಡೆಯುವಾಗ ಬೆಸ ಸಂಖ್ಯೆಯ ಪ್ರಯತ್ನದಲ್ಲಿ ಸರಪಳಿ ಹರಿದರೆ ಮಾತ್ರ ಹಿಂಗಾರಿ ಮಳೆ ಬೆಳೆ ಸಂಪೂರ್ಣ ಎಂದು ನಂಬಿರುವರು.

* ರೈತರು ತಮ್ಮ ಹೊಲಗಳ ಬಿತ್ತನೆ, ಕಟಾವು, ಖಣ, ಪ್ರಾರಂಭಿಸುವುದಕ್ಕೂ ಈ ಚಂದಾಲಿಂಗೇಶ್ವರನ ವಾರವಾದ ರವಿವಾರವನ್ನೇ ಕಾಯುತ್ತಾರೆ. ಕಾರಣ ಆತನ ವಾರವಾಗಿರುವುದರಿಂದ ಶುಭದಿನವೆಂದು ಭಾವಿಸುವರು.

ಒಟ್ಟಾರೆ ಈ ಕೃಷಿಕರ ನಂಬಿಕೆಯ ಹಿನ್ನೆಲೆಯಲ್ಲಿ ಉತ್ತುವ, ಬಿತ್ತುವ, ಪ್ರತಿಯೊಂದು ಕ್ರಿಯೆಯನ್ನು ಸಾಗಿಸುತ್ತಾ ಬಂದಿರುವರು. ಹವಾಮಾನದ ವೈಪರೀತ್ಯದಿಂದ ಮಳೆಯೂ ಹೆಚ್ಚಾಗಿ ಸುರಿದು ಬೆಳೆಗಳು ನಾಶವಾದಾಗ ಮಳೆ ಇಲ್ಲದಾಗ ಬೆಳೆಗಳು ಭೂಮಿತಾಯಿಯ ಮಡಿಲ ಸೇರಿದಾಗ ಮುಂತಾದ ಯಾವುದೇ ಸಾರ್ವತ್ರಿಕ ಅನಾಹುತಗಳು ಘಟಿಸಿದಾಗ ಕ್ಷೇತ್ರದ ಜನರು ಚಂದಾಲಿಂಗೇಶ್ವರನಿಗೆ ಸರಿಯಾಗಿ ನಡೆದುಕೊಂಡಿಲ್ಲ, ಕಾರಣ ಚಂದಾಲಿಂಗ ಈತರ ಮಾಡಿದ್ದಾನೆ ಎಂದು ನಂಬುತ್ತಾರೆ. ಕಾರಣಿಕಕ್ಕೆ ಹೋಲಿಸಿ ನೋಡಿ ಕಾರಣಿಕದಲ್ಲಿ ವಿಫಲವಾದ ಅಂಶಗಳು ಕಂಡು ಬಂದರೆ, ಕಾರಣಿಕದ ಮಳ್ಳಯ್ಯಜ್ಜ ಸರಿಯಾದ ರೀತಿಯಲ್ಲಿ ವ್ರತಮಾಡಿಲ್ಲವೆಂದು ಆತನನ್ನು ದೂರುತ್ತಾರೆ. ಒಟ್ಟಾರೆ ಈ ಕೃಷಿಕರು ಭಾವಿಸುವದೇನೆಂದರೆ ಯಾವುದೇ ಒಳ್ಳೆಯದಾದರೆ ಅದು ಚಂದಾಲಿಂಗೇಶ್ವರನೇ ಮಾಡಿರುವನ್ನೆನ್ನುತ್ತಾರೆ. ಕೆಟ್ಟದ್ದು ಗತಿಸಿದರೂ ಸಹ ತಮ್ಮ ತಪ್ಪಿಗೆ ಚಂದಾಲಿಂಗೇಶ್ವರನು ಶಿಕ್ಷೆ ನೀಡಿದ್ದಾನೆನ್ನುತ್ತಾರೆ.

ಇತರೆ ನಂಬಿಕೆಗಳು : (Other Beliefs)

* ಭಕ್ತರು ತಾವು ಬೇಡಿಕೊಂಡ ಅವಧಿಗೆ ಮುಡುಪು ತೀರಿಸದೆ ಇದ್ದರೆ ಕೆಡುಕು ಆಗುತ್ತದೆ ಎನ್ನುವಂಥ ನಂಬಿಕೆ ಜನಪದರಿಗೆ ಇದೆ.

* ಚಂದಾಲಿಂಗನ ಭಂಡಾರವನ್ನು ಭಕ್ತರು ಒಂದು ಚೀಟಿಯಲ್ಲಿ ಕಟ್ಟಿಕೊಂಡು ತಮ್ಮ ಕೆಲಸಗಳಿಗೆ ಹೋದರೆ ಆ ಕಾರ್ಯಗಳೆಲ್ಲವೂ ಯಶಸ್ವಿಯಾಗುತ್ತವೆ ಎನ್ನುವ ನಂಬಿಕೆಯಿದೆ.

* ಎಷ್ಟೋ ಜನರಿಗೆ ಗಂಡು ಸಂತಾನವಿರಲಿಲ್ಲ ಅಂತ ಅವರಿಗೆ ಚಂದಾಲಿಂಗನೆ ಗಂಡು ಸಂತಾನ ದಯಪಾಲಿಸಿದನು ಎಂಬ ನಂಬಿಕೆ.

* ಈ ದೇವರ ವಾರ ರವಿವಾರವಾಗಿರುವುದರಿಂದ ಅದೇ ದಿನ ಹೊಸ ಬಟ್ಟೆ, ಪಾತ್ರೆ, ಮುಂತಾದವುಗಳನ್ನು ಕೊಂಡು ಕೊಂಡು ಬಂದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯಿದೆ.

* ತುಪ್ಪದಮಾಳಮ್ಮನಿಗೆ ತುಪ್ಪದ ದೀಪ ಹಚ್ಚುವುದರಿಂದ ಮನೆಯಲ್ಲಿ ಹೈನುಗಾರಿಕೆ ಸಮೃದ್ಧಿಯಾಗುತ್ತದೆ ಎಂಬ ನಂಬಿಕೆಯಿದೆ.

* ರವಿವಾರ ಚಂದಾಲಿಂಗೇಶ್ವರನ ವಾರವಾಗಿರುವುದರಿಂದ ಆ ದಿನ ದೋಣಿ ತುಂಬುವ ಕಾರ್ಯವನ್ನು ಮಾಡಿಸುವುದರಿಂದ, ಭಕ್ತರು ಉಪವಾಸ ಮಾಡುವುದರಿಂದ, ಜೊತೆಗೆ ದೇವಸ್ಥಾನಕ್ಕೆ ಹೋಗಿ ಬರುವುದರಿಂದ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯಿದೆ.

ಒಟ್ಟಾರೆ ಚಂದಾಲಿಂಗೇಶ್ವರ ಈ ಕ್ಷೇತ್ರದ ಜನಪದರ ಆರಾಧನ ದೈವವಾಗಿದ್ದು, ಜನರ ಜೀವನಕ್ರಮ ಹಾಗೂ ಪ್ರತಿ ಹೆಜ್ಜೆ-ಹೆಜ್ಜೆಗೂ ತನ್ನದೇ ಆದ ಛಾಪನ್ನು ಮೂಡಿಸಿದ್ದಾರೆ. ವ್ಯವಸಾಯಕ್ಕೆ ಸಂಬಂಧಿಸಿದ ಪ್ರಾಣಿ-ಪಕ್ಷಿ, ನೆಲ-ಜಲ, ಇವುಗಳೆಲ್ಲವಕ್ಕೂ ಸಂಬಂಧಿಸಿದಂತೆ, ದೇವರಿಗೆ ನಡೆದುಕೊಳ್ಳುವಲ್ಲಿ ಜೀವನದ ಪ್ರತಿಯೊಂದು ಸ್ತರಗಳಲ್ಲಿ ಜನಪದರು ನಂಬಿಕೆಯನ್ನು ಹುಟ್ಟು ಹಾಕಿದ್ದಾರೆ. ಆ ಮೂಲಕ ಅವರು ಸುಖ-ಸಂತೋಷವನ್ನು ಕಾಣುತ್ತಾರೆ.

ವಿಧಿ-ನಿಷೇಧಗಳು: (Destiny-Prohinitions)

ಜನಪದರ ಬದುಕಿನಲ್ಲಿ ವಿಧಿ-ನಿಷೇಧಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ. ನಂಬಿಕೆಗಳ ಹಿಂದೆ ನಿಷೇಧವು ಜೊತೆಗಿರುತ್ತದೆ. ಒಂದು ವಸ್ತು, ಒಂದು ಘಟನೆ, ಒಂದು ಆಚರಣೆಗಳನ್ನು, ಮಾಡಲೇಬೇಕು ಎನ್ನುವಂತದ್ದು ವಿಧಿಯಾದರೆ, ಕೆಲವು ಕಡ್ಡಾಯವಾಗಿ ಮಾಡಲೇಬಾರದು ಎನ್ನುವಂತೆ ಇರುತ್ತವೆ ಅವೇ ನಿಷೇಧಗಳು. ಸಾಮಾಜಿಕ ವ್ಯವಸ್ಥೆಗೆ ಅನುಗುಣವಾಗಿ ಪರಂಪರಾಗತವಾಗಿ ವ್ಯವಸ್ಥಿತವಾಗಿ ರೂಢಿಸಿಕೊಂಡು ಬಂದ ಕಟ್ಟಳೆಗಳೇ ನಿಷೇಧಗಳು. ಒಳಿತು ಕೇಡು ದೃಷ್ಟಿಯಿಂದ ಸಮಾಜದಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಂಪ್ರದಾಯಬದ್ಧವಾಗಿ ರೂಢಿಸಿಕೊಂಡು ಬಂದಿರುವ ಈ ಕಟ್ಟಳೆಗಳನ್ನು ನಿಷೇಧ ಎಂದು ಕರೆಯುವರು.

* ಚಂದಾಲಿಂಗೇಶ್ವರನ ವಾಹನವು ಕುದುರೆ ಆಗಿರುವುದರಿಂದ ಇದನ್ನು ಪವಿತ್ರವೆಂದು ತಿಳಿದು ಕುದುರೆ ಕಾರರು ಎಂದೂ ಕುದುರೆಯನ್ನು ಏರಬಾರದು ಎಂಬ ನಿಷೇಧವಿದೆ.

* ಚಂದಾಲಿಂಗೇಶ್ವರ ಆಚರಣೆಯಲ್ಲಿ ಪ್ರಾಣಿಬಲಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಯಾವುದೇ ರೀತಿಯ ಕುರಿ-ಕೋಳಿ ಹಸು ಮುಂತಾದ ಪ್ರಾಣಿಗಳನ್ನು ದೇವರ ಹೆಸರಿನಲ್ಲಿ ಬಲಿಕೊಡುವ ಹಾಗಿಲ್ಲ.

* ಚಂದಾಲಿಂಗೇಶ್ವರ ಹೊಂಡದಲ್ಲಿ ಕೊಂತ ದೇವರ ಸ್ನಾನ ನಡೆಯುವಾಗ ಯಾರು ಆ ಹೊಂಡದ ಮೇಲೆ ಕಾಲು ಇಳಿಬಿಟ್ಟು ಕೂಡುವಹಾಗಿಲ್ಲ.

* ಜಾತ್ರೆಯಲ್ಲಿ ಮಳ್ಳಯ್ಯಜ, ವಗ್ಗಯ್ಯನವರು, ಕೊಂತ ದೇವರು, ಹಾಗೂ ಕಂಚಿವೀರರ ಪಕ್ಕಕ್ಕೆ ಯಾರೂ ಪಾದರಕ್ಷೆಗಳನ್ನು ಹಾಕಿಕೊಂಡು ಬರುವುದನ್ನು ನಿಷೇಧಿಸಲಾಗಿದೆ.

* ಬಿಸಿಲು ಬೀಳದ ಬಾವಿಯಲ್ಲಿ ಯಾರು ಅಲ್ಲಿಯೇ ನೀರು ಕುಡಿಯುವಂತಿಲ್ಲ, ಹಾಗೂ ಆ ನೀರಿಗೆ ಕಾಲು ತಾಕಿಸುವಂತಿಲ್ಲ ಎಂಬ ನಿಷೇಧವಿದೆ.

* ಖಂಡೇದೇವರು ಬರೋವರೆಗೂ ಜಾತ್ರೆಯನ್ನು ನಡೆಸುವುದು ನಿಷಿದ್ಧ.

* ಊರಲ್ಲಿ ಯಾರಾದರೂ ತೀರಿಕೊಂಡರೆ ಮಳ್ಳಯ್ಯಜ್ಜ, ವಗ್ಗಯ್ಯನವರು, ಕುದುರೆಕಾರರು, ಕೊಂತಧಾರಿಗಳು, ಶವಸಂಸ್ಕಾರ ಆಗುವವರೆಗೂ ಊಟ ಮಾಡುವಂತಿಲ್ಲ.

* ಗೊರವರು ಭಿಕ್ಷಾಟನೆಯಲ್ಲಿ ಪಾದರಕ್ಷೆಗಳನ್ನು ಹಾಕಿಕೊಳ್ಳುವಂತಿಲ್ಲ.

* ಚಂದಾಲಿಂಗೇಶ್ವರನ ಮೂರೂ ಹೊತ್ತಿನ ನೈವೇದ್ಯಕ್ಕೆ ಪೂಜಾರಿಗಳು ಹಾಗೂ ಇನ್ನಿತರರು ತಮ್ಮ ಉಸಿರು ಬಡಿಸಬಾರದು.

* ಚಂದಾಲಿಂಗೇಶ್ವರನ ಸ್ಥಾನಿಕರು ಊಟ ಮಾಡುವಾಗ ಆಕಸ್ಮಿಕವಾಗಿ ದೀಪ ಆರಿದರೆ ತಾಟಿನಲ್ಲಿ ಇನ್ನು ಎಷ್ಟು ಆಹಾರವಿರುತ್ತದೋ ಅದಿಷ್ಟನ್ನು ಬಿಟ್ಟು ಬಿಡುವುದು.

* ದೀಕ್ಷೆ ಪಡೆದ ವಗ್ಗಯ್ಯನಿಗೆ ಆಕಸ್ಮಿಕವಾಗಿ ನಾಯಿ ಕಚ್ಚಿದರೆ, ಅವನಿಗೆ ದೋಷ ತಟ್ಟಿ ವಗ್ಗಯ್ಯ ಆಗಿ ಮುಂದುವರೆಯಲು ಅನರ್ಹನಾಗುತ್ತಾನೆ.

* ವಗ್ಗಯ್ಯನು ವೈಯಕ್ತಿಕವಾಗಿ ಯಾರೊಂದಿಗಾದರೂ ಜಗಳ ಮಾಡುವುದಾಗಲಿ, ಅಥವಾ ಇತರರೊಂದಿಗೆ ಹೊಡೆದಾಡುವುದು ಆಗಲಿ, ಮಾಡಿದರೆ ಉದ್ದೇಶಪೂರ್ವಕವಾಗಿಯೇ ಇರಲಿ, ಆಕಸ್ಮಿಕವೇ ಇರಲಿ, ಅವನಿಗೆ ಚಪ್ಪಲಿ ತಟ್ಟಿದರೆ ದೋಷ ತಟ್ಟುತ್ತದೆ, ದೋಷದಿಂದ ಅವನು ಮೊದಲಿನ ಸ್ಥಾನಕ್ಕೆ ಬರಲು ಹಿರಿಯರನ್ನು ಕೂಡಿಸಿ ಪುನಃದೀಕ್ಷೆಯನ್ನು ಪಡೆದುಕೊಳ್ಳಬೇಕಾಗುತ್ತದೆ.

* ಚಂದಾಲಿಂಗನ ಭಕ್ತರು ಸಾಕಿದ ನಾಯಿಯನ್ನು ಹೊಡೆಯಬಾರದು, ಹಾಗೂ ತಂಗಳ ಪದಾರ್ಥವನ್ನು ತಿನ್ನಿಸಬಾರದು.

ಹೀಗೆ ಚಂದಾಲಿಂಗೇಶ್ವರನಿಗೆ ಸಂಬಂಧಿಸಿದಂತಹ ಹಾಗೂ ಈ ಬಗೆಯ ಅನೇಕ ನಿಷೇಧಗಳು ಸುತ್ತಮುತ್ತಲ ಗ್ರಾಮ ಜೀವನದಲ್ಲಿ ಕಂಡುಬರುತ್ತವೆ. ಈ ನಿಷೇಧಗಳು ಕರ್ನಾಟಕದ ಇತರೆ ದೈವಕ್ಕೆ ಸಂಬಂಧಿಸಿದ ನಿಷೇಧಗಳಿಗಿಂತ ಕೊಂಚ ಭಿನ್ನವೆನಿಸುತ್ತವೆ. ವಿಭಿನ್ನತೆಯು ಆಯಾ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ಸಹಜವಾಗಿವೆ. ಆದರೂ ಗೊರವರ ಸಂಪ್ರದಾಯದ ಚಂದಾಲಿಂಗ ಕುರಿತಾದ ನಂಬಿಕೆಗಳನ್ನು ಒಳಗೊಂಡಂತೆ ನಿಷೇಧಗಳು ಅಧ್ಯಯನ ಯೋಗ್ಯವೆನಿಸುತ್ತವೆ. ಈ ದೃಷ್ಟಿಯಿಂದ ಇಲ್ಲಿನ ಬಹುತೇಕ ನಿಷೇಧಗಳು ಸಂಸ್ಕೃತಿಯ ಚೌಕಟ್ಟಿನಲ್ಲಿ ವಿಶಿಷ್ಟ ಬಗೆಯ ಆಕಾರಗಳನ್ನು ಜನಪದರ ಸಾಮಾಜಿಕ ಜೀವನವನ್ನು ಒಳಗೊಂಡಂತೆ ಒಟ್ಟು ಒಂದು ಪರಿಸರದ ಮೌಖಿಕ ಪರಂಪರೆಯ ಚಾರಿತ್ರಿಕ ಸಂಗತಿಗಳನ್ನು ಕಟ್ಟಿಕೊಡುತ್ತವೆ ಎನ್ನಬಹುದು.

ಯಾವುದೇ ನಂಬಿಕೆಗಳನ್ನು ಅರ್ಥಹೀನವೆಂದು ಕೈ ಬಿಡುವುದು ಸರಿಯಲ್ಲ. ಒಂದು ನಂಬಿಕೆ ಯಾವ ಸಮಯದಲ್ಲಿ ಹುಟ್ಟುತ್ತದೆ ಎಂಬುದು ನಮಗೆ ಗೊತ್ತಿಲ್ಲದೆ ಇರಬಹುದು. ಆದರೆ ಆ ಸಂದರ್ಭದ ಅನುಭವ ನಂಬಿಕೆಯ ಮೂಲಕ ಇಂದಿನವರೆಗೂ ಹರಿದುಕೊಂಡು ಬಂದಿದೆ ಎಂಬುದು ನಿಜ ಸಂಗತಿ. ನಂಬಿಕೆಯ ಉಗಮದ ಮೂಲವನ್ನು ಹುಡುಕುತ್ತಾ ಹೋಗುವುದಾದರೆ ಮನುಷ್ಯನ ಸಾಂಸ್ಕೃತಿಕ ವಿಕಾಸದ ಮಜಲುಗಳನ್ನು ಕಂಡುಹಿಡಿದರೆ, ನಶಿಸಿಹೋಗಿರುವ ಸಾಂಸ್ಕೃತಿಕ ಚರಿತ್ರೆಯ ಪುನರ್‌ರಚನೆಗೆ ಬೇಕಾದ ಪ್ರಮುಖ ದಾಖಲೆಗಳನ್ನು ನಂಬಿಕೆಗಳು ಒದಗಿಸುತ್ತವೆ. ನಿಸರ್ಗ, ವ್ಯವಸಾಯ, ಜೀವನದ ಹಲವಾರು ಸಂಗತಿಗಳ ಬಗ್ಗೆ ಜನಪದ ನಂಬಿಕೆಗಳ ರೂಪದಲ್ಲಿ ದಾಖಲಾಗಿವೆ.

ಪರಂಪರೆಯಿಂದ ಆಚರಿಸುತ್ತ ಬಂದಿರುವ ನಮ್ಮ ಜನಪದರ ಸಂಪ್ರದಾಯಗಳು ಒಂದೊಂದು ಸಮುದಾಯದ ಪರಂಪರಾಗತ ನಂಬಿಕೆ ಆಚರಣೆಗಳ ಪಳೆಯುಳಿಕೆಗಳು ನಾಡಿನ ಸಾಂಸ್ಕೃತಿಕ ಬದುಕನ್ನು ಅಧ್ಯಯನ ಮಾಡಲು ಹೊರಟಾಗ ಒಂದೊಂದು ಸಮುದಾಯದವರು ಬೆಳೆಸಿಕೊಂಡು ಬಂದ ನಂಬಿಕೆ ಇಂತಹ ಅಭ್ಯಾಸಕ್ಕೆ ಬೆನ್ನೆಲುಬಾಗಿ ನಿಲ್ಲುತ್ತದೆ. ಆ ನಂಬಿಕೆಗಳು ಯಾವುದೇ ಕಾರಣಕ್ಕೆ ಹುಟ್ಟಿರಲಿಲ್ಲ. ಅವು ಮಾನವನ ಅನುಭವ ಸಂಪನ್ನತೆಯ ಕುರುಹುಗಳಾಗಿವೆ. ಜನಪದ ಅಧ್ಯಯನದ ದೃಷ್ಟಿಯಿಂದ ಎಲ್ಲಾ ನಂಬಿಕೆಗಳು ಮಾನವನ ಸಾಂಸ್ಕೃತಿಕ ಬೌದ್ಧಿಕ ವಿಕಾಸದ ಮಜಲುಗಳನ್ನು ಗುರುತಿಸಲು ಸಹಾಯ ಮಾಡುತ್ತವೆ. ನಂಬಿಕೆಗಳೆಲ್ಲ ಸಾರಾಸಗಟಾಗಿ ಊಹಾತ್ಮಕ, ವಿಚಾರಹೀನ ಹಾಗೂ ಅವಾಸ್ತವವೆಂದು ತಿಳಿಯುವಂತಿಲ್ಲ. ದೀರ್ಘ ಆಲೋಚನೆ ಅನುಭವಗಳ ಫಲವಾಗಿ ರೂಪ ಪಡೆದಿರುವುದಂತು ನಿಜಸಂಗತಿ.

ಚಂದಾಲಿಂಗೇಶ್ವರನ ಅಪಾರ ಭಕ್ತ ಸಮೂಹವು ಆತನಿಗೆ ಭಕ್ತಿಪೂರ್ವಕವಾಗಿ ಜೀವನಾವರ್ತನದ ಆಚರಣೆಗಳಾದ ಹುಟ್ಟು, ನಾಮಕರಣ, ಮದುವೆ, ಮರಣ ಇಂಥವುಗಳಲ್ಲಿ ಆತನನ್ನು ಬಳಕೆ ಮಾಡಿಕೊಳ್ಳುವರು. ಸಂತಾನಭಾಗ್ಯದಿಂದ ವಂಚಿತರಾದ ದಂಪತಿಗಳು ಇತನಿಗೆ ಹರಕೆ ಬೇಡಿಕೆಗಳನ್ನು ಹೊತ್ತು ಕೊಂಡಿರುತ್ತಾರೆ. ಆಕಸ್ಮಾತ್ ಸಂತಾನಫಲ ಹಿಡೇರಿದರೆ ಆತನಿಗೆ ಅಧೀನರಾಗಿ ಸೇವೆ

ಮಾಡುತ್ತಾರೆ. ಆ ದೈವದ ಫಲದಿಂದ ಜನಿಸಿದ ಶಿಶುಗಳಿಗೆ ಆತನ ಹೆಸರನ್ನು ನಾಮ ಕರಿಸುವುದು ಕಂಡುಬರುತ್ತದೆ. ಭಕ್ತರು ತಾವು ಯಾವುದಾದರೂ ವ್ಯವಹಾರ, ಕಟ್ಟಡ, ಪ್ರಾರಂಭಿಸಬೇಕಾದರೆ ಆತನ ನಾಮದೊಂದಿಗೆ ಪ್ರಾರಂಭಿಸುತ್ತಾರೆ ಎಂಬುದು ತಿಳಿಯುತ್ತಾದೆ. ಮದುವೆ ಕಾರ್ಯಕ್ರಮಗಳು ಇದ್ದಾಗ ಚಂದಾಲಿಂಗೇಶ್ವರನ ಭಕ್ತರಾದ ಗೊರವರನ್ನು ಕರೆಸಿ ದೋಣಿ ತುಂಬುವ ಸಂಪ್ರದಾಯವನ್ನು ಹೊಂದಿದ್ದಾರೆ. ಯುವಕ ಹಾಗೂ ಯುವತಿಯರಿಗೆ ಮದುವೆಯಾಗುವಂತ ಪ್ರಾಯ ಮೀರಿದರೂ ಆ ಭಾಗ್ಯ ಬರದೇ ಇದ್ದಾಗ ಚಂದಾಲಿಂಗೇಶ್ವರನ ಮೋರೆ ಹೋಗುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಭಕ್ತರು ತಮ್ಮ ಮನೆಯಲ್ಲಿ ಸಾವು ಸಂಭವಿಸಿದಾಗ ತಮ್ಮ ಮನೆಯ ಮೈಲಿಗೆಯನ್ನು ನಿವಾರಿಸಲು ಈತನ ಸನ್ನಿಧಿಯಲ್ಲಿರುವ ನೀರನ್ನು ಪೂಜಿಸಿಕೊಂಡು ಬಂದು ತಮ್ಮ ಮನೆಯ ತುಂಬಾ ಚಿಮಿಕಿಸುವುದು ಸಂಪ್ರದಾಯ ಗೋಚರಿಸುತ್ತದೆ.

ವಾರ್ಷಿಕವರ್ತನದ ಆಚರಣೆಗಳಿಗೆ ಸಂಬಂಧಿಸಿದಂತೆ ದಿನಂಪ್ರತಿ, ವಾರ ದಿನಗಳು, ಅಮವಾಸ್ಯೆ, ಹುಣ್ಣಿಮೆಯ ದಿವಸ, ಹಬ್ಬ-ಹರಿದಿನ, ಜಾತ್ರೆಗಳಿಗೆ ಸಂಬಂಧಿಸಿದಂತೆ ವರ್ಷದ ಉದ್ದಕ್ಕೂ ಆಚರಣೆಗಳು ನಡೆಯುತ್ತವೆ. ದಿನಂಪ್ರತಿ ತ್ರಿಕಾಲ ಪೂಜೆ, ವಿವಿಧ ನೈವಿದ್ಯ ದಿಂದ ಪೂಜೆ ನೆರವೇರಿಸುತ್ತದೆ. ವಾರದ ದಿನವಾದ ರವಿವಾರ ವಿಶೇಷ ಪೂಜೆ ನಡೆಯುತ್ತದೆ. ಅಂದು ನೀರಿನ ದೀಪವನ್ನು ಹಚ್ಚುವುದು ಹಾಗೂ ಪ್ರಸಾದ ವ್ಯವಸ್ಥೆಯ ಮಾಡುವುದು ತಿಳಿಯುತ್ತದೆ. ಆ ರವಿವಾರದಂದು ಭಕ್ತರು ಪ್ರತಿ ದಿನಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಾರೆ. ಅಮಾವಾಸ್ಯೆಯ ದಿನದಂದು ಈ ಕ್ಷೇತ್ರದಲ್ಲಿ ಇರುವಂತಹ ಎಲ್ಲಾ ದೇವರುಗಳ ಪೂಜೆ ನಡೆಯುತ್ತದೆ. ಅಮಾವಾಸ್ಯೆಯು ಒಂದು ವೇಳೆ ರವಿವಾರ ದಿನದಂದು ಬಂದಿತೆಂದರೆ ಭಕ್ತಸಾಗರವೇ ಹರಿದು ಬರುತ್ತಿರುತ್ತದೆ. ಅಂದು ಬಂದಿರುವಂತಹ ಎಲ್ಲಾ ಭಕ್ತರಿಗೆ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಅವತ್ತಿನ ರಾತ್ರಿ ಭಜನೆ, ಹಾಡುಗಳನ್ನು ಹಾಡುವುದುರ ಮೂಲಕ ಜಾಗರಣೆಯನ್ನು ಮಾಡಲಾಗುತ್ತದೆ. ಹುಣ್ಣಿಮೆ ದಿನಗಳಲ್ಲಿ ಸಾಮಾನ್ಯವಾದ ಪೂಜಾ ಹಾಗೂ ಅಲ್ಪ ಪ್ರಮಾಣದ ಭಕ್ತರು ಬಂದಿರುವರು. ಇದರಿಂದ ಸಾಮಾನ್ಯವಾಗಿ ದೃಷ್ಟಿ ಎಡೆಯನ್ನು ಮಾಡಿ ಪೂಜೆ ಮಾಡಲಾಗುತ್ತದೆ. ಹಬ್ಬ-ಹರಿದಿನಗಳ ಆದ ಶ್ರಾವಣಮಾಸದಲ್ಲಿ ಹೆಚ್ಚಾಗಿ ಜನಪದರುಗಳು ತಮ್ಮ ಸಾಂಪ್ರದಾಯಿಕ ಕಾರ್ಯಗಳನ್ನು ಈ ಸ್ಥಳದಲ್ಲಿ ನೆರವೇರಿಸುವರು. ಹೊಸ್ತಿಲ ಹುಣ್ಣಿಮೆಯ ದಿನದಂದು ವಿಶೇಷವಾದ ನೈವೆದ್ಯದಿಂದ ಪೂಜಿಸುವರು. ಶಿವರಾತ್ರಿಯಲ್ಲಿ ಚಂದಾಲಿಂಗೇಶ್ವರನಿಗೆ ವಿಶೇಷವಾದಂತಹ ಕಟ್ಟೋಪಚಾರದ ಅಭಿಷೇಕಗಳು ನಡೆಯುತ್ತವೆ. ಪ್ರತಿವರ್ಷ ಮೇ ತಿಂಗಳು ಹಾಗೂ ಅಕ್ಟೋಬರ್ ತಿಂಗಳಲ್ಲಿ ಜಾತ್ರೆಗಳು ನಡೆಯುತ್ತವೆ. ಈ ಜಾತ್ರೆಯ ಸಾಂಪ್ರದಾಯ ಆಚರಣೆಗಳು ಮೊದಲಿಗೆ ಕಳಸಾರೋಹಣ, ಖಡ್ಗದ ಆಗಮನ, ಖಂಡೆದೇವರ ಪೂಜೆ, ಕೊಂತದ ಆಗಮನ, ಕೊಂತ ಬಂದ ನಂತರ ಗಂಗೆ ಸ್ನಾನಕ್ಕೆ ಹೋಗುವರು. ತದ ನಂತರ ಜಾತ್ರೆಗೆ ಬಂದಂತಹ ಭಕ್ತರು

ತಮ್ಮ ತಮ್ಮ ಸಂಪ್ರದಾಯದಂತೆ ದೋಣಿ ತುಂಬಿಸುವ ಕಾರ್ಯದಲ್ಲಿ ತೊಡಗಿರುತ್ತಾರೆ. ಮಧ್ಯಾಹ್ನದ ವೇಳೆಗೆ ಮುಖ್ಯಗುಡಿಯ ಮುಂಭಾಗದಲ್ಲಿ ಚಂದಾಲಿಂಗಪ್ಪ ಮತ್ತು ಗಂಗೆಮಾಳಮ್ಮನವರ ವಿವಾಹ ಕಾರ್ಯಕ್ರಮ ನೆರವೇರುತ್ತದೆ. ಇದೇ ರೀತಿ ಲೆಕ್ಕಿಬರಲಿನ ಸೇವೆ, ಭಂಡಾರದ ಪವಾಡ, ನುಡಿಹೇಳುವುದು, ಕೊಂತಮಿಂಚುವುದು, ಸರಪಳಿ ಪವಾಡ, ಬನ್ನಿ ಮುಡಿಯುವುದರೊಂದಿಗೆ ಅಂದಿನ ಕಾರ್ಯಕ್ರಮಗಳ ಜಾತ್ರೆಗೆ ತೆರೆ ಬೀಳುತ್ತದೆ.

ಜಾತ್ರೆಯ ಆಚರಣೆಯೊಂದಿಗೆ ಭಕ್ತರು ಹಲವಾರು ನಂಬಿಕೆ ಮತ್ತು ವಿಧಿ-ನಿಷೇಧಗಳನ್ನು ಹೊಂದಿರುತ್ತಾರೆ. ಅಂತವುಗಳಾದ ಜನನ, ವಿವಾಹ, ಮರಣ, ಹಬ್ಬ-ಹರಿದಿನ, ಭಂಡಾರದ ಹಿನ್ನೆಲೆಗೆ ವ್ಯವಸಾಯ ಹಾಗೂ ಇನ್ನಿತರ ನಂಬಿಕೆಗಳು ಜನತೆಯಲ್ಲಿ ಜೀವಂತವಾಗಿರುವುದು ಕಂಡುಬರುತ್ತವೆ. ಆದರೆ ಇದೇ ರೀತಿ ಯಾವುದೇ ಒಂದು ದೈವಿಯ ಜಾತ್ರೆ ಉತ್ಸವ ನಡೆಯಬೇಕಾದರೆ ಅದಕ್ಕೆ ಮೆರುಗು ತರಲು ಪೂರಕವಾದಂತ ವ್ಯಾಪಾರ-ವಹಿವಾಟು ಹಾಗೂ ಹಲವಾರು ಸಿದ್ಧತೆಗಳು ನಡೆದಿರುವೆ. ಅದಕೆ ಈ ಚಂದಾಲಿಂಗೇಶ್ವರನ ಜಾತ್ರೆಯೂ ಹೊರತಲ್ಲ. ಆದ್ದರಿಂದ ಚಂದಾಲಿಂಗೇಶ್ವರ ಜಾತ್ರೆಯ ಸಿದ್ಧತೆ ಹಾಗೂ ವ್ಯಾಪಾರ-ವಹಿವಾಟು ಎಂಬ ವಿಷಯ ಈ ಮುಂದಿನ ಐದನೇ ಅಧ್ಯಾಯದಲ್ಲಿ ವಿಶ್ಲೇಷಣೆ ಗೊಳಪಡಿಸಿದೆ.

ಅಡಿಟಿಪ್ಪಣಿಗಳು

೧. ಸಿದ್ದೇಶ್ವರಿ.ಎ.ಎನ್, ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ೨೦೧೪, ಪು.ಸಂ.೨

೨. ಅಂಬಳಿಕೆ ಹಿರಿಯಣ್ಣ, ಜಾತ್ರೆಗಳ ವಿಕ್ಷೇಣೆ,. ೧೯೯೨, ಪು.ಸಂ೨೦

೩. ನರಸಿಂಹ ಮೂರ್ತಿ.ಎಂ.ಎಲ್,ಮಧುಗಿರಿಯ ದಂಡಿನ ಮಾರಮ್ಮ, ಪು.ಸಂ.೭

೪. ಪ್ರಭು.ಅ.ಗಂಜಿಹಾಳ, ಹುಲ್ಲೇಶ್ವರ ಚರಿತೆ, ೧೯೯೨, ಪು.ಸಂ.೨೪

೫. ಅದೇ,ಪು.ಸಂ.೨೬

೬. ನೇಗಿನಹಾಳ.ಎಂ.ಬಿ., ಮೈಲಾರಲಿಂಗ-ಖಂಡೋಬಾ,೧೯೯೨, ಪು.ಸಂ.೧೮೪

೭. ವೆಂಕಟೇಶ.ಜಿ, ಗುಡ್ಡದ ಮಲ್ಲಯ್ಯ ಆಚರಣೆ ಒಂದು ಜಾನಪದಿಯ ಅಧ್ಯಯನ, (ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ), ೨೦೧೩,ಪು.ಸಂ.೯೭

೮. ಅದೇ,ಪು.ಸಂ.೯೭

ಅಧ್ಯಾಯ : ೫

ಚಂದಾಲಿಂಗೇಶ್ವರನ ಜಾತ್ರೆಯ ಸಿದ್ಧತೆ ಹಾಗೂ ವ್ಯಾಪಾರ ವಹಿವಾಟು

(Preparation and Trading of Chandalingeshwara's Fair)

೫.೧. ಪೂರ್ವ ಹಾಗೂ ಪ್ರಸ್ತುತ ದಿನಗಳಲ್ಲಿ ಜಾತ್ರೆಗೆ ಭಕ್ತರ ಸಿದ್ಧತೆ.

೫.೨. ವೇಷಭೂಷಣಗಳು

೫.೩. ಜಾತ್ರೆಯಲ್ಲಿ ವರ್ತಕರು

೫.೩.೧. ಸ್ಟೇಷನರಿ ಅಂಗಡಿಗಳು

೫.೩.೨. ವಿಭೂತಿ-ಕುಂಕುಮದ ಅಂಡಿಗಳು

೫.೩.೩. ಪಳಾರದ ಅಂಗಡಿಗಳು

೫.೩.೪. ದಿನಸಿ ಅಂಗಡಿಗಳು

೫.೩.೫. ಫಲ-ಪುಷ್ಪದ ಅಂಗಡಿಗಳು

೫.೩.೬. ತೆಂಗಿನಕಾಯಿ ವರ್ತಕರು

೫.೩.೭. ತಂಪುಪಾಯಿನೀಯ ವರ್ತಕರು

೫.೩.೮. ಪಾನ್-ಬೀಡಾ ವರ್ತಕರು

೫.೩.೯. ಬಳೆಗಾರ ಅಂಗಡಿಗಳು

ಅಧ್ಯಾಯ : ಐದು
ಚಂದಾಲಿಂಗೇಶ್ವರನ ಜಾತ್ರೆಯ ಸಿದ್ಧತೆ ಹಾಗೂ ವ್ಯಾಪಾರ ವಹಿವಾಟು
(Preparation and Trading of Chandalingeshwara's Fair)

ಪ್ರಸ್ತಾವನೆ : (Introduction)

ಈ ಎರಡೂ ಜಾತ್ರೆಗಳು ವರ್ಷದ ಪ್ರತಿ ಆರು ತಿಂಗಳಿಗೊಂದರಂತೆ ನಡೆಯುತ್ತವೆ. ಈ ಒಂದೊಂದು ಜಾತ್ರೆಯು ಮೂರು ದಿನಗಳ ಕಾಲದವರೆಗೆ ನಡೆಯುತ್ತವೆ. ಜಾತ್ರೆಗೆ ನಾಡಿನ ಮೂಲೆಮೂಲೆಗಳಿಂದ ಯಾತ್ರಿಕರು ಆಗಮಿಸುತ್ತಾರೆ. ಬಿಜಾಪುರ, ಬಾಗಲಕೋಟೆ, ಬೀದರ್, ರಾಯಚೂರು, ಧಾರವಾಡ, ಗದಗ, ಬಳ್ಳಾರಿ, ಕೊಪ್ಪಳ, ಗುಲ್ಬರ್ಗ, ಬೆಳಗಾವಿ, ಹಾವೇರಿ, ಯಾದಗಿರಿ ಹೀಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ಅಂತರರಾಜ್ಯಗಳಾದ ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾ, ತಮಿಳುನಾಡು ಇತ್ಯಾದಿ ದೇಶದ ನಾನಾ ರಾಜ್ಯಗಳಿಂದ ಭಕ್ತರು ಜಾತ್ರೆಗೆ ಅಪಾರ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಈ ಜಾತ್ರೆಗೆ ಬರುವಂತಹ ಯಾತ್ರಿಕರು ದೂರದಿಂದ ಬರುವುದರಿಂದ ಒಂದು ದಿನ ಮೊದಲೇ ಬಂದು ನೆಲೆಸುತ್ತಾರೆ. ನಾನು ಈ ಕ್ಷೇತ್ರದಲ್ಲಿ ಯಾತ್ರಿಕರನ್ನು ಸಂದರ್ಶಿಸಿದಾಗ ಅವರು ಹೀಗೆ ಹೇಳುತ್ತಾರೆ 'ಸಗಾ ನಾವು ಗೋಕಾಕ್‌ಯಿಂದ ಬಂದೆವು. ಇದು ನಮ್ಮ ಮನಿಯ ದ್ಯಾವ್ರ ಐತಿರಿ. ನಾವು ಅಲ್ಲಿಂದ ಇಲ್ಲಿಗೆ ಬಂದ ಹೋಗಾಕ ಒಂದು ವಾರ ಅಕೈತ್ರಿ, ಯಾಕಂದ್ರ ನಾವು ಸೀದಾ ಈತನ ಜಾತ್ರೆಗೆ ಬರಂಗಿಲ್ಲರ್ರಿ; ಪೈಲಾ ಹುಲ್ಲಪ್ಪನ ಜಾತ್ರೆ ಮುಗಿಸಿಕ್ಕೊಂಡು, ನಂತರ ಈತನ ಜಾತ್ರೆಗೆ ಬರತ್ತೀವಿ' ಎಂದು ಈ ಭಕ್ತರು ಹೇಳುವುದನ್ನು ಕೇಳಿದರೆ ಹುಲ್ಲೇಶ್ವರನಿಗೆ ತಮ್ಮ ದೈವಭಕ್ತಿಯನ್ನು ತೋರಿ, ಎರಡು ದಿನದ ಜಾತ್ರೆಯನ್ನು ಮುಗಿಸಿಕೊಂಡು ನಂತರ ಈ ಕ್ಷೇತ್ರಕ್ಕೆ ಬರುತ್ತೇವೆ ಎಂಬುದನ್ನು ತಿಳಿಸುವರು. ನಾನು ಮತ್ತೆ ಕೆಲವರನ್ನು ನೀವು ಈ ಜಾತ್ರೆಗೆ ಬರಬೇಕಾದ್ರೆ ಯಾವ ಯಾವ ರೀತಿ ಸಿದ್ಧತೆ ಮಾಡಿಕೊಳ್ಳುತ್ತಿರಿ ಎಂದು ಆ ಭಕ್ತರಿಗೆ ಪ್ರಶ್ನಿಸಿದಾಗ, ನರಗುಂದದ ಚಂದಪ್ಪ ಎಂಬ ಭಕ್ತರು ಹೇಳುವಂತೆ 'ನೋಡ್ರಿ ಈ ಜಾತ್ರೆಗೆ ವರ್ಷಾ... ವರ್ಷಾ... ಬರೋದ್ರಿಂದ ಜಾತ್ರಿಯಾವ್ವಾಗ... ಯಾವ್ವಾಗ ನಡಿತೈತಿ ಅನ್ನೋದು ಗೊತ್ತು. ಹಾಗಾಗಿ ನಮ್ಗೆ ಒಂದು ವಾರಕ್ಕೆ ಏನೇನು ಬೇಕು

ಅಕ್ಕಿ, ಕಾರಪುಡಿ, ಎಣ್ಣೆ, ರೊಟ್ಟಿ, ರವೆ, ಹಾಸಿಗೆ, ಬಟ್ಟೆ, ಬೋಗಣಿ, ಪಾತ್ರೆ ಎಲ್ಲವನ್ನೂ ಕಟ್ಟಿಕ್ಕೊಂಡು, ಹದಿನೈದು-ಇಪ್ಪತ್ತು ಮಂದಿ ಕೂಡಿ ಗಾಡಿ ಮಾಡಿಕೊಂಡು ಬರತ್ತೀವ್ರಿ; ಆದ್ರಾ ಎರಡೂಜಾತ್ರಿ ಮಾಡ್ಕೊಂಡ ಹೋಗದರ್ರಿ' ಎಂದು ತಮ್ಮ ಗ್ರಾಮೀಣ ಸೊಗಡಿನಲ್ಲಿ ಹೇಳುತ್ತಾರೆ.

೫.೧. ಪೂರ್ವ ಹಾಗೂ ಪ್ರಸ್ತುತ ದಿನಗಳಲ್ಲಿ ಜಾತ್ರೆಗೆ ಭಕ್ತರ ಸಿದ್ಧತೆ : (Devotees Preparing For the Fair During the Preand Present Days)

ದೇವಸ್ಥಾನದ ಹಿರಿಯ ಭಕ್ತರಾದ ಶ್ರೀ ಕಳಕಪ್ಪ ಅರಮನೆ ಸಾಕೀನ್ ನಿಡಗುಂದಿ ಅವರನ್ನ ಈ ಜಾತ್ರೆಯ ಪೂರ್ವದ ಐವತ್ತರ ದಶಕದಲ್ಲಿ ಇದ್ದ ಆಚರಣೆಯ ಬಗ್ಗೆ ಕೇಳಿದಾಗ ಅವರು ಹೀಗೆ ಹೇಳುತ್ತಾರೆ. 'ಈ ಅಜ್ಜನ ಜಾತ್ರೆಗೆ ನಮ್ಮ ಅಪ್ಪನವರ ಕಾಲದಲ್ಲಿ ಇಷ್ಟೊಂದು ಮಂದಿ ಜಾತ್ರೆಗೆ ಬರುತ್ತಿರಲಿಲ್ಲ; ಯಾಕಂದ್ರ ನಮ್ಮಪ್ಪ, ನಾನು ಸಣ್ಣವನಿದ್ದಾಗ ಕರ್ಕೊಂಡುಬಂದಿದ್ದು ನೆನಪು ಐತಿರಿ. ಆವಾಗ ಜಾತ್ರೆಗೆ ಬರಕ ಸರಿಯಾದ ದಾರಿ ಇರ್ತಿರಲಿಲ್ಲ, ಕಾಲ್ದಾರಿಯಾಂಗ ಜಾಡುಯಿತ್ತರಿ; ಅದರಾಗ್ನ ಬಂಡಿ ಹೊಡ್ಕೊಂಡು ಜನಗಳು ಬರುತ್ತಿದ್ರು' ಎಂದು ಹೇಳುತ್ತಾರೆ. ಇವರ ಮಾತಿನ ಪ್ರಕಾರ ಪ್ರಸ್ತುತ ದಿನಗಳಲ್ಲಿ ಜಾತ್ರೆಗೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತದೆ ಎಂಬುದನ್ನು ನಾವು ಮನಗಾಣಬೇಕಾಗಿದೆ. ಇನ್ನೂ ಹಲವರು ಭಕ್ತರನ್ನು ಈ ಜಾತ್ರೆಯ ಮೊದಲಿನ ಸ್ಥಿತಿಯ ಬಗ್ಗೆ ಕೇಳಿದಾಗ ಅವರು ಸಹ ಪೂರ್ವದ ಆಚರಣೆಯ ಕುರಿತು ಈ ರೀತಿಯಲ್ಲಿ ತಿಳಿಸುತ್ತಾರೆ. ವರ್ಷದ ಎರಡೂ ಜಾತ್ರೆಗೆ ಕೆಲವು ವರ್ಷಗಳ ಹಿಂದೆ ಜನರು ಬೆರಳೆಣಿಕೆಯಷ್ಟು ಬರುತ್ತಿದ್ದರು. ಈ ಜಾತ್ರೆಗೆ ಬರುವಂತಹ ಭಕ್ತರು ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ವ್ಯವಸ್ಥೆಯನ್ನು ಮಾಡಿಕೊಂಡು ಉತ್ಸವಕ್ಕೆ ಆಗಮಿಸುತ್ತಿದ್ದರು. ದೂರದ ಊರಿನಿಂದ ಬರುವಂತವರು ಬಂಡಿಗಳನ್ನು ಹೂಡಿಕೊಂಡು ಬರುವವರಾಗಿದ್ದರು. ಇವರು ಈ ಜಾತ್ರೆಗೆ ಬರುವುದಕ್ಕಿಂತ ಎರಡು ಮೂರು ದಿನಗಳ ಪೂರ್ವದಲ್ಲಿ ತಮ್ಮ ಎಲ್ಲಾ ಕೆಲಸ ಕಾರ್ಯಗಳನ್ನು ಬಿಟ್ಟು ಬಂಡಿ ಸ್ವಚ್ಛವಾಗಿ ತೊಳೆದು ಶುದ್ಧಗೊಳಿಸುವರು. ಪ್ರಯಾಣದ ಸಂರಕ್ಷಣೆಯ ದೃಷ್ಟಿಯಿಂದ ಗಾಲಿಗಳ ಹಳಿಯನ್ನು ಬಂಡಿಯ ಚಟ್ಟನ್ನು ಹಾಗೂ ಬಂಡಿಯ ಗಾಲಿಗಳಿಗೆ ಹೊಂದಿಕೊಂಡಿರುವ ಇರ್ಸ್ (ಎರಡೂ ಗಾಲಿಗಳು ಚಲಿಸುವುದಕ್ಕೆ ಹೊಂದಿಕೊಂಡಿರುವ ದಪ್ಪ ಉದ್ದನೆಯ ಕಬ್ಬಿಣದ ಸಲಾಕೆ) ಬಂಡಿಯ ಮುಂಭಾಗದಲ್ಲಿ ಉದ್ದಿಗೆ ಕಟ್ಟಿದ ನೊಗವನ್ನು ಈ ಎಲ್ಲಾವನ್ನು ಪರಿಶೀಲಿಸುತ್ತಿದ್ದರು.

ಜಾತ್ರೆಗೆ ಬರುವಂತಹ ಬಂಡಿಗಳನ್ನು ನೋಡುಗರ ಕಣ್ಣಿಗೆ ಆಕರ್ಷಕವಾಗುವಂತೆ ಶೃಂಗರಿಸುತ್ತಿದ್ದರು. ಅದು ಹೇಗೆಂದರೆ ಬಂಡಿಯ ಚಕ್ರಗಳು ಸರಳವಾಗಿ ಚಲಿಸಲು ಕೀಲೆಣ್ಣೆಯನ್ನು ಗಾಲಿಯ ನಡುಗಡ್ಡೆಯ ಒಳ ಹಾಗೂ ಹೊರಮೈಗೆ ಲೇಪಿಸುತ್ತಿದ್ದರು. ಗಾಲಿಯ ಬುಟ್ಟೇವುಗಳಿಗೆ (ಗಾಲಿಯು ನಿರ್ಮಾಣವಾಗಲು ಬಳಸಿರುವ ಅರ್ಧಚಂದ್ರಾಕೃತಿಯ ಆರು ಮರದ ತುಂಡುಗಳು) ಸುರಮವನ್ನು ಬಳಿಯುತ್ತಿದ್ದರು. ಚಕ್ರದ ಮಧ್ಯದಲ್ಲಿರುವ ಕುಂಭ (ಗಡ್ಡೆ) ಹಾಗೂ ಅದಕ್ಕೆ ಹೊಂದಿಕೊಂಡಿರುವ ಹನ್ನೆರಡು ಹಲ್ಲುಗಳಿಗೆ (ಬುಟ್ಟೇವುಕ್ಕೂ ಮತ್ತು ಕುಂಭಕ್ಕೂ ಮಧ್ಯ ಜೋಡಿಸಿರುವ ಎರಡು ಅಡಿ

ಉದ್ದದ ಮರದ ತುಂಡು) ಕಪ್ಪಾದ ಡಾಂಬರಿನಂತ ಪದಾರ್ಥವನ್ನು ಲೇಪಿಸುತ್ತಿದ್ದರು. ಬಂಡಿಯ ಎರಡೂ ಅಡ್ಡಗಿ ತೋಳುಗಳಿಗೆ ಮುಂಭಾಗ ಹಾಗೂ ಹಿಂಭಾಗದ ಮುಖಗಳಿಗೆ ಒಂದು ಮೊಳದ ಉದ್ದಳತೆಯಲ್ಲಿ ಬಣ್ಣವನ್ನು ಅಥವಾ ಡಾಂಬರಿನಂತಹ ಕಪ್ಪು ದ್ರವಾ ಪರ್ದಾಥವನ್ನು ಬಳಿಯಲಾಗಿರುತ್ತಿತ್ತು. ಗಾಲಿಯ ಎರಡೂ ಬದಿಯ ಕೀಲುಗಳಿಗೆ ಎರಡೆರಡು ಮಧ್ಯಮ ಗಾತ್ರದ ಗೆಜ್ಜೆಗಳನ್ನು ಹಾಕಿರುವರು. ಜಾತ್ರೆಗೆ ಹೋಗುವಾಗ ಮಳೆ, ಬಿಸಿಲು, ಗಾಳಿ, ಚಳಿಯಿಂದ ರಕ್ಷಣೆಯನ್ನು ಪಡೆಯಲು ಕೊಲ್ಲಾರಿ ಬಂಡಿಯ ರೀತಿ ಇಡೀ ಬಂಡಿಯ ಚಟ್ಟಿಗೆ ಸಂಪೂರ್ಣವಾಗಿ ಮೇಲ್ಬಾವಣಿ ಕಟ್ಟುತ್ತಿದ್ದರು.

ಕೆಲವರು ಈ ಛಾವಣಿಯಲ್ಲಿ ಎರಡು ಬಾಗಗಳನ್ನಾಗಿ ಮಾಡುತ್ತಿದ್ದರು. ಒಂದು ಮೇಲ್ಭಾಗ, ಇನ್ನೊಂದು ಕೆಳಭಾಗವಾಗಿ ನಿರ್ಮಿಸುತ್ತಿದ್ದರು. ಈ ಮೇಲ್ಭಾಗದಲ್ಲಿ ತಮಗೆ ಜಾತ್ರೆಗಳಲ್ಲಿ ಅವಶ್ಯಕವಾದಂತ ವಸ್ತುಗಳನ್ನು ಇಡುವುದಕ್ಕೆ ಬಳಸಲಾಗುತ್ತಿತ್ತು. ಕೆಳಭಾಗದಲ್ಲಿ ತಾವು ಕುಳಿತುಕೊಳ್ಳುವುದಕ್ಕೆ ಉಪಯೋಗಿಸುತ್ತಿದ್ದರು. ಈ ಮೇಲ್ಬಾವಣಿಯನ್ನು ಗುಡಾರ, ತಾಡಪತ್ರಿಯಿಂದ ಹೊದಿಸಿ ಸಂಪೂರ್ಣವಾಗಿ ಹಗ್ಗದಿಂದ ಭದ್ರವಾಗಿ ಬಿಗಿಯುತ್ತಿದ್ದರು. ಇದರ ಮೇಲೆ ಅಲಂಕಾರಿಕವಾಗಿ ಬಣ್ಣಬಣ್ಣದ ಬಟ್ಟೆಗಳನ್ನು ಹೊದಿಸುವರು. ಈ ಛಾವಣಿಯ ದ್ವಾರಕ್ಕೆ ಮನೆಯ ಬಾಗಿಲುಗಳಿಗೆ ಶೃಂಗಾರಕ್ಕೆ ಹಾಕಿರುವಂತಹ ಬಾಗಿಲು ಪರದೆ, ಹೂವುಗಳ ಮಾಲೆ, ಇತರ ಚಿತ್ತಾರದ ಅಲಂಕೃತ ವಸ್ತುಗಳನ್ನು ಹಾಕುವರು. ಎತ್ತುಗಳ ಆಹಾರಕ್ಕಾಗಿ ಶೇಂಗಾ, ತೊಗರಿ, ಕಡಲೆ, ಹುರುಳಿ ಮುಂತಾದ ದವಸ ಧಾನ್ಯದ ಹೊಟ್ಟನ್ನು ಅವಶ್ಯಕವಾದಷ್ಟನ್ನು ಗೋಣಿ ಚೀಲದಲ್ಲಿ ಹಾಗೂ ಚಿಕ್ಕದಾದ ಬಟಾರದಲ್ಲಿ ತುಂಬಿಕೊಂಡು ಅದೇ ಬಂಡಿಯ ಹಿಂಭಾಗದಲ್ಲಿ ಇರಿಸಲಾಗುತ್ತಿತ್ತು. ಜನಪದರು ಕೇವಲ ಬಂಡಿಯನ್ನು ಅಷ್ಟೇ ಶೃಂಗರಿಸುವುದು ಅಲ್ಲದೆ ಎತ್ತುಗಳನ್ನು ಮೈತೊಳೆದು ಕೊಂಬುಗಳಿಗೆ ಬಣ್ಣವನ್ನು ಬಳಿದು ಕೊಂಬಣಸು, ಗಗ್ರೆಯನ್ನು ಹಾಕಿ ಅವುಗಳ ಕೊರಳಲ್ಲಿ ಗೆಜ್ಜೆಸರ, ಗುಂಬ್ರೆ, ಗಂಟೆ, ಉರಿಗೆಜ್ಜೆಸರ ಕೆಲವೊಂದು ಶಂಕುಗಳನ್ನ, ಸರಪಳಿ ಸರವನ್ನು ಕಟ್ಟುತ್ತಾರೆ. ಹಣೆಗೆ ಹಣೆಕಟ್ಟು, ಗೆಜ್ಜೆಸರ, ಕಾಲಿಗೆ ಕಾಲು ಗೆಜ್ಜೆಸರ, ಮೈಮೇಲೆ ಜೂಲವನ್ನು ಹಾಕಿ ಶೃಂಗರಿಸಿಕೊಂಡು ಹೋಗುವುದನ್ನು ನೋಡಿದರೆ ನೋಡುಗರ ಕಣ್ಣಿಗೆ, ಕಿವಿಗೆ ಅದರ ಇಂಪು ಬಹಳ ಸೊಗಸಾಗಿರುವುದು. ತಮ್ಮ ಕುಟುಂಬದವರು ಸೇರಿ ಬರುವುದು ಅಥವಾ ತಮ್ಮ ಓಣಿಯಲ್ಲಿ ಇರುವ ಇತರ ಕುಟುಂಬದವರನ್ನು ತಮ್ಮ ಸಂಗಡ ಕರೆದುಕೊಂಡು ಬರುವುದು ಲೋಕಾರೂಢಿಯಾಗಿತ್ತು. ಇನ್ನೂ ಕೆಲವರಿಗೆ ಎತ್ತು ಬಂಡೆಗಳ ಸೌಲಭ್ಯಗಳು ಇಲ್ಲದವರು ಮೂರು ಜನಗಳು, ಐದು ಜನಗಳು ಹೀಗೆ ತಮಗೆ ಹೊಂದಿಕೊಳ್ಳುವರೊಂದಿಗೆ ತಂಡು ತಂಡಾಗಿ ಪಾದಯಾತ್ರೆ ಮಾಡುತ್ತಾ ಚಂದಾಲಿಂಗೇಶ್ವರನ ಜಾತ್ರೆಗೆ ಹೋಗುತ್ತಿದ್ದರು. ಇದರಿಂದ ನಮಗೆ ಆಗಿನ ಕಾಲದ ಸಾಂಸ್ಕೃತಿಕ ಆಚರಣೆಯ ಪ್ರಜ್ಞೆ ಜನಸಾಮಾನ್ಯರಲ್ಲಿತ್ತು ಎಂದು ತಿಳಿಯಬಹುದು. ಇವರೆಲ್ಲರೂ ಗುಂಪುಗೂಡಿ ಜಾತ್ರೆಗೆ ಹೋಗುವುದನ್ನು ತಿಳಿದರೆ, ಅವರಲ್ಲಿ ಒಬ್ಬರಿಗೊಬ್ಬರಲ್ಲಿರುವ ಅನನ್ಯತೆಯ ಭಾವನೆಯನ್ನು ಗುರುತಿಸಬಹುದು.

ಈ ಜಾತ್ರೆಗೆ ಹೋಗಬೇಕಾದರೆ ಐದು ಕಿಲೋಮೀಟರ್ ಕಾಲ್ನಡಿಗೆಯಿಂದ ಗುಡೂರ, ಮಾಪಿನಇಟಗಿ, ಬೀಳಗಿ, ಮನ್ನೇರಾಳದವರು ಗುಡ್ಡದ ಮಾರ್ಗದ ಮೂಲಕ ಮೂರು ಜನ, ಐದು ಜನ ಕೂಡಿಕೊಂಡು ಬರುವುದಾಗಿತ್ತು. ತದನಂತರ ಕಾಲಕ್ರಮೇಣ ಸೈಕಲ್ ಒಯ್ಯುವಂತೆ ವ್ಯವಸ್ಥೆ ಮಾಡಿಕೊಂಡಿದ್ದರು. ಬಂಡಿಯನ್ನು ಒಯ್ಯುವಾಗ ಮೊದಲು ಎತ್ತಿನ ಕೊರಳಲ್ಲಿ ನಿಂಬೆಹಣ್ಣುಗಳನ್ನು ಕಟ್ಟಲಾಗುತ್ತಿತ್ತು. ಬಂಡಿಯನ್ನು ಮುಂದೆ ಸಾಗಿಸಬೇಕಾದರೆ ಗಾಲಿಯ ಅಡಿಯಲ್ಲಿ ಲಿಂಬಿಯ ಹಣ್ಣನ್ನು ಇಟ್ಟು ಸಾಗಿಸುತ್ತಿದ್ದರು. ಯಾತ್ರೆಗೆ ಹೋಗುವ ಮಾರ್ಗವು ಸರಿಯಾಗಿಲ್ಲದೆ ಇರುವುದರಿಂದ ಬಂಡಿಯು ಗುಡ್ಡವನ್ನೇರುತ್ತಿರಲು ಎತ್ತುಗಳು ತುಂಬಾ ಕಷ್ಟಪಡುವಂತಾಗಿತ್ತು. ಹಾಗೆ ಮೇಲೇರುತ್ತಿದ್ದಂತೆ ಬಂಡಿಯಲ್ಲಿರುವ ಕೆಲವರು ಕೆಳಗಡೆಗಿಳಿದು ಗಾಲಿಯ ಹಿಂಭಾಗದಲ್ಲಿ ಕಲ್ಲುಗಳನ್ನು ಹಾಕುತ್ತಾ ಮೇಲೆರಿಸುತ್ತಿದ್ದರು. ಭಕ್ತರು ದೇವತೆಗೆ ಏನಾದರೂ ಹರಕೆ ಬೇಡಿಕೊಂಡಿದ್ದರೆ ಅವುಗಳನ್ನು, ದವಸಧಾನ್ಯಗಳನ್ನು, ಪ್ರಸಾದದ ವ್ಯವಸ್ಥೆ, ಹಾಗೂ ತಾವೇ ಆ ದೇವತೆಯ ಕೆಲಸ ಕಾರ್ಯಗಳನ್ನು ಮಾಡುವುದರ ಮೂಲಕ ತೀರಿಸುತ್ತಿದ್ದರು. ಇದರಿಂದ ನಮಗೆ ತಿಳಿಯುವುದೇನೆಂದರೆ ಆಗಿನ ಕಾಲಾವಧಿಯಲ್ಲಿ ಕಾಲಕಾಲಕ್ಕೆ ಸರಿಯಾದ ಮಳೆಯಾಗುವುದರಿಂದ ಬೆಳೆಗಳು ಸರಿಯಾಗಿ ಬರುವುದರಿಂದ ಆ ದವಸಧಾನ್ಯಗಳನ್ನೇ ಕಾಣಿಕೆಯ ರೂಪವಾಗಿ ನೀಡುತ್ತಿರಬಹುದೆಂದು ತಿಳಿಯುತ್ತದೆ. ದೇವರ ಶುಭ ಕಾರ್ಯಗಳ ಸಂದರ್ಭದಲ್ಲಿ ಹಾಲು, ಮೊಸರು, ತುಪ್ಪವನ್ನು ದೇವಾಲಯಕ್ಕೆ ದಾನಗೈಯುತ್ತಿದ್ದರು ಎಂದು ತಿಳಿಯಲಾಯಿತು. ಜಾತ್ರೆಯ ಎಲ್ಲಾ ಕೆಲಸ ಕಾರ್ಯಗಳಾದ ದೇವಾಲಯಕ್ಕೆ ಸುಣ್ಣ ಬಣ್ಣ ಹಚ್ಚುವುದು, ಸ್ವಚ್ಛತೆ ಕೈಗೊಳ್ಳುವುದು, ಪ್ರಸಾದವನ್ನು ಸಿದ್ಧಗೊಳಿಸುವುದು, ಇನ್ನೂ ಮುಂತಾದ ಕೆಲಸಗಳನ್ನು ಭಕ್ತರೇ ನಿರ್ವಹಿಸುತ್ತಿದ್ದರು. ಆ ದಿನಮಾನದಲ್ಲಿ ಜಾತ್ರೆಯ ದಿನಗಳಲ್ಲಿ ಜಾತ್ರೆಯು ನಡೆಯಬೇಕಾದರೆ ಬೆರಳೆಣಿಕೆಯಷ್ಟು ಮಿಠಾಯಿ ಅಂಗಡಿಗಳು ಹಾಗೂ ಅಲ್ಲೊಬ್ಬರು ಇಲ್ಲೊಬ್ಬರು ತೆಂಗಿನಕಾಯಿಯ ವ್ಯಾಪಾರಸ್ಥರು ಕಂಡುಬರುತ್ತಿದ್ದರು. ಜೋಗೇರ (ಸ್ಟೇಷನರಿ) ಅಂಗಡಿಗಳು ಅಪರೂಪವಾಗಿದ್ದವು. ಜಾತ್ರೆಗೆ ಬಂದ ಭಕ್ತರಿಗೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ವಸತಿ ಇರುತ್ತಿರಲಿಲ್ಲ. ಏಕೆಂದರೆ ದಟ್ಟವಾದ ಕಾಡು ಆಗಿರುವುದರಿಂದ ಹುಳಉಪ್ಪಡಿಗಳು, ಕಾಡುಪ್ರಾಣಿಗಳ ಭಯದಿಂದ ಜಾತ್ರೆಯ ದಿನ ಬಂದು ಮರಳಿ ಹೋಗುವವರ ಸಂಖ್ಯೆ ಹೆಚ್ಚಾಗಿತ್ತು.

ಪ್ರಸ್ತುತ ದಿನಗಳಲ್ಲಿ ಜಾತ್ರೆಗೆ ಭಕ್ತರ ಸಿದ್ಧತೆ : (Devotees Preparing For the Fair in the Present Days)

ಇಂದಿನ ವಾಸ್ತವಿಕ ಸ್ಥಿತಿಯನ್ನು ನೋಡಿದರೆ, ಜಾತ್ರೆಗೆ ಹೋಗುವ ಯಾತ್ರಿಕರ ಸಂಸ್ಕೃತಿ ಹಾಗೂ ಸಂಪ್ರದಾಯಗಳು ಸ್ಥಿತ್ಯಂತರ ಹೊಂದಿವೆ. ಇವತ್ತು ಆ ಕಳೆದ ದಿನಗಳಂತೆ ಒಂದು ದಿನ, ಎರಡು ದಿನಗಳು ಮುಂಚಿತವಾಗಿ ಬರುವಂತ ಸ್ಥಿತಿ ಕಡಿಮೆಯಾಗಿದೆ. ಕಾರಣ ಇಂದಿನ ದಿನಗಳಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆಯು ಸುಲಭವಾಗಿ, ಸರಳವಾಗಿಯೂ ಲಭ್ಯವಿರುವುದರಿಂದ,

ಜಾತ್ರೆಯ ಆಚರಣೆಗಳ ಸಮಯಕ್ಕೆ ಸರಿಯಾಗಿ ಬರಹುದು. ಇನ್ನೂ ಕೆಲವರಂತೂ ಸ್ವತಃ ವಾಹನಗಳಿರುವುದರಿಂದ ಯಾವಾಗ ಬೇಕಾದರೂ ಬರಬಹುದು. ಪಾಶ್ಚಾತ್ಯ ಪ್ರಭಾವ ಹಾಗೂ ಜಾಗತೀಕರಣದಿಂದ ಸುಲಭವಾಗಿ ಸಂಪ್ರದಾಯದಿಂದ ಬದಲಾವಣೆಯತ್ತಾ ಸಾಗಿದ್ದಾರೆ. ಇಂದಿನ ಜಾತ್ರೆಗಳನ್ನು ಅವಲೋಕಿಸಿದಾಗ ಜಾತ್ರೆಗೆ ಬರುವಂತಹ ಭಕ್ತರು ತಮ್ಮ ತಮ್ಮ ಆರ್ಥಿಕತೆಗೆ ಅನುಗುಣವಾಗಿ ಟೆಂಪೋ, ಟ್ರ್ಯಾಕ್ಟರ್, ಮಿನಿಬಸ್, ಟ್ಯಾಕ್ಸಿ, ಮಿನಿ ಲಾರಿಗಳು, ಗೂಡ್ಸ್ ಗಾಡಿಗಳು, ತ್ರಿಚಕ್ರ ವಾಹನಗಳಾದ ಗೂಡ್ಸ್ ಆಟೋರಿಕ್ಷಾಗಳು, ಅಪ್ಪೇ ಗೂಡ್ಸ್ ಗಾಡಿ, ಟಾಟಾ ಮ್ಯಾಜಿಕ್, ಕಾರುಗಳು, ಸೈಕಲ್ ಮೋಟರ್‌ಗಳನ್ನು, ತೆಗೆದುಕೊಂಡು ಬಂದಿರುವರು. ಜಾತ್ರೆಗೆ ಬರುವಂತಹ ಭಕ್ತರು ತಮ್ಮೂರಿನ ಕೇರಿ, ಓಣಿ, ವಠಾರದವರು ಕೂಡಿಕೊಂಡು, ಹತ್ತು-ಹದಿನೈದು ಜನರು ಸೇರಿಕೊಂಡು ತಮಗೆ ಸರಿ ಎನಿಸಿದ ವಾಹನಗಳನ್ನು ಗೊತ್ತು ಮಾಡಿಕೊಂಡು ಬರುವರು. ಒಂದೇ ಕುಟುಂಬದವರು ಬಂಧು-ಬಳಗ ಸೇರಿಕೊಂಡು ಜಾತ್ರೆಗೆ ಯಾತ್ರೆಯನ್ನು ಕೈಗೊಳ್ಳುವರು. ಕೆಲವೊಂದಿಷ್ಟು ಜನರು ಆಟೋ ಮಾಡಿಕೊಂಡು ಬಂದರೆ, ಇನ್ನು ಕೆಲವರು ಕಾರು, ಟ್ರ್ಯಾಕ್ಟರ್ ಇತ್ಯಾದಿಗಳನ್ನು ಮಾಡಿಕೊಂಡು ಬರುವರು. ಅಕಸ್ಮಾತ್ ಬರುವಂತ ಭಕ್ತರು ತರುವಂತ ವಾಹನ ಸ್ವಂತದ್ದಾಗಿದ್ದರೇ, ಅದರ ಶೃಂಗಾರವನ್ನು ನೋಡುವುದಕ್ಕೆ ಎರಡು ಕಣ್ಣುಗಳು ಸಾಲದು. ನಾನು ಜಾತ್ರೆಯ ಸಮಯದಲ್ಲಿ ಕ್ಷೇತ್ರಕಾರ್ಯಕ್ಕೆ ಬಂದ ಸಂದರ್ಭದಲ್ಲಿ ನನ್ನ ಕಣ್ಣಿಗೆ ಕಾಣಿಸಿದ ಗೋಕಾಕ್, ರಾಯಬಾಗ, ನರಗುಂದ, ಯರಗಟ್ಟಿ ಭಾಗಗಳಿಂದ ಬಂದಿರುವ ಟ್ರ್ಯಾಕ್ಟರ್‌ಗಳ ಅಲಂಕಾರವನ್ನು ನಾನು ಕಂಡಂತೆ ತಿಳಿಸುವುದಾದರೆ, ಅವು ಡಿಜಿಟಲ್‌ಸೌಂಡ್ ಸಿಸ್ಟಮ್‌ಗಳನ್ನು ಟ್ರ್ಯಾಕ್ಟರ್ ವುಡ್‌ನಲ್ಲೇ ಅಳವಡಿಸಲಾಗಿತ್ತು.

ಈ ವಾಹನದ ಮುಂಭಾಗವು ಬಣ್ಣಬಣ್ಣದ ಹಾಳೆಯಿಂದ ತಯಾರಿಸಿದ ಪ್ಲಾಸ್ಟಿಕ್ ಹೂಗಳು, ಹಾಗೂ ಮಾಲೆಗಳನ್ನು ಹಾಕಲಾಗಿತ್ತು. ವುಡ್‌ನ ಎಡ ಹಾಗೂ ಬಲಭಾಗದಲ್ಲಿ ಮುಂದೆ ಮಿಂಚಿನ ಜರಗಳು ಉಲ್ಲಾಣದಲ್ಲಿ ಮಾಡಿರುವ ಬಣ್ಣ ಬಣ್ಣದ ದೊಡ್ಡ ಗಾತ್ರದ ಗೊಂಡೆಹೂಗಳನ್ನು ಜೋತು ಬೀಳುವಂತೆ ಕಟ್ಟಲಾಗಿತ್ತು. ವುಡ್‌ನ ಎರೆಡೂ ಭಾಗಕ್ಕೂ ದೊಡ್ಡದಾಗಿರುವ ಕನ್ನಡಿಗಳು. ಅವುಗಳಿಗೆ ಚಿಕ್ಕದಾದ ವಿವಿಧ ಬಣ್ಣದ ಗೊಂಡೆಹೂಗಳನ್ನು ಕಟ್ಟಿರುವರು. ಇಂಜಿನ್‌ನ ಮುಂಭಾಗದ ಎರೆಡೂ ಬಂಪರ್‌ಗಳಿಗೆ ಪ್ಲಾಸ್ಟಿಕ್ ವೈಯರ್‌ದಂತಹ ವಸ್ತುವಿನಿಂದ ಹೆಣೆದಿರುವಂತ ಹೆಣಿಕೆಯ ಹೂವಿನ ಚಡಿಗಳನ್ನು ಕಟ್ಟಲಾಗಿತ್ತು. ಎರಡು ಬಂಪರ್‌ಗಳಿಗೆ ಕೆಳಭಾಗದಲ್ಲಿ ಹೊಂದಿಕೊಂಡಿರುವ ಅಡ್ಡಪಟ್ಟಿಗೆ ಸಾಲುಸಾಲಾಗಿ ಬಣ್ಣಬಣ್ಣದ ಗೊಂಡೆವುಗಳನ್ನು ಕಟ್ಟಲಾಗಿತ್ತು. ಬಾನಟ್‌ನ ಮುಂಭಾಗದ ಮೇಲೆ ಪ್ಲಾಸ್ಟಿಕ್‌ನ ಹೂಗುಚ್ಛವನ್ನು ಅಳವಡಿಸಲಾಗಿತ್ತು. ವುಡ್‌ನ ಮುಂಭಾಗದ ಮೇಲ್ಮುಖದಲ್ಲಿ ಹಬ್ಬ-ಹರಿದಿನಗಳಲ್ಲಿ ಮನೆಯ ಬಾಗಿಲುಗಳಿಗೆ ಹಾಕುವಂತ ವಿವಿಧ ಮಾದರಿಯ ಅದರ ಬಾಗಿಲು ಪಡೆದೆ (ತೋರಣ) ಗಳನ್ನು ಹಿಂದೆ ಹಾಗೂ ಮುಂದಿನ ಭಾಗಕ್ಕೆ ಅಳವಡಿಸಿದ್ದರು. ವುಡ್‌ನ ಸಂಪೂರ್ಣ ಹಂಚಿಯ ಭಾಗಕ್ಕೆ ಜಿಗ್ ಜಾಗ್ ಮಾಡುವ ಎಲ್.ಇ.ಡಿ ಬಣ್ಣ ಬಣ್ಣದ ಚಿಕ್ಕ

ಚಿಕ್ಕ ಲೈಟಿನ ಸಾಲನ್ನೇ ಆದಕ್ಕೆ ಜೋಡಿಸಲಾಗಿತ್ತು. ಆ ವುಡ್‌ನ ರೆಗ್ಜಿನ್ ಕವರ್‌ದ ಎರಡು ಭಾಗಕ್ಕೆ ಚಲನಚಿತ್ರದ ಹೆಸರುಗಳು, ಪ್ರೇಮದ ಸಂದೇಶವನ್ನು ಸಾರುವ ಎರಡು ಮೂರು ಸಾಲುಗಳ ಕವನಗಳನ್ನು ಬರೆಸಿರುವುದು ಕಂಡುಬಂದವು. ಟ್ರ್ಯಾಕ್ಟರ್ ಇಂಜಿನ್ ಮುಂಭಾಗದ ಬಾನೆಟ್‌ನಿಂದ ನೇರವಾಗಿ ವುಡ್‌ಗೆ ಬಣ್ಣ ಬಣ್ಣದ ರಿಬ್ಬನ್ ಗಳನ್ನು ಬಾಜು ಬಾಜಾಗಿ ಕಟ್ಟಿರುತ್ತಾರೆ. ಇದಲ್ಲದೆ ಬಂಪರ್‌ಗಳಿಗೆ ವಿವಿಧ ಬಣ್ಣಗಳಿಂದ ಕೂಡಿದ ಗಾಳಿ ತುಂಬಿದ ಬಲೂನ್‌ಗಳನ್ನು ಕಟ್ಟಲಾಗಿರುತ್ತದೆ. ಇದು ಒಂದು ಭಾಗವಾದರೆ, ಇನ್ನೊಂದು ಭಾಗವಾದ ಟ್ರಾಲಿಯನ್ನು ಹಿಂದೆ ಕೊಲ್ಲಾರಿ ಬಂಡಿಗೆ ಕಟ್ಟುತ್ತಿರುವಂತಹ ಮೇಲ್ಹಾವಣಿಯನ್ನು ಇದಕ್ಕೆ ಕಟ್ಟಿರುತ್ತಾರೆ. ಇದು ಸುಮಾರು ಐದು ಆರು ಅಡಿ ಎತ್ತರದವರೆಗೂ ಕಟ್ಟಲಾಗಿರುತ್ತದೆ. ಇದರ ರಚನೆಯ ವಿಧಾನವೆಂದರೆ ಎರಡು ಹಸಿಯಾಗಿರುವಂತಹ ಬಿದಿರುಗಳನ್ನು ಜೋಡಿಸಿ ಅರ್ಧಚಂದ್ರಾಕೃತಿಯಲ್ಲಿ ಬಾಗಿಸಿ ಟ್ರಾಲಿಯ ಎರಡು ಕಡೆಯ ಪಾಟಗಳಿಗೆ ಕಟ್ಟಲಾಗಿರುತ್ತದೆ. ಇಂಥ ಹಲವರು ಬಿದಿರುಗಳಿಂದ ರಚನೆ ಮಾಡುತ್ತಾರೆ.

ಟ್ರಾಲಿಯ ಮೇಲೆ ಕಟ್ಟಿರುವ ಮೇಲ್ಹಾವಣಿಯ ಮೇಲೆ ಗುಡಾರ ಅಥವಾ ತಾಡಪತ್ರಿಯನ್ನು ಹಾಗೂ ಇತ್ತೀಚಿಗೆ ಹೆಚ್ಚಿಗೆ ಲಭ್ಯವಾಗುವ ಪ್ಲಾಸ್ಟಿಕ್ ಹಾಳೆಯ ಚೀಲವನ್ನು ಸಂಪೂರ್ಣವಾಗಿ ಹೊದಿಸಿರಲಾಗಿರುತ್ತದೆ. ಇದರ ಭದ್ರತೆಗಾಗಿ ಹಲವಾರು ಹಗ್ಗಗಳಿಂದ ಟ್ರಾಲಿಯ ಎರಡು ಬದಿಗೆ ಕಟ್ಟಲಾಗಿರುತ್ತದೆ. ಕೆಲವೊಂದು ಟ್ರ್ಯಾಕ್ಟರ್‌ಗಳಲ್ಲಿ ಈ ಕೊಲ್ಲಾರಿಯನ್ನು ಎರಡು ಸ್ಥರದಲ್ಲಿ ನಿರ್ಮಿಸಿಕೊಂಡಿರುತ್ತಾರೆ. ಮೇಲಿನ ಸ್ತರದಲ್ಲಿ ಗಂಟು ಮೂಟೆಗಳು ಹಾಗೂ ದಿನನಿತ್ಯದ ಬಳಕೆಯ ವಸ್ತುಗಳನ್ನು ಇದರಲ್ಲಿ ಹಾಕಲಾಗಿರುತ್ತದೆ. ಕೆಳಗಿನ ಭಾಗದಲ್ಲಿ ಪ್ರಯಾಣಿಕರು ಕುಳಿತುಕೊಳ್ಳುವುದಕ್ಕೆ ಅನುಕೂಲಮಾಡಿಕೊಂಡಿರುವರು. ದೂರದ ಊರಿನಿಂದ ಪ್ರಯಾಣಿಸುವಂತಹ ಸಮಯದಲ್ಲಿ ಮಳೆ, ಗಾಳಿ, ಬಿಸಿಲು, ಚಳಿಯಿಂದ ರಕ್ಷಣೆ ಪಡೆಯುವುದಕ್ಕೋಸ್ಕರ ಇದನ್ನು ರಚನೆ ಮಾಡಿಕೊಳ್ಳುವುದು ಪ್ರಮುಖ ಉದ್ದೇಶವಾಗಿರುವುದು ಕಂಡುಬರುತ್ತದೆ. ಈಗಿನ ಭಕ್ತರು ಸಹ ತಮಗೆ ಆ ಜಾತ್ರೆ ಮುಕ್ತಾಯವಾಗುವವರೆಗೂ ದಿನ ನಿತ್ಯದಲ್ಲಿ ಏನೇನನ್ನು ಅವಶ್ಯಕತೆ ಇದೆಯೋ, ಊಟೋಪಚಾರದ ವ್ಯವಸ್ಥೆಗೆ ಕಾರ, ಎಣ್ಣೆ, ಅಕ್ಕಿ, ರವೆ, ಪಾತ್ರೆಗಳು, ನೀರು ತುಂಬಿಟ್ಟುಕೊಳ್ಳಲು ಬ್ಯಾರಲ್‌ಗಳು, ಹಾಸಿಗೆ, ಬಟ್ಟೆ ತೆಗೆದುಕೊಂಡು ಬಂದಿರುವರು. ಇತ್ತೀಚಿಗಂತೂ ಕಲ್ಲುಹೂಡಿ ಕಟ್ಟಿಗೆ ಒಲೆ ಹಚ್ಚುವುದು ಕಡಿಮೆಯಾಗುತ್ತಾ ಬಂದಿದೆ. ಇದರ ಬದಲಾಗಿ ಗ್ಯಾಸ್ ಒಲೆಗಳನ್ನು ತಮ್ಮೊಂದಿಗೆ ಎಲ್ಲಾ ವ್ಯವಸ್ಥಿತವಾಗಿ ತೆಗೆದುಕೊಂಡು ಬಂದಿರುತ್ತಾರೆ.

ಚಂದಾಲಿಂಗೇಶ್ವರ ಜಾತ್ರೆಗೆ ಬರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದರಿಂದ ಬಂದಂತಹ ಭಕ್ತರಿಗೆ ಅಲ್ಲಿ ಉಳಿದುಕೊಳ್ಳಲು ವಸತಿ ವ್ಯವಸ್ಥೆ ಇಲ್ಲದಿರುವುದರಿಂದ ಚಂದಾಲಿಂಗೇಶ್ವರ ಮುಖ್ಯದ್ವಾರದ ಹೊರವಲಯದ ಪ್ರದೇಶದಲ್ಲಿ ಎಲ್ಲೆಂದರಲ್ಲಿ ಭಕ್ತರು ಇಳಿದುಕೊಂಡಿರುತ್ತಾರೆ. ಬಯಲು ಪ್ರದೇಶದಲ್ಲಿರುವ ಗಿಡ ಮರದಡಿಯಲ್ಲೇ ಅವರು ಆ ಮೂರು ದಿನಗಳ ಜೀವನವನ್ನು

ಸಂತೋಷದಿಂದ ನಡೆಸುತ್ತಾರೆ. ಜಾತ್ರೆಯ ದಿನದಂದು ನಾನು ಈ ಕ್ಷೇತ್ರದಲ್ಲಿ ಹೋಗಿ ಆ ಪ್ರದೇಶದ ಸುತ್ತಲೂ ಕಣ್ಣಾಡಿಸಿದಾಗ ಗೋಚರವಾಗಿದ್ದು ಜಾತ್ರೆಗೆ ಬಂದ ಭಕ್ತರದಂಡು. ಅವರೆಲ್ಲರೂ ಮರದಡಿಯಲ್ಲಿ ಗುಂಪುಗುಂಪಾಗಿ ತಂಗಿರುವುದು ಕಂಡುಬಂತು. ಕೆಲವೊಂದಿಷ್ಟು ಭಕ್ತಾದಿಗಳು ಮುಖ್ಯ ಪ್ರವೇಶದ್ವಾರದೊಳಗಿರುವ ಬಯಲು ಪ್ರದೇಶದಲ್ಲಿರುವ ನಾಗದೇವತೆಯಗುಡಿಯಲ್ಲಿ, ಸಮುದಾಯ ಭವನದಲ್ಲಿ, ಹಾಗೂ ವೀರಭದ್ರೇಶ್ವರನ ಗುಡಿಯ ಹಿಂದಿರುವ ವಿಶಾಲವಾದ ಬೇವಿನ ಮರದಡಿಯಲ್ಲಿ ತಮ್ಮ ಮೂರು ದಿನಗಳ ಆಶ್ರಯ ಪಡೆದುಕೊಂಡಿರುತ್ತಾರೆ. ಇದಲ್ಲದೆ ಮುಖ್ಯ ದೇವಾಲಯದ ಪೌಳಿಯ ಒಳ ಆವರಣದಲ್ಲಿಯೂ ಸಹ, ಗಂಗೆ ಮಾಳಮ್ಮನ ಗುಡಿಯ ಮುಂದೆ, ಹೆಗ್ಗಡೆ ಪ್ರಧಾನಿಯ ಗುಡಿಯ ಮಂಟಪದಲ್ಲಿ, ಹಂಪಿ ವಿರೂಪಾಕ್ಷೇಶ್ವರ ಗುಡಿಯಲ್ಲಿ ಮುಖ್ಯ ಗುಡಿಯ ಎದುರಿಗೆ ಇರುವ ಬಸವೇಶ್ವರ ತೆರೆದ ಮಂಟಪದಲ್ಲಿ ಗುಡಿಯ ಹೊರಭಾಗದಲ್ಲಿರುವ ಯಾತ್ರ ನಿವಾಸಗಳ ಒಳ-ಹೊರಗೆ ಮತ್ತು ಇದರ ಮೇಲ್ಛಾವಣಿಯನ್ನು ವಸತಿಗೆ ಬಳಸಿಕೊಳ್ಳುವರು. ಜಾತ್ರೆಗೆ ಬಂದಂತಹ ಭಕ್ತರಲ್ಲಿ ದೋಣಿ ತುಂಬಿಸುವಂತ ಸಂಪ್ರದಾಯವಿದ್ದರೆ ಅಂತಹವರು ತಾವು ಇಳಿದುಕೊಂಡ ಪ್ರದೇಶದಲ್ಲಿ ಗೊರವಯ್ಯ, ಗೊರವಮ್ಮರನ್ನು ಬರಮಾಡಿಕೊಂಡು ಸಂಪ್ರದಾಯಬದ್ಧವಾಗಿ ಈ ಕಾರ್ಯವನ್ನು ನೆರವೇರಿಸಿಕೊಳ್ಳುವರು.

ಪೂರ್ವ ಹಾಗೂ ಪ್ರಸ್ತುತ ದಿನಗಳಲ್ಲಿ ಭಕ್ತರ ಜಾತ್ರೆಯ ಸಿದ್ಧತೆಯ ಬಗ್ಗೆ ಕೇಳಿ ಹಾಗೂ ಕ್ಷೇತ್ರಕಾರ್ಯದ ಮೂಲಕ ನೋಡಿ ಮಾಹಿತಿ ತೆಗೆದುಕೊಂಡಿದ್ದೇನೆ. ಐವತ್ತರ ದಶಕದಲ್ಲಿಯ ಜಾತ್ರೆಯ ಆಚರಣೆಯ ಬಗ್ಗೆ ತಿಳಿದುಕೊಂಡಾಗ ಹೆಚ್ಚಿನ ಪ್ರಮಾಣದಲ್ಲಿ ಭಕ್ತರು ಬರುತ್ತಿರಲಿಲ್ಲ. ಇಲ್ಲಿಗೆ ಬರುತ್ತಿರಲಿಲ್ಲವೆಂದರೆ ದೇವರ ಬಗ್ಗೆ ಭಕ್ತಿ ಇರಲಿಲ್ಲವೆಂದಲ್ಲ. ಬರುವಂತವರಿಗೆ ಸರಿಯಾದ ಸಾರಿಗೆ ಸಂಪರ್ಕ ವ್ಯವಸ್ಥೆ ಇರಲಿಲ್ಲ. ಆರ್ಥಿಕತೆಯ ಕೊರತೆ, ದೂರದ ದಾರಿಯ ಸಮಸ್ಯೆ ಎದ್ದು ಕಾಣುತ್ತಿತ್ತು. ಚಾಂದಾಲಿಂಗೇಶ್ವರ ದೇವಾಲಯಕ್ಕೆ ಈಗಿನಂತೆ ಡಾಂಬರ್ (ಟಾರ್) ರಸ್ತೆಯಿಲ್ಲದೆ ಹಾಗೂ ಸುಧಾರಣೆ ಇಲ್ಲದ ರಸ್ತೆಯಿಲ್ಲದೆ ಇರುವಾಗ, ಇದ್ದಂತಹ ಕಚ್ಚಾರಸ್ತೆಯು ಸುಧಾರಣೆ ಇಲ್ಲದೆ ಇರುವಂತಹ ಸಂದರ್ಭದಲ್ಲಿ ಕಾಲ್ನಡಿಗೆಯಿಂದ ಹಾಗೂ ಬಂಡಿಗಳನ್ನು ಹೂಡಿಕೊಂಡು ಬರುವುದನ್ನು ತಿಳಿದುಕೊಂಡರೆ ಆ ದೇವರ ಮೇಲೆ ಅವರಿಗಿರುವ ನಂಬಿಕೆಯೇ ಕಾರಣ. ಇವರು ಜಾತ್ರೆಗೆ ಬರುವುದಕ್ಕಿಂತ ಪೂರ್ವತಯಾರಿ ನೋಡಿದರೆ ತಾವು ತರತಕ್ಕಂತಹ ಬಂಡಿಯನ್ನು ಮುಂಜಾಗ್ರತವಾಗಿ ಅದನ್ನು ಪರಿಶೀಲಿಸುವುದರಿಂದ ಪ್ರಯಾಣಕ್ಕೆ ಹಾಗೂ ಜೀವನಕ್ಕೆ ತೊಂದರೆಯಾಗದಿರಲೆಂದು ಪರಿಶೀಲಿಸುತ್ತಿದ್ದರು ಎಂದು ತಿಳಿಯಬಹುದು.

ಜಾತ್ರೆಗೆ ತರುವಂತಹ ಬಂಡಿಯನ್ನು ಅಲಂಕರಿಸಿರುವುದು ನೋಡಿದರೆ ಅವರ ಸೌಂದರ್ಯ ಪ್ರಜ್ಞೆ ಹೇಗಿತ್ತು ಎಂಬುದನ್ನು ತೋರಿಸಿಕೊಡುತ್ತದೆ. ಈ ಅಲಂಕಾರದ ಇಂಪಿನಲ್ಲಿ ತಾವು ಕೈಗೊಂಡ ಪ್ರಯಾಣವು ಪ್ರಯಾಸ ಆಗದಿರಲಿ, ಮನಸ್ಸಿಗೆ ಖುಷಿ ಸಂತೋಷ ತರಲಿ, ಇದರಿಂದ ಜಾತ್ರೆಯ ಪ್ರಯಾಣದ ದಾರಿಯು ಸಾಗಿರುವುದು ಕಾಣುಬರುವುದಿಲ್ಲ ಎಂಬುದನ್ನು ಸಾವು

ತಿಳಿಯಬಹುದು. ಜನಪದರು ತಮ್ಮ ಬಂಡಿಗೆ ಅಲಂಕಾರಿಕ ದೃಷ್ಟಿಯಿಂದ ಹಚ್ಚುವಂತಹ ಡಾಂಬರ್‌ನಂತಹ ಪದಾರ್ಥವು ವೈಜ್ಞಾನಿಕ ದೃಷ್ಟಿಯಿಂದ ನಾವು ಸೂಕ್ಷ್ಮವಾಗಿ ಅವಲೋಕಿಸಿದಾಗ ನಮಗೆ ತಿಳಿಯುವುದೇನೆಂದರೆ ಮರದ ಜೋಡಣಾ ಭಾಗದಲ್ಲಿ ಮಾತ್ರ ಅದನ್ನು ಲೇಪಿಸುತ್ತಿದ್ದರು. ಡಾಂಬರು ಜಿಗುಟಾಗಿರುವ ಪದಾರ್ಥವಾಗಿರುವುದರಿಂದ ಬಿರುಕು ಇರುವ ಪ್ರದೇಶದಲ್ಲಿ ಹೋಗಿ ಒಂದಕ್ಕೊಂದು ಬಿಗಿಯಾಗಿ ಹಿಡಿಯುವ ಪ್ರಕ್ರಿಯೆ ಉಂಟಾಗುತ್ತದೆ. ಗಾಲಿಗೆ ಹಚ್ಚುವಂಹ ಕೀಲೆಣ್ಣೆಯು ಬಂಡಿಯು ಸಾರಾಗವಾಗಿ ಸಾಗಲು ಮತ್ತು ಎಳೆಯುವಂತ ಎತ್ತುಗಳಿಗೆ ಭಾರವಾಗದಿರಲಿ ಮತ್ತು ಆ ವಸ್ತುಗಳು ಬೇಗನೆ ಸವಕಳಿ ಬಾರದಿರಲಿ ಹಾಗೂ ಕರ್ಕಶ ಧ್ವನಿಯು ಪ್ರಯಾಣಿಕರಿಗೆ ಕಿರಿಕಿರಿಯನ್ನು ತರದಿರಲಿ ಎಂಬ ಮುಂದಾಲೋಚನೆಯಿಂದ ಬಳಸುವುದು ವಿಶಿಷ್ಟವಾಗಿತ್ತು. ಎರಡು ಬದಿಯ ಕೀಲುಗಳಿಗೆ ಗೆಜ್ಜೆ ಹಾಕುವುದು ರೂಢಿಯಾಗಿತ್ತು. ಇವುಗಳನ್ನು ಹಾಕುವುದರಿಂದ ಪಾದಾಚಾರಿಗಳಿಗೆ ಶಬ್ದ ಕೇಳಿ ದಾರಿಯನ್ನು ಬಿಡುವುದಕ್ಕೆ ಹಾಗೂ ಬಂಡಿಯಲ್ಲಿ ಪ್ರಯಾಣಿಸುವವರಿಗೆ ಮುಂದೆ ಮುಂದೆ ಸಾಗಿದಂತೆಲ್ಲ ಆ ಗೆಜ್ಜೆಗಳ ಲಯಬದ್ಧವಾದ ಶಬ್ದವು ಚಿಕ್ಕಮಕ್ಕಳಿಗೆ, ದೊಡ್ಡವರ ಕಿವಿಗೆ ಇಂಪನ್ನು ನೀಡುತ್ತಿತ್ತು.

ಬಂಡಿಗೆ ಕೊಲ್ಲಾರಿಯನ್ನು ಕಟ್ಟುವುದರಿಂದ ಪ್ರಯಾಣಿಸುವವರಿಗೆ ಗಾಳಿ, ಮಳೆ, ಚಳಿ, ಬಿಸಿಲಿನಿಂದ ರಕ್ಷಣೆಗಾಗಿ ಅದನ್ನು ಆ ರೀತಿ ಕಟ್ಟುವ ಕಲೆ ಅವರಿಗೆ ತಿಳಿದಿತ್ತು. ಅದಕ್ಕೆ ಅಲಂಕಾರಿಕ ವಸ್ತುಗಳಾಗಿ ಮನೆಗೆ ಬಳಸುವಂತಹ ಅಲಂಕಾರಿಕ ವಸ್ತುಗಳನ್ನು ಹಾಕುವುದರ ಉದ್ದೇಶವೇನೆಂದರೆ ಪ್ರಯಾಣಿಸುವವರಿಗೆ ಪ್ರಯಾಣ ಬೇಸರವಾಗದಿರಲಿ, ಅವರಿಗೆ ಅವುಗಳನ್ನು ನೋಡಿದಾಗಲೆಲ್ಲ ತಮ್ಮ ಮನೆಯಲ್ಲಿಯೇ ಇದ್ದೇವೆ ಎಂಬ ಮನೋಭಾವನೆಯೂ ಅವರಲ್ಲಿ ಉಂಟಾಗಲಿ ಎಂಬುದರ ಪೂರಕವಾಗಿ ಇಂಥ ವಸ್ತುಗಳನ್ನು ನೇತುಹಾಕುತ್ತಾರೆ. ಇವರು ಪ್ರಯಾಣದ ವೇಳೆ ತಮ್ಮ ಬಗ್ಗೆ ಅಷ್ಟೇ ಕಾಳಜಿ ಇರುವುದಲ್ಲದೇ, ಎತ್ತುಗಳಿಗೂ ಆಹಾರದ ವ್ಯವಸ್ಥೆಯನ್ನು ತಮ್ಮ ಬಂಡಿಯಲ್ಲಿ ಕೊಂಡೊಯ್ಯುವುದರಿಂದ ಇವರಿಗೆ ಪ್ರಾಣಿದಯೆ, ಅನುಕಂಪವೂ 'ಇದ್ದಿರುವುದಾಗಿ ಗೊತ್ತಾಗುತ್ತದೆ. ದೇವಸ್ಥಾನಗಳಿಗೆ ದವಸ-ಧಾನ್ಯಗಳ ರೂಪದಲ್ಲಿ ಕಾಣಿಕೆ ಕೊಡುವುದರಿಂದ ಅವರ ಕಾಲಕ್ಕೆ ಮಳೆ-ಬೆಳೆ ಸರಿಯಾದ ಸ್ಥಿತಿಯಲ್ಲಿದ್ದವು ಎಂಬುದನ್ನು ತೋರಿಸಿಕೊಡುತ್ತದೆ. ಅವರು ದಾನವಾಗಿ ನೀಡುವ ವಸ್ತುಗಳಿಂದ ದೇವಸ್ಥಾನಗಳು ಬೆಳೆಯುವುದಕ್ಕೆ ಸಹಾಯಕವಾಗಿದೆ ಎಂದರು ತಪ್ಪಾಗಲಾರದು. ಜಾತ್ರೆಗೆ ಹೋಗುವಂತ ವೇಳೆಯಲ್ಲಿ ಮನುಷ್ಯರು ಅಲಂಕರಿಸಿಕೊಳ್ಳುವಂತೆ ಎತ್ತುಗಳಿಗೂ ಸ್ನಾನ ಮಾಡಿಸುವುದು, ಮೈಯಿಗೆ ಬಣ್ಣ, ಚುಕ್ಕೆಗಳನ್ನು ಇಡುವುದು, ಕೊಂಬಣಸು, ಗಗ್ರೆ-ಗುಂಪ್ರೆ, ಗೆಜ್ಜೆಸರ, ಗಂಟೆ, ಕಾಲ್ಗೆಜ್ಜೆಸರ, ಹಣೆ ಗೆಜ್ಜೆ ಮುಂತಾದವುಗಳಿಂದ ಶಬ್ದದನಾದ ಹೊರಬಿಳುವುದರಿಂದ ಬಂಡಿಯನ್ನು ಎಳೆಯುವಂತ ಎತ್ತುಗಳಿಗೆ ಪ್ರಯಾಣದ ದಾರಿಯ ದೂರ ಹಾಗೂ ಭಾರ ಎಳೆಯುವುದು ಅವುಗಳ ಮನೋಭಾವನೆಗೆ ಬರಕೂಡದೆಂದು ಅವುಗಳಿಗೂ, ಈ ಗೆಜ್ಜೆನಾದದಿಂದ ಮನಸ್ಸಿನ ಚಂಚಲತೆಯನ್ನು ಹಿಡಿದಿಡುವ ಶಕ್ತಿ ಬೆಳೆಯಲಿ ಎಂಬುದು ಮುಖ್ಯವಾಗಿರುತ್ತದೆ.

ಮೈಮೇಲೆ ಜೂಲು ಹಾಕುವುದರಿಂದ ಎತ್ತಿನ ಮೈಗೆ ಕೊಳೆ, ಬಿಸಿಲು ಹಾಗೂ ದಾರಿಯಲ್ಲಿ ಹೋಗುವಾಗ ಗಿಡಗಂಟೆಗಳು ತೆರೆಯದಿರಲಿ, ದೇಹದ ಭಾಗ ರಕ್ಷಣೆಯಾಗಿರಲಿ ಎಂದು ಸಂಪೂರ್ಣ ದೇಹದ ಮೇಲ್ಭಾಗ ಮುಚ್ಚಿಕೊಂಡಿರುತ್ತದೆ.

ಚಂದಾಲಿಂಗೇಶ್ವರನ ಜಾತ್ರೆಯನ್ನು ಸುತ್ತಲಿರುವ ಹಳ್ಳಿಗಳಾದ ಗುಡೂರು, ಮಾವಿನಇಟಗಿ, ಜೀಳಗಿಯವರು, ಹಾಗೂ ಮನ್ನೇರಾಳದವರು ಕೂಡಿಕೊಂಡು ಜಾತ್ರೆಯಲ್ಲಿ ಭಾಗಿಯಾಗುವುದೆಂದರೆ ಇದು ಜಾತ್ರೆಯ ಉತ್ಸವದ ಸಾಮರಸ್ಯವನ್ನು ತೋರಿಸುವುದಲ್ಲದೆ, ಊರು ಊರುಗಳ ಸಹಸಂಬಂಧಗಳು ಅನ್ಯೋನ್ಯತೆಯಿಂದ ಕೂಡಿದೆ ಎಂದು ತಿಳಿಯಲಾಗಿದೆ. ಆದರೆ ಆ ಎಲ್ಲಾ ಪ್ರದೇಶಗಳಿಂದ ಭಕ್ತರು ಬಂಡಿಯನ್ನು ಹೂಡಿಕೊಂಡು ಬರುವಾಗ ಎತ್ತಿನ ಕೊರಳಲ್ಲಿ ಲಿಂಬೆಹಣ್ಣನ್ನು ಕಟ್ಟುವುದು ಹಾಗೂ ಬಂಡಿಯ ಚಕ್ರದಡಿಯಲ್ಲಿ ಲಿಂಬೆಹಣ್ಣನ್ನು ಇಟ್ಟು ಹಾಯಿಸುವುದನ್ನು ಕೇಳಿದರೆ ಮಡಿ ಮೈಲಿಗೆಯ ಪರಿಕಲ್ಪನೆಯು ಜೀವಂತವಾಗಿತ್ತು ಎಂದು ತಿಳಿಯುತ್ತದೆ. ಅದನ್ನೇ ಇಂದಿನ ದಿನಗಳಲ್ಲಿ ದ್ವಿಚಕ್ರ, ತ್ರಿಚಕ್ರ, ನಾಲ್ಕು ಚಕ್ರಗಳ ವಾಹನ ಅಡಿಯಲ್ಲಿ ಇಡುವಂತಹ ಪರಿಪಾಠ ಮೂಡಿಬಂದಿದೆ.

ಪ್ರಸ್ತುತ ದಿನಗಳಲ್ಲಿ ಜಾತ್ರೆಗೆ ಭಕ್ತರ ಸಿದ್ಧತೆಯನ್ನು ಅವಲೋಕಿಸಿದರೆ ಸಂಸ್ಕೃತಿ ಆಚರಣೆ ಬದಲಾವಣೆಯಾಗಿದೆ ಹೊರತು, ನಾಶವಾಗಿರುವುದಿಲ್ಲ. ಇಂದಿನ ಸಾರಿಗೆ ಸಂಪರ್ಕ ಸೌಲಭ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತದೆ. ಹಿಂದಿನ ಕಾಲಘಟ್ಟದಲ್ಲಿ ಜಾತ್ರೆಗೆ ಹೋಗಬೇಕಾದರೆ ಕಾಲ್ನಡಿಗೆಯಿಂದ ಮತ್ತು ಬಂಡಿಯನ್ನು ಹೂಡಿಕೊಂಡು ಹೋಗುತ್ತಿದ್ದರು. ಆದರೆ ಇಂದು ಬಸ್ಸು, ಕಾರು, ಟೆಂಪೋ, ಟ್ರ್ಯಾಕ್ಟರ್, ಬೈಕ್ ಮುಂತಾದ ವಾಹನಗಳ ಸದುಪಯೋಗವನ್ನು ಪಡೆಯುವುದನ್ನು ನೋಡಿದರೆ ಮನುಷ್ಯ ತನ್ನ ಬೇಕು ಬೇಡಿಕೆಗಳೊಂದಿಗೆ ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವ ಗುಣ ಸ್ವಭಾವ ಗೊತ್ತಾಗುತ್ತದೆ. ರಾಜ್ಯ ಹಾಗೂ ಅಂತರರಾಜ್ಯಗಳಿಂದ ಬರುವ ಭಕ್ತರ ಸಂಖ್ಯೆ ಹೆಚ್ಚಾಗಿರುವುದನ್ನು ನೋಡಿದರೆ ಚಂದಾಲಿಂಗೇಶ್ವರನ ಮಹಿಮೆ ಹೆಚ್ಚು ಪ್ರಚಾರ ಪಡೆದುಕೊಂಡಿದೆ ಎಂದರೂ ತಪ್ಪಾಗಲಾರದು. ಈ ಭಕ್ತರು ತಾವು ಇಟ್ಟುಕೊಂಡಂತಹ ಬೇಡಿಕೆಗಳಿಗೆ ಸಕಾರಾತ್ಮಕ ಫಲಪ್ರದವಾಗಿರಬಹುದೆಂದು ತಿಳಿಯಬಹುದು. ನಮ್ಮ ಪೂರ್ವಜರು ತಾವು ಜಾತ್ರೆಗೆ ಬರುವುದಕ್ಕೆ ತಮ್ಮ ಬಂಡಿಯನ್ನು ಶೃಂಗಾರಗೊಳಿಸುತ್ತಿದ್ದರು. ಇವತ್ತು ಸಹ ಆ ಸಂಪ್ರದಾಯ ಹೊಂದಿಲ್ಲ. ಆದರೆ ಸ್ಥಿತ್ಯಂತರ ಹೊಂದಿರುವುದನ್ನು ಇವತ್ತು ನಾವು ಕಾಣುತ್ತೇವೆ.

ಆ ದಿನಗಳಲ್ಲಿ ನಮ್ಮ ಜನಪದರು ಅನುಸರಿಸುವಂತ ಕೆಲವು ಸಂಪ್ರದಾಯಗಳು ವೈಜ್ಞಾನಿಕತೆಯಿಂದ ಕೂಡಿದ್ದವು. ಇಂದು ಅವು ಕೇವಲ ಸೌಂದರ್ಯಕ್ಕೆ ಮಾತ್ರ ಎಂಬಂತೆ ತೋರುತ್ತವೆ. ಅವತ್ತಿನ ದಿನಗಳಲ್ಲಿ ಬಂಡಿಗಳಿಗೆ ಬಣ್ಣ ಹಚ್ಚುವುದು ಎತ್ತುಗಳನ್ನು ಸಿಂಗರಿಸುವುದು ಒಂದು ಅರ್ಥಪೂರ್ಣವಾಗಿತ್ತು. ಹಾಗೆ ಇವತ್ತು ಟ್ರ್ಯಾಕ್ಟರ್‌ಗಳನ್ನು ಶೃಂಗರಿಸುವುದು ಎಂದರೆ ಅದು ಕೃತಕತೆಯಿಂದ ಕೂಡಿದ್ದು. ಇದು ವ್ಯಕ್ತಿಗಳಿಗೆ ಆರ್ಥಿಕ ಹೊರೆಗೆ ಕಾರಣವಾಗುತ್ತದೆ. ಇಂದು

ಜಾತ್ರೆಗೆ ಹೋಗಲು ವಾಹನಗಳಿರುವುದರಿಂದ ಮನುಷ್ಯನ ಶ್ರಮ ಮತ್ತು ಸಮಯವನ್ನು ಉಳಿತಾಯ ಮಾಡಬಹುದು. ಅವತ್ತಿನ ದಿನಗಳಲ್ಲಿ ಅವರಿಗೆ ಆ ಮೂರು ದಿನಗಳಿಗೆ ಅವಶ್ಯಕವಾದ ವಸ್ತುಗಳನ್ನು ಕಡ್ಡಾಯವಾಗಿ ತಮ್ಮ ಮನೆಯಿಂದಲೇ ಒಯ್ಯುಬೇಕಾಗಿತ್ತು. ಏಕೆಂದರೆ ತಾವು ಇಳಿದುಕೊಂಡ ಸ್ಥಳದಲ್ಲಿ ಲಭ್ಯವಿರುತ್ತಿರಲಿಲ್ಲ. ಅಕಸ್ಮಾತ್ ಪೇಟೆಗೆ ಹೋಗಿ ತರಬೇಕೆಂದರೆ ಅಷ್ಟಕಷ್ಟೇ ಹಣ, ಸಾರಿಗೆ ಸಂಪರ್ಕದ ಕೊರತೆ, ಹಾಗೂ ಸುಧಾರಣೆಗೊಂಡಿರದ ಅಂಗಡಿ-ಮುಗ್ಗಟ್ಟುಗಳು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿರುತ್ತಿರಲಿಲ್ಲ. ಆದರೆ ಇವತ್ತು ಕೈಯಲ್ಲಿ ಹಣವಿದ್ದರೆ ಸಾಕು ನಾವು ಮನೆಯಿಂದ ಅವಶ್ಯಕ ವಸ್ತುಗಳನ್ನು ಬಿಟ್ಟು ಬಂದರೆ ಅದನ್ನು ಸ್ಥಳೀಯವಾಗಿ ಕೆಲವೇ ಸಮಯದಲ್ಲಿ ಪಡೆದುಕೊಳ್ಳಬಹುದು.

ಜಾತ್ರೆಯ ದಿನದಂದು ಹೆಚ್ಚಿನ ಪ್ರಮಾಣದಲ್ಲಿ ಭಕ್ತರು ಬಂದಿರುವಾಗ ಅವರು ಎಲ್ಲೆಂದರೆ ಅಲ್ಲಿ ವಾಸವಾಗಿರುವುದನ್ನು ನೋಡಿದರೆ, ಇವರಿಗೆ ವಸತಿ ಸಮಸ್ಯೆ ಇರುವುದು ಕಂಡುಬರುತ್ತದೆ. ಆದ್ದರಿಂದ ಸರ್ಕಾರವು ಇತರ ಮಠಗಳಿಗೆ, ಕ್ಷೇತ್ರಗಳಿಗೆ, ನಿರ್ಮಿಸಿ ಕೊಡುವಂತಹ ದೊಡ್ಡದಾದ ಛತ್ರವನ್ನು ಚಂದಾಲಿಂಗೇಶ್ವರ ಬಯಲು ಪ್ರದೇಶದಲ್ಲಿ ನಿರ್ಮಿಸಿಕೊಟ್ಟರೆ ಬಂದಂತಹ ಭಕ್ತರಿಗೆ ಮಳೆ, ಚಳಿ, ಬಿಸಿಲು ನಿಂದ ರಕ್ಷಿಸಿಕೊಳ್ಳುವುದಕ್ಕೆ ಯೋಗ್ಯವಾಗುತ್ತದೆ.

ಈ ಎರಡು ಜಾತ್ರೆಗಳಲ್ಲಿ ರಾತ್ರಿಯ ಸಮಯದಲ್ಲಿ ಮಳೆ ಬಂದರೆ ನಿದ್ರೆಯನ್ನು ಮಾಡದೆ ಬೆಳಗಾಗುವತನಕ ಕಾಲ ಕಳೆಯಬೇಕಾಗುತ್ತದೆ. ಏಕೆಂದರೆ ನಾನು ಕೂಡ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇಂಥ ಸ್ಥಿತಿಯನ್ನು ಅನುಭವಿಸಿ ಬಂದಿರುವೆ. ಆದರೂ ಭಕ್ತರು ಇದು ಯಾವುದಕ್ಕೂ ಅಂಜದೆ ಅಳುಕದೆ ಚಂದಾಲಿಂಗೇಶ್ವರನ ಮೇಲಿರುವ ಅಪಾರವಾದ ಭಕ್ತಿಯಿಂದ ಏನೇ ಕಷ್ಟ ಬಂದರೂ ಖುಷಿಯಿಂದ ಇದ್ದು ಹೋಗುತ್ತಾರೆ.

೫.೨. ವೇಷಭೂಷಣಗಳು : (Costumes)

ಸುಮಾರು ಐವತ್ತರ ದಶಕದಲ್ಲಿ ಚಂದಾಲಿಂಗೇಶ್ವರನ ಜಾತ್ರೆಯಲ್ಲಿ ಬರುವಂತ ಭಕ್ತರು ಪುರುಷರಾದವರು ಬಗಲಗಸೆ (ಕಸಿ) ಅಂಗಿ, ನೆಹರು ಶರ್ಟು ಧರಿಸುತ್ತಿದ್ದರು. ವಯಸ್ಸಿನ ಹುಡುಗರು ಮಾರಗಿ ಅಂಗಿ, ಖಾಕಿ ಚಡ್ಡಿ ಹಾಕುವರು. ಮಧ್ಯವಯಸ್ಕರು ಬಗಲಗಸಿ ಅಂಗಿಯನ್ನು ಧರಿಸುತ್ತಿದ್ದರು. ಬರುಬರುತ್ತಾ ಸ್ವಲ್ಪ ಬದಲಾಗಿ ನೆಹರು ಶರ್ಟ್ ಹಾಕುವುದಕ್ಕೆ ಪ್ರಾರಂಭಿಸಿದರು. ಯಜಮಾನರಾದವರು ಕೈಮಗ್ಗದಿಂದ ತಯಾರಿಸಿದ ದಡ್ಡಿದೋತ್ರವನ್ನು ಧರಿಸಿದರೆ, ಚಿಕ್ಕವಯಸ್ಸಿನ ಮದುವೆಯಾಗದ ಚಿಕ್ಕ ಹುಡುಗಿಯರು ಲಂಗ ಜಂಪರ್ ಹಾಕುತ್ತಿದ್ದರು. ಮದುವೆಯಾದ ಮಹಿಳೆಯರು ಖಾದಿ ದಡಿಸೀರೆ ಮೂರು ಬೆಟ್ಟಿನ ಜರಿಸೀರೆ ಉಟ್ಟರೆ, ವಯಸ್ಸಾದಂತ ಮಹಿಳೆಯರು ನೂರಾಐವತ್ತು ರೂಪಾಯಿಗಳ ಬೆಲೆಯುಳ್ಳ ಕರಿಚಂದ್ರ ಕಾಳಿಸೀರೆ, ತೋಪುಸೆರಗಿನಸೀರೆ, ಚಮ್ಕಾಸೀರೆ, ಮಸರಾಯಿ ಬಾಂಡು ಸೀರೆಗಳನ್ನು, ಜಾತ್ರೆಯ ಸಮಯದಲ್ಲಿ ಧರಿಸುತ್ತಿದ್ದರು. ಕಾಲಕ್ಕೆ ತಕ್ಕಂತೆ ಉಡುಗೆ-ತೊಡುಗೆಗಳಲ್ಲಿ ಬದಲಾಗುತ್ತಾ ಬಂದಿವೆ. ವಾಸ್ತವಿಕವಾಗಿ ಜಾತ್ರೆಯಲ್ಲಿ ಚಿಕ್ಕಚಿಕ್ಕ ಮಕ್ಕಳು

ಬಣ್ಣ ಬಣ್ಣದ ವಿವಿಧ ರೀತಿಯ ಉಡುಪುಗಳನ್ನು ಧರಿಸುತ್ತಾರೆ. ಉದಾಹರಣೆಗೆ: ಫ್ರಾಕ್, ಮಿಡಿ, ಶೇರ್ವಾನಿ, ಲಗ್ಗಿನ್ಸ್, ಲಾಚಾ, ಧೋತಿಡ್ರೆಸ್, ಟಿ-ಶರ್ಟ್ ಇಂಥವುಗಳನ್ನು ಉಳ್ಳವರ ಮಕ್ಕಳು ಧರಿಸಿದರೆ, ಇಲ್ಲದವರ ಮಕ್ಕಳು ಸಾದಸೀದಾವಾದ ಸರಳವಾದ ಉಡುಗೆಗಳನ್ನು ಧರಿಸುವರು. ಉದಾಹರಣೆಗೆ ಬಜಾರದಲ್ಲಿ ಇಟ್ಟಿರುವಂತ ಮಾರಗಿ ಅಂಗಿ ಚಣ್ಣಗಳನ್ನು ಧರಿಸುತ್ತಾರೆ. ಈ ವರ್ಗದ ಹೆಣ್ಣು ಮಕ್ಕಳೂ ಸಹ ಅಷ್ಟೇ ಸರಳವಾದ ಲಂಗ, ಜಂಪರ್, ಹಾಗೂ ಕಡಿಮೆ ದರದ ಕನಿಷ್ಠ ಗುಣಮಟ್ಟದ ಚೂಡಿದಾರ, ನಿಲುವಂಗಿ, ಮುಂತಾದ ಬಟ್ಟೆಗಳನ್ನು ಧರಿಸುವರು.

ವಯಸ್ಕ ಗಂಡು ಹೆಣ್ಣು ಮಕ್ಕಳು ತಮಗೆ ಆಕರ್ಷಣೆವಾದಂತಹ ಬಣ್ಣಬಣ್ಣದ ವಿವಿಧ ರೀತಿಯ ವಿಶೇಷತೆಯಿಂದ ಕೂಡಿದ ಉಡುಪುಗಳನ್ನು ಧರಿಸುವರು. ಉದಾಹರಣೆಗೆ ಜೀನ್ಸ್ ಪ್ಯಾಂಟ್, ಟಿ-ಶರ್ಟ್, ಬಲೂನ್‌ಪ್ಯಾಂಟ್, ಚೂಡಿದಾರ, ಮಿಂಚು ಮಿಂಚಿನಿಂದ ಕೂಡಿದ ಸೀರೆಗಳು, ಕಾಂಚಿಪುರಂ, ಮೈಸೂರ್ ಸ್ಯಾರಿ, ಸಿಲ್ಕ್ , ಲಗ್ಗಿನ್ಸ್ ತೊಟ್ಟರೆ ಇನ್ನು ಕೆಲವೊಂದಿಷ್ಟು ಯುವಕರು ಲುಂಗಿ (ಪಂಚೆ) ಸುತ್ತಿಕೊಂಡು ತುಂಬುತೋಳು, ಅರ್ಧತೋಳಿನ ಅಂಗಿಗಳನ್ನು ಧರಿಸುವರು. ಆರ್ಥಿಕತೆಯಿಂದ ಸುಧಾರಿಸಿದ ಕುಟುಂಬದ ಪುರುಷರು ಮತ್ತು ಸ್ತ್ರೀಯರು ಸೂಟ್ ಬೂಟ್‌ಗಳನ್ನು, ಪೈಜಾಮ್, ವಿವಿಧ ವಿನ್ಯಾಸ ಮಾದರಿಯ ಪೆನ್ಸಿಲ್‌ಕಟ್, ಬೂಟ್‌ಕಟ್, ಆಪಲ್‌ಕಟ್, ಜಾಕೆಟ್‌ನಂತಹ ಉಡುಪುಗಳನ್ನು ಜಾತ್ರೆಯ ಸಂದರ್ಭದಲ್ಲಿ ಧರಿಸುವರು. ಸ್ತ್ರೀಯರು ವಿವಿಧ ರೀತಿಯ ಆಭರಣಗಳಾದ ನೆಕ್ಲೆಸ್, ಬೋರ್‌ಮೊಳ, ಮೇಲುಗುಂಡು, ಪದಕ, ಜುಮ್ಕಿ, ಓಲೆ, ಚೈನ್‌ಗಳನ್ನು ಹಾಕಿಕೊಂಡರೆ ಅಲ್ಲೊಬ್ಬರು ಇಲ್ಲೊಬ್ಬರು ತೋಳಿಗೆ ತೋಳಬಂದಿ ಕಾಲ್ಗಡುಗ, ಬುಗುಡಿ ಕಡ್ಡಿ, ಕಂಠಿಸರ ಮುಂತಾದ ಆಭರಣಗಳನ್ನು ಅಲಂಕರಿಸಿಕೊಂಡು ಈ ಜಾತ್ರೆಯಲ್ಲಿ ಭಾಗಿಯಾಗುತ್ತಾರೆ. ಇನ್ನು ವಯೋವೃದ್ಧರು ದೋತ್ರ, ನೆಹರು ಶರ್ಟ್, ರೇಷ್ಮೆ ಪೇಟ, ಗಾಂಧಿಟೋಪಿ, ಧರಿಸಿರುವರು. ಈ ಹಿರಿಯರು ಹಾಕುವ ನೆಹರು ಶರ್ಟ್‌ಗಳು ಮಾತ್ರ ಬಿಳಿ, ನೀಲಿ, ಖಾಕಿ ಬಣ್ಣದವುಗಳಾಗಿ ಮುಖ್ಯವಾಗಿ ಗೋಚರಿಸುತ್ತವೆ. ಮಹಿಳೆಯರು ಇಳಕಲ್ ಸೀರೆ, ಹುಬ್ಬಳ್ಳಿ ಸೀರೆ, ಟೋಪ್ ಸೆರಗಿನ ಸೀರೆ, ನೀರಿಗೆ ಸೀರೆ, ಮಸರಾಯಿ ಬಾಂಡ್‌ಸೀರೆ, ಕುಬಸ ಧರಿಸುವರು. ಆದರೆ ಇತ್ತೀಚೆಗಂತೂ ವಯೋವೃದ್ಧ ಮಹಿಳೆಯರು ಪತ್ಲ (ಸೀರೆ) ಜಂಪರ್‌ನ್ನೇ ಧರಿಸಿಕೊಂಡು ಜಾತ್ರೆ ಉತ್ಸವದಲ್ಲಿ ಪಾಲ್ಗೊಳ್ಳುವರು.

೫.೩.ಜಾತ್ರೆಯಲ್ಲಿ ವರ್ತಕರು : (Merchants at the Fair)

೫.೩.೧. ಸ್ಟೇಷನರಿ ಅಂಗಡಿಗಳು : (Stationery Store)

ಗುಡಿಯ ಮುಖ್ಯದ್ವಾರದ ಮುಂಭಾಗದ ಬಯಲು ಜಾಗದಲ್ಲಿ ಬಾಜುಬಾಜಾಗಿ ಅಂಗಡಿ-ಮುಂಗಟ್ಟುಗಳು ಬಿಡಾರ ಬಿಟ್ಟಿರುತ್ತಾರೆ. ಅಂತಹವುಗಳಲ್ಲಿ ಜೋಗೇರ (ಸ್ಟೇಷನರಿ) ಅಂಗಡಿಗಳಲ್ಲಿ ಮಕ್ಕಳ ಆಟಿಕೆ ಸಾಮಗ್ರಿಗಳಾದ ಚಂಡು, ಪೀಪಿ, ಚಾಳಿಸು, ಬಲ್ಯೂನ್ ಬ್ಯಾಟ್-ಚಂಡು, ವಿವಿಧ

ಮಾದರಿಯ ವಾಹನಗಳಾದ ಟಿಪ್ಪರ್‌ಲಾರಿ, ಬಸ್ಸ್, ಕಾರು, ಟೆಂಪೋ, ಜೀಪು, ಜೆಸಿಬಿ, ಟ್ರ್ಯಾಕ್ಟರ್, ಸ್ಕೂಟಿ, ಉಗಿಬಂಡಿ, ಕೊಳಲು, ವಿಮಾನ, ಹೆಲಿಕ್ಯಾಪ್ಟರ್, ಪಾಶ್ಚಾತ್ಯ ಸಂಸ್ಕೃತಿಯ ಕ್ಯಾಪ್‌ಗಳು ಗೋಚರಿಸುತ್ತವೆ. ದೇಶಿಯವಾಗಿ ಬಣ್ಣಬಣ್ಣದ ಉಲ್ಲಾಣದಿಂದ ಹಾಗೂ ನೂಲಿನಲ್ಲಿ ಹೆಣೆದಿರುವಂತ ಚಿಕ್ಕ ಮಕ್ಕಳ ಕುಲಾಯಿಗಳು ಉಣ್ಣೆಯಿಂದ ತಯಾರಿಸಿದ ಟೋಪಿಗಳು ವಿವಿಧ ಬಣ್ಣಬಣ್ಣದ ಉಲ್ಲಾಣದಲ್ಲಿ ತಯಾರಿಸಿದ ಗೊಂಬೆಗಳು, ಪ್ಲಾಸ್ಟಿಕ್‌ದಲ್ಲಿ ತಯಾರಿಸಿದ ದೊಡ್ಡದಾಗಿರುವ ಹಾಗೂ ಚಿಕ್ಕದಾಗಿರುವ ಗೊಂಬೆಗಳು, ಪರ್ಸ್‌ಗಳು, ವಿವಿಧ ಮಾದರಿಯ ಬಣ್ಣಬಣ್ಣದ ಹೇರ್‌ಪಿನ್‌ಗಳು, ಕಸೆಯಿಂದ ಕಟ್ಟಿಕೊಳ್ಳುವಂತ ಟೋಪಿಗಳು, ಸಂಪೂರ್ಣವಾಗಿ ಹಿತ್ತಾಳೆಯಲ್ಲಿ ತಯಾರಿಸಿದ ಮಹಿಳೆಯರ ಮೇಲ್ಗುಂಡುಸರ, ಬೋರಮಳಸರ, ಸಾದಾರೀತಿಯ ಚೈನಗಳು, ಆಕರ್ಷಕವಾದ ಬಣ್ಣಬಣ್ಣದ ಮುತ್ತುಗಳಿಂದ ಮಾಡಿದ ಸರ, ಮುತ್ತುಗಳಿಂದ ತಯಾರಿಸಿದ ಪದಕದ ಸರಗಳು, ಮಾರಾಟಕ್ಕೆ ಬಂದಿರುತ್ತವೆ. ಪ್ರಚಲಿತ ದಿನಗಳಲ್ಲಿ ಕಂಡುಬರುವ ವಿವಿಧ ಮಾದರಿಯ ಬಂದೂಕುಗಳನ್ನು ಹೋಲುವ ಮಕ್ಕಳಿಗೆ ಆಟಿಕೆಗಳಾಗಿ ತಯಾರಿಸಿದ ಬಂದೂಕ, ಪಿಸ್ತೂಲುಗಳು, ಚಿಕ್ಕವರಿಂದ ಹಿಡಿದು ದೊಡ್ಡವರವರೆಗೆ ಇರುವ ಕೈಗಡಿಯಾರಗಳು, ಕಂದಮ್ಮಗಳನ್ನು ಆಟವಾಡಿಸಲು ವಿವಿಧ ಮಾದರಿಯ ಗೆಜ್ಜೆಗಳು, ಮಕ್ಕಳ ಆಟಿಕೆಗಾಗಿ ಅಡುಗೆ ಮಾಡುವ ಸಾಮಗ್ರಿಗಳ ಕಿಟ್, ಡಾಕ್ಟರ್‌ಕಿಟ್, ಹಾಗೂ ನಾಲ್ಕು ಗಾಲಿ, ಆರು, ಎಂಟು, ಹತ್ತು ಗಾಲಿಗಳ ವಾಹನಗಳು ಮಕ್ಕಳಿಗಾಗಿಯೇ ಮಾರಾಟಕ್ಕಿರುವವು.

ಮನೆಗಳಿಗೆ ಬೇಕಾದ ದಿನಬಳಕೆಯ ವಸ್ತುಗಳಾದ ಚಹಾ ಸೋಸುವ ಜರಡಿ, ಹಿಟ್ಟು ಹಿಡಿಯುವ ಜರಡಿ, ಪ್ಲಾಸ್ಟಿಕ್ ಕೊಡಗಳು, ಪಿಂಗಾಣಿ ಪಾತ್ರೆಗಳು, ಬಳಪದ ಕಲ್ಲಿನಲ್ಲಿ ತಯಾರಿಸಿದ ಪಡ್ಡು, ಚಂಗೇವ್ ತಯಾರಿಸುವ ಅಚ್ಚು ಪಡಿಗಳು, ಸಂಡಿಗೆ ಹಾಕುವ ಕಿಟ್ಟಲೆ, ರೊಟ್ಟಿ ಹಂಚು, ಹೋಳಿಗೆ, ದೋಸೆ ತಯಾರಿಸುವ ಹಂಚುಗಳು, ಕರವಸ್ತ್ರಗಳು ಹಾಗೂ ಬಣ್ಣ-ಬಣ್ಣದ ಎಣಿಕೆ ಚೀಲಗಳು, ಆಧುನಿಕವಾಗಿ ಹಾಗೂ ಚಿಕ್ಕಮಕ್ಕಳಿಂದ ದೊಡ್ಡವರವರೆಗೆ ಉಣ್ಣೆ ಅಂಗಿಗಳು, ನೂಲಿನಿಂದ ಹೆಣೆದ ಅಂಗಿಗಳು, ನೂಲಿನಿಂದ ಹೆಣೆದ ಟಾವೆಲುಗಳು, ದೊಡ್ಡವರು ಧರಿಸುವಂತಹ ಉಣ್ಣೆಯ ವಿವಿಧ ಮಾದರಿಯ ಟೋಪಿಗಳು, ವಿವಿಧ ಲೋಹಗಳಿಂದ ತಯಾರಿಸಿದ ಬಣ್ಣಬಣ್ಣದ ಕೈಬಳೆಗಳು, ಇರುವುದು ಕಂಡುಬಂದಿದೆ. ಸ್ಕೂಲ್‌ಬ್ಯಾಗ್‌ಗಳು, ವೆನಿಟಿಬ್ಯಾಗ್‌ಗಳು, ಪ್ಯಾರಿಸ್ ಆಫ್ ಪ್ಲಾಸ್ಟರ್‌ದಲ್ಲಿ ತಯಾರಿಸಿದ ಚಿಕ್ಕಮಕ್ಕಳ ಹಾಗೂ ಪಶು ಪಕ್ಷಿಗಳ ವಿವಿಧ ಭಂಗಿಗಳ ಆಕೃತಿಗಳನ್ನು ಮಾರಾಟಕಿಟ್ಟಿರುವುದು ಕಂಡುಬರುತ್ತವೆ. ಮಹಿಳೆಯರ ಪರ್ಸ್‌ಗಳು, ಪುರುಷರ ಸೊಂಟದ ಪಟ್ಟಿಗಳು, ಮ್ಯೂಜಿಕ್ ನುಡಿಸುವಂತಹ ವಿವಿಧ ಮಾದರಿಯ ಉಪಕರಣಗಳು ಮಹಿಳೆಯರ ಸೌಂದರ್ಯವರ್ಧಕ ವಸ್ತುಗಳಾದ ಮೇಕಪ್ ಸೆಟ್, ಉಗುರು ಪೇಂಟ್, ಲಿಪ್ಸ್ಟಿಕ್, ಪೌಡರ್ ಸ್ನೋ, ಕಾಡಿಗೆ, ಹೇರ್ ಬೆಂಡ್, ಜಡೆಗೆ ಹಾಕಿಕೊಳ್ಳುವ ಹೂವುಗಳು, ಮುಂತಾದವು ಈ ಜಾತ್ರೆಯಲ್ಲಿ ಲಭ್ಯ. ಪುರುಷರಿಗಾಗಿ ಉಡ್ದಾರಗಳು, ಕೈಯಲ್ಲಿ ಕಟ್ಟಿಕೊಳ್ಳುವ ವಿವಿಧ ರೀತಿಯ

ಬಣ್ಣ ಬಣ್ಣದ ದಾರಗಳು, ಕೊರಳಲ್ಲಿ ಹಾಕಿಕೊಳ್ಳುವಂತ ಚೈನ್‌ಗಳು ಚಿಕ್ಕ-ಚಿಕ್ಕ ದೇವರುಗಳು, ಕೈಯಲ್ಲಿ ಧರಿಸುವ ಕೈಗಡಗ, ಬ್ರಾಸ್ಲೈಟ್ ಉಂಗುರಗಳು, ಇತ್ತೀಚೆಗಂತೂ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ವಯಸ್ಕ ಹುಡುಗರ ಕೊರಳಲ್ಲಿ ಸಿನಿಮಾ ಹೀರೋಗಳ ಚಿಕ್ಕದಾದ ಭಾವಚಿತ್ರ, ಚಿಕ್ಕ ಚಿಕ್ಕ ಆಯುಧಗಳು, ಒಂದೇ ಕಿವಿಯಲ್ಲಿ ರಿಂಗ್ ಹಾಗೂ ಹೊಳೆಯುವಂತಹ ಹರಳಿನವಸ್ತು ಹಾಗೂ ಕೊರಳಲ್ಲಿ ರಬ್ಬರ್‌ನಿಂದ ತಯಾರಿಸಿದ ಬಣ್ಣ-ಬಣ್ಣದಿಂದ ಕೂಡಿದ ವಸ್ತುಗಳನ್ನು ಬಳಸುವರು. ಕೀಲಿಕೈ ಹಾಗೂ ಪತ್ತಗಳು (ಬೀಗ) ವಿವಿಧ ಬಣ್ಣದ ದಾರದಲ್ಲಿ ಹೆಣೆದಿರುವಂತಹ ಅಲಂಕಾರಿಕ ದಾರಗಳನ್ನು ಜಾತ್ರೆಗೆ ಬಂದ ಪ್ರೇಕ್ಷಕರು ಇವುಗಳನ್ನು ತಮ್ಮ ಕೊರಳಲ್ಲಿ ಕಟ್ಟಿಕೊಳ್ಳುವುದಕ್ಕೆ ಖರೀದಿ ಮಾಡಿಕೊಳ್ಳುತ್ತಿದ್ದರು. ಪ್ಲಾಸ್ಟಿಕ್‌ನಲ್ಲಿ ತಯಾರಿಸಿದ ಚಿಕ್ಕ ಗಾತ್ರದ ಕ್ಯಾರಂ ಬೋರ್ಡ್‌ಗಳು, ದೊಡ್ಡ ದೊಡ್ಡ ಚೆಂಡುಗಳು, ಪ್ಲಾಸ್ಟಿಕ್‌ನಿಂದ ತಯಾರಿಸಿದ ಚಿಕ್ಕ ಮಕ್ಕಳಿಗೆ ಆಟಿಕೆಗಾಗಿ ಕ್ರಿಕೆಟ್ ಬ್ಯಾಟುಗಳು, ಅದೇ ಪ್ಲಾಸ್ಟಿಕ್‌ನಿಂದ ತಯಾರಿಸಿದ ಚೆಂಡುಗಳು ಇದಕ್ಕೆ ಪೂರಕವಾಗಿ ಹಿರಿಯರಿಗೆ ಸಂಬಂಧಿಸಿದಂತೆ ಕಟ್ಟಿಗೆಯಿಂದ ತಯಾರಿಸಿದ ಬ್ಯಾಟುಗಳು ಜಾತ್ರೆಯಲ್ಲಿ ಸಿಗುತ್ತವೆ.

ವಯಸ್ಕ ಮಹಿಳೆಯರು ಹಾಕುವಂತಹ ವ್ಯಾನಿಟಿ ಬ್ಯಾಗಗಳು, ಚಿಕ್ಕ ಮಕ್ಕಳಿಗೂ ಸರಿಹೊಂದುವಂತ ಬ್ಯಾಗ್‌ಗಳು ವಿವಿಧ ಬಣ್ಣಗಳಿಂದ ಕಂಗೊಳಿಸುತ್ತವೆ. ಮಹಿಳೆಯರು ತಮ್ಮ ಹಣೆಗೆ ಹಚ್ಚಿಕೊಳ್ಳಲು ಬಣ್ಣ ಬಣ್ಣದ ವಿವಿಧ ಮಾದರಿಯ ಸ್ಟಿಕರ್ ಟಿಕ್ಲಿಗಳು, ಚಳಿಗಾಲದಲ್ಲಿ ಚಿಕ್ಕಮಕ್ಕಳಿಂದ ಹಿಡಿದು ವಯಸ್ಕ ಮಹಿಳೆಯರವರೆಗೆ ತಮ್ಮ ತಲೆಗೆ ಕಟ್ಟಿಕೊಳ್ಳುವ ಕುಲಾಯಿಗಳು, ಈ ಜಾತ್ರೆಯಲ್ಲಿ ಲಭ್ಯವಾಗುತ್ತವೆ. ಇತ್ತೀಚಿಗೆ ಜಾತ್ರೆಗೆ ಎಲ್ಲಾ ರೀತಿಯ ಜನಗಳು ಬರುವುದರಿಂದ ವರ್ತಕರು ಅವರಿಗೆ ಬೇಕಾಗಿರುವಂತಹ ವಸ್ತುಗಳನ್ನು ತರುತ್ತಾರೆ. ಅಂಥಹವುಗಳಲ್ಲಿ ವಾದ್ಯಮೇಳಗಳ ಉಪಕರಣಗಳಾದ ಸಮಾಳ ಅಥವಾ ಡುಮುಕಿಯು ಇವತ್ತು ಮಾರಾಟಕ್ಕೆ ಬರುತ್ತಿವೆ. ಮಧ್ಯಮಗಾತ್ರದ ಹಾಗೂ ಚಿಕ್ಕ ಗಾತ್ರಗಳ ಕನ್ನಡಿ, ಹಣಿಗೆ, ಬಾಚಣಿಕೆ, ಸೀರಣಿಗೆ, ಬಣ್ಣಬಣ್ಣದ ರಿಬ್ಬನ್‌ಗಳು ಮಾರಾಟಕ್ಕಿರುತ್ತವೆ. ಮಿಂಚಿನ ಜರಗಳು ಆಟದ ಸಾಮಗ್ರಿಗಳಾದ ಶಟಲ್ ಕಾಕ್, ಟೇಬಲ್ ಟೆನ್ನಿಸ್, ಉಪಕರಣಗಳು ಕಂಡುಬರುತ್ತವೆ. ಇಂದಿನ ಮೊಬೈಲ್ ಫೋನ್ ಪ್ರತಿರೂಪದಂತಿರುವ ಎಲೆಕ್ಟ್ರಿಕಲ್ ಮೊಬೈಲ್ ಫೋನ್‌ಗಳು, ಚಿಕ್ಕ ಮಕ್ಕಳಿಗೆ ಹಲವರು ರೀತಿಯ ಸಂಗೀತದ ಧ್ವನಿ ಹೊರಡಿಸುವ ಎಲೆಕ್ಟ್ರಿಕಲ್ ಪರಿಕರಗಳು, ಜಿಗ್-ಜಾಗ್ ರೀತಿಯಲ್ಲಿ ಲೈಟ್‌ನ ವ್ಯವಸ್ಥೆ ಹೊಂದಿರುವಂತಹ ಇನ್ನೂ ಇತರ ಎಲೆಕ್ಟ್ರಿಕಲ್ ವಸ್ತುಗಳು ದೊರೆಯುತ್ತವೆ. ಲೇಸರ್ ಲೈಟ್‌ಗಳು, ಗಿರ್ರ್... ಗಿರ್ರ್... ಗಿಟ್ಟಿ, ಬುಡಬುಕೆಯವರ ಕೈಯಲ್ಲಿರುವಂತ ಢಮರುಗದ ಪ್ರತಿರೂಪದ ಪ್ಲಾಸ್ಟಿಕ್ ವಾದ್ಯಗಳು, ರಿಮೋಟ್ ಚಾಲಿತ ಹಾಗೂ ಚಾವಿ ಚಾಲಿತ ಗೊಂಬೆಗಳು, ವಾಹನಗಳು, ಸಂಗೀತವಾದ್ಯಗಳು, ಲೈಟಿಂಗಗಳು ವಾಹನಗಳಿಗೆ ಕಟ್ಟಿಕೊಳ್ಳುವ ಮಿಂಚಿನ ಜರಿಗಳು, ವಿವಿಧ ಮಾದರಿಯ ಗಡಿಯಾರಗಳು, ಬ್ಯಾಟರಿಗಳು ಜಾತ್ರೆಯಲ್ಲಿ ಮಾರಾಟವಾಗುತ್ತವೆ. ನಾನು ನೋಡಿದ ಕೆಲವು ಅಂಗಡಿಗಳಲ್ಲಿ ಮಹಿಳೆಯರು ಧರಿಸುವ ಆಭರಣಗಳಾದ ಮೂಗುಬಟ್ಟು, ಕಿವಿ ಓಲೆ, ಕಾಲುಚೈನ ಉಂಗುರಗಳು,

ಜುಮುಕಿ, ಕತ್ತಲ್ಲಿ ಹಾಕುವ ಚೈನಗಳು ಇವೆಲ್ಲವುಗಳಿಗೆ ಬಿಡಿಬಿಡಿಯಾದ ಗಾಜಿನಪೆಟ್ಟಿಗೆಯಲ್ಲಿ ಮಾರಾಟಕ್ಕಿರುವುದು ವಿಶೇಷವಾಗಿ ಕಾಣಿಸಿತು.

ಚಂದಾಲಿಂಗೇಶ್ವರ ಜಾತ್ರೆಯಲ್ಲಿ ಯಾತ್ರಿಕರ ಕಣ್ಮನವನ್ನು ಸೆಳೆಯುವಂತವುಗಳು ಆ ಜೋಗೇರ್ (ಸ್ಟೇಷನರಿ) ಅಂಗಡಿಗಳು. ಅರವಿನ ಮಂಟಪದ ಮುಂಭಾಗದಲ್ಲಿ ನೂರಾರು ಅಂಗಡಿಗಳು ತಲೆ ಎತ್ತಿರುತ್ತವೆ. ವ್ಯಾಪಾರಸ್ಥರ ಆರ್ಥಿಕ ಯೋಗ್ಯತೆಗೆ ತಕ್ಕಂತೆ ಅಂಗಡಿಗಳನ್ನು ಹಾಕಿಕೊಂಡಿರುತ್ತಾರೆ. ಈ ಅಂಗಡಿಗಳ ವ್ಯವಸ್ಥಿತವಾದ ಹೊಂದುಕಟ್ಟು ನೋಡಿದರೆ ಒಂದು ಸುಸಜ್ಜಿತವಾಗಿ ನಿರ್ಮಿಸಿದ ಮಾರುಕಟ್ಟೆಯ ಸ್ಥಳದಂತೆ ಗೋಚರಿಸುತ್ತವೆ. ಕೆಲವೊಬ್ಬರು ಬಯಲು ರಂಗಮಂಟಪದ ವೇದಿಕೆಯಂತೆ ಥೇರೆ ಹೊಡೆದುಕೊಂಡಿರುತ್ತಾರೆ. ಇವರು ತಾವು ತಂದಿರುವಂತ ವಸ್ತುಗಳು ಜಾತ್ರೆಗೆ ಬಂದಂತ ಪ್ರೇಕ್ಷಕರಿಗೆ ಸ್ಪಷ್ಟವಾಗಿ ಕಣ್ಣಿಗೆ ಗೋಚರವಾಗುವಂತ ರೀತಿಯಲ್ಲಿ ತಮ್ಮ ಅಂಗಡಿಯಲ್ಲಿ ಮಾರಾಟಕ್ಕಿಟ್ಟಿರುತ್ತಾರೆ. ಅದು ಬಡ ವ್ಯಾಪಾರಸ್ಥರು ನೆಲಮಟ್ಟದಲ್ಲಿ ಒಂದು ಚಾಪೆ, ತಾಡಪತ್ರಿ ಅಥವಾ ಪ್ಲಾಸ್ಟಿಕ್ ಹಾಳೆ ಚೀಲಗಳನ್ನು ಹಾಸಿಟ್ಟಿರುತ್ತಾರೆ. ತಾವು ಕುಳಿತುಕೊಳ್ಳುವಂಥ ಹಿಂದಿನ ಭಾಗಕ್ಕೆ ಎಡ, ಬಲ ಭಾಗಕ್ಕೆ ಹತ್ತು ಅಡಿ ಅಂತರದಲ್ಲಿ ಎರಡು ಕಂಬಗಳನ್ನು ನಡುಹಾಕಿ ಈ ಎರಡೂ ಕಂಬಗಳಿಗೆ ಹೊಂದಿಕೊಂಡಂತೆ ತಾಡಪತ್ರಿ ಅಥವಾ ಇನ್ನಿತರ ಚೀಲವನ್ನು ಕಟ್ಟಿರುತ್ತಾರೆ. ಇದಲ್ಲದೆ ಆ ಎರಡೂ ಕಂಬಗಳಿಗೆ ಹೊಂದಿಕೊಂಡಂತೆ ಚಿಕ್ಕದಾಗಿರುವಂತ ಮೂರು ನೂಲುಹಗ್ಗವನ್ನು ಹಂತಹಂತವಾಗಿ ಹಲವಾರು ಸುತ್ತಿನಲ್ಲಿ ಕಟ್ಟಿರುವರು. ಕಾರಣ ಅವರು ಕಟ್ಟಿರುವಂತ ಹಗ್ಗಗಳಿಗೆ ತಾವು ವ್ಯಾಪಾರಕ್ಕೆ ತಂದಿರುವಂತ ವಸ್ತುಗಳಾದ ಕೊರಳಲ್ಲಿ ಹಾಕಿಕೊಳ್ಳುವಂತ ಚೈನುಗಳು, ಮುತ್ತಿನ ಸರಗಳು, ವಾಚುಗಳು, ಬಂದೂಕುಗಳು, ಚಿಕ್ಕ-ಚಿಕ್ಕ ಗಾಡಿಗಳು, ಪ್ಲಾಸ್ಟಿಕ್ ಮತ್ತು ರಬ್ಬರ್‌ಗಳಿಂದ ತಯಾರಿಸಿದ ಗೊಂಬೆಗಳು, ಹೇರ್‌ಪಿನ್‌ಗಳು, ಚಾಳಿಸುಗಳು, ಅಡಿಗೆ ಕಿಟ್ಸ್‌ಗಳು, ಡಾಕ್ಟರ್ ಕಿಟ್ಸ್‌ಗಳು, ಕೊರಳಲ್ಲಿ ಕಟ್ಟಿಕೊಳ್ಳುವ ದಾರಗಳು ತಾವು ಕಟ್ಟಿರುವಂತ ನೂಲು ಹಗ್ಗಕ್ಕೆ ನೇತಾಡುವಂತೆ ತೂಗು ಹಾಕಿರುವರು.

ಚಿಕ್ಕ ಚಿಕ್ಕ ಪುಡಿ ವಸ್ತುಗಳಾದ ಜಡೆಗೆ ಹಾಕಿಕೊಳ್ಳುವ ಹೂವುಗಳು, ರಬ್ಬರ್‌ಗಳು, ಕ್ಲಿಪ್‌ಗಳು, ಬಳೆಗಳ ಕಟ್ಟುಗಳು, ಬಾಚಣಿಗೆ, ಹಣೆಗೆ ತೀರ ಸಣ್ಣ ಪ್ರಮಾಣದ ಗಾಡಿಗಳು, ಚಂಡು, ಪ್ಲಾಸ್ಟಿಕ್ ಕರ್ಪೂರದ ಗೊಂಬೆಗಳು, ಕುಂಕಮಭರಣಿಗಳು ಮುಂತಾದ ವಸ್ತುಗಳಿಗಾಗಿಯೇ ಒಂದೊಂದು ಡಬ್ಬಿಯಲ್ಲಿ ಹಾಕಿಟ್ಟಿರುತ್ತಾರೆ. ಇದರಿಂದ ಪ್ರೇಕ್ಷಕರಿಗೆ ಹಾಗೂ ಕೊಂಡುಕೊಳ್ಳುವವರಿಗೆ ಆಕರ್ಷಕವಾಗಿರುವಂತೆ ತೋರುತ್ತದೆ. ಕೆಲವೊಬ್ಬ ವ್ಯಾಪಾರಸ್ಥರು ಆರ್ಥಿಕವಾಗಿ ಚೆನ್ನಾಗಿದ್ದರೆ ದೊಡ್ಡ ಪ್ರಮಾಣದಲ್ಲಿ ಅಂಗಡಿಯನ್ನು ಹಾಕುವರು. ಸುಮಾರು ಇಪ್ಪತ್ತು ಅಡಿ ಅಗಲದ ಹದಿನೈದು ಅಡಿ ಉದ್ದ ಗಾತ್ರದಲ್ಲಿ ಅಂಗಡಿಯನ್ನು ರಚಿಸಿಕೊಂಡಿರುತ್ತಾರೆ. ಇವರು ತಮ್ಮ ದಿನನಿತ್ಯದ ಊಟೋಪಚಾರ ಹಾಗೂ ಮಹಿಳೆಯರ ವಸತಿಗಾಗಿ ಈ ಅಂಗಡಿಯಲ್ಲೇ ಎರಡು ಭಾಗವನ್ನು ಮಾಡಿಕೊಂಡಿರುತ್ತಾರೆ. ಮುಂಭಾಗದಲ್ಲಿ ಸ್ಟೇಷನರಿ ವಸ್ತುಗಳಿಗೆ ಮೀಸಲಾಗಿರುತ್ತದೆ. ಜಾತ್ರೆಗೆ ಬಂದ

ಪ್ರೇಕ್ಷಕರ ಮನ ಸೆಳೆಯಲು ಈ ವರ್ತಕರು ವಿಶಿಷ್ಟ ಶೈಲಿಯಲ್ಲಿ ವಸ್ತುಗಳನ್ನು ಜೋಡಿಸುತ್ತಾರೆ. ಚಿಕ್ಕ ವಸ್ತುಗಳನ್ನು ಹಾಗೂ ದೊಡ್ಡ ದೊಡ್ಡ ವಸ್ತುಗಳನ್ನು ಅನುಕ್ರಮವಾಗಿ ಕೆಳಗಿನಿಂದ ಅಂಗಡಿಯ ಮೇಲೆ ಭಾಗದವರೆಗೆ ಸಾಲುಸಾಲಾಗಿ ನೇತುಹಾಕಿರುವರು. ಉದಾಹರಣೆಗೆ, ಕೈಗಡಿಯಾರಗಳಿದ್ದರೆ ಅವುಗಳನ್ನೆಲ್ಲ ಒಂದು ಕಡೆ, ಕೊರಳಲ್ಲಿ ಹಾಕಿಕೊಳ್ಳುವಂತೆ ವಸ್ತುಗಳಿದ್ದರೆ ಅವುಗಳನ್ನು ಇನ್ನೊಂದು ಕಡೆ ಜೋಡಿಸಿರುತ್ತಾರೆ. ಹೀಗೆ ಇನ್ನಿತರ ಎಲ್ಲ ವಸ್ತುಗಳನ್ನು ಕೊಂಡು ಕೊಳ್ಳುವವರಿಗೆ ಮನಸೆಳೆಯುವಂತ ಪ್ರಯತ್ನ ಮಾಡಿರುತ್ತಾರೆ. ಇವತ್ತು ದೊಡ್ಡ ದೊಡ್ಡ ಕಂಪನಿಗಳು ಮಾರಾಟ ಮಾಡುವಂತಹ ನಿಜವಾದ ವಾಹನಗಳು, ದಿನಬಳಕೆಯ ವಸ್ತುಗಳು ಹಾಗೂ ಇನ್ನಿತರ ಆಟಿಕೆ ಸಾಮಗ್ರಿಗಳ ಪ್ರತಿರೂಪದಂತಿರುವ ಪ್ಲಾಸ್ಟಿಕ್, ಕರ್ಪೂರ, ಲೋಹಗಳಿಂದ, ನೂಲಿನಿಂದ, ತಯಾರಿಸಿದಂತಹ ಆಟಿಕೆ ವಸ್ತುಗಳು ಈ ಜಾತ್ರೆಯಲ್ಲಿ ಲಭ್ಯವಾಗುತ್ತವೆ. ನಾನು ಈ ಜಾತ್ರೆಯನ್ನು ಅವಲೋಕನ ಮಾಡಿದಂತೆ ಅಲ್ಲಿಯ ವಿವಿಧ ವ್ಯಾಪಾರಸ್ಥರ ವ್ಯವಹಾರದ ಕೆಲವು ತಂತ್ರಗಳನ್ನು ಕೂಡ ಅರಿಯಬಹುದು. ವ್ಯಾಪಾರಸ್ಥರು ತಮ್ಮ ವಸ್ತುಗಳನ್ನು ಗ್ರಾಹಕರು ಕೊಂಡುಕೊಳ್ಳುವಂತೆ ಅವರ ಮನವೊಲಿಸುವುದು ಅತ್ಯಾಕರ್ಷಕವಾದಂತ ವಸ್ತುಗಳನ್ನು ಕಣ್ಣಿಗೆ ಕುಕ್ಕುವಂತೆ ಪ್ರದರ್ಶಿಸುವುದಾಗಿತ್ತು.

ಜಾತ್ರೆಗೆ ಬಂದ ಸ್ಟೇಷನರಿ ಅಂಗಡಿ ವ್ಯಾಪಾರಸ್ಥರು ತಾವು ಈ ಜಾತ್ರೆಯಲ್ಲಿ ಯಾವ ಸ್ಥಳದಲ್ಲಿ ಅಂಗಡಿಯನ್ನು ಹಾಕಿದರೆ ವ್ಯಾಪಾರ ಚೆನ್ನಾಗಿ ಆಗುವುದೆಂದು ತಿಳಿದುಕೊಂಡು ಜಾತ್ರೆಯು ನಡೆಯುವ ಎರಡು ದಿನಗಳ ಮೊದಲಿಗೆ ತಮ್ಮ ಎಲ್ಲಾ ಗಂಟು-ಮೂಟೆಗಳನ್ನು ತಂದು ಬೀಡುಬಿಟ್ಟಿರುತ್ತಾರೆ. ಈ ಅಂಗಡಿಗಳು ಒಬ್ಬರಕ್ಕಿಂತ, ಇನ್ನೊಬ್ಬರ ಅಂಗಡಿಗಳು, ಸ್ಟೇಷನರಿ ಸಾಮಾಗ್ರಿಗಳಿಂದ ಗಿಜಿಗುಡುತ್ತಿರುತ್ತವೆ. ಇವು ತಾತ್ಕಾಲಿಕವಾದ ಅಂಗಡಿಗಳಾಗಿದ್ದರೂ, ನೋಡುವುದಕ್ಕೆ ಶಾಶ್ವತವಾಗಿ ನಿರ್ಮಿಸಿದ ಅಂಗಡಿಗಳಂತೆಯೇ ಗೋಚರಿಸುತ್ತವೆ. ವ್ಯಾಪಾರದ ಹಸಿವಿದ್ದಂತವರು ಗ್ರಾಹಕರನ್ನು ಬರ್ರಿ... ಬರ್ರಿ.. ಇಲ್ಲಿ ಎಲ್ಲಾ ಸಸ್ತಾ... ಸಸ್ತಾ.... ಎಂದು ಕೂಗುತ್ತಿರುತ್ತಾರೆ. ಜಾತ್ರೆಗಳಿಗೆ ಬರುವಂತಹ ಸ್ಟೇಷನರಿ ಅಂಗಡಿಗಳ ಮಾಲೀಕರು ಸುಮಾರು ಹದಿನಾರು ವರ್ಷ ವಯಸ್ಸಿನಿಂದ ಕೂಡಿ ಎಪ್ಪತ್ತು ವರ್ಷ ವಯಸ್ಸಿನ ವ್ಯಾಪಾರಸ್ಥರು ಕಂಡುಬರುತ್ತಾರೆ. ಅಂದರೆ ಇದನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ವ್ಯಾಪಾರ ಮಾಡುವಂತ ಜ್ಞಾನ ಚಿಕ್ಕ ಮಕ್ಕಳಿಗೂ ಇರುವುದು ಕಂಡುಬರುತ್ತದೆ. ಅದೇ ರೀತಿ ವಯೋವೃದ್ಧರು ಇಷ್ಟು ವಯಸ್ಸಾದರೂ ಅವರಿಗೆ ಅದರಿಂದ ಮುಕ್ತಿ ಸಿಕ್ಕಿಲ್ಲ ಎಂದರೆ, ಅವರ ಕುಟುಂಬಗಳ ಆರ್ಥಿಕ ಸ್ಥಿತಿಗತಿಗಳು ಸುಧಾರಣೆಯಾಗಬೇಕಿವೆ ಎನಿಸುತ್ತದೆ.

ಇವತ್ತಿನ ಈ ಜಾತ್ರೆಯಲ್ಲಿ ಸ್ಟೇಷನರಿ ವ್ಯಾಪಾರಸ್ಥರು ಜಗತ್ತಿನಲ್ಲಿ ಉತ್ಪಾದನೆಯಾಗುವಂತ ಎಲೆಕ್ಟ್ರಿಕಲ್ ವಸ್ತುಗಳ ವಿಭಿನ್ನ ಮಾದರಿಯ ವಸ್ತುಗಳು, ಯಂತ್ರಗಳು, ವಾಹನಗಳು, ಹೆಲಿಕ್ಯಾಪ್ಟರ್, ವಿಮಾನಗಳು, ತ್ರೀಡಿ ಚಿತ್ರಗಳು, ಮುಂತಾದ ವಸ್ತುಗಳ ಪ್ರತಿರೂಪದ ಆಟಿಕೆ ಸಾಮಗ್ರಿಗಳನ್ನು ತರುವುದರಿಂದ ಅವುಗಳ ಜ್ಞಾನವನ್ನು ಇವತ್ತು ಸಾಮಾನ್ಯ ಜನರಿಗೆ ಪರಿಚಯಿಸುವಂತ ಪ್ರಯತ್ನ

ಮಾಡುತ್ತಿದ್ದಾರೆ. ನಿಜವಾದ ಯಂತ್ರಗಳಾದ ವಿಮಾನ, ಹೆಲಿಕ್ಯಾಪ್ಟರ್, ಬಂದೂಕುಗಳು, ಯುದ್ಧಟ್ಯಾಂಕರ್, ಜೋರ್ವೆಲ್ ವಾಹನಗಳು, ಪೊಲೀಸ್ ವ್ಯಾನ್, ಎಂಟು ಚಕ್ರ, ಹತ್ತು ಚಕ್ರಗಳಿರುವಂತ ವಾಹನಗಳು ಇವೆಲ್ಲವು ದೊಡ್ಡ ದೊಡ್ಡ ಪಟ್ಟಣ ಪ್ರದೇಶದಲ್ಲಿ ಮಾತ್ರ ಕಂಡುಬರುತ್ತಿವೆ. ಜನಸಾಮಾನ್ಯರು ಇವುಗಳನ್ನು ಖರೀದಿಸುವುದು ದೂರದ ಸಂಗತಿ. ಇಂತಹ ಸುಸಜ್ಜಿತ ತಂತ್ರಜ್ಞಾನ ಹೊಂದಿದ ವಸ್ತುಗಳನ್ನು ನೋಡುವುದೇ ಅಪರೂಪ. ಆದರೆ ಇವತ್ತು ಇಂತಹ ಜಾತ್ರೆಗಳಲ್ಲಿ ಅಂತಹ ವಸ್ತುಗಳು ಪ್ರತಿರೂಪದಲ್ಲಿ ತಯಾರಿಸಿದಂತ ಆಟಿಕೆ ವಸ್ತುಗಳಿಂದ ಇಂತಿಂಥ ವಸ್ತುಗಳು ಇವೆ ಎಂಬುದು ಪರಿಚಯವಾಗಿ ಲೋಕ ಜ್ಞಾನವನ್ನು ಪಡೆಯುತ್ತಾರೆ. ಅಂತಹ ನಿಜವಾದ ವಸ್ತುಗಳನ್ನು ಖರೀದಿ ಮಾಡುವಂತ ಶಕ್ತಿಯಿಲ್ಲದೇ ಹೋದರೂ ಇಂತಹವುಗಳನ್ನು ಪಾಲಕರು ತಮ್ಮ ಮಕ್ಕಳಿಗೆ ಆಟಿಕೆಗೆ ಕೊಡಿಸುವುದರ ಮೂಲಕ ಸಂತೃಪ್ತರಾಗುತ್ತಾರೆ.

ಶ್ರೀಮಂತ ಕುಟುಂಬದವರು ಜಾತ್ರೆ, ಮದುವೆ, ದಿಬ್ಬಣಕ್ಕೆ ಹೋಗುವಂತವರು ಬಂಗಾರ, ಬೆಳ್ಳಿಯಲ್ಲಿ ತಯಾರಿಸಿದ ಬೆಂಡೋಲೆ, ಓಲೆ, ಜುಮ್ಕಿ, ಉಂಗುರ, ನೆಕ್ಲೇಸ್, ಕಾಲ್ಕಡಗ ಮುಂತಾದ ಆಭರಣಗಳನ್ನು ಧರಿಸುತ್ತಾರೆ. ಸಾಮಾನ್ಯ ಜನರು ಇಂದಿನ ಷೇರು ಮಾರುಕಟ್ಟೆ ವ್ಯವಹಾರದ ಏರುಪೇರುದಿಂದ ಈ ಬೆಳ್ಳಿ ಬಂಗಾರದ ದರ ಗಗನಕ್ಕೇರುವುದರಿಂದ ಬಡಜನತೆಗೆ ಕೈಗೆಟುಕದ ಸ್ಥಿತಿ ಒದಗಿದೆ. ಆದರೆ ಈ ಆಸೆಗಳು ಎನ್ನುವುದು ಬಡ-ಶ್ರೀಮಂತರೆನ್ನದೆ ಹುಟ್ಟಿಕೊಳ್ಳುವುದು ಸಹಜ. ಇದರಿಂದ ಇವರು ತಮ್ಮ ಆಸೆಗಳಿಂದ ತೃಪ್ತಿ ಹೊಂದಲು ಇಂತಹ ಜಾತ್ರೆ-ಉತ್ಸವಗಳಲ್ಲಿ ಬಂದಿರುವಂತಹ ಚಿನ್ನದ ಪ್ರತಿರೂಪ ಹೊಂದುವಂತ ತಾಮ್ರ, ಹಿತ್ತಾಳೆ, ಕಬ್ಬಿಣ, ಸ್ಟೀಲ್, ಅಲ್ಯೂಮಿನಿಯಂ, ಕಂಚು ಮುಂತಾದ ಲೋಹಗಳಿಂದ ನಿಜರೂಪದ ಆಭರಣಗಳ ಅಚ್ಚುಗಳಿಂದ ತಯಾರಿಸಿದಂತ ಆಭರಣಗಳು ಈ ಜಾತ್ರೆಯಲ್ಲಿ ಲಭ್ಯವಾಗುತ್ತವೆ. ಜಾತ್ರೆಗೆ ಬಂದಂತ ಗ್ರಾಮೀಣ ಪ್ರದೇಶದವರು, ಹಾಗೂ ನಗರ ಪ್ರದೇಶಗಳಲ್ಲಿ ಆರ್ಥಿಕತೆಯಿಂದ ನಲುಗಿದವರು ಇಂತಹ ರೋಡ್ ಗೋಲ್ಡ್ ಆಭರಣಗಳನ್ನು ತಮ್ಮ ಮಕ್ಕಳಿಗೆ ಹಾಗೂ ತಮಗೂ ಖರೀದಿ ಮಾಡಿಕೊಂಡು ಸಂತೋಷದಿಂದ ಜಾತ್ರೆಯನ್ನು ಆಚರಿಸುವರು.

ಜಾತ್ರೆಯಲ್ಲಿ ದೊರೆಯುವಂತ ಪಾಶ್ಚಾತ್ಯ ಸಂಸ್ಕೃತಿಯ ವಸ್ತುಗಳಿಂದ ಅವುಗಳ ರಚನೆಯ ಕ್ರಮ ಮತ್ತು ಅವರ ಸಂಸ್ಕೃತಿಯ ಅರಿವು ಈ ಜನ ಸಾಮಾನ್ಯರಲ್ಲಿ ಮೂಡುವುದು. ನೂಲಿನಿಂದ, ಉಲ್ಲಾಣದಿಂದ ತಯಾರಿಸಿದ ಮಕ್ಕಳ ಕುಲಾಯಿಗಳು ಹಾಗೂ ಟೋಪಿಗಳು ಸಿಗುವುದರಿಂದ, ಜಾತ್ರೆಗೆ ಬಂದ ಜನರು ತಾವು ಕಚ್ಚಾವಸ್ತುಗಳಿಂದ ಸಿದ್ಧ ವಸ್ತುಗಳನ್ನು ತಯಾರಿಸುವ ಕೌಶಲ್ಯವನ್ನು ಕಲಿತುಕೊಳ್ಳಬಹುದು. 'ಕಸದಿಂದ ರಸ' ಎನ್ನುವ ಮಾತಿನಂತೆ ಯಾವ ಯಾವ ಕಚ್ಚಾವಸ್ತುಗಳನ್ನು ಬಳಸಿಕೊಂಡು ಸಿದ್ಧವಸ್ತುಗಳನ್ನಾಗಿ ಮಾಡಬಹುದು ಎಂದು ಸಾಮಾನ್ಯ ಜನರಲ್ಲಿ ಚಿಂತನಾಕ್ರಮ ಬೆಳೆಯುತ್ತದೆ. ಮಕ್ಕಳು ಕಿರಿಕಿರಿ ಮಾಡಿದಾಗ ಅವರನ್ನು ಸಂತೈಸಲು ವಿವಿಧ ಮಾದರಿಯ ಗೊಂಬೆಗಳನ್ನು ತರ ತರಹದ ಆಟಿಕೆಗಳು ಮಾರಾಟವಾಗುವುದನ್ನು ನೋಡಿದರೆ ವ್ಯಾಪಾರಸ್ಥರು

ಹಾಗೂ ಗ್ರಾಹಕರು ಹೆಣ್ಣು ಮಗುವಾಗಿದ್ದರೆ ಗೊಂಬೆಗಳು, ಬಳೆಗಳು, ಅಡಿಗೆ ಮಾಡುವ ಕಿಟ್‌ಗಳನ್ನು ಹಾಗೂ ಗಂಡು ಮಗುವಾಗಿದ್ದರೆ ಚೆಂಡು, ಚಾಳಿಸು, ಪೀಪಿ, ಗಾಡಿಗಳು ಇತ್ಯಾದಿಗಳನ್ನು ಖರೀದಿಮಾಡಿ ಅವರಿಗೆ ನೀಡಿ ಸಮಾಧಾನಿಸುತ್ತಿದ್ದರು. ಇದರಿಂದ ನಮ್ಮ ಜನಪದರಿಗೆ ಯಾವ ಆಟಿಕೆ ಸಾಮಾನುಗಳನ್ನು ಯಾರಿಗೆ ಕೊಡಿಸಬೇಕೆಂದು ವ್ಯವಹಾರ ಜ್ಞಾನದ ಅರಿವು ಇರುವುದು ತಿಳಿಯುತ್ತದೆ.

ಹಿಂದಿನ ರಾಜಮಹಾರಾಜರ ಹತ್ತಿರ ಹಾಗೂ ಇಂದು ದೊಡ್ಡ ದೊಡ್ಡ ಅಧಿಕಾರಿಗಳು ಹಾಗೂ ಉದ್ದಿಮೆಗಳ ಬಳಿ ಇರುವ ವಿವಿಧ ಮಾದರಿಯ ಬಂದೂಕುಗಳು, ಪಿಸ್ತೂಲುಗಳನ್ನು ಜನಸಾಮಾನ್ಯರಿಗೆ ತೆಗೆದುಕೊಳ್ಳುವ ಶಕ್ತಿಯೇ ಇರಲಿಲ್ಲ, ಇವತ್ತು ದೊಡ್ಡ ದೊಡ್ಡ ಕಾರ್ಖಾನೆಗಳು ಉದಯಿಸಿರುವುದರಿಂದ ಅಂತಹ ಬಂದೂಕುಗಳು, ಪಿಸ್ತೂಲುಗಳು, ಹೋಲುವ ಪ್ರತಿರೂಪದ ಆಟಿಕೆ ವಸ್ತುಗಳಾಗಿ ಇಂದು ಇಂತಹ ಜಾತ್ರೆಗಳಲ್ಲಿ ದೊರೆಯುವುದರಿಂದ, ಜನಸಾಮಾನ್ಯರಿಗೆ ಆ ನಿಜರೂಪದ ಬಂದೂಕುಗಳನ್ನು ಕೊಂಡುಕೊಳ್ಳಲು ಆಗದಿದ್ದರೂ, ಇಂದು ಅಂಗಡಿಯಲ್ಲಿ ದೊರೆಯುವ ಆಟಿಕೆ ರೂಪದ ಬಂದೂಕುಗಳನ್ನು ತಮ್ಮ ಮಕ್ಕಳಿಗೆ ಕೊಂಡು ಕೊಡಿಸುವುದರೊಂದಿಗೆ ತೃಪ್ತಿ ಹೊಂದುವರು. ಜಾತ್ರೆಯಲ್ಲಿ ದೊರೆಯುವಂತಹ ಡಾಕ್ಟರ್ ಕಿಟ್, ಪೊಲೀಸ್ ಜೀಪ್, ಎಂಟುಗಾಲಿ, ಹತ್ತುಗಾಲಿ ವಾಹನಗಳು, ಅಡಿಗೆ ಕಿಟ್, ಕ್ರಿಕೆಟ್ ಬ್ಯಾಟ್, ಟೇಬಲ್‌ಟೆನ್ನಿಸ್, ಬ್ಯಾಡ್ಮಿಂಟನ್, ಚೆಸ್ ಬೋರ್ಡ್ ಇಂತಹ ವಸ್ತುಗಳನ್ನು ಖರೀದಿ ಮಾಡಿಕೊಂಡು ಅವುಗಳ ಪ್ರಭಾವಕ್ಕೊಳಗಾಗಿ ಇಂತಹ ವೃತ್ತಿಯಲ್ಲಿ ತೊಡಗಿಕೊಳ್ಳಬೇಕು ಎಂಬ ಆಶಾ ಭಾವನೆ ಮೂಡಿಸುತ್ತದೆ. ತಾವೂ ಇದು ಗ್ರಾಮೀಣ ಪ್ರದೇಶದ ಜಾತ್ರೆಯಾಗಿರುವುದರಿಂದ ಈ ಕ್ಷೇತ್ರದ ಸುತ್ತಮುತ್ತಲಿನ ಎಲ್ಲಾ ಊರುಗಳಿಂದ ಯಾತ್ರಿಕರು ಬಂದಿರುವರು. ಇವರಿಗೆ ಆಧುನಿಕತೆಯ ಸ್ಪರ್ಶ ಪಡೆದಿರುವಂತ ಬಣ್ಣದ ಕೈಚೀಲಗಳು, ಮಹಿಳೆಯರ ವ್ಯಾನಿಟಿ ಬ್ಯಾಗ್‌ಗಳು ಇಂದಿನ ಹೊಸತನದ ಸಂಸ್ಕೃತಿಯನ್ನು ತಿಳಿಸುತ್ತವೆ. ಹಳ್ಳಿಯ ಜನರಿಗೆ ವಿವಿಧ ಮಾದರಿಯ ಸಂಗೀತ ಪರಿಕಾರಗಳು ಪರಿಚಯವಾಗುವುದು ಸಹಜ. ಈ ಜಾತ್ರೆಯಲ್ಲಿ ಮಹಿಳೆಯರಿಗಾಗಿ ಇರುವ ಉಗುರು ಪೇಯಿಂಟ್, ಮೇಕಪ್‌ಸೆಟ್, ಇಂತಹ ಹಲವಾರು ಸೌಂದರ್ಯವರ್ಧಕ ವಸ್ತುಗಳನ್ನು ಧರಿಸುವುದರಿಂದ ಮೂಲತಃ ಹಳ್ಳಿಯ ಸಂಸ್ಕೃತಿಯಲ್ಲಿ ಇರುವವರು ಬರುಬರುತ್ತಾ ಪಾಶ್ಚಾತ್ಯ ಸಂಸ್ಕೃತಿಯ ಅನುಯಾಯಿ ಗಳಾಗಲು ದಾರಿಯಾಗುತ್ತದೆ. ಪುರುಷರು ಈ ಮೊದಲು ಜಾತ್ರೆಯಲ್ಲಿ ದೊರೆಯುವಂತಹ ತರತರಹದ ಬಣ್ಣಬಣ್ಣದ ದಾರಗಳು ವಿಶಿಷ್ಟ ಮಾದರಿಯಲ್ಲಿ ಹೆಣೆದಿರುವಂತವುಗಳನ್ನು ತಮ್ಮ ಕೈಯಲ್ಲಿ, ಕೊರಳಲ್ಲಿ, ಸೊಂಟದಲ್ಲಿ, ಕಟ್ಟಿಕೊಳ್ಳಲು ಬಳಸುತ್ತಿದ್ದರು. ಆದರೆ ಇವತ್ತು ಸ್ಥಿತ್ಯಂತರ ಹೊಂದಿರುವುದರಿಂದ ಆಧುನಿಕತೆ ಪಡೆದಿದೆ. ಇಂದಿನ ಯುವಕರು ತಮ್ಮ ಕೊರಳಲ್ಲಿ ರಬ್ಬರಿನಿಂದ ತಯಾರಿಸುವಂತಹ ಪ್ಲಾಸ್ಟಿಕ್ ದಾರದಿಂದ ಕೂಡಿದ ಏನೋ ಒಂದು ಆಕೃತಿಯಿಂದ ಕೂಡಿದ್ದನ್ನು ತಮ್ಮ ಕೊರಳಲ್ಲಿ ಹಾಕಿಕೊಳ್ಳುವರು.

ಇಪ್ಪತ್ತು ವರ್ಷಗಳ ಆಚೆಗೆ ಜನಪದರಲ್ಲಿ ದೈವಗಳ ಆರಾಧನೆ ಗಾಢವಾಗಿತ್ತು. ಅದು ಹೇಗೆಂದರೆ ಪಾರ್ವತಿ-ಪರಮೇಶ್ವರ, ಮಾರುತಿ, ರಾಮ-ಲಕ್ಷ್ಮಣ, ತಿರುಪತಿ, ಈಶ್ವರಲಿಂಗ ಹಾಗೂ ಜನಪದರ ದೈವಗಳಾದ ದುರ್ಗಮ್ಮ, ಹುಲಿಗೆಮ್ಮದೇವಿ ಇತ್ಯಾದಿ ದೇವತೆಗಳ ಭಾವಚಿತ್ರವುಳ್ಳ ಚಿಕ್ಕದಾಗಿರುವುದನ್ನು ಕೊರಳಲ್ಲಿ ಕಟ್ಟಿಕೊಳ್ಳುವುದಕ್ಕೊಸ್ಕರ ಅಂದಿನ ಜಾತ್ರೆಯಲ್ಲಿ ಮಾರಾಟವಾಗುತ್ತಿದ್ದವು. ಆದರೆ ಇದು ಇಂದು ಬದಲಾವಣೆಯತ್ತ ಸಾಗುತ್ತಿದೆ. ಇಂದಿನ ಯುವಪೀಳಿಗೆ ಸಮುದಾಯವು ಚಿತ್ರರಂಗದ ನಟ-ನಟಿಯರ ಪ್ರಭಾವಕ್ಕೊಳಗಾಗಿರುವುದರಿಂದ ಇದನ್ನರಿತ ಕೆಲವು ಸಣ್ಣ ಸಣ್ಣ ಕೈಗಾರಿಕಾ ಸಂಸ್ಥೆಗಳು ಯುವಕರನ್ನು ಆಕರ್ಷಿಸುವಂತಹ ವಸ್ತುಗಳನ್ನು ಮಾರಾಟಕ್ಕೆ ತರುತ್ತಿವೆ. ಅಂತವುಗಳಾದ ದರ್ಶನ್, ಸುದೀಪ್, ಯಶ್, ದುನಿಯಾ ವಿಜಯ್, ಇಂತಹ ನಟ-ನಟಿಯರ ಭಾವಚಿತ್ರಗಳನ್ನು ಹಾಗೂ ಆಯುಧಗಳಾದ ಪರಶುರಾಮನ ಕೊಡಲಿ, ಖಡ್ಗ, ಬಾಣ, ಗದ್ದೆ, ಚೂರಿ, ಚಾಕು, ಪಶುಪಕ್ಷಿಗಳನ್ನು ಚಿಕ್ಕದಾದ ಆಕೃತಿಗಳು ಹೊಂದಿರುವಂತವು ಮತ್ತು ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳನ್ನುಳ್ಳುವ ಎ,ಬಿ,ಸಿ,ಡಿ ಇತ್ಯಾದಿ ಲಾಕೆಟ್‌ಗಳು ಜಾತ್ರೆ, ಉತ್ಸವ, ಮೆರವಣಿಗೆಯಲ್ಲಿ ಮಾರಾಟಕ್ಕೆ ಬರುವುದರಿಂದ ಯುವಕರನ್ನು ಸಹಜವಾಗಿ 'ರೋಗಿ ಬಯಸಿರುವುದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು-ಅನ್ನ' ಎನ್ನುವ ಮಾತಿನಂತೆ ಆಕರ್ಷಿತರನ್ನಾಗಿ ಮಾಡುತ್ತದೆ.

ಪ್ರಸ್ತುತ ದಿನದಲ್ಲಿ ಜಾತ್ರೆಗಳಲ್ಲಿ ಬರುವಂತಹ ಸ್ತ್ರೀಯರಿಗೆ ಸಂಬಂಧಿಸಿದಂತೆ ವಸ್ತುಗಳು ಮೊದಲಿಗಿಂತ ಭಿನ್ನತೆಯನ್ನು ಪಡೆದುಕೊಂಡಿವೆ. ಅದು ಹೇಗೆಂದರೆ ಮೊದಲಿಗೆ ಮಹಿಳೆಯರು ತಮ್ಮ ಹಣೆಗೆ ಹಚ್ಚಿ ಕೊಳ್ಳುವಂತಹ ಹಸಿ-ಕುಂಕುಮವು ಇಂದು ಸ್ಥಿತ್ಯಂತರ ಹೊಂದಿ ಬಣ್ಣಬಣ್ಣದ ಸ್ಟಿಕರ್‌ಗಳು, ಮಿಂಚು ಮಿಂಚಿನ, ಸ್ಟಿಕರ್‌ಗಳಾಗಿವೆ. ಇವುಗಳು ಆಕೃತಿಯಲ್ಲಿ ವೃತ್ತಾಕಾರ, ನಕ್ಷತ್ರಾಕಾರ, ಆಯತಾಕಾರ, ತ್ರಿಭುಜಾಕಾರ, ಬಾಣದಾಕಾರ, ಅರ್ಧಚಂದ್ರಾಕೃತಿ, ಸರ್ಪದ ಆಕಾರ ಮುಂತಾದವುಗಳು ಸಿದ್ಧರೂಪದಲ್ಲಿ ದೊರೆಯುತ್ತವೆ. ಇದಲ್ಲದೆ ಮಹಿಳೆಯರು ಮೊದಲಿಗೆ ತಮ್ಮ ಕೇಶರಾಶಿಯನ್ನು ಕಟ್ಟಿಕೊಳ್ಳಲು ಬಳಸುವ ವಿವಿಧ ಬಣ್ಣದಿಂದ ಕೂಡಿದ ಚಿತ್ತಾರ ಚಿತ್ತಾರದಿಂದ ಅಲಂಕೃತವಾದ ರಿಬ್ಬನ್ನುಗಳು ಮಾರಾಟವಾಗುತ್ತಿದ್ದವು. ಆದರೆ ಇಂದು ಅಪರೂಪವೆಂಬಂತೆ ಪ್ಲೇನಾಗಿ ಒಂದೇ ಬಣ್ಣದಿಂದ ಅಂದರೆ ಹಸಿರು, ಬಿಳಿ, ಕೇಸರಿ, ಕಪ್ಪು ನೀಲಿ ಬಣ್ಣದಲ್ಲಿ ಯಾವುದೇ ಅಲಂಕೃತ ಚಿತ್ರವಿಲ್ಲದೆ ಇರುವಂತಹ ರಿಬ್ಬನ್ನುಗಳು ಅಲ್ಲೊಂದು-ಇಲ್ಲೊಂದು ಗೋಚರಿಸುತ್ತವೆ. ಇವತ್ತು ಮಾರ್ಕೆಟಿಗೆ ಬರುತ್ತವೆಂದರೆ ಕಾರಣ ಯಾವುದಾದರೂ ಉತ್ಸವ, ಮೆರವಣಿಗೆ, ಜಾತ್ರೆಯಲ್ಲಿ ವಾದ್ಯ ಮೇಳದವರು, ತಮ್ಮ ತಲೆ, ಕೈಗಳಿಗೆ ಸುತ್ತಲೂ, ಕಟ್ಟಿಕೊಳ್ಳಲು, ವಾದ್ಯಗಳಿಗೆ, ಹೊಸದಾಗಿ ಖರೀದಿಸಿದ ವಾಹನಗಳಿಗೆ, ಮತ್ತು ಯಾವುದಾದರೂ ಉದ್ಘಾಟನಾ ಕಾರ್ಯಕ್ರಮವಿದ್ದರೆ ರಿಬ್ಬನ್ ಕಟ್ ಮಾಡಲು ಮಾತ್ರ ಬಳಕೆಯಾಗುತ್ತವೆ. ಏಕೆಂದರೆ ಇವತ್ತು ಮನುಷ್ಯನಿಗೆ ತಾಳ್ಮೆ ಶಕ್ತಿ ಹಾಗೂ ಶ್ರಮ ಪಡುವುದು ಕಡಿಮೆಯಾಗಿದೆ. ಸೋಮಾರಿಯ

ಮನೋಭಾವನೆ ಆವರಿಸಿಕೊಂಡಿದೆ ಅಥವಾ ಇನ್ನಾವುದೇ ಕೆಲಸಕ್ಕೆ ಹೋಗುವ ಆವಸರದಲ್ಲಿ ಸಮಯದ ಉಳಿತಾಯಕ್ಕಾಗಿ ಸರಳಮಾರ್ಗದತ್ತ ಮುಖಮಾಡಿದ್ದಾನೆ.

ಪೂರ್ವದಲ್ಲಿ ಇದ್ದಂತಹ ರಿಬ್ಬನ್ನುಗಳು ಮಾಯವಾಗಿ ಡಿಸ್ಕೋರಬ್ಬರ್, ಎಲೆಸ್ಟ್ರಿಕ್ ನಿಂದ ತಯಾರಿಸಿದ ಹೂವುಗಳು, ಕ್ಲಿಪ್‌ಗಳು, ಗಾಜಿನ ಮಣಿಯಿಂದ ತಯಾರಿಸಿದ ರಬ್ಬರ್‌ನ ಹೂಗಳು ಮುಡಿ ಭದ್ರವಾಗಿರಲು ಕಕ್ಕಡ ದಂತಹ ವಸ್ತುಗಳು ಇಂತ ಹಲವಾರು ವಸ್ತುಗಳನ್ನು ಬಳಸುವುದರಿಂದ ಪೂರ್ವದಲ್ಲಿದ್ದ ವಸ್ತುಗಳು ಕಣ್ಮರೆಯಾಗುತ್ತಿವೆ. ಇನ್ನೂ ಒಂದು ಹೆಜ್ಜೆ ಮುಂದುವರೆದು ನೋಡಿದಾಗ ಮುಂದುವರೆದಂತ ದೊಡ್ಡ ದೊಡ್ಡ ನಗರಗಳಲ್ಲಿ ರಬ್ಬರ್ ಹೇರ್‌ಬೆಂಡ್, ಕ್ಲಿಪ್‌ಗಳು ಮಾಯವಾಗಿ ತೆರೆದ ತಲೆ(open hairstyle)ಯಿಂದ ಬರುವಂತ ಸಂಸ್ಕೃತಿ ಕಂಡುಬರುತ್ತದೆ.

ಈ ಜಾತ್ರೆಯಲ್ಲಿ ದೊರೆಯುವಂತಹ ಕ್ರೀಡಾ ವಸ್ತುಗಳಾದ ಕ್ರಿಕೆಟ್ ಬ್ಯಾಟುಗಳು, ಬ್ಯಾಡ್ಮಿಂಟನ್, ಟೇಬಲ್, ಟೆನ್ನಿಸ್, ಕೇರಂ ಬೋರ್ಡ್, ಇಂತಹ ಮುಂತಾದ ವಸ್ತುಗಳು ಲಭ್ಯವಿರುವುದರಿಂದ ಗ್ರಾಮೀಣ ಜನರಿಗೆ ತಮ್ಮ ಕ್ರೀಡೆಯ ಜೊತೆಗೆ ಆಧುನಿಕತೆಯ ಕ್ರೀಡೆಗಳು ಪರಿಚಯವಾಗುತ್ತವೆ. ಜನಪದ ಸಂಸ್ಕೃತಿಯ ಬಳಕೆಯ ವಸ್ತುಗಳಾದ ಬೀಸುಕಲ್ಲಿನ ಪ್ರತಿರೂಪದ ವಸ್ತುಗಳು ಎತ್ತಿನಗಾಡಿ (ಬಂಡಿ)ಯಂತ ಪ್ರತಿಕೃತಿಯು ಆಟಿಕೆ ವಸ್ತುಗಳಾಗಿ ಜಾತ್ರೆಯಲ್ಲಿ ಗೋಚರವಾಗುವುದರಿಂದ ಈ ಜಾತ್ರೆಗೆ ಬಂದ ನಗರ ಪ್ರದೇಶದ ಜನಗಳಿಗೆ ಗ್ರಾಮೀಣ ಸೊಗಡಿನ ಪರಿಚಯವಾಗುತ್ತದೆ. ಜನಪದ ಕಲಾವಿದರ ಪರಿಕಾರಗಳಾದ ಢಮರುಗ, ಸಮಾಳ, ಮೃದಂಗ, ಹಲಗೆ, ತಪ್ಪಡಿ, ಕೊಳಲು, ಶಹನಾಯಿ ಇವುಗಳು ಇಂದು ಸ್ವಲ್ಪ ಸ್ಥಿತ್ಯಂತರ ಹೊಂದಿರುವಂತೆ ಗೋಚರಿಸುತ್ತಿವೆ. ಪೂರ್ವದಲ್ಲಿ ಇದ್ದ ಮೃದಂಗ, ಡೊಳ್ಳು, ಸಮಾಳ, ತಪ್ಪಡಿ, ಹಲಿಗೆ, ಸಂಪೂರ್ಣವಾಗಿ ಪ್ರಾಣಿಗಳ ಚರ್ಮದಲ್ಲಿ ತಯಾರಿಸಲಾಗುತ್ತಿತ್ತು. ಆದರೆ ಇಂದು ಫೈಬರ್‌ನಿಂದ ತಯಾರಿಸಲಾಗುತ್ತದೆ. ಈ ವಾದ್ಯಗಳ ಸುತ್ತಲಿರುವಂತಹ ಕಂಠದ ಭಾಗವು ಮರದ ದಿಮ್ಮಿಯಿಂದ ತಯಾರಿಸಲಾಗುತ್ತಿತ್ತು. ಇಂದು ಹಿತ್ತಾಳೆ, ತಾಮ್ರ, ಕಬ್ಬಿಣ ಲೋಹಗಳಿಂದ ತಯಾರಿಸಲಾಗುತ್ತದೆ. ಈ ವಸ್ತುಗಳು ಈ ಜಾತ್ರೆಯ ಉತ್ಸವದಲ್ಲಿ ಬರುವುದರಿಂದ ಗ್ರಾಹಕರಿಗೆ ಒಂದೇ ಸ್ಥಳದಲ್ಲಿ ಹಲವಾರು ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಹಾಗೂ ಪರಿಚಯಿಸಿಕೊಳ್ಳುವುದಕ್ಕೆ ಸೂಕ್ತವಾಗಿದೆ.

೫.೩.೨. ವಿಭೂತಿ-ಕುಂಕುಮದ ಅಂಗಡಿಗಳು : (Vibhuti Saffron Shops)

ಚಂದಾಲಿಂಗೇಶ್ವರನ ಜಾತ್ರೆಯಲ್ಲಿ ಸುಮಾರು ಹತ್ತಕ್ಕಿಂತ ಹೆಚ್ಚು ವಿಭೂತಿ ಅಂಗಡಿಗಳು ಬಂದಿರುವುದನ್ನು ನಾನು ಕ್ಷೇತ್ರ ಕಾರ್ಯಕ್ಕೆ ಹೋದಂತಹ ಸಂದರ್ಭದಲ್ಲಿ ನೋಡಿದ್ದೇನೆ. ಮುಖ್ಯದ್ವಾರದ ಮುಂಭಾಗದಲ್ಲಿ ಎರಡು ಅಂಗಡಿಗಳು, ಅದೇ ದ್ವಾರದ ಬಲ ಭಾಗದಲ್ಲಿ ಎರಡು, ಅರಿವಿನ ಮಂಟಪದಲ್ಲಿ ಎರಡು ಹಾಗೂ ಕೋಟೆಯ ಆವರಣದೊಳಗೆ ದೇವಾಲಯಕ್ಕೆ ಹೋಗುವ ಪೂರ್ವದಲ್ಲಿ ಎಡ ಹಾಗೂ ಬಲ ಭಾಗದಲ್ಲಿ ಎರಡೆರಡು ಅಂಗಡಿಗಳಿವೆ. ಕೋಟೆಯ ಒಳ ಆವರಣದಲ್ಲಿರುವ ನಾಲ್ಕು ಅಂಗಡಿಗಳು ಸರ್ವಕಾಲಿಕವಾಗಿರುವವು. ಮುಖ್ಯದ್ವಾರದ ಎಡ ಹಾಗೂ

ಬಲ ಭಾಗಕ್ಕೆ ಇರುವ ನಾಲ್ಕು ಅಂಗಡಿಗಳು ವಿಶೇಷವಾಗಿ ವಿಭೂತಿ-ಕುಂಕುಮಗಳಿಗೆಂದೇ ಮಾರಾಟಕ್ಕೆ ಹಾಕಲಾಗಿರುತ್ತದೆ. ಇನ್ನುಳಿದ ಕೆಲವು ಅಂಗಡಿಗಳು ಮಿಶ್ರ ವ್ಯವಹಾರದ ಅಂಗಡಿಗಳಾಗಿ ಮಾರ್ಪಟ್ಟಿವೆ.

ಜಾತ್ರೆಯಲ್ಲಿ ವಿಭೂತಿ ವ್ಯಾಪಾರಸ್ಥರಾಗಿ ಮಹಿಳೆಯರು, ಪುರುಷರು ಎಂಬ ಭೇದಭಾವವಿಲ್ಲದೆ ಕಾಣಿಸಿಕೊಳ್ಳುವರು. ಇವರು ಅಂಗಡಿಯನ್ನು ಸಿದ್ಧಪಡಿಸಿಕೊಂಡು ವ್ಯವಹಾರಕ್ಕೆ ತಯಾರಿರುತ್ತಾರೆ. ಅವರವರ ಅನುಕೂಲಕ್ಕೆ ತಕ್ಕಂತೆ ಅಂಗಡಿಗಳನ್ನು ತಯಾರಿಸಿ ಕೊಂಡಿರುವರು. ಕೆಲವರು ಮುಖ್ಯದ್ವಾರದ ಮಾರ್ಗಮಧ್ಯದಲ್ಲಿಯೇ ನೆಲದ ಮೇಲೆ ಒಂದು ಪ್ಲಾಸ್ಟಿಕ್ ಹಾಳೆಚೀಲವನ್ನು ಹಾಸಿ ಕೊಂಡಿರುತ್ತಾರೆ. ನಾನು ನೋಡಿದಂತೆ ಮಹಿಳಾ ವಿಭೂತಿ ವ್ಯಾಪಾರಸ್ಥಳು ತಾನು ಹಾಸಿಕೊಂಡಿರುವ ಚೀಲದ ಮೇಲೆ ಸಾಲು ಸಾಲಾಗಿ ಸ್ಟೀಲ್‌ನ ಬೆಸಾನುಬುಟ್ಟಿಗಳಲ್ಲಿ, ಪರಾತದಲ್ಲಿ ವಿಭೂತಿ ಉಂಡಿಗಳು ತುಂಬಿರುವುದು ಕಂಡುಬಂದಿವೆ. ಆ ಬುಟ್ಟಿಯಲ್ಲಿ ವಿಭೂತಿಗಳ ಗಾತ್ರಕ್ಕನುಗುಣವಾಗಿ ಆ ಮೂರು ಬುಟ್ಟಿಗಳಲ್ಲಿ ಬಿಡಿಬಿಡಿಯಾಗಿ ಇರಿಸಲಾಗಿತ್ತು. ಇನ್ನುಳಿದ ಮೂರು ಬುಟ್ಟಿ ಹಾಗೂ ಪರಾತಗಳಲ್ಲಿ ಬಿಳಿಗೆಂಪು, ಇನ್ನೊಂದರಲ್ಲಿ ಕರಿಗೆಂಪು ಕುಂಕುಮ, ಹಳದಿ ಬಂಢಾರ, ಇನ್ನೊಂದು ಬುಟ್ಟಿಯಲ್ಲಿ ಬಾದಾಮಿ ಬಣ್ಣ ಮಿಶ್ರಿತ ಬಂಢಾರದ ಬುಟ್ಟಿಗಳನ್ನು ಮುಂದಿನ ಸಾಲಿನಲ್ಲಿ ಇಡಲಾಗಿತ್ತು. ಈ ವಿಭೂತಿ ಕುಂಕುಮ ಸಾಲಿನ ಹಿಂಭಾಗದಲ್ಲಿ ಸುಮಾರು ಏಳೆಂಟು ಚೀಲಗಳು ಬಾಯಿತಿರುವಿದಾ ಸ್ಥಿತಿಯಲ್ಲಿದ್ದವು. ಒಂದೊಂದು ಚೀಲಗಳಲ್ಲಿ ಒಂದೊಂದು ಪೂಜಾ ಪದಾರ್ಥಗಳು ಮಾರಾಟಕ್ಕೆ ತಯ್ಯಾರಾಗಿದ್ದುವು. ಒಂದು ಚೀಲದಲ್ಲಿ ಧೂಪದ ಪುಡಿ, ಇನ್ನೊಂದು ಚೀಲದಲ್ಲಿ ಅರಿಶಿನ ಕೊಂಬು, ಮತ್ತೊಂದರಲ್ಲಿ ಲಿಂಬಿಕಾಯಿ ಗಾತ್ರದ ವಿಭೂತಿ ಉಂಡಿಗಳು, ಮತ್ತುಳಿದ ಚೀಲದಲ್ಲಿ ಚಿಕ್ಕ-ಚಿಕ್ಕ ಪಾಕೆಟ್‌ಗಳಾಗಿ ಸಿದ್ಧಪಡಿಸಿದ ಕುಂಕುಮ ಬಂಢಾರದ ಚೀಟಿಗಳು ಕಂಡುಬಂದವು.

ಮುಖ್ಯದ್ವಾರದ ಬಲಭಾಗದ ಮುಂಭಾಗದಲ್ಲಿ ವಿಭೂತಿ ಕುಂಕುಮ ವ್ಯಾಪಾರಸ್ಥ ಮಹಿಳೆಯರು ವ್ಯವಹಾರಕ್ಕೆ ತೊಡಗಿರುವುದು ಕಂಡುಬಂದಿತ್ತು. ಈ ಮಹಿಳೆಯರ ವ್ಯಾಪಾರದ ಕ್ರಮವನ್ನು ನೋಡಿದಾಗ ಸ್ವಲ್ಪ ಸುಧಾರಣೆಯ ಸ್ಥಿತಿಯಲ್ಲಿ ಅಂಗಡಿಯನ್ನು ಸಿದ್ಧಪಡಿಸಿಕೊಂಡಿದ್ದರು. ಕಬ್ಬಿಣದ ಮಲಗುವ ಮಂಚವನ್ನು ವ್ಯಾಪಾರದ ವಸ್ತುಗಳನ್ನು ಇಡಲು ಬಳಸಿಕೊಂಡಿದ್ದಳು. ಮಂಚದ ನಾಲ್ಕು ಕಾಲುಗಳಿಗೆಗೊಂದರಂತೆ ಐದಾರು ಅಡಿ ಎತ್ತರದ ಕೋಲುಗಳನ್ನು ಕಟ್ಟಿ, ಆ ನಾಲ್ಕು ಕೋಲುಗಳಿಗೆ ಹೊಂದಿಕೊಂಡಂತೆ ಅವುಗಳ ಮೇಲ್ಭಾಗಕ್ಕೆ ಅಡ್ಡ ಉದ್ದವಾಗಿ ಮತ್ತೆ ನಾಲ್ಕು ಕೋಲುಗಳನ್ನು ಜೋಡಿಸಿ ಕಟ್ಟಿಕೊಂಡು, ಮಂಚದ ಮೇಲ್ಭಾಗದ ನಾಲ್ಕು ಕೋಲುಗಳ ಮಧ್ಯ ಮತ್ತೊಂದು ಕೋಲನ್ನು ಉದ್ದವಾಗಿ ಮಂಚದ ಎರಡು ಭಾಗಕ್ಕೆ ಹೊಂದಿಕೊಂಡಿರುವಂತೆ ಕಟ್ಟಲಾಗಿತ್ತು. ತದನಂತರ ಮಂಚದ ಮೇಲೆ ಹಸಿರು ಬಣ್ಣದ ಪ್ಲಾಸ್ಟಿಕ್ ತಾಡಪತ್ರೆಯನ್ನು ಹಾಸಲಾಗಿತ್ತು. ಇದರ ಮೇಲೆ ಒಂದು ಬೆಡ್ ಶೀಟ್ ಅನ್ನು ಹೊದಿಸಿ ವ್ಯಾಪಾರಕ್ಕೆ

ಸಿದ್ಧತೆಮಾಡಿಕೊಂಡಿದ್ದರು. ಈ ಸಿದ್ಧವಾದ ಮಂಚದ ಮೇಲೆ ಒಂದು ಸ್ಟೀಲ್ ಬೇಸನ್ ಬುಟ್ಟಿಯಲ್ಲಿ ದೊಡ್ಡ ಗಾತ್ರದ ಚೌಕಕಾರದ ವಿಭೂತಿ ಉಂಡಿಗಳನ್ನು ತುಂಬಿಡಲಾಗಿತ್ತು. ಇನ್ನೊಂದು ಪ್ಲಾಸ್ಟಿಕ್ ಬುಟ್ಟಿಯಲ್ಲಿ ಸೇಬು ಹಣ್ಣಿನ ಆಕೃತಿಯಂತೆ ತಯಾರಿಸಿದ ಮಧ್ಯಮಗಾತ್ರದ ವಿಭೂತಿಗಳನ್ನು ತುಂಬಿಡಲಾಗಿತ್ತು. ಮತ್ತೊಂದು ಪರಾತದಲ್ಲಿ ಚಿಕ್ಕಗಾತ್ರದ ಚೌಕಾಕಾರದ ವಿಭೂತಿ ಉಂಡಿಗಳನ್ನು ಇಡಲಾಗಿತ್ತು. ಇದೇ ಮಂಚದ ಮೇಲೆ ಒಂದು ಅಡಿ ಎತ್ತರಕ್ಕೆ ಚಿಕ್ಕದಾದ ಸ್ಟೀಲ್ ಬೇಸನ್ ಬುಟ್ಟಿಯಲ್ಲಿ ನ್ಯಾಮದ ಉಂಡಿಗಳನ್ನು, ಇನ್ನೊಂದು ಪರಾತದಲ್ಲಿ ಕುಂಕುಮ, ಮತ್ತೊಂದು ಪರಾತದಲ್ಲಿ ಭಂಡಾರ ಹಾಗೂ ಚಿಕ್ಕದಾದ ಬುಟ್ಟಿಯಲ್ಲಿ ಧೂಪ(ಲೋಬನ) ಮಾರಾಟಕ್ಕಿಡಲಾಗಿತ್ತು. ಈ ಮಂಚಕ್ಕೆ ಹೊಂದಿಕೊಂಡಂತೆ ಕಟ್ಟಲಾಗಿರುವ ಮೇಲ್ಭಾಗದ ಎಲ್ಲಾ ಕೋಲುಗಳಿಗೆ ತುಳಸಿ ಮಣಿಸರಗಳು, ರುದ್ರಾಕ್ಷಿ ಸರಗಳು, ಗಾಜಿನ ಮಣಿಗಳಿಂದ ತಯಾರಿಸಿದ ಸರಗಳು, ಶಿವದಾರಗಳು, ನೂಲಿನದಾರಗಳು, ರೇಷ್ಮೆ ದಾರ ಹಾಗೂ ಬಣ್ಣಬಣ್ಣದ ವಿವಿಧ ರೀತಿಯಲ್ಲಿ ಎಣಿಕೆಮಾಡಿದ ದಾರಗಳು ಹಾಗೂ ಹಲವಾರು ದೇವರುಗಳ ಭಾವಚಿತ್ರಗಳನ್ನು ನೇತು ಬಿಡಲಾಗಿತ್ತು.

ಕ್ಷೇತ್ರಕಾರ್ಯದ ಸಮಯದಲ್ಲಿ ಮುಂದುವರೆದು ನೋಡಿದಾಗ ಮತ್ತೆ ಕೆಲವು ಈ ವಿಭೂತಿ ಅಂಗಡಿಗಳು ಗೋಚರಿಸಿದವು. ಆ ವ್ಯಾಪಾರಸ್ಥರೂ ಸಹ ತಮಗೆ ಅನುಕೂಲವಾದ ಸ್ಥಿತಿಯಲ್ಲಿ ಅಂಗಡಿಯನ್ನು ಹಾಕಿಕೊಂಡಿದ್ದರು. ಚೌಕಾಕಾರದ ಮೂರು ಅಡಿ ಎತ್ತರದ ಚೌಕಟ್ಟನ್ನು ಕಟ್ಟಿಕೊಂಡು ಅದರ ತಳ ಭಾಗಕ್ಕೆ ಜಮಕಾನ ಹಾಸಿಗೆಮಾಡಿ, ವಿಭೂತಿಗಳ ಗಾತ್ರಕ್ಕೆ ಅನುಗುಣವಾಗಿ ಮೂರು ಗುಂಪುಗಳನ್ನು ಮಾಡಿ ಇಡಲಾಗಿತ್ತು. ಸ್ವಲ್ಪ ಎತ್ತರದ ಭಾಗದಲ್ಲಿ ಕುಂಕುಮ ಬಂಢಾರವನ್ನು, ಹಾಗೂ ಈ ಅಂಗಡಿ ಮೇಲ್ಭಾಗದಲ್ಲಿ ಮಿಂಚಿನ ಜರಿಗಳು, ಕೈಕಟ್ಟುಗಳು, ರುದ್ರಾಕ್ಷಿ ಮಣಿಗಳು, ರುದ್ರಾಕ್ಷಿ ಮಾಲೆಗಳು, ವಿವಿಧ ದೇವರುಗಳ ಸ್ಟಿಕರ್‌ಗಳು ಕೀಬಂಚುಗಳನ್ನು, ನೇತುಬಿಡಲಾಗಿತ್ತು. ಈ ವ್ಯಾಪಾರದ ಜೊತೆಗೆ ತಾಮ್ರದಿಂದ ತಯಾರಿಸಿದ ಉಂಗುರಗಳು, ಮೂರ್ತಿಗಳು, ಕೈಗಡಗಗಳು ಮಾರಾಟಕ್ಕಿರುತ್ತಿದ್ದವು. ಹಿತ್ತಾಳೆಯಿಂದ ತಯಾರಿಸಿದ ವಿವಿಧ ದೇವರುಗಳ ಮೂರ್ತಿಗಳು, ದೂಪಾರ್ಥಿಗಳು, ಪಂಚಾರ್ಥಿಗಳು, ಗಂಟೆಗಳು, ಮುಂತಾದ ವಸ್ತುಗಳು ಗ್ರಾಹಕರಿಗೆ ಸ್ಪಷ್ಟವಾಗಿ ಗೋಚರಿಸುವಂತೆ ಇಡಲಾಗಿತ್ತು. ಈ ವ್ಯಾಪಾರಸ್ಥರು ವಸ್ತುಗಳನ್ನು ಗ್ರಾಹಕರಿಗೆ ಕಾಣುವಂತೆ ಇಡುವುದು ಒಬ್ಬರಿಂದ ಒಬ್ಬರಿಗೆ ಭಿನ್ನವಾಗಿರುತ್ತಿತ್ತು.

ಅರವತ್ತು ಕಂಬದ ಅಗಸಿ ಬಾಗಿಲಿನಲ್ಲಿ ಇಡಲಾದ ವಿಭೂತಿ ಅಂಗಡಿಯವರು ಹಾಗೂ ಖಾಯಂ ಯಿರುವ ಅಂಡಿಯವರು ಇವರೆಲ್ಲರೂ ಮಿಶ್ರವ್ಯಾಪಾರಿಗಳಾಗಿದ್ದರು. ಅಂದರೆ ಇವರು ವಿಭೂತಿ, ಕುಂಕುಮದ ಜೊತೆಗೆ ಕಪ್ಪು ಬಳಪದ ಕಲ್ಲಿನಲ್ಲಿ ತಯಾರಿಸಿದ ಚಿಕ್ಕ ಚಿಕ್ಕ ಜೋಡು ಬಸವಣ್ಣನ ಮೂರ್ತಿಗಳು, ಈಶ್ವರಲಿಂಗಗಳು, ಚಂದಾಲಿಂಗೇಶ್ವರನ ಭಾವಚಿತ್ರಗಳನ್ನು, ಚಿಕ್ಕದರಿಂದ ದೊಡ್ಡಗಾತ್ರದ ಫೋಟೋಗಳನ್ನು, ಮಾರಾಟಕ್ಕಿಟ್ಟಿದ್ದರು. ಇದರೊಂದಿಗೆ ಸ್ಟೇಷನರಿ ವಸ್ತುಗಳು, ಹೂವಿನ ಮಾಲೆಗಳು, ನಿಂಬೆಹಣ್ಣುಗಳು, ತೆಂಗಿನಕಾಯಿಗಳು, ಪಾನ್‌ಮಸಾಲಾ, ಗುಟ್ಕಾ, ತಂಬಾಕು, ಬಾಳೆಹಣ್ಣುಗಳನ್ನು, ಮಾರುವಂತವರಾಗಿದ್ದರು.

ಈ ಜಾತ್ರೆಯನ್ನು ಒಂದು ಸುತ್ತು ತಿರುಗಾಡಿ ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ, ನನಗೆ ಹಲವಾರು ವರ್ತಕರು ವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಿತ್ತು. ಸಂಶೋಧನಾ ಕಾರ್ಯದ ಉದ್ದೇಶ ಪೂರಕವಾಗಿ ಕ್ಷೇತ್ರಕಾರ್ಯಕ್ಕೆ ಬಂದಿರುವುದರಿಂದ ಜಾತ್ರೆಯ ಸ್ಥಿತಿಗತಿಯನ್ನು ಸಂಪೂರ್ಣವಾಗಿ ಕಣ್ಣಾಡಿಸಿದೆ. ಅವುಗಳಲ್ಲಿ ಕೆಲವೊಂದನ್ನು ಅಧ್ಯಯನಕ್ಕೆ ಒಳಪಡಿಸಿರುವೆ. ಕಣ್ಣಿಂದ ಕಂಡು, ಕೇಳಿ, ಅರಿತು ವಿಷಯವನ್ನು ಸಂಗ್ರಹಿಸಿ ವಿಶ್ಲೇಷಿಸಲು ಸಾಧ್ಯವಾಯಿತು. ಅಂತಹ ವರ್ತಕರಲ್ಲಿ ಮೊದಲಿಗೆ ವಿಭೂತಿ, ಕುಂಕುಮ ವ್ಯಾಪಾರಸ್ಥರ ಬಗ್ಗೆ ತಿಳಿಯುವುದು ಅವಶ್ಯಕ. ಜಾತ್ರೆ ಪ್ರಾರಂಭವಾಗುವುದಕ್ಕಿಂತ ಎರಡು ದಿನ ಮೊದಲೇ ಬಂದು ತಾವು ಅಂಗಡಿ ಹಾಕುವ ಸ್ಥಳವನ್ನು ಗುರುತು ಮಾಡಿಕೊಂಡಿರುವರು. ಸುಲಭವಾದ ರೀತಿಯಲ್ಲಿ ಅಂಗಡಿಯನ್ನು ನಿರ್ಮಿಸಿಕೊಳ್ಳುವರು. ಈ ವ್ಯಾಪಾರಸ್ಥರು ಸಾಧ್ಯವಾದಷ್ಟು ಮುಖ್ಯ ಗುಡಿಗೆ ಹೋಗುವ ಮಾರ್ಗದಲ್ಲಿಯೇ ನಿರ್ಮಿಸಲು ಪ್ರಯತ್ನ ಪಡುತ್ತಾರೆ. ಕೆಲವೊಬ್ಬರು ನೆಲದ ಮೇಲೆ ಚಾಪೆ, ಪ್ಲಾಸ್ಟಿಕ್ ತಾಡಪತ್ರಿ, ಹೊದಿಸಿ ವ್ಯಾಪಾರವನ್ನು ಪ್ರಾರಂಭಿಸಿದರೆ, ಇನ್ನೂ ಕೆಲವರು ಎತ್ತರ ಮಟ್ಟದಲ್ಲಿ ಅಟ್ಟವನ್ನು ಮೆಟ್ಟಿಲುಗಳ ರೂಪದಲ್ಲಿ ಕಟ್ಟಿ, ಒಂದೊಂದು ಸ್ತರದಲ್ಲಿ ಒಂದೊಂದು ರೀತಿಯ ವಸ್ತುಗಳನ್ನು ಇಟ್ಟು, ವ್ಯಾಪಾರ ಕೈಗೊಳ್ಳುತ್ತಾರೆ. ಆದರೆ ಅವರು ಗ್ರಾಹಕರ ಕಣ್ಸೆಳೆಯಲು ತಮ್ಮ ವ್ಯಾಪಾರದ ವಸ್ತುಗಳಾದ ವಿಭೂತಿ– ಕುಂಕುಮ, ಕೈಕಟ್ಟುಗಳು, ಶಿವದಾರಗಳು ಪೂಜಾಸಾಮಗ್ರಿಗಳು ವಿವಿಧ ವಿಭಿನ್ನವಾದ ಶೈಲಿಯಲ್ಲಿ ಇಟ್ಟಿರುತ್ತಾರೆ. ಇವರು ತಾವು ಮಾರಾಟಕ್ಕೆ ತಂದಿರುವಂತ ವಸ್ತುಗಳು ಗ್ರಾಹಕರೆಲ್ಲರಿಗೂ ಗೋಚರಿಸಬೇಕು ಎಂಬ ಭಾವನೆಯಿಂದ ವಿಭೂತಿಯ ಉಂಡೆಗಳನ್ನು ತೆರೆದ ಬುಟ್ಟಿಯಲ್ಲಿ 'ಪಿರಮಿಡ್' ಆಕೃತಿಯ ರೂಪದಲ್ಲಿ ಹೊಂದಿಸಿರುತ್ತಾರೆ. ಇನ್ನು ಕೆಲವರು ಅವುಗಳ ಗಾತ್ರಕ್ಕೆ ತಕ್ಕಂತೆ ಗುಂಪುಗಳಾಗಿ ವರ್ಗೀಕರಿಸಿ ಇಟ್ಟಿರುತ್ತಾರೆ. ಇನ್ನೂ ವಿಶೇಷವೆಂದರೆ ಗ್ರಾಹಕರು ತಮ್ಮ ಅಂಗಡಿಯ ಕಡೆಗೆ ನೋಡಿದರೆ ತಾವು ಮಾರುವಂತ ವಸ್ತುಗಳು ಸಂಪೂರ್ಣವಾಗಿ ಅವರ ಕಣ್ಣಿಗೆ ಕಾಣುವಂತೆ ಜೋಡಿಸಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ ಈ ವ್ಯಾಪಾರಸ್ಥರ ಸಂಖ್ಯೆ ಹೆಚ್ಚಾಗಿರುವುದರಿಂದ ಜಾತ್ರೆಗೆ ಬಂದ ಪ್ರೇಕ್ಷಕರನ್ನು ಕರೆದು ಕರೆದು ವ್ಯಾಪಾರ ಮಾಡುವಂತಹ ಸ್ಥಿತಿ ಬಂದೊದಗಿದೆ. ಕೆಲವೊಂದಿಷ್ಟು ವ್ಯಾಪಾರಸ್ಥರು ತಾವು ನಿಂತ ಸ್ಥಳದಿಂದಲೇ 'ಆ... ಸಸ್ತಾ... ಸಸ್ತಾ... ಗಂಧದಿಂದ ತಯಾರಿಸಿದ ವಿಭೂತಿ, ಆ... ಸಸ್ತಾ... ಸಸ್ತಾ... ಬರ್ರಿ... ಬರ್ರಿ... ಆ... ಕೆಂಪ್ಪುದು... ಕೆಂಪ್ಪುದು(ಕುಂಕುಮವನ್ನು ಕುರಿತು) ಬನ್ನಿ... ಬನ್ನಿ... ಕಾಕಾ... ಚಿಗವ್ವ... ಎಣ್ಣಾ... ಎಣ್ಣಾ... ಇಲ್ಲಿ... ಬನ್ನಿ... ತಗೋರಿ... ತಗೋರಿ... ಇಲ್ಲಿ ತಗೋರಿ...' ಎಂದು ಕರೆದು ತಮ್ಮ ವಸ್ತುಗಳು ಖರೀದಿಯಾಗಲು ಗ್ರಾಹಕರನ್ನು ಪ್ರೇರೇಪಿಸುತ್ತಾರೆ. ಹೀಗೆ ತಮ್ಮಲ್ಲಿರುವ ಎಲ್ಲಾ ವಸ್ತು ಪದಾರ್ಥಗಳ ಹೆಸರುಗಳನ್ನು ಜೋರಾಗಿ ಹೇಳುತ್ತಾ, ಜಾತ್ರೆಗೆ ಬಂದಿರುವವರಿಗೆ ಪರಿಚಯಿಸುತ್ತಾರೆ. ಗ್ರಾಹಕರಿಗೆ ಅನುಕೂಲವಾದ ರೀತಿಯಲ್ಲಿ ವಸ್ತು ಪದಾರ್ಥಗಳನ್ನು ಚಿಕ್ಕ ಚಿಕ್ಕ ಪಾಕೇಟ್ ರೂಪದಲ್ಲಿ ಮತ್ತು ಬಿಡಿ ಬಿಡಿಯಾದ ವಿಧಾನದಲ್ಲಿ

ವಿತರಿಸುತ್ತಾರೆ. ಈ ವಿಭೂತಿ ಕುಂಕುಮದ ವ್ಯಾಪಾರಿಗಳು ಮಿಶ್ರ ವ್ಯಾಪಾರಿಗಳಾಗಿರುವುದರಿಂದ ಇವರಲ್ಲಿ ಹಿತ್ತಾಳೆ, ತಾಮ್ರ, ಲೋಹಗಳಿಂದ ತಯಾರಿಸಿದ ಪೂಜಾ ಸಾಮಗ್ರಿಗಳು ಇತರ ದೇವರುಗಳ ಚಿಕ್ಕಚಿಕ್ಕ ಭಾವಚಿತ್ರಗಳಿಂದ ಇನ್ನಿತರ ದೇವರುಗಳ ಪರಿಚಯವೂ ಇವರು ಮಾರುವಂತ ರೇಷ್ಮೆದಾರ, ಶಿವದಾರ, ನೂಲುಗಳು, ರುದ್ರಾಕ್ಷಿಯಿಂದ ತಯಾರಿಸಿದ ವಿವಿಧ ಶೈಲಿಯ ಕೈಕಟ್ಟುಗಳು, ಕೊರಳಿನ ಸರಗಳು, ಮೂರ್ತಿಗಳು, ಹಾಗೂ ತುಳಸಿ ಮಣಿಗಳಿಂದ ತಯಾರಿಸಿದ ವಿವಿಧ ವಿನ್ಯಾಸದ ಸರಗಳು ಮುಖ್ಯವಾಗಿ ಗ್ರಾಮೀಣ ಜನರಿಗೆ ಪರಿಚಯವಾಗುತ್ತದೆ.

ವ್ಯಾಪಾರಸ್ಥರು ತಾವು ಮಾರಾಟಕ್ಕೆ ತಂದಿರುವಂತಹ ವಸ್ತುಗಳನ್ನು ತಮ್ಮ ಅಂಗಡಿಯಲ್ಲಿ ಯಾವ ಯಾವ ಭಾಗಕ್ಕೆ ಯಾವ ಯಾವ ವಸ್ತುಗಳನ್ನು ಹಾಕಬೇಕು, ಯಾವ ವಸ್ತುಗಳನ್ನು ಹಾಕಬಾರದು, ಯಾವ ವಸ್ತುಗಳನ್ನು ಪ್ರದರ್ಶಿಸಬೇಕು ಎಂಬ ವ್ಯವಹಾರದ ಜ್ಞಾನವನ್ನು ಹೊಂದಿರುವುದು ಕಂಡುಬರುತ್ತದೆ. ತಮ್ಮ ಅಂಗಡಿಗೆ ಬರುವಂತಹ ಗ್ರಾಹಕರ ಮನಸ್ಸನ್ನು ಹೇಗೆ ಪುಸಲಾಯಿಸಬೇಕು ಹಾಗೂ ಅವರು ಒಂದು ವಸ್ತು ಕೊಳ್ಳುವುದರೊಂದಿಗೆ ಇನ್ನೂ ಒಂದಿಷ್ಟು ವಸ್ತುಗಳನ್ನು ಕೊಳ್ಳುವಂತೆ ಅವರನ್ನು ಹೇಗೆ ಸಮಜಾಯಿಸಬೇಕು ಎಂಬ ಅವರ ವ್ಯವಹಾರ ಜ್ಞಾನ ತಿಳಿದುಕೊಳ್ಳುವುದು ಮುಖ್ಯವಾಗಿದೆ. ವಿಭೂತಿ-ಕುಂಕುಮ ವ್ಯಾಪಾರಗಳಲ್ಲಿ ಮಿಶ್ರ ವ್ಯಾಪಾರಿಗಳಾಗಿ ಕಂಡುಬರುವ ಪ್ರಮುಖ ಉದ್ದೇಶವೇನೆಂದು, ಯೋಚಿಸಿದಾಗ ನನಗೆ ತಿಳಿದಿರುವಂತೆ ಒಂದೇ ವಸ್ತುವನ್ನು ಮಾರುವುದಕ್ಕೆ ಸಮಯವನ್ನು ವ್ಯರ್ಥ ಮಾಡುವುದಕ್ಕಿಂತ ಇತರ ಹಲವಾರು ವಸ್ತುಗಳನ್ನು ಮಾರುವುದರಿಂದ "ಒಂದೇ ಕಲ್ಲಿಗೆ ಹಲವಾರು ಹಕ್ಕಿಗಳನ್ನು ಹೊಡೆದಂತೆ"[೧] ಎಂಬ ಮಾತಿನಂತೆ ಒಂದು ವ್ಯಾಪಾರವಾಗಲಿಲ್ಲಂದ್ರೆ ಇನ್ನೊಂದಾದ್ರೂ ವ್ಯಾಪಾರವಾಗುವುದರಿಂದ ಸಮಯ ಸದುಪಯೋಗವಾಗುತ್ತದೆ. ಇದಲ್ಲದೆ ಅಂಗಡಿಯ ತುಂಬ ವಸ್ತುಗಳು ಕಾಣಿಸುವುದರಿಂದ ಗ್ರಾಹಕರನ್ನು ಆಕರ್ಷಿಸಬಹುದು. ಜಾತ್ರೆಗೆ ಬಂದ ಪ್ರೇಕ್ಷಕರ ಆಸಕ್ತಿ ಅಭಿರುಚಿಗಳು ಭಿನ್ನವಾಗಿರುವುದರಿಂದ ಬೇರೆ ಬೇರೆ ವಸ್ತುಗಳು ಖರೀದಿ ಆಗಬಹುದು ಅಥವಾ ಯಾವುದೋ ವಸ್ತು ಖರೀದಿಗೆ ಬಂದು ಇನ್ನಾವುದೂ ವಸ್ತುಗಳನ್ನು ಖರೀದಿ ಮಾಡುವಂತೆ ಪ್ರೇರೆಪಿಸಬಹುದು ಹಾಗೂ ಅವರೆ ಖರೀದಿ ಮಾಡಲುಬಹುದು. ಕೋಟೆಯ ಒಳ ಆವರಣದಲ್ಲಿ ಇರುವಂತಹ ವಿಭೂತಿ ಕುಂಕುಮ ಹಾಗೂ ಮಿಶ್ರ ವ್ಯಾಪಾರಿಗಳು ಇವರು ಪೂರ್ಣಕಾಲಿಕ ವ್ಯಾಪಾರಸ್ಥರಾಗಿರುವುದರಿಂದ ವ್ಯವಸ್ಥಿತವಾದ ಅಂಗಡಿಯನ್ನು ತಯಾರಿಸಿಕೊಂಡಿದ್ದಾರೆ. ಬಿಡುವಿನ ದಿನಗಳಲ್ಲಿ ಈ ದೇವಾಲಯಕ್ಕೆ ಭಕ್ತರು ಬರುವುದರಿಂದ ಅವರ ಅವಶ್ಯಕತೆಗಳಿಗೆ ಅನುಗುಣವಾದಂತ ವಸ್ತುಗಳು ಸದಾಕಾಲ ಮಾರಾಟವಾಗುತ್ತವೆ.

೫.೩.೩. ಪಳಾರದ ಅಂಗಡಿಗಳು : (Grocery Stores)

ಚಂದಲಿಂಗೇಶ್ವರನ ಜಾತ್ರೆಗೆ ಅಕ್ಕಪಕ್ಕದ ಗ್ರಾಮ ಪಟ್ಟಣ ಪ್ರದೇಶಗಳಿಂದ ಪಳಾರದ ಅಂಗಡಿಯ ವ್ಯಾಪಾರಸ್ಥರು ಎರಡು ದಿನಗಳ ಮುಂಚಿತವಾಗಿ ಬಂದು ತಾವು ಪ್ರತಿವರ್ಷ ಹಾಕುವ ಸ್ಥಳದಲ್ಲಿಯೇ ಅಂಗಡಿಯನ್ನು ಹಾಕುವ ಏರ್ಪಾಟು ಮಾಡುವರು. ಈ ಅಂಗಡಿಗಳನ್ನು

ಅವರವರ ಮಾರಾಟ ಮಾಡುವ ಪದಾರ್ಥಗಳಿಗೆ ಅನುಗುಣವಾಗಿ ರಚಿಸಿಕೊಂಡಿರುವರು. ಚೌಕಾಕಾರವಾಗಿ ನಾಲ್ಕು ಕಂಬಗಳನ್ನು ನಡುಹಾಕಿ ಆ ನಾಲ್ಕು ಭಾಗಕ್ಕೂ ಸುತ್ತುವರೆದು ಪ್ಲಾಸ್ಟಿಕ್ ತಾಡಪತ್ರೆಯನ್ನು ಕಟ್ಟಿರುವರು. ಇದರ ಮೇಲ್ಭಾವಣಿಗೆ ತಾಡಪತ್ರಿ ಅಥವಾ ತಗಡುಗಳನ್ನು ಹೊಂದಿಸಿರುತ್ತಾರೆ.

ಪಳಾರದ ಅಂಗಡಿಯವರು ತಾವು ತಯಾರಿಸಿ ಕೊಂಡಿರುವಂತ ಈ ಅಂಗಡಿಯಲ್ಲಿ ಎರಡು ಭಾಗಗಳನ್ನಾಗಿ ಮಾಡಿಕೊಂಡಿರುವರು. ಮುಂದಿನ ಭಾಗದಲ್ಲಿ ಮೆಟ್ಟಿಲುಗಳಂತೆ ಏರಿಕೆ ಸ್ತರವಿನ್ಯಾಸ ತಯಾರಿಸಿರುವರು. ಒಂದೊಂದು ಸ್ತರ ವಿನ್ಯಾಸದಲ್ಲಿ ವಿವಿಧ ಪದಾರ್ಥಗಳನ್ನು ಇಡುವರು. ಇದರ ಇನ್ನೊಂದು ಹಿಂದಿನ ಭಾಗದಲ್ಲಿ ಗಂಟು ಮೂಟೆಗಳನ್ನು ಮತ್ತು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಿದ ಪದಾರ್ಥಗಳನ್ನು ಸಂಗ್ರಹಿಸಿಡುವರು. ಇನ್ನೂ ಕೆಲವು ಅಂಗಡಿಯವರು ಹಿಂದೆ ಬಿಟ್ಟಿರುವಂತ ಜಾಗವನ್ನು ಗ್ರಾಹಕರಿಗೆ ತಿಂಡಿ-ತಿನಿಸುಗಳನ್ನು ತಿನ್ನಲು ಬಳಕೆ ಮಾಡುತ್ತಿದ್ದರು. ಬೇರೆ ಬೇರೆ ಜಾತ್ರೆಗಳಿಗೆ ಖಾಯಂ ಪಳಾರದ ಅಂಗಡಿಗಳನ್ನು ಹಾಕುವಂತಹ ವ್ಯಾಪಾರಸ್ಥರು ಸುಸಜ್ಜಿತವಾದ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಅಂದರೆ ತಾವು ನಿರ್ಮಿಸಿರುವ ಅಂಗಡಿಯ ಸುತ್ತುವರೆದು ತಗಡುಗಳನ್ನು ಹೊದಿಸುವರು. ಮೇಲ್ಭಾಗಕ್ಕೆ ತಾಡಪತ್ರೆಯನ್ನು ಹೊದಿಸುವರು. ಅದರಂತೆ ಇಂದು ಸ್ಥಿತ್ಯಂತರ ಹೊಂದಿ ಅಂಗಡಿಯ ರಚನೆಯ ಪರಿಕರಗಳು ಬದಲಾಗುತ್ತಿವೆ. ಆರ್ಥಿಕವಾಗಿ ಸಬಲರಾದಂತಹವರು ಶಾಮಿಯಾನ್ (ಪೆಂಡಲ್)ಹಾಕಿ ಅಂಗಡಿಯನ್ನು ನಡೆಸುವರು. ಈ ರೀತಿ ಸಿದ್ಧಪಡಿಸಿದ ಅಂಗಡಿಯಲ್ಲಿ ಮಾರಾಟವಾಗುವ ಪದಾರ್ಥಗಳೆಂದರೆ ಬೆಂಡು, ಬತ್ತಾಸ, ದಾಣಿ, ಶಂಕರಪಳ, ಕರದಂಟು, ಬೇಸನ್ ಉಂಡೆ, ಜಿಲೇಬಿ, ಮೈಸೂರುಪಾಕ್, ಬಾದುಷಾ, ಚಕ್ಕಲಿ, ಬೂಂದಿಉಂಡಿ, ಕೋಡುಬಳಿ, ಪಾಮಡೆ, ಕರಿದವಲಕ್ಕಿ ಮುಂತಾದ ತಿಂಡಿತಿನಿಸುಗಳು ಲಭ್ಯವಾಗುತ್ತವೆ. ಎಲ್ಲಾ ಪದಾರ್ಥಗಳನ್ನು ಗ್ರಾಹಕರಿಗೆ ಎಲ್ಲವೂ ಗೋಚರವಾಗುವಂತ ಸ್ಥಿತಿಯಲ್ಲಿ ಹಾಗೂ ಮನಸ್ಸನ್ನು ಆಕರ್ಷಿಸುವಂತಹ ಶೈಲಿಯಲ್ಲಿ ಜೋಡಿಸಿರುತ್ತಾರೆ.

ಪಾರದರ್ಶಕವಾದ ಪ್ಲಾಸ್ಟಿಕ್ ಬಿಳಿ ಹಾಳೆ ಚೀಲದಲ್ಲಿ ಅಥವಾ ಗಾಜಿನಡಬ್ಬಿಯಲ್ಲಿ ಕರಿದ ಶೇಂಗಾ ಕಾಳುಗಳು, ಬೆಂಡು, ಬತ್ತಾಸು, ಹಲ್ವಾ ಇವುಗಳನ್ನು ವಿಶಿಷ್ಟ ಶೈಲಿಯಲ್ಲಿ ಹೊಂದಿಸಿರುವರು. ದಾಣಿಯನ್ನು ಒಂದು ತೆರೆದ ಪಾತ್ರೆಯಲ್ಲಿ ವೃತ್ತಾಕಾರವಾಗಿ, ಬೇಸಾನ್, ಬೂಂದಿ ಉಂಡಿಗಳನ್ನು, ಪಿರಮಿಡ್ ಆಕೃತಿಯಲ್ಲಿ ಹೊಂದಿಸಿಟ್ಟಿರುವರು. ಮೈಸೂರುಪಾಕ್‌ನ್ನು ಮೆಟ್ಟಿಲುಗಳ ರೂಪದಲ್ಲಿ ಜೋಡಿಸಿರುವುದು ವಿಶೇಷವಾಗಿ ಈ ಜಾತ್ರೆಯಲ್ಲಿ ಕಂಡುಬರುತ್ತದೆ. ಜಾತ್ರೆಗೆ ಬಂದಿರುವ ಯಾತ್ರಿಕರು ಚಂದಾಲಿಂಗೇಶ್ವರ ದರ್ಶನ ಪಡೆದುಕೊಂಡು ಮರಳಿ ತಮ್ಮ ತಮ್ಮ ಊರಿಗೆ ಹೋಗುವಾಗ ಈ ಅಂಗಡಿಗಳಿಗೆ ಭೇಟಿ ನೀಡುತ್ತಾರೆ. ಯಾತ್ರಿಕರು ತಮ್ಮ ವ್ಯವಹಾರಕ್ಕೆ ಹಾಗೂ ತಮಗೂ ಬೇಕಾದ ಪದಾರ್ಥಗಳು ಇರುವ ಅಂಗಡಿಗೆ ಹೋಗಿ ಪಳಾರ ಹಾಕಿಸಿಕೊಂಡು ಹೋಗುವರು. ಈ ಅಂಗಡಿಗಳು ಮೂರು ದಿನದ ಜಾತ್ರೆ ಮುಕ್ತಾಯವಾಗುವವರೆಗೂ ಅಲ್ಲಿಯೇ ಟಿಕಾಣಿ ಹೂಡಿರುತ್ತಾರೆ.

ಈ ಜಾತ್ರೆಯಲ್ಲಿ ಪಳಾರದ ಅಂಗಡಿಗಳ ವ್ಯವಹಾರ ಕ್ರಮವನ್ನು ಅವಲೋಕಿಸಿದಾಗ ವಾಸ್ತವ ಸ್ಥಿತಿಗತಿಯನ್ನು ತಿಳಿಯಬಹುದು. ಇಲ್ಲಿ ಬಹುಪಾಲು ಪ್ರಥಮ ಆದ್ಯತೆ ಸ್ಥಾನ ಪಡೆದುಕೊಂಡವರೆಂದರೆ ಸ್ಟೇಷನರಿ ವ್ಯಾಪಾರಸ್ಥರು ಎಂದರೆ ತಪ್ಪಾಗಲಾರದು. ಏಕೆಂದರೆ ಈ ದೇವಾಲಯಕ್ಕೆ ಬರುವ ಮಾರ್ಗದ ಎಡ ಬಲಭಾಗಕ್ಕೆ ಬಾಜು ಬಾಜಾಗಿ ತಲೆಯೆತ್ತಿರುವ ಅಂಗಡಿಗಳೆಂದರೆ ಈ ಸ್ಟೇಷನರಿ ವ್ಯಾಪಾರಸ್ಥರು. ಪ್ರಥಮವಾಗಿ ಯಾತ್ರಿಕರನ್ನು ಬರಮಾಡಿಕೊಳ್ಳುವಂತವುವೇ ಈ ಅಂಗಡಿಗಳು. ತದನಂತರದಲ್ಲಿ ಇನ್ನುಳಿದ ಅಂಗಡಿಗಳು ಬರುತ್ತವೆ. ಅದರಂತೆಯೆ ಈ ಪಳಾರದ ಅಂಗಡಿಗಳು ಸಣ್ಣಪುಟ್ಟ ವರ್ತಕರಿಗೆ ತಮ್ಮ ಅಂಗಡಿಯ ಮುಂದೆ ಆದ್ಯತೆ ನೀಡಿ ಅವರ ಹಿಂದಿನ ಸಾಲಿನಲ್ಲಿ ಈ ಅಂಗಡಿಗಳು ತಲೆಯೆತ್ತಿರುತ್ತವೆ. ಈ ಅಂಗಡಿಯ ಕುರಿತು ಪೂರ್ವದಲ್ಲಿ ನಲವತ್ತು, ಐವತ್ತು ವರ್ಷಗಳ ಆಚೆಗೆ ಹೇಗಿತ್ತು ಎಂದು ಈ ದೇವಾಲಯದ ಹಿರಿಯ ಭಕ್ತ ನಿಡಗುಂದಿಯ ಕಳಕಪ್ಪ ಅರಮನೆ ಅವರನ್ನು ಕೇಳಿದಾಗ 'ಏ... ಇಲ್ಲರೀ ಮೊದ್ಲಿಗೆ ಇಂತಾವೆಲ್ಲ ಬರುತ್ತಿರಲಿಲ್ಲ; ಒಂದೋ, ಎರಡೂ ಮಿಠಾಯಿ ಅಂಗಡಿಗಳು ಬರುತ್ತಿದ್ವರ್ರೀ. ಈಗೆಲ್ಲಾ ಕಾಲ ಬದ್ಲಾಗ್ಯಾತಲ್ಲರ್ರಿ' ಎಂದು ಹೇಳುತ್ತಾರೆ. ಈ ಪಳಾರದ ಅಂಗಡಿಯ ವ್ಯಾಪಾರಸ್ಥರು ಇನ್ನು ಎರಡು ದಿನಗಳ ಮುಂಚಿತವಾಗಿ ಬಂದು ತಮ್ಮ ಸ್ಥಳವನ್ನು ಗುರುತು ಮಾಡಿಕೊಳ್ಳುವುದನ್ನು ನೋಡಿದರೆ ಜಾತ್ರೆಗಳು ಯಾವ ಯಾವ ಕಾಲಕ್ಕೆ ನಡೆಯುತ್ತವೆ. ಹಾಗೂ ಅದಕ್ಕೆ ಪೂರ್ವತಯಾರಿಯಾಗಿ ವ್ಯಾಪಾರದ ವಸ್ತುಗಳನ್ನು ತಯಾರಿಸುವ ಜಾಣ್ಮೆ ಅವರಲ್ಲಿ ಇರುವುದು ತಿಳಿಯುತ್ತದೆ. ಇನ್ನೊಂದು ದೃಷ್ಟಿಕೋನದಿಂದ ನೋಡಿದರೆ, ಇವತ್ತಿನ ಸ್ಪರ್ಧಾತ್ಮಕ ಯುಗದಲ್ಲಿ ವ್ಯಾಪಾರಸ್ಥರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಅಂಗಡಿಯನ್ನು ಹಾಕಲು ಸ್ಥಳದ ಅಭಾವ ಆಗುವುದೆಂಬ ಆತಂಕದ ಮನೋಭಾವನೆ ಇದೆ ಎಂಬುದು ತಿಳಿಯುತ್ತದೆ. ಇದಲ್ಲದೆ ಸರಿಯಾಗಿ ವ್ಯಾಪಾರ ನಡೆಯುವಂತಹ ಸೂಕ್ತವಾದ ಸ್ಥಳವಾಗಿರಬೇಕು ಎಂಬ ನಂಬಿಕೆಯಿಂದ ಬೇಗ ಬಂದು ತಮ್ಮ ಸ್ಥಳವನ್ನು ಗುರುತಿಸಿಕೊಳ್ಳುತ್ತಿದ್ದಿರ ಬಹುದೆಂದು ಹೇಳಬಹುದು.

ಬಡ ವ್ಯಾಪಾರಸ್ಥರು ತಾವೂ ಕೂಡ ಈ ಜಾತ್ರೆಯಲ್ಲಿ ಅಂಗಡಿಯನ್ನು ಹಾಕಬೇಕೆಂಬ ಹಂಬಲದಿಂದ ತಮ್ಮಲ್ಲಿ ಇದ್ದಂತಹ ಸರಕು ಸಾಮಾನುಗಳನ್ನು ತಂದು ಅಂಗಡಿಯನ್ನು ಹಾಕುತ್ತಾರೆ. ಕೆಲವೊಬ್ಬರ ಅಂಗಡಿಗಳು ತಾತ್ಕಾಲಿಕವಾಗಿ ಕಂಡರೆ, ಇನ್ನು ಕೆಲವರು ಶಾಶ್ವತವಾದ ರೂಪದಲ್ಲಿ ಅಂಗಡಿಗಳನ್ನು ತಯಾರಿಸಿಕೊಂಡಿರುವರು. ವ್ಯಾಪಾರಸ್ಥರು ತಮ್ಮ ವ್ಯಾಪಾರ ಕುಲಾಯಿಸಲಿ ಎಂದು ತಿಂಡಿ ತಿನಿಸುಗಳನ್ನು ವಿವಿಧ ಶೈಲಿಯಲ್ಲಿ ಇಡುವಂತ ಕಲೆಯನ್ನು ಕಲಿತುಕೊಂಡಿದ್ದರು. ಇವರು ತಯಾರಿಸುವಂತಹ ಪದಾರ್ಥಗಳ ಕುರಿತು ಯಾವುದೇ ಅಧ್ಯಯನ ತರಬೇತಿ ಪಡೆಯದೆ. ಅಜ್ಜಿಯಿಂದ ತಾಯಿ, ತಾಯಿಯಿಂದ ಮಗಳು, ಹಾಗೂ ಅಜ್ಜನಿಂದ ತಂದೆ, ತಂದೆಯಿಂದ ಮಗ, ಮಗನಿಂದ ಮೊಮ್ಮಗ, ಹೀಗೆ ಕವಿ ಕವಿರಾಜಮಾರ್ಗಕಾರನು ಹೇಳುವಂತೆ. "ಕಲಿತವರಷ್ಟೆ ಅಲ್ಲ, ಮಿಕ್ಕ ಜನರು ಕೂಡ ಎಲ್ಲರೂ ತಮ್ಮ ತಮ್ಮ ಮಾತಿನಲ್ಲಿ ಜಾಣರು. ಚಿಕ್ಕ ಮಕ್ಕಳೂ ಹುಟ್ಟು

ಮೂಗರು ಸಹ ವಿವೇಕವನ್ನು ಇಲ್ಲವೆ ಜಾಣ್ನುಡಿಗಳನ್ನು ತಿಳಿಸಲುಬಲ್ಲರು, ನಾಡ ಜನರು ಕ್ರಮವನ್ನು ಅರಿತು ನುಡಿಯುವುದರಲ್ಲೂ, ನುಡಿದದ್ದನ್ನು ಅರಿತು ತಿಳಿದುಕೊಳ್ಳುವುದರಲ್ಲೂ ಸಮರ್ಥರು, ಸ್ವಾಭಾವತಃ ಅವರು ಚದುರರು, ಉದ್ದೇಶಪೂರ್ವಕವಾಗಿ ಅಧ್ಯಯನ ಮಾಡದಿದ್ದರೂ, ಕಾವ್ಯ ಪ್ರಯೋಗದಲ್ಲಿ ಅವರು ಪರಿಣತ ಬುದ್ಧಿಯುಳ್ಳವರು"[೨] ಎನ್ನುವ ಮಾತಿನಂತೆ ನಮ್ಮ ಜನಪದರು ಇಂತಹ ಪದಾರ್ಥಗಳನ್ನು ತಯಾರಿಸಲು ಯಾವುದೇ ಅಧ್ಯಯನಗೈಯದೆ ತಲೆತಲಾಂತರದಿಂದ ಪಾರಂಪರಿಕವಾಗಿ ಬಂದಿರುವಂತಹ ಪಾಕಕಲೆ ಎಂದರೂ ತಪ್ಪಾಗಲಾರದು. ಹಿಂದೆ ಜಾತ್ರೆಯಲ್ಲಿ ಸಿಗುವ ತಿಂಡಿಗಳಿಗೆ ಹೋಲಿಸಿದರೆ ಸ್ವಲ್ಪ ಭಿನ್ನತೆ ಹೊಂದಿವೆ, ವಿನಹ ನಾಶವಾಗುವಂತಹ ಸ್ಥಿತಿಯಲ್ಲಿಲ್ಲ. ಏಕೆಂದರೆ ಇದು ಹಿಂದಿನಿಂದ ರೂಢಿಗತವಾಗಿ ಬಂದಿರುವಂತಹದ್ದಾಗಿದೆ. ಜಾತ್ರೆಯಲ್ಲಿ ಈ ತಿಂಡಿತಿನಿಸುಗಳನ್ನು ಗ್ರಾಹಕರಿಗೆ ಪರಿಚಯಿಸಬೇಕೆಂಬ ಕಲೆ ಹಿಂದಿನಿಂದಲೂ ಕೂಡಿಬಂದಿತ್ತು ಎಂದರೂ ತಪ್ಪಾಗಲಾರದು.

ಫಳಾರದ ಅಂಗಡಿಗಳು ಜನರ-ಜನರ ನಡುವೆ ಮಧುರ ಬಾಂಧವ್ಯವನ್ನು ಏರ್ಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅದು ಹೇಗೆಂದರೆ ನಮ್ಮ ಪೂರ್ವಿಕರ ಆಚರಣೆಯಿಂದ ಬಂದಂಥ ಪದ್ಧತಿ ಇನ್ನೂ ಜೀವಂತವಿವೆ. ಒಂದು ಓಣಿ, ಕೇರಿಯಿಂದ ಜಾತ್ರೆಗೆ ಹೋದಂತವರು ಜಾತ್ರೆಯನ್ನು ಮುಗಿಸಿಕೊಂಡು ಮರಳಿ ಬಂದಾಗ ತಮ್ಮ ಓಣಿಯಲ್ಲಿ ಅಥವಾ ಕೇರಿಯಲ್ಲಿ ಯಾರು ಜಾತ್ರೆಗೆ ಹೋಗಿರುವುದಿಲ್ಲವೋ ಅಥವಾ ಹೋಗಿರುತ್ತಾರೋ ಅದನ್ನ ಯಾವುದನ್ನೂ ಪರಿಗಣಿಸದೇ ತಾವು ಜಾತ್ರೆಯಿಂದ ತಂದ ಪ್ರಸಾದ, ಫಳಾರ ಕೈಕಟ್ಟಿನ ದಾರಗಳು ಹಾಗೂ ಕೊರಳಲ್ಲಿ ಹಾಕಿಕೊಳ್ಳುವಂತ ಚಿಕ್ಕ ದೇವರುಗಳನ್ನು ಸೇರಿಸಿ ಚಿಕ್ಕದಾದಂತ ಪಾತ್ರೆಯಲ್ಲಿ ಹಾಕಿ ತಮಗೆ ಸಾಧ್ಯವಾದಷ್ಟು ಮನೆಗಳಿಗೆ ದಯಪಾಲಿಸುತ್ತಾರೆ. ಇದರಿಂದ ಈ ಪ್ರಸಾದವನ್ನು ನೀಡಿದವರಿಗೂ ದೇವರು ಒಳ್ಳೆಯದನ್ನು ಮಾಡುತ್ತಾನೆ ಎಂಬುವ ನಂಬಿಕೆಯಿದೆ. ಪ್ರಸಾದವನ್ನು ತೆಗೆದುಕೊಂಡವರು ವಿನಮ್ರತೆಯಿಂದ ಸ್ವೀಕರಿಸಿ ತಮ್ಮ ಮನೆಯಲ್ಲಿ ಇದ್ದವರೆಲ್ಲ ಒಂದಿಷ್ಟನ್ನು ಸ್ವೀಕರಿಸಿ ಆದಾರವನ್ನು ಹಣೆಗೆ ಹಚ್ಚಿಕೊಂಡು ಪುನೀತರಾಗುತ್ತಾರೆ. ತದನಂತರ ಪ್ರಸಾದವನ್ನು ನೀಡಿದವರ ಮನೆಗೆ ಅವರ ಪಾತ್ರೆಯನ್ನು ಖಾಲಿಯಾಗಿ ಕೊಡಬಾರದೆಂದು ತಮ್ಮ ಮನೆಯಲ್ಲಿದ್ದ ದವಸಧಾನ್ಯಗಳಾದ ಅಕ್ಕಿ, ಗೋಧಿ, ಜೋಳ, ಇತ್ಯಾದಿಗಳನ್ನು ತಲುಪಿಸುತ್ತಾರೆ. ಇದರಿಂದ ಒಬ್ಬರಿಗೊಬ್ಬರ ಬಾಂಧವ್ಯ ಗಟ್ಟಿಯಾಗಿ ಬೆಸೆಯುವಂತಾಗುತ್ತದೆ.

೫.೩.೪. ದಿನಸಿ ಅಂಗಡಿಗಳು : (Grocery Stores)

ಚಂದಾಲಿಂಗೇಶ್ವರನ ಜಾತ್ರೆಯ ನಿಮಿತ್ಯ ಈ ದಿನಸಿ ಅಂಗಡಿಗಳು ಬಯಲು ಪ್ರದೇಶದಲ್ಲಿ ಎಲ್ಲೆಂದರಲ್ಲಿ ಲಗ್ಗೆ ಹಾಕಿರುತ್ತವೆ. ಈ ಅಂಗಡಿಗಳು ಏಕವ್ಯಕ್ತಿಯ ವ್ಯಾಪಾರಸ್ಥರಿಂದ ಕೂಡಿ ಸುಮಾರು ಐದಾರು ಜನ ವ್ಯಾಪಾರಸ್ಥರಿಂದ ಕೂಡಿದ ಅಂಗಡಿಗಳು ಅಲ್ಲಿಗೆ ಬಂದಿರುತ್ತವೆ. ಈ ಅಂಗಡಿಗಳು ಜಾತ್ರೆಯ ದಿನಗಳನ್ನು ಗುರುತು ಮಾಡಿಕೊಂಡು ಹನುಮಸಾಗರ, ಜೀಳಗಿ, ಕಬ್ಬರಗಿ,

ಗುಡೂರು, ಮಸ್ಕೇರಾಳ ಮುಂತಾದ ಊರುಗಳಿಂದ ವ್ಯಾಪಾರಸ್ಥರುಗಳು ಅಂಗಡಿಯನ್ನು ಹಾಕುತ್ತಾರೆ. ಇವರಿಗೆ ನಿಗದಿತವಾದ ಸ್ಥಳಗಳು ಇರುವುದಿಲ್ಲ. ಎಲ್ಲೆಂದರಲ್ಲಿ ಅಂಗಡಿಗಳು ಕಂಡುಬರುತ್ತವೆ. ಮುಖ್ಯದ್ವಾರದ ಎಡ ಭಾಗದಲ್ಲಿ ಕೆಲವೊಂದಿಷ್ಟು ಅಂಗಡಿಗಳಿದ್ದರೆ ಇನ್ನೊಂದಿಷ್ಟು ತಳ್ಳುವ ಗಾಡಿಯಲ್ಲಿ ಮುಖ್ಯದ್ವಾರದ ಎಡ ಭಾಗದ ಪ್ರದೇಶದಲ್ಲಿ ಕಂಡುಬಂದವು. ಇದಲ್ಲದೆ ಕೆಲವೊಂದು ಸಂಚಾರಿ ವಾಹನ ದಿನಸಿ ಅಂಗಡಿಗಳು ಬಂದಿರುವುದು ವಿಶೇಷತೆಯಿಂದ ಕೂಡಿತ್ತು. ಚಿಕ್ಕ-ಚಿಕ್ಕ ಬಿಡಿ ಅಂಗಡಿಗಳವರು ಬೇವಿನ ಮರದ ಕೆಳಗೆ ಒಲೆಯನ್ನು ಹೂಡಿಕೊಂಡಿರುತ್ತಾರೆ. ಹೀಗೆ ತಮಗೆ ವ್ಯಾಪಾರಕ್ಕೆ ಅನುಕೂಲವಾದಂತ ಸ್ಥಳದಲ್ಲಿ ಚದುರಿ ಹೋದ ರೀತಿಯಲ್ಲಿ ಅಂಗಡಿಗಳನ್ನು ರಚಿಸಿಕೊಂಡಿದ್ದರು.

ದಿನಸಿ ಅಂಗಡಿಗಳ ವ್ಯವಸ್ಥೆ ನೋಡಿದಾಗ ಕೆಲವು ಆಡಂಬರ ವ್ಯವಸ್ಥೆಯಿಂದ ಕೂಡಿದ ಹಾಗೂ ಬಟ್ಟಬಯಲು ಸ್ಥಿತಿಯಲ್ಲಿ ಪ್ರಾರಂಭವಿರುವ ಅಂಗಡಿಗಳು ಗೋಚರಿಸಿದವು. ಆಡಂಬರದ ಸ್ಥಿತಿಯ ಆ ದಿನಸಿ ಅಂಗಡಿಗಳ ವ್ಯವಸ್ಥೆಯನ್ನು ಮೆಲುಕು ಹಾಕಿದಾಗ ಇವು ಎಲ್ಲಾ ಅಂಗಡಿಗಳಿಗಿಂತ ದೊಡ್ಡದಾಗಿದ್ದವು. ಕೆಲವೊಂದು ಶಾಮಿಯಾನ ಸೆಟ್ಟನ್ನು ಹಾಕಿಕೊಂಡಿದ್ದರು. ಇನ್ನುಳಿದ ಕೆಲವು ಅಂಗಡಿಯ ಸುತ್ತಲೂ ಕೆಲವು ತಗಡುಗಳಿಂದ ಹೊದಿಸಲಾಗಿತ್ತು. ಮೇಲುಹೊದಿಕೆಗೆ ಪ್ಲಾಸ್ಟಿಕ್ ತಾಡಪತ್ರಿಯನ್ನು ಹೊದಿಸಲಾಗಿತ್ತು. ಇನ್ನೂ ಕೆಲವೊಂದು ಅಂಗಡಿಗಳಿಗೆ ಸುತ್ತಲೂ ಬಿದಿರಿನಿಂದ ತಯಾರಿಸಿದ ತಟ್ಟೆಗಳನ್ನು ಜೋಡಿಸಿ ಕಟ್ಟಲಾಗಿತ್ತು. ಇದಲ್ಲದೆ ಅವುಗಳ ಮೇಲ್ಭಾಗಕ್ಕೆ ಅಂತಹ ಬಿದರಿನ ತಟ್ಟೆಗಳನ್ನೆ ಬಳಸಿಕೊಂಡಿದ್ದರು. ಅಂಗಡಿಗೆ ಬಂದಂತಹ ಗಿರಾಕಿಗಳಿಗೆ ಕುಳಿತುಕೊಳ್ಳಲು ಆಸನಗಳನ್ನು ಪ್ಲಾಸ್ಟಿಕ್, ಕಬ್ಬಿಣದ ಖುರ್ಚಿ, ಟೇಬಲ್‌ನ ವ್ಯವಸ್ಥೆ ಮಾಡುತ್ತಿದ್ದರು. ಇದಲ್ಲದೆ ಕಬ್ಬಿಣದಿಂದ ತಯಾರಿಸಿದ ಬೆಂಚುಗಳನ್ನು ಬಳಕೆ ಮಾಡುತ್ತಿದ್ದರು. ಬಂದಂತಹ ಗಿರಾಕಿಗಳಿಗೆ ಬೇರೆ ಬೇರೆ ಲೋಟಗಳಲ್ಲಿ ಪ್ಲೇಟುಗಳಲ್ಲಿ ಕುಡಿಯಲು ನೀರು ತಿನ್ನಲು ಉಪಹಾರ ವ್ಯವಸ್ಥೆ ಮಾಡಿರುವುದು ಕಂಡುಬಂದಿದೆ. ಇಂತಹ ಆಡಂಬರದ ದಿನಸಿ ಅಂಗಡಿಗಳಲ್ಲಿ ತಿಂಡಿ, ತಿನಿಸುಗಳನ್ನು ನೋಡಿದಾಗ ಮಿರ್ಚಿ, ಮಂಡಕ್ಕಿ, ಪುಡಿಬಜೆ, ಈರುಳ್ಳಿ ಬಜೆ, ದೋಸೆ, ಮಂಡಕ್ಕಿ ವಗ್ಗರಣೆ, (ಮೊದಲೇ ಕಾಯಿಸಿದ ಎಸರಿನಲ್ಲಿ ನಂತರ ಟೊಮೋಟ, ಈರುಳ್ಳಿ, ಮಂಡಳನ್ನು ಸೇರಿ ಕಲಬೇರಿಕೆ ಮಾಡಿಕೊಡುವಂತದ್ದು) ಚಹಾ-ಕಾಫಿ, ಹಾಲು, ಇಡ್ಲಿ, ಉಪ್ಪಿಟ್ಟು, ಅವಲಕ್ಕಿ ಮುಂತಾದ ಇಂತಹ ಉಪಹಾರ ಪದಾರ್ಥಗಳನ್ನು ತಯಾರಿಸುತ್ತಿದ್ದರು.

ಸಾಮಾನ್ಯ ದಿನಸಿ ಅಂಗಡಿಗಳ ಸ್ಥಿತಿಯನ್ನು ನೋಡಿದಾಗ ನನಗೆ ಅಲ್ಲಿ ಗೋಚರಿಸಿದಂತೆ ಹೇಳುವುದಾದರೆ, ಮಧ್ಯಮ ವ್ಯವಸ್ಥೆಯಿಂದ ಕೂಡಿದ ಅಂಗಡಿಗಳು. ಇವುಗಳ ರಚನಾ ಸ್ಥಿತಿಗಳು ಹೇಗಿದ್ದವೆಂದರೆ, ಕೆಲವು ಅಂಗಡಿಗಳಿಗೆ ಮೇಲುಹೊದಿಕೆ ಇದ್ದರೆ ಇನ್ನೂ ಕೆಲವು ಅಂಗಡಿಗಳಿಗೆ ಮೇಲುಹೊದಿಕೆ ಇರಲಿಲ್ಲ. ಹಾಗೂ ಇನ್ನಿತರ ಅಂಗಡಿಗಳಿಗೆ ಸುತ್ತಲೂ ಹೊದಿಕೆ ಇದ್ದರೆ, ಇನ್ನುಳಿದ ಅಂಗಡಿಗಳ ಸುತ್ತಲೂ ಯಾವ ಹೊದಿಕೆಯೂ ಇರಲಿಲ್ಲ. ಇನ್ನೊಂದು ಇಷ್ಟು

ಅಂಗಡಿಗಳಿಗೆ ಯಾವುದೇ ರಕ್ಷಣೆ ಇಲ್ಲದೆ ಬಟ್ಟಾಬಯಲಾಗಿ ಗಿಡಬುಡದಲ್ಲಿ ತೆರೆದ ಅಂಗಡಿಗಳು ಕಂಡುಬಂದವು. ಸಾಮಾನ್ಯವಾದ ದಿನಸಿ ಅಂಗಡಿಗಳು ಹಲವಾರು ಸಮಸ್ಯೆಗಳಿಂದ ಕೂಡಿಕೊಂಡಿರುತ್ತವೆ. ಗಿರಾಕಿಗಳು ಅಂಗಡಿಗೆ ಹೋದ ಸಮಯದಲ್ಲಿ ಸರಿಯಾಗಿ ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಇಲ್ಲದ್ದು ಕಾಣಬರುತ್ತದೆ. ಇಲ್ಲಿಗೆ ಬಂದಂತಹ ಗಿರಾಕಿಗಳು ಕುಳಿತುಕೊಳ್ಳಲು ಎರಡು-ಮೂರು ಅಡಿ ಎತ್ತರಕ್ಕೆ ಉದ್ದನೆಯ ಮರದ ಹಲಗೆಯನ್ನೋ ಅಥವಾ ತುಂಡುಗಳನ್ನು ಹಾಕಲಾಗಿರುತ್ತದೆ. ಗಿರಾಕಿಗಳು ತಾವು ತಿನ್ನುವ ತಿಂಡಿಯನ್ನು ಇಡಲು ಯಾವುದೇ ವ್ಯವಸ್ಥೆ ಇಲ್ಲದಿರುವುದರಿಂದ ತಮ್ಮ ಕೈಯಲ್ಲಿ ಹಿಡಿದುಕೊಂಡು ತಿಂದುಬರುವಂತ ವ್ಯವಸ್ಥೆ ಕಂಡುಬರುತ್ತದೆ. ಕುಡಿಯಲು ನೀರಿನ ವ್ಯವಸ್ಥೆಗೆ ಹಲವಾರು ಜಗ್ಗು ಅಥವಾ ಮಗ್ಗ್, ಪ್ಲಾಸ್ಟಿಕ್ ಚರಿಗೆ ವ್ಯವಸ್ಥೆಯನ್ನು ಕಾಣುತ್ತೇವೆ. ಇಂತಹ ಅಂಗಡಿಗಳಲ್ಲಿ ಗಿರಾಕಿಗಳಿಗೆ ಸಿಗುವಂತ ತಿಂಡಿಗಳು ಒಂದೂ ಎರಡೂ ಅಷ್ಟೇ. ತಿಂಡಿಗಳನ್ನು ರದ್ದಿ ಹಾಳೆಯಲ್ಲಿ ಹಾಕಿ ಕೊಡುವಂತ ವ್ಯವಸ್ಥೆ ಕಂಡುಬರುತ್ತದೆ. ಇಂತಹ ಅಂಗಡಿಗಳಲ್ಲಿ ತಿಂಡಿಗಳನ್ನು ವಿತರಿಸಲು ಎರಡರಿಂದ ಮೂವರು ಮಾಣಿಗಳು ಇರುವರು. ಇವು ಕಡಿಮೆ ವೆಚ್ಚದಲ್ಲಿ ತಯಾರಾಗಿ ಹೆಚ್ಚು ವ್ಯಾಪಾರವನ್ನು ಮಾಡುವಂತ ಸಂದರ್ಭಗಳು ಕೂಡಿಯೂ ಬರಬಹುದು.

ಬಟ್ಟ ಬಯಲಿನಲ್ಲಿರುವ ಅಂಗಡಿಗಳು ಯಾವುದೇ ವ್ಯವಸ್ಥೆಯನ್ನು ಮಾಡಿಕೊಂಡಿರುವುದಿಲ್ಲ. ಇವರು ಸರಿಯಾದ ಅಂಗಡಿಯನ್ನೇ ತಯಾರಿಸಿಕೊಂಡಿರುವುದಿಲ್ಲ. ಇಂತಹವರಿಗೆ ಬಯಲು ವ್ಯಾಪಾರಿಗಳನ್ನೆಬಹುದು. ಇವುಗಳನ್ನು ಅತಿ ಕಡಿಮೆ ವೆಚ್ಚದಲ್ಲಿ ನಿರ್ಮಾಣ ಮಾಡಿಕೊಂಡಿರುವರು. ಆ ಪ್ರದೇಶದಲ್ಲಿರುವ ಯಾವುದಾದರೂ ಒಂದು ಗಿಡದಡಿಯಲ್ಲಿ ಒಲೆಯೂಡಿ ಪದಾರ್ಥಗಳನ್ನು ಮಾಡಲು ತಯಾರಾಗಿರುವರು. ಮಾಲೀಕರು ತಾವೇ ಗಿರಾಕಿಗಳಿಗೆ ತಿಂಡಿಯನ್ನು ವಿತರಿಸುವರು. ಇಂತಹ ವ್ಯಾಪಾರಸ್ಥರಲ್ಲಿ ಯಾವುದಾದರೂ ಒಂದು ತಿಂಡಿತಿನಿಸು ಲಭ್ಯವಿರುತ್ತದೆ. ಉದಾಹರಣೆಗೆ ಮಿರ್ಚಿಬಜಿ, ಪುಡಿ ಬಜೆ, ಜಿಲಾಬಿ, ಮಂಡಕ್ಕಿ ಚಹಾ ದೊರೆಯುತ್ತವೆ. ಕೆಲವು ಗಿರಾಕಿಗಳು ಅಲ್ಲಿಯೇ ತಿಂಡಿ ತಿನ್ನಲು ಬರುತ್ತಾರೆ. ಅಥವಾ ಜಾತ್ರೆಗೆ ಬಂದ ಇನ್ನೂ ಕೆಲವು ಯಾತ್ರಿಕರು ಅಲ್ಲಿರುವ ತಿಂಡಿಯನ್ನು ತೆಗೆದುಕೊಂಡು ತಮ್ಮ ಸ್ಥಳಗಳಿಗೆ ಕೊಂಡೊಯ್ಯಲು ಬರುತ್ತಾರೆ. ಈ ರೀತಿಯ ವ್ಯಾಪಾರಸ್ಥರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಕಂಡುಬರುತ್ತಾರೆ. ಅದರಲ್ಲಿಯೂ ಮಧ್ಯವಯಸ್ಕ ಮಹಿಳೆಯರ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ. ಪುರುಷ ವ್ಯಾಪಾರಸ್ಥರ ಸಂಖ್ಯೆ ಅಪರೂಪ ಎನಿಸುತ್ತದೆ.

ಸಂಚಾರಿ ವ್ಯಾಪಾರಸ್ಥರು ಈ ಚಂದಾಲಿಂಗೇಶ್ವರ ಜಾತ್ರೆಯಲ್ಲಿ ಕಂಡುಬರುತ್ತಾರೆ. ಅಂತಹವರಲ್ಲಿ ಎಗ್ಗ್ ರೈಸ್, ಪಲಾವ್, ಇಡ್ಲಿ-ದೋಸೆ, ಬಿಸ್ಕೆಟ್, ದಾಣಿ, ಸ್ವೀಟ್ ಮಾರ್ಟ್‌ಗಳು ಇತ್ಯಾದಿಗಳು. ಇವು ಹೆಚ್ಚಾಗಿ ಸಾಯಂಕಾಲದ ವೇಳೆಯಲ್ಲಿ ಕಂಡುಬರುತ್ತವೆ. ಎಗ್‌ರೈಸ್ ಮಾಡುವಂತ ವ್ಯಾಪಾರಿಯು ನಾಲ್ಕು ಚಕ್ರದ ತಳ್ಳುವ ಗಾಡಿಯಲ್ಲಿ ತನ್ನ ಎಲ್ಲಾ ಪದಾರ್ಥಗಳನ್ನು ತಂದಿರುತ್ತಾನೆ.

ಇಂತಹ ವ್ಯಾಪಾರಸ್ಥರು ಹೆಚ್ಚು ಜನನಿಬಿಡ ಪ್ರದೇಶದಲ್ಲಿ ಅಂಗಡಿಯನ್ನು ಹಚ್ಚುತ್ತಾರೆ. ಅಲ್ಲಿಯ ಗಿರಾಕಿಗಳ ಬೇಡಿಕೆಗೆ ತಕ್ಕಂತೆ ತಿಂಡಿಯನ್ನು ಮಾಡಿ ಕೊಡುತ್ತಾರೆ. ಇವರೂ ಸಹ ಒಬ್ಬರು ಇಲ್ಲ ಎರಡು ಜನಗಳು ಸೇರಿ ವ್ಯಾಪಾರವನ್ನು ಮಾಡುತ್ತಾರೆ. ಈ ಸಂಚಾರಿ ವ್ಯಾಪಾರಿಗಳಿಗೆ ಇದೇ ಸ್ಥಳಂತನೂ ಇಲ್ಲ. ಏಕೆಂದರೆ ಅವರಿಗೆ ಯಾವ ಭಾಗದಲ್ಲಿ ವ್ಯವಹಾರ ಚೆನ್ನಾಗಿ ಆಗಬಹುದು ಎಂಬ ನಂಬಿಕೆ ಇದೆಯೋ ಅಲ್ಲಿ ವ್ಯಾಪಾರ ಮಾಡಲು ಪ್ರಾರಂಭಿಸುತ್ತಾರೆ. ಪದಾರ್ಥವನ್ನು ತಿನ್ನಲು ಬಂದಂತ ಗಿರಾಕಿಗಳಿಗೆ ಹೆಚ್ಚಾಗಿ ಪ್ಲಾಸ್ಟಿಕ್ ಪ್ಲೇಟ್‌ನಲ್ಲಿ ಪ್ಲಾಸ್ಟಿಕ್ ಹಾಳೆಯನ್ನು ಹೊದಿಸಿ ತಿಂಡಿಯನ್ನ ಹಾಕಿ ಕೊಡುವ ಪರಿಪಾಠ ಹೊಂದಿದ್ದಾರೆ. ಇದೇ ತರಹ ನಾಲ್ಕು ಚಕ್ರದ ತಳ್ಳುವ ಗಾಡಿಯಲ್ಲಿ ಜನದಟ್ಟಣೆಯಲ್ಲಿಯೇ ತಳ್ಳುತ್ತಾ ಬಿಸ್ಕೆಟ್, ದಾಣಿ, ಟೋಸ್ಟ್‌ಗಳನ್ನು ಮಾರುವವರು ಜಾತ್ರೆಯಲ್ಲಿ ಸಿಗುತ್ತಾರೆ. ಇವರು ತಮ್ಮ ಐದಾರು ಅಡಿ ಉದ್ದ ನಾಲ್ಕು ಅಡಿ ಅಗಲವಾದ ತಳ್ಳುವ ಗಾಡಿಯಲ್ಲಿ ಬಿಸ್ಕೆಟ್, ಕಾರ ಟೋಸ್ಟ್, ಇತ್ಯಾದಿ ಪದಾರ್ಥಗಳ ಗುಂಪನ್ನೇ ಹಾಕಿಕೊಂಡು ಜನದಟ್ಟಣೆಯಲ್ಲಿ ಗಾಡಿಯನ್ನು ತಳ್ಳುತ್ತಾ ಬಿಸ್ಕೇಟ್... ಬಿಸ್ಕೇಟ್... ಹತ್ತು ರೂಪಾಯಿಗೆ ಒಂದು ಬಿಸ್ಕೆಟ್‌ಪ್ಯಾಕೆಟ್ ಬರ್‍ರಿ... ಬರ್‍ರಿ... ಎಂದು ಕೂಗುತ್ತಾ ಗಿರಾಕಿಗಳ ಗಮನವನ್ನು ಸೆಳೆಯುತ್ತಾರೆ.

ಇತ್ತೀಚಿಗೆ ವಿಶೇಷವೆನ್ನುವಂತೆ ಸಂಚಾರಿ ದಿನಸಿ ಅಂಗಡಿಗಳು ಕಂಡುಬರುತ್ತವೆ. ಸಂಚಾರಿ ವಾಹನಗಳಲ್ಲಿ ಒಂದು ಸುಧಾರಿಸಿದ ಹೋಟೆಲ್‌ನಲ್ಲಿ ಏನು ತಿಂಡಿಗಳು ಲಭ್ಯವೋ ಅಂತಹವುಗಳನ್ನು ಇವರು ಮಾರಾಟ ಮಾಡುತ್ತಾರೆ. ಏಕಕಾಲಕ್ಕೆ ನಾಲ್ಕರಿಂದ ಐದು ವಿಧದ ಉಪಾಹಾರ ಸಿಗುತ್ತವೆ. ಈ ಸಂಚಾರಿ ವಾಹನದ ಅಂಗಡಿಗಳಲ್ಲಿ ಗಿರಾಕಿಗಳಿಗೆ ಕೈತೊಳೆದುಕೊಳ್ಳಲು ನೀರು ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿರುತ್ತಾರೆ. ವಾಹನದ ಮೇಲ್ಭಾವಣಿಯು ಸಂಪೂರ್ಣವಾಗಿ ನೀರನ್ನು ತುಂಬಿಸುವ ಚಪ್ಪಟೆಯಾದ ಚೌಕಾಕಾರದ ಟ್ಯಾಂಕ್‌ನ್ನು ಅಳವಡಿಸಿರುತ್ತಾರೆ. ವಾಹನದ ಮುಂಭಾಗದ ಎಡ-ಬಲ ಭಾಗದಲ್ಲಿ ಕೈತೊಳೆಯಲು ಹಾಗೂ ಕುಡಿಯಲು ನೀರಿನ ನಲ್ಲಿಯನ್ನು ಅಳವಡಿಸಿರುತ್ತಾರೆ. ವಾಹನದ ಹಿಂಭಾಗ ಹಾಗೂ ಎಡ-ಬಲ ಭಾಗಗಳು ಸಂಪೂರ್ಣವಾಗಿ ತೆರೆಯುವ ಹಾಗೂ ಮುಚ್ಚುವಂತೆ ವ್ಯವಸ್ಥೆ ಮಾಡಿರುತ್ತಾರೆ. ಉಪಾಹಾರ ಸೇವಿಸಲು ಬಂದಂತಹ ಗಿರಾಕಿಗಳಿಗೆ ಎಲ್ಲಾ ಬಿಸಿಯಾದಂತ ಆಹಾರವನ್ನು ತಯಾರಿಸಿ ಕೊಡುತ್ತಾರೆ. ಕುಳಿತುಕೊಳ್ಳುವುದಕ್ಕೆ ಪ್ಲಾಸ್ಟಿಕ್ ಸ್ಟೂಲ್‌ಗಳ ವ್ಯವಸ್ಥೆಯನ್ನು ಕಲ್ಪಿಸುವರು. ಇಂತಹ ಅಂಗಡಿಗಳನ್ನು ನಿಭಾಯಿಸಲು ಸುಮಾರು ಐದರಿಂದ ಆರು ಜನ ಮಾಣಿಗಳು ಬೇಕಾಗುತ್ತದೆ.

ಒಂದು ಜಾತ್ರೆಯು ಯಶಸ್ವಿಯಾಗಬೇಕಾದರೆ ಅದಕ್ಕೆ ಪೂರಕವಾಗಿ ದಿನಸಿ ಅಂಗಡಿಗಳ ಪಾತ್ರವೂ ಮುಖ್ಯವಾಗಿರುತ್ತದೆ. ಜಾತ್ರೆಗೆ ಬಂದಿರುವ ಬಂಧು-ಬಳಗವನ್ನು ಕೂಡಿಸಿ ಸಂತೋಷದಿಂದ ಮಾತುಗಳನ್ನು ಬೆಳೆಸುವಂಥ ಕೇಂದ್ರಗಳಾಗಿವೆ. ಆಕಸ್ಮಿಕವಾಗಿ ನಮ್ಮ ಬಂಧು-ಬಳಗದವರು, ಸ್ನೇಹಿತರು, ಪರಿಚಿತರು, ನಮ್ಮೂರಿಗೆ ಬಂದರೆ ಅವರಿಗೆ ಭೇಟಿಯಾಗಿ ಅತಿಥಿ ಸತ್ಕಾರವೆಂದು

ನಮ್ಮ ಮನೆಗೆ ಕರೆದೊಯ್ದುದು ಉಪಚಾರ ಮಾಡುವೆವು. ಆದರೆ ಇಂತಹ ಜಾತ್ರೆಯಲ್ಲಿ, ಉತ್ಸವದಲ್ಲಿ ಭೇಟಿಯಾದರೆ ಮಾತನಾಡುತ್ತಾ ಇಂತ ದಿನಸಿ ಅಂಗಡಿಗೆ ಕರೆದುಕೊಂಡು ಹೋಗಿ ಉಪಚರಿಸಲಾಗುತ್ತದೆ. ಈ ತರಹದ ಒಂದು ಸಂಬಂಧಗಳಿಗೆ ಚಂದಾಲಿಂಗೇಶ್ವರ ಜಾತ್ರೆಯಲ್ಲಿ ಬರುವಂತಹ ದಿನಸಿ ಅಂಗಡಿಗಳು ಸಾಕ್ಷಿಯಾಗಿವೆ. ದಿನಸಿ ಅಂಗಡಿಗಳನ್ನು ಯಾರು ಹಾಕಬೇಕು ಎಂದು ತೀರ್ಮಾನಿಸಿರುತ್ತಾರೆ. ಎಂದರೆ ವ್ಯವಹಾರದ ಬಗ್ಗೆ ಆಸಕ್ತಿ ಅಭಿರುಚಿ ಮತ್ತು ವ್ಯವಹಾರದ ಪೂರ್ವಜ್ಞಾನ ಹೊಂದಿರುವವರು ಅರ್ಹರಾಗಿರುತ್ತಾರೆ.

ಈ ವ್ಯಾಪಾರಸ್ಥರು ತಾವು ಮಾಡುವಂತಹ ತಿಂಡಿಯ ಬಗ್ಗೆ ತಿಳುವಳಿಕೆ ಇರುವುದು ಸಹಜವಾಗಿದೆ. ಹೀಗೆ ಕೆಲವೊಬ್ಬರು ಆರ್ಥಿಕವಾಗಿ ಚೆನ್ನಾಗಿದ್ದವರು ಇಂತಹ ದಿನಸಿ ಅಂಗಡಿ ಹಾಕಬೇಕೆಂಬ ಹಂಬಲವಿರುವಂತವರಿಗೆ ತಾವು ಮಾಡುವ ತಿಂಡಿಯ ಬಗ್ಗೆ ಪೂರ್ವ ತಿಳುವಳಿಕೆ ಇಲ್ಲದೆ ಇರುವುದರಿಂದ ತರತರಹದ ತಿಂಡಿಗಳನ್ನು ತಯಾರಿಸುವವರನ್ನು ದಿನಕ್ಕೆ ಇಂತಿಷ್ಟು ಕೂಲಿ ಅಥವಾ ಇಂತಿಷ್ಟು ಭಾಗವೆಂದು ಮಾತಾಡಿಕೊಂಡು ಜಾತ್ರೆಗಳಲ್ಲಿ ದಿನಸಿ ಅಂಗಡಿಯನ್ನು ಹಾಕುವ ವ್ಯಾಪಾರಸ್ಥರು ಇದ್ದಾರೆ. ಇಂಥಹವರು ದೊಡ್ಡ ಪ್ರಮಾಣದಲ್ಲಿ ಅಂಗಡಿಯನ್ನು ತೆರೆದಿರುತ್ತಾರೆ. ಇನ್ನೂ ಕೆಲವೊಬ್ಬರಿಗೆ ತಿಂಡಿಗಳನ್ನು ಮಾಡುವ ಪೂರ್ವಜ್ಞಾನ ಇದೆ. ಆದರೆ ಆರ್ಥಿಕವಾಗಿ ಸಬಲರಾಗಿ ಇರುವುದಿಲ್ಲ. ಇಂತಹವರು ಜಾತ್ರೆಯ ನಿಮಿತ್ತ ಸಾಲ ಶೂಲ ಮಾಡಿ ಅಂಗಡಿ ತೆರೆಯಬೇಕೆಂದು ಮಧ್ಯಮ ಪ್ರಮಾಣದಲ್ಲಿ ಅಂಗಡಿಯನ್ನು ತೆರೆಯುತ್ತಾರೆ. ಕೆಲವರು ಕಾಲಾಂತರದಿಂದ ಅಂಗಡಿಯನ್ನು ಹಾಕಿಕೊಂಡು ಬಂದಿರುತ್ತಾರೆ, ಬಿಡಬಾರದು ಎಂಬ ಉದ್ದೇಶದಿಂದ ಜಾತ್ರೆಯಲ್ಲಿ ಅಂಗಡಿಯನ್ನು ತೆರೆಯುತ್ತಾರೆ. ಇವು ಮಂದಗತಿಯಿಂದ ಸಾಗುತ್ತಿರುತ್ತವೆ. ಮತ್ತೆ ಕೆಲವರು ಖಾಲಿ ಇರುವುದೇನೆಂದು ಅಂಗಡಿಯನ್ನು ತೆರೆದರಾಯಿತು ಎಂದು ಬಯಲಿನಲ್ಲಿ ಯಾವುದೋ ಒಂದು ಮರದ ಕೆಳಗೆ ಅಂಗಡಿಯನ್ನು ತೆರೆದಿರುತ್ತಾರೆ. ಹೀಗೆ ಜಾತ್ರೆಯಲ್ಲಿ ಹಲವಾರು ಉದ್ದೇಶಗಳನ್ನಿಟ್ಟುಕೊಂಡು ಅಂಗಡಿಯನ್ನು ತೆರೆದಿರುವವರನ್ನು ನೋಡಬಹುದು.

ದಿನಸಿ ಅಂಗಡಿಗಳನ್ನು ಜಾತ್ರೆಯಲ್ಲಿ ಆದಷ್ಟು ಅಕ್ಕ-ಪಕ್ಕದ ಹಳ್ಳಿ ಪಟ್ಟಣ ಪ್ರದೇಶಗಳಿಂದ ಬಂದು ಹಾಕುತ್ತಾರೆ. ಇವರಿಗೆ ಸರಕು ಸಾಮಾನುಗಳನ್ನು ಸಾಗಿಸುವುದಕ್ಕೆ ಸಮೀಪವಾದ್ದರಿಂದ ಸುತ್ತ-ಮುತ್ತಲಿನ ಪ್ರದೇಶದವರು ಅಂಗಡಿ ಹಾಕುವುದು ಸರ್ವೇಸಾಮಾನ್ಯ. ಕೆಲವರು ತಳ್ಳುವಗಾಡಿಯಲ್ಲಿ ಕರಿದ ತಿಂಡಿ ತಿನಿಸುಗಳನ್ನು ಜನದಟ್ಟಣೆಯಲ್ಲಿ ಆ ಪದಾರ್ಥಗಳನ್ನು ತೆರೆದ ಸ್ಥಿತಿಯಲ್ಲಿ ತರುವುದರಿಂದ ಗಿರಾಕಿಗಳ ಆರೋಗ್ಯಕ್ಕೆ ಮಾರಕವಾಗಿ ಪರಿಣಮಿಸುತ್ತದೆ. ಇದರಿಂದ ಇಂತಹ ವ್ಯಾಪಾರಸ್ಥರು ಕೇವಲ ತಮ್ಮ ವ್ಯಾಪಾರವನ್ನು ನೋಡದೇ ಗ್ರಾಹಕರ ಆರೋಗ್ಯದ ಕಡೆ ಕಾಳಜಿ ವಹಿಸುವುದು ಮುಖ್ಯವಾಗಿರುತ್ತದೆ. ಆದ್ದರಿಂದ ಈ ವ್ಯಾಪಾರಸ್ಥರು ಆ ತಿಂಡಿ ಪದಾರ್ಥಗಳ ಮೇಲೆ ಆರೋಗ್ಯ ಸುರಕ್ಷತೆಯ ದೃಷ್ಟಿಯಿಂದ ರಕ್ಷಾ ಪರದೆಯನ್ನು ಹೊದಿಸಿಕೊಂಡು ವ್ಯವಹಾರ ಮಾಡಿದರೆ ಒಳಿತು ಎನಿಸುತ್ತದೆ. ಬಟ್ಟ ಬಯಲಿನಲ್ಲಿ ಇರುವಂತಹ ಅಂಗಡಿಗಳು ಅಷ್ಟೇ

ಮೇಲ್ನೋಟಕ್ಕೆ ಕಾಣುವಂತೆ ತಾವು ತಯಾರಿಸುವಂತಹ ತಿಂಡಿ ಪದಾರ್ಥಗಳಿಗೆ ಯಾವುದೇ ಸುರಕ್ಷತೆ ಇರುವುದಿಲ್ಲ. ಇಂತಹ ಅಂಗಡಿಗಳ ಸಂಖ್ಯೆ ಕಡಿಮೆಯಾಗಬೇಕು. ಇಂತಹವರು ಪರ್ಯಾಯ ವ್ಯವಹಾರದ ದಾರಿಯನ್ನು ಹಿಡಿಯಬೇಕು. ಇಲ್ಲವೇ ಸುಧಾರಿತವಾದ ಅಂಗಡಿಗಳನ್ನೇ ಹಾಕಲು ಪೂರ್ವತಯಾರಿ ಮಾಡಿಕೊಂಡಿರಬೇಕು.

ಆಡಂಬರ ವ್ಯವಸ್ಥೆಯ ದಿನಸಿ ಅಂಗಡಿಗಳನ್ನು ನೋಡಿದಾಗ ಇಂತಹ ಅಂಗಡಿಗಳನ್ನು ತೆರೆಯಬೇಕಾದರೆ ಮೊದಲಿಗೆ ಬಂಡವಾಳವನ್ನು ಹೆಚ್ಚಿನ ಪ್ರಮಾಣದಲ್ಲಿ ವಿನಿಯೋಗಿಸಿರುತ್ತಾರೆ. ಆದ್ದರಿಂದ ಮಾಲೀಕರು ತಾವು ಹೂಡಿದ ಬಂಡವಾಳದ ಲಾಭವನ್ನು ಹೊಂದಿಸಬೇಕಾದರೆ ವಿಸ್ತಾರವಾದ ಸ್ಥಳ ಬೇಕಾಗುತ್ತದೆ. ಹೆಚ್ಚಿನ ಪ್ರಮಾಣದ ಗಿರಾಕಿಗಳನ್ನು ಕೂಡಿಸಲು ಈ ವಿಸ್ತಾರವಾದ ಅಂಗಡಿಯ ಅವಶ್ಯಕತೆಯಿರುತ್ತದೆ. ಆಡಂಬರದ ಅಂಗಡಿಯನ್ನು ತೆರೆಯಲು ವ್ಯಾಪಾರಸ್ಥರಿಗೆ ಹೊಳೆದಿರುವುದೇನೆಂದರೆ ಅದು ಜಾತ್ರೆಯಾಗಿರುವುದರಿಂದ ವಿವಿಧ ವರ್ಗದ ಜನರು ಆರ್ಥಿಕವಾಗಿ ಸುಧಾರಿಸಿದ ಸ್ಥಿತಿವಂತರೂ ಬಂದಿರುತ್ತಾರೆ. ಇದರಿಂದ ಆರ್ಥಿಕವಾಗಿ ಮೇಲ್ವರ್ಗ, ಮಧ್ಯಮವರ್ಗ, ಹಾಗೂ ಕೆಳವರ್ಗದವರು ಬರುವುದರಿಂದ ವ್ಯಾಪಾರವು ಕುಲಾಯಿಸುವುದು ಎಂಬ ನಂಬಿಕೆಯನ್ನು ಹೊಂದಿರುತ್ತಾರೆ. ಇವರು ಸಹ ಎಲ್ಲ ರೀತಿ ಅಂಗಡಿಗಳ ದರವನ್ನು ನಿಗಧಿ ಮಾಡಿರುತ್ತಾರೆ. 'ಬಂದ್ರೆ ಲಾಭ ಹೋದ್ರೆ ನಷ್ಟ' ಎನ್ನುವ ಮಾತಿನಂತೆ ಬಂಡವಾಳವನ್ನು ವಿನಿಯೋಗಿಸುತ್ತಾರೆ. ಇಂತಹ ಸುಧಾರಿತ ಅಂಗಡಿಗಳು ಜನರ ಆರೋಗ್ಯದೃಷ್ಟಿಯಿಂದ ಯೋಗ್ಯವಾದವುಗಳೆಂದು ಪರಿಗಣಿಸಬಹುದು.

ಕಾಲ ಬದಲಾದಂತೆ ಅದಕ್ಕೆ ತಕ್ಕಂತೆ ವ್ಯವಸ್ಥೆಗಳು ಸುಧಾರಿಸುವುದು ಅವಶ್ಯಕವಾಗಿರುತ್ತದೆ. "ಕಸ ತಿನ್ನುವುದಕ್ಕಿಂತ ತುಸು ತಿನ್ನುವುದು ಲೇಸು" ಎನ್ನುವ ಗಾದೆಮಾತಿನಂತೆ ಸುರಕ್ಷಿತವಿಲ್ಲದ ದಿನಸಿ ಅಂಗಡಿಗಳಲ್ಲಿ ಕಡಿಮೆ ದರದಲ್ಲಿ ಹೆಚ್ಚು ಪದಾರ್ಥ ತಿನ್ನುವುದನ್ನು ನಿಲ್ಲಿಸಿ, ಅದೇ ದರದಲ್ಲಿ ಕಡಿಮೆ ಆಹಾರ ಪದಾರ್ಥ ಸುರಕ್ಷಿತವಾಗಿದ್ದರೆ, ಇಂತಹ ಆಡಂಬರದ ದಿನಸಿ ಅಂಗಡಿಗಳಲ್ಲಿ ಸೇವಿಸುವುದು ಯೋಗ್ಯ. ಆಡಂಬರದ ದಿನಸಿ ಅಂಗಡಿಗಳನ್ನು ಮಾಲೀಕರು ತಮ್ಮ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ತಯಾರಿಸಿ ಕೊಂಡಿರುವರು. ಜಾತ್ರೆಯ ಸಮಯದಲ್ಲಿ ಇಂತಹ ಅಂಗಡಿಗಳು ಸ್ಥಾಪನೆಯಾಗುವುದರಿಂದ ಜಾತ್ರೆಯಲ್ಲಿ ತಿರಿಗಿ ತಿರಿಗಿ ಸುಸ್ತಾದಂತೆ ಅವರು ನೆಮ್ಮದಿಯಿಂದ ಕುಳಿತು ಚಹಾ ಉಪಾಹಾರ ಸೇವಿಸಲು ಸಹಕಾರಿಯಾಗಿವೆ. ಇಲ್ಲಿ ಪ್ರತ್ಯೇಕವಾದ ನೀರು ಕುಡಿಯುವ ಲೋಟ ಹಾಗೂ ಶುದ್ಧ ಕುಡಿಯುವ ನೀರು ದೊರೆಯುವುದರಿಂದ ಗಿರಾಕಿಗಳಿಗೆ ಯಾವುದೇ ಸಾಂಕ್ರಾಮಿಕ ರೋಗಗಳು ಹರಡಲು ಸಾಧ್ಯವಿಲ್ಲ.

ಆಡಂಬರದ ದಿನಸಿ ಅಂಗಡಿಗಳಲ್ಲಿ ದೊರೆಯುವ ವಿವಿಧ ತರಹದ ಉಪಾಹಾರಗಳು ಜಾತ್ರೆಗೆ ಬಂದ ಹಲವಾರು ಆಸಕ್ತಿ, ಅಭಿರುಚಿವುಳ್ಳ ಭಕ್ತರಿಗೆ ಪೂರಕವಾಗಿರುತ್ತವೆ. ಕೆಲವೊಂದು ಗಿರಾಕಿಗಳು ಪೂರಿ ತಿಂದರೆ ಮಂಡಕ್ಕಿ ತಿನ್ನುವವರಿಗೆ ಮಂಡಕ್ಕಿ, ದೋಸೆ ತಿನ್ನುವವರಿಗೆ ದೋಸೆ

ಹೀಗೆ ಕೆಲವೊಂದು ಪದಾರ್ಥಗಳು ಸಿಗುವುದರಿಂದ ಈ ಅಂಗಡಿಗಳಿಗೆ ಬಂದ ಗಿರಾಕಿಗಳು ಸಂತುಷ್ಟರಾಗುತ್ತಾರೆ. ಮಾಲೀಕರಿಗೂ ವ್ಯಾಪಾರವಾಗುವುದರಿಂದ ಅವರು ಸಂತೋಷಪಡುತ್ತಾರೆ. ಇಂತಹ ದೊಡ್ಡ ಅಂಗಡಿಗಳಿಗೆ ಸುಧಾರಿತ ವ್ಯಕ್ತಿಗಳು ಬಂದರೆ ಸಾಮಾನ್ಯ ಅಂಗಡಿಯವರು ಇವುಗಳ ಮುಂದೆ ಪೈಪೋಟಿ ಕೊಡಲು ದೂರ ಉಳಿದಿರುತ್ತವೆ. ಸಾಮಾನ್ಯ ಸ್ಥಿತಿಯಲ್ಲಿರುವ ದಿನಸಿ ಅಂಗಡಿಗಳು ಜಾತ್ರೆಯಲ್ಲಿ ಗ್ರಾಮೀಣ ಜನರಿಂದ ಗಿಜುಗೂಡುತ್ತಿರುತ್ತವೆ. ಕಾರಣ ಇಂತಹ ಗ್ರಾಮೀಣ ಪ್ರದೇಶದ ಜಾತ್ರೆಗೆ ಬರುವಂತಹ ಭಕ್ತರು ಹೆಚ್ಚಿನ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶದವರು ಆಗಿರುತ್ತಾರೆ. ಇವರು ದೊಡ್ಡ ದೊಡ್ಡ ಅಂಗಡಿಗಳ ಕಡೆಗೆ ಗಮನ ಹರಿಸುವುದಿಲ್ಲ. ಏಕೆಂದರೆ ಅವರ ಮನೋಭಾವನೆಯಲ್ಲಿ ದೊಡ್ಡ ಅಂಗಡಿಗಳೆಂದರೆ ಅಲ್ಲಿಯ ಉಪಹಾರಗಳಿಗೆ ದರ ದುಬಾರಿ ಇರುವುದೆಂದು ಪೂರ್ವಾಗ್ರಹ ಪೀಡಿತರಾಗಿರುತ್ತಾರೆ. ಇದರಿಂದ ಇವರ ಮನಸ್ಸು ಸಹಜವಾಗಿ ಇಂತಹ ಸಾಮಾನ್ಯ ಅಂಗಡಿಗಳ ಕಡೆಗೆ ತಿರುಗಿಸುತ್ತದೆ. ಆದ್ದರಿಂದ ಈ ಅಂಗಡಿಗಳು ಜಾತ್ರೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವುದರಿಂದ ಗಿರಾಕಿಗಳು ಇಂತಹ ಅಂಗಡಿಗಳನ್ನೇ ಆಯ್ದುಕೊಳ್ಳುವರು.

ಈ ಅಂಗಡಿಗಳಲ್ಲಿ ನಿಯಮಗಳು ಸಡಿಲವಾಗಿರುವುದರಿಂದ ಜನರನ್ನು ಹೆಚ್ಚಿನ ಪ್ರಮಾಣದಲ್ಲಿ ಸೆಳೆದುಕೊಳ್ಳುತ್ತವೆ. ಉಪಹಾರಕ್ಕೆ ಬಂದಂತ ಗಿರಾಕಿಯಲ್ಲಿ ಒಂದು ರೂಪಾಯಿ ಅಥವಾ ಎರಡೂ ರೂಪಾಯಿ ಕೊರತೆ ಬಿದ್ದರೆ ಅದನ್ನು ಮಾಲೀಕರು ಹೇಗೋ ಸುಧಾರಿಸಿಕೊಂಡು ಹೋಗುತ್ತಾರೆ. ಈ ಅಂಗಡಿಗಳ ರಚನಾ ಸ್ಥಿತಿಯನ್ನು ನೋಡಿದರೆ ಕೇವಲ ಜಾತ್ರೆ, ಹಬ್ಬ, ಹರಿದಿನಗಳಲ್ಲಿ ಮಾತ್ರ ಹಾಕುವಂತ ಅಂಗಡಿಗಳಾಗಿ ಭಾಸವಾಗುತ್ತವೆ. ಈ ಸಾಮಾನ್ಯ ವ್ಯವಸ್ಥೆಯ ಅಂಗಡಿಗಳ ಬಳಕೆ ವಸ್ತುಗಳನ್ನು ನೋಡಿದಾಗ ನೂರಕ್ಕೆ ಎಂಬತ್ತರಷ್ಟು ಕಚ್ಚಾವಸ್ತುಗಳನ್ನು ತಾತ್ಕಾಲಿಕ ಸಿದ್ಧವಸ್ತುಗಳನ್ನಾಗಿ ಮಾಡಿಕೊಂಡಿರುತ್ತಾರೆ. ಉದಾಹರಣೆಗೆ ಗಿರಾಕಿಗಳು ಕುಳಿತುಕೊಳ್ಳಲು ಮರದ ದಿಮ್ಮಿಯನ್ನೋ, ಚಪ್ಪಟೆಯಾದ ಕಲ್ಲುಬಂಡೆಗಳನ್ನೋ ಬಳಸಿಕೊಂಡಿರುವರು. ಅಂದರೆ ಕಸದಿಂದ ರಸ ಎನ್ನುವ ಮಾತಿನಂತೆ ಕಚ್ಚಾವಸ್ತುಗಳನ್ನು ಆ ಕ್ಷಣಕ್ಕೆ ಬಳಕೆ ಮಾಡಿಕೊಂಡು ವ್ಯಾಪಾರವನ್ನು ನಡೆಸುತ್ತಾರೆ. ಇಂತಹ ಅಂಗಡಿಗಳ ಮಾಲೀಕರಿಗೆ ಬಹುಪಾಲು ಲಾಭದಾಯಕವಾಗಿರುತ್ತದೆ. ಏಕೆಂದರೆ ಇದಕ್ಕೆ ಮಾಲೀಕರು ಹೆಚ್ಚಿನ ಪ್ರಮಾಣದ ಬಂಡವಾಳ ಹೂಡಿಕೆಯನ್ನು ಮಾಡಿರುವುದಿಲ್ಲ.

ಮಧ್ಯಮ ವ್ಯವಸ್ಥೆಯ ದಿನಸಿ ಅಂಗಡಿಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದರಿಂದ ಗಿರಾಕಿಗಳೇ ಹೆಚ್ಚಿನ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಇಲ್ಲಿ ಪದಾರ್ಥಗಳಿಗೆ ಸರಿಯಾದ ಸಂರಕ್ಷಣೆಯ ಕ್ರಮ ಇಲ್ಲದಿರುವುದರಿಂದ ಗಾಳಿಯಿಂದ ದೂಳು ಅಂಗಡಿಯೊಳಗೆ ಹೊಕ್ಕು ಪದಾರ್ಥಗಳಲ್ಲಿ ಬೆರೆಯುವ ಸಂಭವವಿರುತ್ತದೆ. ಇಲ್ಲಿ ಶುದ್ಧ ಕುಡಿಯುವ ನೀರು ದೊರೆಯುವುದು ಅಪರೂಪ. ಏಕೆಂದರೆ ನಾನು ಕಂಡಂತೆ ಹೇಳುವುದಾದರೆ ಇಂತಹ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಬ್ಯಾರಲ್‌ಗಳಲ್ಲಿ ನೀರು ಸಂಗ್ರಹ ಮಾಡಲಾಗಿರುತ್ತದೆ. ಅದೇ ನೀರಿನಿಂದ ಇತರ

ವಸ್ತುಗಳನ್ನು ತೊಳೆಯಲು, ಉಪಾಹಾರವನ್ನು ತಯಾರಿಸಲು, ಉಪಯೋಗಿಸುವುದು, ಗಿರಾಕಿಗಳಿಗೆ ಇದೇ ನೀರನ್ನು ಕುಡಿಯಲು ಕೊಡುವುದು, ಹಾಗೂ ಜಾತ್ರೆಗೆ ಬಂದಿರುವ ಕೆಲವು ಗಿರಾಕಿಗಳಲ್ಲಿ ಸ್ವಚ್ಛತೆಯ ಪರಿಜ್ಞಾನವು ಇರುವುದಿಲ್ಲ ಅವರು ಬ್ಯಾರಲ್ ನೀರನ್ನು ತೆಗೆದುಕೊಂಡು ಕೈಕಾಲು ಮುಖ ತೊಳೆದುಕೊಳ್ಳವ ಕ್ರಿಯೆ ನಡೆಯುತ್ತದೆ. ಇದರಿಂದ ಕುಡಿಯುವುದಕ್ಕೆ ತೊಳೆದುಕೊಳ್ಳುವುದಕ್ಕೆ ಕೆಲವೇ ಪ್ಲಾಸ್ಟಿಕ್ ಚೆರಿಗೆಗಳು ಇರುವುದರಿಂದ ಗಿರಾಕಿಗಳಿಗೆ ಹಲವಾರು ಸಾಂಕ್ರಾಮಿಕ ಕಾಯಿಲೆಗಳು ಬರಬಹುದು. ಆದ್ದರಿಂದ ಇಂತಹ ಅಂಗಡಿಯ ವ್ಯವಹಾರಸ್ಥರು ಗಿರಾಕಿಗಳಿಗೆ ಕುಡಿಯಲು ನೀರು ಮತ್ತು ಬಳಕೆ ಮಾಡುವ ನೀರಿನ ವ್ಯವಸ್ಥೆಯನ್ನು ಬೇರೆ ಬೇರೆ ಮಾಡಬೇಕು. ಸಾಧ್ಯವಾದಷ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನು ನಲ್ಲಿಯಿಂದಲೆ ಪಡೆಯುವಂತ ಅನುಕೂಲ ಮಾಡಬೇಕು. ಇದರಿಂದ ಟ್ಯಾಂಕಿ ಅಥವಾ ಬ್ಯಾರಲ್‌ನಲ್ಲಿ ಪದೇ ಪದೇ ಚರಿಗೆ, ಜಗ್ಗು, ಅಥವಾ ಮಗ್‌ಗಳನ್ನು ಅದ್ದುವುದನ್ನು ತಪ್ಪಿಸಬಹುದು.

ಜಾತ್ರೆಗೆ ಬರುವಂತ ಹಲವಾರು ಭಕ್ತರು ಇಂತಹ ಅಂಗಡಿಗಳಿಗೆ ಹೋಗುವುದರಿಂದ ಅವರವರ ಆಸಕ್ತಿಗನುಗುಣವಾದ ಉಪಾಹಾರವನ್ನು ಬಯಸುತ್ತಾರೆ. ಇಂತಹ ಸಂದರ್ಭದಲ್ಲಿ ಅವರು ಬಯಸಿರುವುದು ಸಿಗದೇ ಇರುವಾಗ ಇನ್ನೊಂದು ದಿನಸಿ ಅಂಗಡಿಯತ್ತಾ ಹೊರಡುತ್ತಾರೆ. ಇದರಿಂದ ಇಂತಹ ಮಧ್ಯಮ ವ್ಯವಸ್ಥೆಯ ಅಂಗಡಿಯಲ್ಲಿ ತಯಾರಿಸಿದ ಉಪಾಹಾರ ಸರಿಯಾದ ಕಾಲಕ್ಕೆ ಬಳಕೆಯಾಗದೆ ಉಳಿಯಬಹುದು. ಇದರಿಂದ ನಂತರ ಬಂದ ಗಿರಾಕಿಗಳಿಗೆ ಅದನ್ನೇ ಬಿಸಿಯ ರೂಪದಲ್ಲಿ ಮಾಡಿ ಅಥವಾ ಅದೇ ಸ್ಥಿತಿಯಲ್ಲಿ ಕೊಡಬಹುದು. ಇದರಿಂದ ಗಿರಾಕಿಗಳಿಗೆ ತಾಜಾ ಉಪಾಹಾರ ಸಿಗದೆ ಮೋಸ ಹೊಗುತ್ತಾರೆ. ಗಿರಾಕಿಗಳಿಗೆ ಸೇವಿಸಲು ಸರಿಯಾದ ಪ್ಲೇಟಿನ ವ್ಯವಸ್ಥೆ ಇಲ್ಲದೆ ರದ್ದಿಹಾಳೆಯಲ್ಲಿ ಹಾಕಿಕೊಡುವುದರಿಂದ ಅದರಲ್ಲಿರುವ ರಾಸಾಯನಿಕ ವಸ್ತುಗಳು ತಿನ್ನುವ ಪದಾರ್ಥದೊಂದಿಗೆ ಸಂಯೋಜನೆ ಹೊಂದಿ ವಿಷಪೂರಿತ ಪದಾರ್ಥ (ಫುಡ್ ಪಾಯಿಸನ್)ವಾಗಿ ಪರಿವರ್ತನೆ ಹೊಂದಿ ಸೇವಿಸಿದ ವ್ಯಕ್ತಿಯ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ.

ಬಟ್ಟ ಬಯಲಿನಲ್ಲಿ ಏಕ ವ್ಯಕ್ತಿಯಿಂದ ಹಾಕಲಾದ ದಿನಸಿ ಅಂಗಡಿಯ ಸ್ಥಿತಿಯನ್ನು ಹೇಳುವುದಕ್ಕಿಂತ ಮೊದಲೇ ಹೆಸರೆ ಸೂಚಿಸುವಂತೆ ಬಯಲಿಗೆ ಇರುವುದರಿಂದ ಇವರು ತಯಾರಿಸುವಂತಹ ತಿಂಡಿ ತಿನಿಸುಗಳಲ್ಲಿ ಶುದ್ಧತೆಯ ಪ್ರಮಾಣ ಕಡಿಮೆ ಇರುತ್ತದೆ. ಏಕೆಂದರೆ ಇದು ಜಾತ್ರೆಯ ಸ್ಥಳವಾಗಿರುವುದರಿಂದ ಜನದಟ್ಟಣೆ, ವಾಹನಗಳ ಸಾಗಟ, ಗಾಳಿ ಇತ್ಯಾದಿಗಳಿಂದ ಇವರು ತಯಾರಿಸುವ ಪದಾರ್ಥದಲ್ಲಿ ಕ್ರಿಮಿಕೀಟಗಳು ಧೂಳು ಹಾಗೂ ಇತ್ಯಾದಿ ಕಲ್ಮಶವಾದ ವಸ್ತುಗಳು ಸೇರುತ್ತವೆ. ಏಕಕಾಲಕ್ಕೆ ಎಲ್ಲಾ ಕೆಲಸಗಳನ್ನೂ ತಾವೊಬ್ಬರೇ ಮಾಡುವುದರಿಂದ ತಾವು ತಯಾರಿಸುವ ಪದಾರ್ಥದೊಂದಿಗೆ ಶುದ್ಧತೆ ಕಾಪಾಡುವುದು ತೀರಾ ವಿರಳ. ಆದ್ದರಿಂದ ಇಂಥ ವ್ಯಾಪಾರಸ್ಥರಲ್ಲಿ ತಿಂಡಿತಿನಿಸುಗಳನ್ನು ಕೊಳ್ಳುವಾಗ ಜಾಗೃತರಾಗುವುದು ಹಾಗೂ ಕೊಳ್ಳದೆ ಇರುವುದು

ಯೋಗ್ಯ ಎನಿಸುತ್ತದೆ. ಈ ವ್ಯಾಪಾರಿಗಳು ವ್ಯಾಪಾರ ಮಾಡಬೇಕೆಂಬ ಹಂಬಲವಿದ್ದರೆ ಪೂರ್ವತಯಾರಿಯಾಗಿ ಇರಬೇಕು. ಅಂದರೆ ಸುಸಜ್ಜಿತವಾದಂತ ಅಂಗಡಿಯೂ ಚಿಕ್ಕದಾದರೂ ಪರವಾಗಿಲ್ಲ ಸ್ವಚ್ಛತೆಯಿಂದ ಕೂಡಿರುವಂತೆ ಸಿದ್ಧಪಡಿಸಿ ಕೊಂಡಿರಬೇಕು.

ಸಂಚಾರಿ ದಿನಸಿ ಅಂಗಡಿಗಳ ವ್ಯವಸ್ಥೆಯನ್ನು ನೋಡಿದಾಗ ಇದು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆಯುತ್ತಾ ವ್ಯಾಪಾರ ಮಾಡುವುದಾಗಿದೆ. ತಿನಿಸುಗಳು ಬಿಸ್ಕೆಟ್, ಸಿಹಿ ಪದಾರ್ಥಗಳನ್ನು ಮಾರುವಂತವರು ಜಾತ್ರೆಯಲ್ಲಿ ಬಹುಸಂಖ್ಯೆಯಲ್ಲಿ ಜನಸಂಖ್ಯೆ ನೆರವೇರಿದ ಸಮಯದಲ್ಲಿ ಹೋಗಿ ತಮ್ಮ ವ್ಯಾಪಾರವನ್ನು ಕೈಗೊಳ್ಳುತ್ತಾರೆ. ಆದರೆ ಇನ್ನಿತರ ತಿಂಡಿಯನ್ನು ಮಾರುವಂತ ವ್ಯಾಪಾರಸ್ಥರು ಹೆಚ್ಚಿನ ಪ್ರಮಾಣದಲ್ಲಿ ಸಾಯಂಕಾಲದ ಅವಧಿಯಲ್ಲಿ ಒಂದು ಸ್ಥಳವನ್ನು ಗೊತ್ತು ಮಾಡಿಕೊಂಡು ವ್ಯಾಪಾರ ಮಾಡುತ್ತಾರೆ. ತಳ್ಳುವಗಾಡಿಯಲ್ಲಿ ತಿನಿಸುಗಳನ್ನು ಜಾತ್ರೆಗೆ ಬಂದ ಪ್ರೇಕ್ಷಕರು ತಮ್ಮ ಮಕ್ಕಳಿಗೆ ತಾವು ಇದ್ದ ಸ್ಥಳದಲ್ಲಿಯೇ ಕೊಡಿಸುವುದಕ್ಕೆ ಸಾಧ್ಯವಾಗುತ್ತದೆ. ಉತ್ಸವ, ಮೆರವಣಿಗೆ, ನಡೆದಿರುವಂತ ಸಂದರ್ಭದಲ್ಲಿ ಮಕ್ಕಳು ಕಿರಿಕಿರಿ ತೆಗೆದಾಗ ಅವರನ್ನು ಸಮಾಧಾನಪಡಿಸಲು ಏನಾದರೂ ತಿಂಡಿತಿನಿಸುಗಳನ್ನು ಕೊಡಿಸಬೇಕೆಂದರೆ, ಅಂತಹ ಗಿಜಿಗುಡುವ ಜನಸಂಖ್ಯೆಯಿಂದ ಹೊರಹೋಗಿ ಇತರ ಅಂಗಡಿಯಿಂದ ಕೊಡಿಸುವುದಕ್ಕಿಂತ ಇಂತಹ ಸಂಚಾರಿ ವ್ಯಾಪಾರಸ್ಥರು ಅಂಥ ಸಂದರ್ಭದಲ್ಲಿ ಸಹಾಯಕರಾಗುತ್ತಾರೆ. ಇದರಿಂದ ಹೊತ್ತು ಮಾರುವ ಹಾಗೂ ತಳ್ಳುವ ಗಾಡಿಯಲ್ಲಿ ಮಾರುವಂತಹ ವ್ಯಾಪಾರಸ್ಥರಿಗೆ ವ್ಯಾಪಾರವೂ ಖುಲಾಯಿಸುತ್ತದೆ. ಈ ವ್ಯಾಪಾರಿಗಳ ಕಡೆಗೆ ಬಂದಂತ ಗಿರಾಕಿಗಳು ತಮ್ಮ ತಿಂಡಿ ತಿನಿಸುಗಳನ್ನು ಅಲ್ಲೇ ತಿನ್ನಬಹುದು ಅಥವಾ ತಮಗೆ ಅನುಕೂಲವಾದಂತ ಕಡೆಗೆ ಹೋಗಿ ಸೇವಿಸಬಹುದು. ಜಾತ್ರೆಗೆ ಬಂದ ಭಕ್ತರಿಗೆ ಬೇಗ ತಿಂಡಿ ತಿನಿಸುಗಳನ್ನು ಕೈಗೆಟುಕುವಂತೆ ಮಾಡುತ್ತವೆ. ಈ ವ್ಯಾಪಾರಿಗಳಲ್ಲಿರುವ ತಿಂಡಿ–ತಿನಿಸುಗಳ ಬೆಲೆಯೂ ಕೆಲವೊಂದು ಸಮಯದಲ್ಲಿ ಏರುಪೇರು ಮಾಡುವುದು ಕಂಡುಬರುತ್ತದೆ. ಇವರು ಗಿರಾಕಿಗಳನ್ನು ನೋಡಿಯೇ ಬೆಲೆಯನ್ನು ಏರುಪೇರು ಮಾಡುವುದು ತಿಳಿಯುತ್ತದೆ. ಜಾತ್ರೆಗೆ ಬಂದ ಭಕ್ತರಿಗೆ ಇದೆಲ್ಲ ತಿಳಿದಿದ್ದರೂ ಸಹ ಸಂದರ್ಭ ಸಮಯಗಳಿಗೆ ಅನುಗುಣವಾಗಿ "ಸಂಕಟ ಬಂದಾಗ ವೆಂಕಟರಮಣ ಗೋವಿಂದ ಗೋವಿಂದ" ಎನ್ನುವಂತೆ ಮನಸ್ಥಿತಿಯನ್ನು ತಾಳಿ ಇಂತವರಿಂದ ವ್ಯವಹರಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಮುಂದುವರಿದಂತೆ ದಿನಸಿ ಅಂಗಡಿಗಳಿಗಾಗಿಯೇ ಸಂಚಾರಿ ವಾಹನಗಳನ್ನು ಕಂಪನಿಗಳು ತಯಾರಿಸುತ್ತವೆ. ಇಲ್ಲವೇ ಅಂತಹ ವಾಹನಗಳನ್ನು ವ್ಯಾಪಾರಸ್ಥರು ತಮ್ಮ ಅನುಕೂಲಕ್ಕೆ ತಕ್ಕಂತೆ ಎಂಜಿನಿಯರಿಂಗ್ ವರ್ಕಶಾಪ್‌ಗಳಲ್ಲಿ ತಮ್ಮ ವಾಹನಗಳನ್ನು ತಯಾರಿಸಿಕೊಳ್ಳುವರು. ಈ ಅಂಗಡಿಗಳು ಮಾರಾಟ ಮಾಡುವ ಪದಾರ್ಥಗಳನ್ನು ಇನ್ನೂ ಹೆಚ್ಚಿನ ಸಂರಕ್ಷಣೆ ಸ್ಥಿತಿಯಲ್ಲಿ ಇಟ್ಟು ಮಾರುವುದು ಸೂಕ್ತ ಇದು ಜಾತ್ರೆ ಯಾಗಿರುವುದರಿಂದ ಗಾಳಿಯಿಂದ ಜನಗಳ ಕಾಲ್ತುಳಿತದಿಂದ ಧೂಳು, ಕ್ರಿಮಿಕೀಟಗಳು, ಬಂದು ತಿಂಡಿತಿನಿಸುಗಳ ಮೇಲೆ

ಕುಳಿತುಕೊಳ್ಳುವುದರಿಂದ ಗಿರಾಕಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ವ್ಯಾಪಾರಸ್ಥರು ಮುಂಜಾಗೃತ ಕ್ರಮ ವಹಿಸಿ ವ್ಯಾಪಾರ ಮಾಡಿದರೆ ವ್ಯಾಪಾರವೂ ಸುಧಾರಿಸುತ್ತದೆ ಹಾಗೂ ಗಿರಾಕಿಗಳ ಆರೋಗ್ಯನು ಸುರಕ್ಷಿತವಾಗಿರುತ್ತದೆ.

೫.೩.೫. ಫಲ-ಪುಷ್ಪದ ಅಂಗಡಿಗಳು : (Fruit-Flower Shopes)

ಚಂದಾಲಿಂಗೇಶ್ವರನ ಜಾತ್ರೆಯು ಒಂದು ವರ್ಷದಲ್ಲಿ ಎರಡು ಅವಧಿ ನಡೆಯುವುದರಿಂದ ಕಾಲಕಾಲಕ್ಕೆ ಬೆಳೆಯುವ ಹಣ್ಣು ಹೂವುಗಳು ಮಾರಾಟಕ್ಕೆ ಇಲ್ಲಿಗೆ ಬಂದಿರುತ್ತವೆ. ಬೇಸಿಗೆ ಜಾತ್ರೆಯಲ್ಲಿ ಮಾವಿನಹಣ್ಣು, ಕಲಂಗಡಿ, ಪೇರಲ, ಸಪೋಟ, ಖರ್ಜೂರ, ಲಿಂಬೆ, ದಾಳಿಂಬೆ, ಬೋರೆಹಣ್ಣು, ಬಾಳೆಹಣ್ಣು, ದ್ರಾಕ್ಷಿ, ಕಬ್ಬುಗಳು ಬಂದರೆ, ಅದೇ ಸುಗ್ಗಿಯ ಜಾತ್ರೆಯಲ್ಲಿ ವಿಶೇಷವಾಗಿ ಸೀತಾಫಲ ಹಣ್ಣು, ಸೇಬು, ನೇರಳೆ ಹಣ್ಣು, ಮುಂತಾದ ಹಣ್ಣುಗಳು ಬಂದಿರುತ್ತವೆ. ಈ ಎರಡೂ ಅವಧಿ ಜಾತ್ರೆಯಲ್ಲಿ ಸೇವಂತಿಗೆ, ಮಲ್ಲಿಗೆ, ಕನಕಾಂಬರಿ ಹೂವುಗಳು ಬಂದರೆ ಸುಗ್ಗಿಯ ಜಾತ್ರೆಯ ಸಂದರ್ಭದಲ್ಲಿ ವಿಶೇಷವಾಗಿ ಚೆಂಡುಹೂಗಳು ಬಂದಿರುತ್ತವೆ. ಈ ಎಲ್ಲಾ ವ್ಯಾಪಾರಸ್ಥರಲ್ಲಿ ಸುಮಾರು ಶೇಕಡಾ ಎಂಬತ್ತರಷ್ಟು ವ್ಯಾಪಾರಸ್ಥರು ಜಾತ್ರೆಯಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸುತ್ತಾ ವ್ಯಾಪಾರ ಮಾಡುತ್ತಾರೆ. ಈ ಸಂಚಾರಿ ವ್ಯಾಪಾರಸ್ಥರು ಹೆಚ್ಚಿನ ಮಾಲ್ ತಂದು ಅದನ್ನು ಜಾತ್ರೆಯ ಸ್ಥಳದಲ್ಲಿ ಒಂದು ಕಡೆ ಭದ್ರತೆಯಿಂದ ಇಟ್ಟಿರುತ್ತಾರೆ. ತಮ್ಮ ವ್ಯಾಪಾರಕ್ಕೆ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ಬುಟ್ಟಿಯಲ್ಲೋ, ನಾಲ್ಕು ಚಕ್ರದ ತಳ್ಳುವ ಗಾಡಿಯಲ್ಲೋ, ಸಂಚರಿಸುತ್ತಾ ವ್ಯಾಪಾರ ಮಾಡುತ್ತಾರೆ. ಜಾತ್ರೆಗೆ ಬಂದ ಭಕ್ತರು ತಂಗಿರುವಂತಹ ಸ್ಥಳದ ಹತ್ತಿರ ಹೋಗಿ ಹೂವುಗಳನ್ನು ಹಾಗೂ ಹಣ್ಣುಗಳನ್ನು ಮಾರಾಟ ಮಾಡುವಂತ ಪದ್ಧತಿಯನ್ನು ಹೊಂದಿದ್ದಾರೆ. ಹೀಗೆ ಬೆಳಗಿನ ವೇಳೆಯಲ್ಲಿ ಭಕ್ತರು ಇರುವ ಸ್ಥಳಗಳಿಗೆ ಭೇಟಿ ನೀಡಿ ನಂತರ ಜಾತ್ರೆಯಲ್ಲಿ 'ಆ... ಹೂವಾ... ಹೂವರೀ... ಹತ್ತು ರೂಪಾಯಿಗೆ ಮೊಳ... ಹತ್ತು ರೂಪಾಯಿಗೆ ಮೊಳ... ಎಂದು ಹೇಳುತ್ತ ತಮ್ಮಲ್ಲಿರುವ ಎಲ್ಲಾ ಹೂವುಗಳನ್ನು ಹೇಳುತ್ತಾ ಆ...ಮಲ್ಲಿಗೆ, ಸೇವಂತಿಗೆ, ಗುಲಾಬಿ, ಕನಕಾಂಬರ್‍ರಿ ಬೇಕೆನರ್‍ರಿ' ಎಂದು ಧ್ವನಿ ಮಾಡುತ್ತಾರೆ.

ಹೂವು ಮಾರುವವರು ತಮ್ಮಲ್ಲಿರುವಂತ ಹೂವುಗಳನ್ನು ಗ್ರಾಹಕರಿಗೆ ಆಕರ್ಷಕವಾದ ರೀತಿಯಲ್ಲಿ ಕಾಣುವಂತೆ ತಮ್ಮ ಬುಟ್ಟಿಯಲ್ಲಿ ಜೋಡಿಸಿರುತ್ತಾರೆ. ಗುಲಾಬಿಹೂಗಳನ್ನು ಹಿಡಿದುಕೊಂಡಿರುವ ಬುಟ್ಟಿಯ ಹಂಚೆಯು ಹೊರಗೆ ಕಾಣಿಸುವಂತೆ ವೃತ್ತಾಕಾರವಾಗಿ, ಪಿರಾಮಿಡ್ ಆಕಾರವಾಗಿ ಹೊಂದಿಸಿರುತ್ತಾರೆ. ಇಂತ ಗುಲಾಬಿ ಹೂವುಗಳಲ್ಲಿ ವಿವಿಧ ಬಣ್ಣಗಳಾದ ಕೇಸರಿ, ಹಳದಿ, ಬಿಳಿ, ಬಣ್ಣವುಳ್ಳ ಗುಲಾಬಿಗಳನ್ನು ಮಾರಾಟಕ್ಕೆ ತಂದಿರುತ್ತಾರೆ. ಇವುಗಳನ್ನು ಐದು ರೂಪಾಯಿ ಮತ್ತು ಹತ್ತು ರೂಪಾಯಿಗೆ ಒಂದರಂತೆ ಮಾರಾಟ ಮಾಡುತ್ತಾರೆ. ಇವುಗಳು ಅಷ್ಟೇ ಅಲ್ಲದೆ ಮಲ್ಲಿಗೆ, ಸೇವಂತಿಗೆ, ಕನಕಾಂಬರಿ, ಹೂವುಗಳಲ್ಲಿ ಕಟ್ಟಿದ ಮಾಲಯು ಗ್ರಾಹಕರಿಗೆ ಕಾಣಲಿ ಎಂದು ತಮ್ಮ ಬುಟ್ಟಿಯಿಂದ ಸ್ವಲ್ಪಭಾಗವನ್ನು ಎಲ್ಲಾ ಹೂವುಗಳ ಮಾಲೆಯನ್ನು

ಇಳಿಬಿಟ್ಟಿರುತ್ತಾರೆ. ಈ ಹೂವುಗಳ ದರದಲ್ಲಿ ಸ್ಥಿರತೆ ಇರುವುದಿಲ್ಲ. ಹತ್ತು ರೂಪಾಯಿಗೆ ಒಂದು ಮೊಳ ಮಾರಿದರೆ ಕೆಲವೊಂದು ಸಮಯದಲ್ಲಿ ಇಪ್ಪತ್ತು ರೂಪಾಯಿಗಳಿಗೆ ಒಂದು ಮೊಳ ಮಾರುವಂತ ಸಂದರ್ಭವು ಒದಗಿ ಬರುತ್ತದೆ. ಆದರೆ ಎಲ್ಲಾ ಹೂವುಗಳನ್ನು ಬೇರೆ ಬೇರೆ ಬೆಲೆಯಲ್ಲಿ ಮಾರಾಟ ಮಾಡುತ್ತಾರೆ.

ಹೂವು ಮಾರಾಟ ಮಾಡುವುದಕ್ಕೆ ಕೆಲವೊಬ್ಬರು ನಿಗದಿತ ಸ್ಥಳವನ್ನು ಗೊತ್ತುಪಡಿಸಿಕೊಂಡು ತಮಗೆ ಅನುಕೂಲವಾದ ಸ್ಥಿತಿಯಲ್ಲಿ ಅಂಗಡಿಯನ್ನು ಹಾಕಿರುತ್ತಾರೆ. ಇವರಲ್ಲಿಯೂ ಮಲ್ಲಿಗೆ, ಕನಕಾಂಬರಿ, ಸೇವಂತಿಗೆ, ಚಂಡುಹೂವು, ಜಾಜಿಮಲ್ಲಿಗೆ, ಗುಲಾಬಿ, ಮುಂತಾದ ಹೂವುಗಳ ಮಾಲೆಗಳು ಹಾಗೂ ಬಿಡಿ ಹೂವುಗಳು ಮೊಳ ಮಾರು ಅಳತೆಯ ಪ್ರಕಾರ ಹೂವುಗಳು ದೊರೆಯುತ್ತವೆ. ಈ ಅಂಗಡಿಯನ್ನು ನೋಡಿಕೊಂಡು ಹೋಗಲು ಒಬ್ಬರು ಅಥವಾ ಇಬ್ಬರು ಇರುತ್ತಾರೆ. ಇವರು ಜಾತ್ರೆಯಲ್ಲಿ ಬಹಳ ಪ್ರಮಾಣದಲ್ಲಿ ಹೂವಿನ ಮಾಲೆಗಳು ಮಾರಾಟವಾಗಬಹುದು ಎಂಬ ನಿರೀಕ್ಷೆಯಿಂದ ಒಂದು ದಿನ ಮೊದಲೇ ಹೂವುಗಳನ್ನು ತರಿಸಿಕೊಂಡು ಮಾಲೆಗಳನ್ನು ಸಿದ್ಧಪಡಿಸಿಕೊಂಡು ಬಂದಿರುತ್ತಾರೆ. ತದನಂತರ ಜಾತ್ರೆಯ ವೇಳೆ ಅಂಗಡಿಯಲ್ಲಿ ಖಾಲಿ ಇದ್ದ ಸಮಯದಲ್ಲಿ ಇನ್ನೂ ಹೂವಿನ ಮಾಲೆಗಳು ಮಾರಾಟವಾಗುವಂತ ಸಂದರ್ಭ ಕಂಡುಬಂದರೆ ಅಲ್ಲೇ ತಯಾರಿಸುತ್ತಾರೆ. ಮಲ್ಲಿಗೆ, ಸೇವಂತಿಗೆ, ಕನಕಾಂಬರಿ, ಚೆಂಡುಹೂವು, ಗುಲಾಬಿ ಹೂವಿನ ಮಾಲೆಯನ್ನು ತಯಾರಿಸಿ ಕೊಡುತ್ತಾರೆ. ಇವರು ಮಾಲೆಗಳನ್ನು ಅಲಂಕಾರಿಕವಾಗಿ ಮಿಂಚಿನ ಬಣ್ಣ ಬಣ್ಣದ ಹಾಳೆಯಿಂದ ತಯಾರಿಸಿದ ಹೂಗಳನ್ನು ಎರಡು-ಮೂರು ಇಂತವುಗಳನ್ನು ಅದರಲ್ಲಿ ಸೇರಿಸಿ ಮತ್ತು ಮಿಂಚಿನ ಜರಿಯನ್ನು ತಡಿಕಿಸುತ್ತಾರೆ. ಆಯಾ ಹೂವುಗಳಿಗೆ ಸಂಬಂಧಿಸಿದಂತೆ ಹೂವು ಮಾಲೆಗಳು ಮಾರಾಟವಾಗುತ್ತವೆ. ಅಲ್ಲಿಯ ಕೆಲವೊಂದು ಮಾಲೆಯ ದರವನ್ನು ಕೇಳಿದಾಗ ಮೂವತ್ತು ರೂಪಾಯಿಗಳು, ಐವತ್ತು ರೂಪಾಯಿಗಳು, ಒಂದು ನೂರು ರೂಪಾಯಿ, ನೂರೈವತ್ತು ರೂಪಾಯಿಗಳವರೆಗೂ ಮಾರಾಟ ಮಾಡುತ್ತಾರೆ. ಜಾತ್ರೆಗೆ ಬಂದ ಭಕ್ತರು ಇವರ ಅಂಗಡಿಗಳಲ್ಲಿ ಮಾಲೆಯನ್ನು ಖರೀದಿಸಿ ತಮ್ಮ ಭಕ್ತಿಗೆ ಅನುಗುಣವಾಗಿ ಚಂದಾಲಿಂಗೇಶ್ವರನಿಗೂ ಹಾಗೂ ಆ ಪೌಳಿಯಲ್ಲಿರುವ ಇತರ ದೇವರುಗಳಿಗೂ ಸಮರ್ಪಿಸುತ್ತಾರೆ.

ಫಲಾಹಾರದ ಅಂಗಡಿಗಳು ಜಾತ್ರೆಯಲ್ಲಿ ಎಲ್ಲಾ ವ್ಯಾಪಾರಸ್ಥರಂತೆ ವಿವಿಧ ಹಣ್ಣುಗಳ ವ್ಯಾಪಾರಸ್ಥರು ಬಂದಿರುತ್ತಾರೆ. ಬಾಳೆಹಣ್ಣಿನ ವ್ಯಾಪಾರಸ್ಥರಲ್ಲಿ ಮಹಿಳೆಯರು ಪುರುಷರು ಗೋಚರಿಸುತ್ತಾರೆ. ಚಿಕ್ಕ ವ್ಯಾಪಾರಿಗಳು ಹಾಗೂ ದೊಡ್ಡ ವ್ಯಾಪಾರಿಗಳು ಈ ಜಾತ್ರೆಯಲ್ಲಿ ಕಾಣುತ್ತಾರೆ. ಚಿಕ್ಕ ವ್ಯಾಪಾರಸ್ಥರೆಂದರೆ ಕೇವಲ ಒಂದು ಬುಟ್ಟಿಯಲ್ಲಿ ಮಾತ್ರ ಈ ಹಣ್ಣುಗಳನ್ನು ಹೊತ್ತುಕೊಂಡು ಅಥವಾ ಒಂದೇ ಸ್ಥಳದಲ್ಲಿ ಕುಳಿತುಕೊಂಡು ವ್ಯಾಪಾರವನ್ನು ಮಾಡುತ್ತಾರೆ. ದೊಡ್ಡ ವ್ಯಾಪಾರಸ್ಥರು ಬಾಳೆಹಣ್ಣುಗಳ ಜೊತೆಗೆ ಸೇಬು, ಚಿಕ್ಕು, ದ್ರಾಕ್ಷಿ, ಪೇರಲ, ಮುಂತಾದ ಹಣ್ಣುಗಳನ್ನು ಒಂದೇ ಕಡೆ ಅಂಗಡಿಯ ರೂಪದಲ್ಲಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುತ್ತಾರೆ.

ಮತ್ತೆ ಕೆಲವು ವ್ಯಾಪಾರಸ್ಥರು ನಾಲ್ಕು ಚಕ್ರದ ತಳ್ಳುವ ಗಾಡಿಯಲ್ಲಿ ಒಂದು ಕಡೆಗೆ ಬಾಳೆಹಣ್ಣು ಇನ್ನೊಂದು ಕಡೆ ಚಿಕ್ಕುಹಣ್ಣು ಮತ್ತೊಂದು ಕಡೆ ದ್ರಾಕ್ಷಿ, ಪೇರಲ ಹೀಗೆ ಹಲವಾರು ಹಣ್ಣುಗಳನ್ನು ಇಟ್ಟುಕೊಂಡು ಒಬ್ಬನೇ ವ್ಯಾಪಾರಿಯು ಜಾತ್ರೆಯಲ್ಲಿ ಸಂಚಾರ ಮಾಡುತ್ತ ವ್ಯಾಪಾರ ಮಾಡುವನು. ಹೀಗೆ ಈ ಕ್ಷೇತ್ರದ ಸುತ್ತಮುತ್ತಲಿನ ಗ್ರಾಮೀಣ ವ್ಯಾಪಾರಸ್ಥರು ಮಾವಿನಹಣ್ಣು, ಸೀತಾಫಲ, ನೇರಳೆಹಣ್ಣು, ಲಿಂಬು, ಕಲಂಗಡಿ, ದಾಳಿಂಬೆ ಹಣ್ಣುಗಳನ್ನು ಮಾರಾಟಕ್ಕೆ ತಂದಿರುವರು. ಮುಖ್ಯ ಗುಡಿಗೆ ಹೋಗುವ ಮಾರ್ಗದ ಮಧ್ಯದ ಪಕ್ಕಕ್ಕೆ ಒಬ್ಬ ವೃದ್ಧೆ ಒಂದು ಅರಿವೆಯನ್ನು ಹಾಸಿ ಮಾವಿನಹಣ್ಣುಗಳನ್ನು ಅವುಗಳ ಗಾತ್ರಕ್ಕೆ, ಪಕ್ವತೆ ಗೆತಕ್ಕಂತೆ, ಗುಂಪುಗಳಾಗಿ ಇಟ್ಟಿರುವುದನ್ನು ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದೆ. ಹೀಗೆ ವ್ಯಾಪಾರ ಮಾಡುವುದಕ್ಕೆ ಜಾತ್ರೆಗೆ ಬಂದವರು ಪ್ಲಾಸ್ಟಿಕ್ ಬುಟ್ಟಿಯಲ್ಲಿ ಮಾವಿನಹಣ್ಣುಗಳನ್ನು ಇಟ್ಟುಕೊಂಡು ಮಾರುವರು. ಕಲ್ಲಂಗಡಿ ಹಣ್ಣುಗಳನ್ನು ದೊಡ್ಡ ಅಂಗಡಿಗಳನ್ನು ಇಟ್ಟು ಹಾಗೂ ಗೂಡ್ಸ ವಾಹನದಲ್ಲಿ ಇಟ್ಟುಕೊಂಡು ಮಾರುವವರು ಇದ್ದರು.

ಜಾತ್ರೆಯ ದಿನದಂದು ಕಲ್ಲಂಗಡಿ ಹಣ್ಣಿನ ಮಾರಾಟದ ಕ್ರಮವನ್ನು ಗಮನಿಸಿದರೆ ಐದು ರೂಪಾಯಿಗಳಿಗೆ ಒಂದು ಚಿಕ್ಕದಾದ ತುಂಡು, ಹತ್ತು ರೂಪಾಯಿಗಳಿಗೆ ಒಂದು ಚಿಕ್ಕ ಪ್ಲೇಟ್ ಎಂಬಂತೆ ವ್ಯಾಪಾರ ಮಾಡುತ್ತಿದ್ದರು. ಸಂಪೂರ್ಣ ಕಲ್ಲಂಗಡಿ ಹಣ್ಣನ್ನು ಕೇಳಿದರೆ ಕೇಜಿ ಲೆಕ್ಕದಲ್ಲಿ ಒಂದು ನೂರು ರೂಪಾಯಿಗಳವರೆಗೂ ಬೆಲೆ ಬರುತ್ತಿತ್ತು. ಅದೇ ಅಂಗಡಿಯಲ್ಲಿ ಸೇವಿಸುವಂತವರಿಗೆ ಸರಿಯಾದ ರುಚಿಕರವಾಗಿರಲೆಂದು ಅದಕ್ಕೆ ಉಪ್ಪು ಖಾರದ ಪುಡಿಯನ್ನು ಸಿಂಪಡಿಸಿಕೊಡುತ್ತಿದ್ದರು. ಇವರು ಹೆಚ್ಚಿನ ಪ್ರಮಾಣದಲ್ಲಿ ಗ್ರಾಹಕರನ್ನು ಕರೆಯಲು 'ಆ... ಇಲ್ಲೆ ಕಲ್ಲಂಗಡಿ... ಕಲ್ಲಂಗಡಿ... ತಂಪು... ತಂಪು... ಬರ್ರಿ... ಬರ್ರಿ...' ಎಂದು ಕೂಗುತ್ತಿದ್ದರು. ಇದೇ ರೀತಿ ಮಾವಿನಹಣ್ಣಿನ ಮಾರಾಟದ ಕ್ರಮವು ಗ್ರಾಮೀಣ ಭಾಗದಿಂದ ತಂದವರು ಐದು ರೂಪಾಯಿಗೆ ಒಂದರಂತೆ ಹಾಗೂ ತಳ್ಳುವ ಕೇಜಿ ಲೆಕ್ಕದಲ್ಲಿ ಐವತ್ತರಿಂದ ಆರವತ್ತು ರೂಪಾಯಿಗಳೆಂದು ಮಾರಾಟ ಮಾಡುವರು. ತಳ್ಳು ಗಾಡಿಯಲ್ಲಿಟ್ಟು ಮಾರಾಟ ಮಾಡುತ್ತಿದ್ದರು. ಅದೇ ರೀತಿ ಬಾಳೆಹಣ್ಣಿನ ವ್ಯಾಪಾರಸ್ಥರು ತಳ್ಳುವ ಗಾಡಿಯಲ್ಲಿ ಇಟ್ಟು ಮಾರುವವರು ಮೂವತ್ತೈದು, ನಲವತ್ತು, ರೂಪಾಯಿಗೆ ಒಂದು ಡಜನ್‌ಗೆ ಲೆಕ್ಕದಲ್ಲಿ ಮಾರಾಟ ಮಾಡುತ್ತಿದ್ದರೆ, ಆ ಪ್ರದೇಶದ ಗ್ರಾಮೀಣ ಭಾಗದವರು ತಮ್ಮ ತೋಟದಲ್ಲಿ ಬೆಳೆದಿರುವ 'ಚಿಕ್ಕ ಚಿಕ್ಕ ಬಾಳೆಹಣ್ಣುಗಳನ್ನು ಇಪ್ಪತ್ತು ರೂಪಾಯಿಗೆ ಡಜನ್‌ಗೆ ಮಾರುತ್ತಿದ್ದರು. ಇನ್ನಿತರ ಹಣ್ಣುಗಳಾದ ಸೇಬು, ಚಿಕ್ಕು, ಲಿಂಬು, ಸೀತಾಫಲ, ಖರ್ಜೂರ ಕೇಜಿ ಲೆಕ್ಕದಲ್ಲಿ ಹಾಗೂ ಒಂದೊಂದರ ಬೆಲೆಯಂತೆ ಮಾರಾಟಕ್ಕಿರುವುದನ್ನು ಗಮನಿಸಲಾಗಿದೆ.

ಈ ಕ್ಷೇತ್ರದ ಜಾತ್ರೆಗೆ ವಿವಿಧ ಭಾಗಗಳಿಂದ ಬರುವಂತಹ ಜನಗಳಿಗೆ ಈ ಭಾಗದಲ್ಲಿ ಬೆಳೆಯುವಂತಹ ಫಲಗಳ ಪರಿಚಯವಾಗುತ್ತದೆ. ಅವುಗಳ ಪರ್ಯಾಯ ನಾಮಗಳು ತಿಳಿಯುತ್ತವೆ. ಈ ಭಾಗದ ಗ್ರಾಮೀಣ ಪ್ರದೇಶದಲ್ಲಿ ಬೆಳೆದಿರುವಂತ ಬಾರೆಹಣ್ಣುಗಳನ್ನು ಜಾತ್ರೆಯಲ್ಲಿ

ಮಾರಾಟವಾಗುವಾಗ, ಈ ವ್ಯಾಪಾರಸ್ಥರು ಸಹಜವಾಗಿ ಬಾರೆಹಣ್ಣು... ಬಾರೆಹಣ್ಣು... ಎಂದು ಕೂಗುವಾಗ ಇದು ಮೈಸೂರು ಭಾಗದ ಜನರಿಗೆ ಹೊಸ ಪದವಾಗಿ ಪರಿಚಯವಾಗುತ್ತದೆ. ಇದೆ ಬಾರೆಹಣ್ಣನ್ನು ಅವರು ಎಲಚಿಹಣ್ಣು ಎಂದು ಕರೆಯುತ್ತಾರೆ. ಈ ಭಾಗದಲ್ಲಿ ಮಾರಾಟವಾಗುವ ಪೇರಲಹಣ್ಣು, ಮೈಸೂರು ಭಾಗದಲ್ಲಿ ಸೀಬೆಹಣ್ಣು ಎಂದು ಕರೆಯುತ್ತಾರೆ. ಹೀಗೆ ಬೇರೆ ಬೇರೆ ಹಣ್ಣುಗಳಿಗೆ ಜಾತ್ರೆಗೆ ಬಂದಿರುವ ಜನರು ತಮ್ಮ ಪ್ರಾದೇಶಿಕ ಭಾಷೆಯಲ್ಲಿ ಕರೆಯುವಂತಹ ಹಣ್ಣುಗಳ ಹೆಸರುಗಳನ್ನು ಪರ್ಯಾಯ ನಾಮಗಳಾಗಿ ತಿಳಿಯುತ್ತಾರೆ. ಈ ಜಾತ್ರೆ ಗ್ರಾಮೀಣ ಪ್ರದೇಶದಲ್ಲಿ ನಡೆಯುವುದರಿಂದ ಆಯಾ ಕಾಲಾವಧಿಯಲ್ಲಿ ಬೆಳೆಯುವಂತ ಹಣ್ಣುಗಳನ್ನು ಮಾರಾಟವಾಗುವುದರಿಂದ ನಗರ ಪ್ರದೇಶದಿಂದ ಬಂದಿರುವ ಜನರಿಗೆ ಯಾವ ಕಾಲಕ್ಕೆ ಯಾವ ಹಣ್ಣು ಬೆಳೆಯುತ್ತವೆ ಎಂಬುದನ್ನು ನೋಡಿದಾಗ ಉದಾಹರಣೆಗೆ ಸೀತಾಫಲ, ನೇರಳೆಹಣ್ಣು ಇತ್ಯಾದಿ ಹಣ್ಣುಗಳು ಅವರ ಅರಿವಿಗೆ ಬರುತ್ತವೆ. ಇಲ್ಲಿ ವ್ಯಾಪಾರ ಮಾಡುವಂತವರು ತಮ್ಮ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ವ್ಯಾಪಾರವನ್ನು ಆರಂಭಿಸುತ್ತಾರೆ. ಬುಟ್ಟಿಯಲ್ಲಿ ಹಣ್ಣುಗಳನ್ನು ಹೊತ್ತು ಮಾರುವಂತವರು ಸಗಟು(ಹೋಲ್‌ಸೆಲ್)ದರದಲ್ಲಿ ತಂದು ಮಾರಾಟ ಮಾಡಿ ಲಾಭ ಪಡೆಯುತ್ತಾರೆ. ಇದಲ್ಲದೇ ಕೆಲವರಿಗೆ ವ್ಯಾಪಾರ ಮಾಡುವ ಹಂಬಲವಿರುವುದರಿಂದ ಆರ್ಥಿಕ ತೊಂದರೆ ಅನುಭವಿಸುತ್ತಿದ್ದರೆ, ಮೊದಲಿಗೆ ಸಗಟು ವ್ಯಾಪಾರಸ್ಥರಲ್ಲಿ ಕೊಂಡು ಬಂದು ವ್ಯಾಪಾರವಾದ ನಂತರ ಹಣವನ್ನು ಕಟ್ಟುವರು. ಇಲ್ಲಿ ನಾವು ಗಮನಿಸುವುದೇನೆಂದರೆ ಸಗಟು ವ್ಯಾಪಾರಿಗಳ ಮಧ್ಯ ಹಾಗೂ ಚಿಲ್ಲರೆ ವ್ಯಾಪಾರಿಗಳಿಗೆ ಕೊಡುಕೊಳ್ಳುವಿಕೆಯಲ್ಲಿ ಯಾವ ರೀತಿಯ ಅನನ್ಯತೆಯ ಸಂಬಂಧವಿರುವುದನ್ನು ತಿಳಿಯುತ್ತದೆ.

ಚಿಲ್ಲರೆ ವ್ಯಾಪಾರಿಗಳು ಸಗಟು ವ್ಯಾಪಾರಿಗಳಲ್ಲಿ ಕೊಂಡುತಂದಿರುವ ಹಣ್ಣುಗಳ ಅಸಲು ದರವನ್ನು ತೆಗೆದು ಇನ್ನುಳಿದ ಲಾಭವನ್ನು ಗಳಿಸುವುದರ ಸಲುವಾಗಿ ಜಾತ್ರೆಯಲ್ಲಿ ಎಲ್ಲಾ ಕಡೆ ಸಂಚರಿಸಿ ವ್ಯಾಪಾರ ಮಾಡುತ್ತಾರೆ. ಸ್ವತಃ ತಮ್ಮದೇ ಮಾಲ್ ಆಗಿದ್ದರೆ ಅಥವಾ ವ್ಯವಹಾರದಿಂದ ಸ್ವಲ್ಪ ಪ್ರಬಲವಾಗಿದ್ದರೆ, ಆರ್ಥಿಕತೆಯಲ್ಲಿ ಯಾವುದೇ ಒತ್ತಡವಿಲ್ಲದವರು ಜಾತ್ರೆಯಲ್ಲಿ ವ್ಯಾಪಾರಕ್ಕೆ ಒಂದು ಸ್ಥಳವನ್ನು ಗೊತ್ತು ಮಾಡಿಕೊಂಡು ವ್ಯಾಪಾರವನ್ನು ಪ್ರಾರಂಭಿಸುತ್ತಾರೆ. ಇಂತಹ ಜಾತ್ರೆಯಲ್ಲಿ ವ್ಯಾಪಾರದ ಹಲವಾರು ಮುಖಗಳು ಕಂಡುಬರುತ್ತವೆ. ಉದಾಹರಣೆಗೆ ತಲೆಯ ಮೇಲೆ ಬುಟ್ಟಿಯನ್ನು ಹೊತ್ತು ಮಾರುವವರು, ಒಂದೇ ಸ್ಥಳದಲ್ಲಿ ಹಲವಾರು ಹಣ್ಣುಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಜೋಡಿಸಿಕೊಂಡು ವ್ಯಾಪಾರ ಮಾಡುವವರು, ಕೆಲವೊಬ್ಬರು ನೆಲದ ಮೇಲೆ ಹಾಳಿ ಚೀಲವನ್ನು ಹಾಸಿಕೊಂಡು ಫಲಗಳನ್ನು ಇಟ್ಟು ಮಾರುವಂತವರು ಹಾಗೂ ನಾಲ್ಕು ಚಕ್ರದ ತಳ್ಳುವ ಗಾಡಿಯಲ್ಲಿ ಇಟ್ಟುಕೊಂಡವರು, ಗೂಡ್ಸ್ ಗಾಡಿಯಲ್ಲಿ ಮಾರುವಂತಹ ವ್ಯಾಪಾರಸ್ಥರು ಕಂಡುಬರುತ್ತಾರೆ. ಇವರ ವ್ಯವಹಾರದ ಕ್ರಮವನ್ನು ಗಮನಿಸಿದಾಗ ಯಾವ ಹಣ್ಣುಗಳನ್ನು ಕೇಜಿ ಲೆಕ್ಕದಲ್ಲಿ ಮಾರಾಟ ಮಾಡಬೇಕು, ಯಾವ ಹಣ್ಣುಗಳನ್ನು ಬಿಡಿ ಬಿಡಿಯಾಗಿ ಮಾರಾಟ

ಮಾಡಿದರೆ ವ್ಯಾಪಾರದಲ್ಲಿ ಲಾಭ ಪಡೆಯಬಹುದು, ಎಂದು ಅವರು ತಿಳಿದುಕೊಂಡಿರುತ್ತಾರೆ. ಯಾವ ಯಾವ ಫಲಗಳಿಗೆ ದರವನ್ನು ಹೇಗೆ ನಿಗಧಿ ಮಾಡಬೇಕೆಂಬ ಜ್ಞಾನ ಅವರಿಗಿರುತ್ತದೆ. ಗ್ರಾಹಕರನ್ನು ಯಾವ ರೀತಿ ಮನಸೆಳೆದು ವ್ಯಾಪಾರ ಮಾಡುವಂತೆ ಪುಸಲಾಯಿಸಬೇಕು ಎಂಬ ಕಲೆ ಅವರಲ್ಲಿರುತ್ತದೆ.

ವ್ಯಾಪಾರಸ್ಥರು ಕೆಲವೊಂದು ಹಣ್ಣುಗಳು ಅಲ್ಲೇ ತಿನ್ನುವಂತಹವುಗಳಾಗಿದ್ದರೆ. ಅವುಗಳನ್ನು ತಿನ್ನುವಂತ ಗಿರಾಕಿಗಳಿಗೆ ಇನ್ನೂ ರುಚಿಕರವಾಗಿರಲೆಂದು ಕಲ್ಲಂಗಡಿ, ಪೈನಾಪಲ್, ಇಂತಹವುಗಳಿಗೆ ಖಾರ ಉಪ್ಪು ಸಿಂಪಡಿಸಿಕೊಡುವಂತ ತಂತ್ರವನ್ನು ಬಳಸುತ್ತಿರುವರು. ಇದರಿಂದ ಒಂದು ಪ್ಲೇಟ್ ಹಣ್ಣು ತಿನ್ನಲು ಬಂದಂತಹ ಗಿರಾಕಿಗಳು ಮತ್ತೊಂದು ಪ್ಲೇಟ್‌ನ ಬಯಕೆಯಾಗುವಂತಿತ್ತು, ಎಂದರೂ ತಪ್ಪಾಗಲಾರದು. ಹಣ್ಣಿನ ವ್ಯಾಪಾರಸ್ಥರು ಜಾತ್ರೆಯಲ್ಲಿ ಜನದಟ್ಟಣೆಯಲ್ಲಿ ಎಲ್ಲೋ ಒಂದು ಕಡೆ ನಿಂತು ವ್ಯಾಪಾರ ಪ್ರಾರಂಭಿಸಿದರೆ, ಅಷ್ಟಕಷ್ಟೇ ವ್ಯಾಪಾರವಾಗುತ್ತದೆ ಎಂದು ಜಾತ್ರೆಯಲ್ಲಿ ಅತ್ತ-ಇತ್ತ ತಿರುಗುವಂತ ಜನರನ್ನು ತಮ್ಮ ಕಡೆಗೆ ಗಮನ ಕೇಂದ್ರೀಕರಿಸಲೆಂದು ತಮ್ಮಲ್ಲಿದ್ದಂತ ಹಣ್ಣು ಹಂಪಲುಗಳ ಹೆಸರು ಹಾಗೂ ಅವುಗಳನ್ನು ಮಾರಾಟ ಮಾಡುವುದರ ಕ್ರಮವನ್ನು ಕೂಗುತ್ತಿದ್ದರು. ಇದರಿಂದ ಎಚ್ಚೆತ್ತುಗೊಂಡವರು ಬಂದು ನೋಟಬೀರಿ ಯೋಚಿಸುತ್ತಾರೆ. ಇಲ್ಲಿ ಬಂದಿರುವಂತಹ ವ್ಯಾಪಾರಸ್ಥರಲ್ಲಿ ತಮ್ಮ ಸ್ವಂತ ತೋಟದಲ್ಲಿ ಬೆಳೆದಂತ ಹಣ್ಣು-ಹಂಪಲುಗಳು ಮಾರಾಟದ ಕ್ರಮ ಹಾಗೂ ಪೇಟೆಯಲ್ಲಿ ಕೊಂಡು ತಂದವರ ಹಣ್ಣುಗಳ ಮಾರಾಟದ ಕ್ರಮಕ್ಕೂ ವ್ಯತ್ಯಾಸವನ್ನು ಕಾಣಬಹುದು.

ಹೂವಿನ ಅಂಗಡಿಗಳು ಜಾತ್ರೆಯ ಒಂದು ಭಾಗವಾಗಿ ಕಂಡುಬರುತ್ತವೆ. ಈ ಹೂವಿನ ವ್ಯಾಪಾರಸ್ಥರಲ್ಲಿ ಎರಡು ರೀತಿಯ ವ್ಯಾಪಾರಸ್ಥರನ್ನು ಗುರುತಿಸಬಹುದು. ಒಂದೇ ಸ್ಥಳದಲ್ಲಿ ಒಂದು ತಾತ್ಕಾಲಿಕ ಅಂಗಡಿಯ ರೀತಿ ಕಟ್ಟಿಕೊಂಡು ವ್ಯಾಪಾರ ಮಾಡುವಂತವರು. ಇನ್ನೊಬ್ಬರು ಬುಟ್ಟಿಯಲ್ಲಿ ಹೂವುಗಳನ್ನು ತುಂಬಿಕೊಂಡು ಜನರು ಇದ್ದಲ್ಲಿಗೆ ಹೋಗಿ ಅಥವಾ ಸಂಚರಿಸಿ ವ್ಯಾಪಾರ ಮಾಡುವಂತವರು. ಇವರು ಯಾವುದೇ ರೀತಿಯ ವ್ಯಾಪಾರಸ್ಥರಿದ್ದರೂ ಪರವಾಗಿಲ್ಲ. ಇವರೂ ಸಹ ಜಾತ್ರೆಯ ಒಂದು ಭಾಗವಾಗಿ ಪರಿಣಮಿಸುತ್ತಾರೆ. ದೇವರಿಂದ ಹಿಡಿದು ಜನಗಳವರೆಗೂ ಹೂವುಗಳು ಪ್ರಾಮುಖ್ಯತೆ ಪಡೆದುಕೊಂಡಿವೆ. ದೇವರ ಪೂಜಾ ಸಂದರ್ಭದಲ್ಲಿ ಪುಷ್ಪಾರ್ಚನೆಗೆ, ಪಲ್ಲಕ್ಕಿ ಅಲಂಕಾರಕ್ಕೆ, ಮಳ್ಳಯ್ಯಜ್ಜ-ವಗ್ಗಪ್ಪರಿಗೆ, ಪೂಜಾರಿಗಳಿಗೆ ಮಾಲೆಯನ್ನು ಧರಿಸಲು, ಇವುಗಳ ಅವಶ್ಯಕತೆ ಇರುತ್ತದೆ. ಇದಲ್ಲದೆ ಭಕ್ತರಿಗೆ ತಾವು ನಡೆಸುವ ಹರಕೆ, ಬೇಡಿಕೆಯಂತ ಸಂಪ್ರದಾಯಗಳಾದ ಜವುಳ ಇಳಿಸುವುದು, ದೀಡ್ ನಮಸ್ಕಾರ, ಹಾಗೂ ದೇವಾಲಯಕ್ಕೆ ಕಳಸ, ಕಿರೀಟ, ಗಂಟೆ, ಜಾಗಟೆ ಮುಂತಾದವುಗಳ ಧಾರ್ಮಿಕ ಕ್ರಿಯೆ ಮತ್ತು ದೇಣಿಗೆ ನೀಡುವ ಸಮಯದಲ್ಲಿ ಅವಶ್ಯಕತೆ ಕಂಡುಬರುತ್ತದೆ.

ಜಾತ್ರೆಯ ದಿನಗಳಲ್ಲಿ ಕೆಲವೊಬ್ಬ ಹೂಗಾರರು ಅಲ್ಲಿಯೇ ವಾಸವಾಗಿರುತ್ತಾರೆ. ಕಾರಣ ಇವರು ಬೆಳಗಿನ ವೇಳೆ ಬೇಗನೆ ತಮ್ಮ ಹೂವು ಮಾಲೆಯನ್ನು ಸಿದ್ಧಪಡಿಸಿಕೊಂಡು ಜಾತ್ರೆಗೆ ಬಂದು ಅಲ್ಲಿ ನೆಲೆಸಿರುವಂತ ಭಕ್ತರು ತಂಗಿರುವಂತ ಸ್ಥಳಗಳಿಗೆ ಹೋಗಿ ಮಾರಾಟ ಮಾಡುವವರು. ಇವತ್ತಿನ ದಿನಗಳಲ್ಲಿ ಎಲ್ಲಾ ವ್ಯಾಪಾರಗಳಲ್ಲಿ ಸ್ಪರ್ಧೆ ಇರುವಂತೆ ಈ ಹೂವುಗಾರರ ಸಂಖ್ಯೆಯಲ್ಲೂ ಗಣನೀಯವಾಗಿ ಏರಿಕೆಯು ಜಾತ್ರೆಯ ಸಂದರ್ಭದಲ್ಲಿ ಕಂಡುಬರುತ್ತದೆ. ಇದರಿಂದ ಬಂದಂತ ಹೂವಿನ ವ್ಯಾಪಾರಿಗಳು ನಾಮುಂದು ತಾಮುಂದು ಎಂದು ವ್ಯಾಪಾರದಲ್ಲಿ ತೊಡಗುತ್ತಾರೆ. ಹೀಗೆ ಕೆಲವು ವ್ಯಾಪಾರಿಗಳು ಹೆಚ್ಚಿಗೆ ಹೂವುಗಳನ್ನು ತಂದುಕೊಂಡು ಅವುಗಳನ್ನು ಸೂಕ್ತವಾದ ಸ್ಥಳದಲ್ಲಿ ಸಂಗ್ರಹಿಸಿ ವ್ಯಾಪಾರಕ್ಕೆ ಅಣಿಯಾಗುವರು. ಜಾತ್ರೆಯಲ್ಲಿ ಹಲವಾರು ಜನರು ಸೇರುವುದರಿಂದ ಅವರ ಅಭಿರುಚಿಗೆ ತಕ್ಕಂತೆ ಸಾಧ್ಯವಾದಷ್ಟು ವಿವಿಧ ರೀತಿಯ ಹೂವುಗಳನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಾರೆ.

ಈ ಹೂವು ಮಾರಾಟಗಾರರು ಜಾತ್ರೆಯ ವೇಳೆಯಲ್ಲಿ ತಮ್ಮ ಹತ್ತಿರ ಯಾವ ಯಾವ ಹೂವುಗಳಿವೆ ಎಂದು ಬಾಯಿಂದ ಹೇಳುವುದಲ್ಲದೆ, ತಮ್ಮಲ್ಲಿರುವ ಬುಟ್ಟಿಯನ್ನು ಸಾಧ್ಯವಾದಷ್ಟು ಕೆಳಭಾಗದಲ್ಲಿ ಅಂದರೆ ತಮ್ಮ ಭುಜಕ್ಕೆ ಮತ್ತು ಸೊಂಟಕ್ಕೆ ಆನಿಸಿಕೊಂಡಂತೆ, ಹಾಗೂ ತಮ್ಮ ಮುಂಗೈ ಮೇಲೆ ಹೂವಿನ ಬುಟ್ಟಿ ಇಟ್ಟುಕೊಂಡು ವ್ಯಾಪಾರ ಮಾಡುವರು. ಇವರು ಹೂವಿನ ಬುಟ್ಟಿಯನ್ನು ತೆಗೆದುಕೊಂಡು ಹೂವರೀ... ಹೂವಾ... ಹೂವುರೀ... ಹೂವ... ಕನಕಾಂಬರಿ, ಮಲ್ಲಿಗೆ, ಗುಲಾಬಿ, ಎಂದು ತಮ್ಮಲ್ಲಿರುವ ಹೂವುಗಳ ಹೆಸರುಗಳನ್ನು ಕೂಗುತ್ತಾ ಹೋಗುವರು. ಕೆಲವೊಂದು ಸಂದರ್ಭದಲ್ಲಿ ಅವರು ಮಾರುವ ಹೂವುಗಳ ಮಾರಾಟದ ದರ ಹೇಳುತ್ತಾ ಹೋಗುತ್ತಾರೆ. ಇದರಿಂದ ಜಾತ್ರೆ ಅಂದ ಮೇಲೆ ಗದ್ದಲ ಸಹಜ. ಆದ್ದರಿಂದ ಗ್ರಾಹಕರು ಹೂವುಗಾರನ ಕಡೆ ಗಮನಹರಿಸಿ ಯಾವ ಯಾವ ಹೂವುಗಳಿವೆ ಎಂಬುದನ್ನು ನೋಡಿ, ಕೇಳಿಸಿಕೊಂಡು, ತಿಳಿಯುವರು. ಆದರೆ ಇನ್ನೂ ಕೆಲವರು ಕೆಲಸದಲ್ಲಿ ತೊಡಗಿದ್ದಾಗ ಅಥವಾ ಜಾತ್ರೆ ಗದ್ದಲದಲ್ಲಿ ಹೂಗಾರರು ಕಾಣದೆ ಇದ್ದಾಗ ಅವರ ಧ್ವನಿಯ ಮೂಲಕವೇ ಅವರಲ್ಲಿದ್ದ ಎಲ್ಲಾ ಹೂವುಗಳ ಹೆಸರು ಹಾಗೂ ದರವೂ ಗೊತ್ತಾಗುತ್ತದೆ. ಗ್ರಾಹಕರು ಜಾಗೃತರಾಗಿ ಅವಶ್ಯಕತೆ ಇದ್ದರೆ ಕೊಂಡುಕೊಳ್ಳುವುದಕ್ಕೆ ಬರುವರು.

ಹೂವು ವ್ಯಾಪಾರಸ್ಥರಿಗೆ ಹಲವಾರು ಗಿರಾಕಿಗಳು ಬರುವುದಕ್ಕೆ, ಈ ರೀತಿ ಕೂಗಿ ಕರೆಯುವುದರಿಂದ ಆತನಿಗೆ ವ್ಯಾಪಾರ ಕುಲಾಯಿಸುತ್ತದೆ. ಸಂಚಾರಿ ವ್ಯಾಪಾರಿಯು ತನ್ನ ಬುಟ್ಟಿಯಲ್ಲಿ ಗುಲಾಬಿ ಹೂವುಗಳನ್ನು ವಿವಿಧ ವಿನ್ಯಾಸ ಕ್ರಮದಲ್ಲಿ ಇಡುವ ಪ್ರಮುಖ ಉದ್ದೇಶವೆಂದರೆ, ಗ್ರಾಹಕರಿಗೆ ಆಕರ್ಷಕವಾಗಿ ಗೋಚರವಾಗಬೇಕು. ಹಾಗೂ ಇದರಿಂದ ಅವರಿಗೆ ಕೊಳ್ಳುವಂತ ಮನಸ್ಥಿತಿ ತಾಳಲಿ ಎಂಬುದು ವ್ಯಾಪಾರಸ್ಥನ ಮನೋಭಾವನೆ. ಈ ಸಂಚಾರಿ ವ್ಯಾಪಾರಸ್ಥರು ತಮ್ಮ ಹೂವುಗಳ ಮಾರಾಟದ ದರವನ್ನು ಏರುಪೇರು ಮಾಡುವುದು ಕಂಡುಬರುತ್ತದೆ. ಇವರು

ಗಿರಾಕಿ ಶ್ರೀಮಂತರ ರೀತಿ ಕಂಡರೆ ಸ್ವಲ್ಪ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಲು ಮುಂದಾಗುತ್ತಾರೆ. ಅದೇ ಹೂವುಗಳನ್ನು ಬಡತನದ ರೀತಿಯ ಗಿರಾಕಿಗಳು ಕಂಡರೆ ಅವರಿಗೆ ಕಡಿಮೆ ದರದಲ್ಲಿ ಕೊಡುತ್ತಾರೆ. ಅಂದರೆ ತಾವು ನಷ್ಟವನ್ನು ಮಾಡಿಕೊಂಡು ಮಾರುವುದಿಲ್ಲ. ಇದರಿಂದ ಕೆಲವು ವ್ಯಾಪಾರಸ್ಥರು ಬೆಲೆಯಲ್ಲಿ ಜನರಿಗೆ ತಾರತಮ್ಯ ಮಾಡುವಂತದ್ದು ಕಂಡುಬರುತ್ತದೆ.

ಜಾತ್ರೆ ಸಮಯದಲ್ಲಿ ಹೂವುಗಾರರು ಒಂದು ಗೊತ್ತು ಮಾಡಿದ ಸ್ಥಳದಲ್ಲಿ ತಮ್ಮ ತಾತ್ಕಾಲಿಕವಾದ ಅಂಗಡಿಯನ್ನು ಹಾಕುತ್ತಾರೆ. ಗ್ರಾಹಕರ ಆಸಕ್ತಿಗೆ ಅನುಗುಣವಾಗಿ ಹೂವುಗಳನ್ನು ತಂದಿರುವರು. ಜಾತ್ರೆಗೆ ವಿವಿಧ ರೀತಿಯ ಭಕ್ತರು ಬರುವುದರಿಂದ ಹಲವು ರೀತಿಯ ಹೂವುಗಳಿಂದ ಮಾಲೆ ತಯಾರಿಸಿ ಪ್ರೇಕ್ಷಕರಿಗೆ ಕಾಣುವಂತೆ ತಮ್ಮ ಅಂಗಡಿಯ ಮುಂದೆ ನೇತುಹಾಕಿರುತ್ತಾರೆ. ಈ ಮಾಲೆಗಳಿಗೆ ಹೆಚ್ಚಿನ ಬೇಡಿಕೆ ಬರಲೆಂದು ಅವುಗಳಿಗೆ ಮಿಂಚಿನ ಜರಿಯನ್ನು ಹಾಗೂ ಬಣ್ಣ ಬಣ್ಣದ ಮಿಂಚಿನ ಹಾಳೆಯಿಂದ ತಯಾರಿಸಿದ ಹೂವುಗಳನ್ನು ಎರಡು–ಮೂರು ಹೂಗಳನ್ನು ಮಾಲೆಯಲ್ಲಿ ಪೋಣಿಸಿರುತ್ತಾರೆ. ಅಂದರೆ ಇಂಥ ಮಾಲೆಗಳಿಗೆ ಆಕರ್ಷಕವಾಗಿ ತಯಾರಿಸಿದ ಪ್ಲಾಸ್ಟಿಕ್ ಹಾಳೆಯ ಹಾಗೂ ವಿವಿಧ ಬಣ್ಣದ ಮಿಂಚಿನ ಜರಿಯ ಸೌಂದರ್ಯದ ಸ್ಪರ್ಶವನ್ನು ನೀಡುವರು. ಹೀಗೆ ಒಂದೇ ಸ್ಥಳದಲ್ಲಿ ತಟಸ್ಥವಾಗಿರುವ ಅಂಗಡಿಗಳು ವ್ಯವಹಾರದ ದೃಷ್ಟಿಯಿಂದ ಗ್ರಾಹಕರಿಗೆ ಯೋಗ್ಯವಾಗಿವೆ. ಒಂದು ನಿಗದಿತ ಸ್ಥಳವಾಗಿರುವುದರಿಂದ ಗ್ರಾಹಕರು ಹೂವುಗಳಿಗೆ ತಿರುಗುವುದು ನಿಲ್ಲುತ್ತದೆ. ಹಾಗೂ ಹೂವುಗಳ ದರದಲ್ಲಿ ಒಂದು ಗಿರಾಕಿಯಿಂದ ಇನ್ನೊಂದು ಗಿರಾಗೆ ಹೆಚ್ಚು ಕಡಿಮೆ ಮಾಡುವುದು ತಟಸ್ಥವಾಗುತ್ತದೆ. ಹೊತ್ತು ಮಾರುವ ಹೂವುಗಾರರಿಗಿಂತ ಈ ಅಂಗಡಿಗಳ ವ್ಯಾಪಾರ ಹೆಚ್ಚು ಸುಧಾರಿಸುತ್ತದೆ ಅಂದರು ತಪ್ಪಾಗಲಿಕ್ಕಿಲ್ಲ. ಏಕೆಂದರೆ ಗ್ರಾಹಕರು ಪೂರ್ವಾಗ್ರಹ ಪೀಡಿತರಂತೆ ಹೊತ್ತು ಮಾರುವ ವ್ಯಾಪಾರಿಗಳು ದರದಲ್ಲಿ ಹೆಚ್ಚು ಕಡಿಮೆ ಮಾಡುತ್ತಾರೆ ಎಂಬ ಮನೋಭಾವನೆಯಿಂದ ಅಂತಹವರಲ್ಲಿ ತೆಗೆದುಕೊಳ್ಳುವುದಿಲ್ಲ. ಇರುವಂತ ಇಂತಹ ಅಂಗಡಿಗಳ ಮೊರೆ ಹೋಗುತ್ತಾರೆ.

೫.೩.೬.ತೆಂಗಿನಕಾಯಿ ವರ್ತಕರು : (Coconut Traders)

ಇವರನ್ನು ಜಾತ್ರೆಯ ಕೇಂದ್ರ ಬಿಂದು ವ್ಯಾಪಾರಸ್ಥರೆಂದರೆ ತಪ್ಪಾಗಲಾರದು. ಏಕೆಂದರೆ ಜಾತ್ರೆಗೆ ಬಂದಿರುವ ಭಕ್ತರು ಲೋಕಾರೂಢಿಯಂತೆ ದೇವರಿಗೆ ಕಾಯಿ ಕರ್ಪೂರ ಅರ್ಪಿಸುವ ಪದ್ಧತಿಯನ್ನು ಅನುಸರಿಸುತ್ತಾರೆ. ಅದರಂತೆ ಈ ಕ್ಷೇತ್ರದಲ್ಲಿ ತೆಂಗಿನಕಾಯಿ ವ್ಯಾಪಾರಸ್ಥರು ಗುಡಿಯ ಬರುವ ಮಾರ್ಗದಿಂದ ಹಿಡಿದು ಮುಖ್ಯ ಗುಡಿಯವರೆಗೂ ಎಡ ಹಾಗೂ ಬಲಭಾಗದಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ವ್ಯಾಪಾರಸ್ಥರು ಕೂಡಿ ಕೊಂಡಿರುತ್ತಾರೆ. ತೆಂಗಿನಕಾಯಿ ವ್ಯಾಪಾರವನ್ನು ಮಹಿಳೆಯರು ಪುರುಷರು ಎಂಬ ತಾರತಮ್ಯವಿಲ್ಲದೆ ಈ ವ್ಯಾಪಾರದಲ್ಲಿ ಭಾಗಿಯಾಗುತ್ತಾರೆ. ಜಾತ್ರೆಯಲ್ಲಿ ಕಾಯಿ ವ್ಯಾಪಾರಸ್ಥರೆಲ್ಲ ಬಾಜು ಬಾಜಿನಲ್ಲಿ ಮತ್ತು ಎದುರು ಬದರು ಕುಳಿತುಕೊಂಡಿರುತ್ತಾರೆ. ಇನ್ನೂ ಕೆಲವೊಂದು ಕಡೆ ಸ್ಟೇಷನರಿ ಅಂಗಡಿಯ ಪಕ್ಕದಲ್ಲಿ, ಹಣ್ಣು

ವ್ಯಾಪಾರಸ್ಥರ ಪಕ್ಕದಲ್ಲಿ, ಹಾಗೂ ಪಾನಿಪುರಿ ಅಂಗಡಿಗಳ ಪಕ್ಕದಲ್ಲಿ, ವ್ಯಾಪಾರಸ್ಥರು ಕುಳಿತಿರುತ್ತಾರೆ. ಅಂದರೆ ಒಟ್ಟಾರೆ ಗುಡಿಗೆ ಹೋಗುವ ಮಾರ್ಗದಲ್ಲಿ ಎಲ್ಲೆಲ್ಲಿ ಖಾಲಿ ಸ್ಥಳ ಸಿಗುತ್ತದೆ. ಅಲ್ಲಿ ತಮ್ಮ ಕಾಯಿ ಅಂಗಡಿ ಹಚ್ಚಿರುತ್ತಾರೆ. ಈ ಅಂಗಡಿಗಳು ಏಕ ವ್ಯಕ್ತಿಯಿಂದ ಕೂಡಿ ಮೂರು ಜನಗಳು ನಡೆಸುವಂತ ಅಂಗಡಿಗಳಿವೆ. ಇವರು ತಮ್ಮ ವ್ಯಾಪಾರದ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ತಾವು ಬಿಸಿಲಿನಿಂದ ರಕ್ಷಣೆ ಪಡೆಯಲು ದೊಡ್ಡ ದೊಡ್ಡ ಮತ್ತು ಚಿಕ್ಕ ಚಿಕ್ಕ ಛತ್ರಿಗಳನ್ನು ಹಾಗೂ ಕೆಲವೊಬ್ಬರು ಕಂಬಗಳನ್ನು ನಡುಹಾಕಿ ಚಾದರ ಮತ್ತು ತಾಡಪತ್ರಿಗಳಿಂದ ನೆರಳು ಮಾಡಿಕೊಂಡಿರುತ್ತಾರೆ. ಕೆಲವರು ತಲೆಯ ಮೇಲೆ ವಸ್ತ್ರವನ್ನು ಹಾಕಿಕೊಂಡು ಬಿಸಿಲಲ್ಲಿ ವ್ಯಾಪಾರ ಪ್ರಾರಂಭಿಸುವರು. ತೆಂಗಿನಕಾಯಿಗಳ ದರದ ಅನುಕೂಲಕ್ಕಾಗಿ ಅವುಗಳನ್ನು ಒಂದೊಂದು ಗುಂಪುಗಳನ್ನಾಗಿ ವಿಂಗಡಿಸಿಕೊಂಡಿರುವರು. ಹನ್ನೆರಡು ರೂಪಾಯಿಗಳಿಂದ, ಹದಿನೈದು ರೂಪಾಯಿಗೊಂದರಂತೆ ಜೋಡಿಗೆ ಇಪ್ಪತ್ತೈದು–ಮೂವತ್ತೈದು, ಐವತ್ತು ರೂಪಾಯಿಗಳಂತೆ ಮಾರಾಟ ಮಾಡುವರು.

ಹನ್ನೆರಡು ರೂಪಾಯಿಗಳಿಗೆ ಊದುಬತ್ತಿ, ಕರ್ಪೂರ, ಕುಂಕುಮ, ಇತ್ಯಾದಿ ಪೂಜಾ ವಸ್ತುಗಳನ್ನು ಕೊಡುವುದರೊಂದಿಗೆ ಒಟ್ಟು ಇಪ್ಪತ್ತು ರೂಪಾಯಿಗಳನ್ನು ಮಾಡುವರು. ಜೋಡಿಗೆ ಇಪ್ಪತ್ತೈದು, ಮೂವತ್ತೈದು, ರೂಪಾಯಿಗಳಂತೆ ಮಾರುವ ಕಾಯಿಗಳೊಂದಿಗೆ ಕುಂಕುಮ, ಕರ್ಪೂರ, ಊದುಬತ್ತಿ, ಕಲ್ಲುಸಕ್ಕರೆ, ಬಾಳೆಹಣ್ಣು, ಇತ್ಯಾದಿಗಳನ್ನು ಸೇರಿಸಿ ಒಟ್ಟು ಐವತ್ತು ರೂಪಾಯಿ ದರ ನಿಗಧಿಮಾಡುವರು. ಇತ್ತೀಚಿಗೆ ಕಾಯಿ ವ್ಯಾಪಾರಸ್ಥರು ಮಿಶ್ರ ವ್ಯಾಪಾರಿಗಳಾಗಿ ಪರಿವರ್ತನೆ ಹೊಂದಿದ್ದಾರೆ. ತಾವು ಕಾಯಿ ವ್ಯಾಪಾರದೊಂದಿಗೆ ಲಿಂಬೆ ಹಣ್ಣು ಬಾಳೆಹಣ್ಣು ಸ್ಟೇಷನರಿ ವಸ್ತುಗಳು, ಕೈ ಕಟ್ಟುಗಳು, ರುದ್ರಾಕ್ಷಿ ಮಾಲೆಗಳು, ಜಪದ ಮಾಲೆಗಳು, ತುಳಸಿ ಮಣಿಯ ಸರಗಳು, ಚಿಕ್ಕ ಚಿಕ್ಕ ಯಂತ್ರಗಳು, ವಿವಿಧ ದೇವರುಗಳ ಭಾವಚಿತ್ರಗಳು, ವಿಭೂತಿ, ಕುಂಕುಮ, ಭಂಡಾರ, ತಾಮ್ರ, ಹಿತ್ತಾಳೆ, ಲೋಹದಿಂದ ತಯಾರಿಸಿದ ಪೂಜಾ ಸಾಮಗ್ರಿಗಳು, ಮಿಂಚಿನ ಜರಿಗಳು, ಎಲ್ಲೋ ಒಬ್ಬಿಬ್ಬರು ಹೂವುಗಳನ್ನು ಮಾರುವರು.

ಜಾತ್ರೆಗೆ ಬರುವಂತ ಹಲವಾರು ಭಕ್ತರು ಹರಕೆ ಬೇಡಿಕೆಗಳನ್ನು ಇಟ್ಟುಕೊಂಡು ಬಂದಿರುತ್ತಾರೆ. ಇದಕ್ಕೆ ಪೂರಕವಾಗಿ ದೈವವು ಇಂತಹ ಆಸೆಗಳನ್ನು ಈಡೇರಿಸಿದರೆ ಅಥವಾ ಈಡೇರಿಸುವುದಾದರೆ ಭಕ್ತರು ತೆಂಗಿನಕಾಯಿಯನ್ನು ಒಡಿಸುತ್ತಾರೆ. ತಮ್ಮ ಬೇಡಿಕೆಗಳು ಏನಾದರೂ ಇದ್ದರೆ ಈಡೇರಿಸುವಂತೆ ಆತನಿಗೆ ಬೇಡಿಕೊಂಡು ಹರಕೆ ಕಾಯಿಯಾಗಿ ಕಟ್ಟಿ ಹೋಗುತ್ತಾರೆ. ಕೆಲವೊಬ್ಬರು ದೈವಭಕ್ತಿಯಿಂದ ತೆಂಗಿನಕಾಯನ್ನು ಒಡಿಸಿಕೊಂಡು ಹೋಗುವವರು ಇದ್ದಾರೆ. ಆದ್ದರಿಂದ ಎಲ್ಲಾ ಭಕ್ತರಿಗೆ ಸಹಸಂಬಂಧ ಹೊಂದುವಂತೆ ಈ ಕಾಯಿ ವ್ಯಾಪಾರಸ್ಥರು ವ್ಯಾಪಾರದಲ್ಲಿ ತೊಡಗಿರುವರು. ವೈಜ್ಞಾನಿಕವಾಗಿ ಕಾಯಿ ಒಡೆಸುವುದಕ್ಕೆ ಹಲವರು ಕಾರಣಗಳಿದ್ದರೂ, ಭಕ್ತರು ಧಾರ್ಮಿಕ ಭಕ್ತಿಗೆ ಒಳಗಾಗಿ ಈ ಪದ್ಧತಿಯನ್ನು ಅನುಸರಿಸುತ್ತಿರುವುದು ಕಂಡುಬರುತ್ತದೆ. ಕಾಯಿ ವ್ಯಾಪಾರಸ್ಥರು

ಹಾಗೂ ಇತರ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಸ್ಥರ ಮಧ್ಯೆ ಸಂಬಂಧವು ಅನನ್ಯತೆಯಿಂದ ಕೂಡಿರುತ್ತದೆ ಎಂಬುದು ತಿಳಿಯುತ್ತದೆ. ಈ ವ್ಯಾಪಾರದಲ್ಲಿಯೂ ಇತ್ತೀಚಿಗೆ ಹೆಚ್ಚಿನ ಸ್ಪರ್ಧೆ ಕಂಡುಬರುವುದರಿಂದ ತಮಗೆ ಸಿಕ್ಕ ಸ್ಥಳ ಚಿಕ್ಕದಾದರೂ ಸಹ ಅಲ್ಲಿಯೇ ಕಾಯಿ ಮಾರಾಟ ಪ್ರಾರಂಭಿಸುವರು. ಇಲ್ಲಿ ಮಹಿಳೆಯರು ಪುರುಷರು ಕಾಯಿ ವ್ಯಾಪಾರದಲ್ಲಿ ತೊಡಗಿರುವುದನ್ನು ಗಮನಿಸಿದರೆ, ಮಹಿಳೆ ತನ್ನ ಕುಟುಂಬ ನಿರ್ವಹಣೆ ಜವಾಬ್ದಾರಿ ಹೊಂದಿದ್ದಾಳೆ. ಅದನ್ನು ಸಾಕುವಂತ ಮುಖ್ಯ ಜವಾಬ್ದಾರಿ ಹೊತ್ತುಕೊಂಡಿದ್ದಾಳೆ ಎಂದು ಭಾವಿಸಬಹುದು. ಇವತ್ತು 'ಮಹಿಳೆ ಮನೆಯ ಅಂಗಳದಿಂದ ಮಂಗಳನ ಅಂಗಳದವರೆಗೂ ಕಾಲಿಡುತ್ತಿರುವುದರಿಂದ' ಎಲ್ಲಾ ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುವುದು ತಿಳಿಯುತ್ತದೆ.

ತೆಂಗಿನಕಾಯಿ ವ್ಯಾಪಾರಸ್ಥರು ತಮಗೆ ಎಷ್ಟು ಕಷ್ಟ ಬಂದರೂ ಪರವಾಗಿಲ್ಲ. ನಮಗೆ ವ್ಯಾಪಾರ ಮಾತ್ರ ಚೆನ್ನಾಗಿದ್ದರೆ ಸಾಕು ಎನ್ನುವಂತಹ ಸ್ಥಿತಿಯಲ್ಲಿದ್ದರು ತಮ್ಮ ವ್ಯಾಪಾರಕ್ಕೆ ಸುಸಜ್ಜಿತವಾದ ವ್ಯವಸ್ಥೆ ಇರದಿದ್ದರೂ ಇದ್ದುದ್ದರಲ್ಲಿ ತಮ್ಮ ವ್ಯಾಪಾರವನ್ನು ಸಂತೋಷದಿಂದ ಕೈಗೊಂಡಿರುವರು. ಗ್ರಾಹಕರೊಂದಿಗೆ ವ್ಯಾಪಾರ ಮಾಡುವಾಗ ಗೊಂದಲಯಾಗದಿರಲೆಂದು ಆಯಾ ಬೆಲೆಗಳಿಗೆ ಅನುಗುಣವಾದಂತ ಕಾಯಿಗಳನ್ನು ಒಂದೊಂದು ಗುಂಪುಗಳನ್ನಾಗಿ ವಿಂಗಡಿಸಿಕೊಂಡಿರುವರು. ಜಾತ್ರೆಯು ಹೆಚ್ಚು ಜನಭರಿತವಾದ್ದರಿಂದ ಹೆಚ್ಚು ಗ್ರಾಹಕರನ್ನು ಪಡೆಯುವುದಕ್ಕಾಗಿ ಸುಲಭವಾದ ರೀತಿಯಲ್ಲಿ ಕಾಯಿಗಳ ಬೆಲೆಯನ್ನು ತಿಳಿಸಲು ಈ ಕ್ರಮವನ್ನು ಅನುಸರಿಸುತ್ತಿದ್ದಾರೆ. ಅವುಗಳ ಗ್ಯಾತ್ರಕ್ಕೆ ತಕ್ಕಂತೆ ಮತ್ತು ಗುಣಮಟ್ಟಕ್ಕೆ ಸರಿಹೊಂದುವಂತಹ ದರವನ್ನು ನಿಗಧಿ ಪಡಿಸಿದ್ದರು. ವ್ಯಾಪಾರಸ್ಥರಲ್ಲಿ ವಿವಿಧ ರೀತಿಯ ಮನೋಭಾವನೆವುಳ್ಳಂತವರು ಇರುತ್ತಾರೆ. ಅಂತವರಲ್ಲಿ ಕೆಲವರು ವ್ಯಾಪಾರನೂ ಆಗಬೇಕು, ಬಿಸಿಲಿನಿಂದ ಬಳಲಲೂ ಬಾರದೆಂದು, ತಾವು ಕುಳಿತುಕೊಳ್ಳುವ ಸ್ಥಳದಲ್ಲಿ ಒಂದು ಕಬ್ಬಿಣದ ಸಲಾಕೆ ಅಥವಾ ಕೋಲನ್ನು ಭೂಮಿಯಲ್ಲಿ ನೆಟ್ಟುಹಾಕಿ, ಅದಕ್ಕೆ ಛತ್ರಿಯನ್ನು ಕಟ್ಟಿಕೊಂಡು ನೆರಳಿನಲ್ಲಿ ಆಶ್ರಯವನ್ನು ಪಡೆದಿರುತ್ತಾರೆ. ಇನ್ನ ಕೆಲವರು ತಲೆಯ ಮೇಲೆ ವಸ್ತ್ರ, ಟೋಪಿಯನ್ನು ಹಾಕಿಕೊಂಡು ವ್ಯಾಪಾರದಲ್ಲಿ ತೊಡಗಿರುತ್ತಾರೆ.

ಯಾವ ವಿವಿಧ ಕಾಯಿಗಳಿಗೆ ಯಾವ ಬೆಲೆಯನ್ನು ನಿಗಧಿ ಪಡಿಸಬೇಕೆಂಬ ಅರಿವನ್ನು ಅವರು ಹೊಂದಿದ್ದರು. ಅವರ ವ್ಯಾಪಾರದ ಜಾಣ್ಮೆ ಎಂಥದೆಂದರೆ, ಒಂದೇ ಕಾಯಿ ತೆಗೆದುಕೊಂಡು ಹೋಗಲು ಬಂದ ಗ್ರಾಹಕರಿಗೆ ಇನ್ನೊಂದು ಖರೀದಿಸುವಂತೆ ರಿಯಾಯಿತಿ ದರವನ್ನು ತಿಳಿಸುತ್ತಿದ್ದರು. ಒಂದು ಕಾಯಿಗೆ ಹನ್ನೆರಡು ರೂಪಾಯಿಯಾದರೆ ಎರಡು ಕಾಯಿ ತೆಗೆದುಕೊಂಡರೆ ಇಪ್ಪತ್ತು ರೂಪಾಯಿ ಎಂದು ರಿಯಾಯಿತಿ ದರದಲ್ಲಿ ಆಸೆಯನ್ನು ಹುಟ್ಟಿಸುತ್ತಿದರು. ಬರೀ ತೆಂಗಿನಕಾಯಿಗೋಸ್ಕರ ವ್ಯಾಪಾರಕ್ಕೆ ಕುಳಿತರೆ ವ್ಯಾಪಾರ ಗೀಟುವುದಿಲ್ಲ ಎಂದು ಅದರ ಜೊತೆ ಪೂಜಾ ಪದಾರ್ಥಗಳನ್ನು, ಹಣ್ಣುಗಳನ್ನು ಸೇರಿಸಿ ಒಂದು ಜೋಡಿಗೆ ಐವತ್ತು ರೂಪಾಯಿಗಳಲ್ಲಿ ಮಾರಾಟಕ್ಕೆ ಪ್ರಾರಂಭಿಸಿದ್ದರು. ಇನ್ನಿತರ ಕಾಯಿ ವ್ಯಾಪಾರಸ್ಥರನ್ನು ಗಮನಿಸಿದಾಗ ಸ್ಪೇಷಸರಿ ಸಾಮಗ್ರಿಗಳು, ಕೈಕಟ್ಟು, ರುದ್ರಾಕ್ಷಿ

ಮಾಲೆ, ಚಿಕ್ಕ ಚಿಕ್ಕ ದೇವರುಗಳ ಮುಖವಾಡಗಳು, ವಿಭೂತಿಗಳು, ಹೂವುಗಳು ಹೀಗೆ ಇವೆಲ್ಲ ಇಡುವುದರಿಂದ ಗ್ರಾಹಕರೊಂದಿಗೆ ಬಂದಿರುವಂತಹ ಮಕ್ಕಳು ಹಾಗೂ ಇತರರಿಗೆ ಅವಶ್ಯಕವಾದಂತ ವಸ್ತುಗಳನ್ನು ಖರೀದಿಸಲಿ ಎಂದು ಮಾಡುತ್ತಿದ್ದರು. ಇದರಿಂದ ಇನ್ನು ಹೆಚ್ಚು ಹಣ ಸಂಪಾದಿಸಬಹುದು ಎಂಬ ನಂಬಿಕೆ ಇವರಿಗೆ ಇತ್ತು. ಗ್ರಾಹಕರು ಕೇವಲ ತೆಂಗಿನಕಾಯಿಗಳನ್ನು ಮಾತ್ರ ಖರೀದಿಗೆ ಬಂದಂತವರಿಗೆ, ಆಧ್ಯಾತ್ಮಿಕತೆಗೆ ಸಂಬಂಧಿಸಿದ ರುದ್ರಾಕ್ಷಿಮಾಲೆ, ಜಪಮಾಲೆ, ಯಂತ್ರಗಳು, ವಿವಿಧ ದೇವರುಗಳ ಭಾವಚಿತ್ರಗಳು, ಪರಿಚಯವಾಗುತ್ತಿದ್ದವು. ಕೆಲವರಿಗೆ ಕೊಳ್ಳುವಂತಹ ಆಸಕ್ತಿಯೂ ಮೂಡಿ ಖರೀದಿ ಮಾಡುವವರು ಇದ್ದರು.

೫.೩.೭.ತಂಪು ಪಾನೀಯ ವರ್ತಕರು : (Cold drink Merchant)

ಜಾತ್ರೆಯಲ್ಲಿ ಎಲ್ಲಾ ವರ್ತಕರು ಭಾಗಿಯಾಗುವಂತೆ ಈ ತಂಪು ಪಾನೀಯ ವರ್ತಕರು ಅಂಗಡಿಗಳನ್ನು ಹಾಕಿರುತ್ತಾರೆ. ಈ ಪಾನೀಯಗಳನ್ನು ವಿವಿಧ ವಿಧಾನಗಳ ಮೂಲಕ ಮಾರಾಟ ಮಾಡುತ್ತಾರೆ. ಒಂದು ಸ್ಥಳದಲ್ಲಿ ಮೂರು ದಿನಗಳವರೆಗೂ ಸ್ಥಿರವಾಗಿ ಅಂಗಡಿಯನ್ನು ಹಾಕಿರುವರು. ದ್ವಿಚಕ್ರ, ನಾಲ್ಕುಚಕ್ರದ ತಳ್ಳುವ ಗಾಡಿಯ ಮೂಲಕ ಹಾಗೂ ತಲೆ ಮತ್ತು ಹೆಗಲಮೇಲೆ ಹೊತ್ತು ಸಂಚಾರ ಮಾಡಿ ಮಾರುವವರು ಕಂಡುಬರುತ್ತಾರೆ. ಇವರು ಮಾರುವಂತ ತಂಪುಪಾನೀಯಗಳಾದ ಶರಬತ್, ಸೋಡಾ, ಲಸ್ಸಿ, ಕೋಕೋಕೋಲಾ, ಐಸ್‌ಕ್ರೀಮ್, ಪೆಪ್ಸಿ, ಮಜ್ಜಿಗೆ, ಎಳೆನೀರು, ವಿವಿಧ ಹಣ್ಣುಗಳ ಜ್ಯೂಸ್, ಕಬ್ಬಿನಹಾಲು, ತಂಪಾದ ನೀರು ದೊರೆಯುತ್ತವೆ. ಇವುಗಳನ್ನು ಜಾತ್ರೆಯಲ್ಲಿ ಗಮನಿಸಿದಂತೆ ಅವುಗಳ ಸ್ಥಿತಿಯನ್ನು ಇಲ್ಲಿ ನೋಡಲಾಗಿದೆ.

ಕೋಲ್ಡ್ರಿಂಕ್ಸ್ : ವರ್ತಕರು ತಮ್ಮ ಅಂಗಡಿಯಲ್ಲಿ ಜಾತ್ರೆಗೆ ಬರುವಂತಹ ವಿವಿಧ ಯಾತ್ರಿಕರ ಅಭಿರುಚಿಗೆ ತಕ್ಕಂತೆ ತಂಪು ಪಾನೀಯಗಳನ್ನು ಸಿದ್ಧಪಡಿಸಿರುತ್ತಾರೆ. ಅಂಥವುಗಳಲ್ಲಿ ಸೋಡಾ, ಶರಬತ್, ಲಸ್ಸಿ, ಬಾದಾಮಿ ಹಾಲು, ಕಾಕಂಬಿ ರಸ, ಮಜ್ಜಿಗೆ, ಪೆಪ್ಸಿ, ಥಮ್ಸ್‌ಅಪ್, ತಂಪಾದ ನೀರಿನ ಪ್ಯಾಕೆಟ್‌ಗಳು, ಹಾಗೂ ಬಾಟಲುಗಳು ಒಂದು ಎರಡು ಲೀಟರ್ ವಿಧಾನದಲ್ಲಿ ಲಭ್ಯವಾಗುತ್ತವೆ. ಈ ಎಲ್ಲಾ ತಂಪು ಪಾನೀಯಗಳು ಜಾತ್ರೆಯಲ್ಲಿ ಒಂದೇ ಕಡೆ ಸ್ಥಾಪಿತವಾದ ಅಂಗಡಿಯಲ್ಲಿ ದೊರೆಯುತ್ತವೆ. ಇದೇ ರೀತಿ ತಂಪುಪಾನೀಯ ಮಾರುವಂತ ಚಿಲ್ಲರೆ ವ್ಯಾಪಾರಿಗಳು ಕೆಲವೊಂದು ಮಾತ್ರ ಮಾರುತ್ತಾರೆ. ನಾನು ಜಾತ್ರೆ ಸಂದರ್ಭದಲ್ಲಿ ನೋಡಿದಂತೆ ಬಾಲಕರಿಂದ ಯುವಕರವರೆಗೂ ತಂಪು ಪಾನೀಯಗಳನ್ನು ತಮ್ಮ ಹೆಗಲಮೇಲೆ ಮತ್ತು ತಲೆ ಮೇಲೆ ಹೊತ್ತು ಮಾರುವವರು ಕಂಡುಬರುತ್ತಾರೆ. ಇದಲ್ಲದೆ ನಾಲ್ಕು ಚಕ್ರದ ತಳ್ಳುವ ಗಾಡಿಯಲ್ಲಿ ಸೋಡಾ ಹಾಗೂ ವಿವಿಧ ಬಣ್ಣ ಬಣ್ಣಗಳಿಂದ ತಯಾರಿಸಿದ ಶರಬತ್ ಮಾರಾಟಕ್ಕಿರುತ್ತವೆ. ಇದೇ ತರಹದ ದ್ವಿಚಕ್ರ ಹೊಂದಿರುವ ಪೆಟ್ಟಿಗೆಯಂತೆ ಇರುವ ತಳ್ಳುಗಾಡಿಯಲ್ಲಿ ಐಸ್‌ಕ್ರೀಮ್, ಬಾದಾಮಿ ಹಾಲು, ಮಾರುವಂತದ್ದು ಇರುತ್ತದೆ. ಹುಡುಗರು ತಮ್ಮ ಹೆಗಲು ಹಾಗೂ ತಲೆಯ ಮೇಲೆ ಥರ್ಮೋಕೋಲ್‌ನಂತಹ ಡಬ್ಬಿಗಳಲ್ಲಿ ಐಸ್‌ಕ್ರೀಮ್, ನೀರಿನ ಪಾಕೇಟ್ ಮಾರಾಟಮಾಡುತ್ತಾರೆ.

ಎಲ್ಲೋ ಒಬ್ಬಿಬ್ಬರು ಮಹಿಳೆಯರು ಈ ಶರಬತ್ ಮಾರುವುದರಲ್ಲಿ ತೊಡಗಿರುವದನ್ನು ಈ ಜಾತ್ರೆಯಲ್ಲಿ ಗಮನಿಸಿದ್ದೇನೆ.

ಎಳೆನೀರು ವ್ಯಾಪಾರಸ್ಥರು : ತಂಪು ಪಾನೀಯಗಳಿಗೆ ಪೂರಕವಾದಂತೆ ಇವರೂ ವ್ಯಾಪಾರದಲ್ಲಿ ತೊಡಗಿರುತ್ತಾರೆ. ವರ್ಷದ ಎರಡು ಜಾತ್ರೆಯಲ್ಲಿ ಇವರ ವ್ಯಾಪಾರ ಸಾರಸಗಟಾಗಿ ನಡೆದಿರುತ್ತದೆ. ಈ ವ್ಯಾಪಾರವನ್ನು ಸ್ತ್ರಿಪುರುಷರೆಂಬ ಭೇದ ಭಾವವಿಲ್ಲದೆ ನಡೆಸಿರುತ್ತಾರೆ. ಇವರ ವ್ಯಾಪಾರದ ವ್ಯವಸ್ಥೆ ನೋಡಿದಾಗ ಸೈಕಲ್‌ನಲ್ಲಿ ತೆಂಗಿನಕಾಯಿಗಳ ಗೊಂಚಲುಗಳನ್ನು ನೇತುಹಾಕಿಕೊಂಡು ಮಾರುವಂತವರಿದ್ದಾರೆ. ಇನ್ನೂ ಕೆಲವೊಬ್ಬರು ನಾಲ್ಕು ಚಕ್ರದ ತಳ್ಳುವ ಗಾಡಿಯಲ್ಲಿ ವಿವಿಧ ಆಕಾರದಲ್ಲಿ ಕಾಯಿಗಳನ್ನು ಇಟ್ಟುಕೊಂಡಿರುತ್ತಾರೆ. ಇದು ಅಲ್ಲದೆ ಒಂದು ನಿರ್ಧಿಷ್ಟವಾದ ಸ್ಥಳದಲ್ಲಿ ಗುಡ್ಡೆ ಹಾಕಿಕೊಂಡು ವ್ಯಾಪಾರ ಮಾಡುವರು. ಇವರೆಲ್ಲ ಕಾಯಿ ವ್ಯಾಪಾರದ ದೃಷ್ಟಿಯಿಂದ ಕಾಯಿಗಳ ಗಾತ್ರಕ್ಕೆ ಅನುಗುಣವಾಗಿ ಬೆಲೆಯನ್ನು ನಿಗಧಿ ಮಾಡಿರುತ್ತಾರೆ. ಅವುಗಳ ದರ ಕಡಿಮೆ ಅಂದರೂ ಹದಿನೈದು ರೂಪಾಯಿಗಳಿಂದ ಮೂವತ್ತು ರೂಪಾಯಿಗಳವರೆಗೂ ಮಾರಾಟ ಮಾಡುತ್ತಾರೆ. ಈ ವ್ಯಾಪಾರಸ್ಥರೆಲ್ಲ ತಮ್ಮ ವ್ಯಾಪಾರವು ಕುಲಾಯಿಸಲಿ ಎಂದು ತಮ್ಮ ಅಂಗಡಿಯ ಮುಂದೆ ಅತ್ತ-ಇತ್ತ ತಿರುಗುತ್ತಿರುವವರಿಗೆ ಸಸ್ತಾ.. ಬೆಲೆಯನ್ನು ಕೂಗುತ್ತಾ ಗ್ರಾಹಕರನ್ನು ಬರಮಾಡಿಕೊಳ್ಳುತ್ತಾರೆ. ಈ ಜಾತ್ರೆಯ ಸಂದರ್ಭದಲ್ಲಿ ವ್ಯಾಪಾರಸ್ಥರ ಕೂಗು ಕೇಳಿದಂತೆ ಹೇಳುವುದಾದರೆ ಆ... ಇಲ್ಲಿ... ಬರ್ರಿ... ಸಸ್ತಾ.. ಸಸ್ತಾ... ಸಸ್ತಾ... ಗಂಜಿ... ಗಂಜಿ... ಎಳೆನೀರು ಗಂಜಿ... ಬರ್ರಿ... ಬರ್ರಿ... ಎಂದು ಕೂಗುತ್ತಿರುತ್ತಾರೆ.

ಶರಬತ್ತು ಮಾರುವಂತವರು : ಹಳ್ಳಿಯ ವ್ಯಾಪಾರಸ್ಥರಿಂದ ಕೂಡಿ ಸುಧಾರಿಸಿದ ಪೇಟೆಯ ವ್ಯಾಪಾರಸ್ಥರು ಶರಬತ್ತು ಮಾರಾಟದಲ್ಲಿ ತೊಡಗಿರುತ್ತಾರೆ. ಹಳ್ಳಿಯಿಂದ ಬಂದ ವ್ಯಾಪಾರಸ್ಥರು ಆ ಸ್ಥಳದಲ್ಲಿ ಕಂಡುಬರುವ ಬೇವಿನ ಮರದ ನೆರಳ ಕೆಳಗೆ ಶರಬತ್ತನ್ನು ತಯಾರಿಸಿ ಗಿರಾಕಿಗಳಿಗೆ ಐದು ರೂಪಾಯಿ, ಹತ್ತು ರೂಪಾಯಿಗೆ ಒಂದು ಗ್ಲಾಸ್ ಮಾರಾಟ ಮಾಡುತ್ತಾರೆ. ಇಂತಹ ಅಂಗಡಿಗಳು ಅತ್ಯಾಧುನಿಕ ಸುಧಾರಿಸಿದ ಪರಿಕರಗಳನ್ನು ಹೊಂದಿರುವುದಿಲ್ಲ. ಜಾತ್ರೆಯ ಸಂದರ್ಭದಲ್ಲಿ ಕೆಲವೊಂದು ಮಣ್ಣಿನ ಮಡಿಕೆಗಳನ್ನು ಖರೀದಿಸಿರುತ್ತಾರೆ. ಇಂತ ಮಡಿಕೆಗಳ ತುಂಬಾ ನಿಂಬೆ ಹಣ್ಣಿನಿಂದ ತಯಾರಿಸಿದ ಪಾನಕ, ಅಥವಾ ಶರಬತ್ ಮಾರಾಟ ಮಾಡುವರು. ಇದರಂತೆ ಮಧ್ಯಮ ವ್ಯಾಪಾರಸ್ಥರು ನಾಲ್ಕು ಚಕ್ರದ ತಳ್ಳುವಗಾಡಿಯಲ್ಲಿ ಸೋಡಾ ಬಾಟಲ್, ಹಾಗೂ ಶರಬತ್ತನ್ನು ಹನ್ನೆರಡು ರೂಪಾಯಿ, ಹದಿನೈದು ರೂಪಾಯಿಗಳಂತೆ ವ್ಯಾಪಾರ ಮಾಡುತ್ತಾರೆ. ಇತ್ತೀಚಿಗಂತೂ ಅತ್ಯಾಧುನಿಕ ಸುಧಾರಿತ ವಸ್ತುಗಳು ಬಂದಿರುವುದರಿಂದ ಇಂತಹ ವ್ಯಾಪಾರಸ್ಥರು ಈ ಜಾತ್ರೆಯಲ್ಲಿ ಬಂದಿರುತ್ತಾರೆ. ಇಂಥವರು ಬಣ್ಣ ಬಣ್ಣದ ಶರಬತ್ತುಗಳನ್ನು ವಿವಿಧ ರುಚಿಗೆ ಹೊಂದುವಂತೆ ತಯಾರಿಸಿರುತ್ತಾರೆ. ಯಾವಾಗಲೂ ತಾಜಾತನದಿಂದ ಕೂಡಿರುವಂತೆ ಹಾಗೂ ಸದಾ ತಂಪಾಗಿರುವಂತೆ ಕಾಪಾಡಲು ರೆಫ್ರಿಜಿರೇಟರ್‌ಗಳನ್ನು ಬಳಸುತ್ತಿರುತ್ತಾರೆ. ಈ ಎಲ್ಲಾ ಖರ್ಚು

ವೆಚ್ಚಕ್ಕೆ ತಕ್ಕಂತೆ ಇವರ ಶರಬತ್ತುಗಳ ಬೆಲೆಯು ಅಷ್ಟೇ ದೊಡ್ಡದಾಗಿರುತ್ತದೆ. ಅಂದರೆ ಒಂದು ಗ್ಲಾಸ್ ಶರಬತ್‌ಗೆ ಏನಿಲ್ಲ ಅಂದರೂ ಹದಿನೈದು ರೂಪಾಯಿಗಳಿಂದ ಮೂವತ್ತು ರೂಪಾಯಿಗಳವರೆಗೂ ಸಿಗುವಂತ ಶರಬತ್‌ಗಳು ಈ ಜಾತ್ರೆಯಲ್ಲಿ ಬಂದಿರುತ್ತವೆ. ಇಷ್ಟೇ ಅಲ್ಲದೆ ಕೆಲವೊಂದು ಅಂಗಡಿಯ ಮಾಲೀಕರು ತಮ್ಮ ಅಂಗಡಿಯ ಮಾಲಿಯ ಕೈಯಲ್ಲಿ ಸುಮಾರು ಐದಾರು ಬಾಟಲ್ ಅಥವಾ ಗ್ಲಾಸ್‌ನ್ನು ಹಿಡಿಯುವ ಕಲ್ಲಿಯಲ್ಲಿ ಹಿಡಿದುಕೊಂಡು ಸಂಚರಿಸಿ ವ್ಯಾಪಾರ ಮಾಡುವಂತೆ ಕಳಿಸಿರುವುದನ್ನು ನಾನು ಜಾತ್ರೆಯಲ್ಲಿ ಕಂಡುಕೊಂಡಿದ್ದೇನೆ.

ಐಸ್ ಕ್ರೀಮ್ ಮಾರಾಟಗಾರರು : ಜಾತ್ರೆಯಲ್ಲಿ ವಿವಿಧ ರೀತಿಯ ವಿಧಾನಗಳಿಂದ ವ್ಯಾಪಾರ ನಡೆಸಿರುತ್ತಾರೆ. ಈ ಗುಡಿಯು ಕೆಲವು ಪಟ್ಟಣಗಳ ನಡುಗಡ್ಡೆಯಲ್ಲಿ ಬರುವುದರಿಂದ ಇಂತಹ ವ್ಯಾಪಾರಸ್ಥರು ಬರುವುದು ಸಹಜವಾಗಿರುತ್ತದೆ. ಹನುಮಸಾಗರ, ಕುಷ್ಟಗಿ, ಗುಡೂರು, ಹನುಮನಾಳ, ಇತರ ಪಟ್ಟಣಗಳಿಂದ ಐಸ್‌ಕ್ರೀಮ್ ವ್ಯಾಪಾರಸ್ಥರು ಬಂದಿರುತ್ತಾರೆ. ಪಾದಚಾರಿ ವ್ಯಾಪಾರಸ್ಥರಿಂದ ಸೈಕಲ್, ದ್ವಿಚಕ್ರವಾಹನ, ನಾಲ್ಕು ಚಕ್ರ ವಾಹನದ ಐಸ್‌ಕ್ರೀಮ್ ವ್ಯಾಪಾರಸ್ಥರು ಬಂದಿರುತ್ತಾರೆ. ನಾನು ಕ್ಷೇತ್ರಕಾರ್ಯದ ನಿಮಿತ್ತ ಜಾತ್ರೆಗೆ ಹೋದ ಸಂದರ್ಭದಲ್ಲಿ ಕಂಡಂತೆ ಹೇಳುವುದಾದರೆ, ಐಸ್‌ಕ್ರೀಮ್ ವ್ಯಾಪಾರಿಗಳು ಬಾಲಕರು ಹಾಗೂ ಯುವಕರು ಥರ್ಮಕೋಲ್, ಸ್ಟೀಲ್ ಮಿಶ್ರಿತ ತಗಡಿನ ಡಬ್ಬಿಗಳಲ್ಲಿ ಎರಡು ರೂಪಾಯಿಗಳಿಗೆ ಒಂದರಂತೆ ಪೆಪ್ಸಿ, ಐದು ರೂಪಾಯಿಗಳಿಗೆ ಒಂದರಂತೆ ಇರುವ ಕುಲ್ಫಿಗಳನ್ನು ತುಂಬಿಕೊಂಡು ಹೆಗಲಮೇಲೆ ಮತ್ತು ತಲೆಯ ಮೇಲೆ ಹೊತ್ತು ಮಾರುವಂತವರು ವ್ಯಾಪಾರದಲ್ಲಿ ತೊಡಗಿದ್ದರು. ಪೆಟ್ಟಿಗೆಯಂತೆ ತಯಾರಿಸಿದ ದ್ವಿಚಕ್ರದ ತಳ್ಳುವ ಗಾಡಿಯಲ್ಲಿ ಹಾಲ್‌ಐಸ್, ಚಾಕೋಬಾರ್, ಕಪ್‌ಐಸ್‌ಗಳನ್ನು ಕ್ರಮವಾಗಿ ಹತ್ತು ರೂಪಾಯಿ ಐದುರೂಪಾಯಿಗಳಿಗೆ ಒಂದರಂತೆ ಮಾರಾಟ ಮಾಡುವಂಥವರು ಗೋಚರಿಸುತ್ತಾರೆ. ಸೈಕಲ್ ಮೋಟಾರದಲ್ಲಿ ಐಸ್‌ಕ್ರೀಮ್ ಮಾರುವಂತವರು, ಚಾಕೋಬಾರ್, ಹಾಲ್‌ಐಸ್, ಪೆಪ್ಸಿ, ಕುಲ್ಫಿ ಇಂತಹವುಗಳಲ್ಲಿ ಯಾವುದಾದರೊಂದನ್ನು ತಂದು ಮಾರಾಟ ಮಾಡುತ್ತಿರುವರು. ತ್ರಿಚಕ್ರದ ಸೈಕಲ್‌ಗೆ ಹೊಂದಿಕೊಂಡಿರುವ ಐಸ್‌ಕ್ರೀಮ್ ಡಬ್ಬಿ, ಹಾಗೂ ತ್ರಿಚಕ್ರ ಮೋಟರ್ ಸೈಕಲ್‌ಗೆ ಹೊಂದಿಕೊಂಡಿರುವ ಐಸ್‌ಕ್ರಿಮ್ ಡಬ್ಬಿ ವ್ಯಾಪಾರಸ್ಥರು, ಕಪ್‌ಐಸ್, ಹಾಲ್‌ಐಸ್, ಬಾದಾಮಿ ಹಾಲುಗಳೊಂದಿಗೆ ಮಾರಾಟಕ್ಕೆ ತೊಡಗಿರುತ್ತಾರೆ. ಇತ್ತೀಚಿಗಂತೂ ಜಾತ್ರೆಯಲ್ಲಿ ನಾಲ್ಕು ಚಕ್ರದ ವಾಹನಗಳು ಎಲ್ಲಾ ಸುಸಜ್ಜಿತವಾದ ವ್ಯವಸ್ಥೆಯಲ್ಲಿ ಐಸ್‌ಕ್ರೀಮ್‌ಗೆ ಸಂಬಂಧಿಸಿದಂತ ಬಹುಪಾಲು ಪದಾರ್ಥಗಳನ್ನು ತಂದಿರುತ್ತಾರೆ. ಇಂತಹ ವಾಹನಗಳು ಐಸ್‌ಕ್ರೀಮ್ ಮಾರಾಟಕ್ಕೆಂದೆ ತಯಾರಿಸಲಾಗಿರುತ್ತದೆ. ಇವುಗಳಲ್ಲಿ ಎಲ್ಲಾ ತಾಜಾ ಹಾಗೂ ತಂಪಾಗಿರುವಂತ ಮಜ್ಜಿಗೆ, ಡೈರಿಮಿಲ್ಕ್, ಚಾಕೋಬಾರ್, ಕಪ್‌ಐಸ್, ಲಸ್ಸಿ, ತಂಪು ಪಾನೀಯ, ಚಾಕಲೇಟ್‌ಗಳು, ನೀರಿನ ಪಾಕೀಟ್, ಬಾದಾಮಿ ಮಿಲ್ಕ್, ಗುಲ್ಕಂದ, ಹಾಲ್‌ಐಸ್ ಇನ್ನೂ ಮುಂತಾದ ಐಸ್‌ಕ್ರೀಮ್‌ಗಳು ಲಭ್ಯವಿರುತ್ತವೆ.

ಕಬ್ಬಿನ ಹಾಲಿನ ವ್ಯಾಪಾರಸ್ಥರು : ಜಾತ್ರೆಯಲ್ಲಿ ತಮ್ಮ ವ್ಯಾಪಾರವನ್ನು ಕೈಗೊಂಡಿರುವರು. ಈ ವ್ಯಾಪಾರಸ್ಥರು ತಮ್ಮ ಅನುಕೂಲಕ್ಕೆ ತಕ್ಕಂತೆ ಅಂಗಡಿ ನಡೆಸುವಂತ ವ್ಯವಸ್ಥೆ ಮಾಡಿಕೊಂಡಿರುವರು. ದೇವಸ್ಥಾನದ ಮುಂಭಾಗದಲ್ಲಿರುವ ಮರಗಳ ಅಡಿಯಲ್ಲಿ ಕೆಲವೊಬ್ಬರು ಪ್ಲಾಸ್ಟಿಕ್ ತಾಡಪತ್ರೆಯಿಂದ ಢೇರೆ ಹೊಡೆದುಕೊಂಡು ಅಂಗಡಿಯನ್ನು ನಿರ್ಮಿಸಿಕೊಂಡಿರುತ್ತಾರೆ. ಗಿರಾಕಿಗಳಿಗೆ ಕುಳಿತುಕೊಳ್ಳುವುದಕ್ಕೆ ಇದ್ದಿದ್ದರಲ್ಲೇ ವ್ಯವಸ್ಥೆ ಮಾಡಿರುವರು. ಯಾಂತ್ರೀಕರಣದಿಂದ ಕಬ್ಬಿನಹಾಲನ್ನು ಹೊರತೆಗೆಯುತ್ತಾರೆ. ಗಿರಾಕಿಗಳ ಅಭಿರುಚಿಗೆ ಹೊಂದುವಂತ ಲಿಂಬೆಹಣ್ಣಿನ ರಸ ಮಿಶ್ರಿತಹಾಲು, ತಂಪಾದ ಹಾಲು, ಅಂದರೆ ಐಸ್‌ಕ್ರೀಮ್ ಮಿಶ್ರಿತ, ಹಾಗೂ ಸಹಜ ಸ್ಥಿತಿಯ ಕೇವಲ ಕಬ್ಬಿನ ಹಾಲನ್ನಷ್ಟೇ ಮಾರುತ್ತಿರುವರು. ಆದರೆ ಎಲ್ಲಾ ರೀತಿಯ ಹಾಲಿಗೆ ಹದಿನೈದು–ಇಪ್ಪತ್ತು ರೂಪಾಯಿಗಳನ್ನು ನಿಗದಿ ಮಾಡಿರುತ್ತಾರೆ.

ಫ್ರೂಟ್ ಜ್ಯೂಸ್ ಅಂಗಡಿಗಳು : ತಂಪುಪಾನೀಯ ಅಂಗಡಿಗಳಿಗೆ ಪೂರಕವಾಗಿ ತಲೆಎತ್ತಿರುತ್ತವೆ. ಇವು ನಾಲ್ಕು ಚಕ್ರದ ತಳ್ಳುವಗಾಡಿಯಲ್ಲಿ ಹಾಗೂ ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಟೆಂಟು ಹಾಕಿಕೊಂಡು ವ್ಯಾಪಾರವನ್ನು ಪ್ರಾರಂಭಿಸುತ್ತಾರೆ. ಇಂತಹ ಅಂಗಡಿಗಳನ್ನು ನಡೆಸಲು ಎರಡು ಮೂರು ಜನರು ಬೇಕಾಗಿರುತ್ತದೆ. ಇವರು ಗಿರಾಕಿಗಳ ಅಭಿರುಚಿಗೆ ಬೇಕಾದಂತೆ ಜೂಸ್‌ನ್ನು ತಯಾರಿಸುವರು. ಅಂಥವುಗಳಲ್ಲಿ ಫೈನಾಪಲ್, ಆಪಲ್, ಮಾವಿನಹಣ್ಣು, ಚಿಕ್ಕು, ಬಾಳೆಹಣ್ಣು, ದ್ರಾಕ್ಷಿ, ಕಲ್ಲಂಗಡಿ, ದಾಳಿಂಬೆ ಮುಂತಾದ ಹಣ್ಣುಗಳ ಜ್ಯೂಸ್ ಮಾರಾಟಮಾಡುತ್ತಾರೆ.

ತಂಪುಪಾನೀಯ ಅಂಗಡಿಗಳು ಜಾತ್ರೆಗೆ ಬಂದ ಯಾತ್ರಿಕರ ಆಯಾಸಾದ ದೇಹಕ್ಕೆ ಶಕ್ತಿಯ ವೃದ್ಧಿಗೆ ಪೂರಕವಾಗಿವೆ. ಏಕೆಂದರೆ ದೂರದ ಸ್ಥಳಗಳಿಂದ ಬಂದಿರುವವರಿಗೆ ಈ ಜಾತ್ರೆಯು ಒಂದೇ ಸ್ಥಳದಲ್ಲಿ ನಿಂತು ಕಾರ್ಯಕ್ರಮಗಳನ್ನು ನೋಡುವಂತದಲ್ಲ. ಇದರ ಆಚರಣೆಗಳೇ ವಿಶಿಷ್ಟವಾಗಿವೆ. ಕೈಕಾಲು ಗಟ್ಟಿಯಾಗಿದ್ದವರು ಮಾಡುವಂತಹ ಜಾತ್ರೆ ಎಂದರೂ ತಪ್ಪಾಗಲಾರದು. ಇಲ್ಲಿ ನಡೆಯುವಂತಹ ಆಚರಣೆಗಳು ಓಡಾಡಿಕೊಂಡು ಮಾಡುವಂಥವುಗಳಾಗಿವೆ. ಇದರಿಂದ ಭಕ್ತರು ಬಳಲಿ ಬೆಂಡಾಗುವುದು ಸಹಜ. ಇವುಗಳು ಇಂತಹವರಿಗೆ ಬಾಯರಿಕೆಗೆ ಅನುಗುಣವಾಗಿಯೇ ಭಕ್ತರು ಸಹಜವಾಗಿ ಇಂತಹ ಅಂಗಡಿಗಳತ್ತಾ ಮುಖಮಾಡುತ್ತಾರೆ. ಈ ಜಾತ್ರೆಗೆ ಬಂದವರು ಹಾಗೂ ಆಯಾಸಗೀಡಾಗಿರುವವರ ಅಭಿರುಚಿಗಳು ಭಿನ್ನ ಭಿನ್ನವಾಗಿರುವುದರಿಂದ ಅವರಿಗೆ ಇಷ್ಟವಾದಂತ ತಂಪು ಪಾನೀಯಗಳು ಇಲ್ಲಿ ಲಭ್ಯವಾಗುತ್ತವೆ. ಇಲ್ಲಿ ಬಂದಿರುವ ವರ್ತಕರಿಂದ ಮಜ್ಜಿಗೆ, ಎಳೆನೀರು, ಹಣ್ಣಿನ ರಸ, ಸೋಡಾ, ಐಸ್‌ಕ್ರೀಮ್ ಇಂತಹ ಪಾನೀಯಗಳು ಸೂಕ್ತವಾದ ಬೆಲೆಯಲ್ಲಿ ದೊರೆಯುತ್ತವೆ.

ಜಾತ್ರೆಯಲ್ಲಿ ಮಾರಾಟ ಮಾಡುವಂತ ಕೂಲ್‌ಡ್ರಿಂಕ್ಸ್ ವರ್ತಕರು ತಯಾರಿಸುವಂತ ವಿವಿಧ ಹೆಸರಿನ ತಂಪು ಪಾನೀಯಗಳ ಪರಿಚಯವೂ ನಮ್ಮ ಹಳ್ಳಿಗಾಡಿನ ಜನಸಾಮಾನ್ಯರಿಗೂ ತಿಳಿಯುತ್ತದೆ. ಇವುಗಳನ್ನು ತಯಾರಿಸುವ ವಿಧಾನವನ್ನು ಪಡೆಯಲು ಸಹಾಯಕವಾಗಿದೆ.

ಇದಲ್ಲದೇ ನಿರುದ್ಯೋಗಿಗಳಿಗೆ ಯಾವ ಯಾವ ಕಾಲದಲ್ಲಿ ಯಾವ ಯಾವ ವ್ಯಾಪಾರ ಮಾಡಬಹುದೆಂಬ ವ್ಯವಹಾರ ಜ್ಞಾನ ಬೆಳೆಯುತ್ತದೆ. 'ಮನುಷ್ಯನಿಗೆ ದುಡಿಯುವ ಮನಸ್ಸಿದ್ದರೆ ಸಾವಿರ ಮಾರ್ಗಗಳು' ಎಂಬುದು ಅರಿವಾಗುತ್ತದೆ. ಇವತ್ತು ಆಧುನಿಕವಾಗಿ ಜಾಗತೀಕರಣದಿಂದ ಹಣ ಒಂದಿದ್ದರೆ, ಸೌಲಭ್ಯಗಳು ನಮ್ಮ ಅಂಗೈಯಲ್ಲಿ ಎಂಬುದನ್ನು ಮನಗಾಣಬೇಕಾಗಿದೆ. ಇವತ್ತು ನಮ್ಮ ಅವಶ್ಯಕತೆಗೆ ತಕ್ಕಷ್ಟು ವಸ್ತುಗಳು ಲಭ್ಯವಾಗುತ್ತವೆ ಎಂಬುದನ್ನು ಈ ಜಾತ್ರೆಯಲ್ಲಿ ಸಿಗುವ ಚಿಕ್ಕ ಚಿಕ್ಕ ಪಾಕೇಟ್‌ಗಳಲ್ಲಿ ಹಾಲು, ನೀರು, ಮಜ್ಜಿಗೆ ದೊರೆಯುವುದರಿಂದ ತಿಳಿಯಬಹುದು. ವ್ಯಾಪಾರದ ವಿವಿಧ ಕ್ರಮಗಳನ್ನು ಈ ಜಾತ್ರೆಯಲ್ಲಿ ಚಿಕ್ಕವರಿಂದ ಯುವಕರಿಗೂ ನಡೆದಿರುವಂತ ಹೆಗಲ ಮೇಲೆ ತಲೆಯ ಮೇಲೆ ಹೊತ್ತು ಮಾರುವುದರಿಂದ ವಿವಿಧ ಮಾದರಿಯ ವಾಹನಗಳ ಬಳಕೆಯಿಂದಲೂ ಮಾರುವುದನ್ನು ತಿಳಿಯಬಹುದು. ಒಂದು ವಸ್ತುವನ್ನು ಯಾವ ಯಾವ ರೀತಿಯಲ್ಲಿ ಶ್ರೀಮಂತ ವ್ಯಾಪಾರಿ, ಮಧ್ಯಮ ವ್ಯಾಪಾರಿ, ಸಾಮಾನ್ಯ ವ್ಯಾಪಾರಿ ಹೇಗೆ ವ್ಯಾಪಾರ ಮಾಡಬಹುದು ಎಂಬುದನ್ನು ತಿಳಿಯಬಹುದು.

ಒಬ್ಬ ವ್ಯಕ್ತಿಯು ಒಂದು ವಸ್ತುವನ್ನು ಮಾರುವುದರಲ್ಲಿ ಸಮಯವನ್ನು ವ್ಯರ್ಥಮಾಡದೆ, ಏಕಕಾಲಕ್ಕೆ ಒಬ್ಬ ಐಸ್‌ಕ್ರೀಮ್ ವಾಲಾ, ಐಸ್ ಕ್ರೀಮ್‌ನ ವಿವಿಧ ಪದಾರ್ಥಗಳನ್ನು ತಳ್ಳುವ ಗಾಡಿಯಲ್ಲಿ ಸಾಧ್ಯವಾದಷ್ಟನ್ನು ಮಾರಾಟ ಮಾಡುವುದನ್ನು ನೋಡಿ, ಇಂತಹ ಯಾವುದೇ ವ್ಯಾಪಾರದಲ್ಲಿ ಹಲವಾರು ವಸ್ತುಗಳನ್ನು ಮಾರಾಟ ಮಾಡುವಂತ ಕಲೆ ತಿಳಿಯುತ್ತದೆ. ಜಾತ್ರೆಯಲ್ಲಿ ಶರಬತ್ ಮಾರುವ ಮಹಿಳೆಯನ್ನು ಕಂಡರೆ ದುಡಿದು ತಿನ್ನುವುದಕ್ಕೆ ವ್ಯಾಪಾರ ಯಾವುದಾದರೇನು ಎಂಬಂತೆ ಮಹಿಳೆಯರೂ ಸಹ ಸ್ಫೂರ್ತಿ ಹೊಂದಬಹುದು.

ಎಳೆನೀರು ವ್ಯಾಪಾರಸ್ಥರು ಜಾತ್ರೆಯಲ್ಲಿ ಆಯಾಸಾದಂತ ವ್ಯಕ್ತಿಗಳಿಗೆ ಶಕ್ತಿ ಉತ್ತೇಜಕ ನೀಡುತ್ತಾರೆ. ಇದರಿಂದ ಬಂದಂತ ಹಣದಿಂದ ತಮ್ಮ ದಿನನಿತ್ಯದ ಜೀವನವನ್ನು ನಡೆಸುತ್ತಾರೆ. 'ಹೊಟ್ಟೆ ಉಪಜೀವನಕ್ಕೆ ಹೆಣ್ಣು-ಗಂಡೆಂಬದೇ ತಾರತಮ್ಯವಿಲ್ಲದೆ ಎಳೆನೀರಿನ ವ್ಯಾಪಾರ ಎಗ್ಗಿಲ್ಲದೆ ಸಾಗಿರುತ್ತದೆ.' ಇವರ ಎಳೆನೀರಿನ ವ್ಯಾಪಾರದ ವಿಧಾನವನ್ನು ನೋಡಿದಾಗ ನಮ್ಮಲ್ಲಿರುವಂತಹ ಸೈಕಲ್, ಮೋಟರ್‌ಸೈಕಲ್‌ಗಳನ್ನು, ವ್ಯಾಪಾರದಲ್ಲಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ತಿಳಿಯಬಹುದು. ಈ ವ್ಯಾಪಾರಕ್ಕೆ ಯಾವ ಯಾವ ವಸ್ತುಗಳನ್ನು ಬಳಸಿಕೊಳ್ಳಬಹುದು ಎಂಬುದನ್ನು ಈ ವ್ಯಾಪಾರಸ್ಥರನ್ನು ಗಮನಿಸುವುದರಿಂದ ತಿಳಿಯುತ್ತದೆ. ಯಾವುದೇ ವ್ಯಾಪಾರ ಮಾಡುವುದೆಂದರೆ ಒಂದು ಕಲೆ. ಗ್ರಾಹಕರನ್ನು ಹೇಗೆ ಆಕರ್ಷಿಸಬೇಕು, ಮಾರಾಟವನ್ನು ಹೇಗೆ ಮಾಡಬೇಕೆಂಬುದು ಇಂಥವರನ್ನು ನೋಡುವುದರಿಂದ ತಿಳಿಯುತ್ತದೆ. ಇವರ ಅಧ್ಯಯನದಿಂದ ವ್ಯವಹಾರ ಕ್ರಮ, ವಿಧಾನ, ತಾವು ಮಾರುವಂತ ವಸ್ತುಗಳು ಗ್ರಾಹಕರಿಗೆ ಆಕರ್ಷಕವಾಗಿ ಕಾಣುವಂತೆ ಜೋಡಿಸುವ ಶೈಲಿಯು ಮುಖ್ಯವಾಗಿರುತ್ತದೆ. ಯಾವ ಸ್ಥಳದಲ್ಲಿ ಈ ವ್ಯಾಪಾರಕ್ಕೆ ನಿಂತರೆ ವ್ಯಾಪಾರ ಚನ್ನಾಗಿ ಕುದುರುತ್ತದೆ ಎಂಬುದು ವ್ಯವಹಾರಜ್ಞಾನ ವ್ಯಾಪಾರಸ್ಥರಿಗೆ ಮುಖ್ಯವಾಗಿರುತ್ತದೆ. ಜಾತ್ರೆಯ

ವೇಳೆಯಲ್ಲಿ ಎಂತಹ ಕಾಯಿಗಳಿದ್ದರೆ ಹೆಚ್ಚು ಖರ್ಚಾಗುತ್ತವೆ ಎಂಬ ಅರಿವು ವ್ಯಾಪಾರಸ್ಥರಿಗೆ ಅವಶ್ಯಕ.

ಚಂದಾಲಿಂಗೇಶ್ವರನ ಜಾತ್ರೆಯು ಸಾಮಾನ್ಯವಾಗಿ ಒಂದು ವರ್ಷದಲ್ಲಿ ಎರಡು ಅವಧಿ ನಡೆಯುವುದು ಸಾಮಾನ್ಯವಾದ ಸಂಗತಿ. ನಮ್ಮ ಉತ್ತರ ಕರ್ನಾಟಕ ಪ್ರದೇಶವು ಬಯಲು ಸೀಮೆಯ ಪ್ರದೇಶ ಹೊಂದಿದೆ. ಇದರಿಂದ ಈ ಎರಡೂ ಅವಧಿಯಲ್ಲಿ ನಡೆಯುವ ಜಾತ್ರೆಯು ಬಿಸಿಲಿನಿಂದ ಕೂಡಿರುತ್ತದೆ. ಈ ಜಾತ್ರೆಗೆ ಬಂದಿರುವಂತಹ ಯಾತ್ರಿಕರಿಗೆ, ಬಾಯರಿಕೆ, ನೀರಡಿಕೆ, ಆಯಾಸ ಆಗುವುದು ಸಹಜ. ಆದ್ದರಿಂದ ಈ ವಾತಾವರಣಕ್ಕೆ ಸಂಬಂಧಪಟ್ಟಂತೆ ತಂಪಾದ ಪಾನೀಯಗಳು ಮಾರಾಟವಾಗುತ್ತಿರುವಂತಹ ಪಾನೀಯಗಳಲ್ಲಿ ಶರಬತ್ ಕೂಡ ಮಾರಾಟವಾಗುತ್ತದೆ. ಈ ಶರಭತ್ ವ್ಯಾಪಾರದ ದೃಷ್ಟಿಯಿಂದ ಕಡಿಮೆ ವೆಚ್ಚದ ಬಂಡವಾಳವನ್ನು ಹೊಂದಿರುತ್ತದೆ. ಹಾಗೂ ಹೆಚ್ಚು ಲಾಭವನ್ನು ಗಳಿಸುವುದು. ಅದಕ್ಕಾಗಿ ಹಳ್ಳಿಯವರು, ಪಟ್ಟಣದವರು, ನಗರ ಪ್ರದೇಶದವರು ಈ ದಂಧೆಯಲ್ಲಿ ತೊಡಗಿರುತ್ತಾರೆ. ಹಳ್ಳಿಯವರು ಈ ವ್ಯಾಪಾರದಲ್ಲಿ ಭಾಗಿಯಾಗಲು ಪ್ರಮುಖ ಕಾರಣವೆಂದರೆ ಈ ಶರಬತ್ ತಯಾರಿಸಲು ಬೇಕಾದಂತ ಪದಾರ್ಥಗಳು ಹಾಗೂ ವಸ್ತುಗಳು ಸುಲಭವಾದ ರೀತಿಯಲ್ಲಿ ಕೈಗೆಟುಕುತ್ತವೆ. ಉದಾಹರಣೆಗೆ ತಮ್ಮ ತೋಟದಲ್ಲಿ ಬೆಳೆಯುವಂತಹ ಲಿಂಬಿಹಣ್ಣು ಹಾಗೂ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿಯಿಂದ ಪಡೆದಿರುವ ಸಕ್ಕರೆಯನ್ನು ಕೆಲವು ತಿಂಗಳಿಂದ ಕ್ರೋಢೀಕರಿಸಿ ಕೊಂಡಿರುವರು. ಕುಂಬಾರನಿಂದ ಜಾತ್ರೆಯ ವೇಳೆಗೆ ಒಂದು ಮಧ್ಯಮ ಗಾತ್ರದ ಮಡಿಕೆಯನ್ನು ಖರೀದಿಸಿ ವ್ಯಾಪಾರದಲ್ಲಿ ತೊಡಗುವರು. ವಾಸ್ತವಿಕವಾಗಿ ಗ್ರಾಮೀಣ ಜಾತ್ರೆಗಳು ನಗರೀಕರಣ ಹೊಂದುತ್ತಿರುವುದರಿಂದ ಇಂತಹ ಅಂಗಡಿಗಳು ಜಾತ್ರೆಯಲ್ಲಿ ಎಲ್ಲೋ ಒಂದೊಂದು ಗೋಚರಿಸುತ್ತವೆ. ಇವತ್ತಿನ ಸುಧಾರಿತ ಯಂತ್ರಗಳಿಂದ ಹಾಗೂ ಗಿರಾಕಿಗಳ ಬಾಯಿಗೆ ರುಚಿ ಕೊಡುವಂತಹ ರಾಸಾಯನಿಕ ಮಿಶ್ರಿತ ಪದಾರ್ಥಗಳಿಂದ ಇಂತಹ ವ್ಯಾಪಾರಸ್ಥರು ಗ್ರಾಹಕರಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ.

ಪಟ್ಟಣ ಪ್ರದೇಶದಿಂದ ಬರುವಂತಹ ಶರಬತ್ ವ್ಯಾಪಾರಿಗಳು ತಮ್ಮ ನಾಲ್ಕು ಚಕ್ರದ ತಳ್ಳುವ ಗಾಡಿಯಲ್ಲಿ ಈ ವ್ಯಾಪಾರವನ್ನು ನಡೆಸುತ್ತಾರೆ. ಈ ವ್ಯಾಪಾರಿಗಳು ವಿವಿಧ ಬಣ್ಣ ಬಣ್ಣಗಳಾದ ಕಪ್ಪು, ಹಸಿರು, ಕೆಂಪು, ಹಳದಿ ಇತ್ಯಾದಿ ಬಣ್ಣಗಳಿಂದ ತಯಾರಿಸಿದ ಶರಬತ್‌ನ್ನು ಜಾತ್ರೆಯಲ್ಲಿ ಸಂಚರಿಸಿ ಮಾರುತ್ತಿರುತ್ತಾರೆ. ಪಟ್ಟಣ ಹಾಗೂ ನಗರ ಪ್ರದೇಶದಿಂದ ಬಂದಿರುವಂತಹ ಭಕ್ತರು ಸಹಜವಾಗಿ ಇಂಥಹ ಬಣ್ಣ ಬಣ್ಣದ ಬದುಕಿಗೆ ಆಕರ್ಷಿತರಾಗುತ್ತಾರೆ. ಈ ವ್ಯಾಪಾರಸ್ಥರು ವಿವಿಧ ಜನರ ಆಸಕ್ತಿಗೆ ಅಭಿರುಚಿಗೆ ಸರಿಹೊಂದುವಂತೆ ಶರಬತ್ತು ತಯಾರಿಸಿಕೊಡುತ್ತಾರೆ. ಇದರಿಂದ ಇಂಥವರ ವ್ಯಾಪಾರವು ಸುಧಾರಣೆಯಾಗುತ್ತಾ ಸಾಗುತ್ತಿರುತ್ತದೆ. ಗ್ರಾಮೀಣ ಪ್ರದೇಶದವರು ಬಹುಪಾಲು ನೈಸರ್ಗಿಕವಾಗಿ ತಯಾರಿಸಿದ ಶರಬತ್ತು ಇಂತ ವ್ಯಾಪಾರಿಗಳಿಂದ ಪಟ್ಟಣ ಹಾಗೂ ನಗರ ಪ್ರದೇಶದ ಜನತೆಯಿಂದ ವಂಚಿತವಾಗುತ್ತದೆ. ಪಟ್ಟಣದ ಪ್ರದೇಶದವರು ತಯಾರಿಸುತ್ತಿರುವ

ಬಣ್ಣದ ಶರಬತ್. ಹಲವಾರು ದಿನಗಳಿಂದ ಒಂದು ಬಾಟಲ್‌ನಲ್ಲಿ ಸಂಗ್ರಹಿಸಿ ಅದನ್ನೆ ಆಗೊಮ್ಮೆ-ಈಗೊಮ್ಮೆ ಬಂದಿರುವ ಗಿರಾಕಿಗಳಿಗೆ ಬೆರೆಸಿ ಕುಡಿಯಲು ನೀಡುತ್ತಾರೆ. ಆ ಕ್ಷಣದಲ್ಲಿ ಮಾತ್ರ ನಾಲಿಗೆ ರುಚಿ ಆಗಬಹುದು. ಆದರೆ ದೇಹಕ್ಕೆ ಪೋಷಕಾಂಶಗಳು ದೊರೆಯುವುದು ಸಂಶಯ. ಈ ತರಹದ ಶರಬತ್‌ನಿಂದ ಸಕ್ಕರೆಯ ಬಳಕೆಯನ್ನು ಅಲ್ಪಮತಕ್ಕೆ ತರಬಹುದು. ಕಾರಣ ಇಂತಹ ದೊಡ್ಡ ದೊಡ್ಡ ಶರಬತ್ ತಯಾರಿಕಾ ಘಟಕಗಳಲ್ಲಿ, ದೊಡ್ಡ ದೊಡ್ಡ ಐಸ್‌ಕ್ರಿಮ್ ತಯಾರಿಕಾ ಕಾರ್ಖಾನೆಯಲ್ಲಿ 'ಸಾಕ್ರನ್' ಎಂಬ ಅತಿ ಸಿಹಿಯಾದ ಪದಾರ್ಥದ ಪೌಡರ್ ಬಳಸುವುದರಿಂದ ಇವರು ಇಂದಿನ ದಿನಗಳಲ್ಲಿ ಸಕ್ಕರೆಯ ಬೆಲೆಯು ಗಗನಕ್ಕೇರುವುದರಿಂದ ಇದರ ಹೊರೆಯಿಂದ ಇಂತಹ ವ್ಯಾಪಾರಸ್ಥರು ತಪ್ಪಿಸಿಕೊಳ್ಳಬಹುದು.

ನಗರ ಪ್ರದೇಶಗಳಿಂದ ಬರುವಂತಹ ಶರಬತ್ ವ್ಯಾಪಾರಿಗಳು ಗ್ರಾಮೀಣ ಪ್ರದೇಶದ ಶರಬತ್ತು ವ್ಯಾಪಾರಿಗಳಿಗೆ ಹಾಗೂ ಪಟ್ಟಣದ ಶರಬತ್ ವ್ಯಾಪಾರಿಗಳಿಗೆ ಹೆಚ್ಚಿನ ಸ್ಪರ್ಧೆ ಒಡ್ಡಿರುತ್ತಾರೆ. ಏಕೆಂದರೆ ಇವರು ಅತ್ಯಾಧುನಿಕ ಸುಧಾರಿತ ವಸ್ತುಗಳಾದ ರೆಫ್ರಿಜರೇಟರ್, ಉಪಕರಣಗಳು, ಗ್ರಾಹಕರಿಗೆ ಕುಳಿತುಕೊಳ್ಳಲು ಸುಸಜ್ಜಿತವಾದ ವ್ಯವಸ್ಥೆ ಹಾಗೂ ಸ್ವಚ್ಛತೆಯನ್ನು ಕಾಪಾಡಿಕೊಂಡಿರುತ್ತಾರೆ. ಇಂಥ ಅಂಗಡಿಗಳ ವ್ಯಾಪಾರವೂ ಭರದಿಂದ ಸಾಗಿರುತ್ತದೆ. ಕಾರಣ ಜಾತ್ರೆಗಳು ವರ್ಷಕ್ಕೊಮ್ಮೆ ಅಥವಾ ಎರಡು ಬಾರಿ ನಡೆಯುವುದರಿಂದ ಗ್ರಾಹಕರು ಇಂತಹ ಅಂಗಡಿಗಳಿಗೆ ಹೋಗುವುದಕ್ಕೆ ಲೆಕ್ಕ ಹಾಕುವುದಿಲ್ಲ. 'ದುಡಿದವನಿಗೆ ದುಡ್ಡಿನ ಕೊರತೆ ಇಲ್ಲ' ಎನ್ನುವ ಹಾಗೆ ಇವತ್ತು ಜಾಗತೀಕರಣದಿಂದ ಔದ್ಯೋಗಿಕರಣದಿಂದ ಜನರು ಎಲ್ಲೆಂದರಲ್ಲಿ ದುಡಿದು ಹಣ ಸಂಪಾದನೆ ಮಾಡಿಕೊಂಡು ಜಾತ್ರೆಗಳಲ್ಲಿ ಭಾಗಿಯಾಗುತ್ತಾರೆ. ಇವರು ದೊಡ್ಡ ದೊಡ್ಡ ಅಂಗಡಿಗಳಿಗೆ ಹೋಗುವುದಕ್ಕೆ ಹಿಂದೇಟು ಹಾಕುವುದಿಲ್ಲ. ಆದ್ದರಿಂದ ಇಂಥ ಅಂಗಡಿಗಳು ಜಾತ್ರೆಯಲ್ಲಿ ಯಾವುದೇ ಬರಯಿಲ್ಲದೆ (ಕೊರತೆ) ವ್ಯಾಪಾರ ನಡೆದಿರುತ್ತದೆ.

ಐಸ್‌ಕ್ರೀಮ್ ವ್ಯಾಪಾರಸ್ಥರು ಜಾತ್ರೆಗೆ ಬಂದ ಭಕ್ತರ ದಣಿವನ್ನು ತಣಿಸುವವರಾಗಿ ಪಾತ್ರವಹಿಸುತ್ತಾರೆ. ಈ ವ್ಯಾಪಾರಸ್ಥರು ತಮ್ಮ ಐಸ್‌ಕ್ರೀಮ್ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲು ಯಾವ ಯಾವ ಸರಕುಗಳನ್ನು ಬಳಸಿಕೊಳ್ಳುವವರು ಎಂಬುದನ್ನು ತಿಳಿಯಲಾಗಿದೆ. ಬಹುಮುಖ್ಯವಾಗಿ ಜಾತ್ರೆಗೆ ಬರುವಂತಹವರು ಅಕ್ಕಪಕ್ಕದ ಪಟ್ಟಣದವರಾಗಿರುತ್ತಾರೆ. ಏಕೆಂದರೆ ಅವರಿಗೆ ತಮ್ಮ ಐಸ್‌ಕ್ರೀಮ್ ಫ್ಯಾಕ್ಟರಿಯಿಂದ ಸರಬರಾಜಿಗೆ ಅನುಕೂಲವಾಗುವುದು ಮುಖ್ಯವಾಗಿರುತ್ತದೆ. ಜಾತ್ರೆಯಲ್ಲಿ ಐಸ್‌ಕ್ರೀಮ್ ಮಾರುವ ವಿಧಾನಗಳನ್ನು ನೋಡಿದರೆ ನನಗೆ ಒಂದು ಮಾತು ನೆನಪಿಗೆ ಬರುತ್ತದೆ. "ದುಡಿಯುವವನಿಗೆ ಸಾವಿರ ದಾರಿಗಳು, ಸೋಮಾರಿಗಳಿಗೆ ಸಾವಿರ ಕಾರಣಗಳು"[೫] ಅಂದರೆ ತಾನು ದುಡಿಯಬೇಕು ಎಂಬ ಹಂಬಲ ಇದ್ದವನಿಗೆ ಹಲವಾರು ಮಾರ್ಗಗಳು ಇರುತ್ತವೆ. ಆದರೆ ಸೋಮಾರಿಯಾದವರು ಆ ದಾರಿಯಲ್ಲಿ ಹೋಗುವುದಕ್ಕೆ ಅಥವಾ ಶ್ರಮ ಪಡದೆ ಇರುವುದಕ್ಕೆ ಸಾವಿರ ಕಾರಣಗಳನ್ನು ಹೇಳುತ್ತಾರೆ. ಅದಕ್ಕೆ ಇಂಥವರನ್ನು ಕುರಿತು ಹನ್ನೆರಡನೇ ಶತಮಾನದಲ್ಲಿ ಅಲ್ಲಮಪ್ರಭುದೇವರು ಈ ರೀತಿ ನುಡಿದಿದ್ದಾರೆ.

"ಕೊಟ್ಟ ಕುದುರೆಯನ್ನೇರಲರಿಯದೆ
ಮತ್ತೊಂದು ಕುದುರೆಯ ಬಯಸುವವರು
ವೀರರೂ ಅಲ್ಲ । ಧೀರರೂ ಅಲ್ಲ ॥
ಇದು ಕಾರಣ
ನೆರೆ ಮೂರು ಲೋಕವೆಲ್ಲವೂ ಹಲ್ಲಣವ;
ಹೊತ್ತುಕೊಂಡು ಬಳಲುತ್ತೈದಾರೆ."[೬]

ಐಸ್‌ಕ್ರೀಮ್ ವ್ಯಾಪಾರದ ಸ್ಥಿತಿಗತಿಯನ್ನು ಸುಮಾರು ಇಪ್ಪತ್ತು ವರ್ಷಗಳಿಂದ ಆಚೆ ಹಾಗೂ ಪ್ರಸ್ತುತ ದಿನಗಳಿಗೆ ಹೋಲಿಸಿದರೆ ಸ್ಥಿತ್ಯಂತರ ಹೊಂದಿದೆ ಎಂದು ಹೇಳಬಹುದು. ನಾನೇ ನೋಡಿದಂತೆ ಹೇಳುವುದಾದರೆ ಇಪ್ಪತ್ತು ವರ್ಷಗಳ ಕೆಳಗೆ ಇಂದಿನ ಐಸ್‌ಕ್ರೀಮ್ ಮಾರುವವರಿಗೆ ಬರ್ಫ್ ಮಾರುವವರು ಎಂದು ಕರೆಯುತ್ತಿದ್ದೆವು. ಹಾಗೂ ಇಂದಿಗೂ ಗ್ರಾಮೀಣ ಭಾಗದಲ್ಲಿ ಇದೆ ಪದ (ಬರ್ಫ್ ಮಾರುವರು) ಬಳಕೆಯಲ್ಲಿರುವುದು ಕಂಡುಬರುತ್ತದೆ. ಆ ದಿನಗಳ ಅವಧಿಯಲ್ಲಿ ಬರ್ಫ್ ಮಾರುವವನು ಬರುವ ಅವಸ್ಥೆಯನ್ನು ಮೆಲುಕು ಹಾಕಿದರೆ ಆಗಿನ ಅವಧಿಯಲ್ಲಿ ಹೆಚ್ಚು ಬಳಕೆಯಲ್ಲಿದ್ದ ಅಟ್ಲಾಸ್, ಹೀರೋ ಕಂಪನಿಯ ಸೈಕಲ್‌ಗಳನ್ನು ತೆಗೆದುಕೊಂಡು ಅದರ ಹಿಂದಿನ ಭಾಗ ಕ್ಯಾರಿಯರ್ ಮೇಲೆ ಸುಮಾರು ಮೂರು ಮೂರುವರೆ ಅಡಿ ಎತ್ತರ ಮತ್ತು ಅಗಲ ಚೌಕಾಕಾರದ ಕಟ್ಟಿಗೆಯಿಂದ ತಯಾರಿಸಿ ಅದರ ಮೇಲೆ, ಕೆಳಗೆ, ಸುತ್ತಲೂ ತಗಡಿನಿಂದ ಭದ್ರಪಡಿಸಿದ ಡಬ್ಬಿಯನ್ನು ಇಟ್ಟು, ಅದರ ಭದ್ರತೆಗಾಗಿ ಸೈಕಲ್ ಕ್ಯಾರಿಯರ್ ಹಾಗೂ ಡಬ್ಬಿಯ ಎರಡೂ ಭಾಗಕ್ಕೂ ಸೈಕಲ್‌ಟ್ಯೂಬ್‌ನ್ನೊ ಅಥವಾ ಹಗ್ಗದಿಂದ ಬಿಗಿಗೊಳಿಸಿ ಕಟ್ಟಿರಲಾಗುತ್ತಿತ್ತು.

ಡಬ್ಬಿಯ ತುಂಬಾ ಒಂದು ಎರಡು ತರಹದ ಬರ್ಫಗಳನ್ನು ಹಾಕಿಕೊಂಡು ಬರುತ್ತಿದ್ದರು. ಅವು ಗುಲಾಬಿ ಬಣ್ಣ, ಕೆಂಪು ಬಣ್ಣ, ಕೇಸರಿ ಬಣ್ಣ, ಕೆಲವೊಮ್ಮೆ ಬಣ್ಣಗಳನ್ನು ಹಾಕದೆ ಹಾಗೇ ಬಂದಿರುವುದುಂಟು. ಈವಾಗಿನ ಹಾಗೆ ಗಿರಾಕಿಗಳನ್ನು ಕರೆಯುವುದಕ್ಕೆ ಅಥವಾ ಬರ್ಫ್ ಮಾರುವಾತ ಬಂದಾನೆಂದು ಗುರುತಿಸುವುದಕ್ಕೆ ಸುಧಾರಿತ ಧ್ವನಿವರ್ಧಕಗಳು ಇರಲಿಲ್ಲ. ಆದರೂ ತಾವೇ ಕಂಡುಕೊಂಡಂತಹ ಧ್ವನಿವರ್ಧಕವನ್ನು ತಯಾರಿಸಿಕೊಂಡಿದ್ದರು. ಅದರ ರಚನಾ ಕ್ರಮವು ಸರಳವಾಗಿ ತೋರುತ್ತಿತ್ತು. ಆ ವರ್ಧಕದ ಧ್ವನಿಯು ಇಡೀ ಜಾತ್ರೆಯ ಜನರೆಲ್ಲರಿಗೂ ಪ್ರತಿಧ್ವನಿಸುತ್ತಿತ್ತು. ಅದನ್ನು ಹೇಗೆ ತಯಾರಿಸಿಕೊಳ್ಳುತ್ತಿದ್ದರೆಂದರೆ ಸುಮಾರು ಒಂದು ಲೀಟರ್ ಅಳತೆಯ, ಬಳಕೆ ಮಾಡಿರುವ ತಗಡಿನ ಚಂಬು (ಡಬ್ಬಿ) ಅದರ ತಳಭಾಗದ ಮಧ್ಯದಲ್ಲಿ ಒಂದು ರಂಧ್ರವನ್ನು ಹಾಕಿ ಅದರೊಳಗಡೆ ತೆಂಗಿನ ನಾರಿನಿಂದ ತಯಾರಿಸಿದ ಕಿರುಬೆರಳು ಗಾತ್ರದ ಹಗ್ಗವನ್ನು ಪೋಣಿಸಿ ಡಬ್ಬಿಯ ರಂಧ್ರದಿಂದ ಹೊರಬಂದ ಹಗ್ಗವನ್ನು ಸೈಕಲಿನ ಹಿಂದಿನ ಚಕ್ರದ (ಗಾಲಿ) ತಿರುಗುವ ಮಧ್ಯಭಾಗದಲ್ಲಿ ಕಟ್ಟಿರುವರು. ಅದೇ ಹಗ್ಗದ ಮುಂದಿನ ಭಾಗವನ್ನು ಹ್ಯಾಂಡಲ್

ಕೆಳಭಾಗದ ಹಾರಿಗೆ ಕಟ್ಟಲಾಗುತ್ತಿತ್ತು. ಮೂರೂ ಹಾರಿಗಳ ಮಧ್ಯ ಡಬ್ಬಿ ಇರುವಂತೆ ಬಿಗಿಯಾಗಿ ಕಟ್ಟರಲಾಗುತ್ತಿತ್ತು.

ಧ್ವನಿವರ್ಧಕದ ಚೆಂಬು ಕೆಳಗೆ ಬಾರದಿರಲೆಂದು ರಂಧ್ರದ ತಳಭಾಗದ ಹಗ್ಗಕ್ಕೆ ಒಂದು ಚಿಕ್ಕ ಗಾತ್ರದ ಗಂಟನ್ನು ಹಾಕಿರಲಾಗುತ್ತಿತ್ತು. ಇದರ ಧ್ವನಿ ಹೊರಡಲು ಸ್ವಲ್ಪ ಐಸ್ ತುಂಡನ್ನು ಪುಡಿಪುಡಿ ಮಾಡಿ ಡಬ್ಬಿಯಲ್ಲಿ ಹಾಗೂ ಹಗ್ಗಕ್ಕೂ ಹಾಕಲಾಗುತ್ತಿತ್ತು. ಇದರಿಂದ ಸೈಕಲ್ ಮುಂದೆ ಮುಂದೆ ಚಲಿಸಿದಂತೆ ಕಿಡ್ರ್... ಕಿಡ್ರ್... ಕಿಡ್ರ್... ಅಂತ ಕರ್ಕಶವಾದ ಧ್ವನಿ ಹೊರಡುತ್ತಿತ್ತು. ಇದನ್ನು ಕೇಳಿದ ಜಾತ್ರೆಯ ಜನರೆಲ್ಲಾ ಬರ್ಫ್ ಮಾರುವವರು ಬಂದಿದ್ದಾರೆ ಎಂದು ಖಾತ್ರಿಪಡಿಸಿಕೊಳ್ಳುತ್ತಿದ್ದರು. ಕೆಲವೊಂದು ಸಂದರ್ಭದಲ್ಲಿ ಇದು ಧ್ವನಿ ಹೊರಡಿಸಲಿಲ್ಲವೆಂದರೆ ಅಕಸ್ಮಾತಾಗಿ ತಮ್ಮ ಕಡೆ ಇನ್ನೊಂದು ಇಂತಹ ಚೆಂಬು ಇದ್ದರೆ ಅದನ್ನು ಐಸ್ ಡಬ್ಬಿಯ ಮೇಲ್ಭಾಗಕ್ಕೆ ಕಟ್... ಕಟ... ಕಟ... ಕಟ... ಕಟ್. ಎಂದು ಬಾರಿಸಿ ತನಗೆ ಸಾಧ್ಯವಾದಷ್ಟು ಧ್ವನಿಯಲ್ಲಿ ಆ... ಐಸ್... ಆ... ಐಸ್ ಎಂದು ಕೂಗುತ್ತಿದ್ದರು. ಬರ್ಫ್‌ಗಳ ಗಾತ್ರ ಹಾಗೂ ಗುಣಮಟ್ಟಕ್ಕೆ ಅನುಗುಣವಾಗಿ ಬೆಲೆಯನ್ನು ನಿಗದಿ ಮಾಡಿದಂತೆ ಎಂಟಾಣೆ(ಐವತ್ತು ಪೈಸೆ), ಒಂದು ರೂಪಾಯಿಗೆ ಒಂದರಂತೆ ಮಾರಾಟ ಮಾಡುತ್ತಿದ್ದರು.

ಇಪ್ಪತ್ತು ವರ್ಷಗಳ ಆಚೆ ಬರ್ಫ್ ಮಾರುವವರ ಸ್ಥಿತಿಗತಿ ತುಂಬಾನೆ ವೇದನೆಯಿಂದ ಕೂಡಿತ್ತು ಎಂದರೂ ತಪ್ಪಾಗಲಾರದು. ಏಕೆಂದರೆ ಇಂಥ ಜಾತ್ರೆಗಳಿಗೆ ಬರಬೇಕಾದರೆ ಪಟ್ಟಣದಿಂದ ಹಾಗೂ ನಗರ ಪ್ರದೇಶಗಳಿಂದ ಬರಬೇಕಾಗುತ್ತಿತ್ತು. ಸುಮಾರು ಮೂವತ್ತು ಕೀಲೋಮೀಟರ್ ದೂರದಿಂದ ಸೈಕಲ್ ಸವಾರಿ ಮೂಲಕ ಬರಬೇಕಾಗಿರುತ್ತಿತ್ತು. ಆ ದೂರದ ಸ್ಥಳದಿಂದ ಜಾತ್ರೆ ನಡೆಯುವ ಸ್ಥಳಕ್ಕೆ ಬರುವುದರೊಳಗೆ ಎಷ್ಟೋ ಬರ್ಫ್‌ಗಳು ಕರಗಿ ಒಡೆದು ಹೋಗಿರುತ್ತಿದ್ದವು. ಇದರಿಂದ ಬರ್ಫ್‌ಗಾರರು ಆರ್ಥಿಕ ಸಂಕಷ್ಟಕ್ಕೀಡಾಗುತ್ತಿದ್ದರು. ದೂರದ ಸ್ಥಳದಿಂದ ಸೈಕಲ್ ಸವಾರಿಯಿಂದ ಬರುವುದರಿಂದ ದೈಹಿಕ ಆಯಾಸಯಾಗಿ ವ್ಯವಹಾರವನ್ನು ಮಂದಗತಿಯಿಂದ ಮಾಡುತ್ತಿದ್ದರು. ಇದರಿಂದ ದಿಢೀರನೆ ಬದಲಾಗಿ ಮೋಟರ್‌ಸೈಕಲ್‌ನಲ್ಲಿ ವ್ಯಾಪಾರ ಮಾಡಲು ಅವರು ಆರ್ಥಿಕವಾಗಿ ಸದೃಢರಾಗಿರಲಿಲ್ಲ. ಇವರು ತರುವಂತ ಬರ್ಫ್‌ಗಳಿಗಿಂತ ಡಬ್ಬಿಯೇ ಭಾರವಾಗಿರುತ್ತಿತ್ತು. ಇವರು ಹಾಕಿಕೊಂಡು ಬರುತ್ತಿರುವ ಒಂದೂ ಎರಡೂ ರೀತಿಯ ಬರ್ಫ್‌ಗಳು ಜಾತ್ರೆಯಲ್ಲಿ ಸೇರಿರುವ ವಿವಿಧ ಅಭಿರುಚಿವುಳ್ಳ ಜನರಿಗೆ ಹಿಡಿಸುತ್ತಿರಲಿಲ್ಲ. ಬರ್ಫ್ ಮಾರುವರು ಬಂದಿದ್ದಾರೆ ಎಂದು ಗುರುತಿಸಲು ಸರಿಯಾದಂತ ಧ್ವನಿವರ್ಧಕ ಇರಲಿಲ್ಲ. ಇದ್ದಂತಹ ಧ್ವನಿವರ್ಧಕ ಕೆಲವೊಂದು ಸಂದರ್ಭದಲ್ಲಿ ನಿಷ್ಕ್ರಿಯೆಯಾಗಿರುತ್ತಿತ್ತು. ಇದರಿಂದ ಈ ವ್ಯಾಪಾರಸ್ಥರು ಜಾತ್ರೆಯ ತುಂಬಾ ಕೂಗುತ್ತಾ ತಿರುಗುವುದು ಅನಿವಾರ್ಯವಾಗಿತ್ತು. ಈ ವ್ಯಾಪಾರಸ್ಥರು ತಾವೇ ತಯಾರಿಸಿಕೊಂಡಿರುವಂತಹ ಧ್ವನಿವರ್ಧಕ ಸರಳವಾಗಿದ್ದು ಯಾವುದೇ ಆರ್ಥಿಕ ವೆಚ್ಚದಾಯಕವಾಗಿರಲಿಲ್ಲ. ಅದು ಕಸದಿಂದಲೇ ರಸ ಎನ್ನುವ ಹಾಗೇ ಬಳಕೆ ಮಾಡಿಕೊಂಡು ಬಿಟ್ಟಿರುವ ವಸ್ತುಗಳಿಂದಲೇ

ಸಿದ್ಧಪಡಿಸಿಕೊಳ್ಳುತ್ತಿದ್ದರು. ಇದರಿಂದ ಆ ಅವಧಿಯಲ್ಲಿ ವ್ಯಾಪಾರಕ್ಕೆ ಸರಿಹೊಂದುವ ಧ್ವನಿವರ್ಧಕ ಇಲ್ಲದಿರುವುದರಿಂದ ತಾವೇ ತಯಾರಿಸಿಕೊಂಡಿದ್ದನ್ನು ನೋಡಿದರೆ ಇವರಿಗೂ ತಂತ್ರಜ್ಞಾನದ ಕಲೆ ತಿಳಿದುಕೊಂಡಿದ್ದರು ಎನ್ನಬಹುದು.

ಎರಡು ದಶಕಗಳ ಹಿಂದಿನ ಐಸ್‌ಕ್ರೀಮ್ ವ್ಯಾಪಾರಸ್ಥರು ಬರುಬರುತ್ತಾ ಇಂದು ಸುಧಾರಣೆಯ ಹಂತಕ್ಕೆ ಬಂದಿರುತ್ತಾರೆ. ಇಂತಹ ಜಾತ್ರೆಗಳಿಗೆ ಬರುವಂತ ವ್ಯಾಪಾರಸ್ಥರು ಸೈಕಲ್ಲಿನಿಂದ ಮುಕ್ತಿಹೊಂದಿ ಸೈಕಲ್ ಮೋಟರ್ ತೆಗೆದುಕೊಂಡು ಬರುವವರಾಗಿದ್ದಾರೆ. ಒಂದೋ, ಎರಡೋ, ರೀತಿಯ ಐಸ್ ತರುವಂತವರು ವಿವಿಧ ರೀತಿಯ ಕೊಬ್ರೆಐಸ್, ಹಾಲ್‌ಐಸ್, ಚಾಕೋಬಾರ್, ಮ್ಯಾಂಗೋಐಸ್, ಕಪ್‌ಐಸ್, ಕುಲ್ಫಿ ಮುಂತಾದವುಗಳನ್ನು ಮಾರಾಟ ಮಾಡುತ್ತಾರೆ. ದ್ವಿಚಕ್ರವಾಹನದೊಂದಿಗೆ ನಡೆಸಿದ ವ್ಯಾಪಾರವು ಇಂದು ವಾಸ್ತವಿಕ ದಿನದ ಜಾತ್ರೆಯಲ್ಲಿ ಹಲವಾರು ನಾಲ್ಕು ಚಕ್ರದ ಐಸ್‌ಕ್ರೀಮ್ ವಾಹನಗಳೇ ಬಂದಿರುತ್ತವೆ. ಇಂತ ವಾಹನಗಳಲ್ಲಿ ಎಲ್ಲಾ ರೀತಿಯ ಐಸ್‌ಕ್ರೀಮ್‌ಗಳು ಇವತ್ತು ಜಾತ್ರೆಯಲ್ಲಿ ಲಭ್ಯವಾಗುತ್ತವೆ. ಐಸ್‌ಕ್ರೀಮ್ ವಾಹನಗಳೇ ಬರುವುದರಿಂದ ಇವತ್ತು ಜಾತ್ರೆಯಲ್ಲಿ ಹೊತ್ತು ಮಾರುವವರ, ತಳ್ಳುಗಾಡಿಯಲ್ಲಿ ಮಾರುವವರ ಸಂಖ್ಯೆ ಕ್ಷೀಣಿಸಿದೆ. ಆದರೂ ಜಾತ್ರೆಗಳಲ್ಲಿ ಐಸ್‌ಕ್ರೀಮ್ ಮಾರುವುದಕ್ಕೆ ಬರುವವರು ಸೈಕಲ್‌ನಿಂದ ಮುಕ್ತಿಹೊಂದಿ ಮೋಟರ್‌ಸೈಕಲ್ ತಂದು ಮಾರಾಟ ಮಾಡುವವರನ್ನು ಕೇಳಿದರೆ ಅವರಿಂದ ತಿಳಿಯುವುದೇನೆಂದರೆ, ಅವತ್ತಿನ ದಿನಗಳಲ್ಲಿ ದೈಹಿಕ ಆಯಾಸವಾಗುತ್ತಿತ್ತು. ಆದರೆ ಇವತ್ತು ಆರ್ಥಿಕ ಹೊರೆಯಾಗುತ್ತದೆ, ಎಂಬ ನೋವಿನ ಮಾತುಗಳು ಕೇಳಿಬರುತ್ತವೆ. ಕಾರಣ ಮೋಟರ್‌ಸೈಕಲ್ ತರುವುದರಿಂದ ಅದಕ್ಕೆ ಹಾಕುವ ಇಂಧನವು ದುಬಾರಿ ಆಗುತ್ತಿರುವುದರಿಂದ ಲಾಭದಾಯಕವಿಲ್ಲವೆಂಬುದು ಅವರ ಚಿಂತೆಯಾದಂತೆ ತೋರುತ್ತದೆ.

೫.೩.೮. ಪಾನ್-ಬೀಡಾ ವರ್ತಕರು : (Pan-Bead Traders)

ಜಾತ್ರೆಯಲ್ಲಿ ವಿವಿಧ ತಲಬುವುಳ್ಳವರು ಸೇರಿಕೊಂಡಿರುತ್ತಾರೆ. ಇವರ ಆಸೆಗಳಿಗೆ ಪೂರಕವೆಂಬಂತೆ ಈ ಪಾನ್ ಬೀಡಾ ಅಂಗಡಿಗಳು ಬಂದಿರುತ್ತವೆ. ಇವರು ಜಾತ್ರೆಯಲ್ಲಿ ಎಲ್ಲೆಂದರಲ್ಲಿ ತಾತ್ಕಾಲಿಕವಾದಂತ ಅಂಗಡಿಗಳನ್ನು ಹಾಕಿಕೊಂಡಿರುವರು. ಪಾನ್ ಅಂಗಡಿಯವರು ಕ್ಷೇತ್ರದ ಸುತ್ತ ಮುತ್ತಲಿನ ಕೆಲವು ಗ್ರಾಮಗಳಿಂದ, ಪಟ್ಟಣಗಳಿಂದ ಬಂದಿರುತ್ತಾರೆ. ಉದಾಹರಣೆಗೆ ಹನುಮಸಾಗರ, ಕಬ್ಬರಗಿ, ಬೀಳಗಿ, ಗುಡೂರು ಪ್ರದೇಶಗಳಿಂದ ಬಂದಿರುವರು. ಇವರು ಇಂತಹ ಜಾತ್ರೆಗಳಲ್ಲಿ ಪಾನ್-ಬೀಡಾ ಅಂಗಡಿಗಳನ್ನು ಹಾಕುವುದಕ್ಕಾಗಿಯೇ ಕಟ್ಟಿಗೆ, ಕಬ್ಬಿಣ, ಪ್ಲಾಸ್ಟಿಕ್ ನಿಂದ ತಯಾರಿಸಿದ ಸಾಮಗ್ರಿಗಳಾದ ಮೇಜು, ಖುರ್ಚಿ ಹಾಗೂ ಪಾನ್-ಬೀಡಾ ವಸ್ತುಗಳನ್ನಿಡಲು ಆಯತಾಕಾರದ ಕಪಾಟನ್ನು ಸಿದ್ಧಪಡಿಸಿಕೊಂಡಿರುತ್ತಾರೆ. ಇನ್ನೂ ಕೆಲವೊಬ್ಬರು ಮನೆಯಲ್ಲಿ ಮಲಗುವ ಕಬ್ಬಿಣದ ಮಂಚವನ್ನು ವ್ಯಾಪಾರಕ್ಕೆ ಬಳಕೆ ಮಾಡಿಕೊಳ್ಳುವರು. ಇಂತಹ ಅಂಗಡಿಗಳನ್ನು ಬಾಲಕರಿಂದ ಹಿಡಿದು ವೃದ್ಧರವರೆಗೂ ನಿರ್ವಹಿಸುತ್ತಾರೆ.

ಜಾತ್ರೆಯ ಆಚರಣೆ ಕಾರ್ಯಕ್ರಮಗಳು ಒಂದೇ ದಿನ ನಡೆದರೂ ಕೂಡ ಈ ವ್ಯಾಪಾರಸ್ಥರು ಪ್ರಾರಂಭದ ದಿನದಿಂದ ಕೊನೆಯ ದಿನದವರೆಗೂ ಅಂದರೆ ಒಟ್ಟು ಮೂರು ದಿನಗಳ ಕಾಲ ವ್ಯಾಪಾರ ನಡೆಸಿರುತ್ತಾರೆ. ಈ ಪ್ರತಿಯೊಂದು ಅಂಗಡಿಗಳು ರಾತ್ರಿಯ ವೇಳೆ ವಿದ್ಯುತ್ ಚಾರ್ಜಿತ ಬ್ಯಾಟರಿಗಳ ಸಹಾಯದಿಂದ ಬೆಳಕಿನ ವ್ಯವಸ್ಥೆಯನ್ನು ಮಾಡಿಕೊಂಡು ವ್ಯಾಪಾರದಲ್ಲಿ ತೊಡಗಿರುತ್ತಾರೆ. ಗಿರಾಕಿಗಳಿಗೆ ಬೇಕಾದ ಪಾನ್-ಪರಾಗ್, ಗುಟ್ಕಾ, ಪಾನಮಸಾಲ, ತಂಬಾಕು, ಸಿಗರೇಟು, ಅಡಿಕೆ-ಎಲೆ, ಸುಣ್ಣದ ಚೀಟಿಗಳು, ಸೋಪಿನ ಚೀಟಿಗಳು, ಅಡಿಕೆಪುಡಿ ಚೀಟು, ನಶಿಪುಡಿ, ಕಾಚು, ಏಲಕ್ಕಿ, ಲವಂಗ ಚೀಟಿಗಳು ಇಷ್ಟೇ ಅಲ್ಲದೆ ಕಲ್ಕತ್ತಾಪಾನ್, ಬಾಬುಲ್ ಪಾನ್, ಸ್ವೀಟ್ ಪಾನ್‌ಗಳನ್ನು, ರಾಂಪುರಿ ಪಾನ್ ಹೀಗೆ ಮುಂತಾದ ರೀತಿಯ ಪಾನ್‌ಗಳು ಈ ಅಂಗಡಿಗಳಲ್ಲಿ ಲಭ್ಯವಾಗುತ್ತವೆ.

ಪಾನ್-ಬಿಡಾವರ್ತಕರು ತಮ್ಮಲ್ಲಿ ಮಾರಾಟವಾಗುವ ವಸ್ತುಗಳನ್ನು ಗ್ರಾಹಕರಿಗೆ ಗೋಚರವಾಗುವಂತೆ ತಮ್ಮ ಅಂಗಡಿಯ ಮುಂಭಾಗದಲ್ಲಿ ಎಲ್ಲಾ ವಿಧಗಳ ಒಂದೊಂದು ಭಾಗಗಳನ್ನು ನೇತುಹಾಕಿರುವರು. ಇದಲ್ಲದೆ ಕೆಲವೊಂದು ಅಂಗಡಿಕಾರರು ತಮ್ಮಲ್ಲಿ ಯಾವ ಯಾವ ಪಾನ್‌ಗಳು ಸಿಗುತ್ತವೆ ಹಾಗೂ ಇನ್ನಿತರ ವಿಶೇಷವಾಗಿ ಸಿಗುವ ಪದಾರ್ಥಗಳನ್ನು ಚಾರ್ಟ್ ರೀತಿಯಲ್ಲಿ ಅಥವಾ ಬೋರ್ಡ್‌ನಲ್ಲಿ ಬರೆದಿರುತ್ತಾರೆ. ಈ ಅಂಗಡಿಗಳು ನೋಡುವುದಕ್ಕೆ ವಿಶಾಲವಾಗಿ ಕಾಣದಿದ್ದರೂ ಚಿಕ್ಕದಾಗಿದ್ದರೂ, ಪಾನ್‌ಗಳಿಗೆ ಸಂಬಂಧಿಸಿದಂತೆ ಎಲ್ಲಾ ಪದಾರ್ಥಗಳು ಇವರಲ್ಲಿ ದೊರೆಯುತ್ತಿವೆ. ಈ ರೀತಿಯ ಅಂಗಡಿಗಳಿಗೆ ಕಡಿಮೆ ವೆಚ್ಚದ ವಿನಿಯೋಗ ದಿಂದ ಹೆಚ್ಚು ಲಾಭವನ್ನು ತರುವಂತವುಗಳಾಗಿವೆ.

ಒಂದು ಜಾತ್ರೆ ಯಶಸ್ವಿಯಾಗಬೇಕಾದರೆ ಈ ಮೊದಲಿನ ಅಂಗಡಿಗಳು ಹೇಗೆ ಪೂರಕವೋ ಹಾಗೇ ಈ ಪಾನ್-ಬೀಡಾ ಅಂಗಡಿಗಳು ಪೂರಕವಾಗಿವೆ. ಏಕೆಂದರೆ ಈ ಪಾನ್-ಬೀಡಾ ಅಂಗಡಿಗಳು ಜಾತ್ರೆಗೆ ಗ್ರಾಮೀಣ ಪ್ರದೇಶದಿಂದ ಮತ್ತು ಪಟ್ಟಣ ನಗರ ಪ್ರದೇಶಗಳಿಂದ ವಿವಿಧ ತಲಬುವುಳ್ಳ ಜನರು ಆಗಮಿಸುತ್ತಾರೆ. ಇಂಥವರ ಆಸೆಗಳ ಈಡೇರಿಕೆಗೆ ಪಾನ್-ಬೀಡಾ ಅಂಗಡಿಗಳು ಒಂದು ಪಕ್ಷ ಇರದಿದ್ದಲ್ಲಿ, ಅವರಲ್ಲಿ ಕೆಲವರು 'ಇದ್ಯಾವ ಜಾತ್ರೆ; ಒಂದು ಎಲೆ ಸಿಗಲಿಲ್ಲ, ಸುಣ್ಣ ಸಿಗಲಿಲ್ಲ, ತಂಬಾಕು ಸಿಗಲಿಲ್ಲ;' ಎಂದು ಬೇಸರದಿಂದ ದೂರುತ್ತಿದ್ದರು. ಆದರೆ ಈ ಪಾನ್ ಬೀಡಾ ಅಂಗಡಿಗಳು ಬರುವುದರಿಂದ ಈ ಜಾತ್ರೆ ಎಲ್ಲರಿಗೂ ಮುಕ್ತವಾಗಿದೆ. ಜಾತ್ರೆಯಲ್ಲಿ ಪಾನ್ ಬೀಡಾ ಅಂಗಡಿಗಳನ್ನು ಇಂತಲ್ಲೆ ಹಾಕಬೇಕೆಂಬ ನಿಯಮವೇನು ಇಲ್ಲ. ತಮಗೆ ಅನುಕೂಲವಾದ ಸ್ಥಳದಲ್ಲಿ ಹಾಕುತ್ತಾರೆ. ಈ ವ್ಯಾಪಾರಸ್ಥರು ಈ ತರಹದ ಜಾತ್ರೆಗಳಲ್ಲಿ ಅಂಗಡಿಯನ್ನು ಹಾಕಲು ತಮಗೆ ಯೋಗ್ಯವಾದ ರೀತಿಯಲ್ಲಿ ಪರಿಕರಗಳನ್ನು ತಯಾರಿಸಿಕೊಂಡಿರುವರು. ಇವರು ತಮ್ಮ ವ್ಯಾಪಾರ ಚೆನ್ನಾಗಿ ನಡೆಯಲಿ ಹಾಗೂ ತಮ್ಮ ಮಾರಾಟವಾಗುವ ವಸ್ತುಗಳು ಎಲ್ಲಾ ಗ್ರಾಹಕರಿಗೆ ಗೋಚರಿಸಲಿ ಎಂದು ತಮ್ಮ ಅಂಗಡಿಯ ಮುಖಭಾಗದಲ್ಲಿ ಇಳಿಬಿಟ್ಟಿರುತ್ತಾರೆ. ಇಂತಹ ವಸ್ತುಗಳನ್ನು

ತಮ್ಮ ಅಂಗಡಿಯಲ್ಲಿ ಜೋಡಿಸುವುದರಲ್ಲಿ ಕಲೆಯನ್ನು ಹೊಂದಿರುತ್ತಾರೆ. ಎಲ್ಲಾ ರೀತಿಯ ಸಿಗರೇಟುಗಳನ್ನು ಒಂದು ಭಾಗಕ್ಕೆ, ಎಲ್ಲಾ ರೀತಿಯ ಬೀಡಿಗಳು ಇನ್ನೊಂದು ಭಾಗಕ್ಕೆ, ವಿವಿಧ ತಂಬಾಕು ಚೀಟಿಗಳನ್ನು ಮತ್ತೊಂದು ಭಾಗಕ್ಕೆ, ಹೀಗೆ ಆಯಾ ವಸ್ತುಗಳಿಗೆ ಅನುಗುಣವಾಗಿ ಆಕಾರ ಗಾತ್ರಕ್ಕೆ ಹೊಂದಿಕೊಳ್ಳುವಂತೆ ಜೋಡಿಸಿರುತ್ತಾರೆ.

ಕೆಲವು ವ್ಯಕ್ತಿಗಳು ಜಾತ್ರೆ ಸಮಯದಲ್ಲಿ ಈ ವ್ಯಾಪಾರ ಮಾಡಬೇಕೆನಿಸಿದರೆ ತಮ್ಮ ಮನೆಯಲ್ಲಿ ಇರುವಂತ ವ್ಯವಸ್ಥಿತವಲ್ಲದ ಸಾಮಗ್ರಿಗಳನ್ನೇ ಬಳಸಿಕೊಂಡು ವ್ಯಾಪಾರದಲ್ಲಿ ತೊಡಗಿರುವುದನ್ನು ಜಾತ್ರೆಯಲ್ಲಿ ಕಾಣಬಹುದು. ಬಡತನದಿಂದ ಹೊಟ್ಟೆ ಹೊರಿಯಲೋ ಅಥವಾ ವ್ಯಾಪಾರ ಮಾಡುವ ಹಂಬಲದಿಂದನೋ ವ್ಯಾಪಾರದಲ್ಲಿ ಚಿಕ್ಕಮಕ್ಕಳಿಂದ ಕೂಡಿ ವೃದ್ಧರವರೆಗೂ ಇದರಲ್ಲಿ ತೊಡಗಿರುತ್ತಾರೆ. ಜಾತ್ರೆಯ ಪ್ರಮುಖ ಆಚರಣೆಗಳು ಒಂದೇ ದಿನ ನಡೆದರೂ ಸಹ ಇವರು ಮಾತ್ರ ಜಾತ್ರೆ ಪ್ರಾರಂಭದ ಮೊದಲಿನ ದಿನದಂದು ಬಂದು ಜಾತ್ರೆ ಮುಕ್ತಾಯದ ಮರು ದಿನವೂ ಅಂದರೆ ಮೂರು ದಿನಗಳವರೆಗೂ ವ್ಯಾಪಾರ ಮಾಡುತ್ತಿದ್ದರು. ಇದನ್ನು ಗಮನಿಸಿದರೆ ನನಗೆ ತಿಳಿದಂತೆ ಹೇಳುವುದಾದರೆ, ಜಾತ್ರೆಯ ದಿನ ಯಾವುದೇ ಕಾರಣಕ್ಕೆ ಬರದೇ ಆಗದಿರುವಂತ ಭಕ್ತರು ಆಗೊಬ್ಬರು ಈಗೊಬ್ಬರು ಬರುವಂತ ಭಕ್ತರಿಂದ ವ್ಯಾಪಾರ ಆದೀತು ಎಂಬ ಆಶಾಭಾವದಿಂದ ಮೂರು ದಿನಗಳ ಕಾಲ ಗಿರಾಕಿಗಳಿಗಾಗಿ ಜಾತಕ ಪಕ್ಷಿಯಂತೆ ಕಾಯುತ್ತಿರುತ್ತಾರೆ. ಪಾನ್-ಬೀಡಾ ವ್ಯಾಪಾರಸ್ಥರು ಪೂರ್ವಸಿದ್ಧತೆಯಿಂದ ತಮ್ಮ ಮೂರು ದಿನಗಳಿಗೆ ಆಗುವಂತೆ ಎಲ್ಲಾ ಮಾಲ್ (ಪಾನ್-ಬೀಡಾಗಳಿಗೆ ಸಂಬಂಧಿಸಿದ ವಸ್ತುಗಳು)ಗಳನ್ನು ಸಂಗ್ರಹಿಸಿಕೊಂಡು ಬಂದಿರುತ್ತಾರೆ. ಇವರು ಯಾವ ಭಾಗದ ಜನರು ಜಾತ್ರೆಗೆ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಾರೆ, ಎಂಬುದನ್ನು ಊಹಿಸಿ ತಮ್ಮಲ್ಲಿರುವ ಯಾವ ಮಾಲ್(ಮಾರಾಟದ ಪದಾರ್ಥಗಳು) ಇನ್ನೂ ಹೆಚ್ಚಿಗೆ ಒಯ್ಯಬೇಕೆಂದು ಮುಂಚಿತವಾಗಿ ಯೋಚಿಸಿ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಿಸಿಕೊಂಡಿರುತ್ತಾರೆ. ಇಂತಹ ಅಂಡಿಗಳಲ್ಲಿ ಮಾರಾಟವಾಗುವಂತ ಬಹುಪಾಲು ಪದಾರ್ಥಗಳು ಆರೋಗ್ಯಕ್ಕೆ ಹಾನಿಕರ ಎಂಬುವುದು ಈ ವ್ಯಾಪಾರಸ್ಥರಿಗೆ ತಿಳಿದಿದ್ದರೂ, ಇದು ತಮಗೆ ಅನಿವಾರ್ಯವೆಂದು ಗ್ರಾಹಕರರಿಗೆ ಅವಶ್ಯಕವೆಂದು ಮಾರಾಟದಲ್ಲಿ ತೊಡಗಿರುತ್ತಾರೆ.

೫.೩.೯. ಬಳೆಗಾರ ಅಂಗಡಿಗಳು : (Boutique shops)

ಪ್ರಸ್ತುತ ದಿನಗಳಲ್ಲಿ ಬಳೆಯ ವ್ಯಾಪಾರಸ್ಥರ ಸಂಖ್ಯೆ ಜಾತ್ರೆಯ ದಿನಗಳಂದು ಹೆಚ್ಚಿನ ಸಂಖ್ಯೆಯಲ್ಲಿ ಅಂಗಡಿಗಳನ್ನು ಹಾಕಿರುವರು. ಅರಿವಿನ ಮಂಟಪದ ಮುಂಭಾಗದ ಎಡ ಬಲಭಾಗದಲ್ಲಿ ಹಲವಾರು ಅಂಗಡಿಗಳು ಸಿದ್ಧಗೊಂಡಿರುತ್ತವೆ. ಈ ಬಳೆಯ ವ್ಯಾಪಾರಸ್ಥರು ಸುಸಜ್ಜಿತವಾದಂತ ರೀತಿಯಲ್ಲಿ ಕೆಲವು ಅಂಗಡಿಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಇನ್ನು ಕೆಲವರು ಪ್ಲಾಸ್ಟಿಕ್ ತಾಡಪತ್ರೆಯಿಂದ ಥೆರೆ ಹೊಡೆದುಕೊಂಡಿರುವರು. ಚಿಕ್ಕ ಚಿಕ್ಕ ಬಳೆ ವ್ಯಾಪಾರಸ್ಥರು ಬಿದಿರು ಬುಟ್ಟಿ, ಅರಬಿ ಚೀಲದಲ್ಲಿ, ಮರಗಳ ಕೆಳಗೆ ವ್ಯಾಪಾರವನ್ನು ಪ್ರಾರಂಭಿಸಿರುವರು. ಇವರಲ್ಲಿ ವಿವಿಧ

ಬಣ್ಣಬಣ್ಣದ ಗಾಜಿನ ಬಳೆಗಳು, ಪ್ಲಾಸ್ಟಿಕ್ ಬಳೆಗಳನ್ನು ತಂದಿರುವರು. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಸರಿ ಹೊಂದುವಂಥ ಬಳೆಗಳನ್ನು ಮಾರಾಟ ಮಾಡುವರು. ಆಧುನಿಕರಣತೆ ಹೊಂದುವಂತ ವಿವಿಧ ವಿನ್ಯಾಸದ ಬಳೆಗಳನ್ನು ಗಿರಾಕಿಗಳಿಗೆ ಕಾಣಿಸುವಂತೆ ಕಪಾಟುಗಳಲ್ಲಿ ಹೊಂದಿಸಿಟ್ಟಿರುತ್ತಾರೆ. ದೊಡ್ಡ ದೊಡ್ಡ ಅಂಗಡಿಗಳಲ್ಲಿ ಮೂರರಿಂದ ನಾಲ್ಕು ಜನ ವ್ಯಾಪಾರಸ್ಥರು ಕೂಡಿರುವರು. ಇದಲ್ಲದೆ ಏಕವ್ಯಕ್ತಿಯಿಂದ ಕೂಡಿದ ಅಂಗಡಿಗಳು ಕಂಡುಬರುತ್ತಿವೆ. ಮಹಿಳೆಯರ ಆಸಕ್ತಿಗೆ ಸರಿಹೊಂದುವಂತ ಬಳೆಗಳನ್ನು ಅಧಿಕ ಪ್ರಮಾಣದಲ್ಲಿ ತಂದಿರುವರು.

ಈ ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ ಚಂದಾಲಿಂಗೇಶ್ವರ ಜಾತ್ರೆಯು ಕಳೆದ ನಾಲ್ಕಕು-ಐದು ದಶಕಗಳ ಆಚೆಗೆ ಮೆಲುಕು ಹಾಕಿದಾಗ ಭಕ್ತರ ಸಿದ್ಧತೆಯು ಸರಳತೆಯಿಂದ ಕೂಡಿತ್ತು. ಆ ದಿನಗಳಲ್ಲಿ ಜಾತ್ರೆ ನಡೆಯಬೇಕಾದರೆ ಭಕ್ತರು ಕಾಲ್ನುಡಿಗೆಯಿಂದ ಬಂಡಿಯನ್ನು ಕಟ್ಟಿಕೊಂಡು ಬರುವುದು ವಾಡಿಕೆಯಾಗಿತ್ತು. ಭಕ್ತರು ಜಾತ್ರೆ ನಡೆಯುವುದಕ್ಕಿಂತ ಮೊದಲೇ ನಾಲ್ಕೈದು ದಿನಗಳ ಮುಂಚಿತವಾಗಿ ಸಿದ್ಧತೆ ನಡೆಸುತ್ತಿದ್ದರು. ಅಂದಿನ ಜಾತ್ರೆಯು ಒಂದೇ ದಿನಕ್ಕೆ ಸೀಮಿತವಾಗಿರುವಂತೆ ತೋರುತ್ತದೆ. ಆದರೆ ಇಂದಿನ ದಿನದ ಜಾತ್ರೆಯನ್ನು ನೋಡಿದಂತೆ ತುಂಬಾ ಬದಲಾದಂತೆ ತೋರುತ್ತದೆ. ಜಾತ್ರೆಗೆ ಬರುವಂತಹ ಭಕ್ತರು ಸಾರಿಗೆ ಸಂಪರ್ಕವನ್ನು ಬಳಸಿಕೊಂಡು ಕೆಲವೇ ಗಂಟೆಗಳಲ್ಲಿ ಜಾತ್ರೆಗೆ ಬರುವರಾಗಿದ್ದಾರೆ. ಕಾರು, ಮೀನಿ ಬಸ್ಸ್, ಟ್ರ್ಯಾಕ್ಟರಿ, ಬೈಕ್, ಟೆಂಪೋ ಹೀಗೆ ಮೊದಲಾದ ವಾಹನಗಳನ್ನು ಗೊತ್ತು ಮಾಡಿಕೊಂಡು ಅಜ್ಜನ ಜಾತ್ರೆಗೆ ಆಗಮಿಸುವರು. ಪ್ರಸ್ತುತ ದಿನಮಾನಕ್ಕೆ ತಕ್ಕಂತೆ ಭಕ್ತರ ವೇಷಭೂಷಣಗಳಲ್ಲಿ ಅವರವರ ಯೋಗ್ಯತೆಗೆ ತಕ್ಕ ಹುಡುಗಿ ತೊಡಿಗೆಗಳನ್ನು ಧರಿಕೊಂಡು ಬಂದಿರುವರು.

ಜಾತ್ರೆಯು ಯಶಸ್ವಿಯಾಗಬೇಕಾದರೆ ವಿವಿಧ ವರ್ತಕರು ಮುಖ್ಯವಾಗಿರುತ್ತಾರೆ. ಅದರಂತೆ ಈ ಜಾತ್ರೆಯಲ್ಲಿ ಸ್ಟೇಸನರಿ, ವಿಭೂತಿ, ಕುಂಕುಮ, ಬಳೆಗಾರರು, ಪಳರಾದ, ದಿನಸಿಅಂಗಡಿಗಳು, ಫಲಪುಷ್ಪ ತೆಂಗಿನಕಾಯಿವರ್ತಕರು, ತಂಪುಪಾನೀಯ ಅಂಗಡಿಗಳು, ಪಾನ್-ಬೀಡ ಅಂಗಡಿಗಳು ಇನ್ನು ಮುಂತಾದ ವರ್ತಕರು ತಮ್ಮ ವ್ಯಾಪಾರ ವಹಿವಾಟಿನಲ್ಲಿ ತೊಡಗಿರುತ್ತಾರೆ. ಸ್ಟೇಸನರಿ ಅಂಗಡಿಗಳು ಹೆಚ್ಚನು ಹೆಚ್ಚಾಗಿ ಮಕ್ಕಳಿಗೆ ಆಟಿಕೆ ಸಾಮಗ್ರಿಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಿವೆ. ಇವು ಇಂದು ದೊಡ್ಡ ದೊಡ್ಡ ಕಂಪನಿಗಳು ಉತ್ಪಾದಿಸುವ ವಸ್ತುಗಳ ತದ್ರೂಪಿಯ ಆಟಿಕೆಗಳನ್ನು ಜನರಿಗೆ ಪರಿಚಯಿಸಲು ಪೂರಕವಾಗಿವೆ. ಹೀಗೆ ಇತರ ಅಂಗಡಿಗಳು ಜಾತ್ರೆಗೆ ಬಂದಿರುವ ಭಕ್ತರಿಗೆ ಅವಶ್ಯಕವಾದಂತಹ ವಸ್ತುಗಳನ್ನು ಪೂರೈಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಚಂದಾಲಿಂಗೇಶ್ವರನ ಜಾತ್ರೆ ನೆರವೇರಲು ಆಚರಣೆ, ನಂಬಿಕೆ ಮತ್ತು ವಿಧಿ-ನಿಷೇಧಗಳು ಎಷ್ಟು ಮುಖ್ಯವಾಗಿವೆಯೂ ಅಷ್ಟೇ ಆತನ ಕುರಿತ ಇರುವ ಜನಪದ ಸಾಹಿತ್ಯ ಹಾಗೂ ಶಿಷ್ಟ ಸಾಹಿತ್ಯವನ್ನು ಹರಿಯುವುದು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಅಧ್ಯಯನದ ಅನುಕೂಲದ ದೃಷ್ಟಿಯಿಂದ ಈ ಮುಂದಿನ ಆರನೇ ಅಧ್ಯಾಯ "ಚಂದಾಲಿಂಗೇಶ್ವರನ ಕುರಿತ ಸಾಹಿತ್ಯ" ಎಂಬುದರಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಅಡಿಟಿಪ್ಪಣಿ

೧. ವೆಂಕಟರಮಣಯ್ಯ.ಟಿ.ವಿ, ಕನ್ನಡ ಗಾದೆಗಳ ಕೋಶ, ೧೯೮೩, ಪು.ಸಂ.೪೦

೨. ಕೃಷ್ಣ ಮೂರ್ತಿ.ಕೆ,(ಸಂ), ಕವಿರಾಜಮಾರ್ಗಂ, ೨೦೧೫, ಪು.ಸಂ.೬೨

೩. ಸುಧಾಕರ,ನಮ್ಮಸುತ್ತಿನ ಗಾದೆಗಳು, ೧೯೭೩, ಪು.ಸಂ.೬೧

೪. ಅದೇ,ಪು.ಸಂ. ೯೮

೫. ರಾಮನಂದನ್.ಎ.ಕೆ., ಗಾದೆಗಳು, ೧೯೬೫,ಪು.ಸಂ.೯೭

೬. ಮರುಳು ಸಿದ್ದಪ್ಪ ಕೆ., ನಾಗರಾಜ.ಕಿ.ರಂ, (ಸಂ) ವಚನಕಮ್ಮಟ, ೨೦೧೫, ಪು.ಸಂ.೧೮

ಅಧ್ಯಾಯ : ೬

ಚಂದಾಲಿಂಗೇಶ್ವರನ ಕುರಿತ ಸಾಹಿತ್ಯ

(Literature on Chandalingeshwara)

೬.೧. ಜನಪದ ಸಾಹಿತ್ಯ

೬.೧.೧. ಚಂದಾಲಿಂಗೇಶ್ವರನ ಹಾಡುಗಳು

೬.೧.೨. ಐತಿಹ್ಯಗಳು

೬.೨. ಚಂದಾಲಿಂಗೇಶ್ವರನ ಶಿಷ್ಟ ಸಾಹಿತ್ಯ

೬.೨.೧. ಹಾಡುಗಳು

೬.೨.೨. ಕಥೆಗಳು

ಅಧ್ಯಾಯ : ಆರು
ಚಂದಾಲಿಂಗೇಶ್ವರನ ಕುರಿತ ಸಾಹಿತ್ಯ
(Literature on Chandalingeshwara)

ಪ್ರಸ್ತಾವನೆ: : (Introduction)

ಸೃಷ್ಟಿಯಲ್ಲಿ ಮಾನವ ಅತ್ಯಂತ ಮುಂದುವರೆದ ಪ್ರಾಣಿಯಾಗಿದ್ದಾನೆ. ಇದಕ್ಕೆ ಕಾರಣ ಅವನಿಗೆ ಯೋಚಿಸುವ ಶಕ್ತಿ ಹಾಗೂ ಮಾತನಾಡುವ ಶಕ್ತಿ ಇರುವುದೇ ಆಗಿದೆ. "ಮನುಷ್ಯ ಯಾವ ಯಾವ ಪ್ರಾಣಿ ವರ್ಗದಲ್ಲಿಯೂ ಇಲ್ಲದಿರುವಷ್ಟು ವ್ಯವಸ್ಥಿತವಾಗಿ ಪರಸ್ಪರ ಸಂವಹನಿಸಬಲ್ಲ ಭಾಷೆಯನ್ನು ತನ್ನ ಸ್ವಪ್ರಯತ್ನದಿಂದ ನಿರ್ಮಿಸಿಕೊಂಡನು."[೧] ಅದರ ಮೂಲಕವೇ ಅವನ ವ್ಯವಹಾರ ಸಾಗುತ್ತಿದೆ. ಹೀಗೆ ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯದೊಡನೆ ಒಂದು ಬಗೆಯ ಸಾಹಿತ್ಯದ ಉದಯ ಆಗುತ್ತದೆ. ಭಾಷೆಯ ಉದಯವೆಂದರೆ ಸಾಹಿತ್ಯದ ಉದಯವೇ ಸರಿ. ರಸಾನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ. ಸಾಹಿತ್ಯದ ಈ ಮೂಲ ಸತ್ವವು ಅಭಿವ್ಯಕ್ತಿಯ ಸಾಧನವಾದ ಭಾಷೆಯಲ್ಲಿಯೂ ಇರುತ್ತದೆ. ಹೀಗಾಗಿ ಭಾಷೆಯ ಉದಯದ ತೀರ ಮೊದಲಿನ ಅವಸ್ಥೆಯಲ್ಲಿ ಭಾಷೆಯೇ ಸಾಹಿತ್ಯವಾಗಿದ್ದರೆ, ಎರಡನೆಯ ಆವಸ್ಥೆಯಲ್ಲಿ ಭಾಷೆಯ್ದೇ ಸಹಜವಾದ ಆದರೂ ಪ್ರತ್ಯೇಕವಾದ ಸಾಹಿತ್ಯವು ಉದಯವಾಗಿರಬೇಕು.

ಈ ಬಗೆಯ ಸಾಹಿತ್ಯಕ್ಕೆ ಬಾಯಿಯೇ ಆಧಾರ. "ಇದಕ್ಕೆ ಲಿಪಿಯಿಲ್ಲ. ಕರ್ತೃ ಯಾರೆಂದು ತಿಳಿಯುವುದು ಸುಲಭವಲ್ಲ. ಹಲವು ಕಾಲದ ಹಲವು ಬಾಯಿಗಳು ಇದನ್ನು ಹೇಳುತ್ತಾ ರೂಪಿಸಬಹುದು, ತಿದ್ದಬಹುದು, ಕೆಡಿಸಲುಬಹುದು. ಇದಕ್ಕೆ ಇಂದು ನಾವು ಜನಪದ ಸಾಹಿತ್ಯ ಎಂದು ಹೇಳುತ್ತೇವೆ."[೨] ಸಾಹಿತ್ಯ ಚರಿತ್ರೆಯಲ್ಲಿ ಜನಪದ ಸಾಹಿತ್ಯಕ್ಕೆ ಮೇಲಾದ ಸ್ಥಾನವಿದೆ. ಇತರ ಸಾಹಿತ್ಯದ ಮೇಲೆ ಅದು ಬೀರಿದ ಪ್ರಭಾವದ ದೃಷ್ಟಿಯಿಂದಲೂ ಅದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಆದರೆ ಬರಹಕ್ಕೆ ಒಳಪಟ್ಟ ಆಧಾರಗಳ ಅಭಾವದಿಂದ ಇದನ್ನು ಕ್ರಮಬದ್ಧವಾಗಿ, ನೇರವಾಗಿ ಅಭ್ಯಾಸಿಸಲು ಬರುವಂತಿಲ್ಲ. ಅಂತೇ ನಾವು ಕೈಗೊಂಡ ಸಾಂಸ್ಕೃತಿಕ ವಿವೇಚನೆಯಲ್ಲಿ ಬರಹದಲ್ಲಿ ದೊರೆತ ಸಾಹಿತ್ಯಕ್ಕೆ ಹೆಚ್ಚು ಸ್ಪಷ್ಟತೆ ದೊರೆಯುವುದು ಸ್ವಾಭಾವಿಕವಾಗಿದೆ. ಈ ಜನಪದ

ಸಾಹಿತ್ಯ ಹಾಗೂ ಶಿಷ್ಟ ಸಾಹಿತ್ಯೋದಯದ ಸಂದರ್ಭದಲ್ಲಿಯೂ ಅದು ತಪ್ಪಿದ್ದಲ್ಲ. ಆದ್ದರಿಂದ ಕನ್ನಡ ಸಾಹಿತ್ಯ ಹಾಗೂ ಜನಪದ ಸಾಹಿತ್ಯದ ಉದಯವು ಎಂದು ಯಾರಿಂದ ಎಂಬ ಮಾತುಗಳನ್ನು ಬರೆಯುವಾಗ ಗ್ರಂಥಸ್ಥವಾದ ಅಂದರೆ ಬರಹಕ್ಕೆ ಇಳಿದ ಸಾಹಿತ್ಯವನ್ನು ಗಮನದಲ್ಲಿ ಇಡುತ್ತೇವೆ.

೬.೧. ಜನಪದ ಸಾಹಿತ್ಯ : (Folklore)

ಜನಸಾಮಾನ್ಯರಿಂದ ರಚನೆಯಾದ ಸಾಹಿತ್ಯವೇ ಜನಪದ ಸಾಹಿತ್ಯ ಭಾಷೆಗೆ ಲಿಪಿ ಕಾಣಿಸಿಕೊಳ್ಳದ ಪೂರ್ವಕಾಲದಿಂದಲೇ ಸಾಹಿತ್ಯವು ಹುಟ್ಟಿ, ಅದು ಬಾಯಿಂದ ಬಾಯಿಗೆ ಪ್ರಸಾರವಾಗಿ ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಉಳಿದುಕೊಂಡು ಬಂದಿದೆ. ಜನಪದರು ತಮ್ಮ ಬದುಕಿನ ಕಷ್ಟ ಕಾರ್ಪಣ್ಯಗಳನ್ನು, ನೋವು-ನಲಿವುಗಳನ್ನು, ತಾವು ಮಾತನಾಡುವ ಸರಳ ಭಾಷೆಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಈ ಸಾಹಿತ್ಯ ರಚನೆಯಲ್ಲಿ ಹಿರಿಯರು-ಕಿರಿಯರು, ಗಂಡಸರು, ಹೆಂಗಸರು, ಮತ್ತು ಮಕ್ಕಳೂ ಸಹಿತ ಪಾಲ್ಗೊಳ್ಳುತ್ತಾ ಬರುವುದರಿಂದ ಇದನ್ನು ವ್ಯಕ್ತಿನಿಷ್ಠವೆಂದು ಕರೆಯದೇ ಸಮೂಹ ನಿಷ್ಠವೆಂದು ಗುರುತಿಸಲಾಗಿದೆ. ಇದಲ್ಲದೆ ದುಡಿಮೆಯ ಜೊತೆಯಲ್ಲಿ ಜನಪದ ಸಾಹಿತ್ಯ ಹುಟ್ಟಿರುವುದರಿಂದ ದುಡಿತದ ಲಯಗಳನ್ನು ಅನುಸರಿಸಿ ಇದು ರಚಿತವಾಗಿದೆ.

"ಮನೆಯಲ್ಲಿ ತಾಯಿ ಬೀಸುವಾಗ, ಕುಟ್ಟುವಾಗ, ತೊಟ್ಟಿಲು ತೂಗುತ್ತಾ, ಜೋಗುಳ ಹಾಡುವಾಗ, ರೈತರು ಹೊಲದಲ್ಲಿ ಕೆಲಸ ಮಾಡುವಾಗ, ರಾಶಿ ಮಾಡುವಾಗ, ಹಂತಿ ಹೊಡೆಯುವಾಗ, ಜನಪದ ಗೀತೆಗಳು ರಚನೆಯಾಗಿವೆ. ರಾತ್ರಿ ಅಜ್ಜಿಯರು ತಮ್ಮ ಮೊಮ್ಮಕ್ಕಳನ್ನು ಮಲಗಿಸುವಾಗ ಕಥೆಗಳ ಜಾಡು ಹುಟ್ಟಿದೆ."[೩] ಬದುಕಿನ ಸಂದರ್ಭದಲ್ಲಿ ಹಿರಿಯರಿಂದ ಜೀವನಾನುಭವದ ಗಾದೆಮಾತು, ನುಡಿಗಟ್ಟುಗಳು ಮನದ ಅಂತರಾಳದಿಂದ ಹೊರಹೊಮ್ಮಿದೆ. ಇದೆಲ್ಲ ಓದಿನಿಂದ ಕಲಿತುದ್ದಾಗಿರದೇ ಅಜ್ಜನಿಂದ ತಂದೆಗೆ, ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಹೀಗೆ ಸಾಗಿ ಬರುವಂತದ್ದು. ಹೀಗೆ ಪೀಳಿಗೆಯಿಂದ ಪೀಳಿಗೆಗೆ ಸಾಗಿಬರುವಾಗ ಹಳೆಯ ಕಾಲದ ಕೆಲವು ಸಂಗತಿಗಳು ಬಿಟ್ಟುಹೋಗಬಹುದು. ಹೊಸ ಅಂಶಗಳು ಬಂದು ಸೇರಬಹುದು. ಹೀಗೆ ಇದು ನಿರಂತರ ಚಲನಶೀಲತೆಯುಳ್ಳ ಸಂವಹನ ಮಾಧ್ಯಮವಾಗಿದೆ.

೬.೧.೧. ಚಂದಾಲಿಂಗೇಶ್ವರನ ಹಾಡುಗಳು : (Songs of Chandalingeshwara)

ಚಂದಾಲಿಂಗೇಶ್ವರನಿಗೆ ಸಂಬಂಧಿಸಿದಂತೆ ಈ ಜನಪದ ಹಾಡುಗಳನ್ನು ಗೊರವಪ್ಪನಾದ ಶ್ರೀ ಕಳಕಪ್ಪ ಬಾಲಪ್ಪ ನರಹರಿ ಹಾಗೂ ನಾಗಪ್ಪ ಮೇಟಿಯವರಿಂದ ಸಂಗ್ರಹಮಾಡಿರುತ್ತೇನೆ. ಆದ್ದರಿಂದ ಈ ಜನಪದ ಹಾಡುಗಳಿಗೆ ಒಂದು ಪದಕ್ಕೆ ಇಂತಿಷ್ಟೇ ಸಾಲುಗಳು ಇರಬೇಕೆಂದು ನಿಯಮಗಳಿಲ್ಲ. ನಮ್ಮ ಜನಪದರು ತಮಗೆ ಅನುಕೂಲವಾದ ರೀತಿಯಲ್ಲಿ ಹಾಡುತ್ತಾರೆ. ಇಲ್ಲಿ ಹೆಚ್ಚಾನುಹೆಚ್ಚು ಅಕ್ಷರಗಳ ಉಚ್ಚಾರಣೆಯ ಮಹಾಪ್ರಾಣಾಕ್ಷರಗಳು ಅಲ್ಪಪ್ರಾಣವಾಗಿ, ಆ ಪದಗಳಿಗೆ

ಪರು ಇಳುವಾಗಿ ಕಂಡುಬರುತ್ತವೆ. ಅವರಿಗೆ ಒಂದು ಸಾಲಿನಲ್ಲಿ ಇಂತಿಷ್ಟು ಅಕ್ಷರಗಳು ಇರಬೇಕೆಂದಿಲ್ಲ. ಗೇಯಕ್ಕೆ ಅನುಗುಣವಾಗಿ ಅನಿಯಮಿತವಾಗಿ ಹಾಡುತ್ತಾರೆ. ಮಾತ್ರಗಣ ಇಂಥ ಯಾವುದೇ ನಿಯಮಗಳಿಲ್ಲದೆ ಹಾಡುತ್ತಾರೆ. ಆದರೆ ಇವರು ಹಾಡುವಂತ ಹಾಡಿನಲ್ಲಿ ಪಲ್ಲವಿಗಳು, ಪ್ರಸಾದ ಪದ ಬಳಕೆ ಮಾಡಿಕೊಂಡಿದ್ದಾರೆ. ಆದ್ದರಿಂದ ನಾನು ಕ್ಷೇತ್ರಕಾರ್ಯದಲ್ಲಿ ಸಾಧ್ಯವಾದ ಮಟ್ಟಿಗೆ ಚಂದಾಲಿಂಗೇಶ್ವರನಿಗೆ ಸಂಬಂಧಿಸಿದಂತ ಹಾಡುಗಳನ್ನು ಕ್ರೋಢೀಕರಿಸಿ ಅವುಗಳ ಆಶಯವನ್ನು ಈ ಮಹಾಪ್ರಬಂಧದಲ್ಲಿ ಕಟ್ಟಿಕೊಡಲಾಗಿದೆ.

೧. ಹೂವಿನ ಭಾರಕ ಬೆವೆತಾನೊ ಚಂದಣ್ಣ

ಹೂವಿನ ಬಾರಕ ಬೆವೆತಾನೊ ಚಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನಾ ಚೌರ ಬೀಸಲೇನಾ
ದಡಿಯ ಜೊತ್ರಕ ಬೆವುತಾನೊ ಚಾಂದಾಣ್ಣ (॥)
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ ॥೧॥

ಜಾರದ ಅಂಗಿಯ ಭಾರಕ ಬೇವಿತಾನೊ ಚಾಂದಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ
ಕಂಬಳ್ಳಿಯ ಬಾರಕ ಬೆವುತಾನೊ ಚಾಂದಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ ॥೨॥

ಭಂಡಾರದ ಬಾರಕ ಬೆವುತಾನೊ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ
ಕುಂಕುಮ ಬಾರಕ ಬೆವುತಾನೊ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ ॥೩॥

ಈಭೂತಿ ಬಾರಕ ಬೆವುತಾನೊ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ
ಬಂಗಾರ ಬಾರಕ ಬೆವುತಾನೊ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ ॥೪॥

ಬೆಳ್ಳಿಯ ಬಾರಕ ಬೆವುತಾನೊ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ
ಕೋರಿಯ ಅಂಗಿಯ ಬಾರಕ ಬೆವುತಾನೋ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ॥೫॥

ಗೆಜ್ಜಿಯ ಬಾರಕ ಬೆವುತಾನೊ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ
ಚಾಟಿಯ ಬಾರಕ ಬೆವುತಾನೋ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ॥೬॥

ಹೂವಿನ ಬಾರಕ ಬೆವುತಾನೊ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ
ತೋಡೆದ ಬಾರಕ ಬೆವುತಾನೊ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ॥೭॥

ಲಿಂಗುದ ಬಾರಕ ಬೆವುತಾನೊ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ
ರುದ್ರಾಕ್ಷಿ ಬಾರಕ ಬೆವುತಾನೋ ಚಾಂದಾಣ್ಣ
ತೂಗು ಮಂಚದ ಮ್ಯಾಲ ತೂಗಲೇನು ಚೌರ ಬೀಸಲೇನಾ॥೮॥

೨) ಬಾಳಿಯಾ ಎಲಿಯಾಗ ಬಾಲೆರ ಎಡೆಮಾಡಿ

ಬಾಳಿಯಾ ಎಲಿಯಾಗ ಬಾಲೆರ ಎಡೆಮಾಡಿ
ನಿಂಬಿಯ ಎಲಿಯಾಗ ರಂಬೆಯ ಎಡೆಮಾಡಿ
ಬಾಗ್ಯೆದ ಮನ್ನೇರಾಳ ಬಯಲಾಗ್ಯಾವು ಚಾಂದಾಣ್ಣಗ ॥೧॥

ದಡ್ಡಿಯ ಎಲಿಯಾಗ ದೊಡ್ಡರ ಎಡಿಮಾಡಿ
ಕರಿಯ ಕಂಬಳಿ ಮಾಡಿ ಮುರದ ಗದಿಗೆ ಮಾಡಿ
ಕರಿಯ ನಾಗೇಂದ್ರ ಎಡೆ ಎತ್ತಿತವ್ವ ಚಾಂದಾಣ್ಣಗ
ಬೆಳ್ಳಿಯ ಪಾಲಕ್ಕಿ ಹೊರಗಡವ್ವ ಚಾಂದಾಣ್ಣ ॥೭॥

ಬನ್ನಿಯಾ ಗಿಡಕ ಹೊಗ್ಯಾನವ್ವ ಚಾಂದಾಣ್ಣ
ಬನ್ನಿಯಾ ಮುಡುದು ಬರ್ತಾನೆವ್ವ ಚಾಂದಾಣ್ಣ
ಬನ್ನಿಯ ಮುಡುದು ಬರ್ತಾನ ಚಂದಾಲಿಂಗಣ್ಣ

ನಾವೆದ್ದು ಕೈಯಾ ಮುಗೆದೇವಾ ಚಾಂದಾಣ್ಣಗ ॥೩॥
ಇಲ್ಲಿಽಽಗೆ ಹರ...ಹರಾ ಇಲ್ಲಿಽಽಗೆ, ಶಿವ...ಶಿವ
ಇಲ್ಲಿಽಽಗೆ ಸಂದಾ ಪದ ಮುಂದಾ,ಽಽಽ ಚಾಂದಾಣ್ಣಗ
ಸಂದಾಽಽಗೆ ಮುಗಿವತ್ತಿಗೆ ತಂದಾರೊಂದು ಇಳೆವಾಚಾಂದಾಣ್ಣಗ
ನನಗಲ್ಲಾ ನನ್ನ ಗುರುವಿಗೆ ಚಂದಾಣ್ಣಗ ॥೪॥

ನನಗಲ್ಲಾ ನನ್ನಽಽ ಗುರುವಿಗೆ ಕೊಟ್ಟರೆಽಽ
ಬಂದಽಽ ಬಡತನ...ಬಯಲಾ. ಮಾಡ್ತಾನ ಚಂದಾಣ್ಣಗ
ಒಡೆಗಾಯಿ ಹಿಡಿಗಾಯಿ ಒಡೆಯಽಽಟೆಂಗಿನ ಕಾಯಿಽಽ
ಬಗುತ್ತಾರು ತಂದಾರ ಎಳೆಗಾಯಿಽಽ ಚಾಂದಾಣ್ಣಗ!!
ಬಾಗಲ ಮೇಲಾಡಿ ಒಡಕೊಡುಽಽ ಚಾಂದಾಣ್ಣ ॥೫॥

೩) ಚಂದಾಣ್ಣನ ನೆನಿಲಕ ಮಲ್ಲಿಗೆ ಹೂವ ಬೇಕಾಽಽಲಿಂಗದೇವಾ
ಮಲ್ಲಿಗೆ ಹೂವಿನಂತ ಮನಬೇಕು ಲಿಂಗದೇವಾ
ಮಲ್ಲಿಗೆ ಹೂವಿನಂತ ಮನಬೇಕು ಏಳುಕೋಟಿಲಿಂಗ ದೇವಾ
ಬಲ್ಲಿದ ಗುಡದಯ್ಯನ ಸೇವಾ ಪೂಜೆ ಲಿಂಗದೇವಾ ॥೧॥

ಮುಂಜಾಲೆ ಏಳುತ್ತಾಲೇ ಮತ್ಯಾರನ ನೆನೆಯಲಿ ಲಿಂಗದೇವಾ
ಮುತ್ತಿನ ಭಂಡಾರದ ಮುದಿ ಮಲ್ಲ ಲಿಂಗದೇವಾ

ಮುತ್ತಿನ ಭಂಡಾರದ ಮುದಿ ಮಲ್ಲ ನೆನೆದರ
ಬಂದ ಬಡತನ ಬಯಲಾಗಿ ಲಿಂಗದೇವಾ!! ।೨।

ಹೂತ್ತಾವ ಏರುತ್ತಲೇ ಮತ್ಯಾರನ ನೆನೆಯಲಿ ಲಿಂಗದೇವಾ
ಮುತ್ತಿನ ಉಡಿಯಕ್ಕಿ ಸಿರಿಗಂಗಾ ಲಿಂಗದೇವಾ
ಮುತ್ತಿನ ಉಡಿಯಕ್ಕಿ ಸಿರಿಗಂಗಾನ ನೆನೆದರೆ ಲಿಂಗದೇವ
ಅತ್ತಾಗ ಹೋಗಾಗ ಇಪತ್ತ ದಿನಬೇಕು ಲಿಂಗದೇವಾ ॥೩॥

ಇಪತ್ತ ದಿನ ಸೆಡಗರೊ ಲಿಂಗದೇವ
ಇಪತ್ತ ದಿನ ಸೆಡಗರೊ ಲಿಂಗದೇವ ಚಂದಾಲಿಂಗಣ್ಣ ಲಿಂಗದೇವಾ
ಹಣ್ಣ ಹಾಕ್ಯಾರೋ . ಹಡಗಕೊ ಲಿಂಗದೇವಾ
ಹಣ್ಣ ಹಾಕ್ಯಾರೋ ಹಡಗಕೊ ಚಂದಾಲಿಂಗನ ಲಿಂಗದೇವಾ ॥೪॥

ಎಣ್ಣಿ ಹೇರ್ಯಾರೋ ಹಡಗಕ್ಕೂ ಲಿಂಗದೇವಾ
ಎಣ್ಣಿ ಹೇರ್ಯಾರೋ ಹಡಗಕ್ಕೂ ಚಂದಾಲಿಂಗನ ಲಿಂಗದೇವಾ
ಎಣ್ಣಿ ದೀವಟಿಗ್ಯಾಗ ನೆನೆದಾನೊ ಲಿಂಗದೇವಾ
ಎಣ್ಣಿಯ ದೀವಟಿಗ್ಯಾಗ ನೆನೆದಾನೊ ಚಂದಾಲಿಂಗಣ್ಣ ಲಿಂಗದೇವಾ ॥೫॥

ಅಪ್ಪನ ದೀಪ ಸಾರೋ ದೀಪೋಲಿಂಗ
ಅಪ್ಪ ನಿನ್ನ ಕಾಲ ತುಪ್ಪಗಿನ್ನ ಮಿದವಾ ಲಿಂಗದೇವಾ
ಯಾವಾಲ್ಲಿ ತುಳಿದೊ ಸಿಡಿಮುಳ್ಳೆ ಲಿಂಗದೇವಾ
ಯಾವಾಲ್ಲಿ ತುಳಿದೊ ಸಿಡಿಮುಳ್ಳೋ ಚಾಂದಾಲಿಂಗಣ್ಣ ಲಿಂಗದೇವಾ ॥೬॥

ಗುಡ್ಡದ ವಾರಿ ಕೊಚ್ಚ ಉಸಿಗನ್ಯಾಗ ಲಿಂಗದೇವಾ
ಗಾಂಗೆಯ ಮಾಳವ್ವ ಗಂಡರೆಲ್ಲಿ ಹೋಗ್ಯಾರೂ ಲಿಂಗದೇವಾ
ಭಂಡಾರ ಚೀಲ ಬಲಗೈಯೋ ಲಿಂಗದೇವಾ
ಭಂಡಾರ ಚೀಲ ಬಲಗೈ ಹಾಕಿಕೊಂಡು। ಲಿಂಗದೇವಾ ।೭।

ಅರಸ ಮಾಳವ್ವನ ಮನೆಗೆ ಹೋದ ಲಿಂಗದೇವಾ
ಗುಡ್ಡದ್ವಾರ್‍ಯಾಗ ಗೋಬ್ಬರ ಬೆಳೆಯುವರ್‍ಯಾರೊ ಲಿಂಗದೇವಾ
ಜಿಡ್ಡನಾರುವ ಕುರಾಬುತ್ತಿ ಲಿಂಗದೇವಾ
ಜಿಡ್ಡುವ ನಾರುವ ಕುರಾಬುತಿ ಕೂದಲಕ ಲಿಂಗದೇವಾ ॥೮॥

ಗುಡ್ಡಕ ಚಾಂದಣ್ಣ ನೆನದನೊ ಲಿಂಗದೇವಾ
ಅರಣದ ಹೆಣ್ಣೆಂದೆ ಕಮಲದ ತೆನೆ ಎಂದೆ! ಲಿಂಗದೇವಾ
ಚೌರಕೊಪ್ಪವಂತ ಗೊರವಿಯಂದೆ, ಲಿಂಗದೆವಾ
ಧ್ಯಾನವುಳ್ಳ ಚಾಂದಣ್ಣ ಬಾನಕೊಡೊ ನನಗ ॥೯॥

ಬಾನದ ಮ್ಯಾಲೆ ಶಿವ ಅದನೋ ಲಿಂಗದೇವಾ
ತಪ್ಪದ ಮಾನಮಿಗೆ ಬರತೇನ ಲಿಂಗದೇವಾ
ಏರಿಯ ಹತ್ತಲಾರೆ, ಏರಿಯ ಇಳಿಯಲಾರೆ
ದೊಡ್ಡತ ನಿನ್ನ ಹೊರೆಯ ಹೊರಲಾರೆ ॥೧೦॥

ನನ್ನಯ ಹೊರೆ ಹೊರಲಿದ್ರ ಇಳಿಯ್ಯಾ ಲಿಂಗದೇವಾ
ಮದುವೆಯ ಗಂಡನ್ನ ಬಿಡಸೇನು
ಮದುವೆಯ ಗಂಡನ್ನ ಬಿಡಸೇನ ಎಲೆ ಹೆಣ್ಣೆ
ಶಿಬಾರನ ತಾಳಿನ ಕಟ್ಟಸೇನ ॥೧೧॥

ಕುಂತರು ನಿನ್ನ ಧ್ಯಾನನ ನಿಂತರೂ ನಿನ್ನಧ್ಯಾನ
ಮುಗ್ಗಲೂರಿದರೂ ನಿನ್ನ ಧ್ಯಾನ
ಬೇಡಿಕೊಂಡಾರಾಕೆ ಮಾಡಲಿದ್ದರೆ, ಕಾಡುತಾನೆವ್ವ ಪರಿಪರಿ
ಹಾಡುತ್ತಾನವ ಪರಿಪರಿ ಚಂದಾಲಿಂಗಣ್ಣ ॥೧೨॥

ಬೇಡುತ್ತಾನೆವ್ವ ಬಿಳಿಕುದರಿ
ಆಪಾ ನಿನ್ನ ಪೌಳ್ಯಾಗ ಇಪತ ಒಲೆಯೂಡಿ
ತುಪ್ಪಾದ ಹೋಳಿಗೆ ಕರೆದೆವು

ತುಪ್ಪಾದ ಹೋಳೀಗೆ ಕರದು ಎಡೆ ಮಾಡಿ ಬೇಡಿಕೊಂಡೆ
ಸುತ್ತ ಬಳಗಕ ಸುಖವಿರ ॥೧೩॥

ಯಾಸಗಾರನೆವ್ವ ಮೋಸಗಾರನವ್ವೆ
ದೇಸೆ ವಿದ್ಯಾಗಾರ ಚಾಂದಾಣ್ಣ
ಚಂದಣ್ಣ ಬಲಿಯಾಗ ಗೆದ್ದು ಬಂದಾರು ಶರಣರು
ಗೆದ್ದ ಬಂದವರು ಶರಣರು ಎಂತವರು ಎಂದರ
ಮಂತ್ರಿ ಚಂದಣ್ಣನ ಗೊರವರು ॥೧೪॥

ಗೊರವರು ಹಾಡಿದ ಮಾತು ಕಲ್ಲಾಗ ವಿಳಾಸ ಹೊಡೆದಾಂಗ
ಆಡ ಮಕ್ಕಳ ಕೊಡು ತೂಗು ತೊಟ್ಟಿಲ ಕೊಡು
ಸಂಪತ್ತು ಕೊಡು ಬಗತರಿಗೆ
ಆಕಾಶ ಧರಿಗಿಳಿದರ ರಾತ್ರಿ ಬೆಳದಿಂಗಳದಾಗ ॥೧೫॥

ಮಾತಿಲೆ ಶಿವನ ಕರೆದೆನು
ಸಂಪತ್ತು ಬರುವುದು ಸರವತ್ತು
ಆಕಾಶದ ಗಂಟಿ ಢಣಲ್‌ಂದು
ಹರಗಿದ ಹೊಲದಾಗ ಬೆಳ್ಳಿಗಾರ ॥೧೬॥

ಶೆಟ್ಟೆನ ಹೆಂಡರನ ಕರುಸ್ಯಾನ
ಶಟ್ಟರನ ಹೆಂಡರನ ಕರೆಸಿ ಹೇಳ್ಯಾನ
ಹಿರಿಯರ ಮಾಡಿದ ಹೊರಿಐತಿ
ಹಿರಿಯರು ಮಾಡಿದ ಹೊರಿಯನ್ನು ಹೊರಲಿದ್ರ
ಬಿತ್ತಿದ ಹೊಲ ಕರಿಸಾಲು ॥೧೭॥

ಕಟ್ವಾಣ್ಣಿ ಕಲ್ಲಲ್ಲಿ ಕಟ್ಯಾತ್ರಿ ಚಂದ್ರಗಿರಿ ಗುಡ್ಡ
ಎತ್ತಾಗ ನೋಡಿದ್ರ ಹುಲಿಮೊಕೊ
ಹುಲಿ ಮೊಕದ ಅಗಸ್ಯಾಗ ಚೆಲ್ಲಾಟಡ್ಯಾರೊ ಗೊರವರು
ಚಲ್ಲಾಟವಾಡೊದು ಗೊರವರನ ತಗಡ ॥೧೮॥

ಮುಗಳ ನಗೀಲೆ ನಗತಾನೋ
ಹಣ್ಣಹಾಲವ ಹದ ಮಾಡಿ
ಹಣ್ಣಿನ ದೋಣಿ ತುಂಬಿಸ್ಯಾರೊ! ಬಗತರೊ
ಬಂದ ಬಡತನ ಬಯಲಾಗಿ ॥೧೯॥

ಅಪ್ಪ ನಿನ್ನ ಪೌಳ್ಯಾಗ ಜಳಕವ ಮಾಡಿದರ
ಹತ್ತಿದ ಪಾಪವೆಲ್ಲಿ ಪರಿಹಾರ
ಇಲ್ಲಿಗೆ ಹರಾ...ಹರಾ ಇಲ್ಲಿಗೆ ಶಿವ...ಶಿವಾ
ಇಲ್ಲಿಗೆ ಸಂದಾ ಪದ ಮುಂದೊ ॥೨೦॥

ಸಂದಾ ಮುಗಾದಾವೋಂದು ತಂದಾರೊಂದು ಇಳಿವಾ
ನನಗಲ್ಲ ನನ್ನ ಗುರುವಿಗೆ! ಕೊಟ್ಟರೆ
ಬಂದ ಬಡತನ ಬಯಲಾಗಿ ॥೨೧॥

ಒಡಿಗಾಯಿ ಹಿಡಿಗಾಯಿ ಒಡೆಯ ಟೆಂಗಿನಕಾಯಿ
ಬಡವರ ತಂದಾರ ಎಳಿಗಾಯಿ। ಲಿಂಗಣ್ಣ
ಬಾಗಲ ಮ್ಯಾಲೆಡಿ ಹೊಡೆದು ಕೊಡು! ಚಾಂದಾಣ್ಣ
ಕಾಯಿ ಒಡೆದು ಕೈಯ ಮುಗದೋ. ॥೨೨॥

೪- ಚಂದಣ್ಣನ ನೆನೆಯಲಕ ಮಲ್ಲಿಗೆ ಹೂವು ಬೇಕ

ಚಂದಣ್ಣನ ನೆನೆಯಲಕ ಮಲ್ಲಿಗೆ ಹೂವು ಬೇಕಽಽ ಗಂಗೆ ಮಾಳವ್ವ
ಚಂದಣ್ಣನ ನೆನೆಯಲಕ ಮಲ್ಲಿಗೆ ಹೂವು ಬೇಕ ||ಪ||

ಮಲ್ಲಿಗೆ ಹೂವಿನಂತ ಮನಬೇಕು ನೋಡವ್ವ ಽಽಗಂಗೆ ಮಾಳವ್ವ
ಹೊತ್ತಾವ ಏರುತ್ತಾ ಮತ್ಯಾರ ನೆನೆಯಲಿ
ಮುತ್ತಿನ ಉಡಿಯಕ್ಕಿ ಸಿರಿಗಂಗಾ ನೋಡವ್ವ" ಗಂಗೆ ಮಾಳವ್ವ
ಮುತ್ತಿನ ಉಡಿಯಕ್ಕಿ ಸಿರಿಗಂಗಾಽಽ ಗಂಗೆ ಮಾಳವ್ವ||೧||

ಬನ್ನಿಯ ಗಿಡಬುಡಕ ಜಾಡಸಿ ಕಂಬಳಿ ಗದ್ದುಗೆ ಮಾಡಿ
ಬನ್ನಿಯ ಪೂಜೆ ಶಿವ ಪೂಜೆಽಽ ನೋಡವ್ವಾ
ಬನ್ನಿಯ ಪೂಜೆ ಶಿವ ಪೂಜೆ ಮಾಡಿದರ
ಬನ್ನಿಯ ಹೂವಾ ಬಳಬಳ ನೋಡವ್ವ ಗಂಗೆ ಮಾಳವ್ವ ||೨||

ಜಾಲಿಯ ಗಿಡ ಬುಡಕ ಜಾಡಿಸಿ ಕಂಬಳಿ ಗದ್ದಿಗ ಮಾಡಿದ
ಅಪ್ಪನ ಶಿವ ಪೂಜೆ ಅಪ್ಪನ ಶಿವ ಪೂಜೆ
ಅಪ್ಪನ ಶಿವ ಪೂಜೆ ಮಾಡಿದರ ಜಾಲಿಯ
ಹೂವ ಬಳಬಳ ನೋಡವ್ವ ಗಂಗೆ ಮಾಳವ್ವ ||೩||

ಕುಂತರೂ ನಿನಧ್ಯಾನ ನಿಂತರೂ ನಿನ ದ್ಯಾನ
ಮುಗ್ಗಲೂರಿದರೂ ನಿನ್ನ ಧ್ಯಾನವ್ವಽಽಗಂಗೆ ಮಾಳವ್ವ
ಹಾಸ ಬಂಡಿಯ ಮೇಲೆ ಹಾದ ಹೋದವರ ಯಾರು
ಪಾದ ಮುಡ್ಯಾವು ನೋಡವ್ವ ಗಂಗೆ ಮಾಳವ್ವ ||೪||

ಪಾದವ ಮುಡ್ಯಾವು ಪರಿಪರಿಯೇ ಗಂಗೆ ಮಾಳವ್ವ
ಹಾದ ಹೊಗ್ಯಾನ ಜಳಕಕ್ಕೆ ನೋಡವ್ವ ಗಂಗೆ ಮಾಳವ್ವ

ಕೋರಿಯ ಹುಟ್ಟ್ಯಾನ ಕೋರಿಯ ಹೊದ್ದಾನ
ತುಗ್ಗಲಿಯ ಮರವ ಏರ್ಯಾನ ನೋಡವ್ವ ಗಂಗೆ ಮಾಳವ್ವ ॥೫॥

ತುಗ್ಗಲಿಯ ಮರವ ಏರ್ಯಾನ ಚಂದಾಲಿಂಗ
ಬಡವರಿಗೆ ಭಾಷೆ ಕೊಡತ್ತಾನ ನೋಡವ್ವ ಗಂಗೆ ಮಾಳವ್ವ
ಐಹೊಳೆ ಕೊಂತ ಮಿಂಚ ನೋಡವ್ವ
ಸರಪಾಳಿ ಪವಾಡ ದರ್ಶನಾ ನೋಡವ್ವ ಮಾಳವ್ವ ॥೬॥

ಸರಪಳಿ ಪವಾಡ ದರ್ಶನ ಚಂದಾಲಿಂಗ
ಹೊಳಿ ಗುಡಿಗೆ ಬರತ್ತಾನ ನೋಡವ್ವ ಮಾಳವ್ವ
ಇಲ್ಲಿಗೆ ಹರ...ಹರಾ ಇಲ್ಲಿಗೆ ಶಿವ...ಶಿವಾ
ಇಲ್ಲಿಗೆ ಸಂದಾ ತನ ಮುಂದ ನೋಡವ್ವ ಮಾಳವ್ವ ॥೭॥

ಸಂದಾ ಮುಗಿವತ್ತಿಗೆ ತಂದಾರೊಂದು ಇಳಿವಾ
ನನಗಲ್ಲ ನನ್ನ ಗುರುವಿಗೆ ನೋಡವ್ವ ಮಾಳವ್ವ
ಒಡಿಗಾಯಿ ಹಿಡಿಗಾಯಿ ಒಡೆಯ ಟೆಂಗಿನ ಕಾಯಿ
ಬಗತರು ತಂದಾರು ನೋಡವ್ವ ಮಾಳವ್ವ
ಬಾಗಿಲ ಮ್ಯಾಲ ಒಡಕೊಡು ನೋಡವ್ವ ಮಾಳವ್ವ ॥೮॥

೫–ಮನ್ನೆರಾಳ ಗುಡ್ಡದಾಗ ಚಂದಾಲಿಂಗನ ಗುಡಿ ಕಟ್ಟಿಸ್ಯಾರ

ಮನ್ನೆರಾಳ ಗುಡ್ಡದಾಗ ಚಂದಾಲಿಂಗನ ಗುಡಿಯು
ಕಟ್ಟಿಸ್ಯಾರ ಬಾಳಿಯ ವನದಾಗ...ಽಽಽ
ಬಾಳಿಯ ವನದಾಗ ಹೂವಿನ ಸಂಪಿಗೆ ಸಾಲಾಗ
ಬಂಗಾರ ತೊಲಿಯ ಬೆಳ್ಳಿಯ ಕಂಬ ಕೀಲವ ಬಡಿಸ್ಯಾರ
ಕೀಲವ ಬಡಿಸ್ಯಾರ ಬೆಲ್ಲದ ಮೇಲ್ಮುದ್ದಿ ಹಾಕ್ಯಾರ ॥೧॥

ಅಡಿಕಿಯ ಹೂವಿಲೆ ಕಿಡಕಿಯ ತೆಗೆದು ಗೋಪುರ ಕಟ್ಟಸ್ಯಾರ
ಗೋಪುರ ಕಟ್ಟಿಸ್ಯಾರ ಮಲ್ಲಿಗೆಯ ಹಾರ ಹಾಕ್ಯಾರ
ಸ್ವಾರಕೋಳೊ ಪ್ಯಾರಲ ವನದಾಗ ಗಿಳಿಯ ಕೂಗಿದಂಗsss ॥೨॥

ಗುಂಪು ನೋಡೋ ಸಂಪ್ಪು ಕೋಳೊ ಕೋಗಿಲೆಯ ಧ್ವನಿಯಂಗ
ಚಿಕ್ಕ ಮಕ್ಕಳ ಚಿನಿಕೋಲಾಟ ಚೀಗರಿ ಕುಣಿದಂಗ-sss
ನೆಲಕ ನೋಡಿದ್ರ ಗೋಧಿಯ ತೆನಿಯಂಗ ನವಿಲು ಕುಣಿದಾಂಗssss ॥೩॥

೬) ಎಷ್ಟು ಧ್ಯಾನ ಮಾಡಲಯ್ಯ ಚಂದಾಲಿಂಗೇಶ

ಎಷ್ಟು ಧ್ಯಾನ ಮಾಡಲಯ್ಯ ಚಾಂದಲಿಂಗೇಶ
ಗುಡಿಯೊಳಗೆ ಐದರೇನಾ ಗದ್ದಿಗೆಯೊಳಗೆ ಅಡಗ್ಯಾರೇನ
ಗುಡಿಯೊಳಗೆ ಗದ್ದಿಗೆಯೊಳಗೆ ಹುಡಿಕ್ಯಾರ ನೋಡಲೇನ ॥೧॥

ಪುರಾಣದಾಗ ಐದರೇನಾ ಪುಸ್ತಕದಾಗ ಅಡಿಗೇರನಾ
ಹೂವುದಾಗ ಅದರೇನಾ ಮಗ್ಗಿಯೊಳಗ ಅಡಿಗೇರನಾ ನೋಡಲೇನಾ ॥೨॥

ಈಭೂತಿಯೊಳಗ ಐದರೇನಾ, ಕುಂಕಮದೊಳಗ ಅಡಗ್ಯಾರೇನಾ
ಈಭೂತಿಯೊಳಗೆ ಕುಂಕಮದೋಳಗ ಹುಡಿಕ್ಯಾರ ನೋಡಲೇನು ॥೩॥
ಭಂಡಾರದಾಗ ಐದರೇನಾ, ಧೂಪಾದಾಗ ಅಡಗೇರನ
ಧೂಪದಾಗ ಭಂಡಾರದಾಗ ಹುಡಿಕ್ಯಾರ ನೋಡಲೇನ ॥೪॥

ಕಾಯಿಯೊಳಗ ಐದಾರೇನ ಕರ್ಪೂರದೊಳಗ ಅಡಗ್ಯಾರೇನ
ಕಾಯಿಹೊಳಗ, ಕರ್ಪೂದೊಳಗ ಹುಡಿಕ್ಯಾರ ನೋಡಲೇನ ॥೫॥

ಬಾಳಿವನದಾಗ ಐದರೇನ, ಟೆಂಗಿನವನದಾಗ ಅಡಗೇರೇನಾ
ಬಾಳಿವನದಾಗ ಟೆಂಗಿನವನದಾಗ ಹುಡಿಕ್ಯಾರ ನೋಡಲೇನ ॥೬॥

ನಿಂಬಿವನದಾಗ ಐದರೇನ, ದಡ್ಲಿವನದಾಗ ಅಡಿಗೇರೇನಾ
ನಿಂಬಿವನದಾಗ, ದಡ್ಲಿವನದಾಗ ಹುಡಿಕ್ಯಾರ ನೋಡಲೇನ ॥೭॥

ಭಜನೆಯೊಳಗೆ ಐದರೇನ, ಡೊಳ್ಳಿನೊಳಗ ಅಡಿಗ್ಯಾರೇನ
ಭಜನೆಯೊಳಗೆ ಡೊಳ್ಳಿನೊಳಗ ಹುಡಿಕ್ಯಾರ ನೋಡಲೇನ ॥೮॥

ಗುಡ್ಡದಾಗ ಐದರೇನಾ, ದಾಸೋಗದಾಗ ಅಡಗೇರನಾ
ಗುಡ್ಡದಾಗ, ದಾಸೋಗದಾಗ ಹುಡಿಕ್ಯಾರ ನೋಡಲೇನಾ ॥೯॥

೭) ಕೋಳಿ ಕೂಗಿದವೋ ಚಂದಲಿಂಗನ ಪೂಜೆ ನೆಡೆದಿದೆಯೋ

ಕೋಳಿಕೂಗಿದವೋ ಚಂದಲಿಂಗಣ್ಣ ಪೂಜೆ ನಡೆದಿದೆಯೋ
ಮುಂಜಾಲೇ ಎಳುತ್ತಾಲೇ ಮತ್ಯಾರನ ನೆನೆಯಲೆ
ಮುತ್ತಿ ಭಂಡಾರದ ಮುದು ಮಲ್ಲ !
ಕೋಳಿ ಕೂಗಿದವೋ ಗುಡ್ಡದಯ್ಯನ ಪೂಜೆ ನಡೆದಿದಯೋ ॥೧॥

ಮುತ್ತಿನ ಭಂಡಾರದ ಮುದಿ ಮಲ್ಲನ ನೆನೆದರೆ
ಹತ್ತಿದ ಪಾಪವೆಲ್ಲ ಪರಿಹಾರ
ಹೊತ್ತಾವ ಏರಿತ್ತಲೆ ಮತ್ತ್ಯರ ನೆನೆಯಲಿಽಽಽ
ಮುತ್ತಿನ ಉಡಿಯಕ್ಕಿ ಸಿರಿ ಗಂಗಾ ನೆನೆದರ ॥೨॥

ಹತ್ತಿದ ಪಾಪವೆಲ್ಲ ಪರಿಹಾರಽಽಽ
ಅಪ್ಪಾ ನಿನ್ನ ಪೌಳ್ಯಾಗ ಕುದುರೆದ್ದು ಕುಣಿತಾವ್ವ
ಭಂಡಾರದ ಧೂಳೆದ್ದು ಹಾರತ್ತಾವೋಽಽಽ
ಹತ್ತಿ ಕಟ್ಟಿಗೆಯ ಕೆತ್ತಿ ದೋಣಿಯ ಮಾಡಿ ॥೩॥

ಹಾಲು ಹಣ್ಣೀಲೆ ಅದಮಾಡಿ
ಹಾಲು ಹುಣ್ಣಿಲೇSSS ಅದಮಾಡಿ ಚಂದಲಿಂಗಣ್ಣ
ಹೊತ್ತಿಲೇ ಊಂಡಾರೋ ಗೊರವರೋ
ಇಲ್ಲಿಗೆ ಹರ...ಹರಾ...ಇಲ್ಲಿಗೆ ಶಿವ...ಶಿವಾ ॥೪॥

ಇಲ್ಲಿಗೆ ಸಂಧಾ ಪದಮುಂದಾ
ಇಂದು ನಿಮ್ಮ ಮನೆಗೆ ಏಳಕೋಟಿ ಬಂದಾ
ಗುಡ್ಡದಯ್ಯSS ಯಾಕೋ ನಿಮ್ಮಮನೆಗೆSS ಚಂದಾಲಿಂಗ ಬಂದSSS
ಇಂದು ನಿಮ್ಮ ಮನೆಗೆ ಚಂದಾಲಿಂಗ ಬಂದ ॥೫॥

ಗುಡ್ಡದಯ್ಯ ಯಾಕೋ ನಿಮ್ಮ ಮನೆಗೆ
ಭಂಡಾರದ ಶಿವನೇ ಬಂದಾSS
ಉದಯ ಕಾಲಕ ಹೊರಟನು ಸ್ವಾಮಿ
ಕರಿಯಾಲಕ ಮೂರ್ತಿ ಮಾಡಿ ॥೬॥

ಬೆಳಗ ಹರಿಯದ್ರೊಳಗ ಗಂಗಮ್ಮ ಕೂಡಿ
ಹಾಲು ಹಣ್ಣು ದೋಣಿಗೆ ನೀಡಿರೆ
ಇಂದು ನಿಮ್ಮ ಮನೆಗೆ ಐತ್ಯಾರದ ಅರಸ ಬಂದ.
ಚಂದಾ ಲಿಂಗಾSS ಯಾಕೋSS ನಿಮ್ಮಮನಿಗೆ ಯಾಕ ಏಳುಕೋಟಿ ಬಂದ
॥೭॥

ಓ ಅಂದಲ್ಲಿ ಒಪದಗಿರಿ ಹದ್ದು ಹಾಡಿದಲ್ಲೋ ಅಡಗದಗಿರಿ
ಎಡಕೆ ನೋಡಿದರ ಯಾತರಸಿರಿ, ಬಲಕೆ ನೋಡಿದರೆ ಬಣ್ಣದಗಿರಿಯು
ಇದ್ದಲಿರುವೇನು ಕರೆದಲ್ಲಿ ಬರುವೇನು ಸನ್ಮತದ ದೊರೆಯೇSSS
ಗುಡ್ಡದಯ್ಯ ಯಾಕೋ ನಿಮ್ಮಮನಿಗೆ ಬಂಢಾರದ ಶಿವನೇ ಬಂದ ॥೮॥

ಚಂದಾವಾಗಿ ತಂದಿಟ್ಟರ ಬಿಲ್ಲ
ಪಾರಾಕಂತ ಶಿವನು ಏರಿದೆನಲ್ಲ
ನಾಲ್ಕುದಿಕ್ಕಿಗೆ ಸವನುಡಿದನಲ್ಲಿ ದೇಶದ ಭವಿಷ್ಯ ಕೇಳಿದನಲ್ಲಿ
ಇಂದು ನಿಮ್ಮಮನಿಗೆ ಏಳುಕೋಟಿ ಬಂದ
ಚಂದಾಲಿಂಗ ಯಾಕೋ ನಿಮ್ಮಮನಿಗೆ ಬಂಢಾರದ ಒಡೆಯ ಬಂದ ॥೯॥

ಉರುಳ ಬತ್ತಿಯನ್ನೊಂದು ಉರಿಸೇನಂದ
ಬಾಯಿಯಲ್ಲಿ ದೇವರ ನುಡೆಸೊನಂದ
ಮುರಳ ಹಾವಿಗೆಯಿಂದ ನಡೆಸೇನಂದ
ಮಂಗ್ಯಾನ ಮಾಡಿ ಕಾಡೇನಂದ
ಅರಿಸಿಣದ ಸಿರಿ ಉಡೇಸೇನಂದ
ವಾರಲು ಬಟ್ಟಲು ಹೊರುಸೇನಂದ ॥೧೦॥

ನಿನಗ ನನಗ ನಡೆಕೊನಲ್ಲೆಂದು
ಬೇಡಿದ ಭಾಗ್ಯ ಕೊಡತ್ತಿನೆಂದ
ಯಾಕೋ ನಿಮ್ಮನಿಗೆ ಚಂದಾಲಿಂಗಬಂದ
ಎಲ್ಲಿಗೋದು ಎಲ್ಲಿಗೋದು ಎನ್ನಬೇಡಿರೋ ॥೧೧॥

ಗುಡ್ಡದಯ್ಯ ನಿಮ್ಮಮನದಾಗ ಅದಿರನ್ನಿರೋ
ಎಲ್ಲಿಗೋದು ಎಲ್ಲಿಗೋದು ಎನ್ನಬೇಡಿರೋ
ಚಂದಾಲಿಂಗ ನಿಮ್ಮ ಮನದಾಗ ಐದಾನ ಅನ್ನಿರೋ
ಕೋರಿ ಅಂಗಿ ತೊಡುವನಂತೆ ಕೋರಿಕುಪ್ಪಸ ಹಾಕುವನಂತೆ ॥೧೨॥

ಹೊಲಗಾಯಿಕೇರಿಗೆ ಹೋಗುವನಂತೆ ಗೊರವರಿಗೆ ಕಾಡುವನಂತೆ
ಮುಕ್ಕಣ ಇಸುದೇವರ ಮುದಿ ಮಲ್ಲ ದೇವರಂತೆ

ಎಲ್ಲಿಗೋದು ಎಲ್ಲಿಗೋದು ಅನ್ನಬ್ಯಾಡಿರೋಽಽ
ಚಂದಾಲಿಂಗ ನಿಮ್ಮ ಮನದಾಗ ಐದಾನನೆನ್ನಿರೋಽಽಽ ॥೧೩॥

ಡೊಳ್ಳು ಪದ

೮)ನಾಡಗಳ ಮೇಲಿನ ಕಲ್ಲುಗಳ ತಂದು ಗುಡಿಯ ಕಟ್ಯಾರೆ

ನಾಡಮೇಲಿನ ಕಲ್ಲುಗಳ ತಂದು ಪಡಗಿನ ಗುಡಿಯ ಕಟ್ಯಾರ
ಪಳಿಕಟ್ಟಿದ ಗುಡಿಯೊಳಗೆ ಹೊರಗಿನ ಚಂದಣ್ಣ ನೆನದನ
ಹೇ.... ಗಚ್ಚಿನ ಗುಡಿಯದು ಗುಡಿಸಿಂಗಾರ ಬಂಗಾರದ ಹೊನ್ನಾಂಗಳ ॥೧॥

ಬಂಗಾರದ ಹೊನ್ನಾಂಗಳದಗ ರನ್ನದ ಮಾಲುಗಂಭದಾವು
ರನ್ನದ ಮಾಲಗಂಭಗಳ ಮ್ಯಾಲ ಹಚ್ಯಾವು ನನ್ನ ದೀವಟಿಗೆ
ನಂದವಿಗೆಯ ಗಂಧದ ಪೂಜೆ ಎಂದೆಂದೆ ತಪ್ಪೋದೋಽಽ
ಹೇ... ಎಂದಿ ಎಂದಿಗೆ ತಪ್ಪಲಿದ್ರ ಚಂದಪ್ಪಗ ಬಂದು ಬಂದು ನಾವು
ಹಾಡೇವು ॥೨॥

ಹಾಡು ಅಂಗಳು ತೋರೇಳಪ, ನಿನು ಓದೋಶಾಲೆಯ ತೊರೇಳ
ಹೇ ಹಾಡೋದು ರಾಜಾಂಗಳ ತೋರ್ಯಾನ, ಓದೊದು ಚಂದ್ರಶಾಲೆಳಾ
ಹೇ ಹೊರಗಿದ್ದು ನಾನೇ ಕೂಗಿನೆಪ್ಪ, ಒಳಂಗಿದ್ದು ನಿನ ಧ್ವನಿಗೂಡಾ ॥೩॥

ಮಾತಾಡೋ ನನ್ನ ಮಾತಿನ ಗಿಳಿಯಾ, ಯಾತಕ ಸುಮ್ಮನೆ ಕುಳಿತಿದೊ
ಯಾತಕ ಸುಮ್ಮನೆ ಕುಳಿತಿದೊ ಚಂದಣ್ಣ ಘಾತಕತನ ತಿಳಿವಲ್ಲೊದೊ
ಕಣ್ಣು ತೆರದ ನೋಡುಕ ಬಂದನು ಗುಡ್ಡದ ಚಂದಲಿಂಗನು ॥೪॥

ಬಂಜೆಗೆ ಮಕ್ಕಳ ಕೊಟ್ಟವನಪ್ಪ ನೀನು। ಬಡವಗ ಭಾಗ್ಯವ ಕೊಟ್ಟವನು
ಹೇ... ಹುಟ್ಟ ಬಂಜೆಯ ಭಾವಕ ಮೆಚ್ಚಿ ಮೆಟ್ಟಿ ತೊಟ್ಟಲ ಕಟ್ಟುವನ
ಮುಟ್ಟಿ ತೊಟ್ಟಿಲವ ಕಟ್ಟು ಬಾ ನನ್ನ ಗುಡ್ಡದ ಚಂದಾಲಿಂಗನ ॥೫॥

೬.೧.೨. ಐತಿಹ್ಯಗಳು : (Legends)

ಜನಪದ ಸಾಹಿತ್ಯದ ಪ್ರಕಾರದಲ್ಲಿ ಇದೂ ಒಂದಾಗಿದೆ. ಸುಲಭವಾಗಿ ಅರ್ಥೈಸುವದಾದರೆ ಇದು "ಒಂದು ನಿರ್ದಿಷ್ಟ ಸ್ಥಳವೊಂದಕ್ಕೆ ಸಂಬಂಧಪಟ್ಟದಾಗಿದ್ದು, ಪ್ರಾಚೀನವಾಗಿದ್ದು, ವಾಸ್ತವಿಕ ಘಟನೆಯೊಂದರ ಆಧಾರದ ಮೇಲೆ ಕಾಲ್ಪನಿಕ ಅಂಶಗಳನ್ನು ಒಳಗೊಂಡು ಬೆಳೆದು ನಿಂತಿರುವ ಪರಂಪರಾಗತವಾಗಿ ಜನಪದ ನಂಬಿಕೊಂಡು ಬಂದ ಒಂದು ವಿಶೇಷ ಸಂಗತಿ."[೪] ಕೆಲವು ಅಲ್ಪಮಟ್ಟಿಗೆ ಚಾರಿತ್ರಿಕ ಅಂಶಗಳನ್ನು ತಿಳಿಸಿದರೆ ಬಹಳಷ್ಟು ಪೌರಾಣಿಕ ಮತ್ತು ಕಾಲ್ಪನಿಕ ಅಂಶಗಳಿಂದ ಕೂಡಿದ್ದು ಆಕರ್ಷಕವಾಗಿರುತ್ತವೆ. ಸ್ವರೂಪದಲ್ಲಿ ಐತಿಹ್ಯಗಳು ತುಂಬಾ ಚಿಕ್ಕವಾಗಿದ್ದು, ಗದ್ಯಾತ್ಮಕವಾಗಿದ್ದು, ಒಂದು ಅಥವಾ ಎರಡು ಆಶಯಗಳ ವ್ಯಾಪ್ತಿಯನ್ನು ಅಷ್ಟೇ ಪಡೆದಿರುತ್ತವೆ. ಅವು ವ್ಯಕ್ತಿ, ಸ್ಥಳ ಅಥವಾ ಘಟನೆಯೊಂದರ ವಿವರಣಾತ್ಮಕ ಕಥೆಗಳಾಗಿರುತ್ತವೆ. ಆದರೆ ಇವು ಸಂಪ್ರದಾಯದ ಮೂಲದಿಂದ ಬಂದವುಗಳಾಗಿದ್ದು, ಐತಿಹ್ಯ ವ್ಯಾಪ್ತಿಯನ್ನು ಪಡೆದಿರುತ್ತವೆ. ತಾವು ಹುಟ್ಟಿದ ನಿಸರ್ಗಕ್ಕೆ ಅಂಟಿಕೊಂಡಿರುವುದು ಐತಿಹ್ಯಗಳ ಮತ್ತೊಂದು ಲಕ್ಷಣವಾಗಿದೆ. ಈ ಮಹಾಪ್ರಬಂಧದಲ್ಲಿ ತಿಳಿಸುವ ಎರಡು ಐತಿಹ್ಯಗಳಾದ ಚಂದಾಲಿಂಗೇಶ್ವರನಿಗೆ ಸಂಬಂಧಿಸಿದಂತೆ ಜನಜನಿತವಾಗಿವೆ. ಅವುಗಳನ್ನು ಈ ಹಿಂದೆ ಹಿಂದಿನ ಅಧ್ಯಾಯ ಎರಡರಲ್ಲಿ ಚಂದಾಲಿಂಗೇಶ್ವರನ ಮೂಲದ ಬಗ್ಗೆ ತಿಳಿಸುವಾಗ, ಚಂದಾಲಿಂಗನ ಮೂಲದ ಬಗ್ಗೆ ಹೇಳುವಂಥ ಸಂದರ್ಭದಲ್ಲಿ ಆ ಐತಿಹ್ಯಗಳ ಸಾರವನ್ನು ಹೇಳಲಾಗಿದೆ. ಕಬ್ಬರಗಿಯ ಕಪಿಲಾ ತೀರ್ಥಕೊಳ್ಳದಲ್ಲಿ ಹುಲ್ಲಪ್ಪ ಹಸುವನ್ನು ಪಾಲು ಹಾಕಿದರ ಫಲವಾಗಿ ಅವು ಅದೇ ಸ್ಥಳದಲ್ಲಿ ಚಿಕ್ಕಚಿಕ್ಕ ಕಲ್ಲುಗಳಾಗಿ ಮಾರ್ಪಟ್ಟಿವೆ. ಇಂದಿಗೂ ಸಹ ಭಕ್ತರು ಆ ಕ್ಷೇತ್ರಕ್ಕೆ ಹೋದಾಗ ಅವುಗಳನ್ನು ಮುಟ್ಟಿ ತಟ್ಟಿ ನೋಡಿಯೇ ಬರುತ್ತಾರೆ. ಹಾಗೂ ಅದರ ವೃತ್ತಾಂತವನ್ನು ತಿಳಿಯುವರು.

ಹುಲ್ಲಪ್ಪನ ಪಾದಗಳು ಬೀಳಗಿಯ ಗುಡ್ಡದ ಸಮೀಪದ ನುಡಿ ಮಂಟಪದ ಮುಂಭಾಗದಲ್ಲಿ ಗೋಚರಿಸುತ್ತವೆ. ಇದರ ವೃತ್ತಾಂತವನ್ನು ಅಧ್ಯಾಯ-ಎರಡು ಚಂದಾಲಿಂಗನಮೂಲ ಎನ್ನುವುದರಲ್ಲಿ ತಿಳಿಸಲಾಗಿದೆ. ಇಂದು ಆತನ ಪಾದಗಳ ಮೇಲೆ ನೀರು ಸುರಿದರೆ ಈಗಲೂ ರಕ್ತ ಹರಿದಂತೆ ಭಾಸವಾಗುತ್ತದೆ. ಆದ್ದರಿಂದ ಸುಗ್ಗಿಯ ಜಾತ್ರೆಯಲ್ಲಿ ಈ ಮಂಟಪದಲ್ಲಿ ನುಡಿ ಹೇಳುವ ಕಾರ್ಯಕ್ರಮ ನಡೆಯುವುದರಿಂದ ಆ ಪಾದಗಳಿಗೆ ಪೂಜೆಮಾಡಿ ಹೂವಿನ ಮಾಲೆಯನ್ನು ಅರ್ಪಿಸುವರು.

೬.೨. ಚಂದಾಲಿಂಗೇಶ್ವರನ ಶಿಷ್ಟ ಸಾಹಿತ್ಯ : (The Classic Literature of Chandalingeshwara)

ಭಾಷೆಗೆ ಲಿಪಿ ಕಾಣಿಸಿಕೊಂಡ ಮೇಲೆ ಲಿಖಿತ ಸಾಹಿತ್ಯ ರಚನೆಯಾಗಿದೆ. ಸಾಹಿತ್ಯದ ಉದಯ ಯಾವ ಕಾಲದಲ್ಲಿ ಆಯಿತು. ಅದಕ್ಕೆ ಯಾವ ಕಾರಣಗಳು ಕೂಡಿ ಬಂದವು ಎಂಬ ಪ್ರಶ್ನೆಯಷ್ಟು ಉತ್ತರ ಸರಳವಾಗಿಲ್ಲ. ಖಚಿತವಾದಂತ ಆಧಾರಗಳಂತೂ ಇಲ್ಲ. ದೊರೆತ ಸಾಮಗ್ರಿಯ

ಬಲದಿಂದ ಯಾರೂ ತಮಗೆ ತಿಳಿದಂತೆ ಊಹೆಯ ಕುದುರೆಯನ್ನು ಓಡಿಸಬಹುದು. "ಅಕ್ಷರ ಬಲ್ಲವರಿಂದ ಮಾತ್ರ ರಚನೆಯಾಗುವ ಶಿಷ್ಟ ಸಾಹಿತ್ಯವು ನಿರ್ದಿಷ್ಟವಾಗಿ ಒಬ್ಬ ವ್ಯಕ್ತಿಯಿಂದ ರಚನೆ ಆಗುವುದರಿಂದ ಇದು ಆಯಾ ಲೇಖಕನ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ."[7] ಯಾವುದೇ ಭಾಷೆಯ ಸಾಹಿತ್ಯ ಚರಿತ್ರೆಯಲ್ಲಿ ಜನಪದ ಸಾಹಿತ್ಯವೇ ಪ್ರಾಚೀನವಾದದ್ದು. ಅದರ ಮೂಲ ಸತ್ವದಿಂದಲೇ ಶಿಷ್ಟ ಸಾಹಿತ್ಯ ರೂಪಗೊಳ್ಳುತ್ತದೆ. ಜನಪದ ಮತ್ತು ಶಿಷ್ಟವೆಂಬ ಎರಡು ಕವಲುಗಳು ಸಾಹಿತ್ಯ ಮಾಧ್ಯಮದಲ್ಲಿ ಭಿನ್ನವಾಗಿ ತೋರಿದರೂ, ಅವೆರಡರ ನಡುವೆ ಪರಸ್ಪರ ಪೂರಕವಾದ ಅಂತರ ಸಂಬಂಧವಿದೆ.

೬.೨.೧. ಹಾಡುಗಳು : (Songs)

ಚಂದಾಲಿಂಗೇಶ್ವರನಿಗೆ ಸಂಬಂಧಿಸಿದಂತೆ ಹಲವರು ಭಕ್ತಿಯ ಹಾಡುಗಳನ್ನು ರಚಿಸಿದ್ದಾರೆ. ಲಿಂಗದಳ್ಳಿಯ ಚಂದ್ರಶೇಖರ ಅವರು ರಚನೆ ಮಾಡಿ ಹಾಡಿದ ಧ್ವನಿ ಸುರುಳಿಯನ್ನು ಬಿಡುಗಡೆ ಮಾಡಿದ್ದಾರೆ. ಕೆಲವೊಂದಿಷ್ಟು ಮಂಗಳಾರತಿ ಪದಗಳನ್ನು ರಚಿಸಿದ್ದಾರೆ. ಇಂಥ ಹಾಡುಗಳಲ್ಲಿ ಕೆಲವೊಂದು ನಿಯಮಗಳಿವೆ. ಎಲ್ಲಿ ಪಲ್ಲವಿ, ಅನುಪಲ್ಲವಿ, ಬಳಸಬೇಕೆಂದು ಒಂದೊಂದು ನುಡಿಗೆ ಇಂತಿಷ್ಟೇ ಸಾಲುಗಳು ಇರಬೇಕೆಂಬುದು ಚೌಕಟ್ಟಿದೆ. ಈ ಹಾಡುಗಳಲ್ಲಿ ಏರಿಳಿತದ ಗೇಯಗಳಿವೆ. ಎರಡು ಸಾಲಿಗೆ ಒಂದರಂತೆ ನುಡಿ ಮತ್ತು ನಾಲ್ಕು ಸಾಲುಗಳಿಗೊಂದರಂತೆ, ಮೂರು ಸಾಲುಗಳಿಗೊಂದರಂತೆ ನುಡಿಗಳನ್ನು ಮಾಡಿ ಹಾಡುಗಳನ್ನು ರಚಿಸಿದ್ದಾರೆ. ಈ ಹಾಡುಗಳಿಗೆ ಎಲ್ಲಿ ಸಂಗೀತವನ್ನು ಬಳಸಬೇಕು ಮತ್ತು ಸಂಗೀತವನ್ನು ತೇಲಿಸಬೇಕು. ಎಲ್ಲಿಂದ ಪಲ್ಲವಿಯನ್ನು ಪ್ರಾರಂಭಿಸಬೇಕೆಂಬ ನಿಯಮಗಳಿವೆ. ಅಂತಹ ಕೆಲವು ಹಾಡುಗಳನ್ನು ಹಾಗೂ ಅವುಗಳ ಆಶಯವನ್ನು ಈ ಮುಂದಿನ ಭಾಗದಲ್ಲಿ ತಿಳಿಸಲಾಗಿದೆ.

೧) ಪರಶಿವನ ಅವತಾರ ಚಂದಾಲಿಂಗ

ಪರಶಿವನ ಅವತಾರ ಶ್ರೀಚಂದಾಲಿಂಗ ಜಾತ್ರೆಯ ಬಲು ಜೋರಾ
ಕೆಸರಲ್ಲಿದ ಕೋಟೆ ಬಿಸಲ ಇಲ್ಲದ ಬಾವಿ ಹೆಸರ ಇಲ್ಲದ ಮರವು
ನೋಡಿದಾಗ ಇ ಜನ್ಮ ಪಾವನವು ಸಾಕ್ಷತ್ ಪರಶಿವನ ದರ್ಶನವು ॥೧॥

ಸುತ್ತ ನಾಡಿಗೆ ದೊಡ್ಡ ಜಾತ್ರೆ ಇದು ವೈಭವದ ಶಿಖರ
ಗೆಜ್ಜೆಯ ಬಂಡಿ ದಾರಿಯಿಡಿಸದೆ ಭರದಿಂದ ಬರುತ್ತಾವ ॥೨॥

ಹರಕೆಯ ಹೊತ್ತವರು ಪಾದಯಾತ್ರೆಯು ಮಾಡಿ ಕ್ಷೇತ್ರಕ್ಕೆ ಬರುತ್ತಾರೆ
ಎತ್ತ ನೋಡಲು ಗುಡ್ಡದ ತುಂಬ ಚಂದಾಲಿಂಗನ ಬಳಗಽಽಽ ॥೩॥

ಸಾಲು ಮರಗಳು ಭಕ್ತರಿಗೆ ನೆರಳಾಗಿ ಬಾಗಿ ಬಾಗಿ ಹೇಳುತ್ತವ ಸರ್ವರಿಗೂ ಸ್ವಾಗತ ಮಾಡುತ್ತವ

ಗುಡೂರ ಗ್ರಾಮದಿಂದ ಐಹೊಳೆ ಕೊಂತ ಭರ್ಜರಿ ಬರತಾದ ॥೪॥
ಮುರಡಿ ಗ್ರಾಮದಿಂದ ಒಂದು ಐರಾಣಿ (ಮದುವೆಯಲ್ಲಿ ಚಿತ್ರ ಬರೆದಿಡುವ ಒಂದು ಗಡಿಗೆ) ವೈಭವದಿಂದ ಬರತ್ತಾದ
ಮನ್ನೇರಾಳ ಗ್ರಾಮದಿಂದ ಖಂಡೇ ಖಡ್ಗವು ಒಳ್ಳೆ ಸಡಗರದಿಂದ ಬರುತ್ತಾದ ॥೫॥

ಬೀಳಗಿ ಗ್ರಾಮದಿಂದ ಗಂಗೆ ಮಾಳಮನ ಬೆತ್ತ ಭರ್ಜರಿ ಬರುತಾದಽಽ
ಕಬ್ಬರಗಿ ಮನ್ನೇರಾಳ ವಗ್ಗಯ್ಯನವರು ಇಲ್ಲಿಗೆ ಬರುತ್ತಾರ. ನಿಷ್ಠೆಯಿಂದ ಸೇವೆ ಮಾಡುತ್ತಾರ.ಽಽ
॥೬॥

ದಮ್ಮೂರು ಗ್ರಾಮದಿಂದ ಮಳ್ಳಯ್ಯನವರು ಇಲ್ಲಿಗೆ ಬರುತ್ತಾರ
ಏಕ ನಿಷ್ಠೆಯಿಂದ ಹೆಗ್ಗಪ್ಪನ ಗುಡಿಯಲ್ಲಿ ಯೋಗದಿರುತ್ತಾರೆ ॥೭॥

ಡೊಳ್ಳು ಭಜನೆ ಮತ್ತು ಶಂಖ ಜಾಗಟೆಯ ಶಬ್ದ ಮುಗಿಲು ಮುಟ್ಟುತ್ತಾವ
ಓಂಕಾರದ ನಾದ ಜಯಕರಿಸುವಾಗ ಗುಡ್ಡ ನಡುಗುತ್ತಾದ ॥೮॥

ಉಗ್ರ ಮೂರ್ತಿಯಾಗಿ ಅವತಾರವೆತ್ತಿ ಕ್ಷೇತ್ರ ಸುತ್ತತ್ತಾನ ಸ್ವಾಮಿ ಕ್ಷೇತ್ರ ಸುತ್ತತ್ತಾನ
ಶಂಖ ಉದತ್ತಾ ಪೂರ್ವಕ್ಕೆ ನಿಂತು ಮುಂದಕ್ಕೆ ಸಾಗುವನುಽಽಽ ॥೯॥

ಏಕ ನಿಷ್ಠೆಯಿಂದ ಕಂಚೀಯರು ಮುಂದೆ ವಡಪು ಹೇಳುತ್ತಾರ
ಎರಡ ಬಾಗಿಲುದಾಟಿ ಮೂರನೇ ಬಾಗಿಲಕ್ಕೆ ಬಂದ ನಿಲ್ಲುತ್ತಾನೆ ॥೧೦॥

ಅರವತ್ತು ಕಂಬಗಳ ಅಗಸಿಯ ಮುಂದೆ ಸೂಚ ತೋರಿಸ್ತಾನಽಽಽ
ಕುಲಕೋಟಿ ಭಕ್ತರು ಅಲುಗ್ಯಾಡದಂತೆ ನಿಂತ ನೋಡುತ್ತಾರೆ. ॥೧೧॥

ಮಹಿಮನ ಪವಾಡ ನೋಡುತ್ತಾರ.
ವಗ್ಗಯ್ಯನವರು ಉಗ್ರವತಾರ ತಾಳಿ ಪವಾಡ ಮಾಡುತ್ತಾರ ॥೧೨॥

ಗರ್ಜನೆ ಮಾಡುತ್ತಾ ಕಬ್ಬಿಣ ಸರಪಳಿಯನ್ನು ಹರಿದು ತೋರಿಸುತ್ತಾರಽಽಽ
ಮುಳ್ಳು ಹಾವಿಗೆಯ ಮೇಲೆ ಪಾದವ ಇಟ್ಟು ಮುಂದೆ ಸಾಗತ್ತಾನ ॥೧೩॥

ಸುಖದ ಕಟ್ಟೆಯನ್ನು ಮತ್ತು ಬರದ ಕಟ್ಟೆಯನ್ನು ದಾಟಿ ಸಾಗುತ್ತಾನ
ಮುಂದೆ ಸಾಗಿ ಅಲ್ಲಿ ಅವತಾರ ಬಸವನ ಸುತ್ತ ಹಾಕುತ್ತಾನ ॥೧೪॥

ಸ್ವಾಮಿ ಸುತ್ತ ಹಾಕುತ್ತಾನ ಬಸವನ ಸುತ್ತ ಹಾಕತ್ತಾನ
ಬಸವನ ಬಾಯಿಗೆ ತನ್ನ ಕಿವಿಯನಿಟ್ಟು ನುಡಿಯನ್ನು ಕೇಳುತ್ತಾನ ॥೧೫॥

ಅಲ್ಲಿಂದ ಬರ ಬರ ಮುಂದೆ ಸಾಗಿ ಬಂದು ಮರಕ್ಕೆ ಬರುತ್ತಾನ
ಮರದಿಂದ ಮರವೇರಿ ಲೋಕದ ಭವಿಷ್ಯ ಸಾರಿ ಹೇಳುತ್ತಾನ ॥೧೬॥

ನುಡಿ ಹೇಳುವಾಗ ಎಲ್ಲಾ ನಿಶಬ್ದ ಇದೆಂಥ ಘನಲೀಲಾ
ಎಷ್ಟು ಹೇಳಿದರ ಸಾಲದು ಎಕ್ಕಾ ಚಂದಾಲಿಂಗನ ಮಹಿಮ ॥೧೭॥

ಹೆಸರ ಇಲ್ಲದ ಮರವು ಗಣವಾಗಿ ಬೆಳದಾತಿ ಅಲ್ಲಿಗೆ ಬರುತ್ತಾನ
ಯಲಬುರ್ಗಿಕೊಂತ ಐಹೊಳೆ ಕೊಂತ ಕೈಯಲ್ಲಿ ಹಿಡಿದಾನ ॥೧೮॥

ಎರೆಡು ಕೊಂತಗಳ ಮಹಿಮದ ಆಟನ ಭಕ್ತರಿಗೆ ತೋರಿಸಿದಾನಾ
ಲೋಕದ ಒಡೆಯನ್ನಾಗಿ ಶ್ರೀ ಚಂದಾಲಿಂಗನಾಗಿ ಲೀಲೆಯ ತೋರಿದನು ॥೧೯॥

ಲಿಂಗದಳ್ಳಿಯ ಕಂದ ಶಿರಬಾಗಿ ನಿನ್ನ ನಾಮ ಹೊಗಳಿದನಾ
ನಿನ್ನನಾಮವ ಹೊಗಳಿದನಾ ಸ್ವಾಮಿ ನಿನ್ನನಾಮವ ಹೊಗಳಿದನಾ ॥೨೦॥

೨) ಜಗದೊಡೆಯ ಜಗದೀಶ ಚಂದಾಲಿಂಗೇಶ

ಜಗದೊಡೆಯ ಜಗದೀಶ ಶಿವ ಚಂದಾಲಿಂಗೇಶ
ದಿನನಿತ್ಯ ನಿಮಗ್ಯಾಕ ಈ ಭವಪಾಶ
ನರಮಾನವರ ಕರ್ಮವ ಅಳಿಯಲು ಧರೆಗೆ ಇಳಿದವನೇ
ತತ್ವದ ಬೀಜ ಜಗದಲ್ಲಿ ಬಿತ್ತಿದವ ಮೃತ್ಯುಂಜಯ್ಯ ನೀನೆऽऽऽ ॥೧॥

ಕ್ರೂರ ರಕ್ಕಸರ ಸೊಕ್ಕನು ಮುರಿದ ಮುಕ್ಕಣನು ನೀನೆ
ಭಕ್ತಿಯಲ್ಲಿ ನಡೆಯುವ ಭಕ್ತರಿಗೊಲಿದ ಚಂದ್ರಧರನೇ ನೀನೇ
ಕಾಡುಮೃಗಗಳು ಗುಪ್ತಗವಿಗಳು ಇಲ್ಲಿ ನೆನೆದವನೇऽऽऽऽ
ಪರ್ವತವೆಲ್ಲ ಕೈಲಾಸದಂತೆ ಕ್ಷೇತ್ರಗೊಳಿಸಿದನೇ ॥೨॥

ಶಿಲ್ಪಗುಡಿಯಲ್ಲಿ ಲಿಂಗ ಕೃಪಾದಿ ಅಡಗಿ ಕುಳಿತವನೇ
ತ್ರಿಕಾಲ ಪೂಜೆ ನೈವೇದ್ಯ ಅಭಿಷೇಕ ಶಂಭೋ ಶಂಕರನೆ
ಜಾತ್ರೆ ಸಮಯದಿ ವಗ್ಗರು ಹಾಕಿದ ಸರಪಳಿ ಅರಿದವನೆ
ಉದಲಾರದ ಮಾಡಿದ ಎಡೆಯನ್ನು ಸೇವಿಸಿದ ನೀನೇ ॥೩॥

ನೆನೆದ ಭಕ್ತರಿಗೆ ನೀ ಅಂತರಾತ್ಮ ದುರುಶನ ಕೊಟ್ಟವನೇ
ಬಂದಂತ ಕಷ್ಟ ನಷ್ಟವ ದೂಡಿ ಉದ್ಧಾರಗೈದವನೇऽऽऽ
ಎಡಬಿಡದೆ ದೃಢಮನದಿ ಭಜಿಪರ ಪಾವನ ಗೈದವನೆऽऽऽ
ಗಡಿನಾಡದಲ್ಲಿ ಬೆಟ್ಟದಿ ನೆಲೆಸಿದ ಚಂದಾಲಿಂಗೇಶನೆऽऽऽ ॥೪॥

೨) ಓಂಕಾರ ರೂಪ ಶಂಕರ

ಓಂಕಾರ ರೂಪ ಶಂಕರ ऽऽऽ
ದೇವಾ ಚಂದಾಲಿಂಗನ ನಾಮ ಶ್ರೀಕಾರऽऽऽ ॥ಪ॥

ಆಕಾಶದಲ್ಲೂ ನೀನೇ ಭೂಲೋಕದಲ್ಲಿ ನೀನೆ
ಎಲ್ಲೆಲ್ಲೂ ನೀನೇ
ಪರ್ವತ ಗಿರಿಯ ನೀನೇ ಗುಡ್ಡ ಗವಿಯಲ್ಲಿ ನೀನೆ
ಜಗವೆಲ್ಲ ನೀನೆ ॥೧॥

ಹುಟ್ಟಿಸಿದ ದೇವರು ನೀನೆ, ಉದ್ಧಾರ ಗೈಯುವನೇ ನೀನೇ ಮಹಾದೇವನೆಽಽಽ
ಸೃಷ್ಟಿಗೆ ಅಧಿಪತಿ ನೀನೆ, ಬೆಟ್ಟದಲ್ಲಿ ನೆಲೆಸಿಹನೇ ನೀನೇ
ಚಂದ್ರದರನೂ ನೀನೆಽಽ ॥೨॥

ಕುಲಕೋಟಿ ಮಾನವ ಕುಲಕ್ಕೆ ರಕ್ಷಿತ ದೈವ ನೀನೆಽಽಽ ನೀಲಕಂಠನೇ
ಹಠಯೋಗಿ ಋಷಿ ಮುನಿಗಳಿಗೆ ಮನದಿಚ್ಚೆ ನೀಡಿದೆ ನೀನೇಽಽ ಶಿವಲಿಂಗನೇಽಽಽ
ಶಿವಚಂದಲಿಂಗನೇ ನೀನೇ ಲಿಂಗಾಸುತ ನೆಲಸಿದೆ ನೀನೆಽಽಽ ಜಗದೀಶನೇ ॥೩॥

ಬರುವಂತ ಭಕ್ತರಿಗೆ ಒಲಿದು ಭಾಗ್ಯ ಕೊಡುವ ಭಗವಂತ ನೀನೇಽಽ ಚಂದಾಲಿಂಗನೇಽಽಽ
ಮೀಯಾಪುರದ ಹನುಮಗೌಡರ ಭಕ್ತಿಗೆ ಒಲಿದ ಮಹಿಮ ನೀನೆ ಮಹಾದೇವನೇಽಽಽ
ಸಕಲ ಸೌಭಾಗ್ಯವ ಕೊಟ್ಟು ಸಂತೈಸಿ ಹರಿಸಿದ ನೀನೇಽಽ ಚಂದಾಲಿಂಗನೇಽಽಽ ॥೪॥

೪) ಆ ನೋಡ ನೋಡವ್ವ ಮನಸ್ಸಾರ ಇದು ಚಂದಾಲಿಂಗನ ಮಹಾದ್ವಾರ

ಆ ನೋಡ ನೋಡವ್ವ ಮನಸ್ಸಾರ ಇದು ಚಂದಾಲಿಂಗನ ಮಹಾದ್ವಾರ
ಮೊದಲಿಗೆ ನಂದಿ ಬಸವನ ನೋಡಾ.. ಮುಂದೆ ಮಾರುತಿ ದರುಶನ ಮಾಡ
ಸಾಲ ಮರಗಳ ವೈಭವನೋಡಾ ಬಾಗಿ ಸ್ವಾಗತ ಮಾಡ್ತವ ನೋಡಾ
ಹಕ್ಕಿ-ಪಕ್ಷಿಗಳ ಚಿಲಿಪಿಲಿ ರಾಗ ಹರುಷದಿ ಮರದಾಗ ನಲಿತಾವ ನೋಡಾಽಽಽ
ಆರವತ್ತು ಕಂಬದ ಅಗಸಿಯ ನೋಡಾ ಮಹಿಮರು ಸರಪಳಿ ಹರಿಯುವ ಜಾಗ
॥೧॥

ಕೆಸರು ಇಲ್ಲದ ಕೋಟೆಯ ವೈಭವ ನೋಡಾ ಹೆಸರ ಇಲ್ಲದ ಮರ ಐತಿ ನೋಡಾ
ಬಿಸಲ ಇಲ್ಲದ ಬಾವಿ ಗುಡಿಯ ಮುಂದೆ ಯಾವಾಗಲೂ ನೀರ ತುಂಬಿ ತುಳಿಕೆತಿ
ಪೂರ್ವ ದಿಕ್ಕಿಗೆ ಭಟ್ಟರು ಕಾವಲು ಪಶ್ಚಿಮ ದಿಕ್ಕಿಗೆ ಭಾರದ್ವಾಜರು
ಎತ್ತಾ ನೋಡಲು ಋಷಿಪುಂಗವರು ಶಿಲೆಯಾಗಿ ಅಲ್ಲಿ ನಿಂತರು ನೋಡು ॥೨॥

ಕ್ಷೇತ್ರ ಪುರುಸತಿ ಚಂದಾಲಿಂಗರ ತ್ರಿಕಾಲ ಪೂಜೆ ನಡೆವುದು ನೋಡು
ಸುತ್ತು ನಾಡಿನ ಕುಲಕೋಟಿ ಭಕ್ತರು ತಪ್ಪದೇ ಬಂದು ಸೇವೆ ಮಾಡುವರು
ಎಷ್ಟು ಹೇಳಿದರೂ ಸಾಲದು ತಂಗಿ ಅವತಾರ ಪುರುಷ ಚಂದಾಲಿಂಗರು ॥೩॥

೫) ನಂದಿ ಏರಿ ಚಂದ್ರಧರ ಬಂದ ಈ ಭೂಮಿಗಿಳಿದ ಚಂದಾಲಿಂಗ ನಾಮಪಡೆಕೊಂಡು

ನಂದಿ ಏರಿ ಚಂದ್ರಧರ ಬಂದ ಈ ಭೂಮಿಗಿಳಿದ ಚಂದಾಲಿಂಗ ನಾಮ ಪಡಕೊಂಡ
ಲಿಂಗದ ಆಕಾರವಾಗಿ ಬೆಟ್ಟದಲ್ಲಿ ನೆಲೆಸಿ ಲಿಂಗದೇವಾ
ಕುರುಳರ ಶಿರವ ಹರಿದತಂದ ಮಾನವರಿಗೆ ಮಹಾದೇವನಾದಽಽಽ
ಚಂದಾಲಿಂಗನು ನೆನೆದ ತಾಣ ವೈಭವದ ಗೈಲಾಸ ಸದನ ॥೧॥

ಭಕ್ತಿ ರಸವು ಓಂಕಾರ ಧ್ಯಾನಿಸುತ್ತ ಪರ್ವತ ಗಿರಿಯ ಖೂನ
ಸಪ್ತ ಋಷಿಗಳು ಸಪ್ತಋಷಿ ಮಹಾಯೋಗಿ ಮುನಿಗಳು ಘೋರ ತಪವಗೈದ ಸ್ಥಾನ
ನಂದಿ ಏರಿ ಬಂದ ಚಂದ್ರಧರ ಬಂದ ಈ ಭೂಮಿಗಿಳಿದ ಚಂದಾಲಿಂಗ ನಾಮ
ಪಡೆದುಕೊಂಡ ॥೨॥

ಸೃಷ್ಟಿಕರ್ತ ನೆಲೆಸಿದಂತ ಪರ್ವತ ಘನಶಕ್ತಿಯುಂಟು
ಜಗದಲ್ಲಿ ಇರಲಾರದ ವಸ್ತು ಈ ಕ್ಷೇತ್ರದಲ್ಲಿ ಇರುವುದುಂಟು
ಕೆಸರಿಲ್ಲದ ಕೋಟೆ ಬಿಸಿಲಿಲ್ಲದ ಬಾವಿ ಹೆಸರಿಲ್ಲದ ಮರವುಂಟು ॥೩॥

ವೈಶಾಖ ಬಹುಳ ತದಿಗಿಯಿಂದ ಚಂದಾಲಿಂಗನ ಜಾತ್ರೆ ಜೋರಾ
ಸುತ್ತ ನಾಡಿನ ಭಕ್ತರ ಬಳಗ ಪರ್ವತವೇ ಓಂಕಾರನಾದ
ಮೇಲು ಶೀಖರದ ಒಡೆಯನ್ನಾಗಿ ಬಿಡದೆ ಶೈವರ ಕಾಯುತ್ತಾನೆ ॥೪॥

ದೇಶದೊಳಗ ಮೆರೆಯುವಂತ ಕುಷ್ಟಗಿ ತಾಲೂಕಿನೊಳಗ ಬರುವ
ಹನುಮಸಾಗರ ಹತ್ತಿರವಿರುವ ಗುಡ್ಡದಲ್ಲಿ ನೆಲೆಸಿ ನಿಂತsss
ಬರುವ ಭಕ್ತತರು ಬಾಳಿಗೆ ವರವ ನೀಡುವಂತ ಕಲ್ಪವೃಕ್ಷ ॥೫॥

೬) ಚಂದಾಲಿಂಗ ಚಿನ್ಮಯ ಜ್ಯೋತಿ

ಚಂದಾಲಿಂಗ ಚಿನ್ಮಯ ಜ್ಯೋತಿ ಅಂದವಾದ ಬೆಟ್ಟದಿ ನೆಲೆಸಿ
ಸುತ್ತ ನಾಡಿನೊಳ ಕೀರ್ತಿ ಬೆಳಗಿಹುದು ಲೋಕ ಅಧಿಪತಿ
ಚಂದ್ರಸೂರನೆಂಬ ರಾಕ್ಷಸ ಕೋಟೆ ಕಟ್ಟಿ ಮೆರೆಯುತಲಿದ್ದ
ಬೆಟ್ಟದಲ್ಲಿ ವಾಸ್ತವ ಮಾಡಿ ಇವನು ರಾಜ್ಯವಾಳುತ್ತಿದ್ದ ॥೧॥

ಕೆಟ್ಟ ದುರುಳ ರಕ್ಕಸನಾಗಿ ಅಹಂಕಾರಾಧಿ ತಿರುಗತಲಿದ್ದ
ರೈತರ ದನ ಕುರಿಗಳ ಹಿಡಿದಿ ತಿಂದು ಡೆಗುತ್ತಲಿದ್ದ
ದೊರೆ ದೇಸಾಯಿಗಳಲ್ಲಿ ಹೋಗಿ ಕೋಟೆ ಹಾಳು ಮಾಡುತಲಿದ್ದ
ದುಷ್ಟರಲ್ಲಿ ಶ್ರೇಷ್ಠ ರಾಕ್ಷಸ ಉಪಟಳವು ಹೆಚ್ಚಾಗಿ ಹೋಯುತಾ ॥೨॥

ಇದನ್ನು ಕಂಡು ಋಷಿ ಮುಂಗವರು ಇಂದ್ರನ ಸಹಿತ ಧ್ಯಾನವ ಮಾಡಿದರಾ
ಶಿವನಾಮ ಓಂಕಾರ ಶಬ್ದ ಪರಶಿವಗೆ ಕೇಳಿಸಿದಾಗ ನಂದಿ ಏರಿ ಕೈಲಾಸದಿಂದ
ನಂದಿ ಏರಿ ಕೈಲಾಸದಿಂದ ಭೂಲೋಕಕ್ಕೆ ಇಳಿದನು ಆಗ
ಓಂ ನಮಃ ಶಿವಾಯ... ಓಂನಮಃ ಶಿವಾಯ... ॥೩॥

ಚಂದ್ರಸುರನ ಪಾಪದ ಕೃತ್ಯ ಇಂದ್ರತೇಜಿ ಹೇಳಿತು ಈಗ
ಮೂರು ದಿವಸ ಯುದ್ಧ ನಡೆಯಿತು ಚಂದ್ರಸುರ ಸೋಲಲಲ್ಲಿ

ಆಗ ಶಿವನು ಜಡೆಯನ್ನು ಕೆದರಿ ರುದ್ರ ಅವತಾರವ ತಾಳಿ
ಭೂ ಮಂಡಲ ಗಡಗಡ ನಡುಗಿ ಶೂಲದಿಂದ ಇರಿದನು ಭರದಿ ॥೪॥

ಚಂದ್ರಸುರನು ಪ್ರಾಣವನು ಬಿಡಲು ಶಿವನಿಗೊಂದು ಮಾತನು ಹೇಳಿದನು
ನನ್ನ ಹೆಸರಿನ ಲಿಂಗ ಒಂದು ಬೆಟ್ಟದಲ್ಲಿ ನೆಲೆ ಮಾಡೆಂದು
ನಿನ್ನನ್ನು ಪೂಜಿಸುವಾಗ ನನ್ನ ಪೂಜೆ ನಡೆಯಲಿ ಎಂದ
ಚಂದಾಲಿಂಗ ಮಹಿಮ ಅಪಾರ ಬೇಡಿದವರ ಕರಣಿಸುವ ವರ ॥೫॥

ಬರುವ ಭಕ್ತರ ಬಂಧನ ದೂರ ಭವರೋಗಗಳೊಲ್ಲಾ ಪರಿಹಾರ
ಲಿಂಗದಳ್ಳಿ ಕಂದ ಹಾಡೇನು ಚಂದಲಿಂಗನ ಲೀಲೆಯ ಕವನ ॥೬॥

೭) ಮಕ್ಕಳಿಲ್ಲಿಂತ ಮರಗುವುದು ಯಾಕ ತಂಗೆವ್ವಾ

ಮಕ್ಕಳಿಲ್ಲಿಂತ ಮರಗುವುದ್ಯಾಕ ತಂಗೆವ್ವಾ
ಸಪ್ತಗಿರಿ ಶ್ರೀಚಂದಾಲಿಂಗಗ ನಡಿಯವ್ವಾ
ಮನವೆಂಬ ಮೈಲಿಗೆ ತೊಳೆದು ಮತ್ಸಾರದ ಗುಣಗಳನ್ನು ಅಳಿದು
ಎಡ ಬಿಡದೆ ಪೂಜಿಸು ಲಿಂಗಕ್ಕೆ ಹಣೆ ಮಣಿದು ॥೧॥

ಸತಿಪತಿ ಇಬ್ಬರು ನಿತ್ಯ ನೇಮದಿ ವ್ರತವ ಮಾಡಿರವ್ವಾ
ಏಕ ನಿಷ್ಠೆಯಿಂದ ಪಾದಯಾತ್ರೆ ಮಾಡಿ ಕ್ಷೇತ್ರಕ್ಕೆ ನಡಿರವ್ವ
ಮೊದಲಿಗೆ ಬಸವನ ದರುಶನ ಪಡೆದು ಗುಡ್ಡ ಹತ್ತಿರವ್ವ
ಮಹಿಮನ ನೋಡಿರವ್ವ ನೀವು ಮಹಿಮನ ನೋಡಿರವ್ವ ೨॥

ಕೆಸರಿಲ್ಲದ ಕೋಟಿ ನೋಡಲು ಕಣ್ಣು ಸಾಲದವ್ವ
ಬಿಸಿಲ್ಲದ ಬಾವಿಯ ನೋಡಿ ಧನ್ಯರಾಗಿರವ್ವ
ಹೆಸರಿಲ್ಲ ಮರದ ನೆರಳಿಗೆ ವಿಶ್ರಾಂತಿ ಪಡೆಯಿರವ್ವ
ಎತ್ತ ನೋಡಲು ದಿಕ್ಕು ಅದ್ಭುತ ಗಲ್ಲುಶಿಲೆಯು ॥೩॥

ಚುಕ್ಕಿಯಂತೆ ಕಣ್ಣಿಗೆ ಹೊಳೆಯುವುದು ಗಂಗಿ ಮಾಳಮ್ಮನ ಗುಡಿಯುಽಽಽ
ಎಷ್ಟು ನೋಡಿದರೂ ಸಾಲದು ತಂಗಿ ಚಂದಾಲಿಂಗನ ಗಿರಿಯು
ತ್ರಿಕಾಲ ಪೂಜೆ ನಡೆಯುವುದು ತಂಗಿ ಕಣ್ಣಾರೆ ನೋಡವ್ವ
ಏಕ ನಿಷ್ಠೆಯಿಂದ ಶಿರವನು ಬಾಗಿ ಹರಕೆಯ ಹೋರವ್ವ ॥೪॥

ವರ್ಷದೊಳಗ ನೀ ಕಂದನ ಎತ್ತಿಕೊಂಡು ಜೋಗುಳ ಹಾಡವ್ವ
ತಂಗಿ ಜೋಗುಳ ಹಾಡವ್ವಽಽಽ ॥೫॥

೮) **ಮಾನಮಿ ಬನ್ನಿ ಕೊಡುವುದು ಇನ್ನೊಮ್ಮೆ**

ಮಾನಮಿ ಬನ್ನಿ ಕೊಡುವುದು ಇನ್ನೊಮ್ಮೆ

ಕರಿಯಾಲ ಬಾಯಿಗೆ ಬಂದಾನ ಏಳುಕೋಟಿ
ಜಳಕವ ತಾನು ಮಾಡ್ಯಾನ ಅಲ್ಲೆ ॥೧॥
ದಡಿವಲ್ಲಿ ಹುಟ್ಟಾನ ಜರದಂಗಿ ತೊಟ್ಟಾನಲ್ಲಿ
ಕೋರಿಯ ಅಂಗಿಯ ದರಿಶ್ಯಾನ ಏಳುಕೋಟಿ ॥೨॥

ಕಂಡಗ ಭಂಡಾರ ಧರಿಶ್ಯಾನಲ್ಲಿ ಅಲ್ಲಿ
ಕಂಡಗ ಭಂಡಾರ ಧರಿಶ್ಯಾನ ಚಂದಣ್ಣ ॥೩॥

ಕಯ್ಯಾಗ ತ್ರಿಶೂಲ ಹಿಡಿದಾನಲ್ಲಿ
ಕಾರಣಿಕ ಕಟ್ಟಿಗೆ ಬಂದಾನೋ ಚಂದಣ್ಣ ॥೪॥

ಸಬದ ಬಿಲ್ಲ ಏರ್‍ಯಾನ ಅಲ್ಲೇ!
ಮುತ್ತಿನ ನುಡಿಯ ನುಡಿದಾನಲ್ಲಿ ॥೫॥

ಅಲ್ಲಿಂದ ಕೈಯಾ ಬಿಟ್ಟಾನ
ಗೊರವರ ಹಿಡಿದಾರ ಪಾಲ್ಕಿಗ ಕೂಡ್ಸಿಸ್ಯಾರ ||೭||

ಗುಡಿಯ ಕಡೆಗೆ ಬಂದಾನ ಚಂದಣ್ಣ
ಪವಾಡ ಪುರುಷನು ಆಗ್ಯಾನ ಚಂದಣ್ಣ ||೭||

ಕಬ್ಬಿಣ್ಣ ಸರಪಳಿ ಹರದಾನಲ್ಲಿ
ಮುತ್ತಿನ ನುಡಿಯ ನುಡಿದಾನಲ್ಲಿ ||೮||

ಹಣ್ಣವಾ ಹಾಲವಾ ಹದಮಾಡಿ ಸಿರಿಗಂಗಾ
ಹಣ್ಣಿನ ದೋಣಿ ತುಂಬಿಸ್ಯಾಳಲ್ಲಿ ||೯||

ಸುತ್ತ ಬಗೆದವರಿಗೆ ಸುಖಕೊಡು ಮಾನಮಿ
ರನ್ನದ ಆರುತಿ ಚಿನ್ನದ ಆರುತಿ ಮಾಡ್ಯಾಳ ||೧೦||

ಮಾಡ್ಯಾಳ ಸಿರಿಗಂಗಾ
ಒಡಿಗಾಯಿ ಹಿಡಿಗಾಯಿ ಒಡೆಯ ಟೆಂಗಿನಕಾಯಿ ||೧೧||

ಬಗತುರು ತಂದಾರ ಎಳಿಗಾಯಿ! ಚಂದಣ್ಣ
ಬಾಗಲ ಮ್ಯಾಗಾದಿ ಒಡಕೊಡಾ ||೧೨||

೯) ಜಯಮಂಗಲೌ ನಿತ್ಯ ಸೂಯಿ ಮಂಗಲೌ

ದಡಿಲ್ಲೊಂದು ಹುಟ್ಟಿದ್ದನೊ ಜರಾದಂಗಿ ತೊಟ್ಟಿದನೊ
ಕಂಡಗ ಬಂಢಾರ ಧರಿಸಿದ್ದನೊ ||೧||

ಮೆಟ್ಟಿಲ ಏರಿ ಏರಿ ಹೊಂಟಿದ್ದಾನೊ ಗವಿ ಒಳ್ಳೆದೆಂದು ನೋಡಿದ್ದನು
ಗುಡ್ಡದ ಮೇಲೆ ಪಣತಿ ಇಟ್ಟಿದ್ದರೆ ಡಬ್ಬಿಲೆ ಎಣ್ಣೆ ಸುರಿದ್ದನೊ ೨||

ಆ ಮಳೆ ಬಂದರೆ ದೀಪ ಆರದಂಗ ಗಾಳಿ ಬಿಟ್ಟರು ದೀಪರದಂಗ ದೀಪಕಾದಿದ್ದನು
ರನ್ನದ ಆರುತಿ ಮಾಡಿದ್ದೇವೊ ಮುತ್ತಿನ ಆರುತಿ ಬೆಳಗಿದ್ದೆವೊ ॥೩॥

ಚಿನ್ನದ ಆರತಿ ಬೆಳಗಿದ್ದೆವೊ
ಅಪ್ಪ ಚಂದಾಲಿಂಗಗ ಕೈಯತ್ತಿ ನಾವು ಕೈಯತ್ತಿ ಮುಗಿದಿದ್ದೆವೊ ॥೪॥

೧೦) **ನೋಡಿ ಬರೋಣ ಬಾರ ಜಾತ್ರೆಯನ**

ನೋಡಿಯ ಬರೋಣ ಬಾರ ಜಾತ್ರೆಯನ್ನ
ಚಂದಾಲಿಂಗನ ಲೀಲೆಯನ ॥ಪ॥

ವರ್ಷದರೆಡು ಸರಿ ನಡೆಯುವುದ ಸ್ವಾಮಿಯ ಕಾರಣಿಕವ
ತುಗ್ಗಲಿಯ ಮರವನ ಏರಿ ಅದನ್ನ ಏರಿ ಹೇಳುವನು ॥೧॥

ಎರಡ ಎರೆಡು ವಚನವು
ಅಲ್ಲಿ ನೋಡಿದರೆ ಮನಸ್ಸಿಗೆ ಆನಂದವೋ ॥೨॥

ಹಲವರು ಕುಣಿಯುವರು ಕುದುರೆ ಕುಣಿತವನ
ಹಲವರು ಬೆಳಗುವವರು ಕಾಯ್ ಕೋಲ್ ದೀಗಿಗಿನ ॥೩॥

ವಗ್ಗಯ್ಯನವರು ಹರಿಯುವರು ಕಬ್ಬಿಣ ಸರಪಳಿಯ
ಕಂಚೀ ವೀರರು ಹೇಳುವವರು ವಡಪುಗಳನ್ನು ॥೪॥

ಗಿರಿಗೆ ಬರುವಂತ ಭಕ್ತ ಜನರೆಲ್ಲ ನುಡಿಯುವರು ॥೫॥
ಏಳುಕೋಟಿ ಎಂಬ ನಾಮದ ಸಲ್ಲ

೧೧) **ಜಯ ಜಯ ಮಂಗಲ ಜಯ ಶುಭ ಮಂಗಲ ಚಂದಾಲಿಂಗರಿಗೆ**

ಜಯ ಜಯ ಮಂಗಲ ಜಯ ಶುಭಮಂಗಲ ಚಂದಾಲಿಂಗರಿಗೆSSS
ಕುರುಳ ರಕ್ಕಸನ ಸಂಹಾರ ಮಾಡಿದ ಪರಶಿವ ಮೂರುತಿಗೆSSSS
ಅನಂತರೂಪ ಭಕ್ತ ಸಂಪ್ರಿತ ವಿಶ್ವರೂಪನಿಗೆ
ತ್ರಿಶೂಲ ಢಮುರುಗ ರುದ್ರ ಅವತಾರ ಲೀಲಾ ಮೂರುತಿಗೆSSS ॥೧॥

ಪರ್ವತಗಿರಿಯಲ್ಲಿ ಅವತಾರವೆತ್ತಿ ಪವಾಡ ಮಾಡಿದವನಿಗೆ
ಸರಪಳಿ ಹರಿದು ಮುಳ್ಳಿನ ಹಾವಿಗೆ ಹತ್ತಿದ ಮೆರೆದವಗೆSSSS
ಶಂಭೋ ಶಂಕರ ಓ ಚಂದ್ರಮೌಳಿ ಲಂಭೋದರ ಪಿತನೆSSS ॥೨॥

ನಂಬಿದ ಭಕ್ತರ ಬಾಳಿಗೆ ಹರನಾಗಿ ವರವನ್ನು ನೀಡಿದವನೆSSS
ಮಂಗಳಗೌರಿ ಗಂಗಿ ಮಾಳಮ್ಮಗೆ ಪತಿಯಾಗಿ ಬಂದವನೆSSS
ಪರ್ವತಗಿರಿಯಲ್ಲಿ ವಾಸವ ಮಾಡಿದ ಶ್ರೀಚಂದಾಲಿಂಗನಿಗೆSSS ॥೩॥

೬.೨.೨. ಕಥೆಗಳು : (Stories)

ಚಂದಾಲಿಂಗೇಶ್ವರನ ಜೀವನ ಪವಾಡ ಹುಲ್ಲಪ್ಪನನ್ನು ಸಾಕು ಪುತ್ರನನ್ನಾಗಿ ಪಡೆದುಕೊಂಡಿರುವುದರ ಬಗ್ಗೆ ಚಂದಾಲಿಂಗ ಹಾಗೂ ಮಲ್ಲ, ಮಣಿಕಾಸುರ ಯುದ್ಧಕ್ಕೆ ಸಂಬಂಧಿಸಿರುವ ಕಥೆಗಳನ್ನು, ಚಂದಾಲಿಂಗನ ಅವತಾರ, ಆತನು ಶಿವನ ಸ್ವರೂಪಿಯಾಗಿ ಇರುವುದು. ಹೀಗೆ ಈತನ ಮೂಲಕ್ಕೆ ಸಂಬಂಧಿಸಿದ ಹಲವಾರು ಪುರಾಣ ಆಧಾರಿತ ಕಥೆಗಳನ್ನು ಅಧ್ಯಾಯ-ಎರಡು ಚಂದಾಲಿಂಗೇಶ್ವರ ಮೂಲದಲ್ಲಿ ಕ್ರೋಢೀಕರಣ ಮಾಡಿ ವಿಶ್ಲೇಷಣೆ ಮಾಡಿದ್ದೇನೆ.

ಹೂವಿನ ಬಾರಕ ಬೆವಿತಾನೊ ಚಂದಾಣ್ಣ ಎಂಬ ಗೀತೆಯಲ್ಲಿ ಚಂದಾಲಿಂಗೇಶ್ವರನು ವಾಸವಾಗಿರುವಂತ ಗರ್ಭಗುಡಿಯ ಸ್ಥಿತಿಗತಿ ತಿಳಿಯುತ್ತದೆ. ಏಕೆಂದರೆ ಹೆಸರೆ ಸೂಚಿಸುವಂತೆ ಗರ್ಭಗೃಹವಾಗಿರುವದರಿಂದ ಗಾಳಿ, ಬೆಳಕಿನ, ಅನುಕೂಲ ಕಡಿಮೆಯಾಗಿರುತ್ತದೆ. ಈ ಹಾಡಿನಲ್ಲಿ ಮುಖ್ಯವಾಗಿ ತಿಳಿಯುವುದೇನೆಂದರೆ ಚಂದಾಲಿಂಗೇಶ್ವರನಿಗೆ ಯಾವ ಯಾವ ಉಡುಗೆ ತೊಡಿಗೆಗಳನ್ನು ಹಾಕುತ್ತಿದ್ದರು ಎಂಬುದು ತಿಳಿಯುತ್ತದೆ. ಇವತ್ತಿನ ದಿನಗಳಲ್ಲಿ ಯಾವ ಯಾವ ಉಡುಗೆ ತೊಡುಗೆಗಳು ಇವೆ. ಹಾಗೂ ಅವಾಗಿನ ಸ್ಥಿತಿಯಲ್ಲಿನ ವೇಷಭೂಷಣಗಳ ಪರಿಚಯವಾಗುವುದು. ಈ ಎಲ್ಲಾ ವಸ್ತುಗಳ ಭಾರದಿಂದ ಬೆವತಿರುವುದನ್ನು ಆತನ ಸೂಕ್ಷ್ಮತೆಯ ಬಗ್ಗೆಯು ತಿಳಿಯುವುದು.

ಬಾಳಿಯ ಎಲಿಯಾಗ ಬಾಲೆರ ಎಡೆಮಾಡಿ ಎಂಬ ಹಾಡಿನಲ್ಲಿ ನಮ್ಮ ಜನಪದರು ಹಿಂದೆ ದೇವರಿಗೆ ಎಡೆ ಮಾಡುವುದಕ್ಕೆ ಯಾವ ಯಾವ ಎಲೆಗಳು ಸೂಕ್ತವೆಂದು ಗುರುತಿಸಿರುವ ಅವರ ಜ್ಞಾನದ ಬಗ್ಗೆ ಅರಿವಾಗುತ್ತದೆ. ಒಂದು ಗ್ರಾಮೀಣ ಪ್ರದೇಶವಿದೆ ಎಂದರೆ ಅಲ್ಲಿ ಹಲವಾರು ವಿಧವಾದ ಮರಗಳು ಸಸ್ಯಗಳು ಗೋಚರಿಸುತ್ತವೆ. ಯಾವ ಯಾವ ಎಲೆಗಳನ್ನು ಎಂಥವರು ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಯುತ್ತದೆ. ದೈವಿಪುರುಷರಿಗೆ ಅಥವಾ ಧಾರ್ಮಿಕ ಪುರುಷರಿಗೆ ಯಾವ ತರಹದ ಉಪಚಾರ ಮುಖ್ಯವೆಂಬುದು ತಿಳಿಯುವುದು. ವಡಗಾಯಿ ಹಿಡಿಗಾಯಿಗಳನ್ನು ಯಾವ ಸಂದರ್ಭದಲ್ಲಿ ಬಳಸುವರೆಂಬುದು ಗೊತ್ತಾಗುತ್ತದೆ.

ಚಂದಣ್ಣನ ನೆನಿಲಕ ಮಲ್ಲಿಗೆ ಹೂವ ಬೇಕಾ ಲಿಂಗದೇವಾ ಎಂಬ ಗೀತೆಯಲ್ಲಿ ನಮ್ಮ ಜನಪದರು ಒಬ್ಬ ಸಾಂಸ್ಕೃತಿಕ ವೀರನ ಬಗ್ಗೆ ನೆನೆಯಬೇಕಾದರೆ ಆತನ ಸಮತೂಕದ ಭಾವನೆಗಳಿರಬೇಕು. ಅಷ್ಟೇ ಸೂಕ್ಷವಾಗಿ ನಡೆದುಕೊಳ್ಳಬೇಕು. ಈ ಹಾಡಿನಲ್ಲಿ ಇಬ್ಬರೂ ದಂಪತಿಗಳು ಮುಖ್ಯವಾಗಿದ್ದಾರೆ. ಏಕೆಂದರೆ ನಮ್ಮ ಜನಪದರು ಒಳ್ಳೆಯ ಯೋಚನೆ ಮಾಡುವುದೇ ಇಂತಹ ಸಾಂಸ್ಕೃತಿಕ ವ್ಯಕ್ತಿಗಳ ಕುರಿತು. ಇಲ್ಲಿ ಚಂದಾಲಿಂಗೇಶ್ವರನು ಯಾವುದೋ ಯಾತ್ರೆಯನ್ನು ಕೈಗೊಂಡಂತೆ ತೋರುತ್ತದೆ. ಅದರ ಅವಧಿಗಳು ಹೋಗುವ ಸಿದ್ಧತೆಗಳು ನಡೆದಿರುವದು ಗೋಚರಿಸುತ್ತದೆ. ಎಣ್ಣಿಯ ದೀವಟಿಯ ಪದ ಬಳಕೆಯಾಗಿರುವುದರಿಂದ ಹಿಂದೆ ಸುಧಾರಿತ ಬೆಳಕು ನೀಡುವಂತ ಪರಿಕರಗಳು ಇಲ್ಲದಿರುವುದರಿಂದ ಜನಪದರು ರಾತ್ರಿಯ ವೇಳೆಯಲ್ಲಿ ಕೆಲಸಕ್ಕೆ ಹೋದರೆ ಈ ದೀವಟಿಗೆ ಮೊರೆ ಹೋಗುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ಚಂದಾಲಿಂಗನು ದೀವಟಗೆ ಹಿಡಿದುಕೊಂಡು ಗೊಬ್ಬರ ಹೇರುವುದು ಹೋದಂತ ಸಮಯದಲ್ಲಿ ಪರನಾರಿಯ ಮೋಹಕ್ಕೆ ಒಳಾಗಾಗುವಂತ ಸನ್ನಿವೇಶ ತಿಳಿಯುತ್ತದೆ. ಪರಸತಿಯ ಮೋಹಕ್ಕೆ ಒಳಗಾಗಿ ಅವಳೊಂದಿಗೆ ಸಂಭಾಷಣೆ ನಡೆಸುತ್ತಾನೆ. ತುಪ್ಪದ ಮಾಳವ್ವ ಪರಿಪರಿಯಾಗಿ ಬೇಡುತ್ತಾಳೆ. ಕೊನೆಗೆ ತನ್ನ ಭಕ್ತಳಾಗು ಎಂದು ಕೇಳುವನು. ಇದಕ್ಕೆ ಒಪ್ಪದಿದ್ದರೆ ಮದುವೆಯಾದ ಗಂಡನ ಬಿಡಿಸುವೆ ಎಂದು ಭಯ ಒಡ್ಡುತ್ತಾನೆ. ಚಂದಾಲಿಂಗೇಶ್ವರನು ಮಾಳವ್ವನನ್ನು ಯಾವ ರೀತಿ ಮನಸ್ಸಿಗೆ ಹಚ್ಚಿಕೊಂಡಿದ್ದು ಇಲ್ಲಿ ತಿಳಿಯುತ್ತದೆ.

ತುಪ್ಪದ ಮಾಳವ್ವನು ದೂರಾಗಲು ಪರಿಪರಿಯಾಗಿ ಬೇಡುತ್ತಾಳೆ. ಆದರೂ ಅವಳಿಗೆ ಮಾನಸಿಕ ಒತ್ತಡ ಹಾಕುತ್ತಾನೆ. ಇದರಿಂದ ಆಕೆ ಆತನನ್ನು ಜರಿಯುತ್ತಾಳೆ. ಇದಲ್ಲದೆ ಇನ್ನೂ ಬೇರೆ ಬೇರೆಯವರಿಗೆ ತನ್ನ ಹೊರೆ ಹೊರುವುದಕ್ಕೆ ಒತ್ತಾಸೆ ಮಾಡುವನು. ಆದರೂ ಕೆಲವೊಬ್ಬರು ದೋಣಿ ತುಂಬಿ ಕಳಿಸುವರು. ತನ್ನ ಹೊರೆ ಹೊರುವುದಕ್ಕೊಸ್ಕರ ಹಲವರಿಗೆ ಕಾಡಿಸಿ ತನ್ನಷ್ಟಕ್ಕೆ ತಾನೇ ನಗುವನು.

ಚಂದಣ್ಣನ ನೆನೆಯಲಕ ಮಲ್ಲಿಗೆ ಹೂವುಬೇಕು ಎಂಬ ಈ ಹಾಡಿನಲ್ಲಿ ಚಂದಣ್ಣನಿಗೆ ಪ್ರಿಯವಾದ ಹೂವುಗಳು ಮಲ್ಲಿಗೆ ಎಂದು ತಿಳಿಯುತ್ತದೆ. ಆತನ ಬಗ್ಗೆ ತಿಳಿದುಕೊಳ್ಳಬೇಕಾದ್ರೆ

ಸೂಕ್ಷ್ಮವಾದ ಮನಸ್ಸುಳ್ಳ ವ್ಯಕ್ತಿಗಳು ಬೇಕು. ಇಲ್ಲಿ ಮುಖ್ಯವಾಗಿ ಗಂಗೆಮಾಳವ್ವನಿಗೆ ಚಂದಾಲಿಂಗನ ಗುಣಗಳನ್ನು ಗುಣಗಾನ ಮಾಡಲಾಗುತ್ತದೆ. ಹೇಗಾದರೂ ಮಾಡಿ ಮಾಳವ್ವನ್ನು ಚಂದಾಲಿಂಗನ ವಶಮಾಡಬೇಕೆಂದು ಈ ಹಾಡಿನ ತಿರುಳಾಗಿ ಕಾಣುತ್ತದೆ. ಯಾವ ಯಾವ ಸ್ಥಳದಲ್ಲಿ ಶಿವ ಪೂಜೆ ಮಾಡೆಂದು ಗಂಗೆ ಮಾಳಮ್ಮಗೆ ತಿಳಿಸುವುದು ಕಂಡುಬರುತ್ತದೆ. ಇವರಿಬ್ಬರ ನಡುವೆ ಪ್ರೇಮಾಂಕುರ ಹುಟ್ಟಿಸಲು ಮೂರನೆಯ ವ್ಯಕ್ತಿ ಪ್ರಯತ್ನ ಮಾಡಿರುವುದು ಈ ಹಾಡಿನುದ್ದಕ್ಕೂ ಕಾಣುತ್ತದೆ. ಕೊನೆಗೆ ಚಂದಾಲಿಂಗನ ಅಷ್ಟೆಲ್ಲ ಪವಾಡ ನೋಡಿದ ಮೇಲೆ ಇಳೇವ ಇವರಿಬ್ಬರಿಗೂ ನಡೆಯುತ್ತದೆ.

"ಮನ್ನೇರಾಳ ಗುಡ್ಡದಾಗ ಚಂದಾಲಿಂಗನ ಗುಡಿಯ ಕಟ್ಟಿಸ್ಯಾರ" ಎನ್ನುವ ಈ ಗೀತೆಯಲ್ಲಿ ಚಂದಾಲಿಂಗನ ಗುಡಿಯು ಸ್ಥಾಪನೆಯಾದ ಸ್ಥಳವು ಸಂಪತ್ತು ಭರಿತವಾದ ಪ್ರದೇಶವಾಗಿತ್ತು ಎಂದು ಈ ಹಾಡಿನಲ್ಲಿ ಚಿತ್ರಿಸಿದ್ದಾರೆ. ಆ ಪ್ರದೇಶವು ಎಲ್ಲಾ ಫಲ ಪುಷ್ಪಗಳಿಂದ ಪ್ರಾಣಿ ಪಕ್ಷಿಗಳಿಂದ ತುಂಬಿಕೊಂಡಿತ್ತು ಎಂದು ಬಾಸವಾಗುತ್ತದೆ. ಇಂಥ ಪ್ರದೇಶದಲ್ಲಿ ನಡೆದಾಡಿದರೆ ವಿವಿಧ ಜಾತಿಯ ಪಕ್ಷಿಗಳ ಕಲರವ ಕೇಳಿದಂತೆ ಹಾಗೂ ವಿವಿಧ ಪುಷ್ಪಗಳ ನೋಡುಗರ ಮನಸ್ಸೆಳೆಯುವಂತಿತ್ತು ಎನಿಸುತ್ತದೆ. ಆ ಗುಡಿಗೆ ಬಳಿಸಿರುವಂತ ವಸ್ತುಗಳು ಬಂಗಾರ ಬೆಳ್ಳಿಯ ಬೆಲೆಯನ್ನು ಹಾಗೂ ಅವುಗಳ ಗುಣವನ್ನು ಮೀರಿಸುವಂತವುಗಳಾಗಿವೆ. ಗುಡಿಯ ಜಾಲಾಂಧ್ರಗಳು ಸೂಕ್ಷ್ಮ ಕೆತ್ತನೆಯದ್ದಾಗಿದ್ದವು ಎಂದು ರೂಪಕತೆ ಕೊಡುತ್ತವೆ.

"ಎಷ್ಟು ಧ್ಯಾನ ಮಾಡಲಯ್ಯ ಚಂದಾಲಿಂಗೇಶ" ಈ ಹಾಡಿನಲ್ಲಿ ಭಕ್ತನು ಚಂದಾಲಿಂಗನ ನೆಲೆಯನ್ನು ಕಾಣಲು ಪ್ರಯತ್ನಿಸಿರುವನು. ಮೇಲ್ನೋಟಕ್ಕೆ ಗುಡಿಯು ಕಾಣುತ್ತಿದೆ. ಗದ್ದುಗೆ ಕಾಣುತ್ತಿದೆ. ಆದರೆ ಭಕ್ತನು ಆತನನ್ನೆ ನೋಡುವ ಹಂಬಲ ನಡೆದಿದೆ. ನಾನಾ ರೀತಿಯ ಭ್ರಾಂತಿಗೆ ಒಳಗಾಗಿದ್ದಾನೆ. ಆಧ್ಯಾತ್ಮಿಕ ವಸ್ತುಗಳಲ್ಲಿ ಹಾಗೂ ಆತನಿಗೆ ಬಳಕೆಯಾಗುವ ಪ್ರತಿಯೊಂದು ವಸ್ತುಗಳಲ್ಲಿ ಆತನು ಇರುವನೆಂಬ ನಂಬಿಕೆಯೊಂದಿಗೆ ಭಕ್ತನಿಗೆ ಗೋಚರಿಸಿದ ಎಲ್ಲಾ ವಸ್ತುಗಳನ್ನು ನೋಡಿ ಅದರಲ್ಲಿ ಕಾಣಲು ಹೋಗುವನು. ದೇವರಿಗೆ ಬಳಕೆಯಾಗುವ ಪೂಜಿತ ವಸ್ತುಗಳಿಂದ ಹಿಡಿದು ವಾದ್ಯಗಳೊಂದಿಗೆ ಸಹ ಹುಡುಕುವ ಪ್ರಯತ್ನ ನಡೆಸಿದ್ದಾನೆ. ಭಕ್ತನು ಚಂದಾಲಿಂಗನಿಗೆ ಭಕ್ತಿ ಪರವಶೆ ಒಳಗಾಗಿ ಸರ್ವ ವಸ್ತುಗಳಲ್ಲಿ ನೋಡುವನು.

"ಕೋಳಿ ಕೂಗಿದವೋ ಚಂದಾಲಿಗನ ಪೂಜೆ ನಡೆದಿದೆಯೋ" ಎಂಬ ಹಾಡಿನಲ್ಲಿ ನಮ್ಮ ಜನಪದರು ಪೂಜಾ ಅವಧಿಯನ್ನು ತಿಳಿಸುವರು. ಪ್ರತಿದಿನ ಈತನ ಪೂಜೆ ನಡೆಯುತ್ತದೆ ಎಂದು ತಿಳಿಯುವುದು. ಬೆಳಗೆದ್ದು ಒಳ್ಳೆಯವರನ ನೆನೆದರೆ ಅವತ್ತಿನ ದಿನವೆಲ್ಲ ಒಳ್ಳೆಯ ವಿಚಾರಗಳು ಭಕ್ತನ ಮನಸ್ಸಿನಲ್ಲಿ ಮೂಡುತ್ತವೆ. ಹಿಂದಿನ ದಿನಗಳಲ್ಲಿ ದೇವರಿಗೆ ಹೋಗಬೇಕಾದರೆ ಬೇಗ ಹೋಗುವ ಪರಿಪಾಠವಿತ್ತು ಎಂಬುದು ಗೊತ್ತಾಗುತ್ತದೆ. ಬೆಳಗ್ಗೆ ಏಳುತ್ತಲೇ ಇಂಥ ಪುರುಷರನ್ನು ನೆನೆಯೊದರಿಂದ ಆಧ್ಯಾತ್ಮಿಕ ಜ್ಞಾನ ವೃದ್ಧಿಯಾಗುತ್ತದೆ. ಹೀಗೆ ಕಾಲಕ್ಕನುಗುಣವಾಗಿ ಒಳ್ಳೆಯವರನ್ನು

ನೆನೆದರೆ ಆತ್ಮಶುದ್ಧಿ. ಮುಂದುವರೆದು ಚಂದಾಲಿಂಗನ ಸೇವೆಗೆ ಆತನ ಭಕ್ತರು ಇರುವರು ಯಾರು ಯಾರು ಎಂಬುದು ತಿಳಿಯುತ್ತದೆ. ಈ ಪೂರ್ವದ ದಿನಗಳಲ್ಲಿ ಗೊರವರ ಸಂಪ್ರದಾಯಗಳು ಹೇಗಿದ್ದವು ಎಂಬುದು ತಿಳಿಯುತ್ತದೆ. ಈ ಗೊರವರ ಸಂಪ್ರದಾಯವಿರುವವರು ಪ್ರತಿ ರವಿವಾರ ಭಿಕ್ಷಾಟನೆಗೆ ಹೋಗುವ ಪದ್ಧತಿಯ ಬಗ್ಗೆ ತಿಳಿಯುತ್ತದೆ. ಆ ಏಳುಕೋಟಿ ಚಂದಾಲಿಂಗನು ಎಲ್ಲಾ ಜ್ಞಾನವನ್ನು ಬಲ್ಲವನಾಗಿದ್ದಾನೆ. ಚಂದಾಲಿಂಗನ ವೇಷಭೂಷಣಗಳು ಪರಿಚಯವಾಗುತ್ತದೆ.

"ನಾಡಗಳ ಮೇಲಿನ ಕಲ್ಲುಗಳು ತಂದು ಗುಡಿಯಾ ಕಟ್ಯಾರೋ" ಪ್ರಸ್ತುತ ಈ ಡೊಳ್ಳಿನ ಪದದಲ್ಲಿ ಮೊದಲಿಗೆ ಚಂದಾಲಿಂಗನ ಗುಡಿಯ ನಿರ್ಮಾಣದ ಬಗ್ಗೆ ಹಾಗೂ ಕಲಾಕೃತಿಯ ಬಳಕೆಯ ಪರಿಚಯವಾಗುತ್ತದೆ. ಚಂದಾಲಿಂಗನ ದಿನನಿತ್ಯದ ಚಟುವಟಿಕೆಗಳ ಬಗ್ಗೆ ಹಾಗೂ ಆತನ ಮೌನಸ್ಥಿತಿಯ ಕುರಿತು ತಿಳಿಯುತ್ತದೆ. ಭಕ್ತರಿಗೆ ಸಂತಾನ ಫಲ ನೀಡುವುದರ ಬಗ್ಗೆ ಜ್ಞಾನ ತಿಳಿಯುತ್ತದೆ.

"ಮಾನಮಿ ಬನ್ನಿ ಕೊಡದು ಇನ್ನೊಮ್ಮೆ" ಎಂಬ ಜನಪದ ಗೀತೆಯಲ್ಲಿ ಮಹಾನವಮಿಯಲ್ಲಿ ಬನ್ನಿಹಬ್ಬ ನಡೆದರೆ, ಮತ್ತೆ ಮೂರು ದಿನ ಮತ್ತೊಮ್ಮೆ ಬನ್ನಿ ನಡೆಯುತ್ತದೆ. ಇಂಥ ಹಬ್ಬಕ್ಕೆ ಚಂದಾಲಿಂಗನ ವೇಷಭೂಷಣಗಳೇನು ಎಂಬುದು ತಿಳಿಯುತ್ತದೆ. ಆತನು ಬಳಕೆ ಮಾಡುವಂತ ವಸ್ತುಗಳು ಯಾವುವೆಂದು ತಿಳಿಯಬಹುದು. ನುಡಿ ಹೇಳುವಂತ ಶೈಲಿ ಹೇಗಿದೆ ಎಂದು ತಿಳಿಯುವುದು.

"ಜಯಮಂಗಲೌ ನಿತ್ಯ ಸುಯಿ(ಶುಭ)ಮಂಗಲೌ ಎಂಬ ಮಂಗಳಾರತಿ ಹಾಡಿನಲ್ಲೂ ಚಂದಾಲಿಂಗನ ಉಡುಗೆ-ತೊಡುಗೆಗಳು ಪರಿಚಯವಾಗುವುವು. ಚಂದಾಲಿಂಗನಿಗೆ ವಿಶೇಷವಾದಂತ ಆರತಿ, ಪೂಜೆಯ ಬಗ್ಗೆ ವರ್ಣನೆಯು ತಿಳಿಯುತ್ತದೆ. ಚಂದಾಲಿಂಗನ ವಾಸಸ್ಥಾನ ಪರಿಯು ಹೇಗಿತ್ತು ಎಂಬುದು ಈ ಪದ್ಯದ ಆಶಯ.

"ನೋಡಿ ಬರೋಣ ಬಾರ ಜಾತ್ರೆಯನ" ಎಂಬ ಈ ಜನಪದ ಪದ್ಯದಲ್ಲಿ ಜಾತ್ರಿಯನ್ನು ನೋಡಿ ಬರಲು ಪತಿಯು ಸತಿಗೆ ಹೇಳುತ್ತಾನೆ. ಚಂದಾಲಿಂಗ ಜಾತ್ರೆಯಲ್ಲಿ ಏನೆಲ್ಲ ನಡೆಯುತ್ತದೆ, ಅದನ್ನೆಲ್ಲ ತನ್ನ ಸತಿಗೆ ತಿಳಿಸುವಂತ ಸಂದರ್ಭ ನಡೆದಿರುವಂತೆ ತೋರುತ್ತದೆ. ಈ ಜಾತ್ರೆಯ ಬಗ್ಗೆ, ಸರಪಳಿ ಪವಾಡದ ಬಗ್ಗೆ ಹಾಗೂ ಕಂಚೀವೀರ ಒಡಮುಗಳನ್ನು ಹೇಳುವುದನ್ನು ತಿಳಿಸುವನು.

"ಪರಶಿವನ ಅವತಾರ ಚಂದಾಲಿಂಗ" ಎಂಬ ಹಾಡಿನಲ್ಲಿ ರಚನೆಕಾರರು ಚಂದಾಲಿಂಗೇಶ್ವರನನ್ನು ಪರಶಿವನ ಇನ್ನೊಂದು ಅವತಾರವೆಂದು ಬಣ್ಣಿಸಿ ಹಾಡಿದ್ದಾರೆ. ಈ ಅವತಾರ ಪುರುಷನ ಜಾತ್ರೆಯು ವರ್ಷದ ಎರಡೂ ಅವಧಿಯಲ್ಲಿ ಅತೀ ವಿಜೃಂಭಣೆಯಿಂದ ನಡೆಯುತ್ತದೆ ಎಂದೂ ತಿಳಿಯುತ್ತದೆ. ಇದಲ್ಲದೆ ಆ ಕ್ಷೇತ್ರದಲ್ಲಿರುವ ವಿಶೇಷತೆಗಳನ್ನು ನೋಡುವುದರಿಂದ

ಸಾಕ್ಷಾತ್ ಪರಶಿವನ ದರ್ಶನವೇ ಆದಂತೆ ಎನ್ನುತ್ತಾರೆ. ಆ ಜಾತ್ರೆಯು ಸುತ್ತ ಹಳ್ಳಿಗಳಲ್ಲಿಯೇ ದೊಡ್ಡ ಜಾತ್ರೆಯಾಗಿರುತ್ತದೆ. ಈ ಕ್ಷೇತ್ರಕ್ಕೆ ಜಾತ್ರೆಗೆ ಬರುವಂತ ಭಕ್ತರ ಸಿದ್ಧತೆಯು ಅತಿ ವೈಭವದಿಂದ ಕೂಡಿರುತ್ತದೆ. ಆ ಪ್ರದೇಶದಲ್ಲಿರುವ ಅರಣ್ಯ ಸಂಪತ್ತು ಯಾತ್ರಿಕರಿಗೆ ಮನಸ್ಸು ಇಂಪನ್ನು ನೀಡುತ್ತದೆ. ಹಾಗೂ ಹರಕೆಯ ಹೊತ್ತಂತವರು ಪಾದ ಯಾತ್ರೆಯಿಂದ ಬಳಲಿದವರಿಗೆ ದಾರಿಯ ಮಧ್ಯ ವಿಶ್ರಾಂತಿ ಪಡೆಯಲು ಅಲ್ಲಿರುವ ಮರಗಳ ನೆರಳು ಸಹಾಯಕವಾಗಿವೆ. ಆ ಜಾತ್ರೆಗೆ ಬರುವಂತ ಭಕ್ತರು ಯಾವ ಯಾವ ವಿಧಾನದ ಮೂಲಕ ಜಾತ್ರೆಗೆ ಬರುತ್ತಾರೆ ಎಂದು ಹೇಳಲಾಗುತ್ತದೆ. ಅಂತಹ ಶುಭ ದಿನಗಳಲ್ಲಿ ಆ ಗುಡ್ಡದ ಪ್ರದೇಶದಲ್ಲಿ ಎತ್ತ ಕಡೆಗೆ ನೋಡಿದರೂ ಜಾತ್ರೆಗೆ ಬಂದಿರುವ ಭಕ್ತರ ದಂಡೇ ಕಾಣುತ್ತದೆ. ಆದ್ದರಿಂದ ಇದು ವೈಭವದ ಶಿಖರದಂತೆ ಗೋಚರಿಸುತ್ತದೆ.

ಚಂದಾಲಿಂಗೇಶ್ವರನ ಜಾತ್ರೆ ನೆರವೇರಬೇಕಾದರೆ ಆ ವಿವಿಧ ಗ್ರಾಮಗಳಿಂದ ಜಾತ್ರಾ ಆಚರಣೆಗೆ ಸಂಬಂಧಪಟ್ಟ ಸಾಂಸ್ಕೃತಿಕ ಪರಿಕರಗಳು ಬರುತ್ತವೆ. ಆ ಒಂದೊಂದು ಪರಿಕರಗಳ ಆಚರಣೆ ಸಂಪ್ರದಾಯಗಳು ಅಂದು ಜರುಗುತ್ತವೆ. ಆಯಾ ಊರುಗಳಿಂದ ಆ ಸಾಂಸ್ಕೃತಿಕ ಆಚರಣೆಯ ಪರಿಕರಗಳನ್ನು ಅಲ್ಲಿಯ ಭಕ್ತರು ಯಾವ ರೀತಿ ತರುತ್ತಾರೆ ಎಂಬುದು ಈ ಹಾಡಿನಲ್ಲಿ ತಿಳಿಯುತ್ತದೆ. ಆ ಜಾತ್ರೆಯಲ್ಲಿ ಪ್ರಮುಖ ಪಾತ್ರ ವಹಿಸುವಂತ ಆಚರಣಾಧಾರಿಗಳು ಯಾವ ಸ್ಥಳದಲ್ಲಿ ಆಶ್ರಯ ಪಡೆಯುತ್ತಾರೆ. ಅವರು ಭಕ್ತರಿಗಿಂತ ಹೇಗೆ ಭಿನ್ನವಾಗಿರುತ್ತಾರೆ ಎಂಬುದು ಗೊತ್ತಾಗುತ್ತದೆ. ಮುಂದುವರೆದು ಆಚರಣೆಗಳು ಪ್ರಾರಂಭವಾದಾಗ, ಯಾವ ಯಾವ ವಾದ್ಯಗಳು ಧ್ವನಿ ಮೊಳಗಿಸುತ್ತವೆ, ಅವುಗಳ ಶಬ್ದವು ಆ ಪ್ರದೇಶವನ್ನೆಲ್ಲಾ ಆವರಿಸಿರುತ್ತದೆ. ಅಪಾರವಾದ ಭಕ್ತ ಸಂಖ್ಯೆಯಿಂದ ಆ ದೇವರಿಗೆ ಜಯಕಾರದ ಘೋಷಣೆಯು ಪ್ರತಿಧ್ವನಿಸುತ್ತಿರುತ್ತದೆ. ಆ ಆಚರಣೆಯ ಕೊಂತದೇವರು, ಮಳ್ಳಯ್ಯ, ವಗ್ಗಯ್ಯನವರು ಉಗ್ರದಿಂದ ಆ ಪ್ರದೇಶದಲ್ಲಿರುವ ಶಿಬಾರದಿಂದ ಶಿಬಾರಕ್ಕೆ ಆಚರಣಾ ಸ್ಥಳಕ್ಕೆ ಬರುತ್ತಾರೆ.

ಮಳ್ಳಯ್ಯಜ್ಜನವರು ಯಾವ ಪ್ರದೇಶದಲ್ಲಿ ಸೂಚ ತೋರಿಸುತ್ತಾನೆ. ಆ ಸೂಚ ಅಲ್ಲಿ ನೇರವೇರಿದಂತಲ್ಲಿ ಭಕ್ತರು ಹೇಗೆ ವೀಕ್ಷಿಸುವರು ಎಂಬುದನ್ನು ತಿಳಿಯಲಾಗುತ್ತದೆ. ಸೂಚದಲ್ಲಿ ಯಾರ್ಯಾರು ಭಾಗಿಯಾಗುವರು ಎಂಬುದು ತಿಳಿಯುವುದು. ವಗ್ಗಯ್ಯನವರು ಸರಪಳಿ ಪವಾಡ ಮಾಡುವಾಗ ಏನೇನು ವಿಧಿಗಳನ್ನು ಅನುಸರಿಸುತ್ತಾರೆ ಎಂದು ತಿಳಿದ ನಂತರ ಆ ಸಂದರ್ಭದಲ್ಲಿ ಮತ್ಯಾವ ಆಚರಣೆಗಳು ಜರುಗುವವು ಎಂಬುದು ತಿಳಿಯುವುದು. ತದನಂತರ ಮಳ್ಳಯ್ಯನು ನುಡಿ ಹೇಳುವುದಕ್ಕೆ ಯಾವ ವಿಧಿಯನ್ನು ಅನುಸರಿಸುವನೆಂದು ಗೊತ್ತಾಗುತ್ತದೆ. ಆ ನುಡಿಯನ್ನು ಕೇಳಲು ಭಕ್ತರು ಇಟ್ಟಿರುವ ನಂಬಿಕೆಯಿಂದ ಆತನ ಲೀಲೆ ಗೊತ್ತಾಗುತ್ತದೆ.

ಒಟ್ಟಾರೆ ಈ ಹಾಡಿನಲ್ಲಿ ಲಿಂಗದಳ್ಳಿ ಚಂದ್ರಶೇಖರನ್ನು ಅಲ್ಲಿ ನಡೆಯುವಂತ ಸಾಂಸ್ಕೃತಿಕ ಆಚರಣೆಗಳ ಎರಡು ಕೊಂತಗಳನ್ನು ಮಳ್ಳಯ್ಯಜ್ಜನು ಬಿಡುತ್ತಾನೆ. ಆದ್ದರಿಂದ ತಿಳಿದು ಬರುವಂತಹ ಫಲಿತಾಂಶವು ಚಂದಾಲಿಂಗನ ಲೀಲೆಯಂದು ಪರಿಗಣಿಸಬೇಕೆಂದು ಈ ಹಾಡಿನಲ್ಲಿ ತಿಳಿಸುವನು.

'ಜಗದೊಡೆಯ ಜಗದೀಶ ಚಂದಾಲಿಂಗೇಶ' ಈ ಹಾಡಿನಲ್ಲಿ ಚಂದಾಲಿಂಗೇಶ್ವರನನ್ನು ಜಗದೊಡೆಯನಾದ ಶಿವನಿಗೆ ಸಾಮೀಪ್ಯ ಕೊಡಲಾಗಿದೆ. ಭೂಲೋಕದಲ್ಲಿರುವ ಮನುಷ್ಯರನ್ನು ರಕ್ಷಣೆ ಮಾಡಬೇಕು ಎಂಬ ಹಂಬಲ ನಿಮಗೇಕೆ ಬೇಕು. ಈ ಮಾನವರ ಕರ್ಮವನ್ನು ಅಳಿಯಲು ಬಂದ ವಿವೇಕವನ್ನು ಮೂಡಿಸಲು ಬಂದಿರುವಂತ ನೀನು ಸಾವನ್ನೆ ಗೆದ್ದು ಬಂದವನು ಹಾಗೂ ಆತನು ಹಿಂದಿನ ಜೀವನಾ ವೃತ್ತಾಂತದಲ್ಲಿ ಕ್ರೂರರನ್ನು ನಾಶ ಮಾಡಿರುವಂತನು. ಇಂದು ಆ ಪ್ರದೇಶದಲ್ಲಿ ನಿನಗೆ ವಾಸಿಸುವದಕ್ಕೆ ಯೋಗ್ಯವಾದ ಸ್ಥಳವಲ್ಲ. ಅದು ಕಾಡು ಪ್ರಾಣಿಗಳು ವಾಸ ಮಾಡುವಂತ ಸ್ಥಳವಾಗಿತ್ತು. ಆದರೆ ಆತನು ಬಂದು ನೆಲೆಸಿರುವುದರಿಂದ ಕೈಲಾಸವೆ ಧರೆಗಿಳಿದಂತಾಗಿದೆ ಎಂದು ಭಾವಿಸಿದ್ದಾರೆ.

ಕಲ್ಲಿನ ಗುಡಿಯಲ್ಲಿ ಲಿಂಗದ ರೂಪವಾಗಿ ಅಡಗಿರುವೆ ಎನ್ನುವರು. ಆತನಿಗೆ ದಿನದ ಮೂರು ಅವಧಿಯಲ್ಲಿ ಎಂಥ ಪೂಜೆಗಳು ನಡೆಯುತ್ತವೆ ಎಂಬುದನ್ನು ತಿಳಿಯಲಾಗಿದೆ. ವಗ್ಗರು ಮಾಡುವ ಸರಪಳಿ ಪವಾಡದಲ್ಲಿ ಆತನ ಶಕ್ತಿ ಅಡಗಿದೆ ಎಂದು ತಿಳಿಯುತ್ತದೆ. ಈತನಿಗೆ ಯಾವುದೇ ಎಂಜಲು ನಡೆಯುವುದಿಲ್ಲ. ಎಲ್ಲಾ ಮೀಸಲಿರಿಸಿದ್ದೇ ಬೇಕೆಂದು ವಿವರಿಸಿದೆ. ಆತ ನನ್ನ ನೆನೆದವರಿಗೆ ಆತ್ಮವಿಶ್ವಾಸ ಹುಟ್ಟುತ್ತದೆ. ಏನೇ ಕಷ್ಟಗಳು ಬಂದರೂ ಅವುಗಳನ್ನು ನಿವಾರಿಸಿಕೊಳ್ಳವ ಶಕ್ತಿ ಬೆಳೆಯುತ್ತದೆ. ಭಕ್ತರು ತಾವು ಉದ್ಧಾರವಾಗುವುದಕ್ಕೆ ಆ ಚಂದಾಲಿಂಗೇಶ್ವರನೇ ಕಾರಣವಾಗಿರುವುದರಿಂದ ಆತನನ್ನು ಸತತವಾಗಿ ಪೂಜಿಸುವಂತರು ಇದ್ದಾರೆ. ಆತನನ್ನು ಗಟ್ಟಿ ಮನಸ್ಸಿನಿಂದ ನೆನದವರು ಜೀವನದಲ್ಲಿ ಪರಿಶುದ್ಧರಾಗುವರು ಎಂಬ ನಂಬಿಕೆಯಿದೆ.

ಓಂಕಾರ ರೂಪ 'ಶಂಕರ' ಎಂಬ ಭಕ್ತಿ ಗೀತೆಯಲ್ಲಿ ನಾವು ಹೇಳುವ ಓಂಕಾರವೇ ಶಿವನ ಇನ್ನೊಂದು ರೂಪವಾದ ಚಂದಾಲಿಂಗೇಶ್ವರನ ನಾಮ. ಆ ಶಿವನಿಗೆ ಶ್ರೀಕಾರ ಇದ್ದಹಾಗೆ. ಶಿವನ ಸ್ವರೂಪಿಯಾದ ಚಂದಾಲಿಂಗೇಶ್ವರನು ಆಕಾಶದಲ್ಲಿದ್ದರೂ, ನೀನು ಮಾನವರು ವಾಸಮಾಡುವ ಸ್ಥಳವಷ್ಟೆ ಅಲ್ಲಾ. ಎಲ್ಲಾ ಕಡೆಗೂ ನಿನ್ನ ವಾಸಸ್ಥಳವಾಗಿ ಎಂದು ತಿಳಿಯುತ್ತದೆ. ಭೂಮಿಯ ಮೇಲಿರುವ ಪ್ರತಿಯೊಂದು ಚರಾಚರ ಜೀವಿಯ ಸೃಷ್ಠಿಗೆ ಆತನೇ ಕಾರಣೀಕರ್ತ ಹಾಗೂ ಅವುಗಳ ಉದ್ಧಾರ ಸಂರಕ್ಷೆಯ ಪಾತ್ರ ಆತನದ್ದೇ ಆಗಿದೆ. ಯಾವುದೇ ಕುಲದ ತಾರತಮ್ಯ ಇಲ್ಲದೇ ಸರ್ವರಿಗೂ ನೀ ಶಿವನ ಸ್ವರೂಪಿ ಹಾಗೂ ಛಲದಿಂದ ತಪ-ಯೋಗ ಮಾಡುವಂತವರಿಗೂ ನಿನ್ನದೇ ಆಶೀರ್ವಾದವಿರುತ್ತದೆ. ಈತನನ್ನು ಹರಸಿಕೊಂಡು ಬರುವಂತ ಭಕ್ತ ಸಮೂಹಕ್ಕೆ ಒಳ್ಳೆಯದಾಗುವಂತೆ ಮಾಡುವವನೇ ಈ ಚಂದಾಲಿಂಗೇಶ್ವರ.

'ಜಯ... ಜಯ ಮಂಗಲ ಜಯ ಶುಭಮಂಗಲ ಚಂದಾಲಿಂಗನಿಗೆ' ಎಂಬ ಈ ಮಂಗಲ ಹಾಡಿನಲ್ಲಿ ಹಿಂದೆ ದುಷ್ಟರಾಕ್ಷಸರನ್ನು ನಾಶಮಾಡಿರುವಂತ ಶಿವನ ಸ್ವರೂಪಿಯಾದ ಚಂದಾಲಿಂಗೇಶ್ವರನಿಗೆ ಜಯ ಲಭಿಸಿಲಿ ಎಂದು ಹಾರೈಸುತ್ತಾರೆ. ಈತನು ತ್ರಿಶೂಲ ಢಮುರಗದಿಂದ ಅವತಾರ ಮಾಡಿದರೂ ಸಹ ತನ್ನ ನೆನೆದವರಿಗೆಲ್ಲರಿಗೂ ಸಮಾನವಾದ ಪ್ರೀತಿಯನ್ನು ತೋರುವನು.

ಹಾಗೂ ಅಷ್ಟೇ ವಿಶ್ವಾಸವುಳ್ಳವನಾಗಿರುತ್ತಾನೆ. ಈತನ ರೂಪಕ್ಕೆ ಅಗಣೀತವಾದವನು. ಆತನು ಅಂತ ಪರ್ವದಲ್ಲಿದ್ದರೂ ಸಹ ಹಲವಾರು ಪವಾಡಗಳನ್ನು ಮಾಡಿ ಪವಾಡ ಪುರುಷನಾಗಿ ಮೆರೆಯುತ್ತಿದ್ದಾನೆ. ತನ್ನನ್ನು ನಂಬಿದವರಿಗೆ ಶಿವನ ರೂಪಿಯಾಗಿ ಕಷ್ಟಗಳನ್ನು ತೀರಿಸಿದ್ದಾನೆ. ಈತನಿಗೂ ಸಂಸಾರವಿದ್ದರೂ ಪರ್ವತದಲ್ಲಿ ಬಂದು ನೆಲೆಸಿ ಕಷ್ಟದಲ್ಲಿದ್ದವರಿಗೆ ಆಶಾಕಿರಣನಾಗಿದ್ದಾನೆ.

'ಆ ನೋಡ ನೋಡವ್ವ ಮನಸ್ಸಾರ ಇದು ಚಂದಾಲಿಂಗನ ಮಹಾದ್ವಾರ'. ಈ ಗೀತೆಯಲ್ಲಿ ರಚನೆಕಾರರು ಮಹಿಳೆಗೆ ಆ ಕ್ಷೇತ್ರದಲ್ಲಿ ಮೊದಲಿಗೆ ಯಾವ ದೇವತೆಗಳು ಬರುತ್ತವೆ ಎಂಬುದನ್ನು ಪರಿಚಯಿಸುತ್ತಾರೆ. ಆ ಕ್ಷೇತ್ರದ ಪರಿಸರದ ಸಂಪತ್ತು ತಿಳಿಸುವನು. ಹಾಗೆ ಮುಂದುವರೆದು ಪ್ರಾಚೀನ ವಾಸ್ತುಶಿಲ್ಪ ಕಲೆಗಳು ಅವುಗಳನ್ನು ಇಂದು ಯಾವುದಕ್ಕೆ ಬಳಸಲಾಗುತ್ತದೆ. ಆ ವಾಸ್ತುಶಿಲ್ಪಗಳ ವಿಶೇಷತೆಗಳನ್ನು ಚಿತ್ರಿಸುವನು. ಆ ಪ್ರದೇಶವು ಪೂರ್ವದಲ್ಲಿ ಎಷ್ಟು ಪವಿತ್ರತೆಯಿಂದ ಕೂಡಿತ್ತು ಆ ಭೂಮಿಯ ರಕ್ಷಣೆಯ ತಂತ್ರದ ವ್ಯವಸ್ಥೆಯನ್ನು ಹೇಳುವವನು ವಾಸ್ತವಿಕವಾಗಿ ಅಲ್ಲಿ ಹಲವಾರು ದೇವರ ಮೂರ್ತಿಗಳಿರುವುದನ್ನು, ಹಿಂದೆ ಇದ್ದವರಿಗೆ ಹೋಲಿಸುವನು. ಈತನ ಬಗ್ಗೆ ಎಷ್ಟು ಹೇಳಿದರು ಸಾಲದೆಂದು ಹೇಳುತ್ತಾ ಅಲ್ಲಿನ ಆರಾಧನಾ ಕ್ರಮ ಹಾಗೂ ಬರುವಂತ ಭಕ್ತರ ಬಗ್ಗೆ ತಿಳಿಸುವರು

'ನಂದಿಯೇರಿ ಚಂದ್ರಾಧರಾ ಬಂದ ಈ ಭೂಮಿಗಿಳಿದ ಚಂದಾಲಿಂಗ ನಾಮ ಪಡೆದುಕೊಂಡ' ಈ ಹಾಡಿನಲ್ಲಿ ಶಿವನು ದೇವಾಲೋಕದಿಂದ ನಂದಿವಾಹನದೊಂದಿಗೆ ಚಂದಾಲಿಂಗನೆಂಬ ರೂಪವನ್ನು ತಾಳಿ, ಈ ಭೂಲೋಕಕ್ಕೆ ಬಂದ. ಆತನು ಬಂದಿರುವ ಉದ್ದೇಶವನ್ನು ಇಲ್ಲಿ ತಿಳಿಸುವರು. ಚಂದಾಲಿಂಗೇಶ್ವರನು ನೆನೆದಿರುವ ಸ್ಥಳ ಆಧ್ಯಾತ್ಮಿಕ ಭಕ್ತಿಯ ಗೂಡಾಗಿತ್ತು ಅದುವರೆಗೂ ಪರಿಚಯವಿಲ್ಲದ ಗಿರಿಯು ಆ ದೇವರು ಬಂದು ಅಲ್ಲಿ ನೆಲೆಸಿರುವುದರಿಂದ ಪ್ರಸಿದ್ಧವಾಯಿತು. ಇಡೀ ಋಷಿ ಸಮೂಹವೇ ತಪವಗೈದಂತ ಸ್ಥಳವಾಗಿತ್ತು ಎಂದು ತಿಳಿಯುವುದು. ಇಡೀ ಜಗತ್ತಿನಲ್ಲೆ ಇತರರಿಗೆ ಇಲ್ಲದ ಮೂರು ವಿಶೇಷತೆಯಿಂದ ಕೂಡಿದ ಕೆಸರಿಲ್ಲದ ಕೋಟಿ, ಬಿಸಿಲಿಲ್ಲದ ಬಾವಿ, ಹೆಸರಿಲ್ಲದ ಮರ ಗೊತ್ತುಪಡಿಸುತ್ತಾರೆ. ಜಾತ್ರೆ ನಡೆಯುವಂತ ತಿಥಿಯನ್ನು ಸೂಚಿಸುತ್ತಾನೆ. ಇಂಥ ಪವಿತ್ರವಾದ ಸ್ಥಳ ಪರಿಚಯವನ್ನು ನಿಖರವಾಗಿ ತಿಳಿಸುವರು.

'ಚಂದಾಲಿಂಗ ಚಿನ್ಮಯ ಜ್ಯೋತಿ'. ಈ ಹಾಡಿನಲ್ಲಿ ರಚನೆಕಾರರು ಆತನನ್ನು ಹೊಳೆಯುವ ಜ್ಯೋತಿಗೆ ಹೋಲಿಸಿದ್ದಾರೆ. ಪ್ರಜ್ವಲಿಸುವಂತೆ ಜ್ಯೋತಿಯು ಗುಡ್ಡದಲ್ಲಿ ಹೊಳೆಯುತ್ತದೆ, ಎಂದು ಹೇಳುತ್ತಾ ಆತನ ಶೌರ್ಯ ಪರಾಕ್ರಮದ ಬಗ್ಗೆ ತಿಳಿಸುವರು. ಚಂದ್ರಸುರನೆಂಬ ರಾಕ್ಷಸ ಹೇಗೆ ನಾಶವಾದ ಎಂಬುದು ಮುಖ್ಯ ಆಶಯ. ಆ ಚಂದ್ರಸುರ ರಾಕ್ಷಸನ ದುಷ್ಟಗುಣ ಸ್ವಭಾವಗಳು ತಿಳಿಯುವವು. ಆ ದುಷ್ಟ ಚಂದ್ರಸುರ ರೈತರಿಗೆ ರಾಜರಿಗೆ ದೊಡ್ಡದೊಡ್ಡ ದೇಸಾಯಿಗಳಿಗೂ ಉಪಟಳ ನೀಡುವಂತನಾಗಿರುವನು. ಇದರಿಂದ ಋಷಿ ಮುನಿಗಳೂ ಬೇಸತ್ತು ಹೋಗಿದ್ದರು. ಇವನನ್ನು ಸದೆ ಬಡಿಯಲು ಕೈಗೊಂಡ ಋಷಿ ಮುನಿಗಳ ಕ್ರಮದಿಂದ ಶಂಕರನು ಧರೆಗೆ

ಬಂದಿರುವುದು ತಿಳಿಯುತ್ತದೆ. ಚಂದ್ರಾಸುರನಿಗೂ ಶಿವನಿಗೂ ಯುದ್ದ ನಡೆದುದರ ಬಗ್ಗೆ ತಿಳಿಯುತ್ತದೆ. ಕೊನೆಗೆ ಆ ಚಂದ್ರಸುರ ರಾಕ್ಷಸ ಶರಣಾಗತಿಯಾದ ವೃತ್ತಾಂತವು ತಿಳಿಯುವುದು. ಈ ಮಹಿಮಾ ಪುರುಷನಿಂದ ಸಾಮಾನ್ಯ ಜನರಿಗೆ ಬಂದ ಸಂಕಷ್ಟಗಳು ದೂರವಾಗುತ್ತವೆ. ಹಾಗೂ ಸಾಂಕ್ರಾಮಿಕ ರೋಗಗಳೆಲ್ಲ ದೂರವಾಗುತ್ತವೆ ಎಂದು ತಿಳಿಯುವುದಾಗಿದೆ.

'ಮಕ್ಕಳಿಲ್ಲಂತ ಮರಗುವುದು ಯಾಕೆ ತಂಗೆವ್ವ' ಎಂಬ ಹಾಡಿನಲ್ಲಿ ರಚನಾಕಾರರು ಸಂತಾನ ಫಲವಿಲ್ಲದವರು ಚಿಂತೆಯನ್ನು ಮಾಡದೆ ತಮ್ಮಲ್ಲಿರುವಂತ ದುಷ್ಟಗಳನ್ನು ಅಳಿದು ದೇವರಿಗೆ ದೃಢವಾದ ಭಕ್ತಿಯಿಂದ ನಡೆದುಕೊಂಡರೆ ಅದು ಪ್ರಾಪ್ತಿಯಾಗುತ್ತದೆ ಎಂದು ಹೇಳುವುದು. ಸತಿ-ಪತಿಗಳಾದವರು ನಿಷ್ಠೆಯಿಂದ ಆತನ ದರ್ಶನ ಪಡೆಯುವುದು ಸೂಕ್ತ ಎಂದು ಹೇಳಿದ್ದಾರೆ. ಆ ಸ್ಥಳಗಳಲ್ಲಿರುವಂತ ಕೆಲವೊಂದು ವಿಶೇಷವಾದ ವಸ್ತುಗಳನ್ನು ನೋಡಿದರೂ ಧನ್ಯರಾಗುತ್ತವೆ ಎಂಬ ಮನೋಭಾವನೆಯಿದೆ. ಆ ಕ್ಷೇತ್ರದಲ್ಲಿ ಗುಡಿ-ಗುಂಡಾರಗಳು ಹೆಚ್ಚಿನ ಪ್ರಮಾಣದಲ್ಲಿದ್ದು ಜನರನ್ನು ಆಕರ್ಷಿಸುತ್ತವೆ ಎಂದು ವರ್ಣಿಸುವರು. ಅಲ್ಲಿಯ ಪೂಜಾ ವಿಧಾನದ ಬಗ್ಗೆ ತಿಳಿಸಿದೆ, ನಿಷ್ಠೆ ಭಕ್ತಿಯಿಂದ ನಡೆದರೆ ವರ್ಷದೊಳಗೆ ಫಲವು ದೊರೆಯುವುದರ ಬಗ್ಗೆ ತಿಳಿಸುವರು.

ಚಂದಾಲಿಂಗೇಶ್ವರನು ಜನಪದರಲ್ಲಿ ಜನಜನಿತವಾಗಿರಲು ಆತನ ಸಾಹಿತ್ಯವನ್ನು ರಚಿಸುವುದು ಹಾಗೂ ಸಂಗ್ರಹಿಸುವುದು ಮುಖ್ಯವಾಗಿದೆ. ಆದ್ದರಿಂದ ಈ ಅಧ್ಯಾಯದಲ್ಲಿ ಜನಪದ ಸಾಹಿತ್ಯ ಹಾಗೂ ಶಿಷ್ಟಸಾಹಿತ್ಯವನ್ನು ಅಧ್ಯಯನ ಮಾಡಲಾಗಿದೆ. ಜನಪದ ಸಾಹಿತ್ಯದಲ್ಲಿ ಹಾಡುಗಳನ್ನು, ಐತಿಹ್ಯಗಳನ್ನು, ತಿಳಿಯಲಾಗಿದೆ. ಅಂತಹ ಜನಪದ ಹಾಡುಗಳಲ್ಲಿ ಚಂದಾಲಿಂಗೇಶ್ವರನ ಕುರಿತು ಆತನ ಧರಿಸುವಂತ ಉಡುಗೆ-ತೊಡುಗೆಗಳು ಹಾಗೂ ಸೂಕ್ಷ್ಮವಾದ ಭಾವನೆಗಳು ತೀಳಿಯುತ್ತವೆ. ಆತನಿಗೆ ಪೂಜೆಗೈಯಲು ಯಾವ ಯಾವ ಎಲೆಗಳು ಮುಖ್ಯವೆಂದು ತಿಳಿಯಬಹುದು. ಚಂದಾಲಿಂಗೇಶ್ವರನು ತಾನು ಮಾಡುತ್ತಿರುವಂತಹ ದಿನನಿತ್ಯದ ಚಟುವಟಿಕೆಗಳು ಹಾಗೂ ಗುಣ ಸ್ವಾಭಾವನ್ನು ಹಾಡಿನ ಮುಖಾಂತರ ತಿಳಿಸುವ ಪ್ರಯತ್ನವನ್ನು ಜನಪದರು ಮಾಡಿದ್ದಾರೆ. ಆತನಿಗೆ ಸಂಬಂಧಿಸಿದ ಕೆಲವು ಜನಪದ ಹಾಡುಗಳಲ್ಲಿ ಆತ ನೆಲೆಸಿರುವ ಕ್ಷೇತ್ರದ ವ್ಯಾಪ್ತಿ ಹಾಗೂ ಜಾತ್ರೆಯ ದಿನ ನಡೆಯುವಂತಹ ಆಚರಣೆ ಹೆಸರುಗಳು ಮತ್ತು ವಿವರಣೆಗಳು ಮೂಡಿಬರುತ್ತಿವೆ. ಐತಿಹ್ಯಗಳು ಚಂದಾಲಿಂಗಪ್ಪ ಹಾಗೂ ಆತನ ಸಾಕು ಮಗ ಹುಲ್ಲಪ್ಪನನ್ನು ಕುರಿತಿರುವಂತ ಐತಿಹ್ಯಗಳ ಉಲ್ಲೇಖ ಕಂಡುಬರುತ್ತಿವೆ.

ಶಿಷ್ಟ ಸಾಹಿತ್ಯಕ್ಕೆ ಸಂಬಂಧಿಸಿರುವಂತೆ ಭಕ್ತಿಗೀತೆಗಳು, ಮಂಗಳಾರತಿಗಳು, ಭಾವಗೀತೆಗಳು, ಭಜನೆ ಗೀತೆಗಳು, ಡೊಳ್ಳಿನ ಹಾಡುಗಳು, ನಾಟಕಗಳು, ಕಥೆಗಳು ರಚನೆಗೊಂಡಿವೆ. ಭಕ್ತಿಗೀತೆಗಳಲ್ಲಿ ಚಂದಾಲಿಂಗೇಶ್ವರನ ವಿವಿಧ ಅವತಾರಗಳನ್ನು ಕುರಿತು ಹಾಡಿ ಹೊಗಳಿದ್ದಾರೆ. ಚಂದಾಲಿಂಗೇಶ್ವರನು ಪವಾಡ ಪುರುಷನಾಗಿ ಪವಾಡ ಮೆರೆದಿರುವಂತಹ ಸಂದರ್ಭಗಳನ್ನು ಹಾಡುಗಳಲ್ಲಿ ವರ್ಣಿತವಾಗಿವೆ. ಆತನ ಜಾತ್ರೆಯಲ್ಲಿ ನಡೆಯುವಂತಹ ಉತ್ಸವದ ಪ್ರತಿಯೊಂದು ಘಟನಾವಳಿಗಳನ್ನು ಹಾಗೂ

ಸಂದರ್ಭಗಳಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಕಥೆಗಳಿಗೆ ಸಂಬಂಧಿಸಿದಂತೆ ಚಂದಾಲಿಂಗನ ಮೂರು ತಲೆಮಾರುಗಳಿಗೆ ಹೊಂದಿಕೊಂಡಿರುವ ವೃತ್ತಾಂತಗಳು ಹುಲ್ಲಪ್ಪನನ್ನು ಸಾಕುಪುತ್ರನಾಗಿ ಪಡೆದುಕೊಂಡ ಹಿನ್ನೆಲೆ ಕಥೆಗಳು ಮಲ್ಲ ಮಣಿಕ ಸುರನೊಂದಿಗೆ ಚಂದಾಲಿಂಗನ ಯುದ್ಧ ಸನ್ನಿವೇಶದ ಕಥೆಗಳು ವಿಶೇಷಣೆಯನ್ನು ಮಾಡಲಾಗಿದೆ. ಚಂದಾಲಿಂಗೇಶ್ವರನ ಕುರಿತು ಇಲ್ಲಿವರೆಗೂ ಅಧ್ಯಯನ ಮಾಡಿರುವ ಅಧ್ಯಾಯಗಳೊಂದಿಗೆ ವಾಸ್ತವಿಕವಾಗಿ ಇಂದು ಚಂದಾಲಿಂಗೇಶ್ವರನಿಗೆ ಸಂಬಂಧಿಸಿದಂತೆ ಕ್ಷೇತ್ರದ ಆಚರಣೆಯಲ್ಲಿ ನಂಬಿಕೆ, ವಿಧಿ–ನಿಷೇಧಗಳಲ್ಲಿ, ಭಕ್ತರಲ್ಲಿ ಪೂಜಾ ವಿಧಿ–ವಿಧಾನಗಳಲ್ಲಿ, ಗುಡಿಯ ಕೆಲಸ ಕಾರ್ಯಗಳಲ್ಲಿ ಹಾಗೂ ಪ್ರಸಾದ ವ್ಯವಸ್ಥೆಯಲ್ಲಿ, ಹರಕೆ–ಬೇಡಿಕೆಗಳಲ್ಲಿ ಆಧುನಿಕರಣ ಗೊಂಡಿವೆ. ಇಂತಹ ಹಲವಾರು ಅಂಶಗಳನ್ನು ಇಟ್ಟುಕೊಂಡು ಚಂದಾಲಿಂಗೇಶ್ವರನ ಆಧುನಿಕರಣತೆಯ ಕುರಿತು ಅಧ್ಯಯನಗೈಯುವುದು ಆವಶ್ಯಕವಾಗಿದೆ. ಆದ್ದರಿಂದ ಈ ಮುಂದಿನ ಅಧ್ಯಾಯ ಏಳರಲ್ಲಿ “ಚಂದಾಲಿಂಗೇಶ್ವರ ಹಾಗೂ ಆಧುನಿಕ ಪರಿವರ್ತನೆ ಎಂಬುದರಲ್ಲಿ ವಿಶ್ಲೇಷಣೆಯೊಂದಿಗೆ ಅಧ್ಯಯನ ಮಾಡಲಾಗುವುದು.

ಅಡಿಟಿಪ್ಪಣಿಗಳು

೧. ರಾಜೇಶ್ವರಿ ಮಹೇಶ್ವರಯ್ಯ, ಆಧುನಿಕ ವರ್ಣನಾತ್ಮಕ ಭಾಷಾವಿಜ್ಞಾನ, ೨೦೧೫, ಪು.ಸಂ.೧

೨. ಮುಗಳಿ.ರಂ.ಶ್ರೀ., ಕನ್ನಡ ಸಾಹಿತ್ಯ ಚರಿತ್ರೆ, ೨೦೦೮, ಪು.ಸಂ.೧

೩. ವಿವೇಕರೈ.ಬಿ.ಎ., ಜಾನಪದ ತತ್ವಗಳು ಮತ್ತು ಸಾಹಿತ್ಯ, ೨೦೦೩, ಪು.ಸಂ.೧೪

೪. ಅರವಿಂದ ಮಾಲಗತ್ತಿ, ಕನ್ನಡ ವಿಷಯ ವಿಶ್ವಕೋಶ ಜಾನಪದ, ೨೦೦೬, ಪು.ಸಂ.೧೪-೧೫

ಅಧ್ಯಾಯ : ೭

ಚಂದಾಲಿಂಗೇಶ್ವರ ಹಾಗೂ ಆಧುನಿಕ ಪರಿವರ್ತನೆ

(Chandlingeshwara and Modern Transformation)

೭.೧. ಕ್ಷೇತ್ರದಲ್ಲಿ ಭೌತಿಕ ಬದಲಾವಣೆ

೭.೨. ಪ್ರಸಾದ ವ್ಯವಸ್ಥೆ

೭.೩. ಗುಡಿಯ ಕೆಲಸ ಕಾರ್ಯಗಳಲ್ಲಿ ಪರಿವರ್ತನೆಗಳು

೭.೪. ವಾದ್ಯಮೇಳ

೭.೫. ಜಾತ್ರೆಯ ದಿನ ಗುಡಿಯ ಅಲಂಕಾರ

೭.೬. ಭಕ್ತರ ಹರಕೆ-ಬೇಡಿಕೆಗಳಲ್ಲಿ ಪರಿವರ್ತನೆ

೭.೭. ಸಂಗೀತ ಬಿತ್ತರಿಸುವ ಪರಿಕರಗಳು

೭.೮. ವೇಷಭೂಷಣಗಳು

೭.೯. ಅಂಗಡಿಗಳು

೭.೧೦. ಲಾಟರಿ ಮತ್ತು ರಸಮಂಜರಿ ಕ್ರೀಡೆಗಳು

೭.೧೧. ಭಕ್ತರ ಪೂಜಾ ವಿಧಿ-ವಿಧಾನಗಳಲ್ಲಿ ಪರಿವರ್ತನೆ

೭.೧೨. ವಿಧಿ-ನಿಷೇಧಗಳಲ್ಲಿ ಪರಿವರ್ತನೆ

೭.೧೩. ಪೂಜಾರಿಗಳಲ್ಲಿ ಬದಲಾವಣೆ

೭.೧೪. ಕ್ಷೇತ್ರದಲ್ಲಿ ನಡೆಯುವ ಕಾರ್ಯಗಳು

೭.೧೫. ಚಂದಾಲಿಂಗೇಶ್ವರನ ಸ್ಥಾನಿಕರಲ್ಲಿ ಪರಿವರ್ತನೆ

ಅಧ್ಯಾಯ : ಏಳು

ಚಂದಾಲಿಂಗೇಶ್ವರ ಆಧುನಿಕ ಪರಿವರ್ತನೆ
(Chandlingeshwara and Modern Transformation)

ಪ್ರಸ್ತಾವನೆ : (Introduction)

ಪರಿವರ್ತನೆ ಎಂಬುವುದು ಜಗದ ನಿಯಮ. ಮಾನವ ತನ್ನ ಅವಶ್ಯಕತೆ ಹಾಗೂ ಬೇಡಿಕೆಗಳಿಗೆ ಅನುಗುಣವಾಗಿ ಬದಲಾವಣೆ ಬಯಸುವುದು ಸಹಜವಾಗಿದೆ. ಅದರಂತೆ ಈ ಕ್ಷೇತ್ರದಲ್ಲಿ ಕೆಲವೊಂದಿಷ್ಟು ಭೌತಿಕವಾಗಿ ಬದಲಾವಣೆಯತ್ತ ಸಾಗಿವೆ. ಕೆಲವು ಆಚರಣೆ, ಸಂಪ್ರದಾಯಗಳಲ್ಲಿ, ಊಟೋಪಚಾರದಲ್ಲಿ ಜಾತ್ರೆ ಉತ್ಸವಗಳಲ್ಲಿ, ಉತ್ಸವಕ್ಕೆ ಬರುವಂತ ವಾದ್ಯ ಪರಿಕರಗಳಲ್ಲಿ, ದೇವರ ಕಾರ್ಯಗಳ ಹಂಚಿಕೆಗಳಲ್ಲಿ ಜಾತ್ರೆಗೆ ಬರುವಂತ ಭಕ್ತರ ವೇಷಭೂಷಣಗಳಲ್ಲಿ ಪರಿವರ್ತನೆ ಕಂಡುಬರುತ್ತಿದೆ. ದೇವತೆಗಳ ಪೂಜಾ ಆರಾಧನೆಯಲ್ಲಿಯೂ ಕೆಲವೊಂದು ವಿಶಿಷ್ಟ ಪೂಜೆಗಳು ನಡೆಯುವುದು ಕಂಡುಬರುತ್ತದೆ. ಜನಗಳ ಹರಕೆ ಬೇಡಿಕೆಗಳಲ್ಲಿ ಹಾಗೂ ಅವುಗಳನ್ನು ತೀರಿಸುವ ವಿಧಾನದಲ್ಲಿ ಪರಿವರ್ತನೆಯು ಗೋಚರಿಸುತ್ತದೆ. ಇನ್ನೂ ಮುಂತಾದ ಕ್ರಿಯಾ ವಿಧಿ-ವಿಧಾನಗಳಲ್ಲಿ ಸಡಿಲಿಕೆಗಳನ್ನು ಮಾಡಿಕೊಳ್ಳುವುದರೊಂದಿಗೆ ಹಾಗೂ ಕ್ಷೇತ್ರ ಸ್ಥಾನಿಕ ರಲ್ಲಿ, ಜೀವನಾವರ್ತನದಲ್ಲಿ ಮತ್ತು ಜಾತ್ರೆಯಲ್ಲಿ ಲಾಟರಿ-ಮನೋರಂಜನೆಯ ಕ್ರೀಡೆಗಳು ಹೊಸದಾಗಿ ಸೇರುವುದರ ಬಗ್ಗೆ, ಗುಡಿಯ ಕೆಲಸಕಾರ್ಯಗಳಲ್ಲಿ ಗುಡಿಯ ಅಲಂಕಾರಿಕ ಪದ್ಧತಿಯಲ್ಲಿಯೂ ಸ್ಥಿತ್ಯಂತರ ಹೊಂದಿವೆ. ಹೀಗೆ ಈ ಕ್ಷೇತ್ರದ ದೇವತೆಗೆ ಸಂಬಂಧಿಸಿದ ಪರಿವರ್ತನೆಗಳಾದ ಭಾಗಗಳನ್ನು ಈ ಕೆಳಗಿನಂತೆ ವಿಶ್ಲೇಷಣಾತ್ಮಕವಾಗಿ ನೋಡಲಾಗಿದೆ.

೭.೧. ಕ್ಷೇತ್ರದಲ್ಲಿ ಭೌತಿಕ ಬದಲಾವಣೆ : (Physical Change in the Field)

ಈ ಕ್ಷೇತ್ರಕ್ಕೆ ಬರಬೇಕಾದರೆ ಮೊದಲಿಗೆ ಸರಿಯಾದಂತ ಮಾರ್ಗದ ವ್ಯವಸ್ಥೆಯಿರಲಿಲ್ಲ. ಪೂರ್ವದಲ್ಲಿ ಕಾಲು ದಾರಿಯಾಗಿ ಬರುಬರುತ್ತ ಜಾತ್ರೆಗೆ ಬರುವಂತವರ ಸಂಖ್ಯೆ ಹೆಚ್ಚಾಗಿರುವುದರಿಂದ ಬಂಡಿಯ ಜಾಡಿನ ದಾರಿಯು ನಿರ್ಮಾಣವಾಗುವುದಕ್ಕೆ ಪ್ರಾರಂಭವಾಯಿತು. ತದನಂತರ ಕಾಲ ಕಳೆದಂತೆಲ್ಲಾ ಚಂದಾಲಿಂಗೇಶ್ವರ ಅಪಾರವಾದ ಭಕ್ತ ಸಮೂಹವನ್ನು ಹೊಂದಿರುವುದರಿಂದ,

ತನ್ನಲ್ಲಿಗೆ ಬರುವಂತಹ ಮಾರ್ಗವೇ ತುಂಬಾ ಬದಲಾವಣೆಯತ್ತ ಸಾಗಿತು. ಇತ್ತೀಚಿನ ಕೆಲವು ವರ್ಷಗಳಿಂದ ಕಚ್ಚಾ ಮಾರ್ಗದ ಬದಲಾಗಿ ಸುಧಾರಿತ ಡಾಂಬರೀಕರಣಗೊಂಡ ರಸ್ತೆಗಳು ಸುಧಾರಣೆಗೊಂಡಿವೆ. ದೇವರಿಗೆ ಬರಬೇಕಾದರೆ ಮೊದಲಿಗೆ ರಸ್ತೆ ಮಾರ್ಗಸೂಚಿಗಳಿರಲಿಲ್ಲ. ಅಂತಾ ಸಂದರ್ಭದಲ್ಲಿ ಗುಡಿಯನ್ನು ನೋಡಿದಂತವರನ್ನು ತಮ್ಮ ಸಹಾಯಕ್ಕೆ ಕರೆದುಕೊಂಡು ಬರುವಂತ ಪರಿಪಾಠವಿತ್ತು. ಆ ಮಾರ್ಗ ನೋಡಿದಂತವರು ಯಾರೂ ದೊರೆಯದಿದ್ದಾಗ ಅನಿವಾರ್ಯವಾಗಿ ಗುಡಿಗೆ ಬರುವಂತ ಭಕ್ತರು ದಾರಿಯ ಮಧ್ಯದಲ್ಲಿ ಅಲ್ಲಿಗಲ್ಲಿಗೆ ದಾರಿಹೋಕರನ್ನು ಕೇಳಿಕೊಂಡು ಈತನ ಸನ್ನಿಧಿಯನ್ನು ತಲುಪುತ್ತಿದ್ದರು.

ಕಾಲ ಕಳೆದಂತೆಲ್ಲಾ ಚಿಕ್ಕದಾದ ಚೌಕಾಕಾರದ ರಟ್ಟಿನಲ್ಲಿ ಇದ್ದಿಲಿನಿಂದ ಬರೆದು, ಚಂದಾಲಿಂಗೇಶ್ವರನ ಗುಡಿಗೆ ಹೋಗುವದಾರಿಯೆಂದು ಅಲ್ಲಲ್ಲಿ ಮಾರ್ಗಮಧ್ಯೆ ಜಾತ್ರೆಯ ಸಮಯದಲ್ಲಿ ಹಾಕುತ್ತಿದ್ದರು. ಇದೇ ಪದ್ಧತಿ ಮುಂದುವರೆದಂತೆ ಬಿಳಿಯ ಬಟ್ಟೆಯಲ್ಲಿ ಸರಿಹೊಂದುವಂತ ಯಾವುದಾದರೂ ಒಂದು ಬಣ್ಣದಲ್ಲಿ ಗುಡಿಗೆ ಹೋಗುವ ಮಾರ್ಗವನ್ನು ಸೂಚಿಸಿ ಅಲ್ಲಲ್ಲಿ ಮಾರ್ಗಮಧ್ಯದಲ್ಲಿ ಕಟ್ಟಲಾಗುತ್ತಿತ್ತು. ಇದು ಬದಲಾವಣೆಯತ್ತ ಸಾಗಿದಂತೆ ಕಿಲೋಮೀಟರ್‌ಗೊಂದು ಕಲ್ಲನ್ನು ನೆಡುಹಾಕಿ ಅದಕ್ಕೆ ಆಯಿಲ್ ಪೇಂಟ್ ಬಳಿದು ಚಂದಾಲಿಂಗೇಶ್ವರ ಎಷ್ಟು ಕಿಲೋಮೀಟರ್ ಇದೆ ಎಂದು ಸಂಖ್ಯೆಯಲ್ಲಿ ಬರೆದಿರುವುದು ಕಂಡುಬರುತ್ತದೆ. ಪ್ರಸ್ತುತ ದಿನಗಳಲ್ಲಿ ಆ ಪ್ರದೇಶಕ್ಕೆ ಹೊಗುವಂತ ಮಾರ್ಗದ ಭಾಗಕ್ಕೆ ಸಿಮೆಂಟ್, ಇಟ್ಟಿಗೆ, ಕಬ್ಬಿಣ ಮಿಶ್ರಿತ ಕೂಡಿದ ಒಂದು ದೊಡ್ಡದಾದ ದ್ವಾರ ಕಾಮಾನನ್ನೇ ಕಟ್ಟಲು ಪ್ರಾರಂಭಿಸಿದರು. ಇದಕ್ಕೆ ಇನ್ನೂ ಸುಲಭವಾದ ರೀತಿಯಲ್ಲಿ ಕಬ್ಬಿಣದಿಂದ ದೊಡ್ಡ ಕಾಮಾನುವನ್ನೇ ತಯಾರಿಸಿ "ಶ್ರೀ ಚಂದಾಲಿಂಗೇಶ್ವರ ಸುಕ್ಷೇತ್ರ" ಎಂದು ಪ್ರವೇಶ ದ್ವಾರವನ್ನು ನಿರ್ಮಿಸುವುದು ಪ್ರಸ್ತುತ ದಿನದಲ್ಲಿದೆ.

ಈ ಸುಕ್ಷೇತ್ರವು ಕುಷ್ಟಗಿ ತಾಲೂಕಿನ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಬರುವುದರಿಂದ ಇವರೂ ಸಹ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದಾರೆ. ಅಂತಹವುಗಳಲ್ಲಿ ಈ ಅರಣ್ಯಪ್ರದೇಶ ವ್ಯಾಪ್ತಿಯ ಮಾರ್ಗದ ಪಕ್ಕಕ್ಕೆ ಅಲ್ಲಲ್ಲಿ ದೇವರಿಗೆ ಹೊಂದಿಕೊಂಡಂತ ಹಾಗೂ ತಮ್ಮ ಗಿಡ ಮರಗಳಿಗೆ ಸರಿಹೊಂದುವಂತ ನುಡಿಗಳಾದ, "ದೇವರಿದ್ದಲ್ಲಿ ಭಯವಿಲ್ಲ, ಮರವಿದ್ದಲ್ಲಿ ಬರವಿಲ್ಲ', 'ಅಕ್ಷರ ಅನ್ನ ಪರಿಸರ ಚಿನ್ನ', ಹಾಗೂ 'ಕಾಡು ಬೆಳೆಸಿ, ನಾಡು ಉಳಿಸಿ'," ಎಂಬಂತ ಘೋಷಣಾ ವಾಕ್ಯಗಳನ್ನು ಜನರಿಗೆ ಜಾಗೃತಿ ಮೂಡಿಸಲು ಫಲಕದಲ್ಲಿ ಬರೆದು ಹಾಕಲಾಗಿದೆ. ಇದೇ ಅರಣ್ಯ ಇಲಾಖೆಯವರು ಈ ಗುಡಿಯ ಬಯಲು ಪ್ರದೇಶದಲ್ಲಿ ಕೆಲವು ಮರಗಳ ಕೆಳಗೆ ಬಂದಿರುವಂತ ಭಕ್ತರು ವಿಶ್ರಾಂತಿ ಪಡೆಯಲು ಸುಧಾರಿತ ಕಲ್ಲುಗಳಿಂದ ತಯಾರಿಸಿದ ಬೆಂಚುಗಳನ್ನು ಹಾಕಿದ್ದಾರೆ. ಪರಿಸರದ ಸ್ವಚ್ಛತೆಯನ್ನು ಕಾಪಾಡಲು ಗುಡಿಯ ಪ್ರದೇಶದ ಜನನಿಬಿಡ ಪ್ರದೇಶದಲ್ಲಿ ಕಸದ ಬುಟ್ಟಿಗಳನ್ನು ಅಳವಡಿಸಿದ್ದಾರೆ. ಚಂದಾಲಿಂಗೇಶ್ವರನ ಹೊಂಡದ ಪಕ್ಕದಲ್ಲಿ ಜನಗಳು ವಿಶ್ರಾಂತಿಯನ್ನು ಪಡೆದುಕೊಳ್ಳಲು ತೆರೆದ ಮಂಟಪವನ್ನು ನಿರ್ಮಿಸಿದ್ದಾರೆ.

ಈ ಪ್ರದೇಶದ ಖಾಲಿಯಿರುವ ಸ್ಥಳದಲ್ಲಿ ವಿವಿಧ ರೀತಿಯ ಸಸ್ಯಗಳನ್ನು ನಾಟಿ ಮಾಡಿದ್ದಾರೆ. ಹೆಸರಿಲ್ಲದ ಮರದ ಮುಂಭಾಗದಲ್ಲಿ "ಶ್ರೀಚಂದಾಲಿಂಗೇಶ್ವರ ಸಸ್ಯೋಧ್ಯಾನ(ನರ್ಸರಿ)ವನ್ನು" ಪ್ರಾರಂಭಿಸುತ್ತಾರೆ. ಇದೇ ನರ್ಸರಿ ಸಸ್ಯೋಧ್ಯಾನದ ಪಕ್ಕಕ್ಕೆ ಗುಡ್ಡದ ಮೇಲೆ ನೀರಿನ ಸಂಗ್ರಹ ತೊಟ್ಟಿಯನ್ನು ಸ್ಥಾಪಿಸಿದ್ದಾರೆ. ಇದಲ್ಲದೇ ಹನುಮಸಾಗರದಿಂದ ಈ ದೇವಾಲಯದ ಪ್ರದೇಶಕ್ಕೆ ಪ್ರವೇಶ ಮಾಡುವ ಸ್ಥಳಕ್ಕೆ ದೊಡ್ಡದಾಗಿ ಇರುವಂತ ಕಬ್ಬಿಣದ ಗೇಟಿನ ಪ್ರವೇಶದ್ವಾರವನ್ನು ನಿರ್ಮಾಣಮಾಡಿದ್ದಾರೆ. ಅರಣ್ಯ ಇಲಾಖೆಯು ಇಂತಹ ಸುಧಾರಿತ ಕೆಲಸಗಳನ್ನು ಈ ಪ್ರದೇಶದಲ್ಲಿ ಮಾಡುವುದರಿಂದ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಈ ಕ್ಷೇತ್ರದಲ್ಲಿದ್ದಂತ ಕೆಲವು ಗುಡಿಗಳಾದ ಕೂಗು ಬಸವಣ್ಣ, ನುಡಿ ಮಂಟಪ, ಶಿಬಾರಗಳಿಗೆ, ದೀಪಸ್ತಂಭಗಳಿಗೆ, ಮುಖ್ಯ ಗುಡಿಗೆ, ಹಾಗೂ ಆ ಪೌಳಿಕಟ್ಟೆಯಲ್ಲಿರುವ ಎಲ್ಲಾ ಗುಡಿಗಳಿಗೆ ಸುಣ್ಣ ಬಣ್ಣವನ್ನು ಬಳಿಯಲಾಗಿದೆ. ಗುಡಿಗೆ ಬಂದ ಜನರಿಗೆ ಕುಡಿಯುವ ನೀರಿಗಾಗಿ ಪೌಳಿಯ ಒಳಗೆ ಒಂದು ನೀರಿನ ತೊಟ್ಟಿ ನಿರ್ಮಿಸಿಕೊಂಡಿದ್ದಾರೆ. ಕೋಟೆಯ ಆವರಣದಲ್ಲಿ ಮತ್ತೆರಡು ಚಿಕ್ಕದಾದ ಸಿದ್ಧ ರೂಪವಾದ ಸಿಮೆಂಟಿನ ನೀರಿನ ಅರವಟ್ಟಿಗೆಗಳನ್ನು ಸ್ಥಾಪಿಸಿದ್ದಾರೆ. ಜಾತ್ರೆಗೆ ಬಂದ ಭಕ್ತರಿಗೆ ಉಳಿದುಕೊಳ್ಳಲು ಯಾತ್ರಿನಿವಾಸಗಳನ್ನು, ಕಲ್ಯಾಣ ಮಂಟಪವನ್ನು ಸ್ಥಾಪಿಸಲಾಗಿದೆ. ನೀರಿನ ಸರಬರಾಜಿಗಾಗಿ ಹಲವಾರು ಕೊಳವೆಬಾವಿಯ (ಬೋರ್ವೆಲ್) ವ್ಯವಸ್ಥೆಯನ್ನು ಮಾಡಲಾಗಿದೆ. ಮೂಲದಲ್ಲಿದ್ದಂತ ಕೆಲವು ದೇವಾಲಯಗಳು ಯಾವುದೇ ಸುರಕ್ಷತೆ ಇಲ್ಲದೆ ಗಿಡ ಮರಗಳು ಬೆಳೆದು ಅವುಗಳು ನಾಶ ಹೊಂದುವಂತಹ ಸ್ಥಿತಿಗೆ ಬಂದಿವೆ. ಮುಖ್ಯ ಗುಡಿಯ ಹಿಂಭಾಗದಲ್ಲಿ ಇತ್ತೀಚಿನ ಕೆಲವು ವರ್ಷಗಳಲ್ಲಿ ನಿರ್ಮಿಸಿರುವಂತ ಯಲ್ಲಾಲಿಂಗದೇವರ ಗುಡಿಗಳನ್ನು ನಿರ್ಮಿಸಿದ್ದಾರೆ. ಕೆಲವೊಂದು ಭಾಗದಲ್ಲಿರುವ ಮಂಟಪಗಳು, ಹಾಗೂ ಶಿಬಾರಗಳನ್ನು ನವೀಕರಿಸಲಾಗಿದೆ. ಕೆಲವು ಭಕ್ತರುಗಳ ದೇಣಿಗೆಯಿಂದ ಪೌಳಿಯಲ್ಲಿರುವಂತ ಬಸವಣ್ಣನ ತೆರೆದ ಮಂಟಪದ ತಳಭಾಗಕ್ಕೆ ಸುಧಾರಿತವಾದ ಟೈಲ್ಸ್ ಕಲ್ಲುಗಳನ್ನು ಹೊದಿಸಿ ಆಧುನಿಕತೆಯ ವಾತಾವರಣಕ್ಕೆ ತಂದಿದ್ದಾರೆ. ಆ ಪೌಳಿಯ ವರಾಂಡದ ತಳಭಾಗಕ್ಕೆ ಮಸಗಲ್ಲುಗಳನ್ನು ಈ ವರಾಂಡದ ಅರ್ಧಭಾಗಕ್ಕೆ ಹೊದಿಸಿದ್ದಾರೆ. ಮುಖ್ಯ ಗುಡಿಯ ಹೊರ ಹಾಗೂ ಒಳ ತಳಭಾಗಕ್ಕೆ ಮಾರ್ಬಲ್ಸ್‌ಗಳನ್ನು ಜೋಡಿಸಿದ್ದಾರೆ.

ಜಾತ್ರೆಯ ದಿನಗಳಲ್ಲಿ ಭಕ್ತರ ಸಂಖ್ಯೆ ವಿಫುಲವಾಗಿ ಬರುವುದರಿಂದ ಅವರನ್ನು ಒಂದು ಸಾಲಾಗಿ ಬಿಡಲು ಮುಖ್ಯ ಗುಡಿಯ ದ್ವಾರದ ಮಧ್ಯೆ ಎರಡು ಮಾರ್ಗ ಮಾಡಿ ಕಬ್ಬಿಣದ ತಡೆಗೋಡೆಯನ್ನು ನಿರ್ಮಿಸಿ ಹೋಗುವವರಿಗೆ ಅನುಕೂಲ ಮಾಡಲಾಗಿದೆ. ಕೆಲವು ವರ್ಷಗಳಿಂದ ನಿಧಿಗಳ್ಳರು ಮುಖ್ಯ ಗುಡಿಯ ಮೇಲಗೋಪುರದ ಭಾಗವನ್ನು ಧ್ವಂಸಗೊಳಿಸಿದ್ದರಿಂದ ಅದನ್ನು ಇತ್ತೀಚಿನ ಮಾದರಿಯಂತೆ ತಯಾರಿಸಿದ್ದಾರೆ. ಅದರಂತೆ ಕೋಟೆಯ ಮುಖ್ಯದ್ವಾರದಿಂದ ಒಳಗಡೆ ಬರುವ ಮಾರ್ಗದ ವೀರಭದ್ರೇಶ್ವರ ಗುಡಿಯ ಮುಂಭಾಗದಲ್ಲಿ ಪೂರ್ವಕಾಲದ ಪ್ರವೇಶದ್ವಾರವು ನಾಶವಾಗಿತ್ತು. ಅದನ್ನು ಕೆಲವು ವರ್ಷಗಳ ಹಿಂದೆ ಅದೇ ಮಾದರಿಯಲ್ಲಿ ಸಿಮೆಂಟ್ ಇಟ್ಟಿಗೆಯಿಂದ

ತಯಾರಿಸಿದ್ದಾರೆ. ಆ ಪ್ರದೇಶದಲ್ಲಿರುವಂತಹ ಕೆಲವು ಗುಡಿಗಳಿಗೆ ಸುಣ್ಣ ಬಣ್ಣವನ್ನು ಬಳಿದು ಅವುಗಳ ಹೆಸರನ್ನು ಪ್ರತಿ ಜಾತ್ರೆಯಲ್ಲಿ ಬರೆಯುವಂತದ್ದು ರೂಢಿಯಾಗಿದೆ. ಈ ಆಡಳಿತಕ್ಕಾಗಿ ಒಂದು ಚಿಕ್ಕದಾದ ರೀತಿಯಲ್ಲಿ ಆಡಳಿತ ಕಛೇರಿಯನ್ನು ಪೌಳಿ ಒಳಗೆ ಗಂಗಿಮಾಳಮ್ಮ ಗುಡಿಯ ಪಕ್ಕದಲ್ಲಿ ನಿರ್ಮಿಸಿದ್ದಾರೆ. ಇದೇ ಸಾಲಿನಲ್ಲಿ ಜಾತ್ರಾ ಸಂದರ್ಭದಲ್ಲಿ ಹಾಗೂ ಇತ್ಯಾದಿ ಉತ್ಸವಗಳ ಕಾರ್ಯಕ್ರಮಗಳ ಸಮಯದಲ್ಲಿ ಪ್ರಸಾದವನ್ನು ತಯಾರಿಸುವಂತ ಪಾಕ ಕೊಠಡಿಯನ್ನು ಸ್ಥಾಪಿಸಿಕೊಂಡಿದ್ದಾರೆ.

೭.೨.. ಪ್ರಸಾದ ವ್ಯವಸ್ಥೆ : (Prasad System)

ಈ ಕ್ಷೇತ್ರದಲ್ಲಿ ಕೆಲವು ವರ್ಷಗಳ ಹಿಂದಿನಿಂದ ಪ್ರಸಾದ ವ್ಯವಸ್ಥೆಯು ಪ್ರಾರಂಭವಿದ್ದರೂ, ಅದು ದಾಸೋಹದ ರೂಪದಲ್ಲಿ ಇರಲಿಲ್ಲ. ದಿನಂಪ್ರತಿ ಯಾರಾದರೂ ಭಕ್ತರು ಬಂದು ಹೋಗುವಂತಿದ್ದರೆ, ಅಂತಹವರಿಗೆ ಅನಿವಾರ್ಯವಾಗಿ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಇದು ಅಲ್ಲಿರುವಂತ ಪೂಜಾರಿಗಳಿಗೆ ಹಾಗೂ ಸೇವಕರಿಗೆ ಮಾಡಿಕೊಂಡಿರುವಂತ ಪ್ರಸಾದದಲ್ಲಿ ಹಂಚಿಕೊಂಡು ಊಟ ಮಾಡುವಂತ ಮನೋಭಾವನೆ ಇತ್ತು. ಆದರೆ ಹಲವಾರು ಜನಗಳಿದ್ದರೆ ಅನಿವಾರ್ಯವಾಗಿ ಏನು ಮಾಡುವುದಕ್ಕೆ ಆಗುತ್ತಿರಲಿಲ್ಲ. ಪ್ರಸ್ತುತ ದಿನಗಳಲ್ಲಿ ದಿನಂಪ್ರತಿ ಬರುವಂತ ಭಕ್ತರಿಗೆ ಇದೇ ಸ್ಥಿತಿ ಕಂಡುಬರುತ್ತದೆ. ಪ್ರತಿ ರವಿವಾರದ ಪೂಜೆಗೆ ಬರುವಂತ ಭಕ್ತಾದಿಗಳಿಗೆ ಮೊದಲಿನಿಂದಲೂ ದಾಸೋಹದ ರೂಪದ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಪ್ರತಿ ತಿಂಗಳ ಅಮಾವಾಸ್ಯೆ ದಿನದಂದು ಈ ಮೊದಲಿನ ದಿನಗಳಲ್ಲಿ ಅಷ್ಟಕಷ್ಟೇ ಜನರು ಬರುತ್ತಿದ್ದರು. ಆವಾಗ ಪ್ರಸಾದ ವ್ಯವಸ್ಥೆ ನಡೆಯುತ್ತಿತ್ತು. ಆದರೆ ಇಂದು ಪ್ರತಿ ಅಮಾವಾಸ್ಯೆ ಹೆಚ್ಚಿನ ಪ್ರಮಾಣದಲ್ಲಿ ಭಕ್ತರು ಸೇರುವುದರಿಂದ ಮಧ್ಯಾಹ್ನದಿಂದ ರಾತ್ರಿಯವರೆಗೂ ಪ್ರಸಾದದ ದಾಸೋಹ ನೆರವೇರುತ್ತದೆ. ಅಂದು ಅಮಾವಾಸ್ಯೆ ಆಗಿರುವುದರಿಂದ ಕೆಲವೊಂದಿಷ್ಟು ಭಕ್ತರು ಅವತ್ತಿನ ರಾತ್ರಿ ಅಲ್ಲಿಯೇ ತಂಗಿ ಭಜನೆಯಲ್ಲಿ ತೊಡಗಿರುತ್ತಾರೆ. ಇಂತಹವರಿಗೆ ಬೆಳಿಗ್ಗೆ ಉಪಾಹಾರ, ಚಹಾದ ವ್ಯವಸ್ಥೆಯನ್ನು ಮಾಡಿರುವರು. ಹುಣ್ಣಿಮೆ ದಿನಗಳಲ್ಲಿ ಬರುವಂತ ಭಕ್ತರಿಗೂ ಮಧ್ಯಾಹ್ನದ ಸಮಯದಲ್ಲಿ ಪ್ರಸಾದವನ್ನು ಮಾಡಿಸುತ್ತಾರೆ. ವರ್ಷದ ಎರಡೂ ಜಾತ್ರೆಯ ಸಂದರ್ಭದಲ್ಲಿ ಕೆಲಸ ಕಾರ್ಯಗಳನ್ನು ಮಾಡುವಂತಹವರಿಗೆ ಬೆಳಗಿನ ಸಮಯದಲ್ಲಿ ಇಂದು ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಈ ಪೂರ್ವದಲ್ಲಿ ಇದು ಐಚ್ಛಿಕವಾಗಿತ್ತು. ಮಧ್ಯಾಹ್ನದ ಅವಧಿಯಲ್ಲಿ ಪ್ರಸಾದ ದಾಸೋಹ ನಡೆಯುತ್ತಿದೆ.

ಚಂದಾಲಿಂಗೇಶ್ವರನ ಸನ್ನಿಧಿಗೆ ಬರುವಂತ ದಿನಂಪ್ರತಿ, ಹಾಗೂ ರವಿವಾರ, ಅಮಾವಾಸ್ಯೆ, ಹುಣ್ಣಿಮೆಯಲ್ಲಿ, ಬಂದಿರುವ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಇತ್ತು. ಅನ್ನ, ಸಾಂಬಾರ್, ಬಿಟ್ಟರೆ ಬೇರೆ ಯಾವ ಆಹಾರದ ಪದ್ಧತಿ ಇರಲಿಲ್ಲ. ಅಕಸ್ಮಾತ್ ಯಾರಾದರೂ ಭಕ್ತರು ಬೇಡಿಕೊಂಡು ಆ ದಿನಗಳಲ್ಲಿ ಏನಾದರೂ ಸಿಹಿ ಊಟದ ವ್ಯವಸ್ಥೆಯನ್ನು ಮಾಡಿದರೆ ಮಾತ್ರ ಸಿಹಿಯೂಟ

ದೊರೆಯುತ್ತದೆ. ಯಾರು ದಾಸೋಹ ದಾನಿಗಳಿಲ್ಲದಾಗ ಈ ಪ್ರಸಾದದ ವ್ಯವಸ್ಥೆಯನ್ನು ಮಾಡುವುದಕ್ಕೆ ಗುಡಿಯ ಕಮಿಟಿಯವರೆ ಖರ್ಚುವೆಚ್ಚವನ್ನು ಭರಿಸುತ್ತಾರೆ. ವಾರದ ದಿನಗಳಲ್ಲಿ ಅಮಾವಾಸ್ಯೆ, ಹುಣ್ಣಿಮೆ, ಜಾತ್ರೆಗಳಲ್ಲಿ, ಬಂದಿರುವಂತಹ, ದವಸಧಾನ್ಯಗಳನ್ನು, ಸಂರಕ್ಷಿಸಿಟ್ಟು ಅದನ್ನೇ ದಿನನಿತ್ಯ ಹಾಗೂ ವಿಶೇಷ ದಿನಗಳಲ್ಲಿ ಆ ಪ್ರಸಾದದ ವ್ಯವಸ್ಥೆ ಮಾಡುತ್ತಿರುತ್ತಾರೆ. ವರ್ಷದ ಎರಡೂ ಜಾತ್ರೆಗಳಲ್ಲಿ ಮೊದಲಿಗೆ ಕೇವಲ ಅನ್ನ, ಸಾಂಬಾರ್‌ಗಳನ್ನು, ದಾಸೋಹ ರೂಪದಲ್ಲಿ ನೀಡಲಾಗುತ್ತಿತ್ತು. ಪ್ರಸ್ತುತ ದಿನಗಳಲ್ಲಿ ಕೊಂಚ ಬದಲಾವಣೆ ಹೊಂದುತ್ತಾ ಬಂದಿರುತ್ತದೆ. ಅನ್ನ, ಸಾಂಬಾರ್, ಜೊತೆಗೆ ಸಿಹಿ ಪದಾರ್ಥ ಯಾವುದಾದರೊಂದು ಹುಗ್ಗಿ, ಸಜ್ಜಕ ಇಂತಹವುಗಳು ಇಂದಿನ ಜಾತ್ರೆ ದಿನಗಳಲ್ಲಿ ಪ್ರಸಾದದ ದಾಸೋಹ ನಡೆದಿರುತ್ತದೆ.

ಈ ಕ್ಷೇತ್ರಕ್ಕೆ ಅಮಾವಾಸ್ಯೆ ಮತ್ತು ಹುಣ್ಣಿಮೆಯ ಜಾತ್ರೆಗಳಿಗೆ ಬಂದಿರುವಂತಹ ಭಕ್ತರಿಗೆ ಈ ಪೂರ್ವದ ದಿನಗಳಲ್ಲಿ ಪ್ರಸಾದವನ್ನು ಬಾಳೆ ಎಲೆಯಲ್ಲಿ ಹಾಕಿ ಕೊಡುವಂತಹ ಪದ್ಧತಿಯಿತ್ತು. ಇದು ಹಲವಾರು ಕಾರಣಾಂತರಗಳಿಂದ ಬರುಬರುತ್ತಾ ಪರಿವರ್ತನೆ ಹೊಂದಿ ಪತ್ರವಳಿ ಎಲೆಯಿಂದ ತಯಾರಿಸಿದ ತಟ್ಟೆಯಲ್ಲಿ ಪ್ರಸಾದ ಹಾಕಿ ಕೊಡುವುದು ಪ್ರಚಲಿತದಲ್ಲಿತ್ತು. ತದನಂತರ ಕಾಲಕ್ಕೆ ತಕ್ಕಂತೆ, ಹಾಗೂ ಅವಶ್ಯಕತೆಗೆ ತಕ್ಕಂತೆ, ಅಲ್ಯೂಮಿನಿಯಂ, ಸ್ಟೀಲ್‌ತಟ್ಟೆಗಳು, ಬಳಕೆಗೆ ಬಂದವು. ಇದರಿಂದ ತಟ್ಟೆಗಳನ್ನು ತೊಳೆಯುವುದು ಬಳೆಯುವುದರಿಂದ ಮುಕ್ತಿಹೊಂದಿ. ಇತ್ತೀಚಿಗೆ ಈ ದೇವಸ್ಥಾನಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗಿ ಬರುವುದರಿಂದ ತಟ್ಟೆಗಳು ಅವಶ್ಯಕತೆಗಳು ಬೀಳುವುದರಿಂದ ಊಟ ಮಾಡಿದ ತಟ್ಟೆಗಳನ್ನು ಬೇಗಬೇಗನೆ ತೊಳೆದುಕೊಡುವುದಕ್ಕೆ ಹಲವಾರು ಸಮಸ್ಯೆಗಳು ಉಂಟಾಗಿರುವುದರಿಂದ ಈ ಪಾತ್ರೆಗಳ ಬಳಕೆಯನ್ನು ಕಡಿಮೆ ಮಾಡಿ, ಪ್ರಸ್ತುತ ದಿನಗಳಲ್ಲಿ ಪೇಟೆಯಲ್ಲಿ ಲಭ್ಯವಾಗುವಂತಹ ರಟ್ಟಿನಿಂದ, ಪ್ಲಾಸ್ಟಿಕ್ ಮಿಶ್ರಿತ ತಟ್ಟೆಗಳು, ಬಳಕೆಯಲ್ಲಿರುವುದು ಕಂಡುಬರುತ್ತದೆ.

೭.೩. ಗುಡಿಯ ಕೆಲಸ ಕಾರ್ಯಗಳಲ್ಲಿ ಪರಿವರ್ತನೆಗಳು : (Transitions in Work Tasks Cabian)

ಜಾತ್ರೆಯನ್ನು ಮಾಡಬೇಕಾದರೆ ಮೊದಲಿಗೆ ಆ ಕ್ಷೇತ್ರದಲ್ಲಿರುವ ಗುಡಿಗಳಿಗೆ ಸುಣ್ಣ-ಬಣ್ಣ ಬಳಿಯಬೇಕಾದರೆ, ಪೂರ್ವದ ದಿನಗಳಿಗೆ ಸಂಬಂಧಿಸಿದಂತೆ ಈ ಜಾತ್ರೆಯನ್ನು ಮುರಡಿ, ಗುಡೂರು, ಬೀಳಗಿ, ಮನ್ನೇರಾಳ, ಕಬ್ಬರಿಗೆ ಗ್ರಾಮದವರು ಕೂಡಿ ಮಾಡುವುದರಿಂದ ಆಯಾ ಊರುಗಳಿಗೆ ಸಂಬಂಧಿಸಿದ ಭಕ್ತರು ಜಾತ್ರೆ ನಡೆಯುವುದಕ್ಕಿಂತ ಮೂರು ದಿನಗಳ ಮೊದಲೇ ಬಂದು ಒಂದೊಂದು ಕೆಲಸಗಳನ್ನು ಹಂಚಿಕೊಳ್ಳುವಂತಹ ಪದ್ಧತಿಯಿತ್ತು. ಉದಾಹರಣೆಗೆ ಗುಡಿಗೆ ಸುಣ್ಣ ಬಳಿಯುವುದು, ನುಡಿ ಹೇಳುವ ಮರದಡಿ ಸ್ವಚ್ಛತೆ ಕೈಗೊಳ್ಳುವುದು, ಪ್ರಸಾದವನ್ನು ತಯಾರಿಸುವುದಕ್ಕೆ ಕಟ್ಟಿಗೆಗಳನ್ನು ಕಡಿಯುವುದು, ಸೀಳುವುದು, ಹೊರುವುದು, ಸಣ್ಣಪುಟ್ಟ ಕೆಲಸಗಳನ್ನು, ಪೌಳಿಕಟ್ಟೆಯನ್ನು ಸಂಪೂರ್ಣವಾಗಿ ಸ್ವಚ್ಛತೆ, ಹಾಗೂ ಇನ್ನಿತರ ಯಾವುದೇ ಕೆಲಸಗಳಿದ್ದರೆ ಈ

ಎಲ್ಲಾ ಊರಿನವರು ಸೇರಿಕೊಂಡು ಮಾಡುತ್ತಿದ್ದರು. ಆದರೆ ಇದು ಬರಬರುತ್ತ ಬದಲಾವಣೆಯತ್ತ ಸಾಗಿದೆ. ಕಾರಣ ಭಕ್ತರಲ್ಲಿ ಹೊಂದಾಣಿಕೆ ಕೊರತೆ, ಅಥವಾ ಇನ್ನಾವುದೇ ಕೆಲಸಕಾರ್ಯಗಳಲ್ಲಿ ಆ ದಿನಗಳಲ್ಲಿ ಸೇವೆ ಮಾಡಲು ಅಡತಡಿಯಾಗುತ್ತಿರುವುದನ್ನು ಮನಗಂಡು, ಇತ್ತೀಚಿಗೆ ಕೂಲಿಕಾರರಿಂದ ಮತ್ತು ಎಲ್ಲೋ ಒಬ್ಬೊಬ್ಬರು ಸೇವಕರು ಕೂಡಿ ಈ ಎಲ್ಲಾ ಕೆಲಸವನ್ನು ನಿರ್ವಹಿಸುವರು.

೭.೪. ವಾದ್ಯ ಮೇಳ : (The Band)

ಈ ಜಾತ್ರೆಯಲ್ಲಿ ಮೊದಲಿನ ದಿನಗಳಲ್ಲಿ ಜಾತ್ರೆಯನ್ನು ಮೆರಗುಗೊಳಿಸಲು ಕೆಲವೆ ವಾದ್ಯಗಳ ಪರಿಚಯವಾಗುತ್ತದೆ. ಬೊಂವ್.... ಎಂದು ಒಂದೇ ರೀತಿ ಧ್ವನಿ ಮಾಡುವ "ಸುತಿ (ಶೃತಿ) ಶಹನಾಯಿ, ತಾಳ, ಢಕ್ಕಿ, ಡೊಳ್ಳುಗಳು ಇರುತ್ತಿದ್ದವು."[೨] ಆದರೆ ಇಂದು ಇವುಗಳಲ್ಲಿ ಬದಲಾವಣೆಯತ್ತ ಸಾಗಿವೆ. ಕೆಲವು ಈಗಿನ ಸಂದರ್ಭದಲ್ಲಿ ಬಳಕೆಯಾಗುತ್ತಿಲ್ಲ. ಅಂತಹವುಗಳಲ್ಲಿ ಢಕ್ಕೆ, ಶಹನಾಯಿಗಳು, ವಿಶೇಷವಾಗಿ ಈ ಜಾತ್ರೆಯಲ್ಲಿ ಅಪರೂಪವಾಗಿವೆ. ಕೇವಲ ಡೊಳ್ಳುಗಳು, ತಾಳಗಳು, ಮಾತ್ರ ನಾವು ಇಂದು ಕಾಣುತ್ತೇವೆ. ಮೊದಲಿನ ಡೊಳ್ಳಿಗೂ ಹಾಗೂ ಈಗಿನ ಡೊಳ್ಳುಗಳಿಗೆ ವ್ಯತ್ಯಾಸವಿರುತ್ತವೆ. ಪೂರ್ವದಲ್ಲಿನ ಡೊಳ್ಳುಗಳನ್ನು ಮರದ ದಿಮ್ಮಿಯನ್ನು ಬಳಕೆ ಮಾಡಿಕೊಂಡು ಎಮ್ಮೆ, ಎತ್ತುಗಳ, ಚರ್ಮದಿಂದ ತಯಾರಿಸುವಂತಹವುಗಳನ್ನು ಬಳಸುತ್ತಿದ್ದರು. ಆದರೆ ಇಂದು ಅದೇ ಡೊಳ್ಳುಗಳನ್ನು ತಯಾರಿಸುವಂತ ಕಂಪನಿಗಳಿವೆ. ಇಂತಹ ಕಂಪನಿಗಳು ಸ್ಟೀಲ್‌ನ ಕೊಳವಿಗೆ ಫೈಬರ್‌ನಂತಹವನ್ನು ಬಿಗಿದು ಇಂದಿನ ಡೊಳ್ಳುಗಳನ್ನು ತಯಾರಿಸುತ್ತಾರೆ. ಇವುಗಳ ರಚನೆ ಮೊದಲಿನ ಡೊಳ್ಳುಗಳಿಗಿಂತ ಭಿನ್ನತೆ ಇರುತ್ತವೆ. ಇವು ತುಂಬಾ ಹಗುರವಾದಂತಹವುಗಳಾಗಿದ್ದು, ಅಕಸ್ಮಾತ್ ಹರಿದರೆ ಬೇಗನೆ ತಯಾರಿಸಬಹುದಾಗಿವೆ.

೭.೫. ಜಾತ್ರೆ ದಿನ ಗುಡಿಯ ಅಲಂಕಾರ : (Fair Day Gudiya Décor)

ಚಂದಾಲಿಂಗೇಶ್ವರನ ಜಾತ್ರೆಯ ದಿನಕ್ಕೆ ಆತನ ಗುಡಿಯನ್ನು ಸುಣ್ಣದಿಂದ ಸಾರಿಸುತ್ತಿದ್ದರು. ಅದರ ಕುಂಬಿಯ ಭಾಗಕ್ಕೆ ಕೆಂಪುಬಣ್ಣದ ಜೋರನ್ನು ಬಿಡುಲಾಗುತ್ತಿತ್ತು. ಅಂದಿನ ದಿನಗಳಲ್ಲಿ ಜಾತ್ರೆ ಇದೆಯೋ ಇಲ್ಲವೋ ಎಂಬಂತೆ ತೋರುತ್ತಿತ್ತು. ಕಾರಣ ಅಲಂಕಾರ ಎನ್ನುವುದು ಆ ಗುಡಿಯ ಹತ್ತಿರ ಮಾತ್ರ ಸೀಮಿತವಾಗಿತ್ತು. ಇವತ್ತು ಇದೇ ಜಾತ್ರೆಯನ್ನು ಸುತ್ತ ನೂರಾರು ಕಿಲೋಮೀಟರುಗಳವರೆಗೂ ಸುದ್ದಿ ಹರಡುವಂತೆ ಮಾಡಲಾಗುತ್ತದೆ. ಮುಖ್ಯ ಗುಡಿಯನ್ನು ವಿವಿಧ ತಳಿರು ತೋರಣದಿಂದ ಅಲಂಕರಿಸಿ, ಗುಡಿಯ ಮುಖಮಂಟಪಕ್ಕೆ ತರತರಹದ ಬಣ್ಣಗಳಿಂದ ಶೃಂಗರಿಸುತ್ತಾರೆ. ಗುಡಿಯ ಬಾಗಿಲುಗಳಿಗೆ, ಅದರ ಮುಂಭಾಗದ ಎರಡು ಕಟ್ಟೆಗಳಿಗೆ ಬಣ್ಣದಿಂದ ಅಲಂಕರಿಸಿರುವರು. ಮುಖ್ಯ ಗುಡಿಯ ಗೋಪುರದಿಂದ ಹಿಡಿದು, ಕೆಳಭಾಗದ ಮುಕ್ಕಾಲು ಭಾಗದವರೆಗೂ, ಬಣ್ಣಬಣ್ಣದ ವಿದ್ಯುತ್ ದೀಪಗಳನ್ನು, ಪೌಳಿಯ ಕಟ್ಟೆಯಲ್ಲಿರುವ ಎಲ್ಲಾ ದೇವರುಗಳಿಗೂ ಜಿಗ್-ಜಾಗ್ ಮಾಡುವ ಬಣ್ಣ ಬಣ್ಣದ ಚಿಕ್ಕ-ಚಿಕ್ಕ ವಿದ್ಯುದ್ದೀಪಗಳನ್ನು ಅಳವಡಿಸಿರುವರು. ಈ ಮುಖ್ಯ ಗುಡಿಯಿಂದ ಹಿಡಿದು ಕೋಟೆಯ ಮುಖ್ಯದ್ವಾರ ಮುಂಭಾಗದವರೆಗೂ

ಈ ಅಲಂಕೃತ ದೀಪಗಳನ್ನು ಅಳವಡಿಸಿರುವರು. ಗುಡಿಯ ಸುತ್ತಮುತ್ತ ಹಾಗೂ ಆಚರಣೆಗಳು ನಡೆಯುವ ಸ್ಥಳಗಳಲ್ಲಿ ದೊಡ್ಡದಾಗಿರುವಂತ ಮರಕೂರಿ ಬಲ್ಬಗಳನ್ನು ಅಳವಡಿಸಿರುತ್ತಾರೆ. ಈ ದೇವರ ಜಾತ್ರೆ ಇದೆ ಎಂಬುದನ್ನು ಇತ್ತೀಚಿನ ದಿನಗಳಲ್ಲಿ ಫ್ಲೆಕ್ಸ್, (ಬ್ಯಾನರ್)ಗಳನ್ನು ಹಾಕಿಸಿ, ಸರ್ವಜನರಿಗೂ ಜಾತ್ರೆಯೂ ನಡೆಯುತ್ತದೆ ಎಂಬುದನ್ನು ತಿಳಿಸಲಾಗುತ್ತದೆ. ಜಾತ್ರೆಗೆ ಬರುವಂತ ಜನರನ್ನು ಬರ ಮಾಡಿಕೊಳ್ಳುವಂತೆ ಮುಖ್ಯದ್ವಾರಕ್ಕೆ ಅಲಂಕೃತವಾದಂತ ಶಾಮಿಯಾನ ಚೌಕಟ್ಟುಗಳನ್ನು ಹಾಕಿರುವರು.

೭.೬. ಭಕ್ತರ ಹರಕೆ ಬೇಡಿಕೆಗಳಲ್ಲಿ ಪರಿವರ್ತನೆ : (Conversion in Believers Spreading Demand)

ಪೂರ್ವದ ದಿನಗಳಲ್ಲಿ ಭಕ್ತರು ಚಂದಾಲಿಂಗೇಶ್ವರನಿಗೆ ಹಲವಾರು ಬೇಡಿಕೆಗಳನ್ನು ಇಟ್ಟು ಹರಕೆಯನ್ನು ತೀರಿಸುತ್ತಿದ್ದರು. ಅಂತಹವುಗಳಾದ ಕಂಕಣಭಾಗ್ಯ, ಅಥವಾ ದಂಡೆಬಲ, ಬೇಗ ಬರದೆಯಿದ್ದಾಗ ಆ ಕುಟುಂಬದವರು ಅಥವಾ ಆ ಮಹಿಳೆಯು ಬೇಗ ದಂಡೆ ಬಲ ಬಂದರೆ ಮದುವೆಯಾದ ವರ್ಷವೇ ದೀಡ್ ನಮಸ್ಕಾರ ಹಾಕುವುದರ ಮೂಲಕ ತೀರಿಸುವೆಂದು ಬೇಡಿಕೊಳ್ಳುತ್ತಾರೆ. ಮದುವೆಯಾದ ದಂಪತಿಗಳು ಬೇಗನೇ ಸಂತಾನಭಾಗ್ಯ ಸಿಗದೇ ಇದ್ದಾಗ, ಇಂಥ ಸಂದರ್ಭದಲ್ಲಿಯೂ ಈ ದೇವರ ಮೊರೆಹೋಗಿ ದಂಪತಿಗಳಿಬ್ಬರೂ ತಮಗೆ ಬೇಗನೆ ಸಂತಾನಭಾಗ್ಯ ಕರುಣಿಸಿದರೆ, ಆ ಹುಟ್ಟುವ ಮಗುವಿಗೆ ತನ್ನ ಹೆಸರನ್ನು ಇಡುವುದಾಗಿ, ಹುಟ್ಟಿದ ಮಗುವಿನ ಜವುಳವನ್ನು ಆತನಿಗೆ ಬಿಡುವುದು, ಇಲ್ಲ ಆತನ ಸೇವೆಗೆ ಬಿಡುವುದು ಇತ್ಯಾದಿಯಾಗಿ ಬೇಡಿಕೊಳ್ಳುವರು. ಭಕ್ತರು ತಮಗೆ ಏನಾದರು ಮಾರಕ ಕಾಯಿಲೆಗಳು ಬಂದರೆ, ಹಾಗೂ ಈ ತಮ್ಮ ಹೊಲಗಳ ಬೆಳೆಯು ಚೆನ್ನಾಗಿ ಬರಲೆಂದು, ತಮ್ಮ ದನಕರುಗಳಿಗೆ ಕಾಯಿಲೆ ಬರಕೂಡದೆಂದು, ಇಂತಹ ಬೇಡಿಕೆಗಳು ಆ ದಿನಗಳಲ್ಲಿ ಮುಖ್ಯವಾಗಿದ್ದವು. ಆದರೆ ಪ್ರಸ್ತುತ ದಿನಗಳಲ್ಲಿ ಭಕ್ತರ ಅವಶ್ಯಕತೆಗೆ ತಕ್ಕಂತೆ ಹರಕೆ ಮತ್ತು ಬೇಡಿಕೆಗಳು ಬದಲಾಗುತ್ತಾ ಬರುತ್ತಿವೆ. ಅಂತಹವುಗಳಲ್ಲಿ ಬಹುಮುಖ್ಯವಾಗಿ ತಮ್ಮ ಮಕ್ಕಳಿಗೆ ಬೇಗನೆ ಸರ್ಕಾರಿ ನೌಕರಿ ಸಿಗಲೆಂದು, ನೌಕರಿ ಇದ್ದಂಥವರು ನಮಗೆ ಯಾವ ಅಧಿಕಾರಿಯಿಂದ ತೊಂದರೆ ಯಾಗಕೂಡದೆಂದು, ವ್ಯಾಪಾರಸ್ಥರು, ತಮ್ಮ ವ್ಯಾಪಾರವೂ ಇಮ್ಮಡಿಯಾಗಲ್ಲೆಂದು ಕೆಲವೊಬ್ಬರು, ತಾವು ಈಗ ಇರುವಂತೆ ತಮ್ಮ ಮಕ್ಕಳು ಆಟ-ಓಟ-ಪಾಠದಲ್ಲಿ ಮುಂದಿರಲಿ, ಎಂದು ತಂದೆ-ತಾಯಿಗಳು ಬೇಡಿಕೆಯಿಟ್ಟು, ಬೇಡಿಕೆ ಏನಾದರೂ ಈಡೇರಿದರೆ, ಬೆಳ್ಳಿ-ಬಂಗಾರದ ಆಭರಣಗಳನ್ನು ಕೊಡಿಸುವುದಾಗಿ ಹರಕೆಯನ್ನು ಬೇಡಿಕೊಳ್ಳುವರು.

೭.೭. ಸಂಗೀತ ಬಿತ್ತರಿಸುವ ಪರಿಕರಗಳು : (Music Casting Tools)

ಚಂದಾಲಿಂಗೇಶ್ವರ ಗುಡಿಯಲ್ಲಿ ಮೊದಲಿಗೆ ಪ್ರತಿನಿತ್ಯ ಬೆಳಗ್ಗೆ ಹಾಗೂ ಸಾಯಂಕಾಲದಲ್ಲಿ ಸುಪ್ರಭಾತ ಗೀತೆಗಳು ಮತ್ತು ಭಕ್ತಿಗೀತೆಗಳನ್ನು, ತದನಂತರ ಇನ್ನಿತರ ಹಾಡುಗಳನ್ನು ಕೇಳಲು

ಟೇಪ್ ರೆಕಾರ್ಡರ್‌ನಲ್ಲಿ ರೀಲ್‌ನಿಂದ ಕೂಡಿದಂತ ಕ್ಯಾಸೆಟ್‌ಗಳನ್ನು ಬಳಸುತ್ತಿದ್ದರು. ತದನಂತರದಲ್ಲಿ ಸೀಡಿ, ಕ್ಯಾಸೆಟ್‌ಗಳು, ಮೆಮೊರಿ ಕಾರ್ಡ್, ಪೆನ್‌ಡ್ರೈವ್, ಬ್ಲೂಟೂತ್‌ಗಳಿಂದ ಅಥವಾ ಫೋನ್‌ಗಳಿಗೆ ಕನೆಕ್ಟರ್‌ಗಳನ್ನು ಅಳವಡಿಸಿ ಇವತ್ತು ಇಂಥವುಗಳಿಂದ ಹಾಡುಗಳನ್ನು, ಗುಡಿಯಲ್ಲಿ ಅಮಾವಾಸ್ಯೆ, ಹುಣ್ಣಿಮೆ, ಜಾತ್ರೆಗಳು, ಹಾಗೂ ವಿಶೇಷ ದಿನಗಳಲ್ಲಿ ಹಾಕಲಾಗುತ್ತದೆ. ಕೆಲವೊಂದು ಸಮಯದಲ್ಲಿ ವಿದ್ಯುತ್ ಇಲ್ಲದಿರುವಾಗ, ಬ್ಯಾಟರಿ ಆಧಾರಿತವಾಗಿ ಹಾಡುಗಳನ್ನು ಹಾಕಲಾಗುತ್ತದೆ. ನಂತರ ಕೆಲವೊಂದು ಪೂಜೆ ವಿಧಾನದಲ್ಲಿ ಎಲೆಕ್ಟ್ರಿಕಲ್ ಆಧಾರಿತ ಸಂಗೀತಗಳನ್ನು, ಹಾಡುಗಳು ಬಳಸಿಕೊಳ್ಳಲಾಗುತ್ತದೆ.

೭.೮. ವೇಷಭೂಷಣಗಳು : (Costumes)

ಪೂರ್ವದ ದಿನಗಳಲ್ಲಿ ಜಾತ್ರೆಗೆ ಬರುವಂತಹವರು ಭಕ್ತರಾದ ಪುರುಷರು ಕಸೆಯಂಗಿ, ನೆಹರುಶರ್ಟ್, ಗಾಂಧಿಟೋಪಿ, ಧೋತ್ರ, ಚೈನಾಸಿಲ್ಕ್ ಅಂಗಿ, ಬಿಳಿದಾಗಿರುವಂತ ಹಾಗೂ ಬಣ್ಣ ಬಣ್ಣದಿಂದ ಕೂಡಿದ ಲುಂಗಿಗಳನ್ನು, ಯಜಮಾನ ವ್ಯಕ್ತಿಗಳು ಹಳದಿ ರೇಷ್ಮೆ ಪಟಗ (ಪೇಟ) ಖಾಕಿ, ಅಥವಾ ಬಿಳಿ, ನೀಲಿ ಬಣ್ಣದಂತ ತುಂಬುತೋಳಿನ ನೆಹರುಶರ್ಟ್ ಹಾಗೂ ದಪ್ಪನದಡಿಯ ಧೋತ್ರವನ್ನು ಧರಿಸುತ್ತಿದ್ದರು. ಚಿಕ್ಕ ವಯಸ್ಸಿನ ಹುಡುಗರು ಪಟಾಪಟಿ ಚೆಣ್ಣ, ಅರ್ಧತೋಳಿನ ಕಾಟನ್ ಅಂಗಿಗಳು, ಕೆಲವೊಬ್ಬರು ನೀಲಿ, ಖಾಕಿ ಬಣ್ಣದಿಂದ ಕೂಡಿದ ಚೆಣ್ಣ (ಆಫ್‌ಪ್ಯಾಂಟ)ವನ್ನು ಧರಿಸುತ್ತಿದ್ದರು. ಕೆಲವೊಬ್ಬ ಯುವಕರು ಈ ರೀತಿಯ ಜಾತ್ರೆಯ ಸಂದರ್ಭದಲ್ಲಿ ಮಾತ್ರ ತಮ್ಮ ಬಿಳಿ ಬಟ್ಟೆಗಳಿಗೆ ನೀಲಿಯನ್ನು ಎದ್ದಿಸಿದ ನೆಹರು ಶರ್ಟ್ ಅಂಗಿ ಹಾಗೂ ಮಲ್ಲಿನ ಧೋತ್ರವನ್ನು ಧರಿಸುತ್ತಿದ್ದರು. ಆದರೆ ಇವತ್ತು ಈ ಪುರುಷರ ಉಡುಪುಗಳಲ್ಲಿ ತುಂಬಾ ಬದಲಾವಣೆಯಾಗಿದೆ. ಯಜಮಾನ ವ್ಯಕ್ತಿಗಳು ರೇಷ್ಮೆ ಹಳದಿ ಪೇಟ, ಬಿಳಿ, ನೀಲಿ, ಖಾಕಿ ಬಣ್ಣದ ತುಂಬುತೋಳಿನ ನೆಹರು ಶರ್ಟ್ ಅಂಗಿಗಳನ್ನು ಇವತ್ತಿಗೂ ಧರಿಸುವರು. ಆದರೆ ಇದೇ ವಯಸ್ಸಿನ ಕೆಲವು ವ್ಯಕ್ತಿಗಳು ಆಧುನಿಕತೆಗೆ ತಕ್ಕಂತೆ ಬಿಳಿದಾದ ಅಥವಾ ವಿವಿಧ ಬಣ್ಣದಿಂದ ತಯಾರಿಸಿದ ಲುಂಗಿ, ಬಿಳಿದಾದ ನೆಹರು ಶರ್ಟನ್ನು ಹಾಕುವರು. ಇನ್ನು ಕೆಲವರು ಪ್ರಾದೇಶಿಕತೆಗೆ ಸಂಬಂಧಿಸಿದಂತೆ ಅದೇ ಯಜಮಾನರ ವಯಸ್ಸಿನವರು ಗಾಂಧಿ ಟೋಪಿಯನ್ನು ಬಳಸುವರು. ಇದೇ ವಯಸ್ಸಿನವರು ಕೆಲವರು ಸಾದಾಸೀದಾ ಪ್ಯಾಂಟ್ ಅಂಗಿಯನ್ನು ಧರಿಸುವರು.

ಯುವಕರು ಹಾಗೂ ಚಿಕ್ಕ ಮಕ್ಕಳು ಇಂದಿನ ದಿನಗಳಿಗೆ ಸಂಬಂಧ ಪಟ್ಟಂತ ವೇಷಭೂಷಣಗಳನ್ನು ಧರಿಸುವರು. "ಯುವಕರು ಜೀನ್ಸ್ ಪ್ಯಾಂಟ್, ಟೀ-ಶರ್ಟ್, ಜುಬ್ಬಾ, ಪೈಜಾಮ, ಧೋತ್ರ, ನೆಹರು ಶರ್ಟ್, ಅಂಗಿ ಮತ್ತೆ ಕೆಲವರು ಲುಂಗಿ, ಬಣ್ಣಬಣ್ಣದ ಅಂಗಿಗಳನ್ನು, ಹೆಣಿಕೆಯ ಟವೆಲ್‌ಗಳು, ಗೆಳೆಯರ ಬಳಗ ಇದ್ದಂಥವರು ಒಂದೇ ರೀತಿಯ ಬಣ್ಣದ ಉಡುಪುಗಳನ್ನು ಹಾಗೂ ಯಾವುದೇ ಸಂಘ ಸಂಸ್ಥೆಯ ಹೆಸರಿನಿಂದ ಕೂಡಿದಂತ ಒಂದೇ ತರಹದ ಟೀಶರ್ಟುಗಳು, ಈ ಜೀನ್ಸ್ ಪ್ಯಾಂಟಿನಲ್ಲಿ ವಿವಿಧ ರೀತಿಯ ಸ್ಟೈಲ್‌ನ ಪ್ಯಾಂಟ್‌ಗಳನ್ನು ಹಾಕುವರು."[66] ಆರ್ಥಿಕವಾಗಿ ಸ್ಥಿತಿವಂತರಾಗಿದ್ದ

ಯುವಕರು ಶೂಟ್-ಬೂಟ್, ಬೆಳ್ಳಿ, ಬಂಗಾರದ, ಒಡವೆಗಳನ್ನು ತಮ್ಮ ಕತ್ತಿನಲ್ಲಿ, ಕೈಯಲ್ಲಿ ಧರಿಸುತ್ತಾರೆ. ಚಿಕ್ಕ ಚಿಕ್ಕ ಹುಡುಗರೂ ಸಹ ತಮಗೆ ಇಷ್ಟವಾದ ಬಣ್ಣದ ಬಟ್ಟೆಗಳನ್ನು ಹಾಕಿಕೊಳ್ಳುವರು. ಹೀಗೆ ತಮಗೆ ಇಷ್ಟವಾದ ಬಟ್ಟೆಗಳನ್ನು ಯುವಕರು-ಚಿಕ್ಕವರು ಹಾಕಿಕೊಂಡು ಇಂದು ಈ ಜಾತ್ರೆಯಲ್ಲಿ ಪಾಲ್ಗೊಳ್ಳುವರು.

ಮಹಿಳೆಯರಿಗೆ ಸಂಬಂಧಿಸಿದಂತೆ ಈ ಮೊದಲಿನ ದಿನಗಳಲ್ಲಿ ಹಿರಿಯರಾದವರು "ದಡಿಸೀರೆ, ಚಂದ್ರಕಾಳಿಸೀರೆ, ನೀರಿಗೆಸೀರೆ, ತೋಪುಸೆರಗಿನಸೀರೆ, ಇಳಕಲ್‌ಸೀರೆ, ಮಸರಾಯಿಬಾಂಡು ಕಡ್ಡಿಸೀರೆ," ಧರಿಸುತ್ತಿದ್ದರು. ಇವತ್ತು ಇವರಲ್ಲಿ ಕೆಲವರು ಈ ದಿನಗಳಿಗೆ ಹೊಂದಿಕೊಂಡಂತೆ ಎಲ್ಲೋ ಕೆಲವೊಂದ್ದು ಮಹಿಳೆಯರು ಇಂತಹ ಸೀರೆಗಳನ್ನು ಇನ್ನೂ ಹಾಕುತ್ತಾರೆ. ಇದೇ ವಯಸ್ಸಿನ ಮತ್ತೆ ಕೆಲವೊಬ್ಬರು ಪತ್ಲ, ಬಣ್ಣಬಣ್ಣದ ಜಂಪರ್‌ಗಳನ್ನು ಹಾಕುತ್ತಾರೆ. ಯುವತಿಯರು ಇಂದು ಮಾರಾಟವಾಗುವಂತ ಕಾಂಚೀಪುರಂ ರೇಷ್ಮೆಸೀರೆ, ಮೈಸೂರ್‌ಸಿಲ್ಕ್, ದಡೆ, ಕಾಟನ್ ಸೀರೆ, ವರ್ಕಕಿಂಗ್ ಸೀರೆ, ಎಮರೈಡಿಂಗ್ ಸೀರೆ, ಇಳಕಲ್‌ಸೀರೆ, ಮೊಸರಾಯಿಬಾಂಡ್, ತೋಮುಸೆರಗಿನ ಸೀರೆ, ಮೊಳಕಾಲ್ಮೂರು ಸೀರೆಗಳನ್ನು ಧರಿಸುವರು. ಆದರೆ ಇಂತ ಸೀರೆಗಳನ್ನು ಈ ಹಿಂದೆ ಮುದುಕಿಯರು ಹಾಕುವಂಥ ಕುಬುಸ ಈ ಮೇಲಿನ ಎಲ್ಲಾ ಸೀರೆಗಳನ್ನು ಫ್ಯಾಶನ್‌ಗಾಗಿ ಹಾಕಿಕೊಳ್ಳುವಂತ ಪದ್ಧತಿ ಮರುಕಳಿಸಿದೆ. ಇನ್ನಿತರ ಕಡಿಮೆ ದರದ ಪತ್ಲವನ್ನು, ಜಂಪರ್ ಧರಿಸುವಂತಹ ಬಡ ಮಹಿಳೆಯರು ಕಂಡು ಬರುವರು. ಚೂಡಿದಾರ ಇನ್ನಿತರ ಉಡುಗಳನ್ನು ಧರಿಸುವರು. ಚಿಕ್ಕ ಹುಡುಗಿಯರು ಲಂಗದಾವಣಿ, ಮಿಡಿ ಜೀನ್ಸ್ ಪ್ಯಾಂಟು, ಟೀ-ಶರ್ಟು, ಫೈಟ ಲಂಗ, ಲಾಚಾ, ಫ್ರಾಕ್, ಲೆಗಿನ್ಸ್, ರಿಂಕಲ್ ಪ್ಯಾಂಟ್, ಬೂಲನ್ ಪ್ಯಾಂಟು, ಚೂಡಿದಾರ ಮುಂತಾದ ಇತ್ತೀಚಿಗೆ ಬರುವಂತ ಎಲ್ಲ ಉಡುಪುಗಳನ್ನು ಧರಿಸುವರು. ಹಿರಿಯರಿಂದ ಹಿಡಿದು ಕಿರಿಯರವರೆಗೂ ಓಲೆ, ಬೆಂಡೋಲೆ, ಜುಮಕಿ, ಕಾಲುಚೈನ್, ಮೇಲುಗುಂಡು, ಬೋರ್‌ಮೊಳಸರ, ನೆಕ್ಲೇಸ್, ಪದಕ, ಗುಂಡು ಡ್ರಾಫ್, ಎಲೆಸರ, ಏಲಕ್ಕಿಸರ, ಮುಂತಾದ ಆಭರಣಗಳನ್ನು ಧರಿಸಿಕೊಂಡು ಈ ಜಾತ್ರೆಯಲ್ಲಿ ಭಾಗವಹಿಸುವರು.

೭.೯. ಅಂಗಡಿಗಳು : (Shops)

ಯಾವುದೇ ಒಂದು ಜಾತ್ರೆ ಅರ್ಥಪೂರ್ಣವಾಗಿ ಯಶಸ್ವಿಯಾಗಬೇಕಾದರೆ ಎಲ್ಲಾ ವರ್ತಕರು ಮುಖ್ಯವಾಗಿರುವರು. ಈ ಪೂರ್ವದ ದಿನಗಳಲ್ಲಿ ಎಲ್ಲೋ ಒಂದೆರಡು ಕಾಯಿ, ಕರ್ಪೂರದ ಅಂಗಡಿಗಳು, ಮಿಠಾಯಿ ಅಂಗಡಿ, ಒಂದೋ ಎರಡೋ ದಿನಸಿ ಅಂಗಡಿಗಳು, ಸುಧಾರಿತವಲ್ಲದ ಚಿಕ್ಕದಾದ ಜೋಗ್ಯರ್ ಅಂಗಡಿಗಳು ಬರುತ್ತಿದ್ದವು. ಆದರೆ ಇವತ್ತಿನ ದಿನಮಾನಗಳಲ್ಲಿ ಹಲವಾರು ರೀತಿಯ ವರ್ತಕರು ಈ ಜಾತ್ರೆಯಲ್ಲಿ ತಮ್ಮ ಅಂಗಡಿಗಳನ್ನು ಹಾಕುತ್ತಾರೆ. ಅಂತಹವರುಗಳಾದ "ವಿಭೂತಿ-ಕುಂಕುಮ ಭಂಡಾರದ, ದಿನಸಿ ಅಂಗಡಿ, ಸ್ಟೇಷನರಿ, ಪಾನ್ ಬೀಡಾ, ಐಸ್‌ಕ್ರೀಮ್, ಫಲಪುಷ್ಪ ಹಿತ್ತಾಳೆ-ತಾಮ್ರದ ವಸ್ತುಗಳನ್ನು ಮಾರುವರು. ದೇವರುಗಳ ಫೋಟೋ, ಪಳಾರ-ಜೆಂಡು

ಒತ್ತಾಸ, ಬಳೆಗಾರ, ಶರಭತ್,[⁸⁹] ಎಗ್‌ರೈಸ್, ತಂಪು ಪಾನೀಯ, ಕೆಲವು ಚಿಕ್ಕ ಚಿಕ್ಕ ಉಡುಪುಗಳ ಮುಂತಾದ ಅಂಗಡಿಗಳು ಬಂದಿರುತ್ತವೆ. ಈ ಎರಡೂ ಅವಧಿಯ ಜಾತ್ರೆಯಲ್ಲಿ ಕಂಡುಬರುತ್ತವೆ.

೭.೧೧. ಲಾಟರಿ ರಸಮಂಜರಿ ಕ್ರೀಡೆ : (Lottery Rasamanjari Sport)

ಇತ್ತೀಚಿಗೆ ವೃತ್ತಿಯ ವರ್ತಕರು ಬರುವುದಕ್ಕೆ ಪ್ರಾರಂಭಿಸಿದ್ದಾರೆ. ಐದು ರೂಪಾಯಿಗೆ ಒಂದು, ಹತ್ತು ರೂಪಾಯಿಗೆ ಮೂರು, ಇಪ್ಪತ್ತು ರೂಪಾಯಿಗೆ ಆರು ಟಿಕೆಟುಗಳನ್ನು ಮಾರಾಟ ಮಾಡುವವರು ಬಂದಿರುತ್ತಾರೆ. ಇವರು ಕೊಟ್ಟಿರುವ ಟಿಕೆಟ್‌ನಲ್ಲಿ ನಂಬರ್ ಯಾವುದು ಇದಿಯೋ ಆ ನಂಬರಿಗೆ ಸಂಬಂಧಪಟ್ಟಂತ ವಸ್ತು ಚಾರ್ಟನ್ನು ತಯಾರಿಸಿಕೊಂಡು ಆ ವಸ್ತುಗಳ ಮೇಲೆ ಲಾಟರಿ ನಂಬರನ್ನು ಅಂಟಿಸಿರುವರು. ಗ್ರಾಹಕರು ತಾವು ತೆಗೆದುಕೊಂಡಿರುವ ಟಿಕೆಟ್‌ನಲ್ಲಿರುವ ನಂಬರ್ ಆ ವಸ್ತುಗಳ ಮೇಲೆ ಅದೇ ಸಂಖ್ಯೆ ಇದ್ದರೆ, ಅದನ್ನು ಮಾಲಿಕರು ಕೊಡಬೇಕಾಗುತ್ತದೆ. ಇನ್ನೂ ಕೆಲವೊಂದು ರಿಂಗ್ ಹಾಕುವ ಆಟವಿರುತ್ತದೆ. ಐದು ರೂಪಾಯಿಗೆ ಎರಡು ರಿಂಗ್ ಹತ್ತು ರೂಪಾಯಿಗಳಿಗೆ ಐದು ರಿಂಗ್‌ಗಳನ್ನು ಕೊಟ್ಟು ಒಂದು ಆಯತಾಕಾರ ಅಥವಾ ಚೌಕಾಕಾರದ ಕಟ್ಟಿಗೆಯ ಬೋರ್ಡ್‌ನಲ್ಲಿ ಸುಮಾರು ನಂಬರಗಳನ್ನು ಹಾಕಿರುವರು. ರಿಂಗ್ ಹಾಕುವಂತವರು ತಮಗಿಷ್ಟವಾದ ನಂಬರಿಗೆ ಹಾಕುತ್ತಾರೆ. ಆ ರಿಂಗ್ ಯಾವ ನಂಬರಿಗೆ ಬಂದು ಬೀಳುತ್ತದೆ. ಅವರು ಬಂದಿರುವಂತಹ ನಂಬರಿಗೆ ಯಾವುದಕ್ಕಾದರು ಒಂದು ನಂಬರಿಗೆ ಬಿದ್ದರೆ ಅದಕ್ಕೆ ಎಷ್ಟು ಬೆಲೆ ಬರೆದಿರುತ್ತದೆ ಅಷ್ಟು ಹಣವನ್ನು ರಿಂಗ್ ಹಾಕುವವನಿಗೆ ಕೊಡಬೇಕಾಗುತ್ತದೆ. ಇಂತಹ ಹಲವಾರು ಲಾಟರಿಗಳು ಬಂದಿರುತ್ತವೆ.

ರಸಮಂಜರಿ ಕ್ರೀಡೆಗಳು ಈ ಮೊದಲು ಈ ಜಾತ್ರೆಗೆ ಬರುತ್ತಿರಲಿಲ್ಲ ಇತ್ತೀಚಿಗೆ ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನಗಳು ಬರುತ್ತಿರುವುದರಿಂದ ಈ ರಸಮಂಜರಿ ಕ್ರೀಡೆಗಳ ಅಂಗಡಿಯರು ಬಂದಿರುತ್ತಾರೆ. ವಿಶೇಷವಾಗಿ ಹನ್ನೆರಡು ವರ್ಷದೊಳಗಿನ ಮಕ್ಕಳಿಗಾಗಿ ಕ್ರೀಡೆಗಳು ಬಂದಿರುತ್ತವೆ. ಉದಾಹರಣೆಗೆ ಸುತ್ತಲೂ ಛತ್ರಿಯಂತೆ ಆಕಾರವನ್ನು ಹೊಂದಿರುವ ಮಧ್ಯಮಗಾತ್ರದ ಸುತ್ತಲೂ ಎಡಕ್ಕಿಂದ ಅಥವಾ ಬಲಕ್ಕಿಂದ ತಿರುಗುವಂತ ವಿವಿಧ ಪ್ರಾಣಿಗಳ ಪ್ರತಿರೂಪ ಹೊಂದಿರುವಂತಹ ಪ್ಲಾಸ್ಟಿಕ್ ಅಥವಾ ಮರದ ಕಟ್ಟಿಗೆಯಲ್ಲಿ ತಯಾರಿಸಿದ ಕುದುರೆ, ಆನೆ, ಸಿಂಹ, ಚಿರತೆ, ಇತ್ಯಾದಿ ಪ್ರಾಣಿಗಳ ಮೇಲೆ ಕುಳಿತಿರುವಂತ ಮಕ್ಕಳನ್ನು ಅದರ ಮಾಲೀಕರು ಕುಳ್ಳಿರಿಸಿ ಮೆಲ್ಲಗೆ ತಿರುಗುತ್ತಾ, ಸ್ವಲ್ಪ ಜೋರಾಗಿ ತಿರುಗಿಸಿದರೆ ತಿರುಗುತ್ತದೆ. ಈ ಕ್ರೀಡೆಗೆ ಐದು ನಿಮಿಷಗಳ ಸಮಯವನ್ನು ನಿಗದಿ ಪಡಿಸುತ್ತಾರೆ.

೭.೧೧. ಭಕ್ತರ ಪೂಜಾ ವಿಧಾನಗಳಲ್ಲಿ ಪರಿವರ್ತನೆ : (Conversion in the Methods of Worship of Believers)

ಭಕ್ತರು ಇಪ್ಪತ್ತು ವರ್ಷಗಳ ಹಿಂದಿನ ದಿನಗಳಲ್ಲಿ ತಾವು ಯಾವುದೇ ದೇವತೆಗೆ ಹೋಗಬೇಕಾದರೆ ತಮ್ಮ ಮನೆಯಿಂದಲೇ ಮಡಿ ಉಡಿ ಪ್ರಾರಂಭವಾಗುತ್ತಿತ್ತು. ಅವತ್ತೊಂದಿನ ಅದಕ್ಕಂತನೆ ಮೀಸಲಿಡುತ್ತಿದ್ದರು. ಕಾಯಿ, ಊದುಬತ್ತಿ, ಎಣ್ಣೆ, ಬತ್ತಿ, ಹೂವುಗಳು ಏನಾದರೂ ಬೇಕಾದರೆ ತಮ್ಮೂರಿನಿಂದಲೇ ತೆಗೆದುಕೊಂಡು ಹೋಗಿರುವಂತ ಸಂಗತಿಗಳಿವೆ. ನಾನೇ ಸುಮಾರು ಹತ್ತು ವರ್ಷದ ಬಾಲಕನಿದ್ದಾಗ ನಮ್ಮ ತಂದೆಯವರೊಂದಿಗೆ ಕುಷ್ಟಗಿ ತಾಲೂಕಿನ ಜಾಲಿಹಾಳ ದುರ್ಗಮ್ಮನ ಗುಡಿಗೆ ಹೋಗಬೇಕಾದರೆ ನಮ್ಮ ಮನೆಯಿಂದ ಎಣ್ಣೆ ಬತ್ತಿಯನ್ನು ಒಯ್ಯುವಾಗ ಚೆಲ್ಲಿಕೊಂಡು ಹೋಗಿದ್ದು ನೆನಪಾಗುತ್ತದೆ. ಅವಾಗಿನ ದಿನಗಳಲ್ಲಿ ಭಕ್ತರು ತಮ್ಮ ಪಾದರಕ್ಷೆಗಳನ್ನು ತಮ್ಮ ಮನೆಯಲ್ಲಿ ಬಿಟ್ಟು ಹೋಗುವುದು, ಪರಿಪಾಠವಿತ್ತು. ನಾಳೆ ಇಂತ ದೇವರಿಗೆ ಹೋಗುವುದು ಖಾತ್ರಿಯಾಗಿತ್ತೆಂದರೆ ಅವತ್ತು ರಾತ್ರಿ ಬೇಗ ಮಲಗಿ ಬೆಳಗ್ಗೆ ವಾರದ ದಿನ, ಅಥವಾ ಅಮಾವಾಸ್ಯೆ ದಿನ, ಬೇಗ ಎದ್ದು ಸ್ನಾನವನ್ನು ಮಾಡಿಕೊಂಡು ಊಟವನ್ನು ಮಾಡದೆ, ಯಾರ ಜೋಡಿನೂ, ಮಾತನಾಡದೇ ಓಣಿಯಲ್ಲಿ ಅವರಿವರ ಮುಖವನ್ನು ನೋಡದೆ ತಾವು ಹೋಗಬೇಕೆಂದು ಮನಸ್ಸು ಮಾಡಿದ ದೇವರುಗಳು ಎಷ್ಟು ದೂರ ಇದ್ದರೂ ಸಹ ಹೋಗುತ್ತಿದ್ದರು. ಇವರು ಕಾಯಿ, ಕರ್ಪೂರ, ಊದುಬತ್ತಿಯನ್ನು, ಪ್ಲಾಸ್ಟಿಕ್, ಗೊಬ್ಬರಚೀಲಗಳನ್ನು ಕೈಚೀಲದ ರೂಪದಲ್ಲಿ ಸಿದ್ಧಪಡಿಸಿ ಅದಕ್ಕೆ ವಿಶೇಷವಾಗಿ ಹಸಿರು, ಕೇಸರಿ, ನೀಲಿ, ಗುಲಾಬಿಬಣ್ಣ, ನೇರಳೆಬಣ್ಣ, ಇತ್ಯಾದಿ ಬಣ್ಣದ ನೂಲುಗಳಿಂದ ವಿವಿಧ ರೀತಿಯ ಡಿಸೈನ್‌ಗಳಿಂದ ಹೆಣಿಕೆ ಗೊಂಡಿರುವಂತ ಚೀಲವನ್ನೇ ಉಪಯೋಗಿಸುತ್ತಿದ್ದರು.

ಕೆಲವು ದಿನಗಳು ಕಳೆದಂತೆ ತಾವು ಒಯ್ಯುವಂತಹ ಚೀಲದಲ್ಲಿ ಬದಲಾವಣೆ ಕಂಡುಬಂತು. ಮೊದಲಿಗೆ ಈ ಮೇಲೆ ಹೇಳಿದಂತ ರೀತಿಯಲ್ಲಿ ಒಯ್ಯುತ್ತಿದ್ದ ಕೆಲವನ್ನು ಬಿಟ್ಟು ಅರವಿ (ಅರಬಿ) ಅಥವಾ ಬಟ್ಟೆಯಿಂದ ತಯಾರಿಸಿದ ಚೀಲಗಳನ್ನು, ಆ ಚೀಲಗಳ ಮೇಲೆ ಈಶ್ವರನ ಚಿತ್ರ ಹಾಗೂ ಇನ್ನಿತರ ಯಾವುದೇ ಚಿತ್ರವನ್ನು ಹೊಂದಿರುವ ಚೀಲಗಳು ಬಳಕೆಯಾಗುತ್ತಿದ್ದವು. ತದನಂತರ ಇವತ್ತು ಮಾರ್ಕೆಟ್‌ನಲ್ಲಿ ದೊರೆಯುವಂತ ಹತ್ತು ರೂಪಾಯಿ, ಹದಿನೈದು ರೂಪಾಯಿಯ, ಪ್ಲಾಸ್ಟಿಕ್ ವೈರ್‌ನಿಂದ ತಯಾರಿಸಿದಂತವು ಅಥವಾ ಕೆಲವೊಬ್ಬರು ಮನೆಯಲ್ಲಿಯೇ ಪ್ಲಾಸ್ಟಿಕ್ ವೈಯಾರದಲ್ಲಿ ಹೆಣೆದಿರುವಂತಹ ಚಿಕ್ಕದಾದ ಬಾಸ್ಕೆಟ್‌ಗಳನ್ನು, ತೆಗೆದುಕೊಂಡು ಹೋಗುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ತಾವು ದೇವರಿಗೆ ಹೋಗಬೇಕೆಂಬುದರ ಖಾತ್ರಿಯನ್ನೇ ಮಾಡಿಕೊಂಡಿರುವುದಿಲ್ಲ. ಇದ್ದಕ್ಕಿದ್ದಂತೆ ತಾವು ಸುಂದರವಾಗಿ ಶೃಂಗರಿಸಿಕೊಂಡು ಹೊಟ್ಟೆ ತುಂಬಾ ಊಟವನ್ನು ಮಾಡಿಕೊಂಡು, ತಮ್ಮ ಓಣಿ ಕೇರಿಗಳ ತುಂಬಾ ಸುದ್ದಿಯನ್ನು ಮಾಡಿಕೊಂಡು ಹೋಗುತ್ತಾರೆ. ಹೋಗುವಂತಹವರು ಮಹಿಳೆಯಾಗಿದ್ದರಂತೂ ಮುಗಿದೇ ಹೋಯಿತು. ಅದು ಇದು ಅಂತ ಶೃಂಗರಿಸಿಕೊಂಡು

ಹೊರಡುವ ಹೊತ್ತಿಗೆ ಮಧ್ಯಾಹ್ನ ಹನ್ನೊಂದು-ಹನ್ನೆರಡು ಗಂಟೆ ಸಮಯವಾಗಿಬಿಟ್ಟಿರುತ್ತದೆ. ಇವರು ಇಂತಹ ಗುಡಿಗಳಿಗೆ ಬರಬೇಕಾದರೆ ಚೆನ್ನಾಗಿರುವಂತ ಪಾದರಕ್ಷೆಗಳನ್ನು ಹಾಕಿಕೊಂಡು, ವೆನಿಟ ಬ್ಯಾಗ್ ಹಾಕಿಕೊಂಡು, ಬರುತ್ತಾರೆ. ಆದರೆ ಆ ವೆನಿಟ ಬ್ಯಾಗ್‌ನಲ್ಲಿ ಯಾವುದೇ ಪೂಜಾ ಸಾಮಗ್ರಿಗಳು ಇರುವುದಿಲ್ಲ. ಎಲ್ಲಾ ಅವರಿಗೆ ಹಾಗೂ ಮಕ್ಕಳಿಗೆ ಸಂಬಂಧಿಸಿದ ಪರಿಕರಗಳು ಇರುತ್ತವೆ. ಪುರುಷರಾದವರೇನು ಕಡಿಮೆ ಇರುವುದಿಲ್ಲ. ಇವರು ಅಷ್ಟೆ, ಇದ್ದಕ್ಕಿದ್ದ ಹಾಗೆ ತಯಾರಾಗಿ ಜೀನ್ಸ್ ಪ್ಯಾಂಟ್, ಟೀ-ಶರ್ಟ್, ಬೂಟ್ ಅಥವಾ ಪಾದರಕ್ಷೆಗಳನ್ನು ಧರಿಸಿಕೊಂಡು ತಮ್ಮದೇ ದ್ವಿಚಕ್ರವಾಹನವಿದ್ದರೆ, ಅದನ್ನೇ ತೆಗೆದುಕೊಂಡು, ಅಥವಾ ಸ್ವಂತದ್ದು ಇಲ್ಲವಾದರೆ ಸ್ನೇಹಿತರಿಂದ ವಾಹನವನ್ನು ಸಹಾಯ ಪಡೆದುಕೊಂಡು ಬರುತ್ತಾರೆ. ಇವರು ಊಟವನ್ನು ಮನೆಯಲ್ಲಿ ಮಾಡಿದರೆ ಮಾಡುತ್ತಾರೆ, ಇಲ್ಲ ಅಂದ್ರೆ ಮಾರ್ಗ ಮಧ್ಯದಲ್ಲಿರುವ ಹೋಟೆಲ್‌ನಲ್ಲಿ ಉಪಾಹಾರವನ್ನು ಸೇವಿಸಿ ಬರಿಗೈಯಿಂದ ಬರುತ್ತಾರೆ. ಗುಡಿಗಳಿಗೆ ಬಂದು ಒಂದು ಕಾಯಿ ಎರಡು, ಊದುಬತ್ತಿ ತೆಗೆದುಕೊಂಡರೆ ಇನ್ನೂ ಕೆಲವೊಬ್ಬರು ಆ ಕಾಯ ವ್ಯಾಪಾರಸ್ಥರು ಏನೇನು ಕೊಡುತ್ತಾರೋ ಕಾಯಿ ಕರ್ಪೂರ, ಕುಂಕುಮಚೀಟು, ಕಲ್ಲುಸಕ್ಕರೆಚೀಟು, ಲಿಂಬೆಹಣ್ಣು, ಎಣ್ಣೆ ಬತ್ತಿ, ಬಾಳೆಹಣ್ಣು, ಇತ್ಯಾದಿಗಳನ್ನು ತೆಗೆದುಕೊಂಡು ಹೋಗುವವರು ಕಂಡು ಬಂದರೆ, ಮತ್ತೆ ಕೆಲವರು ಕಾಯಿ ಕರ್ಪೂರ ಊದುಬತ್ತಿಯ ಗೋಜಿಗೆ ಹೊಗುವುದಿಲ್ಲ. 'ಬರಿಗೈ ಭಗವಾನ್ ದಾಸನಂತೆ' ಬಂದು ಹೋಗುವವರು ಇದ್ದಾರೆ. ಅಂದರೆ ಇತ್ತೀಚಿಗೆ ಇದು ಶೋಕಿಗೆ ಆರಾಧನೆ ಮಾಡುವಂತದ್ದು ಕಂಡುಬರುತ್ತದೆ.

೭.೧೨. ವಿಧಿ-ನಿಷೇಧಗಳಲ್ಲಿ ಪರಿವರ್ತನೆ : (Conversion on Fate-Prohibitions)

ನಂಬಿಕೆ ಹಾಗೂ ವಿಧಿ-ನಿಷೇಧಗಳಲ್ಲಿ ಈ ಪೂರ್ವದಲ್ಲಿ ಭಕ್ತರು ಅಪಾರವಾದಂತ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಆಕಸ್ಮಾತ್ ಅವುಗಳನ್ನು ಮೀರಿದರೆ ದೇವರು ಶಿಕ್ಷೆ ನೀಡುವನೆಂಬ ಭಯಭಕ್ತಿಯಿತ್ತು. ಆದರೆ ಇಂದು ವಿದ್ಯಾವಂತರ ಸಂಖ್ಯೆ ಹಾಗೂ ಬುದ್ಧಿವಂತರ ಸಂಖ್ಯೆ ಹೆಚ್ಚಾಗಿರುವದರಿಂದ ಸರಿ ತಪ್ಪುಗಳನ್ನು ತಿಳಿದು ನಂಬಿಕೆಗಳನ್ನು ಆಚರಿಸುತ್ತಾರೆ. ಹಿಂದೆ ಎಲ್ಲವನ್ನು ನಂಬಿದರೆ ಇವತ್ತು ಕೆಲವೊಂದನ್ನು ವೈಜ್ಞಾನಿಕ ದೃಷ್ಟಿಕೋನಗಳಿಂದ ವಿಧಿ-ನಿಷೇದಗಳನ್ನು ಅನುಸರಿಸುತ್ತಾರೆ. ಆದ್ದರಿಂದ ಅಂದಿನ ಕೆಲವು ನಂಬಿಕೆಗಳು ಪರಿವರ್ತನೆಯಾಗುತ್ತ ಬಂದಿವೆ.

೭.೧೩. ಪೂಜಾರಿಗಳಲ್ಲಿ ಬದಲಾವಣೆ : (A Change in Priesthood)

ಈ ದೇವಾಲಯದ ಪೂಜಾರಿಕೆ ಮಾಡುವ ಕುರಿತು ಹಾಗೂ ಆಡಳಿತಕ್ಕೆ ಸಂಬಂಧಿಸಿದಂತೆ ಸುಮಾರು ಇಪ್ಪತ್ತು ವರ್ಷಗಳಿಂದ ಜೀಳಿಗೆಯವರಿಗೆ ಮತ್ತು ಮನ್ನೇರಾಳದವರಿಗೂ ವಾದವಿವಾದಗಳು ಇರುವುದರಿಂದ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದೆ. ನಾನು ೨೦೧೭ರಂದು ಚಂದ್ರಗಿರಿಯ ಕ್ಷೇತ್ರಕಾರ್ಯಕ್ಕೆ ಹೋದಾಗ ಅಲ್ಲಿಯ ವಕ್ತೃಗಳಾದ ಸಂಗಯ್ಯಜ್ಜ ಸಾರಂಗಮಠದವರನ್ನು ಈ

ಗುಡಿಯ ಆಡಳಿತ ಮತ್ತು ಪೂಜಾರಿಕೆಯ ಬಗ್ಗೆ ಕೇಳಿದಾಗ ಅವರು ಹೇಳಿರುವಂತೆ "ನಮ್ಮ ಸಾರಂಗಮಠದವರೇ ಅದರ ಪೂಜಾರಿಕೆಯನ್ನು ಮೊದಲಿಗೆ ಮಾಡುತ್ತಿದ್ದರು. ಅನೇಕ ಕಾರಣಾಂತರಗಳಿಂದ ಜೀಳಗಿವರಿಗೆ ಬಿಟ್ಟು ಪ್ರಸ್ತುತವಾಗಿರುವ ಚಂದ್ರಗಿರಿಗೆ ಬಂದು ನೆಲೆಸಿದ್ದರು" ಎಂದು ಹೇಳುತ್ತಾರೆ. ಅದೇ ವರ್ಷ ಕ್ಷೇತ್ರಕಾರ್ಯಕ್ಕೆ ಚಂದಾಲಿಂಗೇಶ್ವರನ ಕ್ಷೇತ್ರಕ್ಕೆ ಹೋದಾಗ ಮನ್ನೇರಾಳದ ಚಂದನಗೌಡ ಶೆಟ್ಟಿಯವರ ಸಂಬಂಧಿಕರು ಪೂಜಾರಿಕೆಯನ್ನು ಪ್ರಾರಂಭಿಸಿದ್ದರು. ಪ್ರಸ್ತುತ ದಿನಗಳಲ್ಲಿ ಈ ಗುಡಿಯ ವ್ಯಾಜ್ಯವು ನ್ಯಾಯಾಲಯದಲ್ಲಿ ಇರುವುದರಿಂದ ಸರ್ಕಾರವೇ ತನ್ನ ಸುಪರ್ದಿಗೆ ತೆಗೆದುಕೊಂಡು ಚಂದ್ರಗಿರಿಯ ಮೂವರು ಪೂಜಾರಿಗಳನ್ನು ಮಾಸಿಕ ವೇತನಗಳಂತೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ದಿನನಿತ್ಯದ ಪೂಜಾ ಕಾರ್ಯಗಳನ್ನು ನೆಡೆಸಿರುತ್ತಾರೆ.

೭.೧೪. ಕ್ಷೇತ್ರಗಳಲ್ಲಿ ನಡೆಯುವ ಕಾರ್ಯಕ್ರಮಗಳು : (Programs in the Field)

ಕೆಲವು ವರ್ಷಗಳ ಹಿಂದೆ ಈ ಗುಡಿಯಲ್ಲಿ ಜಾತ್ರೆಯ ವೇಳೆಯಲ್ಲಿ ಮಾತ್ರ ಜನಪದರ ಸಾಂಪ್ರದಾಯಕ ಆಚರಣೆಗಳಾದ ದೀಡ್‌ನಮಸ್ಕಾರ, ಹಾಗೂ ಉರುಳುಸೇವೆ, ಜವುಳ, ಹರಕೆ, ಬೇಡಿಕೆಗಳು ನಡೆಯುತ್ತಿದ್ದವು. ಆದರೆ ಇಂದಿನ ದಿನಮಾನಗಳಲ್ಲಿ ಭಕ್ತರಿಗೆ ತಮಗೆ ಯಾವಾಗ ಅನುಕೂಲ ಇರುತ್ತದೆ, ಅಂತ ಅವಧಿಯಲ್ಲಿ ಬಂದು ತಮ್ಮ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುವರು. ಹಬ್ಬ, ಹುಣ್ಣಿಮೆ, ವಾರದ ದಿನಗಳಲ್ಲಿ, ಶ್ರಾವಣಮಾಸದಲ್ಲಿ, ಹಾಗೂ ಯಾವುದಾದರೂ ಶುಭ ದಿನಗಳು ಇದ್ದರೆ ಆ ಸಂದರ್ಭದಲ್ಲಿ ಮದುವೆ, ಮುಂಜಿ, ಜವುಳ, ದೀಡ್‌ನಮಸ್ಕಾರ, ಹರಕೆ, ಬೇಡಿಕೆಗಳು, ಬಾಸಿಂಗ ಬಿಡುವುದು, ಉರುಳುಸೇವೆ, ಅಭಿಷೇಕ ಮಾಡಿಸುವುದು ಕಂಡುಬರುತ್ತದೆ.

೭.೧೫. ಚಂದಾಲಿಂಗೇಶ್ವರನ ಸ್ಥಾನಿಕರಲ್ಲಿ ಪರಿವರ್ತನೆ : (Transition in Chandalingeshwara's Positioning)

ಚಂದಾಲಿಂಗೇಶ್ವರನ ಜಾತ್ರೆಯಲ್ಲಿ ಕುದುರೆಕಾರರು ಉತ್ಸವದಲ್ಲಿ ಕೊಂತ ದೇವರಿಗೆ ಹಾಗೂ ಮಳ್ಳಯ್ಯ ಮತ್ತು ವಗ್ಗಪ್ಪರಿಗೆ ಪವಾಡ ಮಾಡಲು ಭಕ್ತರನ್ನು ದೂರ ಚದುರಿಸುತ್ತ ಅವರಿಗೆ ಅನುಕೂಲ ಮಾಡುವರು. ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದ ಇವತ್ತು ಹಾಕಿಕೊಳ್ಳುವಂತ ವೇಷಭೂಷಣಗಳಲ್ಲಿ ಕೆಲವೊಂದು ಬದಲಾವಣೆಯಾಗಿವೆ. ಉದಾಹರಣೆಗೆ ಇವತ್ತು ಕಾಲಲ್ಲಿ ಕಟ್ಟುವ ಕಾಲ್ಗೆಜ್ಜೆಗಳು, ನಡುವಿಗೆ ಕಟ್ಟಿಕೊಳ್ಳುವಂತ ಕೆಂಪುವಸ್ತ್ರ, ಭಂಡಾರದ ಚೀಲ, ತಲೆಗೆ ಪೇಟ, ಧೋತ್ರ, ಛಾಟಿ, ನಡು ಗೆಜ್ಜೆ, ಕಾಲ್ಗೆಜ್ಜೆ, ಜೋಳಿಗೆ ಹೂವಿನ ಹಾರಗಳನ್ನು ಕಡ್ಡಾಯವಾಗಿ ಈಗ ವೇಷಭೂಷಣಗಳನ್ನು ಹಾಕಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕುದುರೆಕಾರರ ಸಂಖ್ಯೆ ಹೆಚ್ಚಾಗುತ್ತದೆ.

ಹೀಗೆ ಚಂದಾಲಿಂಗೇಶ್ವರನ ಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ ಜಾತ್ರೆಯಲ್ಲಿ ಪ್ರಸಾದ ವ್ಯವಸ್ಥೆ ಗುಡಿಯ ಕೆಲಸಕಾರ್ಯಗಳಲ್ಲಿ ವೇಷಭೂಷಣಗಳಲ್ಲಿ, ವಾದ್ಯಗಳಲ್ಲಿ, ಭಕ್ತರ, ಹರಿಕೆ, ಬೇಡಿಕೆಗಳಲ್ಲಿ ಅವರಿಗೆ ಅನುಕೂಲವಾದಂತ ಸ್ಥಿತಿಯಲ್ಲಿ ಅನುಸರಿಸುತ್ತ ತಮ್ಮ ಬದುಕಿನ ಆಚರಣೆಗಳನ್ನು ಕಟ್ಟು ನಿಟ್ಟಾಗಿ ಆಚರಿಸುತ್ತಾ ಬಂದಿದ್ದಾರೆ. ಚಂದಾಲಿಂಗೇಶ್ವರನ ಮೇಲೆ ಭಯ-ಭಕ್ತಿಯಿರುವುದರಿಂದ ಹಿರಿಯರಾದಂತವರು ತಮ್ಮ ಕುಟುಂಬದವರಿಗೆ ಪೂರ್ವದಲ್ಲಿದ್ದಂತ ಕೆಲವೊಂದು ಆಚರಣೆಗಳನ್ನು ಪದ್ಧತಿಗಳನ್ನು ಅನುಸರಿಸುವಂತೆ ಪ್ರೇರೇಪಿಸುವವರೂ, ಇದ್ದಾರೆ. ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯು ಕೆಲವೊಂದು ಜನಹಿತೋಪಕಾರ್ಯಗಳನ್ನು ಮಾಡುವುದರಿಂದ ಜನರ ಪ್ರಶಂಶೆಗೆ ಪಾತ್ರವಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

ಒಟ್ಟಾರೆಯಾಗಿ ಆಧುನಿಕತೆಯಲ್ಲಿ ಚಂದಾಲಿಂಗೇಶ್ವರ ಕ್ಷೇತ್ರವು ಪರಿವರ್ತನೆಯತ್ತ ಸಾಗುತ್ತಿದೆ. ಕ್ಷೇತ್ರದಲ್ಲಿ ಭೌತೀಕವಾಗಿ ಬದಲಾವಣೆಗಳಾದಾಗ ಕಚ್ಚ ರಸ್ತೆಗಳು ಡಾಮರೀಕರಣ ಹೊಂದಿವೆ. ಕ್ಷೇತ್ರದಲ್ಲಿ ಯಾವ ಯಾವ ಸ್ಥಳದಲ್ಲಿ ಯಾವ ದೇವಾಲಯಗಳಿವೆ ಎಂಬುದನ್ನು ಕೆಲವೊಂದು ಭಾಗಳಲ್ಲಿ ಮಾತ್ರ ಗುರುತಿಸಲಾಗಿದೆ. ಹಾಗೂ ಕುಷ್ಟಗಿ ತಾಲೂಕಿನ ಅರಣ್ಯ ಇಲಾಖೆಯಿಂದ ಅರಣ್ಯ ಸಂಪತ್ತಿನ ಬೆಳವಣಿಗೆಗೆ ಮತ್ತು ಕಾಡು ರಕ್ಷಣೆ ಕುರಿತು ಅಲ್ಲಲ್ಲಿ ಸೂಚನಾ ಫಲಕಗಳನ್ನು ಈ ಕ್ಷೇತ್ರದಲ್ಲಿ ಅಳವಡಿಸಿದ್ದಾರೆ. ಪರಿಸರ ನೈರ್ಮಲ್ಯವನ್ನು ಕಾಪಾಡಲು ಅರಣ್ಯ ಇಲಾಖೆಯವರು ಜನನಿಬಿಡ ಸ್ಥಳಗಳಲ್ಲಿ ಕಸದ ಬುಟ್ಟಿಗಳನ್ನು ಅಳವಡಿಸಿದ್ದಾರೆ. ಕ್ಷೇತ್ರಕ್ಕೆ ಬಂದಿರುವ ಭಕ್ತಾದಿಗಳು ವಿಶ್ರಾಂತಿಯನ್ನು ಪಡೆದುಕೊಳ್ಳಲು ಮರದಡಿಯಲ್ಲಿ ಸುಧಾರಿತ ವಾದಂತಹ ಕಲ್ಲುಗಳಲ್ಲಿ ತಯಾರಿಸಿದ ಬೆಂಚ್ಚುಗಳನ್ನು ಹಾಕಿದ್ದಾರೆ. ಮುಖ್ಯ ದೇವಾಲಯದ ಪೌಳಿಕಟ್ಟೆಯ ಸುಧಾರಣೆಯನ್ನು ಕೈಗೊಳ್ಳಲಾಗಿದೆ. ಕೆಲವು ಕಟ್ಟಡಗಳ ಅಲ್ಪಸ್ವಲ್ಪ ದುರಸ್ತಿಯ ಕಾರ್ಯವು ನಡೆದಿರುವುದು ಕಂಡುಬರುತ್ತದೆ.

ಆಚರಣೆ ಸಂಪ್ರದಾಯಗಳಲ್ಲಿ ಆಧುನೀಕರಣಗೊಂಡಿರುವಂತಹವುಗಳಾದ ಪ್ರಸಾದವ್ಯವಸ್ಥೆ, ಗುಡಿಯ ಕೆಲಸಕಾರ್ಯಗಳಲ್ಲಿ, ಜಾತ್ರೆಯ ದಿನ ಗುಡಿಯ ಅಲಂಕಾರ, ಭಕ್ತರ ಹರಕೆ, ಬೇಡಿಕೆಗಳು, ಸಂಗೀತ ಚಿತ್ತರಿಸುವ ಪರಿಕರಗಳಲ್ಲಿ, ಜಾತ್ರೆಗೆ ಬರುವಂತ ವಿವಿಧ ಅಂಗಡಿಗಳ ವರ್ತಕರುಗಳಲ್ಲಿ ಸುಧಾರಣೆ, ಭಕ್ತರ ವಿಧಿ-ವಿಧಾನಗಳಲ್ಲಿ, ಕ್ಷೇತ್ರದಲ್ಲಿ ನಡೆಯುವ ಸಾಂಪ್ರದಾಯಿಕ ಕಾರ್ಯಗಳಲ್ಲಿ ಹಾಗೂ ಚಂದಾಲಿಂಗೇಶ್ವರ ಸ್ಥಾನಿಕರಲ್ಲಿ ಹೀಗೆ ಹತ್ತು ಹಲವು ವಿಷಯಗಳಲ್ಲಿ ಆಧುನೀಕರಣ ಗೊಂಡಿರುವುದನ್ನು ಈ ಅಧ್ಯಯನದ ಮೂಲಕ ಕಂಡುಕೊಂಡಿದೆ. ಈ ಅಧ್ಯಯನದ ಚೌಕಟ್ಟು ಹಾಗೂ ಸಂಶೋಧನೆ ವ್ಸಯದ ಅವಧಿ ಮಿತಿಯನ್ನು ಗಣನೆಯಲ್ಲಿಟ್ಟುಕೊಂಡು ಒಟ್ಟು ಎಂಟು ಅಧ್ಯಾಯಗಳನ್ನಾಗಿ ವಿನ್ಯಾಸ ಮಾಡಿಕೊಂಡಿರುವೆ. ಆದ್ದರಿಂದ ಇಲ್ಲಿವರೆಗೆ ಏಳು ಅಧ್ಯಾಯಗಳನ್ನು ಅಧ್ಯಯನಮಾಡಿ ಅವುಗಳಲ್ಲಿ ಕಂಡುಕೊಂಡ ಫಲಿತಗಳು ಸಲಹೆಗಳು ಹಾಗೂ ಸಾಧ್ಯತೆಗಳು ಮತ್ತು ಅಧ್ಯಯನಕ್ಕೆ ಪೂರಕವಾದಂತ ಸಂಪನ್ಮೂಲಗಳಾದ ಗ್ರಂಥಗಳ ಋಣಿ, ವಕ್ತೃಗಳ ವಿವರ, ಸಾಂಸ್ಕೃತಿಕ ಪದಕೋಶ, ಛಾಯಾಚಿತ್ರಗಳನ್ನು ಒಳಗೊಂಡಂತೆ ವಿವರಮಾಹಿತಿಯನ್ನು ಈ ಮುಂದಿನ ಅಧ್ಯಾಯ ಎಂಟು ಉಪಸಂಹಾರದಲ್ಲಿ ತಿಳಿಯಲಾಗಿದೆ.

ಅಡಿಟಿಪ್ಪಣಿಗಳು

೧. ಬಸಪ್ಪನವರ್.ಸಿ.ಹೆಚ್, ಹಸಿರು-ಉಸಿರು,೧೯೯೦, ಪು.ಸಂ.೪

೨. ಬಸವರಾಜ.ಮಲಶೆಟ್ಟಿ, ಉತ್ತರಕರ್ನಾಟಕದ ಜನಪದ ವಾದ್ಯಗಳು, ೧೯೮೨, ಪು.ಸಂ.೫೪

೩. ಗುರುಮೂರ್ತಿ.ಕೆ.ಜಿ, ಕರ್ನಾಟಕ ಜಾನಪದ ಹಬ್ಬಗಳು ಮತ್ತು ಸಂಸ್ಕೃತೀಕರಣ, ೨೦೧೧, ಪು.ಸಂ.೭೪

೪. ಶರಣಪ್ಪ, ಆಧುನಿಕ ಪ್ರಕ್ರಿಯೆ: ಕುಷ್ಟಗಿ ಪರಿಸರದ ಪಾರಂಪರಿಕ ಕಸುಬುಗಳು(ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ) ೨೦೧೬,ಪು.ಸಂ.೧೧೦

೫. ಹಿರೇಮಠ.ಎಸ್.ಎಸ್., ಜಾತ್ರೆಗಳು, ೧೯೯೨, ಪು.ಸಂ.೭೮

ಅಧ್ಯಾಯ : ೮

ಉಪಸಂಹಾರ

(Concluding)

* ಫಲಿತಗಳು
* ಸಾಧ್ಯತೆಗಳು
* ಅನುಬಂಧಗಳು

೧. ಆಧಾರ ಗ್ರಂಥಗಳು

೨. ವಕ್ತೃಗಳವಿವರ

೩. ಸಾಂಸ್ಕೃತಿಕ ಪದಕೋಶ

೪. ಛಾಯಾಚಿತ್ರಗಳು

ಅಧ್ಯಾಯ : ಎಂಟು
ಉಪಸಂಹಾರ
(Concluding)

ನಮ್ಮ ಸಂಸ್ಕೃತಿಯ ಪರಂಪರೆಯು ಇಡೀ ಇಂಡಿಯಾ ದೇಶದ ತುಂಬ ಹಾಸುಹೊಕ್ಕಾಗಿ ಹರಡಿದೆ. ವಿವಿಧ ಜಾತಿ ಧರ್ಮಗಳಲ್ಲಿ ಜನಪದರುಗಳು ತಮ್ಮ ದೈವಗಳ ಆರಾಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇಂಥ ಸಾಂಸ್ಕೃತಿಕ ಆಚರಣೆಗಳು ಜೀವಂತವಾಗಿ ಉಳಿಯಲು, ದೇಶ ಹಾಗೂ ನಾಡಿನಲ್ಲಿರುವ ಎಲ್ಲಾ ಸಮುದಾಯಗಳು ತಮ್ಮ ತಮ್ಮ ಜನಪದೀಯ ಸಂಪ್ರದಾಯಗಳನ್ನು ಆಚರಿಸುತ್ತಾ ಬರುತ್ತಿದ್ದಾರೆ. ಎಲ್ಲಾ ಸಮುದಾಯದವರು ತಮ್ಮ ದೇವತೆಗೆ ಆರಾಧನೆಯನ್ನು ನಡೆಸಿರುವರು. ಕೆಲವೊಂದು ಸಮಯದಲ್ಲಿ ಆ ಭಾಗದ ಎಲ್ಲಾ ಧರ್ಮದವರು ಹಾಗೂ ಎಲ್ಲಾ ಸಮುದಾಯದವರು ಸೇರಿಕೊಂಡು ತಮ್ಮ ಭಾಗಕ್ಕೆ ಒಬ್ಬ ಸಾಂಸ್ಕೃತಿಕ ವೀರನನ್ನು ಗುರುತಿಸಿಕೊಂಡು, ಆತನ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಹೀಗೆ ಸಾಂಸ್ಕೃತಿಕ ಆಚರಣೆಗೆ ಪ್ರಮುಖನಾದ ದೇವತೆಗೆ ಅವರು ವರ್ಷಕ್ಕೆ, ಕಾಲಕಾಲಕ್ಕೆ ಸಂಬಂಧಿಸಿದಂತೆ ಆಚರಣೆಗಳನ್ನು ಅನುಸರಿಸಿಕೊಂಡು ಬರುವವರಾಗಿರುತ್ತಾರೆ. ಆ ಸಾಂಸ್ಕೃತಿಕ ವೀರನ ಕೃಪೆಗೆ ಪಾತ್ರರಾಗಲು ಜನಪದರುಗಳು ಹಲವಾರು ಪವಾಡಗಳು, ಧಾರ್ಮಿಕ ವಿಧಿ-ವಿಧಾನಗಳನ್ನು, ನಂಬಿಕೆ ಹಾಗೂ ನಿಷೇಧಗಳು ಮುಂತಾದ ಭಕ್ತಿಯ ಪರಂಪರೆ ಹೊಂದಿರುತ್ತಾರೆ. ತಮ್ಮ ಎಲ್ಲಾ ಕೆಲಸ ಕಾರ್ಯಗಳಲ್ಲಿ ಆತನನ್ನೇ ನೆನೆಯುತ್ತಾ ಕಾರ್ಯಪ್ರವೃತ್ತರಾಗಿರುವರು. ಭಕ್ತರು ತಮ್ಮ ಭಾಗದ ಸಾಂಸ್ಕೃತಿಕ ವೀರನಿಗೆ ಅಧೀನರಾಗಿ ತಾವು ನಡೆಸುವಂತ ಸಾಮಾಜಿಕ ಕ್ರಿಯಾ ವಿಧಗಳಲ್ಲಿಯೂ ಆತನನ್ನೇ ನೆನೆಯುತ್ತಾರೆ. ಹೀಗೆ ಅಂಥ ಹಲವಾರು ಸಮುದಾಯಗಳು ಸೇರಿಕೊಂಡು ಸಾಂಸ್ಕೃತಿಕ ಆಚರಣೆಯ ದೃಷ್ಟಿಗೆ ಪಾತ್ರನಾಗಿರುವ 'ಚಂದಾಲಿಂಗೇಶ್ವರನೂ' ಒಬ್ಬ ಸಾಂಸ್ಕೃತಿಕ ವೀರ ಪುರುಷನಾಗಿದ್ದಾನೆ.

'ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ' ಎಂಬ ಮಹಾಪ್ರಬಂಧದಲ್ಲಿ ಆತನ ಬಗ್ಗೆ ಹಲವಾರು ಉದ್ದೇಶಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಜನಗಳಿಂದ ಈತನ ವಿವಿಧ ಸಾಂಸ್ಕೃತಿಕ ಆಚರಣೆಯ ಆಯಾಮಗಳು ತಿಳಿಯುತ್ತವೆ. ಈ ಸಾಂಸ್ಕೃತಿಕ ಪುರುಷನ

ಅಧ್ಯಯನಕ್ಕೆ ಒಂದು ಚೌಕಟ್ಟನ್ನು ಅಥವಾ ವ್ಯಾಪ್ತಿಯನ್ನು ಹಾಕಿಕೊಂಡು ಅಧ್ಯಯನ ಗೈಯಲಾಗಿದೆ. ಏಕೆಂದರೆ ದೈವದ ಆಚರಣೆಯಲ್ಲಿ ಮುಖ್ಯವಾಗಿ ಯಾವ ಯಾವ ಗ್ರಾಮದವರು ಆಚರಣಾ ಕಾರ್ಯದಲ್ಲಿ ತೊಡಗುವವರು ಎಂಬುವುದು ತಿಳಿಯುತ್ತದೆ. ಇದರಿಂದ ಒಂದು ದೈವದ ಸಾಂಸ್ಕೃತಿಕ ಆಚರಣೆಯ ಕಾರ್ಯದಲ್ಲಿ ತೊಡಗಲು ಯಾವುದೇ ಕಾರಣಗಳಿರುವುದಿಲ್ಲ, ಆದರೆ ಇವತ್ತಿನ ಜನಸಮುದಾಯಗಳು ತಮ್ಮ ಆರಾಧ್ಯ ದೈವಗಳಿಗೆ ಚೌಕಟ್ಟನ್ನು ಹಾಕಿಕೊಂಡಿದ್ದಾರೆ. ಈ ಕ್ಷೇತ್ರದ ಸುತ್ತಲೂ ಬರುವಂತಹ ಗ್ರಾಮದವರಾದ ಗುಡೂರುನಿಂದ ಮಳ್ಳಯ್ಯಜ್ಜನು, ಬರುತ್ತಾನೆ. ಕಾರಣ ಆ ಊರಿನಲ್ಲಿರುವ ಹುಲ್ಲೇಶ್ವರನು ಚಂದಾಲಿಂಗೇಶ್ವರನಿಗೆ ಸಹಸಂಬಂಧ ಹೊಂದಿರುವುದರಿಂದ ಈ ಪೂರ್ವದ ಮೂರು ದಿನಗಳ ಮುಂಚಿತವಾಗಿ ಅಲ್ಲಿಯ ಆಚರಣೆಗೆ ಬಂದಿರುತ್ತಾನೆ. ಇದೇ ರೀತಿ ಬೀಳಗಿಯಿಂದ ಕೊಂತ ಹೊರುವಂತವರು, ಕಬ್ಬರಗಿಯಿಂದ ಸರಪಳಿ ಪವಾಡ ಮಾಡುವಂತವರು, ಮನ್ನೇರಾಳದಿಂದ ವಗ್ಗಯ್ಯ, ಹಾಗೂ ಖಂಡೇದೇವರು ಬರುತ್ತಾರೆ.

ಪ್ರಸ್ತುತ ಮಹಾಪ್ರಬಂಧವಾದ 'ಚಂದಾಲಿಂಗೇಶ್ವರ ಸಾಂಸ್ಕೃತಿಕ ಸಂಕಥನ' ಎಂಬ ಶೀರ್ಷಿಕೆಯಡಿಯಲ್ಲಿ ತಯಾರಿಸಲು ಹಲವರು ಸಂಶೋಧನಾ ವಿಧಾನಗಳನ್ನು ಕೈಗೊಳ್ಳುವುದರ ಮೂಲಕ ವಿಷಯವನ್ನು ಸಂಗ್ರಹಿಸಿ ಕಟ್ಟಿ ಕೊಟ್ಟಿದ್ದೇನೆ. ಈ ಪ್ರಬಂಧದಲ್ಲಿ ಮಾಹಿತಿ ಸಂಗ್ರಹಕ್ಕಾಗಿ ಕ್ಷೇತ್ರಕಾರ್ಯದಲ್ಲಿರುವ ಬದ್ಧ ಪದ್ಧತಿ, ಹಾಗೂ ಮುಕ್ತ ಪದ್ಧತಿಯನ್ನು, ಬಳಕೆ ಮಾಡಿಕೊಂಡು ವ್ಯಕ್ತಿ, ಕುಟುಂಬ, ಹಾಗೂ ಸಮುದಾಯವನ್ನು, ನೇರವಾಗಿ ಭೇಟಿಯಾಗಿ ಈ ಕ್ಷೇತ್ರದ ಬಗ್ಗೆ ಇರುವಂತ ಮಾಹಿತಿಯನ್ನು ಸಂಗ್ರಹಿಸಿಕೊಂಡಿರುವೆ. ಈ ಎಲ್ಲಾ ಪ್ರಾಥಮಿಕ ಆಕರಗಳಿಂದ ಸಂಗ್ರಹಿಸಿದ ಮಾಹಿತಿಯಿಂದ ಪ್ರಬಂಧವನ್ನು ರಚಿಸುವಾಗ ಕೆಲವೊಂದು ಮಾಹಿತಿಯು ಕೊರತೆ ಬಿದ್ದಾಗ, ದೂರವಾಣಿಯ ಮೂಲಕ ಸಂಪರ್ಕಿಸಿ ವಿಷಯವನ್ನು ಸಂಗ್ರಹಿಸಿಕೊಂಡು ರಚಿಸಿದ್ದೇನೆ. ಈ ಮಹಾಪ್ರಬಂಧದ ರಚನೆಗಾಗಿ ಪ್ರಾಥಮಿಕ ಮಾಹಿತಿ ಸಂಗ್ರಹಗಳಾದ ಸಂದರ್ಶನದ ಮೂಲಕ, ಹಲವಾರು ವಕ್ತೃಗಳಿಗೆ ಭೇಟನೀಡಿ ಆಚರಣೆ, ನಂಬಿಕೆ, ಸಂಪ್ರದಾಯಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ. ಈ ಸಂದರ್ಶನ ವಿಧಾನದಲ್ಲಿ ಆಯಾ ಆಚರಣೆಗೆ ಸಂಬಂಧಿಸಿದ ಸ್ಥಾನಿಕರನ್ನೇ ಖುದ್ದು ಭೇಟಿಮಾಡಿ ಅವರ ಆಚಾರ-ವಿಚಾರಗಳನ್ನು ತಿಳಿದಿದ್ದೇನೆ. ಐದರಿಂದ ಹತ್ತು ವಕ್ತೃಗಳನ್ನು ಹಾಗೂ ಕೆಲವೊಂದು ವಿಷಯದ ಬಗ್ಗೆ ಸಂಶಯ ಬಂದಾಗ ಇನ್ನೂ ಐದು ವಕ್ತೃಗಳಿಗೆ ಭೇಟಿಯಾಗಿ ವಿಷಯವನ್ನು ಸಂಗ್ರಹಿಸಿದ್ದೇನೆ. ಇದಲ್ಲದೆ ಕೆಲವೊಂದು ಸಂದರ್ಭದಲ್ಲಿ ಅಲ್ಲಿ ನಡೆಯುವಂತಹ ಪವಾಡಗಳನ್ನು, ಆಚರಣೆಗಳನ್ನು, ಅವಲೋಕನ ಮಾಡುವುದರೊಂದಿಗೆ, ಇಂಥ ಹಲವಾರು ವಿಷಯಗಳನ್ನು ಸಂಗ್ರಹಿಸಿದ್ದೇನೆ. ಕೆಲವೊಂದು ಸಂದರ್ಭದಲ್ಲಿ ಮಾಹಿತಿ ತುರ್ತಾಗಿ ಪಡೆಯಲು ಪ್ರಶ್ನಾವಳಿಯನ್ನು ರಚಿಸಿ ಏನು? ಯಾಕೆ? ಹೇಗೆ? ಎಲ್ಲಿ? ಯಾವಾಗ? ಎಂಬ ಹಲವಾರು ಪ್ರಶ್ನೆಗಳನ್ನು ಮಾಹಿತಿದಾರರಿಗೆ ಹಾಕಿ ಮಾಹಿತಿ ಸಂಗ್ರಹಿಸಿಕೊಂಡಿದ್ದೇನೆ. ಇದಷ್ಟೇ ಅಲ್ಲದೆ ಆನುಷಂಗಿಕ ಮೂಲದಿಂದ ಮಾಹಿತಿಯನ್ನು, ಸಂಗ್ರಹಿಸಿಕೊಂಡು ಅದಕ್ಕೆ ಪೂರಕವಾದಂತೆ

ಬಳಸಿಕೊಂಡು ವಿಶ್ಲೇಷಿಸಿದ್ದೇನೆ. ನಮ್ಮ ಸಂಶೋಧನೆಯ ಕಾರ್ಯಭಾರವನ್ನು ಕಡಿಮೆಮಾಡಿಕೊಳ್ಳಲು ಧ್ವನಿಮುದ್ರಿಕೆ, ವಿಡಿಯೋ ಕ್ಯಾಮೆರಾ, ಮೊಬೈಲ್ ಫೋನ್, ಫೋಟೋ ಕ್ಯಾಮೆರಾ, ಕಂಪ್ಯೂಟರ್, ಅಂತರ್ಜಾಲ, ಮುದ್ರಣಯಂತ್ರವನ್ನು ಬಳಕೆ ಮಾಡಿಕೊಂಡಿರುವೆ.

ಇದುವರೆಗೂ ಚಂದಾಲಿಂಗೇಶ್ವರನ ಕುರಿತು ಯಾರೂ ಸಂಶೋಧನೆಯನ್ನು ಕೈಗೊಂಡಿರುವುದಿಲ್ಲ. ಕೇವಲ ಒಂದೋ, ಎರಡೋ, ಬಿಡಿ ಲೇಖನ ಪ್ರಕಟವಾಗಿದ್ದನ್ನು ಬಿಟ್ಟರೆ, ಇನ್ನೊಂದು ಚಂದಾಲಿಂಗೇಶ್ವರನ ಹಾಗೂ ಹುಲ್ಲಪ್ಪನಿಗೆ ಸಂಬಂಧಿಸಿದಂತೆ ಪುರಾಣಾಧರಿತ ಕಿರು ಪುಸ್ತಕ ಬಂದಿವೆ. ಆದರೆ ಬೇರೆ ಯಾರೂ ಸಮಗ್ರವಾದಂತ ಸಂಶೋಧನೆ ಕೈಗೊಂಡಿರುವುದಿಲ್ಲ. ಇದರಿಂದ ಈತನ ಬಗ್ಗೆ ಸಂಶೋಧನೆ ಕೈಗೊಂಡಿರುವುದರಿಂದ ಸಾಧ್ಯವಾದಷ್ಟು ಮಟ್ಟಿಗೆ ಸಂಪೂರ್ಣವಾಗಿ ಹಾಗೂ ಸಮರ್ಪಕವಾದ ಸಂಶೋಧನೆಯನ್ನು ಮಾಡಲಾಗಿದೆ. ಈತನ ಮೂಲವನ್ನು ತಿಳಿಯುವಾಗ ಕೆಲವೊಂದು ಪುರಾಣ ಆಧರಿತ ಕಥೆಗಳು ಪೂರಕವಾಗಿ ಸಹಾಯಕವಾಗಿವೆ. ಅವುಗಳನ್ನು ಸಂಶೋಧನ ದೃಷ್ಟಿಯಿಂದ ನೋಡಿ ಅವರು ಯಾರು? ಏನು? ಎಂದು ತಿಳಿದುಕೊಳ್ಳಲಾಗಿದೆ. ಚಂದಾಲಿಂಗೇಶ್ವರನ ಪೂರ್ವಜರ ಹಿನ್ನೆಲೆಯನ್ನು ಅಧ್ಯಯನ ಮಾಡಿದಾಗ ಒಂದನೇ, ಎರಡನೇ, ತಲೆಮಾರಿನ, ಚರಿತ್ರೆಯನ್ನು ಹೊಂದಿದ್ದಾನೆ. ಹೀಗೆ ಆತನ ಪೂರ್ವಜರ ವೃತ್ತಾಂತದಿಂದ ಈತನವರೆಗೂ ಇರುವಂತ ಮಾಹಿತಿಯನ್ನು ವಿಶ್ಲೇಷಣೆ ಮಾಡಲಾಗಿದೆ. ಆ ಮೂರನೆ ತಲೆಮಾರಿನಲ್ಲಿ ಜನನದ ಲಿಂಗದೇವನು, ಚಂದಾಲಿಂಗನಾಗಿ ಪರಿವರ್ತನೆಯಾದದ್ದನ್ನು ವಿಶ್ಲೇಷಿಸಲಾಗಿದೆ. ಚಂದಾಲಿಂಗೇಶ್ವರನ ವೈವಾಹಿಕ ಜೀವನದ ಹಿನ್ನೆಲೆ, ಹುಲ್ಲಪ್ಪನನ್ನು ಸಾಕು ಪುತ್ರನನ್ನಾಗಿ ಪಡೆದುಕೊಂಡಿರುವಂತಹ ಕಥೆ, ಹುಲ್ಲಪ್ಪನ ಬಾಲ್ಯದ ದಿನಗಳು ಕಳೆದಿರುವಂತ ಸಂಗತಿಯನ್ನು ಅಧ್ಯಯನದಿಂದ ವಿಶ್ಲೇಷಣೆ ಮಾಡಿರುವೆ. ಹುಲ್ಲಪ್ಪನು ಕಾಮಧೇನುವಿನ ಶಿರಚ್ಛೇದ ಮಾಡಿದ್ದರಿಂದ ಚಂದಾಲಿಂಗೇಶ್ವರನು ಮೈಲಾರಕ್ಕೆ ಬಂದು ಹುಲ್ಲಪ್ಪನನ್ನು ಕೊಲ್ಲುವುದಕ್ಕೆ ಹುಡುಕುತ್ತಿರುವನು. ಅಂತಹ ಸಂದರ್ಭದಲ್ಲಿ ಆ ಹುಡುಗನಿಗೆ ಮಣಿಕಾಸುರ ಮಲ್ಲಸುರರು ಆಶ್ರಯ ನೀಡುತ್ತಾರೆ. ಆ ಮೈಲಾರ ಪ್ರದೇಶದಲ್ಲಿ ಚಂದಾಲಿಂಗೇಶ್ವರ ಹಾಗೂ ಮಲ್ಲ-ಮಣಿಕಾಸುರ ಮಧ್ಯೆ ಯುದ್ಧ ನಡೆದಾಗ, ಚಂದಾಲಿಂಗೇಶ್ವರ ಮೂರ್ಚ್ಛಿತನಾಗಿರುತ್ತಾನೆ. ಇದರಿಂದ ಗಂಗೆ ಮಾಳಮ್ಮ ಬಂದು ಆತನನ್ನು ಬದುಕಿಸಲು ತಪಸ್ಸು ಮಾಡುವಳು.

ಅವತಾರ ಪುರುಷನಾಗಿ ಚಂದಾಲಿಂಗನು ಆ ರಾಕ್ಷಸರ ವಿರುದ್ಧ ಯುದ್ಧಕ್ಕೆ ಹೊರಡುತ್ತಾನೆ. ಮೊದಲಿಗೆ ಮಲ್ಲಾಸುರನೊಂದಿಗೆ ಯುದ್ಧ ಜರುಗಿ, ನಂತರ ಮಣಿಕಾಸುರನೊಂದಿಗೆ ಹೋರಾಡಿ ಸೋಲಿಸಿ ಆ ರಾಕ್ಷಸರ ಕೋರಿಕೆಯಂತೆ ಅವರಿಗೆ ವರ ಪ್ರದಾನ ಮಾಡುವನು. ಮಲ್ಲಾಸುರನಿಗೆ ಶ್ರೀಹರಿಯಿಂದ ಹಿತೋಪದೇಶ ನಡೆದರೂ ಸಹ ಘೃತಮಾರಿ ಮಾಳವ್ವನೊಂದಿಗೆ ಮಲ್ಲಾಸುರನ ಯುದ್ಧ ಜರುಗುತ್ತದೆ. ಗಂಗಿಮಾಳವ್ವಳ ಮೂರ್ಛಿತದಿಂದ ಚಂದಾಲಿಂಗ ಹಾಗೂ ಮಲ್ಲಾಸುರರ ಪುನರ್ ಯುದ್ಧ ನಡೆಯುವುದು. ಯುದ್ಧದ ಪರಿಣಾಮವಾಗಿ ಚಂದಾಲಿಂಗ ಜಯಶಾಲಿಯಾಗಿ

ಮಲ್ಲಾಸುರನ ಅಪೇಕ್ಷೆಯಂತೆ ವರಪ್ರದಾನ ಮಾಡುವನು. ತದನಂತರ ಆ ರಾಕ್ಷಸರ ಮಕ್ಕಳು ಚಂದಾಲಿಂಗನಿಗೆ ತೊಂದರೆ ನೀಡಿದ್ದರಿಂದ ಅವರಿಗೆ ಶಾಪಗೈದು ಮೈಲಾರದಲ್ಲಿ ಶಿವನ ಸ್ವರೂಪಿಯಾಗಿ ನೆಲೆಸುತ್ತಾನೆ. ಮರಳಿ ಚಂದಲಿಂಗನು ಶಿವನಸ್ವರೂಪಿಯಾಗಿ ಪ್ರತ್ಯಕ್ಷನಾಗಿ ಕೊನೆಗೆ ತನ್ನ ಮಗನಾದ ಹುಲ್ಲಪ್ಪನನ್ನು ಹುಡುಕುತ್ತ ಚಂದಾಲಿಂಗನ ವೇಷಧರಿಸಿ ಗುಡೂರಿಗೆ ಬಂದನು.

ಚಂದಾಲಿಂಗೇಶ್ವರನ ಕ್ಷೇತ್ರವು ಹಲವಾರು ಗುಡಿಗಳ ಸಮೂಹವನ್ನೇ ಹೊಂದಿರುತ್ತದೆ. ಕ್ಷೇತ್ರಕ್ಕೆ ಬಂದಂತವರಿಗೆ ಅಲ್ಲಿರುವ ಎಲ್ಲಾ ದೇವರುಗಳಾದ ಗಂಗಿಮಾಳಮ್ಮ, ವೀರಭದ್ರದೇವರು, ಕಾಲಕಾಲೇಶ್ವರ, ಹಂಪಿ ವಿರೂಪಾಕ್ಷೇಶ್ವರ, ಕೂಡಲಸಂಗಮೇಶ್ವರ, ಇನ್ನೂ ಇತ್ಯಾದಿ ದೇವತೆಗಳ ದರ್ಶನವಾಗುತ್ತದೆ. ಕೆಲವು ಐತಿಹಾಸಿಕ ಕಟ್ಟಡಗಳಾದ ಕೋಟೆ ಗುಡಿಗಳು, ಶಿಬಾರಗಳು, ಸ್ಥಾಪಿತವಾಗಿರುವುದರ ಬಗ್ಗೆ ತಿಳಿಯಲಾಗಿದೆ. ಈ ಪ್ರದೇಶದ ಕೆಲವು ವಿಶೇಷತೆಯಿಂದ ಕೂಡಿರುವಂತಹ ಹೆಸರಿಲ್ಲದ ಮರ, ಕೆಸರಿಲ್ಲದ ಕೋಟೆ, ಬಿಸಿಲು ಬೀಳದ ಬಾವಿ, ನುಡಿ ಹೇಳುವ ಮರ, ಮತ್ತು ಮಂಟಪಗಳು ಸೃಷ್ಟಿಸಿರುವುದು ವೈಶಿಷ್ಟವಾಗಿದೆ.

ಚಂದಾಲಿಂಗೇಶ್ವರನ ಆಚರಣೆಗಳು ಜನಪದರಲ್ಲಿ ಭಯ ಭಕ್ತಿಯಿಂದ ಕೂಡಿರುತ್ತವೆ. ಆದರೂ ಸಹ ಹಲವಾರು ಸಮುದಾಯಗಳು ಹಾಗೂ ವಿವಿಧ ಧರ್ಮದವರೂ ಕೂಡ ಈತನಿಗೆ ಸಂಬಂಧಪಟ್ಟಿರುವಂತ ವಾರ್ಷಿಕಾವರ್ತನ ಹಾಗೂ ಜೀವನಾವರ್ತನದ ಆಚರಣೆಗಳನ್ನು ಅನುಸರಿಸುತ್ತಾರೆ. ದಿನಂಪ್ರತಿ, ವಾರದ ದಿನಗಳು, ಹುಣ್ಣಿಮೆ, ಅಮಾವಾಸ್ಯೆ, ಹಾಗೂ ಹಬ್ಬ-ಹರಿದಿನಗಳಲ್ಲಿ ಈತನಿಗೆ ಸಂಬಂಧಿಸಿದಂತೆ ಏನೇನು ಮಾಡಬೇಕು ಅದನ್ನು ಮಾಡುತ್ತಿರುವರು. ಜಾತ್ರೆಯ ದಿನಗಳಲ್ಲಿ ವಿವಿಧ ಭಾಗಗಳಿಂದ ಜನರು ಸೇರಿ ಸರಪಳಿ ಪವಾಡ, ನುಡಿ ಹೇಳಿಕೆ, ಕೊಂತದ ಸೂಚಕಗಳನ್ನು ಅರಿತುಕೊಂಡು ತಮ್ಮ ಕೃಷಿಗೆ, ಮಳೆ ಬೆಳೆಯ ಮೇಲೆ ಭವಿಷ್ಯ ಕಟ್ಟಿಕೊಳ್ಳುವರು. ಸುಗ್ಗಿ ಜಾತ್ರೆಯಲ್ಲಿ ನಡೆಯುವಂತ ಚಂದಾಲಿಂಗಪ್ಪ ಹಾಗೂ ಗಂಗಿಮಾಳಮ್ಮನವರ ವಿವಾಹದ ವಿಧಿ-ವಿಧಾನಗಳನ್ನು ಭಕ್ತರು ತಿಳಿಯುತ್ತಾರೆ. ಭಂಡಾರದ ಪವಾಡ ವಾಗುವುದನ್ನು ಇವರು ಮಳೆಗಾಲದ ಭವಿಷ್ಯವನ್ನು ತಿಳಿಯುವರು. ವರ್ಷದ ಎರಡೂ ಜಾತ್ರೆಗೆ ಬರುವಂತಹ ವರ್ತಕರ ಮಾರಾಟದ ವಿವಿಧ ಕ್ರಮಗಳು ಹಾಗೂ ತಂತ್ರಗಳನ್ನು ತಿಳಿಯಲಾಗುತ್ತದೆ.

ನಂಬಿಕೆ ಮತ್ತು ವಿಧಿ-ನಿಷೇಧಗಳಿಗೆ ಸಂಬಂಧಿಸಿದಂತೆ ಚಂದಾಲಿಂಗೇಶ್ವರನ ಭಕ್ತರು ನಂಬಿಕೆಗಳನ್ನು ಅನುಸರಿಸುವಂತೆ ಅವರ ಜನನ, ವಿವಾಹ, ಮರಣ, ಹಬ್ಬ-ಹರಿದಿನ, ಹಾಗೂ ಭಂಡಾರದ ಹಿನ್ನೆಲೆಯಲ್ಲಿಯೂ ಜನಪದರು ಇಂಥ ನಂಬಿಕೆಗಳಿಗೆ ತದ್ವಿರುದ್ಧವಾಗಿ ನಡೆಯದಿರುವುದು ತಿಳಿಯುತ್ತದೆ. ದೇವತೆಯ ಅಪಾರವಾದ ನಂಬಿಕೆಯಿಂದ ವ್ಯವಸಾಯದ ಯಾವುದೇ ಕ್ರಿಯೆಗೆ ಸಂಬಂಧಿಸಿದ ನಂಬಿಕೆಗಳು ಇದ್ದರೂ ಅದನ್ನು ಚಾಚುತಪ್ಪದೇ ಇಂದಿಗೂ ಪಾಲಿಸುವವರು ಇದ್ದಾರೆ. ವ್ಯಾಪಾರ ಮಾಡುವವರು ತಮ್ಮ ಯೋಗ್ಯತೆಗೆ ಅನುಗುಣವಾಗಿ ನಂಬಿಕೆಗಳನ್ನು ಇಟ್ಟುಕೊಂಡು ಈ ಅಜ್ಜನ ಹೆಸರಿನಲ್ಲಿಯೇ ಪ್ರತಿದಿನದ ಮೊದಲ ಕ್ರಿಯೆಯನ್ನು ಪ್ರಾರಂಭಿಸುತ್ತಿದ್ದಾರೆ.

ವಿಧಿ-ನಿಷೇಧಗಳು ಕಾಲಕಾಲಾಂತರದಿಂದ ಬಂದಿರುವುದರಿಂದ ಈತನ ಸ್ಥಾನಿಕರಾದ ಮಳಯ್ಯಜ್ಜ, ವಗ್ಗಯ್ಯನವರು, ಕಂಚಿವೀರರು, ಕುದುರೆಕಾರರು, ಗೊರವ-ಗೊರವಿಯರು, ವಿಧಿ-ನಿಷೇಧಗಳನ್ನು ಚಾಚುತಪ್ಪದೇ ಪಾಲಿಸುವಂತವರಾಗಿದ್ದಾರೆ. ಆ ಸ್ಥಾನಿಕರಂತೆ ಭಕ್ತ ಸಮುದಾಯವು ವಿಧಿ-ನಿಷೇಧ ಕ್ರಿಯಾ ವಿಧಿಯನ್ನು ಭಯ-ಭಕ್ತಿಗೆ ಅನ್ವಯಿಸಿಕೊಳ್ಳುತ್ತಾ ಎಡಬಿಡದೆ ಪಾಲಿಸುತ್ತಿರುವುದು ತಿಳಿಯುವುದು.

ಈ ಮಹಾಪ್ರಬಂಧದ ಅಧ್ಯಯನದ ದೃಷ್ಟಿಯಿಂದ ಚಂದಾಲಿಂಗೇಶ್ವರನ ಸಾಹಿತ್ಯವನ್ನು ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯವೆಂದು ವಿಭಾಗ ಮಾಡಿಕೊಂಡು ಸಂಶೋಧನೆಗೊಳಪಡಿಸಿದೆ. ಅಂತಹ ಜನಪದ ಸಾಹಿತ್ಯದಲ್ಲಿ ಆತನಿಗೆ ಸಂಬಂಧಿಸಿದಂತೆ "ಹೂವಿನ ಭಾರಕ ಬೆವತಾನೊ ಚಂದಣ್ಣಾ, ಬಾಳಿಯ ಎಲಿಯಾಗ, ಬಾಲೆರು ಎಡೆಮಾಡಿ ಚಂದಣ್ಣನ ನೆನಿಯಲಕ ಮಲ್ಲಿಗೆ ಹೂವುಬೇಕು ಲಿಂಗದೇವಾ" ಎನ್ನುವಂತಹ ಮುಂತಾದ ಹಾಡುಗಳನ್ನು ಅವುಗಳ ಆಶೆಯೊಂದಿಗೆ ತಿಳಿಯಲಾಗಿದೆ. ತದನಂತರ ಐತಿಹ್ಯಗಳಿಗೆ ಸಂಬಂಧಿಸಿದಂತೆ ಪ್ರಮುಖವಾದ ಎರಡು ಐತಿಹ್ಯಗಳಾದ 'ಹಸುವಿನ ಮಾಂಸವು ಕಲ್ಲುಗಳಾಗಿರುವುದು', 'ಹುಲ್ಲಪ್ಪನ ಕಾಲಿಗೆ ಕಾರಿಮುಳ್ಳು ಚುಚ್ಚಿದ್ದರಿಂದ ರಕ್ತ ಸ್ರವಿಸಿದ ಸ್ಥಳವು' ಇಂದಿಗೂ ಜನಪದರಿಂದ ಜೀವಂತ ಘಟನೆಯಂತೆ ಕಣ್ಮರೆಯಾಗದೆ ಉಳಿದುಕೊಂಡಿವೆ. ಇಷ್ಟೇ ಅಲ್ಲದೆ ಚಂದಾಲಿಂಗೇಶ್ವರನು ಆ ಕ್ಷೇತ್ರದ ಪ್ರಮುಖ ಆರಾಧ್ಯ ದೈವವಾಗಿರುವುದರಿಂದ ಶಿಷ್ಟ ಸಾಹಿತ್ಯದಲ್ಲಿ ಲಿಂಗದಳ್ಳಿ ಚಂದ್ರಶೇಖರವರು ಹಾಗೂ ಇತರರು ಹಾಡುಗಳನ್ನು ಬರೆದು ಹಾಡಿದ್ದಾರೆ. ಅಂಥವುಗಳಲ್ಲಿ 'ಪರಶಿವನ ಅವತಾರ ಚಂದಾಲಿಂಗ' ಹಾಗೂ 'ಆ ನೋಡವ್ವ ಮನಸ್ಸಾರ ಇದು ಚಂದಾಲಿಂಗನ ಮಹಾದ್ವಾರ' ಎಂಬ ಇಂತಹ ಹಲವಾರು ಹಾಡುಗಳನ್ನು ಹಾಡುವುದರ ಮೂಲಕ ಈ ದೈವವನ್ನು ನಾಡಿನ ಜನತೆಗೆ ಪರಿಚಯಿಸಿದ್ದಾನೆ. ಇದಲ್ಲದೆ ಚಂದಾಲಿಂಗೇಶ್ವರನ ಕುರಿತು ಹಲವಾರು ಪುರಾಣಾಧಾರಿತ ಕಥೆ ಲಭ್ಯವಾಗುತ್ತವೆ. ಅವುಗಳಿಂದ ಆತನು ಯಾರು ಏನೆಂಬುದು ತಿಳಿಯುತ್ತದೆ.

ಇಂದಿನ ವಾಸ್ತವಿಕ ದಿನಗಳಲ್ಲಿ ಚಂದಾಲಿಂಗೇಶ್ವರನ ಪರಿವರ್ತನೆಯನ್ನು ನಾವು ಕಾಣುತ್ತೇವೆ. ಅಂಥವುಗಳಲ್ಲಿ ಪ್ರಮುಖವಾಗಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ. ಭೌತಿಕವಾಗಿ ತುಂಬಾ ಸುಧಾರಣೆಯತ್ತ ಸಾಗಿದೆ. ಗುಡಿಯಲ್ಲಿ ಜಾತ್ರೆಯ ಅಥವಾ ವಿಶೇಷ ದಿನಗಳಲ್ಲಿ ದೊರೆಯುವ ಪ್ರಸಾದದಲ್ಲಿಯೂ ಬದಲಾವಣೆಯಾಗಿದೆ. ಜಾತ್ರೆಗೆ ಸಂಬಂಧಿಸಿದ ಕೆಲಸಕಾರ್ಯಗಳಲ್ಲಿ ವಾದ್ಯಮೇಳದಲ್ಲಿ, ಗುಡಿಯ ಅಲಂಕಾರ, ಭಕ್ತರ ಹರಕೆ-ಬೇಡಿಕೆಗಳು, ಹಾಗೂ ಜಾತ್ರೆಯಲ್ಲಿ ಸಂಗೀತ ಚಿತ್ತರಿಸುವ ಪರಿಕರಗಳಲ್ಲಿ, ವೇಷಭೂಷಣಗಳು, ಜಾತ್ರೆಗೆ ಬಂದಿರುವಂತ ವರ್ತಕರ ಅಂಗಡಿಗಳು, ರಸಮಂಜರಿ ಕ್ರೀಡೆಗಳು, ಮತ್ತು ಭಕ್ತರ ಪೂಜಾ ವಿಧಿ-ವಿಧಾನಗಳಲ್ಲಿ ಪರಿವರ್ತನೆಯಾಗಿರುವುದು ಕಂಡುಬರುತ್ತಿವೆ. ಗುಡಿಯ ಪೂಜಾರಿಕೆಗಳಲ್ಲಿ ಬದಲಾವಣೆಯನ್ನು ಕಂಡಿರುತ್ತದೆ. ಕ್ಷೇತ್ರದಲ್ಲಿ ಎಲ್ಲಾ ದಿನಗಳಲ್ಲಿಯೂ ಜನಪದರು ತಮ್ಮ ಸಾಂಪ್ರದಾಯಿಕ ಕಾರ್ಯಗಳನ್ನು ಮಾಡುತ್ತಾರೆ. ಸ್ಥಾನಿಕರಲ್ಲಿ ಕೆಲ ಅಲ್ಪ-ಸ್ವಲ್ಪ ಬದಲಾವಣೆ ಕಂಡುಬಂದರೆ ಭಕ್ತರಲ್ಲಿ ಸಂಜಿಕೆ, ವಿಧಿ-ನಿಷೇಧಗಳನ್ನು ಇತ್ತೀಚಿಗೆ ಕೆಲವೊಂದನ್ನು ಸಡಿಲಿಕೆ ಮಾಡಿಕೊಂಡು ಬಂದಿದ್ದಾರೆ.

ಒಟ್ಟಾರೆ ಚಂದಾಲಿಂಗೇಶ್ವರನ ಆಚರಣೆ ಸಂಪ್ರದಾಯಗಳು, ನಂಬಿಕೆ, ಮತ್ತು ವಿಧಿ-ನಿಷೇಧಗಳು, ತಲೆತಲಾಂತರದಿಂದ ಬಂದಿರುವ ಪರಂಪರೆಯ ಜೀವಂತಕುರುಹುಗಳಾಗಿವೆ. ಇಂದಿನ ಸಮಾಜ ಎಷ್ಟು ಬದಲಾಗುತ್ತಾ ಬಂದರೂ, ಸಹಿತ ಜನರಲ್ಲಿ ದೈವತ್ವದ ಭಯ-ಭಕ್ತಿ ಭಾವನೆಗಳು, ಅವರ ಮನಸ್ಸಿನಲ್ಲಿ ಬೇರೂರಿವೆ. ಆದ್ದರಿಂದ ಜನರು ಇಂದಿಗೂ ಕೂಡ ಮಡಿ-ಮೈಲಿಗೆ, ಶ್ರದ್ಧೆ, ಭಕ್ತಿಯ ಭಾವನೆಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇಂದು ಜನರು ತಾವು ಎಂತೆಂಥ ಉನ್ನತವಾದ ಸ್ಥಾನದಲ್ಲಿದ್ದರೂ, ಆತನ ಸಂಪ್ರದಾಯ ಆಚರಣೆಗಳಿಗೆ ತಲೆಬಾಗುವುದು, ಸರ್ವೇಸಾಮಾನ್ಯವಾಗಿದೆ. ಅವರು ಎಷ್ಟೇ ತಿಳುವಳಿಕೆಯುಳ್ಳವರು ಆಗಿದ್ದರೂ ಸರಿ ಜನಸಾಮಾನ್ಯರಂತೆ ಆತನ ಪರಂಪರೆಯನ್ನು ಎಲ್ಲ ಮಗ್ಗಲುಗಳಿಂದ ಅನುಸರಿಸಿಕೊಂಡು ಬರುತ್ತಾರೆ. ಇದರಿಂದ ನಾಡಿನ ಎಲ್ಲ ಜನಗಳಿಗೂ ಈ ಚಂದಾಲಿಂಗೇಶ್ವರನ ಆಚರಣೆಯ ಎಲ್ಲಾ ವೈಜ್ಞಾನಿಕತೆಯನ್ನು ತಿಳಿಯಬೇಕು. ಆದ್ದರಿಂದ ಈ ರೀತಿಯಲ್ಲಿ ವಿಭಿನ್ನವಾದ ನೆಲೆಗಳ ಮೇಲೆ ಬೇರೆ ಬೇರೆ ಸಂಶೋಧನೆಗಳಾದರೂ ಅವುಗಳ ಸಹಾಯದಿಂದ ಮುಂದೊಂದು ದಿನ ಸಮಗ್ರವಾದ ಚಿತ್ರಣ ದೊರೆಯುವುದಕ್ಕೆ ಸಾಧ್ಯವಾಗುತ್ತದೆ, ಎಂಬುದು ನನ್ನ ಆಶಾದಾಯಕವಾದ ಭಾವನೆ. ಈ ನಿಟ್ಟಿನಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳು ಹಾಗೂ ಜಾನಪದ ಸಂಶೋಧಕರು ಮನಸ್ಪೂರ್ತಿಯಿಂದ ಕಾರ್ಯವನ್ನು ಕೈಗೊಳ್ಳಬೇಕು.

ಅಧ್ಯಯನದ ಫಲಿತಗಳು : (Results of the Study)

ಈ ಮಹಾಪ್ರಬಂಧದ ಅಧ್ಯಯನ ಕ್ಷೇತ್ರಕಾರ್ಯ ಸಂದರ್ಭದಲ್ಲಿ 'ಚಂದಾಲಿಂಗೇಶ್ವರನ ಸಾಂಸ್ಕೃತಿಕ ಸಂಕಥನ' ದೃಷ್ಟಿಕೋನದಲ್ಲಿ ವಿವಿಧ ಆಯಾಮಗಳನ್ನು ಪರಿಶೀಲನೆಗೆ ಒಳಪಡಿಸಿದಾಗ ಕಂಡುಬಂದ ಅದರ ಫಲಿತಗಳ ವಿವರಣೆ ಇಲ್ಲಿದೆ.

* ಚಂದಾಲಿಂಗೇಶ್ವರ ಕ್ಷೇತ್ರ ಐತಿಹಾಸಿಕ ಗುಡಿ ಗುಂಡಾರಗಳು ಹಾಗೂ ಸಾಂಸ್ಕೃತಿಕ ಆಚರಣೆಯಿಂದ ಕೂಡಿದೆ.

* ಈ ಕ್ಷೇತ್ರ ಪಾರಂಪರಿಕವಾಗಿ ಶೈವಪಂಥಿಯ ಆರಾಧನಾ ದೈವವಾಗಿದ್ದರೂ, ಇಂದು ಎಲ್ಲಾ ಸಮುದಾಯದವರು ಆರಾಧಿಸುತ್ತಾರೆ.

* ಈ ಸುಕ್ಷೇತ್ರವು ಪೂರ್ವದಲ್ಲಿ ಅಲ್ಪಪ್ರಮಾಣದ ಭಕ್ತರನ್ನು ಹೊಂದಿದ್ದರೆ, ಇಂದು ಅಪಾರ ಪ್ರಮಾಣದ ಭಕ್ತ ಸಮೂಹವನ್ನು ಹೊಂದಿದೆ.

* ಪ್ರಸ್ತುತ ಆರಾಧನೆಗೆ .ಒಳಪಡುವ ಚಂದಾಲಿಂಗೇಶ್ವರನು ತನ್ನ ಸಂತತಿಯ ಮೂರನೆ ತಲೆಮಾರಿನ ದೈವೀ ಪುರುಷ

* ಶಿವನ ಇನ್ನೊಂದು ಅವತಾರದಲ್ಲಿ ಅಲ್ಲಿಯೇ ಚಂದಾಲಿಂಗೇಶ್ವರನು ಈ ಕ್ಷೇತ್ರದಲ್ಲಿ ನೆಲೆಸಿದ್ದಾನೆ. ಈತನು ಪವಾಡ ಪುರುಷನು ಹಾಗೂ ಮಲ್ಲ-ಮಣಿಕಾಸುರ ಎಂಬ ದೈತ್ಯರನ್ನು ಸಂಹಾರಕಾರನಾಗಿದ್ದಾನೆ.

* ಚಂದಾಲಿಂಗೇಶ್ವರನ ಪೂರ್ವಜರು ಲಿಂಗ ಆರಾಧಕರು ಹಾಗೂ ಪವಾಡ ಪುರುಷರಾಗಿರುವುದರಿಂದ ಈತನೂ ಅಪ್ಪಟ ಲಿಂಗಆರಾಧಕ ಹಾಗೂ ಪವಾಡ ಪುರ್ರುಸನಾಗಿ ಮೆರೆದಿದ್ದಾನೆ.

* ಚಂದಾಲಿಂಗಪ್ಪನ ಸಾಕು ಮಗನಾದ ಹುಲ್ಲಪ್ಪನ ಜನ್ಮವೃತ್ತಾಂತ ತಿಳಿಯುತ್ತದೆ. ಹಾಗೂ ಇತರ ದೈವಗಳೊಂದಿಗೆ ಇರುವ ಸಹಸಂಬಂದ ತಿಳಿಯುತ್ತದೆ.

* ಜಾತ್ರಾ ದಿನ ನಡೆಯುವಂತ ಬಂಢಾರ ಪವಾಡ, ನುಡಿಹೇಳುವುದು, ಕೊಂತಮಿಂಚುವುದು, ಸರಪಳಿ ಪವಾಡದ ಪ್ರಮುಖವಾಗಿರುವ ಉದ್ದೇಶಗಳು ತಿಳಿಯುತ್ತವೆ.

* ಭಕ್ತ ಜನರ ಜೀವನಾವರ್ತನ ಹಾಗೂ ವಾರ್ಷಿಕಾವರ್ತನದ ಆಚರಣಾ ಸಂಪ್ರದಾಯಗಳು ತಿಳಿಯುತ್ತವೆ.

* ಭಕ್ತರ ನಂಬಿಕೆ ಹಾಗೂ ವಿಧಿ-ನಿಷೇಧಗಳು ಪೂರ್ವದ ದಿನಗಳಿಗಿಂತ ಸ್ವಲ್ಪ ಸಡಿಲತೆಗೊಂಡಿವೆ.

* ಚಂದಾಲಿಂಗೇಶ್ವರನ ಸಾಂಪ್ರದಾಯಿಕ ಕಾರ್ಯಗಳಲ್ಲಿ ಯಾವುದೇ ಮಹಿಳೆಯರು ತೊಡಗುವಂತ ಸಂಪ್ರದಾಯವಿಲ್ಲ.

* ಸರಪಳಿ ಪವಾಡ ಹಾಗೂ ಭಂಡಾರದ ಪವಾಡವನ್ನು ನೋಡಲು ಎಲ್ಲಾ ಭಕ್ತರಿಗೆ ಸರಿಯಾದಂತ ವ್ಯವಸ್ಥೆಯಿಲ್ಲ.

* ಜಾತ್ರೆಯ ದಿನಗಳನ್ನು ಹೊರತುಪಡಿಸಿ ಬಿಡುವಿನ ದಿನಗಳಲ್ಲಿ ಭಕ್ತರು ಈ ಕ್ಷೇತ್ರಕ್ಕೆ ಬರುವುದಕ್ಕೆ ಸಾರಿಗೆ ವ್ಯವಸ್ಥೆಯ ಕೊರತೆಯನ್ನು ಅನುಭವಿಸುತ್ತಾರೆ.

* ಕೆಲವು ಗುಡಿಗಳು ಸುಸಜ್ಜಿತ ಆರಾಧನಾ ವ್ಯವಸ್ಥೆಯಿಲ್ಲದೇ, ಶಿಥಿಲಾವಸ್ಥೆಯೊಂದಿಗೆ ನಾಶವಾಗುವ ಸ್ಥಿತಿಗೆ ಬಂದಿದ್ದು, ಹಾಗೂ ಅಕ್ರಮ ಚಟುವಟಿಕೆಗಳ ತಾಣವಾಗಿ ಪರಿಣಮಿಸುತ್ತಿವೆ.

* ವಿವಿಧ ವ್ಯಾಪಾರಸ್ಥರು ಅಂಗಡಿಗಳನ್ನು ಹಾಕಲು ಖಾಲಿ ಸ್ಥಳದ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ.

* ಚಂದಾಲಿಂಗೇಶ್ವರನ ಬಗ್ಗೆ ಮೌಖಿಕ ಸಾಹಿತ್ಯ ಹಾಗೂ ಶಿಷ್ಟ ಸಾಹಿತ್ಯ ಮಂದಗತಿಯಿಂದ ಸಾಗಿದೆ. ಕ್ಷೀಣಿಸುತ್ತಿದೆ.

* ಚಂದಾಲಿಂಗೇಶ್ವರನ ಕುರಿತ ಕಲೆಗಾರರಾದ. ಡೊಳ್ಳು, ಭಜನೆ, ಹಂತಿ, ಗೀಗಿಪದಗಳು, ಕಥೆಗಾರರ, ಸಂಖ್ಯೆ ಕ್ಷೀಣಿಸುತ್ತಿದೆ.

* ಚಂದಾಲಿಂಗೇಶ್ವರನ ಕುರಿತು ಇರುವಂತಹ ಕೆಲವು ಐತಿಹ್ಯಗಳು, ಯಾವುದೇ ರಕ್ಷಣೆ ಇಲ್ಲದೆ ನಾಶವಾಗುವಂತಹ ಹಂತಕ್ಕೆ ಬಂದಿವೆ.

* ಕ್ಷೇತ್ರದ ಭೌತಿಕ ಬದಲಾವಣೆಗೆ ಆಧುನಿಕತೆಯ ಸುಧಾರಣೆಯ ಕೊರತೆ ಕಾಣುತ್ತಿದೆ.

ಮುಂದಿರುವ ಸಾಧ್ಯತೆಗಳು : (The Next Possibilitie)

* ಚಂದಾಲಿಂಗೇಶ್ವರ ನೆಲೆಸಿರುವ ಪ್ರದೇಶವು ಐತಿಹಾಸಿಕ ಪ್ರದೇಶವಾಗಿರುವುದರಿಂದ, ಪ್ರವಾಸಿಗರು ಹಾಗೂ ಸಾಂಸ್ಕೃತಿಕ ವ್ಯಕ್ತಿಗಳು ಬರುವುದರಿಂದ ಆ ಕ್ಷೇತ್ರಕ್ಕೆ ದಿನಕ್ಕೆ ಎರಡು ಅವಧಿಯಾದರೂ ಸಾರಿಗೆ ವಾಹನದ ವ್ಯವಸ್ಥೆ ಮಾಡಿಸುವುದು ಸೂಕ್ತ.

* ಐತಿಹಾಸಿಕ ಗುಡಿಗಳು, ಕೋಟೆಗಳು, ಮೂರ್ತಿಗಳಿರುವುದರಿಂದ ಅವುಗಳ ರಕ್ಷಣೆಗೆ ಹಾಗೂ ಜೀರ್ಣೋದ್ದಾರ ಕಾರ್ಯಕ್ಕೆ ಸರಕಾರದ ಪ್ರಾಚ್ಯ ಹಾಗೂ ಪುರಾತತ್ವ ಇಲಾಖೆಯ ವ್ಯಾಪ್ತಿಗೆ ಒಳಪಡಿಸುವುದು ಸೂಕ್ತ.

* ಇದು ಸುಕ್ಷೇತ್ರವಾಗಿರುವುದರಿಂದ ಅಪಾರ ಪ್ರಮಾಣದ ಭಕ್ತರು ಬರುತ್ತಾರೆ. ಇವರಿಗೆ ವಸತಿಗೆ ಹೆಚ್ಚಿನ ಪ್ರಮಾಣದಲ್ಲಿ ಯಾತ್ರಾ ನಿವಾಸಗಳನ್ನು ಸ್ಥಾಪಿಸಬೇಕು.

* ವಿವಿಧ ಸಮುದಾಯದವರು ಈ ಕ್ಷೇತ್ರದಲ್ಲಿ ತಮ್ಮ ಧಾರ್ಮಿಕ, ಸಂಪ್ರದಾಯದ ಕಾರ್ಯಗಳನ್ನು ನೆರವೇರಿಸುವುದರಿಂದ ಅವರ ಅನುಕೂಲಕ್ಕಾಗಿ ಕಲ್ಯಾಣಮಂಟಪ ಹಾಗೂ ಸಮುದಾಯ ಭವನಗಳನ್ನು ನಿರ್ಮಿಸುವುದು ಯೋಗ್ಯ

* ಈ ಕ್ಷೇತ್ರವು ವಿಶಾಲವಾದ ಭೂಪ್ರದೇಶ ಹೊಂದಿರುವುದರಿಂದ, ಯಾವ ಯಾವ ಭಾಗದ ಕಡೆಗೆ ಏನಿದೆ ಎಂಬುದನ್ನು ಅಲ್ಲಿ ಹಾಗೂ ಮುಖ್ಯ ಸ್ಥಳದಲ್ಲಿ ಸೂಚನಾ ಫಲಕಗಳನ್ನು ಹಾಕುವುದು ಉತ್ತಮ.

* ಜಾತ್ರಾ ದಿನ ನಡೆಯುವಂತಹ ಸರಪಳಿ ಪವಾಡ ಹಾಗೂ ಬಂಢಾರದ ಪವಾಡ, ಚಂದಾಲಿಂಗಪ್ಪ ಗಂಗೆಮಾಳಮ್ಮನವರ ವಿವಾಹ ಕಾರ್ಯಕ್ರಮಗಳು, ಪ್ರೇಕ್ಷಕರೆಲ್ಲರಿಗೂ ಸಂಪೂರ್ಣವಾಗಿ ಕಾಣುವಂತೆ ವ್ಯವಸ್ಥೆ ಮಾಡಿಸುವುದು.

* ಜಾತ್ರೆಯ ದಿನ ಅಂದಿನ ರಾತ್ರಿ ನಡೆಯುವಂತ ಕಲಾಕಾರರ ಹಾಡು, ಭಜನೆಗಳು ಬಿತ್ತರಿಸಲು ಸೂಕ್ತವಾದ ವೇದಿಕೆಯನ್ನು ನಿರ್ಮಿಸಿಕೊಡುವುದು.

* ಗುಡಿಯ ಕಮಿಟಿಯವರು ಜಾತ್ರಾ ದಿನಗಳಲ್ಲಿ ವ್ಯಾಪಾರ-ವಹಿವಾಟು ಮಾಡುವವರಿಗೆ ಸಲಹೆ ಸಹಕಾರ ನೀಡಲು ಒಂದು ಸಮಿತಿಯನ್ನು ರಚಿಸುವುದು.

* ವಿಶೇಷವಾಗಿ ಸುಗ್ಗಿ ಜಾತ್ರೆಯಲ್ಲಿ ನುಡಿಮಂಟಪದಲ್ಲಿ ನಡೆಯುವ ನುಡಿ ಕಾರ್ಯಕ್ರಮಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ಹಾಗೂ ಮಂಟಪದ ಹತ್ತಿರ ಮತ್ತು ಮುಖ್ಯಗುಡಿಯ ಆವರಣದಲ್ಲಿ 'ಹೈಮ್ಯಾಕ್ಸ್' ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಮಾಡಿಸುವುದು.

* ಜಾತ್ರೆಗೆ ಬಂದಿರುವಂತಹ ಭಕ್ತರಿಗೆ ಪ್ರಸಾದ ನಿಲಯವನ್ನು ಸ್ಥಾಪಿಸುವುದು ಯೋಗ್ಯ.

* ವರ್ಷದಿಂದ ವರ್ಷಕ್ಕೆ ಭಕ್ತರ ಸಂಖ್ಯೆ ಏರುತ್ತಿರುವುದರಿಂದ ವ್ಯಾಪಾರ-ವಹಿವಾಟು ಮಾಡುವವರ ಸಂಖ್ಯೆಯೂ ಹೆಚ್ಚುಗುತ್ತಿದೆ. ಆದ್ದರಿಂದ ಇವರಿಗೆ ಅಂಗಡಿ-ಮುಂಗಟ್ಟುಗಳನ್ನು ಹಾಕಲು ಸೂಕ್ತವಾದ ಸ್ಥಳಾವಕಾಶ ಒದಗಿಸಿ ಕೊಡುವದು.

* ಚಂದಾಲಿಂಗೇಶ್ವರನ ಕುರಿತು ಸಾಹಿತ್ಯ ಬರೆಯುವಂತವರಿಗೆ ಹಾಗೂ ಹಾಡುವಂತವರಿಗೆ ಸಹಾಯ, ಸಹಕಾರ, ಹಾಗೂ ಪ್ರೋತ್ಸಾಹಿಸುವುದು, ಮತ್ತು ಕಾರ್ಯಕ್ರಮ ಮತ್ತು ಸಾಹಿತ್ಯ ಗೋಷ್ಠಿಯನ್ನು ಏರ್ಪಡಿಸುವುದು.

* ಗುಡಿಯ ಕೆಲಸಕಾರ್ಯಗಳಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದು ಹಾಗೂ ಅವಶ್ಯಕವಾದ ಸ್ಥಳದಲ್ಲಿ ಆಧುನಿಕತೆಯ ಸ್ಪರ್ಶವನ್ನು ಮಾಡಿಸುವುದು ಒಳಿತು.

ಆಧಾರ ಗ್ರಂಥಗಳು
(Bibliography)

ಆಧಾರ ಗ್ರಂಥಗಳು : (Bibliography)

೧. ಅಂಗಡಿ. ಎಸ್.ಎಸ್, ೧೯೯೭, ಹಂತಿ ಪಂತಿ ಪದಗಳು, ವಿದ್ಯಾನಿಧಿ ಪ್ರಕಾಶನ, ಗದಗ

೨. ಅರ್ಜುನ. ಯ. ಗೊಳಸಂಗಿ, ೧೯೯೫, ಗೊಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ, ಮಲ್ಲಿಕಾರ್ಜುನ ಪ್ರಕಾಶನ

೩. ಅಮೃತ ಸೋಮೇಶ್ವರ, ೧೯೯೪, ಉತ್ಸವಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಅಲ್ಲಮಪ್ರಭು ಬೆಟ್ಟದೂರ, ಶ್ರೀ. ಎಚ್.ಎಸ್. ಪಾಟೀಲ್, (ಸಂ), ೨೦೦೫, ಪ್ರಸಾರಾಂಗ, ಗುಲ್ಬರ್ಗಾ ವಿಶ್ವ ವಿದ್ಯಾಲಯ, ಗುಲ್ಬರ್ಗಾ

೫. ಆಚಾರ್ಯ. ಪಾ. ವೆಂ, ೧೯೯೮, ಪದಾರ್ಥ ಚಿಂತಾಮಣಿ, ನವಕರ್ನಾಟಕ ಪಬ್ಲಿಕೇಷನ್, ಪಿ.ವ್ಹಿ.ಟಿ. ಬೆಂಗಳೂರು

೬. ಇಂದ್ರೇಶ.ಎಂ, ೨೦೦೮, ಜನಪದ ಆಚರಣೆಗಳು ಒಂದು ಸಾಂಸ್ಕೃತಿಕ ಅಧ್ಯಯನ

೭. ಇಂದಿರಾ.ಆರ್, ೧೯೯೮, ಮೂಢನಂಬಿಕೆಗಳು ಮನೋವಿಕಾಸ ಪುಸ್ತಕ ಮಾಲೆ, ಮೈಸೂರು

೮. ಕನ್ನಡ ಸಾಹಿತ್ಯ ಪರಿಷತ್ತು, (ಸಂ), ೨೦೧೦, ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೯. ಕಮಲಾ ಹಂಪನಾ, (ಸಂ), ೨೦೧೫, ಸಂಶೋಧನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೦. ಕಮಲಾ ಹೆಮ್ಮಿಗೆ, (ಸಂ), ೧೯೯೮, ದೇವರಿಗೆ ಶರಣೆನ್ನುವೆನ್ನೇ, ಪ್ರಭ ಪಬ್ಲಿಕೇಶನ್, ಧಾರವಾಡ

೧೧. ಕರೀಗೌಡ ಬೀಚನಹಳ್ಳಿ, ೧೯೭೬, ಜಾತ್ರೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೨. ಕರೀಗೌಡ ಬೀಚನಹಳ್ಳಿ, ೨೦೧೦, ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಬೆಂಗಳೂರು.

೧೩. ಕೃಷ್ಣಮೂರ್ತಿ. ಕೆ, ೨೦೧೫, ಕವಿರಾಜ ಮಾರ್ಗ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೧೪. ಕೃಷ್ಣ. ಎಂ. ಎಚ್, ೧೯೭೬, ಕನ್ನಡ ನಾಡಿನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೧೫. ಕೃಷ್ಣಮೂರ್ತಿ ಕರ್ಪೂರ, ೧೯೭೬, ದಕ್ಷಿಣಕಾಶಿ ಮೈಲಾರ, ಕೆ.ಕೆ.ಡಿಕೆ. ಸಂಘ, ಪ್ರೇಮಪುರ

೧೬. ಗುರುನಾಥ ಜೋಶಿ, (ಸಂ), ೨೦೦೨, ಕನ್ನಡ ಕನ್ನಡ ಶಬ್ದಕೋಶ, ಸಂಕೇಶ್ವರ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್. ಗದಗ

೧೭. ಗುರುಪ್ರಸಾದ್. ಸಿ.ಟಿ, (ಸಂ), ೨೦೦೦, ಕನ್ನಡ ಜಾನಪದ ಗ್ರಂಥಸೂಚಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೮. ಗುರುಪ್ರಸಾದ್. ಸಿಟಿ, (ಸಂ), ೨೦೦೬, ಜಾನಪದ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೯. ಹಿರೇಮಠ. ಎಸ್.ಎಸ್, ೧೯೯೨, ಕರ್ನಾಟಕ ಸಂಸ್ಕೃತಿ ಪರಂಪರೆ ಹಬ್ಬಗಳು ಭಾಗ-೧, ಸಮತಾ ಪ್ರಕಾಶನ, ಹರಪನಹಳ್ಳಿ

೨೦. ಚಂದ್ರಪೂಜಾರಿ. ಎಂ, ೨೦೦೯, ಸಂಶೋಧನೆ ಏನು? ಏಕೆ? ಹೇಗೆ?, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ಚಂದ್ರಶೇಖರ ದಾಮ್ಲೆ, ೧೯೯೨, ಜಾತ್ರೆ, ಸಮಾಜಶಾಸ್ತ್ರ ಸಂಘ ನೆಹರೂ ಮೆಮೋರಿಯಲ್, ಕಾಲೇಜು, ದಕ್ಷಿಣ ಕನ್ನಡ

೨೨. ಚಂದ್ರಶೇಖರ. ಬಿ. ರಾಮಚಂದ್ರ, ಕೆ, ೨೦೧೧, ಮಾರುಕಟ್ಟೆಯ ನಿರ್ವಹಣೆ, ಪ್ರತಿಭಾ ಪ್ರಕಾಶನ ವಿಜಯನಗರ ಬೆಂಗಳೂರು

೨೩. ಚಂದ್ರಶೇಖರ ಕಂಬಾರ, ೧೯೮೦, ಜಾನಪದ ವಿಶ್ವಕೋಶ, ಕನ್ನಡ ಸಾಹಿತ್ಯ ಪರಿತ್, ಬೆಂಗಳೂರು

೨೪. ಚಂದ್ರಶೇಖರ ಕಂಬಾರ, ೧೯೮೫, ಕನ್ನಡ ಜಾನಪದ ವಿಶ್ವಕೋಶ, ಸಂಪುಟ-೧-೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೫. ಚಂದ್ರಶೇಖರ. ಬಿ.ಎಂ, ೨೦೦೫, ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ, ಸಿ.ವಿ.ಜಿ. ಪ್ರಕಾಶನ ಬೆಂಗಳೂರು

೨೬. ಚನ್ನಪ್ಪ ಗೊ.ರು, ೧೯೭೭, ಕರ್ನಾಟಕ ಜನಪದ ಕಲೆಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೭. ಶಿವಶಂಕರ್ ಚಕ್ಕೇರಿ, (ಸಂ), ೧೯೮೯, ಮೈಲಾರಲಿಂಗನ ಕಾವ್ಯ, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು

೨೮. ಶಿವಶಂಕರ ಚಕ್ಕೇರಿ, ೧೯೯೩, ಗೊರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೯. ಚಿದಾನಂದಮೂರ್ತಿ. ಎಂ, ೧೯೯೦, ಸಂಶೋಧನಾ ತರಂಗ, ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು

೩೦. ಚೆಲುವೇಗೌಡ. ಚಿ, ೧೯೯೮, ಕೆಲವು ಜನಪದ ಸಂಪ್ರದಾಯಗಳು, ತಳಗವಾದಿ ಪ್ರಕಾಶನ, ಮೈಸೂರು.

೩೧. ಜಂಬುನಾಥ ಕಾಂಬಳೆ, ೧೯೫೧, ಅರಸರು ಗಿಡದ ಮ್ಯಾಲ ಮೊಸರ ಚೆಲ್ಲೇದ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೩೨. ಜಯಶ್ರೀ ಗುತ್ತಲ, (ಸಂ), ೧೯೯೪, ಜನಪದ ಮಂಗಳ ಗೀತೆಗಳು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೩೩. ಜವರೇಗೌಡ. ದೇ, (ಸಂ), ೨೦೧೨, ಜನಪದ ಗೀತಾಂಜಲಿ, ಸಪ್ನಾಬುಕ್ ಹೌಸ್, ಬೆಂಗಳೂರು.

೩೪. ಜಿ.ವಿ. ಡಿ, ೧೯೭೮, ಕನ್ನಡ ಐತಿಹ್ಯಗಳು, ತೇಜಸ್ವಿನಿ ಪ್ರಕಾಶನ, ಬೆಂಗಳೂರು.

೩೫. ತಿಪ್ಪೇಸ್ವಾಮಿ. ಜಿ. ಆರ್, ೨೦೦೫, ಮೌಖಿಕ ಕಥನ, ವಿಜಯಲಕ್ಷ್ಮೀ ಪ್ರಕಾಶನ, ಕುವೆಂಪುನಗರ, ಮೈಸೂರು

೩೬. ದೇವುಡು, (ಸಂ), ೧೯೮೮, ಕರ್ನಾಟಕ ಸಂಸ್ಕೃತಿ, ಶಾರದಾ ಪ್ರಕಾಶನ

೩೭. ದೇವೇಂದ್ರಕುಮಾರ ಹಕಾರಿ. ೧೯೯೬, ಹಂತಿ ಹಾಡುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩೮. ನರಸಿಂಹೇಗೌಡ, ನಾರಾಯಣಪುರ, ೧೯೯೯, ಭೂಮಿ ತೂಕದ ಮಾತು, ಕಿಶೋರ ಪ್ರಕಾಶನ, ನಾರಾಯಣಪುರ

೩೯. ನಲ್ಲೂರು ಪ್ರಸಾದ, (ಸಂ), ೧೯೯೮, ಜಾನಪದ ಭಾರತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೪೦. ನಾಗಭೂಷಣ. ಡಿ. ಎಸ್, ೨೦೦೯, ಕನ್ನಡ ಕರ್ನಾಟಕ ಸಂಕಥನಗಳು, ವಿಸ್ಮಯ ಪ್ರಕಾಶನ, ಕುವೆಂಪುನಗರ ಮೈಸೂರು

೪೧. ನಾಗರಾಜ. ಹೊಸೂರಕಲ್, ೨೦೦೮, ಮೈಲಾರ ಲಿಂಗನ ಆಚರಣೆ–ಒಂದು ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ. ಪಿಎಚ್.ಡಿ, ಸಂಶೋಧನಾ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೨. ನಾಗೇಗೌಡ. ಎಚ್.ಎಲ್, ೧೯೭೭, ಕನ್ನಡ ಜಾನಪದ ಕೋಶ, ಕರ್ನಾಟಕ ಜನಪದ ಪರಿಷತ್, ಬೆಂಗಳೂರು

೪೩. ನಾಯಕ. ಡಿ.ಬಿ, ೨೦೦೨, ದೇಶಿ ಸಂಸ್ಕೃತಿ, ಬಂಜಾರ ಪ್ರಕಾಶನ, ಗುಲ್ಬರ್ಗಾ

೪೪. ನಿಂಗಣ್ಣ ಸಣ್ಣಕ್ಕಿ, (ಸಂ), ೧೯೭೮, ಗಂಡಸರ ಹಾಡುಗಳು, ಸಮಾಜ ಪುಸ್ತಕಾಲಯ, ಧಾರವಾಡ

೪೫. ನೇಗಿನಹಾಳ. ಎಂ.ಬಿ, ೧೯೯೨, ಮೈಲಾರಲಿಂಗ–ಖಂಡೋಬಾ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪೬. ನೇಗಿನಹಾಳ. ಎಂ.ಬಿ, (ಸಂ), ೧೯೯೭, ಮೈಲಾರಲಿಂಗನ ಕಾವ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ

೪೭. ಪರಮಶಿವಯ್ಯ. ಜಿ.ಶಂ, ೧೯೮೧, ಮೈಲಾರನ ಗೊರವರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೪೮. ಪರಮಶಿವಯ್ಯ. ಜಿ.ಶಂ, ೧೯೮೩, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಕುವೆಂಪು ಅಧ್ಯಯನ ಸಂಸ್ಥೆ ಮೈಸೂರು, ವಿಶ್ವವಿದ್ಯಾಲಯ, ಮೈಸೂರು

೪೯. ಪಾಟೀಲ್.ಎಚ್.ಡಿ, ೧೯೯೬, ಗ್ರಾಮದೇವತೆಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೦. ಪಾದೇಕಲ್ಲು ವಿಷ್ಣುಭಟ್ಟ, (ಸಂ), ೨೦೦೮, ಶಬ್ದಾರ್ಥ ಶೋಧ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಎಂ.ಜಿ.ಎಂ. ಕಾಲೇಜು, ಉಡುಪಿ

೫೧. ಪುಟ್ಟಯ್ಯ ಬಿ.ಎಂ, ೨೦೧೦, ಸಂಶೋಧನೆ ತಾತ್ವಿಕ ಆಯಾಮಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೨. ಪುರುಷೋತ್ತಮ ಬಿಳಿಮಲೆ, ೧೯೯೩, ಜಾನಪದ ಕ್ಷೇತ್ರಕಾರ್ಯ ಆಧುನಿಕ ವಿಧಾನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೩. ಪೂವಪ್ಪ ಕುಣಿಯೂರು, ೨೦೦೯, ಮೌಖಿಕ ಸಂಕಥನ, ತರಂಗಿಣಿ ಪ್ರಕಾಶನ, ಸುಳ್ಯ ದಕ್ಷಿಣ ಕನ್ನಡ. ಗವಿಸಿದ್ದಪ್ಪ

೫೪. ಪಾಟೀಲ್.ಎಚ್, ೨೦೦೫, ಸಾಹಿತ್ಯ, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ

೫೫. ಪ್ರಕಾಶ ಚಾಲುಕ್ಯ, ೨೦೧೨, ಪರ್ಯಾಯ ಪದ, ಸಂಪಾದಕ ಸಪ್ನಾಬುಕ್ ಹೌಸ್, ಬೆಂಗಳೂರು

೫೬. ಬಸವರಾಜ ಸಬರದ, ೧೯೯೪, ಜನಪದ ದೇವತೆಗಳು ಮತ್ತು ಶಿಷ್ಟ ದೇವತೆಗಳು, ಡಾ.ಗುಂಡ್ಮಿ ಪ್ರಶಸ್ತಿ ಸಮಿತಿ, ಕುಂದಾಪುರ

೫೭. ಬಸಪ್ಪನವರ್. ಸಿ.ಎಚ್, ೧೯೯೦, ಹಸಿರು ಉಸಿರು, ವನಸುಮಾ ಪ್ರಕಾಶನ, ರಾಜಾಜಿನಗರ, ಬೆಂಗಳೂರು

೫೮. ಬಸವರಾಜ ಮಲಶೆಟ್ಟಿ, ೧೯೮೨, ಉತ್ತರ ಕರ್ನಾಟಕದ ಜನಪದ ವಾದ್ಯಗಳು, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೫೯. ಬಸುಬೇವಿನಗಿಡದ, (ಸಂ), ೨೦೧೫, ಮಕ್ಕಳ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೦. ಭಟ್ಟಜಿ. ಎಸ್.೧೯೯೨. ಸಂಸ್ಕೃತಿ ಒಂದು ಅಧ್ಯಯನ, ಲಕ್ಷ್ಮೀ ಪ್ರಿಂಟರ್ಸ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು

೬೧. ಮಂಜುನಾಥ ಬೇವಿನಕಟ್ಟಿ, ೨೦೦೭, ಕನ್ನಡ ಜನಪದ ನಂಬಿಕೆಗಳು,ಜ್ಯೋತಿ ಪ್ರಕಾಶನ, ಮೈಸೂರು.

೬೨. ಮಂಜುನಾಥ ಬೇವಿನಕಟ್ಟಿ, ೨೦೦೦, ಮೈಲಾರಲಿಂಗನ ಸಾಂಸ್ಕೃತಿಕ ಪದಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೩. ಮಂಜುನಾಥ ಬೇವಿನಕಟ್ಟಿ, (ಸಂ), ೧೯೯೯, ಮೈಲಾರಲಿಂಗನ ಕಾವ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೪. ಮಂಜುನಾಥ ಬೇವಿನಕಟ್ಟಿ, ೧೯೯೬, ಜನಪದ ನಂಬಿಕೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೫. ಮರಳುಸಿದ್ದಪ್ಪ ಕೆ, ನಾಗರಾಜ, ಕಿ.ರಂ, (ಸಂ), ೨೦೧೫, ವಚನಕಮ್ಮಟ, ಸಪ್ನಬುಕ್ ಹೌಸ್, ಬೆಂಗಳೂರು

೬೬. ಮಧ್ಯಸ್ಥ. ಜಿ.ಕೆ, ೨೦೧೧, ಪದೋನ್ನತಿ, ಪದಲೋಕದಲ್ಲೊಂದು ಪಯಣ, ಅಂಕಿತಾ ಪುಸ್ತಕ ಗಾಂಧಿಬಜಾರ, ಬೆಂಗಳೂರು

೬೭. ಮಹಾದೇವ. ಸಿ, (ಸಂ), ೨೦೧೨, ಮೈಲಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೮. ಮಲ್ಲಿಕಾರ್ಜುನ. ಶ್ರೀ.ಲಠ್ಠೆ, ೧೯೮೦, ಉತ್ತರ ಕರ್ನಾಟಕದ ಜನಪದ ನಂಬಿಕೆಗಳು, ಮಾಗಿಕರಾವ ಪಾಟೀಲ್ ಪ್ರಕಾಶನ

೬೯. ಮಾಂತೇಶ.ಎಸ್. ಗುಬ್ಬೇವಾಡ, ೧೯೮೬, ಜಾನಪದದಲ್ಲಿ ಆರ್ಥಿಕ ವಿಚಾರಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭೦. ಶಿವಣ್ಣ ಮೀರಾಸಾಬಿಹಳ್ಳಿ, ೧೯೯೪, ಒಗಟುಗಳು, ಒಡಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೧. ಗಣೇಶ್ ಮೊಗಳ್ಳಿ, ೨೦೧೦, ಹಂಪಿ ಜೀವಜಾಲ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೨. ರಮೇಶ್. ಸ.ಚಿ, ೨೦೦೦, ಕರ್ನಾಟಕ ಜನಪದ ಆಚರಣೆಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

೭೩. ರಮೇಶ್. ಸ.ಚಿ, ೨೦೦೮, ಕರಾವು ಜನಪದ ಅಧ್ಯಯನ ಲೇಖನಗಳು, ಅಂಶು ಪ್ರಕಾಶನ, ಹೊಸಪೇಟೆ.

೭೪. ರಮೇಶ್. ಸ.ಚಿ, (ಸಂ), ೨೦೧೩, ಜನಪದ ವಸ್ತುಕೋಶ, ಕರ್ನಾಟಕ ಜನಪದ ವಿಶ್ವವಿದ್ಯಾಲಯ, ಗೊಟಗೋಡಿ

೭೫. ರವೀಂದ್ರನಾಥ. ಕೆ, (ಸಂ), ೨೦೧೧, ಅಧ್ಯಯನದ ವಿಧಿವಿಧಾನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೬. ರಾಜೇಂದ್ರ.ಡಿ. ಕೆ, ೨೦೦೩, ಜಾನಪದ ಶಿಷ್ಟಪದ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೭೭. ರಾಮಚಂದ್ರಗೌಡ. ಹಿ.ಶಿ, (ಪ್ರ.ಸಂ) ಶಂಕರನಾರಾಯಣ.ತಿ.ನಂ., ವೆಂಕಟೇಶ್.ಎಂ.ಎನ್. ಸಂಪಾದಕರು, ೨೦೦೪, ಜನಪದ ಸಾಹಿತ್ಯ ಪ್ರಕಾರಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ ಬೆಂಗಳೂರು

೭೮. ರಾಮನ್. ಬಿ.ಎಸ್, ೨೦೧೦, ಆಧುನಿಕ ಮಾರುಕಟ್ಟೆಯ ಶಾಸ್ತ್ರ, ಯುನೈಟೆಡ್ ಪಬ್ಲಿಷರ್ಸ್, ಮಂಗಳೂರು.

೭೯. ಲಿಂಗದೇವರು ಹಳೆಮನೆ, (ಗೌ.ಸಂ) ೨೦೧೦, ಜನವರಿ-ಮಾರ್ಚ್, ಅರುಹು-ಕುರುಹು ಸಂಸ್ಕೃತಿ ಶೋಧ, ಹಾ.ತಿ. ರತ್ನಾ ಮೌನ, ಕುವೆಂಪುನಗರ, ಮೈಸೂರು

೮೦. ಲಿಂಗಯ್ಯ. ಡಿ, ೨೦೦೯, ಜಾನಪದ ನೋಟಗಳು, ಸಿ.ವಿ.ಜಿ. ಪಬ್ಲಿಕೇಶನ್, ಬೆಂಗಳೂರು

೮೧. ಲಿಂಗಯ್ಯ. ಡಿ, ೧೯೭೬, ಕರ್ನಾಟಕ ಜನಪದಕಾವ್ಯಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮೨. ಲಿಂಗಯ್ಯ. ಡಿ, ಸಂಧ್ಯಾರೆಡ್ಡಿ. ಕೆ.ಆರ್, (ಸಂ), ೨೦೦೯, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮೩. ಲೀಲಾವತಿ. ಎಂ, ೧೯೭೫, ಮೂಢನಂಬಿಕೆ ಮತ್ತು ಮಹಿಳೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೮೪. ವೆಂಕಟೇಶ್. ಎಮ್.ಎನ್, ೧೯೯೮, ಮೈಲಾರದ ಜಾತ್ರೆಗಳು ಪ್ರದರ್ಶನ ಒಂದು ಅಧ್ಯಯನ, ಅಭಿ ಆದರ್ಶ ಪ್ರಕಾಶನ, ಭದ್ರಾವತಿ.

೮೫. ವೆಂಕಟೇಶ. ಜಿ, ೨೦೦೧೩, ಗುಡ್ಡದ ಮಲ್ಲಯ್ಯ (ಮೀನಗುಂದಿ ಮಲ್ಲಯ್ಯ) ಆಚರಣೆ ಒಂದು ಜಾನಪದೀಯ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧ)

೮೬. ವೆಂಕಟಸುಬ್ಬಯ್ಯ. ಜಿ, ೨೦೧೦, ಶಬ್ದ ಮತ್ತು ಅರ್ಥ, ಅಭಿವ್ಯಕ್ತಿ ಒಂದು ಸಾಂಸ್ಕೃತಿಕ ವೇದಿಕೆ, ಬೆಂಗಳೂರು.

೮೭. ವೆಂಕಟಸುಬ್ಬಯ್ಯ. ಜಿ, ೨೦೦೧, ಇಗೋ ಕನ್ನಡ ಸಾಮಾಜಿಕ ನಿಘಂಟು, ನವಕರ್ನಾಟಕ ಪಬ್ಲಿಕೇಶನ್, ಪಿ.ವ್ಹಿ.ಟಿ. ಬೆಂಗಳೂರು.

೮೮. ವೆಂಕಟಸುಬ್ಬಯ್ಯ. ಜಿ, (ಸಂ), ೨೦೧೦, ಕನ್ನಡ ಕ್ಲಿಷ್ಟ ಪದಕೋಶ, ಪ್ರಿಸಮ್; ಬುಕ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು.

೮೯. ಶಾಂತವೀರಯ್ಯ ಜೀಚಿ, ೨೦೦೯, ಕನ್ನಡ ಸಾಹಿತ್ಯ ಪರಿಚಯ, ಚೇತನ್ ಬುಕ್ ಹೌಸ್, ಹಂಪಿನಗರ, ಬೆಂಗಳೂರು.

೯೦. ಶಿರೂರ. ಜಿ.ವಿ, ೨೦೧೨, ಸಂಶೋಧನಾ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.

೯೧. ಶರಣಪ್ಪ, ೨೦೧೬, ಆಧುನಿಕರಣ ಪ್ರಕ್ರಿಯೆ: ಕುಷ್ಟಗಿ ಪರಿಸರದ ಪಾರಂಪರಿಕ ಕಸುಬುಗಳು, (ಅಪ್ರಕಟಿತ ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೨. ಶಿವಚಿತ್ತಪ್ಪ. ಕೆ. ಚೌಡೇಗೌಡ. ಎಂ. ಪ್ರಸನ್ನ. ಟಿ, ೨೦೦೫, ಸಂಶೋಧನಾ ವಿಧಾನ ಮತ್ತು ದತ್ತಾಂಶಗಳ ವಿಶ್ಲೇಷಣೆ, ರಾಜಗೋಪಾಲ್ ಪಬ್ಲಿಕೇಶನ್, ಮೈಸೂರು.

೯೩. ಶಿವರಾಮಕಾರಂತ. ಕೆ, (ಸಂ), ೨೦೧೨, ಸಿರಿಗನ್ನಡ ಅರ್ಥಕೋಶ, ಎಸ್.ಬಿ.ಎಸ್, ಪಬ್ಲಿಕೇಶನ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.

೯೪. ಶಿವಾನಂದ ಗುಬ್ಬಣ್ಣವರ, (ಸಂ), ೧೯೯೮, ದೇವರು ಬಂದಾವ್ ಬನ್ನಿರೆ ಭಾಗ-೨, ಒಕ್ಕಲ ಮಕ್ಕಳ ಪ್ರಕಾಶನ, ಯಳವತ್ತಿ.

೯೫. ಶಿವಾನಂದ ಗುಬ್ಬಿಣ್ಣವರ, (ಸಂ), ೧೯೯೪, ಸೋ ಅನ್ನ ಸೋಬಾನವನ್ನ (ಸೋಬಾನ ಪದಗಳು ಸಂಗ್ರಹ) ಅಕ್ಷಯ ಪ್ರಕಾಶನ, ಧಾರವಾಡ.

೯೬. ಶ್ರೀಕಂಠ ಕೂಡಿಗೆ, (ಸಂ), ೧೯೮೦, ಜನಪದ ಶಿಶು ಪ್ರಾಸಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೯೭. ಶ್ರೀನಿವಾಸ ರಿತ್ತಿ, ೧೯೭೦, ಮೈಲಾರ ದೇವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯೮. ಶ್ರೀನಿವಾಸ ಉಡುಪಿ, ೧೯೯೯, ಪುರಾಣ ಇತಿಹಾಸಗಳಲ್ಲಿ ರಾಕ್ಷಸರು, ವಿಜಯ ಪಬ್ಲಿಕೇಶನ್ಸ್, ಬೆಂಗಳೂರು.

೯೯. ಶ್ರೀನಿವಾಸ ಕುಲಕರ್ಣಿ, ೨೦೦೯, ಕನ್ನಡ ನುಡಿ ಸಂಸ್ಕೃತಿ, ಅಕ್ಷರ ಮಂಟಪ, ಹಂಪಿನಗರ, ಬೆಂಗಳೂರು.

೧೦೦. ಸಿದ್ದಪ್ಪ. ಬಿ., ೧೯೯೯, ಆಧುನಿಕ ಭಾರತದ ಆರ್ಥಿಕಾಭಿವೃದ್ಧಿ, ರವಿ ಪ್ರಕಾಶನ, ಹುಬ್ಬಳ್ಳಿ.

೧೦೧. ಸಿದ್ದಣ್ಣ. ಎಫ್. ಜಿಕಬಾಳ, (ಸಂ), ೨೦೧೧, ಅರ್ಥಾऽऽ... ಹೇಳ್ತಿನಾಂತಳ... ರ್‍ವಾಗಳು ದೇಶಿ ಕಾವ್ಯ ಮಾರ್ಗ, ಅಭಿಜ್ಞಾನ ಪ್ರಕಾಶನ, ಗದಗ.

೧೦೨. ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಭಾರತೀಯ ಪ್ರಕಾಶನ, ಬೆಂಗಳೂರು .

೧೦೩. ಸೀತಾರಾಮಯ್ಯ. ವಿ, (ಸಂ), ೨೦೧೨, ಜನಪದ ಸಾಹಿತ್ಯ, ಸ್ವಪ್ನಬುಕ್ ಹೌಸ್, ಬೆಂಗಳೂರು.

೧೦೪. ಸೀತಾರಾಮಯ್ಯ. ವಿ, ೨೦೦೯, ಹಣ ಪ್ರಪಂಚ, ವಿ.ಸೀ. ಸಂಪದ ರಾಜೀವ್‌ನಗರ, ಬೆಂಗಳೂರು.

೧೦೫. ಸುಬ್ಬಣ್ಣರೈ. ಎ. ಮಾಧವ ಪೆರಾಜೆ, (ಸಂ), ೨೦೧೩, ಸಂಕ್ಷಿಪ್ತ ಆಧುನಿಕ ಕನ್ನಡ ನಿಘಂಟು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೬. ಸುಜಾತ ಅಕ್ಕಿ, (ಸಂ), ೧೯೯೮, ಜನಪದ ಮುಕ್ತಕಗಳು, ಸುಜಾತ ಪ್ರಕಾಶನ, ರಾಮನಗರ.

೧೦೭. ಸುಧಾಕರ, ೨೦೦೯, ಜನಪದ ನುಡಿಗಟ್ಟುಗಳ ಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೮. ಸೋಮಶೇಖರ ಇಮ್ರಾಪುರ, ೧೯೮೯, ಜನಪದ ಒಗಟುಗಳು ವಿಮರ್ಶಾತ್ಮಕ ಅಧ್ಯಯನ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦೯. ಸೋಮಶೇಖರ. ಎಸ್.ವೈ, ೨೦೦೧, ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೦. ಹಲಸಂಗಿ ಗೆಳೆಯರು, (ಚೆನ್ನಮಲ್ಲಪ್ಪ, ಲಿಂಗಪ್ಪರೇವಪ್ಪ) ಸಂಪಾದಕರು, ೧೯೮೪, ಗರತಿಹಾಡು, ಸಮಾಜ ಪುಸ್ತಕಾಲಯ, ಧಾರವಾಡ.

೧೧೧. ಹನಮಗೌಡ. ಸಿ, ೨೦೦೧, ಕುಷ್ಟಗಿ ತಾಲೂಕಿನ ದರ್ಶನ, ಕುಂತಳ ಪ್ರಕಾಶನ, ಕೊಂಡಕೇರಾ.

೧೧೨. ಹಿರೇಮಠ. ಎಸ್.ಎಸ್, ೧೯೯೨, ಜಾತ್ರೆಗಳು, ಸಮತಾ ಪ್ರಕಾಶನ, ಹರಪನಹಳ್ಳಿ.

೧೧೩. ಹಿರೇಮಠ. ಆರ್.ಸಿ, (ಸಂ), ೧೯೭೮, ಜಾನಪದ ಸಾಹಿತ್ಯದರ್ಶನ, ಕುವೆಂಪು ಸ್ಮಾರಕ ಮಾಲೆ, ಮೈಸೂರು.

೧೧೪. ಹಿರೇಮಠ. ಎಸ್.ಎಸ್, ೧೯೯೪, ಮೈಲಾರ ಜಾತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೫. ಹೆಗಡೆ. ಎಲ್.ಆರ್, ೧೯೯೩, ಒಗಟುಗಳು ಮತ್ತು ಕಥೆಗಳು, ಜ್ಞಾನ ಸಾಧನ ಗ್ರಂಥಮಾಲೆ, ಸಿದ್ದಾಪುರ.

೧೧೬. ಹೆಗಡೆ. ಎಲ್.ಆರ್, ೧೯೮೨, ಹೆಂಗಸರ ಗೀತೆಗಳು, ಜ್ಞಾನ ಸಾಧನ ಗ್ರಂಥಮಾಲೆ, ಕುಮಟಾ.

೧೧೭. ಹೆಗಡೆ. ಎಲ್.ಆರ್, (ಸಂ), ೧೯೮೭, ಮಂಗಲ ಗೀತೆಗಳು ಮತ್ತು ಪೂಜಾ ಗೀತೆಗಳು, ಜ್ಞಾನ ಸಾಧನ ಗ್ರಂಥಮಾಲೆ, ಸಿದ್ದಾಪುರ.

೧೧೮. ಹೆಗಡೆ. ಎಲ್.ಆರ್, ೧೯೯೮, ಮಕ್ಕಳಲ್ಲಿ ಪ್ರಚಲಿತವಾದ ಮೂಢನಂಬಿಕೆಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧೯. ಹೆಬ್ಬಾಲೆ.ಕೆ. ನಾಗೇಶ, ೨೦೧೧, ಬಹುಸಂಸ್ಕೃತಿ ಮತ್ತು ದೇಸಿ ಜಾತ್ರೆಗಳ ಮಹಾ ಸಮನ್ವಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಕ್ತೃಗಳ ವಿವರ
(Profile of Spokes Persons)

ವಕ್ತೃಗಳವಿವರ (Profile of Spokes Persons)

ಕ್ರಸಂ.	ಹೆಸರು	ವೃತ್ತಿ	ಸ್ಥಳ	ಜಾತಿ	ವಯಸ್ಸು
೧.	ಕಲ್ಲಯ್ಯ ಸ್ವಾಮಿ ಶಿವಸಂಗಯ್ಯಸಾರಂಗಮಠ	ಅರ್ಚಕರು	ಚಂದ್ರಗಿರಿ	ಲಿಂಗಾಯತ	೪೫
೨.	ರಾಚಯ್ಯ ವಿರೂಪಾಕ್ಷಯ್ಯ ಅಜ್ಜಣ್ಣನವರು	ಅರ್ಚಕರು	ಚಂದ್ರಗಿರಿ	ಲಿಂಗಾಯತ	೪೮
೩.	ಬಸಯ್ಯ ಅಂದಾನಯ್ಯ ಸೊಪ್ಪಿನಮಠ	ಅರ್ಚಕರು	ಒತಗೇರಿ	ಲಿಂಗಾಯತ	೪೫
೪.	ರವಿಸ್ವಾಮಿ ಸಂಗಯ್ಯ ಸಾರಂಗಮಠ	ಅರ್ಚಕರು	ಚಂದ್ರಗಿರಿ	ಲಿಂಗಾಯತ	೪೫
೫.	ಪ್ರಭುಲಿಂಗಯ್ಯ ಅಂದಾನಯ್ಯಅಜಣ್ಣನವರು	ಅರ್ಚಕರು	ಚಂದ್ರಗಿರಿ	ಲಿಂಗಾಯತ	೫೦
೬.	ಶರಣಪ್ಪ ನಾನಪ್ಪ ರಾಠೋಡ್	ಕೂಲಿ	ಮಾವಿನಇಟಗಿ	ಲಂಬಾಣಿ	೪೨
೭.	ಸೋಮಪ್ಪ ಕರೆಕಲ್ಲು	ಕೂಲಿ	ಮಾವಿನಇಟಗಿ	ಉಪ್ಪಾರ	೫೫
೮.	ಪಕ್ಕೀರಮ್ಮ ಗಂಡ ಯಮನಪ್ಪ ಗೌಡ್ರು	ಕೂಲಿ	ಮಾವಿನಇಟಗಿ	ಕ್ಷೇತ್ರಿಯ	೬೦
೯.	ಯಮುನಪ್ಪ ನರಸಪ್ಪ ಗೌಡ್ರು	ಒಕ್ಕಲುತನ	ಮಾವಿನಇಟಗಿ	ಕ್ಷೇತ್ರಿಯ	೬೫
೧೦.	ನಾನಪ್ಪ ತಂದೆ ಪತಿಯಪ್ಪ ರಾಥೋಡ್	ಕೃಷಿ	ಮಾವಿನಇಟಗಿ	ಲಂಬಾಣಿ	೭೧
೧೧.	ಸಕ್ರಪ್ಪ ಪಾಂಡಪ್ಪ ಲಮಾಣಿ	ಕೂಲಿ	ಮಾವಿನಇಟಗಿ	ಲಂಬಾಣಿ	೪೪
೧೨.	ಅಯ್ಯಪ್ಪ ಅಗಸಿಮುಂದಿನ	ಕೃಷಿ	ಹನುಮಸಾಗರ	ಲಿಂಗಾಯತ	೫೫
೧೩.	ಚಂದಪ್ಪ ಅಡವಿ	ಕೃಷಿ	ಗುಡದೂರುಕಲ್ಲು	ಕುರುಬರು	೪೫
೧೪.	ಈರಪ್ಪ ಹಾರೊಟಗೆ	ಕೃಷಿ	ಗುಡದೂರುಕಲ್ಲು	ಲಿಂಗಾಯತ	೪೨

೧೫.	ಈರಪ್ಪ ಜೋಗಿ	ಕೃಷಿ	ಗುಡದೂರುಕಲ್ಲು	ಕುರುಬರು	೫೦
೧೬.	ಶರಣಪ್ಪ ಹೊಣೆಗೇರಿ	ಕೃಷಿ	ಗುಡದೂರುಕಲ್ಲು	ಕುರುಬರು	೬೨
೧೭.	ಮುತ್ತಪ್ಪ ಯಲ್ಲಪ್ಪ ಯರಗೇರಿ	ಕೃಷಿ	ಗುಡುದೂರುಕಲ್ಲು	ಕುರುಬರು	೪೫
೧೮.	ನಾಗಯ್ಯ ಅಡವಿಯ್ಯ ಕೊತಬಾಳಮಠ	ವೈದ್ಯರು	ಗುಡುದೂರುಕಲ್ಲು	ಲಿಂಗಾಯತ	೪೫
೧೯.	ಶರಣಯ್ಯ ಈರಯ್ಯ ಕೊತಬಾಳಮಠ	ವೈದ್ಯರು	ಗುಡುದೂರುಕಲ್ಲು	ಲಿಂಗಾಯತ	೪೦
೨೦.	ರವಿ ಭೀಮಪ್ಪ ಹರಿಜನ	ಕೃಷಿ	ಗುಡುದೂರುಕಲ್ಲು	ಹರಿಜನ	೪೨
೨೧.	ಶರಣಪ್ಪ ಪಂಪಣ್ಣ	ಕೃಷಿ	ಚಂದ್ರಗಿರಿ	ಲಿಂಗಾಯತ	೪೮
೨೨.	ವೀರಯ್ಯ ತಂದೆ ಸಂಗಯ್ಯಕೊತಬಾಳಮಠ	ಕೃಷಿ	ಚಂದ್ರಗಿರಿ	ಲಿಂಗಾಯತ	೪೦
೨೩.	ಲಕ್ಷ್ಮವ್ವ ನಾನಪ್ಪ ರಾಠೋಡ	ಕೂಲಿ	ಮಾವಿನಇಟಗಿ	ಲಂಬಾಣಿ	೬೦
೨೪.	ಷಡಕ್ಷರಯ್ಯ ಅಜ್ಜಣ್ಣವರು	ಕೂಲಿ	ಚಂದ್ರಗಿರಿ	ಲಿಂಗಾಯತ	೪೫
೨೫.	ಪರಸಪ್ಪ ಚಂದ್ರಪ್ಪ ತಳ್ಳಿಕೇರಿ	ಕೂಲಿ	ಚಂದ್ರಗಿರಿ	ವಾಲ್ಮೀಕಿ	೪೦
೨೬.	ಚಂದಪ್ಪ ಗಂಗಪ್ಪ ಜಾಲಿಹಾಳ	ಕೂಲಿ	ಚಂದ್ರಗಿರಿ	ವಾಲ್ಮೀಕಿ	೫೫
೨೭.	ಗಂಗಪ್ಪ ಕನಕಪ್ಪ ಜಾಲಿಹಾಳ	ಕೃಷಿ	ಚಂದ್ರಗಿರಿ	ವಾಲ್ಮೀಕಿ	೪೮
೨೮.	ದೊಡ್ಡ ಮಾಳಶೆಟ್ಟಿ	ಕೃಷಿ	ಯರಗೇರಿ	ಲಿಂಗಾಯತ	೫೨
೨೯.	ದೇವಲಪ್ಪ ರಾಠೋಡ	ಕೃಷಿ	ವೆಂಕಟಾಪುರ	ಲಂಬಾಣಿ	೪೮
೩೦.	ನಿಂಗಪ್ಪ ವಾಲ್ಮೀಕಿ	ಕೃಷಿ	ಮುಸಿಗೇರಿ	ವಾಲ್ಮೀಕಿ	೫೨
೩೧.	ಸಕ್ರವ್ವ ಗಂಡ ಭೋಜಪ್ಪ ಲಮಾಣಿ	ಕೃಷಿ	ಸೆಲ್ಲೂರು	ಲಂಬಾಣಿ	೬೦

೩೨.	ಕಾಡಯ್ಯ ನಂದಿಕೋಲಮಠ	ಕೃಷಿ	ಮಾವಿನಇಟಗಿ	ಲಿಂಗಾಯತ	೪೨
೩೩.	ಶಿವಪ್ಪ ನಾನಪ್ಪ ರಾಠೋಡ	ಕೃಷಿ	ಮಾವಿನಇಟಗಿ	ಲಂಬಾಣಿ	೨೨
೩೪.	ಕಸ್ತೂರಿಬಾಯಿ ಶರಣಪ್ಪ ರಾಥೋಡ್	ಮನೆಕೆಲಸ	ಮಾವಿನಇಟಗಿ	ಲಂಬಾಣಿ	೨೫
೩೫.	ಚಂದಾಲಿಂಗಪ್ಪ ಹನುಮಪ್ಪ ಕತ್ತಿ	ಕೃಷಿ	ಹಾಬಲಕಟ್ಟಿ	ಕುರುಬರ	೪೦
೩೬.	ವಿಪಾಕ್ಷಪ್ಪ ಅಂಗಡಿ	ಮುಖ್ಯ ಗುರುಗಳು	ಹಲಕಟ್ಟಿ	ಲಿಂಗಾಯತ	೪೫
೩೭.	ಜಿ.ಪಿ.ಪಾಟೀಲ	ಒಕ್ಕಲುತನ ಅಧ್ಯಕ್ಷರು	ಹುಬ್ಬಳ್ಳಿ	ಪಂಚಮಸಾಲಿ	೬೫
೩೮.	ರವಿ ಮಣಸಿನಕಾಯಿ	ವಕೀಲರು	ಹಾವೇರಿ	ಪಂಚಮಸಾಲಿ	೫೯
೩೯.	ಯಮನೂರಪ್ಪ ರುದ್ರಪ್ಪ ದೊಡ್ಡಮನಿ	ಕೃಷಿ	ಹನುಮಸಾಗರ	ಲಿಂಗಾಯತ	೨೫
೪೦.	ವಿರೂಪಾಕ್ಷಪ್ಪ ಹಡಪದ	ಕ್ಷೌರಿಕ	ಹನುಮಸಾಗರ	ಲಿಂಗಾಯತ	೪೦
೪೧.	ಯಮನೂರಪ್ಪ ರುದ್ರಪ್ಪ ದೊಡ್ಡಮನಿ	ಕೃಷಿ	ಹನುಮಸಾಗರ	ಭೋವಿ	೨೫
೪೨.	ಹುಲ್ಲಪ್ಪ ವಡ್ಡರ	ಗೌಂಡಿ	ಹನುಮಸಾಗರ	ಭೋವಿ	೪೫
೪೩.	ಕೂಡ್ಲೆಪ್ಪ ಹಡಪದ	ಕೃಷಿ	ಹನುಮಸಾಗರ	ಲಿಂಗಾಯತ	೪೫
೪೪.	ಗುರು ಬಳ್ಳಾರಿ	ವಿದ್ಯಾಭ್ಯಾಸ	ಮರಕಟ್ಟು	ಗಾಣಿಗ	೨೬
೪೫.	ಭಾಗ್ಯವಂತ ಗಾಣಿಗೇರ	ಅರಣ್ಯರಕ್ಷಕ	ಸೇಬಿನಕಟ್ಟಿ	ಗಾಣಿಗ	೩೦
೪೬.	ಮಾರುತಿ ಕುದುರೆ	ಅರಣ್ಯರಕ್ಷಕ	ಹನುಮಸಾಗರ	ಮಾದರ	೩೦
೪೭.	ಪರಶುರಾಮ ಪೂಜಾರಿ	ವಿದ್ಯಾಭ್ಯಾಸ	ಮಿಯಾಪುರ	ನಾಯಕ	೨೨
೪೮.	ಭೀಮೇಶಿ ಗಾಣಿಗೇರ	ವಿದ್ಯಾಭ್ಯಾಸ	ಮಿಯಾಪುರ	ಗಾಣಿಗ	೨೩
೪೯.	ಭೀಮೇಶ ಹುಡೇದ	ಕೃಷಿ	ಮಿಯಾಪುರ	ಗಾಣಿಗ	೪೫

೫೦.	ಚನ್ನಬಸಪ್ಪ ತಲೆಮಟ್ಟಿ	ಕೃಷಿ	ಮಿಯಾಪುರ	ಗಾಣಿಗ	೩೬
೫೧.	ಚಂದಾಲಿಂಗ ಹುಡೇದ	ವಿದ್ಯಾಭ್ಯಾಸ	ಮಿಯಾಪುರ	ಗಾಣಿಗ	೨೩
೫೨.	ಶಿವಪ್ಪ ಮಲ್ಲಪ್ಪ ದೊಡ್ಡಮನಿ	ಕೃಷಿ	ಹನಮಸಾಗರ	ಲಿಂಗಾಯತ	೪೦
೫೩.	ಲಿಂಗರಾಜ ಹುಡೇದ	ನೌಕರ	ಮಿಯಾಪುರ	ಗಾಣಿಗ	೨೫
೫೪.	ಮಂಜುನಾಥ ತಲೆಮಟ್ಟಿ	ವಿದ್ಯಾಭ್ಯಾಸ	ಮಿಯಾಪುರ	ಗಾಣಿಗ	೨೧
೫೫.	ನೀಲಪ್ಪ ಕುದರಿ	ಅ.ಇಲಾಖೆ	ಹನಮಸಾಗರ	ಮಾದರ	೩೬
೫೬.	ಬಸವರಾಜ ಹಾಲಕ್ಕಿ	ಕೃಷಿಕ	ಹಾನಾಪುರ(ಗುಳೆದಗುಡ್ಡ/ತಾ)	ಕುರುಬರು	೩೦
೫೭.	ಬಸವರಾಜ ಮುದ್ದಾಪುರ	ವ್ಯಾಪಾರ	ಬಿಸಲಿಗೆ(ಹುನಗುಂದ/ತಾ)	ಕುರುಬರು	೩೨
೫೮.	ಯಮನೂರಪ್ಪ ಅಂದೆಲಿ	ಕೃಷಿ	ಗಿಡ್ಡಿನಾಯಕನಾಳ	ಕುರುಬರು	೩೩
೫೯.	ಪುಂಡಲಿಕ ಶಂಕರಗೌಡ ಗೌಡ್ರು	ಚಾಲಕರು	ಹಾನಪುರ	ಕುರುಬರು	೨೬
೬೦.	ಶರಣಪ್ಪ ಮಲ್ಲಪ್ಪ ದೊಡ್ಡಮನಿ	ಕೃಷಿ	ಹನುಮಸಾಗರ	ಲಿಂಗಾಯತ	೪೫
೬೧.	ಬಸಪ್ಪ ಹಡಪದ	ಕ್ಷೌರಿಕ	ಹನುಮಸಾಗರ	ಲಿಂಗಾಯತ	೪೫
೬೨.	ಸಂಗಪ್ಪ ಮಲ್ಲಪ್ಪ ದೊಡ್ಡಮನಿ	ಕೃಷಿ	ಹನುಮಸಾಗರ	ಲಿಂಗಾಯತ	೪೮
೬೩.	ಹನುಮಂತಪ್ಪ ಹಡಪದ	ಕ್ಷೌರಿಕ	ಹನುಮಸಾಗರ	ಲಿಂಗಾಯತ	೪೮
೬೪.	ಈಶಪ್ಪ ಗುಡಿ	ಕ್ಷೌರಿಕ	ಹನುಮಸಾಗರ	ಲಿಂಗಾಯತ	೪೯
೬೫.	ಈಶಪ್ಪ ಹಡಪದ್	ಕ್ಷೌರಿಕ	ಹನುಮಸಾಗರ	ಲಿಂಗಾಯತ	೪೫
೬೬.	ಹೊನ್ನಪ್ಪ ದೊಡಮನಿ	ಕೃಷಿ	ಹನುಮಸಾಗರ	ಲಿಂಗಾಯತ	೬೦
೬೭.	ಇಸ್ಲಾಂ ಸಾಬ ತಾಸಿಲ್ದಾರ್	ಕೃಷಿ	ಹನುಮಸಾಗರ	ಮುಸ್ಲಿಂ	೪೮

೬೮.	ಮೈನುದ್ದಿನ್ ಕಾಸಿಂಸಾಬ್	ವ್ಯಾಪಾರ	ಹನುಮಸಾಗರ	ಮುಸ್ಲಿಂ	೭೫
೬೯.	ಕರಿಯಪ್ಪ ಹಡಪದ	ಕೃಷಿ	ಹನುಮಸಾಗರ	ಲಿಂಗಾಯತ	೫೦
೭೦.	ಈರಪ್ಪ ಕಲಬುರ್ಗಿ	ಕ್ಷೌರಿಕ	ಹನುಮಸಾಗರ	ಲಿಂಗಾಯತ	೪೮
೭೧.	ಮಹಾಂತೇಶ ಅಮರಪ್ಪ ಹಡಪದ	ನೌಕರರು	ಹನುಮಸಾಗರ	ಲಿಂಗಾಯತ	೨೫
೭೨.	ದ್ಯಾಮಣ್ಣ ಮಲ್ಲಪ್ಪ ಹಡಪದ	ಗೌಂಡಿ	ಹನುಮಸಾಗರ	ಲಿಂಗಾಯತ	೨೪
೭೩.	ಬಸವರಾಜ ಮಾಂತೇಶ ಹಡಪದ	ಗೌಂಡಿ	ಹನುಮಸಾಗರ	ಲಿಂಗಾಯತ	೨೬
೭೪.	ರವಿಕುಮಾರ ರುದ್ರಪ್ಪ ದೊಡ್ಡಮನಿ	ಕೃಷಿ	ಹನುಮಸಾಗರ	ಲಿಂಗಾಯತ	೩೦
೭೫.	ಶಿವು ತಳವಾರ	ಚಾಲಕರು	ಹಿರೇಓತಗೇರಿ	ವಾಲ್ಮೀಕಿ	೩೫
೭೬	ಅನಿಲ್ ಕುಮಾರ ತಳವಾರ	ವಿದ್ಯಾಭ್ಯಾಸ	ಹಿರೇಓತಗೇರಿ	ವಾಲ್ಮೀಕಿ	೨೮
೭೭	ಮಲ್ಲಿಕಾರ್ಜುನ ಶೆಟ್ಟರ	ವ್ಯಾಪಾರ	ಹನುಮಸಾಗರ	ಲಿಂಗಾಯತ	೬೫
೭೮.	ಚಂದಪ್ಪ ಮಾಲಗಿತ್ತಿ	ಕೃಷಿ	ರಾಂಪುರ	ಹರಿಜನ	೬೫
೭೯.	ಬಸವಣ್ಣ ಮುದುಗಲ್	ವಿಶ್ವಕರ್ಮ	ಮುದುಗಲ್	ಕ್ಷತ್ರಿಯ	೫೯
೮೦.	ಚೆನ್ನಬಸಪ್ಪ ಬೇನಾಳ	ಕೃಷಿ	ನೀಡಸೋಸಿ	ಲಿಂಗಾಯತ	೫೧
೮೧.	ಬುಡ್ಡಪ್ಪಯಲಪ್ಪ ಗೌಡರ	ಕೃಷಿ	ಕೋಟೆಕಲ್	ಉಪ್ಪಾರ	೪೮
೮೨.	ಹುಲ್ಲಪ್ಪ ಯಮನೂರಪ್ಪ ಗೌಡರ	ವ್ಯಾಪಾರಸ್ಥರು	ಮುರುಡಿ	ಉಪ್ಪಾರ	೪೭
೮೩.	ದುರ್ಗಪ್ಪ ಹೊಸಮನಿ	ಒಕ್ಕಲುತನ	ಸಂತೆಕಲ್ಲೂರು	ಉಪ್ಪಾರ	೪೯
೮೪.	ನಾಗರಾಜ ವಾಲಿಕಾರ	ಕೃಷಿ	ಬಸರಕೋಡ	ವಾಲ್ಮೀಕಿ	೫೧
೮೫.	ಚಂದನಗೌಡ ಪ್ರೋ ಪಾಟೀಲ	ಸ.ಮಾಜಸೇವೆ	ಮಿಯಾಪುರ	ವಾಲ್ಮೀಕಿ	೫೫

೮೬.	ಶರಣಪ್ಪ ಪಿಡಗುಂದಿ	ಸಮಾಜಸೇವೆ	ಯರಗೇರ	ಪಂಚಮಶಾಲಿ	೫೪
೮೭.	ಡಾ.ಶರಣಪ್ಪ	ವೈದ್ಯರು	ಮಲಕಾಪುರ	ಪಂಚಮಸಾಲಿ	೫೪
೮೮.	ಶಿವಶರಣಪ್ಪ ಚಂದಾಲಿಂಗಪ್ಪಹವಾಲ್ದಾರ್	ಸಮಾಜಸೇವೆ	ಬಂಡಿ	ಲಿಂಗಾಯತ	೫೫
೮೯.	ಮಸನಪ್ಪ ದ್ಯಾಮಣ್ಣ ಗಂಗೂರ	ಒಕ್ಕಲುತನ	ತೆಗ್ಗಿ	ಕುರುಬರ	೪೫
೯೦.	ಹುಲ್ಲಪ್ಪ ಮಾಲಗಿತ್ತಿ	ವ್ಯಾಪಾರ	ದ್ಯಾಂಪುರ	ಕುರುಬ	೪೯
೯೧.	ಚಂದನಗೌಡ ಗೌಡ್ರು	ಒಕ್ಕಲುತನ	ಯತ್ನಟ್ಟಿ	ಪಂಚಮಸಾಲಿ	೫೧
೯೨.	ಬಸವ ರಾಜಶೇಖರ ಸೌದತ್ತಿ	ಕೃಷಿ	ಕಾತ್ರಾಳ	ಉಪ್ಪಾರ	೬೧
೯೩.	ವಿಠ್ಠಲ ಈರಪ್ಪ ನರಿ	ಪಶುಪಾಲನೆ	ಮಬನೂರು	ಕುರುಬರು	೫೨
೯೪.	ಪರುಶುರಾಮ ಆದಿತ್ಯ ಕಿತ್ತಲಿ	ಕೃಷಿ	ಅಮಿನಗಡ	ಕುರುಬರು	೪೯
೯೫.	ಚಂದಪ್ಪ ಒಲೆಕಾರ	ಸಮಾಜಸೇವೆ	ಅಂಬ್ಲಿಕೊಪ್ಪ	ವಾಲ್ಮೀಕಿ	೪೦
೯೬.	ಪ್ರವೀಣ ಚಂದಣ್ಣವರ	ಕೃಷಿ	ಹುಬ್ಬಳಿ	ಉಪ್ಪಾರ	೪೫
೯೭.	ಶರಣಪ್ಪ ಚಂದಪ್ಪ ಮುಡಗೇರೆ	ಸಮಾಜಸೇವೆ	ಹೀರೆಮ್ಯಾಗೇರೆ	ಲಿಂಗಾಯತ	೪೮
೯೮.	ಶರಣಪ್ಪ ಪಾದಿ	ಸಮಾಜಸೇವೆ	ಬಾದಿಮನಾಳ	ಲಿಂಗಾಯತ	೪೭
೯೯.	ವಿರುಪನಗೌಡ ಹೀರೆಗೌಡ	ಒಕ್ಕಲುತನ	ಮದ್ದುರು	ಲಿಂಗಾಯತ	೫೩
೧೦೦.	ಶರಣಪ್ಪ ಮಾದರ	ಒಕ್ಕಲುತನ	ಮನ್ನಾರಿ	ಹರಿಜನ	೫೫
೧೦೧.	ಶರಣಪ್ಪ ತೋಟದ	ವ್ಯಾಪಾರ	ಕಬ್ಬರಗಿ	ಲಿಂಗಾಯತ	೫೬
೧೦೨.	ಬಸವರಾಜ ನಿಂಗಪ್ಪ ಹಣಬಿ	ಕೃಷಿ	ಮಳವತಿ	ಉಪ್ಪಾರ	೪೮
೧೦೩.	ಬಾಲಪ್ಪ ಗಡಾದ	ಕೃಷಿ	ಕೊಡತಗೇರಿ	ಉಪ್ಪಾರ	೪೨
೧೦೪.	ವೆಂಕಪ್ಪ ಭರಮಪ್ಪ ನಿರಲಕೇರಿ	ವ್ಯಾಪಾರ	ಎಸ್.ಕೆ.ಆಲೂರು	ಲಿಂಗಾಯತ	೪೩

೧೦೫.	ಸಂಗನಗೌಡ ಕೊಡದಾಳ	ಸಮಾಜಸೇವೆ	ಕೋಳೂರು	ಪಂಚಮಸಾಲಿ	೫೪
೧೦೬.	ಶಶಿಕಾಂತ ಗೌಡಸಿದ್ದಾರ್ಥಗೌಡ	ಸಮಾಜಸೇವೆ	ಕೋಳೂರು	ಪಂಚಮಸಾಲಿ	೫೭
೧೦೭.	ತರಣ ದೇವೇಂದ್ರಪ್ಪ	ಸಮಾಜಸೇವೆ	ಕೋಳೂರು	ಉಪ್ಪಾರ	೪೩
೧೦೮.	ಬಸವಣ್ಣೆಮ್ಮ ಶಿವಪ್ಪಗುಡ್ಡದಮ್ಯಾಗಳ	ವ್ಯಾಪಾರ	ಕೋಳೂರು	ಉಪ್ಪಾರ	೩೮
೧೦೯.	ಶಿವನಂದ ಸಿದ್ದಪ್ಪ ಎಮ್ಮಿ	ಕೃಷಿ	ಬೇಲೂರು	ಉಪ್ಪಾರ	೪೦
೧೧೦.	ಶಂಕರಗೌಡ ಯುವರಾಜಪುರ	ಕೃಷಿ	ಸಂಡೂರು	ಉಪ್ಪಾರ	೪೫
೧೧೧.	ಬಸವರಾಜ ಆಲೂರು	ವ್ಯಾಪಾರ	ಮಂಟುರು	ಕುರುಬರು	೫೪
೧೧೨.	ಯಲ್ಲಪ್ಪ. ಎಸ್. ಕ್ಯಾದಿಗೇರೆ	ವ್ಯಾಪಾರ	ಬಾಗಲಕೋಟೆ	ಗಾಣಿಗ	೪೮
೧೧೩.	ಕರಿಯಪ್ಪ ಕಂಚಿಯರ	ಖಾಸಗಿ ನೌಕರ	ಗುಡೂರು	ವಾಲ್ಮೀಕಿ	೫೭
೧೧೪.	ಚಂದ್ರಶೇಖರ ಕರಿಯಪ್ಪ	ಚಾಲಕರು	ಗುಡೂರು	ವಾಲ್ಮೀಕಿ	೩೬
೧೧೫.	ಹನುಮಂತ ಕರಿಯಪ್ಪ ಕಂಚಿಯರ	ಕೆ.ಎಸ್.ಆರ್.ಟಿ.ಸಿ	ಗುಡೂರು	ವಾಲ್ಮೀಕಿ	೩೨
೧೧೬.	ವೀರೇಶ ಕರಿಯಪ್ಪ	ಗೌಂಡಿ	ಗುಡೂರು	ವಾಲ್ಮೀಕಿ	೩೦
೧೧೭.	ಪರಶುರಾಮ	ಚಾಲಕರು	ಗೂಡೂರು	ವಾಲ್ಮೀಕಿ	೨೬
೧೧೮.	ಹುಲ್ಲಪ್ಪ ಚಂದಪ್ಪ	ಕೃಷಿ	ಗುಡೂರು	ವಾಲ್ಮೀಕಿ	೩೬
೧೧೯.	ಕಲ್ಲಪ್ಪ ಚಂದಪ್ಪ ಕಂಚಿಯರ	ಕೂಲಿ	ಗುಡೂರು	ವಾಲ್ಮೀಕಿ	೪೩

೧೨೦.	ಶ್ರೀಶೈಲ ದೇಸಾಯಿ	ಒಕ್ಕಲುತನ	ಗುಡೂರು	ಜಂಗಮ	೫೫
೧೨೧.	ತಿರುಮಲ ದೇಶಪಾಂಡೆ	ಶಿಕ್ಷಕರು	ಗುಡೂರು	ಬ್ರಾಹ್ಮಣ	೫೨
೧೨೨.	ವೆಂಕಣ್ಣ ಕುಲಕರ್ಣಿ	ಒಕ್ಕಲುತನ	ಗೂಡೂರು	ಜಂಗಮರು	೪೦
೧೨೩.	ಮಲ್ಲಪ್ಪ ಮಂತ್ರಿ	ವ್ಯಾಪಾರ	ಗುಡೂರು	ಉಪ್ಪಾರ	೬೨
೧೨೪.	ಹನುಮಂತ ಗದ್ದಿ	ಟೇಲರ	ಗುಡೂರು	ಉಪ್ಪಾರ	೪೨
೧೨೫.	ಬಸವನಗೌಡ ಸಂಗನಗೌಡ ಗೌಡ್ರು	ಒಕ್ಕಲುತನ	ಬೀಳಗಿ	ಪಂಚಮಸಾಲಿ	೬೦
೧೨೬.	ನಾಗನಗೌಡ ಗೌಡ್ರು	ಒಕ್ಕಲುತನ	ಬೀಳಗಿ	ಪಂಚಮಸಾಲಿ	೬೨
೧೨೭.	ಬಸನಗೌಡ ಗೌಡ್ರು	ಒಕ್ಕಲುತನ	ಬೀಳಗಿ	ಪಂಚಮಸಾಲಿ	೫೦
೧೨೮.	ಮಾಂತೇಶಗೌಡ್ರು ಹಿರೇಗೌಡರು	ಒಕ್ಕಲುತನ	ಬೀಳಗಿ	ಪಂಚಮಸಾಲಿ	೭೦
೧೨೯.	ಶಿವನಗೌಡ ಗೌಡ್ರು	ಒಕ್ಕಲುತನ	ಬಿಳಗಿ	ಪಂಚಮಸಾಲಿ	೭೦
೧೩೦.	ಸಿದ್ದನಗೌಡ ಹುಗ್ಗಿ	ಒಕ್ಕಲುತನ	ಬೀಳಗಿ	ಪಂಚಮಸಾಲಿ	೬೦
೧೩೧.	ಹುಲ್ಲನಗೌಡ ಶಬ್ಬಿ	ಕೃಷಿ	ಕಬ್ಬರಗಿ	ಪಂಚಮಸಾಲಿ	೭೨
೧೩೨.	ಚಂದಾಲಿಂಗಪ್ಪ ಮಾನಪ್ಪ ವಗ್ಗರು	ಕೃಷಿ	ಕಬ್ಬರಗಿ	ಕುರುಬರು	೪೫
೧೩೩.	ಮಾಸಪ್ಪ ವಗ್ಗರು	ಕೃಷಿ	ಕಬ್ಬರಗಿ	ಕುರುಬರು	೬೦
೧೩೪.	ಚಂದಾಲಿಂಗಪ್ಪ ವಗ್ಗರು	ಕೃಷಿ	ಕಬ್ಬರಗಿ	ಕುರುಬರು	೬೦
೧೩೫.	ಹುಲ್ಲಪ್ಪ ಗಿರಿಯಪ್ಪ ವಗ್ಗರು	ಕೃಷಿ	ಮನ್ನೇರಾಳ	ಕುರುಬರು	೪೫
೧೩೬.	ಸಣ್ಣ ಚಂದಪ್ಪ ವಗ್ಗರು	ಕೃಷಿ	ಮನ್ನೇರಾಳ	ಕುರುಬರು	೪೨
೧೩೭.	ಮಸಣಯ್ಯ ವಗ್ಗರು	ಕೃಷಿ	ಮನ್ನೇರಾಳ	ಕುರುಬರು	೪೫

೧೩೮.	ಗಿರಿಯಪ್ಪಜ್ಜ ಮಳ್ಳಯ್ಯನವರ	ಕೃಷಿ	ದಮ್ಮೂರು	ಕುರುಬರು	೩೫
೧೩೯.	ಹುಲ್ಲಪ್ಪ ಮಳ್ಳೆಯ್ಯನವರು	ಕೃಷಿ	ದಮ್ಮೂರು	ಕುರುಬರು	೩೨
೧೪೦.	ಹುಲ್ಲಪ್ಪ ಮಳ್ಳಯ್ಯನವರು	ಕೃಷಿ	ದಮ್ಮೂರು	ಕುರುಬರು	೬೫
೧೪೧.	ಹನುಮಂತ ವಾಲಿಕಾರ್	ಕೃಷಿ	ಮನ್ನೇರಾಳ	ವಾಲ್ಮೀಕಿ	೫೨
೧೪೨.	ಚಂದನಗೌಡ ಶಬ್ಬಿ	ನಿವೃತ್ತ ಪೊಲೀಸರು	ಮನ್ನೇರಾಳ	ಪಂಚಮಸಾಲಿ	೬೮
೧೪೩.	ಕಳಕಪ್ಪ.ಜಿ.ಅರಮನೆ	ಒಕ್ಕಲುತನ	ನಡಗುಂದಿ	ಪಂಚಮಸಾಲಿ	೭೨
೧೪೪.	ಕಳಕಪ್ಪ ಬಾಲಪ್ಪನರಿ	ಒಕ್ಕಲುತನ	ನಾಗರಸಕೊಪ್ಪ	ಕುರುಬರು	೬೨
೧೪೫.	ನಿಂಗಪ್ಪ ನರಗುಂದಪ್ಪ ಕುದುರೆಕಾರರು	ಒಕ್ಕಲುತನ	ನರಗುಂದ	ಕುರುಬರು	೬೫
೧೪೬.	ನಾಗಪ್ಪ ಮೇಟಿ	ಒಕ್ಕಲುತನ	ನೆರೆಬೆಂಚಿ	ಕುರುಬರು	೪೫
೧೪೭.	ಹುಲ್ಲಪ್ಪ ಮೇಟಿ	ಒಕ್ಕಲುತನ	ನೆರೆಬೆಂಚಿ	ಕುರುಬರು	೫೫
೧೪೮.	ದ್ಯಾಮಣ್ಣ ನಿಂಗಪ್ಪ ಮಂಗಳೂರು	ಗೊರವಪ್ಪ	ಗಜೇಂದ್ರಗಡ	ಕುರುಬ	೭೮
೧೪೯.	ಶ್ರೀಶೈಲ.ಎಸ್. ಗುಡಪ್ಪನವರ	ಸ.ಸೇವೆ	ವಿಜಯಪುರ	ಉಪ್ಪಾರ	೬೦
೧೫೦.	ವಿನಯನಾಯಕ.ಎಂ. ಹನುಮಪ್ಪನವರ	ವ್ಯಾಪಾರ	ಧಾರವಾಡ	ವಾಲ್ಮೀಕಿ	೪೫
೧೫೧.	ಸೌಮ್ಯ ಆರ್ ಹುಲ್ಲಣ್ಣನವರ್	ಗೃಹಿಣಿ	ಶಾಂತಿಗಿರಿ	ಕುರುಬ	೪೦
೧೫೨.	ಕುಮಾರ ಪ್ರದೀಪ ವಿ. ಕಲ್ಲನಗೌಡ್ರು	ಸ.ಸೇವೆ	ಮಾಳವಾಡ	ವಾಲ್ಮೀಕಿ	೩೮

೧೫೩.	ಚನ್ನನಗೌಡ ಒಡೆದ	ಕೃಷಿ	ಶಿಶುವಿನಹಾಳ	ಕುರುಬರ	೫೦
೧೫೪.	ಕುಬೇರಪ್ಪ ಎಸ್ ಹುಬ್ಬಳ್ಳಿ	ಕೃಷಿ	ಬೇವಿನಾಳ	ಲಿಂಗಾಯತ	೫೫
೧೫೫.	ಶ್ರೀ.ಶಂಕ್ರಪ್ಪ ಕಾಳಗಿ	ವ್ಯಾಪಾರ	ಕಲಕಂಬ	ಪಂಚಮಸಾಲಿ	೫೨
೧೫೬.	ಲಕ್ಷ್ಮೀಬಾಯಿ ಕುರಿ	ಸ.ಸೇವೆ	ಸೂಳೇಬಾವಿ	ಕುರುಬರ	೪೬
೧೫೭.	ನೀಲಪ್ಪಗೌಡ ಎಸ್. ಪಾಟೀಲ	ಕೃಷಿ	ಗದಗ	ಪಂಚಮಸಾಲಿ	೬೦
೧೫೮.	ಬಸವಣ್ಣವರ ಬಜೇಟ್ಟ	ಸ.ಸೇವೆ	ಬಾಗಲಕೋಟೆ	ಲಿಂಗಾಯತ	೪೫
೧೫೯.	ಇಂದ್ರಮ್ಮ ಗದಗಿನ	ಸ.ಸೇವೆ	ಶಿರಾಳಕೊಪ್ಪ	ಪಂಚಮಸಾಲಿ	೪೯
೧೬೦.	ಬಸವರಾಜ.ಸಿ. ಕೊಡಗಲಿ	ಒಕ್ಕಲುತನ	ಹೆರೂರು	ಲಿಂಗಾಯತ	೫೪
೧೬೧.	ಚಂದ್ರಶೇಖರ್ ಪಾಟೀಲ್	ಒಕ್ಕಲುತನ	ಮಲಕಾಪುರ	ಪಂಚಮಸಾಲಿ	೫೮
೧೬೨.	ಸಾವಿತ್ರಮ್ಮ ಚೆನ್ನವೀರನಗೌಡ	ಗೃಹಿಣಿ	ಹಿರೇಕೆರೆಯೋಗಿನಹಳ್ಳಿ	ಲಿಂಗಾಯತ	೫೦
೧೬೩.	ಡಾ.ರಾಮಣ್ಣ.ಕೆ. ಮಾಡ್ಲಗೇರಿ	ವೈದ್ಯರು	ಹಿರೇಮ್ಯಾಗೇರಿ	ಕುರುಬರು	೫೨
೧೬೪.	ಶಿವನಗೌಡ ಜಿ. ಹೊಸಮನಿ	ಕೃಷಿ	ಬಂಡಿವಾಡ	ಕುರುಬರು	೬೦
೧೬೫.	ಲಿಂಗನಬಸಪ್ಪ ಚನ್ನಣ್ಣವರ್	ಕೃಷಿ	ನರಗುಂದ	ಪಂಚಮಸಾಲಿ	೬೩
೧೬೬.	ಶರಣಪ್ಪ ಮಂಡಿ	ಒಕ್ಕಲುತನ	ಕೆರೂರು	ಉಪ್ಪಾರ	೬೦
೧೬೭.	ಚಂದನಗೌಡ.ಬಿ. ಮಾಲಿಪಾಟೀಲ್	ಒಕ್ಕಲುತನ	ಕೆರೂರು	ಪಂಚಮಸಾಲಿ	೭೦
೧೬೮.	ಸಿದ್ದನಗೌಡ.ಬಿ. ಕಲ್ಲನಗೌಡ	ಸ.ಸೇವೆ	ಗದಗ	ಲಿಂಗಾಯತ	೬೮

೧೬೯.	ರಂಗಪ್ಪ.ಕೆ. ಹುಲ್ಲಣ್ಣವರು	ವ್ಯಾಪಾರ	ಕುಟಗಿನಕೇರಿ	ಉಪ್ಪಾರ		೫೫
೧೭೦.	ಸುಮಿತ್ರ ಬಸವಣ್ಣವರ	ಗೃಹಿಣಿ	ಶಿರೂರು	ಲಿಂಗಾಯತ		೪೫
೧೭೧.	ದುರಗಪ್ಪ ತಳವಾರ	ಕೃಷಿ	ಹನುಮನಾಳ	ವಾಲ್ಮೀಕಿ		೫೫
೧೭೨.	ಬಸವರಾಜ.ಎಸ್. ಸಂಕಪ್ಪನವರ್	ವ್ಯಾಪಾರ	ಕೋಟಿಗನೂರು	ಕುರುಬರ		೬೨
೧೭೩.	ನಂದನ.ಎನ್.ಗೌಡರ	ಕೃಷಿ	ಬಾಗಲಕೋಟೆಯ	ಲಿಂಗಾಯತ		೫೫
೧೭೪.	ವರದರಾಜು ಎನ್. ಹೊಸಮನಿ	ಗುತ್ತಿಗೆದಾರ	ಬೆಂಗಳೂರು	ಕುರುಬರು		೬೦
೧೭೫.	ರಂಗಪ್ಪ.ಎಚ್. ಹಿರೆಲ್ಲವರೆ	ಒಕ್ಕಲುತನ	ಎಸ್.ಕೆ.ಆಲೂರು	ಉಪ್ಪಾರ		೬೮
೧೭೬	ಗಿರಿಗೌಡ.ಬಿ.ಗೌಡರ	ಕೃಷಿ	ಲಿಂಗಸೂರು	ಪಂಚಮಸಾಲಿ		೬೧
೧೭೭	ಚಂದಪ್ಪ ಯಮನಪ್ಪ ಹಟ್ಟಿ	ಒಕ್ಕಲುತನ	ಬೇವೂರು	ವಾಲ್ಮೀಕಿ		೪೯
೧೭೮.	ಮುತ್ತಪ್ಪ.ಡಿ.ಕೊಂತ	ಸ.ಸೇವೆ	ಐಹೊಳೆ	ವಾಲ್ಮೀಕಿ		೫೫
೧೭೯.	ಚೆನ್ನಬಸವಗೌಡ.ಎಸ್. ಕಳಸದ	ವ್ಯಾಪಾರಸ್ಥ	ಶಿಶುವಿನಹಾಳ	ಮಡಿವಾಳ		೫೪
೧೮೦.	ರವಿಕುಮಾರ.ಎಸ್. ಅರಮನೆ	ಉದ್ದಿಮಿ	ಹೊಸಪೇಟೆ	ಪಾಂಚಾಳ		೫೫
೧೮೧.	ಬಸವರಾಜ.ಎಚ್. ಪಾಟೀಲ್	ಒಕ್ಕಲುತನ	ಬನ್ನಿಹಟ್ಟಿ	ಪಂಚಮಸಾಲಿ		೬೪
೧೮೨.	ನೇತ್ರಾವತಿ.ಎಸ್.ಮೇಟಿ	ಗೃಹಿಣಿ	ಬೆಳ್ಳೇರಿ	ಕುರುಬರು		೪೦
೧೮೩.	ಅರ್ಜುನ್.ಎಂ.ಗೌಡರು	ಕೃಷಿ	ಮುದ್ದೇಬಿಹಾಳ್	ಲಿಂಗಾಯತ		೪೨
೧೮೪.	ಬಾಳಪ್ಪ ಬಾರಕೇರ	ವ್ಯಾಪಾರ	ಬೇನಹಾಳ	ಕುರುಬರು		೫೧
೧೮೫.	ಗೌರಮ್ಮ.ಆರ್. ಮುಲ್ಲನವರ್	ಗೃಹಿಣಿ	ಶಾಂತಗಿರಿ	ಕುರುಬರು		೫೦

೧೮೬.	ನವೀನ್‌ಕುಮಾರ್.ಎಂ. ಹುಲ್ಲಣ್ಣವರ	ವ್ಯಾಪಾರಸ್ಥ	ಕೋಳಿಗೊಡ	ಕುರುಬರು	೪೦
೧೮೭.	ಮುದುಕನಗೌಡ.ಬಿ. ವೆಂಕಣ್ಣಗೌಡ್ರು	ಕೃಷಿ	ನಂದವಾಡಗಿ	ಲಿಂಗಾಯತ	೫೫
೧೮೮.	ಚಂದನಗೌಡ ಮರಿಗೌಡರ	ಕೃಷಿ	ತಾವರಗೇರ	ಲಿಂಗಾಯತ	೫೬
೧೮೯.	ದೊಡ್ಡಕ್ಕ ವಾಯ್. ಗೌಡ್ರ	ಕೃಷಿ	ಎಸ್.ಕೆ.ಆಲೂರ್	ಉಪ್ಪಾರ	೪೫
೧೯೦.	ಯಮುನಮ್ಮ.ಪಿ. ಬಾರಕೇರ	ಕೃಷಿ	ಹೆಚ್.ವೆಂಕಟಾಪುರ್	ಉಪ್ಪಾರ	೪೭
೧೯೧.	ಮಹದೇವ್.ಜಿ. ಚಂದಪ್ಪಣ್ಣವರ	ಒಕ್ಕಲುತನ	ಬೆಳಗಲಿ	ಉಪ್ಪಾರ	೪೯
೧೯೨.	ಲಕ್ಷ್ಮಣಗೌಡ.ಕೆ. ಬಿರಾದರ್	ವ್ಯಾಪಾರ	ಸಿದ್ದಾಪುರ	ವಾಲ್ಮೀಕಿ	೫೨
೧೯೩.	ಗೋಪಾಲ.ಎಸ್. ಕಟ್ಟಿಮನಿ	ನೌಕರಿ	ಬಾಗಲಕೋಟ	ವಾಲ್ಮೀಕಿ	೫೫
೧೯೪.	ಚಂದನ.ಎಸ್. ಸವದತ್ತಿ	ವ್ಯಾಪಾರ	ಕೆಂಗಾನೂರು	ಕುರುಬರು	೪೫
೧೯೫.	ಮೈಲಾರಗೌಡ.ಸಿ. ತಳವಾರಗೇರಿ	ಕೃಷಿ	ಯಲಬುರ್ಗಾ	ಕುರುಬರು	೫೧

ಸಾಂಸ್ಕೃತಿಕ ಪದಕೋಶ
(Cultural Glossary)

ಸಾಂಸ್ಕೃತಿಕ ಪದಕೋಶ (Cultural Glossary)

ಚಂದಾಲಿಂಗೇಶ್ವರ ಮೂಲಕ್ಕೆ ಸಂಬಂಧಿಸಿದಂತೆ :

(ಅ)

೧. ಅಂದಚಂದ ಲಿಂಗ : ಚಂದಾಲಿಂಗೇಶ್ವರನ ಪೂರ್ವದ ಹೆಸರು ಲಿಂಗಯ್ಯ. ಈತನು ಲಿಂಗವನ್ನು ಅಂದ ಚಂದದಿಂದ ಪೂಜಾಮಾಡುತ್ತಿದ್ದರಿಂದ ಅಂದಚಂದಾಲಿಂಗನೆಂದು ಕರೆದರು.

೨. ಅಂಜಿಕೆ : ಭಯಪಡುವುದು, ಹೆದರಿಕೆ.

೩. ಅಗಸಿ : ಊರಿನ ಪ್ರವೇಶದ್ವಾರ ಅಥವಾ ಹೆಬ್ಬಾಗಿಲು ಇರುವಂತೆ ಚಂದಾಲಿಂಗನ ಗುಡಿಗೆ ಈ ಪ್ರದೇಶದ್ವಾರಕ್ಕೆ ಅಗಸಿ ಬಾಗಿಲು ಎನ್ನುವರು.

೪. ಅಬ್ಬರಣಿ : ಅತಿಯಾಗಿ ಗದ್ದಲ ಮಾಡುವಂತವಳು.

೫. ಅಲ್ಲೋಲಕಲ್ಲೋಲ : ಅಸ್ತವ್ಯಸ್ತವಾಗಿರುವುದು, ಮಹಾಗದ್ದಲ ಮಾಡುವುದು.

೬. ಅತಾಳ : ಏಳು ಅಧೋಲೋಕಗಳಲ್ಲಿ ಒಂದು.

೭. ಅಷ್ಟದಿಕ್ಪಾಲಕರು : ಎಂಟು ಮಂದಿ ದಿಕ್ಪತಿಗಳು

(ಆ)

೮. ಆಕಾಶವಾಣಿ : ಅಶರೀರವಾಣಿ, ಗಗನದಲ್ಲಿ ಅಗೋಚರವಾದ ಮೂಲದಿಂದ ಕೇಳಿಬರುವ ಶಬ್ದ.

(ಉ)

೯. ಉರಿತಿದ್ದಿ : ಅತಿಯಾಗಿ ಮೆರೆಯುವುದು.

(ಎ)

೧೦. ಎರೆಕೆಂಗೊಂಡ : ಶಿವರುದ್ರಮ್ಮನವರ ಮನೆತನದ ಅಡ್ಡಹೆಸರು.

೧೧. ಎಲುವಿನ : ಎಲಬಿನ, ಮೂಳೆಗಳು.

೧೨. ಎಳಮನೆ ದೇಸಾಯಿ: ಬೀಳಗಿ ದೇಸಾಯಿಯವರ ಮನೆತನದ ಅಡ್ಡ ಹೆಸರು.

(ಏ)

೧೩. ಏಳುಕೋಟಿ ಸೈನ್ಯ : ಒಂದು ಕೋಟಿ ರುದ್ರಗಣಂಗಳು, ಒಂದು ಕೋಟಿ ಪ್ರೇತ ಪಿಶಾಚಿ, ಒಂದು ಕೋಟಿ, ಭರ್ಚಿ, ಬಲ್ಲೆ, ಇತ್ಯಾದಿ.

(ಕ)

೧೪. ಕಂಬಳಿ : ಕುರಿ ತುಪ್ಪಳದಿಂದ ತಯಾರಿಸಿದ ಹೊದಿಕೆ.

೧೫. ಕನ್ಯೆ : ಕುಮಾರಿ, ಮದುವೆಯಾಗದ ಹುಡುಗಿ.

೧೬. ಕಡು ಮೂರ್ಖರು : ಅತಿಯಾದ ಅವಿವೇಕಿಗಳು, ತಿಳಿಗೇಡಿಗಳು.

೧೭. ಕುಡುಗೋಲ : ಕೊಂಕಿದ ಧಾರೆಯುಳ್ಳ ಕೊಯ್ಯುವ ಸಾಧನ.

೧೮. ಕಾರ್ಕೋಟಕ : ಹಾವಿನ ವಿಷ.

೧೯. ಕ್ಯಾವಿಬಟ್ಟೆ : ಸಾಧುಗಳು ಧರಿಸುವಂತಹ ಕೇಸರಿ ಬಣ್ಣದ ಬಟ್ಟೆ.

೨೦. ಕಪಿಲ ಮೌನೇಶ್ವರ ಕೊಳ್ಳ : ಗುರು ಸಂಗಯ್ಯ ಸ್ವಾಮಿಗಳ ಶಿಷ್ಯನಾದ ಕಪಿಲಪ್ಪನ ವಾಸವಾದ ಸ್ಥಳ.

೨೧. ಕಂಚಿವೀರರು : ಜಾತ್ರೆಯ ವೇಳೆ ವಡುಪು ಹೇಳುವರು.

(ಖ)

೨೨. ಖಡ್ಗ ದಂಷ್ಟ್ರ : ಮಲ್ಲಾಸುರನ ಸೈನ್ಯಾಧಿಪತಿ.

೨೩. ಖಣಕದ ಆರತಿ : ನುಡಿ ಹೇಳಿದ ಕೊನೆಗೆ ಮಳ್ಳಯ್ಯ ಹಾಗೂ ವಗ್ಗಯ್ಯನವರಿಗೆ ಬೆಳಗುವಂತ ಆರತಿ.

(ಗ)

೨೪. ಗಂಧರ್ವರು : ದೇವಲೋಕದ ಸಂಗೀತಗಾರರು.

೨೫. ಗಂಡುಗಾರಿ ಮುಳ್ಳು : ದೊಡ್ಡದಾದ ಕಾರೆ ಮುಳ್ಳು.

(ಘ)

೨೬. ಘೃತ ಮಾರಿ : ಗಂಗೆಮಾಳಮ್ಮನ ಇನ್ನೊಂದು ರೂಪ.

(ಜ)

೨೭. ಜಯ-ವಿಜಯ : ವೈಕುಂಠದ ದ್ವಾರ ಪಾಲಕರು.

೨೭. ಜಟಾ ಜೂಟ : ಜಡೆಗಟ್ಟಿದ ಜುಟ್ಟು, ಶಿವ.

೨೮. ಜಂಗಮ : ವಿರಕ್ತ, ಅಯ್ಯ

೨೯. ಜಿಡ್ಡು ಗಟ್ಟು : ಅಂಟಾಂಟಾಗಿ ಗಬ್ಬುನಾರುವುದು.

೩೦. ಜೋಳಿಗೆ : ಭಿಕ್ಷೆಯ ಚೀಲ.

(ತ)

೩೧. ತರಾತುರಿ : ಅವಸರ, ಆತುರ.

೩೨. ತಾಪ : ಕಷ್ಟ, ಸಂಕಟ.

೩೩. ತಿಪ್ಪೆ : ಕಸದ ಗುಡ್ಡೆ.

೩೪. ತಿಲಕ : ಸುಂದರವಾದ ಹೂವುಗಳನ್ನು ಬಿಡುವ ಒಂದು ಬಗೆಯ ಮರ.

೩೫. ತ್ರೇತಾಯುಗ : ನಾಲ್ಕುಯುಗಗಳಲ್ಲಿ ಎರಡನೆಯದು.

೩೬. ತ್ರಿಶೂಲ : ಶಿವನ ಆಯುಧ.

(ದ)

೩೭. ದಯಾಘನ : ಅನುಕಂಪದ ಗುಣವುಳ್ಳವನು.

೩೮. ದ್ವಾಪರಯುಗ : ನಾಲ್ಕುಯುಗಗಳಲ್ಲಿ ಮೂರನೆಯದು.

೩೯. ದ್ವಾರಪಾಲಕ : ಪ್ರವೇಶದ್ವಾರವನ್ನು ಕಾಯುವ ಸೇವಕರು.

೪೦. ದಿಕ್ಕೇಡಿ : ಯಾರೂ ಸಂಬಂಧಿಗಳಿಲ್ಲದಿರುವನು.

೪೧. ಧೂರ್ತ : ಮೋಸಗಾರ, ದುಷ್ಟ, ಜೂಜುಕೋರ.

೪೨. ದೇವೇಂದ್ರ : ದೇವಲೋಕದ ಒಡೆಯ.

೪೩. ದೈತ್ಯ : ರಾಕ್ಷಸ, ದಿತಿಯ ಮಗ.

(ನ)

೪೪. ನವಗ್ರಹ : ಸೂರ್ಯ, ಸೋಮ, ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು.

೪೫. ನಂದಾದೀಪ : ನಿರಂತರವಾಗಿ ಉರಿಯುತ್ತಿರುವ ಜ್ಯೋತಿ.

೪೬. ನೈವೇದ್ಯ : ದೇವರಿಗೆ ಆಹಾರ ಪದಾರ್ಥಗಳ ಅರ್ಪಣೆ; ಅನ್ನ, ಎಡೆ.

(ಪ)

೪೭. ಪಡಸಾಲೆ : ಹೊರಚಾವಡಿ, ದೊಡ್ಡ ಚಾವಡಿ.

೪೮. ಪಂಚಾಕ್ಷರಿ ಮಂತ್ರ : ನಮಃ ಶಿವಾಯ ಎಂಬ ಶಿವಪಂಚಾಕ್ಷರ ಮಂತ್ರ.

೪೯. ಪಾರಿಜಾತ ಹೂವು : ದೇವಲೋಕದ ಹೂವು, ಸತ್ಯಭಾಮೆಯವರಿಗೆ ಪ್ರಿಯವಾದ ಹೂವು.

೫೦. ಪಾಳೆಯ : ಸರದಿ, ಕ್ರಮ.

೫೧. ಪೀಡಿಸುವುದು : ತೊಂದರೆಗೊಳಿಸು, ಉಪದ್ರವಕೊಡುವುದು.

(ಬ)

೫೨. ಬಲಿಕೊಡುವುದು : ಬಲಿಯಾಗಿ ಅರ್ಪಿಸುವಿಕೆ, ಆಹುತಿಯಾಗಿ ಅರ್ಪಿಸುವ ಅನ್ನ.

೫೩. ಬಲಿಚಕ್ರವರ್ತಿ : ದೈತ್ಯ ಚಕ್ರವರ್ತಿಯ ಹೆಸರು.

೫೪. ಬ್ರಹ್ಮಾಂಡ : ವಿಶ್ವ, ಜಗತ್ತು, ಅತ್ಯಧಿಕವಾಗದ.

೫೫. ಬ್ರಹ್ಮದೇವ : ತ್ರಿಮೂರ್ತಿಗಳಲ್ಲಿ ಒಬ್ಬನು, ಸೃಷ್ಟಿಕರ್ತ, ಸಕಲ ಸೃಷ್ಟಿಗೂ ಮೂಲಕಾರಣವಾದವನು.

೫೬. ಬಂಡಿ : ಚಕ್ಕಡಿ.

೫೭. ಬೀದಿ : ಮಾರ್ಗ, ದಾರಿ.

೫೮. ಬಿಲ್ವಪತ್ರೆ : ಪೂಜೆಗೆ ಬಳಸುವಂತ ಪತ್ರಿ.

೫೯. ಭಸ್ಮ : ವಿಭೂತಿ, ಬೂದಿ.

(ಮ)

೬೦. ಮಲಿಯಾಳ : ಶಿವರುದ್ರಮ್ಮನ ಊರಿನ ಹೆಸರು.

೬೧. ಮಲ್ಲ–ಮಣಿಕಾಸುರ : ದೈತ್ಯರಾಕ್ಷಸ ಸಹೋದರರು.

೬೨. ಮೇಯಿಸುವುದು : ದನಕರುಗಳಿಗೆ ಆಹಾರವನ್ನು ತಿನ್ನಿಸುವುದು.

೬೩. ಮಹಿಮೆ : ಅಷ್ಟ ಸಿದ್ಧಿಗಳಲ್ಲಿ ಒಂದು, ತನ್ನ ಇಚ್ಛೆಯಂತೆ, ಆಕಾರವನ್ನು ದೊಡ್ಡದಾಗಿ ಪರಿವರ್ತಿಸಿಕೊಳ್ಳುವ ಒಂದು ವಿದ್ಯೆ.

೬೪. ಮಹಾನವಮಿ : ನವರಾತ್ರಿಯ ಒಂಬತ್ತನೆಯ ದಿನ ಮತ್ತು ಅಂದು ಆಚರಿಸುವ ಹಬ್ಬ.

೬೫. ಮಂಗಳಾರತಿ : ದೇವರ ಪೂಜಾ ಕಾಲದಲ್ಲಿ ಬತ್ತಿ, ಕರ್ಪೂರಗಳನ್ನು ಹಚ್ಚಿ ಬೆಳಗುವುದು.

೬೬. ಮಾರಿ : ಒಂದು ಕ್ಷುದ್ರ ದೇವತೆ.

೬೭. ಮಾನಿಸದಂತೆ : ಸರಿಹೋಗದೆ ಇರುವುದು.

೬೮. ಮುತ್ತೈದೆ : ಪತಿಯನ್ನು ಹೊಂದಿರುವಂತ ಮಹಿಳೆಯರು.

೬೯. ಮೂಟೆ : ಗಂಟು.

೭೦. ಮುದ್ದಮ್ಮ : ಚಂದಾಲಿಂಗೇಶ್ವರನಿಗೆ ಬಿಸಿಲಿಲ್ಲದ ಬಾವಿ ಹಾಗೂ ಹೆಸರಿಲ್ಲದ ಪತ್ರೆಯನ್ನು ತೋರಿಸಿದ ಮುದಕಿ.

(ಯ)

೭೧. ಯೋಗಿ : ಚಿತ್ತವೃತ್ತಿನಿರೋಧ ಮಾಡುವವನು; ಯತಿ.

(ಲ)

೭೨. ಲಗ್ನ : ಮದುವೆ.

೭೩. ಲಿಂಗಪೂಜೆ : ಶಿವನ ಪ್ರತೀಕವಾಗಿ ಪೂಜಿಸುವ ಲಿಂಗ.

(ವ)

೭೪. ವಂಶ : ಕುಲ, ಸಂತತಿ.

೭೫. ವೈಕುಂಠ : ವಿಷ್ಣುವಿನ ವಾಸಸ್ಥಳ.

(ಶ)

೭೬. ಶಿವಗಣಾಧಿಗಳು : ಈಶ್ವರನ ಭಕ್ತ ಸಮೂಹ.

೭೭. ಶುಕ್ಲಪಕ್ಷ : ಪಾಡ್ಯದಿಂದ ಪೌರ್ಣಿಮೆಯವರೆಗಿನ ಹದಿನೈದು ದಿನಗಳ ಕಾಲಮಾನ.

(ಷ)

೭೮. ಷಣ್ಮುಖ : ಆರು ಮುಖವುಳ್ಳವನು.

(ಸ)

೭೯. ಸನ್ನತ್ಕುಮಾರ : ಋಷಿಮುನಿಗಳಲ್ಲೊಬ್ಬರು.

೮೦. ಸರತಿ : ಪಾಳಿ.

೮೧. ಸೆರಗೊಡ್ಡಿ : ಅತೀ ವಿನಮ್ರತೆಯಿಂದ ಬೇಡುವುದು.

೮೨. ಸಂತತಿ : ವಂಶ, ಪೀಳಿಗೆ.

೮೩. ಸಿದ್ರು : ಅಲೌಕಿಕ ಸಾಮಾರ್ಥ್ಯವುಳ್ಳವರು; ಹಾಗೂ ದೇವತೆಗಳಲ್ಲಿ ಒಂದು ಪಂಗಡದವರು.

೮೪. ಸೀದಾ : ನೇರವಾಗಿ, ಸರಳ.

೮೫. ಸುಗ್ಗಿಹಾಡುಗಳು : ಬೆಳೆಗಳನ್ನು ಕೊಯ್ಯುವಾಗ ಹಾಡುವ ಹಾಡು.

೮೬. ಸೂಜಿ ಮೇಲೆಳು ಸೂಜಿ : ಒಂದು ಸೂಜಿಯ ಮೇಲೆ ಏಳು ಸೂಜಿಗಳನ್ನಿಡುವದು.

(ಹ)

೮೭. ಹಗೇವು : ದವಸಧಾನ್ಯಗಳನ್ನು ಸಂಗ್ರಹಿಸಿಡುವಂತ ಭೂಮಿಯಲ್ಲಿ ಆಳವಾಗಿ ತೋಡಿದ ವೃತ್ತಾದ ತೆಗ್ಗು.

೮೮. ಹಠಯೋಗಿ : ಛಲಗಾರ.

೮೯. ಹತ್ಯೆ : ಕೊಲೆ, ಸಂಹಾರ.

೯೦. ಹಬ್ಬ ತೊಡಗಿತು : ಹರಡುವುದು, ಸರಿಪಡಿಸುವುದು.

೯೧. ಹಿಗ್ಗ್ಯಾಳ : ಖುಷಿ ಯಾಗುವುದು.

೯೨. ಹಿತ್ತಲ : ಮನೆಯ ಹಿಂದಿನ ಜಾಗ.

೯೩. ಹೂವಿನ ಕೊಳ್ಳ : ವಿವಿಧ ಜಾತಿಯ ಹೂವಿನ ಸಸ್ಯಗಳು ಒಂದು ಇಳಿಜಾರಿನ ತಗ್ಗು ಪ್ರದೇಶದಲ್ಲಿ ಬೆಳೆದಿರುವ ಪ್ರದೇಶ.

೯೪. ಹೇರಿನ : ಚೀಲ.

೯೫. ಹೆಗ್ಗಡೆ ಪ್ರಧಾನಿ : ಒಂದು ಮಂಡಲದ ಆಡಳಿತದ ಮುಖ್ಯಸ್ಥ.

೯೬. ಹೊತ್ತಿಗೆ : ಪುಸ್ತಕ.

ಚಂದಾಲಿಂಗೇಶ್ವರನ ಕ್ಷೇತ್ರ ಪರಿಚಯಕ್ಕೆ ಸಂಬಂಧಿಸಿದಂತೆ

(ಅ)

೯೭. ಅರಿವಿನ ಮಂಟಪ : ಜ್ಞಾನದಾಸೋಹ ನಡೆಯುವಂತಹ ಸ್ಥಳ.

೯೮. ಅಂಕಣ : ಮನೆಯ ಎರಡು ತೊಲೆಗಳ ನಡುವಿನ ಪ್ರದೇಶ.

(ಉ)

೯೯. ಉಬ್ಬುಗೆತ್ತನೆ : ಉಬ್ಬಿ ಮೇಲೆ ಕಾಣುವಂತೆ ಕೆತ್ತಿದ ಅಥವಾ ರಚಿಸಿದ ಚಿತ್ರ.

(ಕ)

೧೦೦. ಕಿನ್ನರಿ : ಒಂದು ತಂತಿವಾದ್ಯ

೧೦೧. ಕುಂದು : ದನಕರುಗಳಿಗೆ ಬರುವ ಒಂದು ರೋಗ.

೧೦೨. ಕೆಸರಿಲ್ಲದ ಕೋಟೆ : ಯಾವುದೇ ಮಣ್ಣು, ಸಿಮೆಂಟ್, ಗಚ್ಚು ಮಿಶ್ರಿತ ಇಲ್ಲದೆ ಕಟ್ಟಿದ ಕೋಟೆ.

೧೦೩. ಕೈಪಿಡಿ ಗೋಡೆ : ಮುನ್ನೋಟದ ಗೋಡೆ, ಕನ್ನಡಿ ಗೋಡೆ.

(ಗ)

೧೦೪. ಗಚ್ಚು : ನೆಲ, ಗೋಡೆ ಮೊದಲಾದವುಗಳಿಗೆ ಹಾಕುವ ಗಾರೆ.

೧೦೫. ಗದ್ದುಗೆ : ಜಂಗಮರ ಸಮಾಧಿ.

೧೦೬. ಗರ್ಭಗುಡಿ : ದೇವಾಲಯಗಳಲ್ಲಿ ಮೂಲ ವಿಗ್ರಹವನ್ನು ಇಟ್ಟಿರುವ ಸ್ಥಳ.

೧೦೭. ಗಾರೆ : ಸುಣ್ಣ ಮತ್ತು ಮರಳುಗಳ ಮಿಶ್ರಣ, ಗಚ್ಚು.

೧೦೮. ಗೋಪುರ : ದೇವಸ್ಥಾನಗಳ ಗರ್ಭಗುಡಿಯ ಮೇಲಿರುವ ಗುಮ್ಮಟ, ಶಿಖರ.

(ಚ)

೧೦೯. ಚಕ್ರ ಮಂಟಪ : ಚಕ್ರದಂತೆ ದುಂಡಾಗಿರುವ ಚಿಕ್ಕ ಮಂಟಪ.

೧೧೦. ಚಿನ್ಮುದ್ರೆ : ಜ್ಞಾನದ ಸಂಕೇತ.

(ಜ)

೧೧೧. ಜಗುಲಿ : ಕಟ್ಟೆ, ವೇದಿಕೆ.

೧೧೨. ಜಡ್ಡು : ಕಾಯಿಲೆ, ರೋಗ.

೧೧೩. ಜಾಲಂಧ್ರಗಳು : ಕಿಟಕಿ, ಕಿಂಡಿಗಳು.

(ತ)

೧೧೪. ತಲೆಗೆ ನೀರು ಹಾಕ್ಕೊಳ್ಳೋದು : ಮುಟ್ಟಾದ ಮಹಿಳೆ ತಲೆಗೆ ನೀರು ಹಾಕಿ ಕೊಳ್ಳುವುದು.

೧೧೫. ತುಗ್ಗಲಿ ಮರ : ಬೇಸಿಗೆ ಜಾತ್ರೆಯಲ್ಲಿ ನುಡಿ ಹೇಳುವ ಮರ ಒಂದು ಜಾತಿಯ ಸಸ್ಯ

(ದ)

೧೧೬. ದಾಸ್ತಾನು : ಸಂಗ್ರಹ, ಶೇಖರಣೆ.

೧೧೭. ದೀಡ್‌ನಮಸ್ಕಾರ : ಭಕ್ತರು ತಮ್ಮ ಹರಕೆ ಬೇಡಿಕೆಗಳಿಗಾಗಿ ದೇವಸ್ಥಾನದ ಸನ್ನಿಧಿಯಲ್ಲಿ ದೀರ್ಘದಂಡವಾಗಿ ಹಾಕುವ ನಮಸ್ಕಾರ

೧೧೮. ದೀಪಸ್ತಂಭ : ದೀಪವನ್ನು ಹಚ್ಚಿಡುವ ಕಂಬ.

೧೧೯. ದ್ರಾವಿಡ ಮಾದರಿ : ಆರು ಅಥವಾ ಎಂಟು ಮುಖಗಳುಳ್ಳ ದೇವಾಲಯ.

(ನ)

೧೨೦. ನಿಧಿಗಳ್ಳರು : ಸಂಪತ್ತನ್ನು ಕದಿಯುವರು.

೧೨೧. ನೀರ್ಗೆ : ಸೀರೆ, ಧೋತ್ರ, ಮೊದಲಾದವುಗಳ ಮಡಿಕೆ.

೧೨೨. ನುಡಿಹೇಳುವುದು : ಭವಿಷ್ಯವನ್ನು ಅರಹುವುದು, ಆ ವರ್ಷದ ಮಳೆ ಬೆಳೆ ಕುರಿತು ಭವಿಷ್ಯವಾಣಿ ಹೇಳುವುದು.

೧೨೩. ನೆದ್ರು : ದೃಷ್ಟಿತಾಗು, ಕಣ್ಣೆಂಜಲು.

೧೨೪. ಪಂಚಪೀಠಗಳು : ಐದು ದೇವರ ಪ್ರತಿಮೆ ಇಡುವ ವೇದಿಕೆ.

(ಪ)

೧೨೫. ಪಾನ ಬಟ್ಟಲು : ಕುಡಿಯುವ ಪಾತ್ರೆ.

೧೨೬. ಪಾಲುಕಿ : ದೇವರ ಮೂರ್ತಿಯನ್ನು ಮೆರವಣಿಗೆ ಮಾಡುವಂತದ್ದು.

೧೨೭. ಪಾಲುಹಾಕುವುದು : ಭಾಗ ಮಾಡುವುದು.

೧೨೮. ಪ್ರಾಂಗಣ : ಅಂಕಣ, ಅಂಗಳ.

೧೨೯. ಪಿಟ್ಸ್ : ಮಲರೋಗ.

(ಬ)

೧೩೦. ಭಂಡಾರದ ಪವಾಡ : ಬೇಸಿಗೆ ಜಾತ್ರೆಯಲ್ಲಿ ಮಳೆ-ಬೆಳೆಯ ಬಗ್ಗೆ ಭವಿಷ್ಯವಾಣಿ ತಿಳಿಯುವುದು.

೧೩೧. ಬಾಸಿಂಗ : ಮದು ಮಕ್ಕಳ ಹಣೆಗೆ ತೊಡಿಸುವ ಒಂದು ಅಲಂಕಾರ ಸಾಧನ.

೧೩೨. ಬಿಸಿಲು ಬೀಳದ ಬಾವಿ : ಬಾವಿಯೊಳಗೆ ಸೂರ್ಯನ ಕಿರಣವೇ ಬೀಳದಿರುವಂತ ಬಾವಿ.

೧೩೩. ಬೊಗಸೆ :ಒಂದು ಸೆರೆಯಲ್ಲಿ ತುಂಬುವಷ್ಟು.

೧೩೪. ಬೋದಿಗೆ : ಕಂಬದ ಮೇಲೆ ತೊಲೆಯನ್ನು ನಿಲ್ಲಿಸಲು ಮಾಡಿದ ಸಾಧನ.

(ಮ)

೧೩೫. ಮಕರ ತೋರಣ : ರಾಜರ ಮೆರವಣಿಗೆ, ದೇವರ ಉತ್ಸವಾದಿಗಳಲ್ಲಿ ಹಿಡಿಯುತ್ತಿದ್ದ ಮೀನು, ಮೊಸಳೆ, ಮುಂತಾದ ಆಕೃತಿಗಳುಳ್ಳ ತೋರಣ.

೧೩೬. ಮಾಟ-ಮಂತ್ರ : ಮಂತ್ರ, ತಂತ್ರಗಳಿಂದ ಇತರರಿಗೆ ಕೇಡನ್ನು ಬಯಸಿ ಮಾಡುವ ಹಿಂಸಾಕರ್ಮ.

೧೩೭. ಮುಂಜಿ : ಶಾಸ್ತ್ರೋಕ್ತವಾಗಿ ಯಜ್ಞೋಪವನ್ನು ಧರಿಸುವ ಕ್ರಿಯೆ.

೧೩೮. ಮೊಗಸಾಲೆ : 'ಹಜಾರ' ಅರಮನೆ ಅಥವಾ ದೇವಸ್ಥಾನದ ಮುಂದಿರುವ ಪಡಸಾಲೆ.

(ರ)

೧೩೯. ರಗುತ : ರಕ್ತ.

(ಲ)

೧೪೦. ಲಲಾಟ ಬಿಂಬ : ಹಣೆಯ ಪ್ರತಿನೆರಳು.

೧೪೧. ಲೋಬಾನ : ಸುಗಂಧದ್ರವ್ಯದಂತೆ ಬಳಸುವ ಒಂದು ಬಗೆಯ ಮರದ ಅಂಟು.

(ವ)

೧೪೨. ವರಾಂಡನ : ಮನೆಯ ಮುಂಭಾಗದ ಕೈಸಾಲೆ; ಮೊಗಸಾಲೆ.

೧೪೩. ವಾಸಿಯಾಗು : ನಿವಾರಣೆಯಾಗುವುದು.

(ಶ)

೧೪೪. ಶಶಿಅಕ್ಕಿ : ನೆಲ್ಲಕ್ಕಿಯಿಂದ ಕಂಬಳಿಯ ಮೇಲೆ ಚೌಕಾಕಾರವಾಗಿ ಬರೆಯುವುದು.

೧೪೫. ಶಿಬಾರಗಳು : ಎರೆಡು ಕಲ್ಲುಕಂಬಗಳ ಮೇಲೆ ಅಡ್ಡಪಟ್ಟಿಕೆಯ ಶಿಲೆಯ ಮಧ್ಯ ತ್ರಿಶೂಲ್ ಆಕಾರದ ಶಿಲೆಯನ್ನು ಅಳವಡಿಸಿರುವುದು.

(ಸ)

೧೪೬. ಸುಕಾಸನ : ಹಿತಕರವಾದ ಆಸನ, ಅನುಕೂಲಕರವಾದ ಪೀಠ.

(ಹ)

೧೪೭. ಹಂಗಾಂಗ : ಹಾಗಾಗೇ.

೧೪೮. ಹಾಸುಗಲ್ಲು : ನೆಲಕ್ಕೆ ಹೊದಿಸಿರುವ ಕಲ್ಲು, ಕಲ್ಲಿನಿಂದ ಮಾಡಿದ ಆಸನ.

೧೪೯. ಹೆಸರಿಲ್ಲದ ಮರ : ಹೆಸರನ್ನೇ ಸೂಚಿಸದೇ ಇರುವಂತ ಮರ.

ಆಚರಣೆ, ನಂಬಿಕೆ ಹಾಗೂ ವಿಧಿ–ನಿಷೇಧಗಳಿಗೆ ಸಂಬಂಧಿಸಿದಂತೆ

(ಉ)

೧೫೦. ಉಡದಾರ : ಪುರುಷರು ನಡುವಿನಲ್ಲಿ ಕಟ್ಟಿಕೊಂಡಿರುವ ದಾರ.

೧೫೧. ಉಣ್ಣೆದಾರ : ಕುರಿಗಳ ಮೈಮೇಲಿನ ಕೂದಲು, ತುಪಟ್ಟದಿಂದ ತಯಾರಿಸಿದ ದಾರ.

೧೫೨. ಉತ್ರಾಣಿಕಡ್ಡಿ : ಮುಳ್ಳು ಮುಳ್ಳಿನಿಂದ ಕೂಡಿದ ಒಂದು ಸಸ್ಯ.

೧೫೩. ಉಬಾರ : ಉಬ್ಬಿರುವದು.

೧೫೪. ಉರುಳುಸೇವೆ : ದೇವರ ಸನ್ನಿಧಿಯಲ್ಲಿ ಭಕ್ತರು ತಮ್ಮ ಹರಕೆಯಂತೆ ಗುಡಿಯ ಸುತ್ತ ಉರುಳಾಡುವುದು.

(ಐ)

೧೫೫. ಐಹೊಳೆಕೊಂತ : ತ್ರಿಶೂಲಕ್ಕೆ ಭಕ್ತರು ಇಟ್ಟಿರುವ ಹೆಸರು.

(ಕ)

೧೫೬. ಕಟಾಂಜನಿ : ಕಬ್ಬಿಣದ ತಡೆಗೋಡೆ.

೧೫೭. ಕಣಕದಾರತಿ : ಗೋಧಿಹಿಟ್ಟಿನಿಂದ ತಯಾರಿಸಿದ ದೀಪ.

೧೫೮. ಕಲಗಚ್ಚಿ : ಮುಸುರೆ ನೀರು ಹಾಕುವ ಪಾತ್ರೆ.

೧೫೯. ಕಳಸಾರೋಹಣ : ದೇವರ ಗುಡಿಗೋಪುರಗಳಿಗೆ ಕಳಸವನ್ನು ಕುಡಿಸುವುದು.

೧೬೦. ಕಂಕಣಭಾಗ್ಯ : ಕಂಕಣಕಟ್ಟು ಯೋಗ, ಮದುವೆಯೋಗ.

೧೬೧. ಕಾಯಿಕಟ್ಟುವುದು : ಭಕ್ತರು ತಮ್ಮ ಹರಕೆ-ಬೇಡಿಕೆ ಈಡೇರಿಕೆಗಾಗಿ ತೆಂಗಿನ ಕಾಯಿಯನ್ನು ದೇವರ ಸನ್ನಿಧಿಯಲ್ಲಿ ಕಟ್ಟುವುದು.

೧೬೨. ಕುಂಟೆ-ಕೂರಿಗೆ : ವ್ಯವಸಾಯದ ಉಪಕರಣಗಳು ಹೊಲವನ್ನು ಹರಗಲು, ಬಿತ್ತುವುದಕ್ಕೆ ಬಳಸುವುದು.

(ಖ)

೧೬೩. ಖಣ : ಧಾನ್ಯವನ್ನು ರಾಶಿ ಮಾಡಲು ಸಿದ್ಧಪಡಿಸಿದ ಸ್ಥಳ.

(ಗ)

೧೬೪. ಗಂಗೆಸ್ನಾನ : ಕೊಂತಗಳನ್ನು ಹೊಂಡದಲ್ಲಿ ಮೈತೊಳೆಯುವುದು.

(ಚ)

೧೬೫. ಚೌರಿಗೊರವಿಯರು : ಕೂದಲಿನಿಂದ ತಯಾರಿಸಿದ ಚಾಮರ ಹಿಡಿದ ಗೊರವಿಯವರು.

(ಜ)

೧೬೬. ಜಾಗರಣೆ : ರಾತ್ರಿಯೆಲ್ಲಾ ಎಚ್ಚರವಿದ್ದು ನೆಡೆಸುವ ಪೂಜೆ.

೧೬೭. ಜಾನುವಾರುಗಳು : ದನಕರುಗಳು.

(ದ)

೧೬೮. ದೋಷ : ಕುಂದು, ಕಳಂಕ, ಕೊರತೆ.

(ನ)

೧೬೯. ನಂದಿಕೋಲು : ನಂದಿಯ ವಿಗ್ರಹವಿರುವ ಉದ್ದವಾದ ಕೋಲು.

೧೭೦. ನಾಕ : ದೇವತೆಗಳ ವಾಸಸ್ಥಾನ, ಸ್ವರ್ಗ.

೧೭೧. ನಾಟಿ ನಾಶವಾದರೆ : ಬಿತ್ತಿದ ಬೆಳೆ ನಾಶವಾದರೆ.

(ಪ)

೧೭೨. ಪಡಿಯಕ್ಕಿ : ಜಾತ್ರೆಯಲ್ಲಿ ಸೇವೆ ಮಾಡಿದ ಭಕ್ತರಿಗೆ ಕೊಡುವ ಅಕ್ಕಿ

೧೭೩. ಪಾದಗಟ್ಟಿ : ತೇರನ್ನು ಕಟ್ಟಿ ಹೊರಡಿಸುವ ಸ್ಥಳ.

(ಬ)

೧೭೪. ಬೆಸಸಂಖ್ಯೆ : ಸಮಸಂಖ್ಯೆ ಅಲ್ಲದ್ದು.

೧೭೫. ಬೆಂಡು-ಬತ್ತಾಸು : ಒಂದು ಬಗೆಯ ಸಿಹಿ ತಿಂಡಿಗಳು.

೧೭೬. ಬೊಕ್ಕಸ : ಹಣದ ಭಂಡಾರ, ಕೋಶ.

(ಮ)

೨೩೦. ಮಜಲು : ದೇವರ ಉತ್ಸವ.

೨೩೧. ಮಡಿಸೇವೆ : ಪರಿಶುದ್ಧತೆಯಿಂದ ದೇವರ ಕಾರ್ಯಮಾಡುವದು.

೧೭೭. ಮುಡುಪು : ದೇವರ ಹೆಸರಿನಲ್ಲಿ ಹರಕೆ ಹೊತ್ತು ಪ್ರತ್ಯೇಕವಾಗಿ ತೆಗೆದಿರಿಸಿದ ಹಣ; ಮೀಸಲು.

೧೭೮. ಮುಡಿ ಚಟ್ಟು : ಮುಟ್ಟು, ಸೂತಕ ಮುಂತಾದವುಗಳಿಂದ ಆಗುವ ಮೈಲಿಗೆ.

೧೭೯. ಮುಳ್ಳಾವಿಗೆ : ಮೊಳೆಗಳಿಂದ ತಯಾರಿಸಿದ ಪಾದುಕೆಗಳು.

೧೮೦. ಮುಂಗಾರು : ಮೊದಲ ಮಳೆಗಾಲ; ವರ್ಷದ ಮೊದಲು ಮಳೆ ಬೀಳುವ ಮಳೆ.

(ಯ)

೧೮೧. ಯಲಬುರ್ಗಿಕೊಂತ : ಭಕ್ತರು ತ್ರಿಶೂಲಕ್ಕೆ ಇಟ್ಟಿರುವ ಹೆಸರು.

(ರ)

೧೮೨. ರುಮಾಲು : ಸುತ್ತಿಕೊಳ್ಳುವ ಉದ್ದವಾದ ಬಟ್ಟೆ.

(ಲ)

೧೮೩. ಲಿಂಗದ ವಸ್ತ್ರ : ದೇವರ ಮೇಲೆ ಹೊದಿಸುವ ಬಟ್ಟೆ.

೧೮೪. ಲೆಕ್ಕಿ ಬರ್ಲಿನಸೇವೆ : ಚಂದಾಲಿಂಗಪ್ಪನ ಮದುವೆನಂತರ ಕುದುರೆಕಾರರನ್ನು ಲೆಕ್ಕಿಬರ್ಲಿನಿಂದ ಹೊಡೆಯುವುದು.

(ವ)

೧೮೫. ವಡಪು : ಕೊಂತದೇವರನ್ನು ಉಗ್ರ ಗೊಳಿಸುವ ನುಡಿ.

(ಸ)

೧೮೬. ಸಂಪಾಗು : ತೃಪ್ತಿದಾಯಕವಾಗುವುದು.

೧೮೭. ಸಂಜೀವಿನಿ : ಜೀವವನ್ನು ನೀಡುವುದೆಂದು ನಂಬಲಾಗಿರುವ ಒಂದು ಗಿಡಮೂಲಿಕೆ, ಪರಮೌಷಧ.

೧೮೮. ಸುಗ್ಗಿ ಜಾತ್ರೆ : ದಸರಾದಲ್ಲಿ ನಡೆಯುವಂತ ಜಾತ್ರೆ.

೧೮೯. ಸುರಗಿ : ಮದುವೆಯಲ್ಲಿ ವಧೂವರರಿಗೆ ಓಕುಳಿನೀರನ್ನು ಎರೆಯುವ ಶಾಸ್ತ್ರ.

೧೯೦. ಸೂತಕ : ಜನನ-ಮರಣದಿಂದಾಗುವ ಮೈಲಿಗೆ.

೧೯೧. ಸೋಬಾನ ಪದಗಳು : ಮದುವೆ ಮುಂತಾದ ಮಂಗಳ ಪ್ರಸಂಗಗಳಲ್ಲಿ ಹಾಡುವ ಹಾಡು.

(ಹ)

೧೯೨. ಹಣ್ಣುಕಾಯಿ : ಭಕ್ತರು ಹಣ್ಣು-ಕಾಯಿ ತಂದು ದೇವರಿಗೆ ಪೂಜೆ ಮಾಡಿಸುವುದು.

೧೯೩. ಹೊಂಡ : ದೇವರ ಗುಡಿಯ ಆವರಣದಲ್ಲಿರುವಂತ ಚಿಕ್ಕದಾದ ಕೊಳ್ಳ.

೧೯೪. ಹಿಂಗಾರಿ : ವರ್ಷದಲ್ಲಿ ಬೀಳುವ ಕೊನೆಯ ಮಳೆ.

ಚಂದಾಲಿಂಗೇಶ್ವರ ಜಾತ್ರಾ ಸಿದ್ಧತೆ ಹಾಗೂ ವ್ಯಾಪಾರ-ವಹಿವಾಟು

(ಉ)

೧೯೫. ಉರಿಗೆಜ್ಜೆಸರ : ಎತ್ತುಗಳ ಕೊರಳಲ್ಲಿ ಹಾಕುವಂತ ಸರ.

(ಕ)

೧೯೬. ಕಂಠಿಸರ : ಕೊರಳಲ್ಲಿ ಹಾಕುವಂತಹ ಸರ.

೧೯೭. ಕೀಲೆಣ್ಣೆ : ಬಂಡಿಯ ಗಾಲಿಯು ಸರಳವಾಗಿ ತಿರುಗಲು ಆ ಸ್ಥಳದಲ್ಲಿ ಲೇಪಿಸುವ ಕಪ್ಪಾದ ದ್ರವ ಪದಾರ್ಥ.

೧೯೮. ಕುಂಭ : ಬಂಡಿ ಗಾಲಿಯ ಮಧ್ಯದ ಗುಮ್ಮಟದಂತೆ ಇರುವ ಭಾಗ.

೧೯೯. ಕುಲ್ಫಿ : ಐಸ್ ಕ್ರೀಮ್ ಉತ್ಪನ್ನದ ಒಂದು ಪದಾರ್ಥ.

೨೦೦. ಕೊಲ್ಲಾರಿ : ಸಿಂಗರಿಸಿದ ಕಮಾನು ಬಂಡಿ, ಬಂಡಿಯ ಬಿಡಲಿನ ಕಮಾನು.

೨೦೧. ಕೊಂಬಣಸು : ಎತ್ತುಗಳ ಕೊಂಬಿನ ತುದಿಗೆ ಅಲಂಕಾರಿಕವಾಗಿ ಹಾಕುವ ಹಿತ್ತಾಳೆಯ ವಸ್ತು.

(ಖ)

೨೦೨. ಖಾದಿದಡಿ ಸೀರೆ : ಖಾದಿಯಿಂದ ತಯಾರಿಸಿದ ದಡಿಸೀರೆ.

(ಗ)

೨೦೩. ಗಿರಾಕಿ : ದಿನಸಿ ಅಂಗಡಿಗೆ ಹೋಗುವಂತಹ ಗ್ರಾಹಕರು.

(ಚ)

೨೦೪. ಚಮ್ಕಾಸೀರೆ : ಕಚ್ಚಾ ರೇಷ್ಮೆ ಮಿಶ್ರಿತ ಸೀರೆ.

೨೦೫. ಚಾಪೆ : ಈಚಲು ಪರಕೆಯಿಂದ ತಯಾರಿಸಿದಂತ ಹಾಸಿಗೆ.

೨೦೬. ಜಪಮಾಲೆ : ಮಂತ್ರವನ್ನು ಹೇಳುವಾಗ ಕೈಯಲ್ಲಿ ಧರಿಸುವ ಸರ.

೨೦೭. ಜೂಲ : ಎತ್ತುಗಳ ಮೈಮೇಲೆ ಅಲಂಕಾರಕ್ಕಾಗಿ ಹಾಕುವ ಗೌಸು.

(ಟ)

೨೦೮. ಟೆಂಟು : ಜಾತ್ರೆಯಲ್ಲಿ ಭಕ್ತರು ವಸತಿಗೆ ಹಾಕಿಕೊಂಡಿರುವ ಅವಸ್ಥೆ.

(ತ)

೨೦೯. ತದಿಗಿ : ಹುಣ್ಣಿಮೆ ಅಥವಾ ಅಮಾವಾಸ್ಯೆಯ ನಂತರದ ಮಾರನೆಯ ದಿನ.

(ನ)

೨೧೦. ನೆಹರು ಶರ್ಟು : ನೆಹರು ಅವರು ಧರಿಸುವಂತ ಕಾಟನ್ ಬಟ್ಟೆಯ ಅಂಗಿ.

(ಪ)

೨೧೧. ಪತ್ಲ : ಬಣ್ಣ ಬಣ್ಣದ ಚಿತ್ತಾರದಿಂದ ತಯಾರಿಸಿದ ಮಹಿಳೆಯರು ಧರಿಸುವ ಸೀರೆ.

೨೧೨. ಪಳಾರ : ಜಾತ್ರೆಯಲ್ಲಿ ದೊರೆಯುವ ಮಂಡಾಳು, ದಾಣಿ, ಬೆಂಡು-ಬತ್ತಾಸ ಇತ್ಯಾದಿಗಳು.

೨೧೩. ಪ್ರಸಾದ : ನೈವೇದ್ಯ ಮಾಡಿದ ಪದಾರ್ಥ.

(ಬ)

೨೧೪. ಬರ್ಪ್ : ಮಂಜುಗಡ್ಡೆ.

೨೧೫. ಬಟಾರ : ದೊಡ್ಡದಾದ ಚೀಲ.

೨೧೬. ಬಾನೆಟ್ : ಟ್ರ್ಯಾಕ್ಟರಿಯ ಇಂಜಿನ್‌ನ ಮೇಲ್ಭಾಗ.

೨೧೭. ಬ್ಯಾಸಿಗೆ ಜಾತ್ರೆ : ಆಗಿ ಹುಣ್ಣಿಮೆಯ ಬೇಸಿಗೆ ಅವಧಿಯಲ್ಲಿ ನಡೆಯುವ ಜಾತ್ರೆ.

೨೧೮. ಬೋಗಣಿ : ತಳಭಾಗವು ದುಂಡಾಗಿದ್ದು ಅಗಲವಾದ ಬಾಯುಳ್ಳ ಲೋಹದ ಪಾತ್ರೆ.

(ರ)

೨೧೯. ರೋಡ್ ಗೋಲ್ಡ್ : ನಕಲಿ ರೂಪದ ಬಂಗಾರ

(ವ)

೨೨೦. ವುಡ್ : ಟ್ರ್ಯಾಕ್ಟರಿಯ ಚಾಲಕ ಕುಳಿತುಕೊಳ್ಳುವಂತ ಸ್ಥಳಕ್ಕೆ ನೆರಳಾಗುವಂತೆ ಸಿದ್ಧಪಡಿಸಿದ ವಸ್ತು.

(ಶ)

೨೨೧. ಶರಭತ್ : ನಿಂಬೆ, ಕಿತ್ತಳೆ, ದ್ರಾಕ್ಷಿ, ಮುಂತಾದ ಹಣ್ಣುಗಳ ರಸವನ್ನು ನೀರಿಗೆ ಮಿಶ್ರಣ ಮಾಡಿ ಅದಕ್ಕೆ ಸಕ್ಕರೆ ಏಲಕ್ಕಿ ಮುಂತಾದವನ್ನು ಸೇರಿಸಿ ತಯಾರಿಸುವುದು.

೨೨೨. ಶಂಕರಪಳಿ : ಒಂದು ಬಗೆಯ ಕರಿದ ತಿಂಡಿ.

೨೨೩. ಶಾಮಿಯಾನ : ಯಾವುದೇ ಕ್ರರ್ಯಕ್ರಮಕ್ಕೆ ಬಿಸಿಲು ಮಳೆಯಿಂದ ರಕ್ಷಣೆ ಪಡೆಯಲು ಮಾಡಿಕೊಳ್ಳುವ ಬಟ್ಟೆಯ ಹೊದಿಕೆ

೨೨೪. ಶಿವದಾರಗಳು : ವೀರಶೈವರು ಇಷ್ಟಲಿಂಗದ ಕರಡಿಗೆಯನ್ನು ಧರಿಸಲು ಬಳಸುವದಾರ.

(ಸ)

೨೨೫. ಸಂಗೀತಕಾರ : ದಿನಸಿ ಅಂಗಡಿಯಲ್ಲಿ ದೊರೆಯುವ ಉಪಾಹಾರ ಪದಾರ್ಥ.

೨೨೬. ಸಾಕ್ರನ್ : ಅತಿ ಸಿಹಿಯಾದ ಪದಾರ್ಥ.

(ಹ)

೨೨೭. ಹಣೆಕಟ್ಟು : ಎತ್ತುಗಳಿಗೆ ಅಲಂಕಾರಿಕವಾಗಿ ಹಣೆಗೆ ಕೊಟ್ಟಿರುವಂತಹ ವಸ್ತು.

೨೨೮. ಹರಕೆಕಾಯಿ : ಭಕ್ತರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ದೇವರ ಸನ್ನಿಧಿಯಲ್ಲಿ ತೆಂಗಿನಕಾಯಿಯನ್ನು ಕಟ್ಟುವುದು.

ಚಂದಾಲಿಂಗೇಶ್ವರನ ಸಾಹಿತ್ಯ ಕುರಿತು

(ಅ)

೨೨೯. ಅಡಗದಗಿರಿ : ಅವಿತುಕೊಳ್ಳುವ ಗಿರಿ.

(ಇ)

೨೩೦. ಇಳೆವಾ : ಕನ್ಯಾ ನಿಶ್ಚಯ ಮಾಡಿಕೊಳ್ಳುವುದು.

(ಐ)

೨೩೧. ಐತಾರದ ಅರಸ : ರವಿವಾರವನ್ನೇ ತನ್ನವಾರ ಮಾಡಿಕೊಂಡಿರುವಂತ ಚಂದಾಲಿಂಗೇಶ್ವರ.

೨೩೨. ಐರಾಣಿ : ಜಾತ್ರೆಯ ದಿನ ಹೊಸ ಬಿಂದಿಗೆಯನ್ನು ಸುಣ್ಣದಿಂದ ಸರಿಸಿ ಹೆಣ್ಣಿನ ಕಡೆಯವರು ಮೆರವಣಿಗೆಯಲ್ಲಿ ತರುವದು.

(ಒ)

೨೩೩. ಒಪದಗಿರಿ : ಚೆಲುವಾದಂತ ಗುಡ್ಡ.

(ಕ)

೨೭. ಕರಿಯಲಾಕ : ಕರಿಯುವುದಕ್ಕೆ

೨೩೩. ಕುರಬುತಿ : ಮಾಳವ್ವ

೨೩೪. ಕೋರಿಅಂಗಿ : ಕಂಬಳಿಯಿಂದ ತಯಾರಿಸಿದ ಅಂಗಿ.

೨೩೫. ಕೊಚ್ಚ ಉಸಿಗನ್ಯಾಗ : ತೇಲಿ ಬಂದಿರುವ ಉಸುಕು.

(ಗ)

೨೩೬. ಗುಡ್ಡದ್ವಾರ್ಯಾಗ : ಗುಡ್ಡದ ಪಕ್ಕಕ್ಕೆ.

(ಜ)

೨೩೭. ಜಾರದ ಅಂಗಿ : ಜರಿಯನ್ನು ಅಳವಡಿಸಿ ತಯಾರಿಸಿದ ಅಂಗಿ.

೨೩೮. ಜಿಡ್ಡು ನಾರುವ : ಹೊಲಸು ನಾರುವಂತದ್ದು.

(ತ)

೨೩೯. ತೊಡೆವು : ಅಲಂಕರಿಸುವಂತ ಆಭರಣ.

೨೪೦. ತೋರೇಳಪ್ಪ : ತೋರಿಸು ಹೇಳಪ್ಪ

(ದ)

೨೪೧. ದಡ್ಲಿಯಎಲೆ : ದಡ್ಲಿಗಿಡದ ಎಲೆ

೨೪೨. ದಾಸೋಹ : ಜಂಗಮರಿಗೆ ಮಾಡುವ ಊಟದ ಸಮಾರಾಧನೆ.

(ಪ)

೨೪೩. ಪಡಗಿನ : ವಾಸದ ನೆಲೆ.

೨೪೪. ಪತ್ರಾವಳಿ : ಊಟದ ಎಲೆ.

೨೪೫. ಪಳೆಕಟ್ಟಿದ : ಭದ್ರವಾಗಿ ಕಟ್ಟಿದ ಬಹಳ ದಿನದ ಗುಡಿ.

೨೪೬. ೨ ಪೌಳ್ಯಾಗ : ಪೌಳಿಯ ಒಳಗ.

(ಬ)

೨೪೭. ಬಗುತ್ತಾರು : ಭಕ್ತರು

(ಮ)

೨೪೮. ಮತ್ಯಾರ : ಮತ್ತೆ ಯಾರು

೨೪೯. ಮುಂಜಾಲೆ : ಬೆಳಿಗ್ಗೆ

(ಯ)

೨೫೦. ಯಾಸಗಾರನೆವ್ವ : ವೇಷಗಾರನು

(ಶ)

೨೫೧. ಶಿಬಾರದಾಳಿ : ಶಿಬಾರದ ಆಕಾರದಲ್ಲಿರುವ ತಾಳಿ

(ಸ)

೨೫೨. ಸಂದ : ಮುಂದಿನ ಭಾಗ.

೨೫೩. ಸಜ್ಜಕ : ರವೆಯಿಂದ ತಯಾರಿಸಿದ ಸಿಹಿ ಪದಾರ್ಥ.

೨೫೪. ಸಿಡಿಮುಳ್ಳು : ಸಿಡಿದು ಬಿದಿರುವ ಮುಳ್ಳು.

೨೫೫. ಸುತಿ, ಸ್ರುತಿ : ಒಂದು ಬಗೆಯ ವಾದ್ಯ

(ಹ)

೨೫೬. ಹೊತ್ತಿಲೆ : ಹೊತ್ತು ಇರುವದರ ಒಳಗೆ.

೨೫೭. ಹೊಲಗಾಯಿಕೇರಿ : ಮೈಲಿಗೆಯಾದ ಕೇರಿ.

ಛಾಯಾಚಿತ್ರಗಳು
(Photographs)

ಛಾಯಾಚಿತ್ರಗಳು



ಅರಣ್ಯ ಇಲಾಖೆಯವರಿಂದ ನಿರ್ಮಾಣಗೊಂಡಿರುವ ಸುಕ್ಷೇತ್ರದ ಪ್ರವೇಶ ದ್ವಾರ



ಸುಕ್ಷೇತ್ರದಲ್ಲಿ ಅರಣ್ಯ ರಕ್ಷಣೆ ಕುರಿತು ಸೂಚನ ಫಲಕ



ಮುಖ್ಯ ಗುಡಿ



ಚಂದಾಲಿಂಗೇಶ್ವರ ಗರ್ಭಗುಡಿ



ಪೂಜೆಯಲ್ಲಿ ನಿರತನಾದ ಅರ್ಚಕ



ಗಂಗಿಮಾಳಮ್ಮ ದೇವಿ ಗುಡಿ



ಬಿಸಿಲು ಬೀಳದ ಬಾವಿ



ಕೊಂತ ಮಿಂಚುವ ಕಟ್ಟೆ



ಬೇಸಿಗೆ ಜಾತ್ರೆಯಲ್ಲಿ ನುಡಿ ಹೇಳುವ ತುಗ್ಗಲಿ ಮರ



ಕೆಸರಿಲ್ಲದ ಕೋಟೆ



ದಸರಾ (ಸುಗ್ಗಿ) ಜಾತ್ರೆಯಲ್ಲಿ ನುಡಿ ಹೇಳುವ ಮಂಟಪ



ಶಿಬಾರ



ಪಂಚಪೀಠಗಳು



ಚಂದಾಲಿಂಗೇಶ್ವರ ಗುಡಿಯ ಪೌಳಿಕಟ್ಟೆಯೊಳಗಿರುವ ಲಿಂಗದ ಗುಡಿಗಳು



ಕಳಸಾರೋಹಣದ ಸಿದ್ಧತೆ



ಖಂಡೇ ದೇವರು



ಕೊಂತ ದೇವರ ಆಗಮನ



ಕೊಂತ ದೇವರನ್ನು ಹೆಸರಿಲ್ಲದ ಮರಕ್ಕೆ ಕಟ್ಟಿರುವುದು



ಉಗ್ರ ತುಂಬಿದ ಕೊಂತ ದೇವರು



ಸ್ಥಾನಿಕರಿಗೆ ಪಡಿಯಕ್ಕಿ ಕೊಡುತ್ತಿರುವುದು



ಕೊಂತದೇವರ ಗಂಗೆ ಸ್ನಾನ



ಕೊಂತದ ಗಂಗೆ ಸ್ನಾನದಲ್ಲಿ ಭಾಗಿಯಾದ ಕುದುರೆಕಾರರು



ಕೊಂತದ ಗಂಗೆ ಸ್ನಾನದಲ್ಲಿ ಭಾಗಿಯಾದ ಮಳ್ಳಯ್ಯಜ್ಜ ಮತ್ತು ವಗ್ಗಯ್ಯನವರು



ಗೊರವಿಯವರು



ಪಲ್ಲಕ್ಕಿ ಉತ್ಸವ



ಉತ್ಸವದಲ್ಲಿ ತೊಡಗಿದ ಮಳ್ಳಯ್ಯಜ್ಜ ಮತ್ತು ವಗ್ಗಯ್ಯನವರು



ಒಡಪು ಹೇಳುತ್ತಿರುವ ಕಂಚಿ ವೀರರು



ಭಕ್ತರು ಗೊರವ ಮತ್ತು ಗೊರವಿಯರೊಂದಿಗೆ ದೋಣಿ ತುಂಬುತ್ತಿರುವುದು



ಚಂದಾಲಿಂಗಪ್ಪ ಮತ್ತು ಗಂಗಿಮಾಳಮ್ಮರ ಮದುವೆ ಸಿದ್ಧತೆ



ಚಂದಾಲಿಂಗಪ್ಪ ಮತ್ತು ಗಂಗಿಮಾಳಮ್ಮರ ಮದುವೆ ಕಾರ್ಯ



ವಿಭೂತಿ ಮತ್ತು ಅರಿಶಿನ-ಕುಂಕುಮದ ಅಂಗಡಿ



ತೆಂಗಿನಕಾಯಿ ಅಂಗಡಿ



ಫಳಾರದ ಅಂಗಡಿ (ಮಿಠಾಯಿ ಅಂಗಡಿ)



ಮಕ್ಕಳ ಆಟಿಕೆ ಸಾಮಗ್ರಿಗಳ ಅಂಗಡಿ



ಬಳೆಗಾರ ಅಂಗಡಿ



ಜಾತ್ರೆಯಲ್ಲಿ ಮಕ್ಕಳ ಆಟಿಕೆ ಸಾಮಗ್ರಿಗಳ ಖರೀದಿಯಲ್ಲಿ ತೊಡಗಿರುವ ಭಕ್ತರು



ಭಕ್ತರು ಮಳೆಯ್ಯಜ್ಜನಿಗೆ ಎಡೆಯನ್ನು ಸಮರ್ಪಿಸುವುದು



ಭಕ್ತರು ಪ್ರಸಾದ ತಯಾರಿಗೆ ಕೊಬ್ಬರಿ ರುಬ್ಬುವುದರಲ್ಲಿ ತೊಡಗಿರುವುದು



ಭಕ್ತರು ದೇವರಿಗೆ ದವಸ ಧಾನ್ಯದ ದೇಣಿಗೆ ನೀಡುತ್ತಿರುವುದು



ದೇವಸ್ಥಾನದ ಸಮಿತಿಯವರು



ಭಕ್ತರು ಕಟ್ಟಿರುವ ಹರಕೆ ಕಾಯಿಗಳು



ಭಕ್ತರು ತಮ್ಮ ನಂಬಿಕೆಗಳ ಈಡೇರಿಕೆಗೆ ಕಲ್ಲಲ್ಲಿ ಕಟ್ಟಿರುವ ಚಿಕ್ಕ ಚಿಕ್ಕ ಮನೆಗಳು



ಗುಡೂರಿನಿಂದ ಬಂದ ಸರಪಳಿ



ಬಯಲು ಬಸವಣ್ಣ



ಪಂಜು ಸೇವೆದಾರ



ನುಡಿ ಹೇಳುತ್ತಿರುವ ಮಳ್ಳಯ್ಯಜ್ಜ



ನುಡಿ ಹೇಳುತ್ತಿರುವ ಮಲ್ಲಯ್ಯಜ್ಜನ ನುಡಿ ಕೇಳಲು ನೆರೆದಿರುವ ಭಕ್ತರು



ಸರಪಳಿ ಪವಾಡವನ್ನು ವೀಕ್ಷಿಸಿಲು ನೆರೆದ ಜನಸಾಗರ



ಸರಪಳಿ ಪವಾಡ ನಡೆಯುವ ಸರಪಳಿ ಬಿಗಿಯುವ ಕಲ್ಲುಗಂಬಗಳು ಮತ್ತು ಅರಿವಿನ ಮಂಟಪ



ಕೊಂತ ಮಿಂಚುವುದು



ಲಕ್ಕಿ ಬರ್ಲಿನ ಸೇವೆಯಲ್ಲಿ ಕುದುರೆಕಾರರು




ಹರಕೆ ನುಡಿ ನುಡಿಯುವ ಗೊರವಪ್ಪ



ಗೊರವಪ್ಪ ಮತ್ತು ಗೊರಮ್ಮ



ಡಮರುಗ ನುಡಿಸುವ ಗೊರವಯ್ಯ



ಜಾನಪದ ಅಧ್ಯಯನ ವಿಭಾಗ